# ಮುಕ್ತಿ

ಶಾಂತಿನಾಥ ದೇಸಾಯಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಮುಕ್ತಿ

**ಶಾಂತಿನಾಥ ದೇಸಾಯಿ**


ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**MUKTI** - A novel written by **Dr. Shantinatha Desai** ; Published by **Manu Baligar,** Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xiv + ೩೦೫
ಬೆಲೆ : ರೂ. ೬೫/-

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ "ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೦ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

(ಐ.ಎಂ. ವಿಠ್ಠಲಮೂರ್ತಿ)
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕ್ಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪರಿವಿಡಿ


ಶುಭ ಸಂದೇಶ iii
ಚೆನ್ನುಡಿ iv
ಅಧ್ಯಕ್ಷರ ಮಾತು v
ಹೊನ್ನುಡಿ vi
ಎರಡು ನುಡಿ vii
ಪ್ರಕಾಶಕರ ಮಾತು viii
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ x

ಮುಕ್ತಿ ೧–೨೫೬

# ಮುಕ್ತಿ

ಬಾಂದ್ರಾ,
ಮುಂಬಯಿ,
ಏಪ್ರಿಲ್ ೧,
೧೯೫೩.

ಕೊನೆಗೆ ! ಕೊನೆಗೊಮ್ಮೆ –

ನನ್ನ ಭೂತಕಾಲದ ಭೂತದಿಂದ ಒಮ್ಮೆ ಮುಕ್ತನಾಗುವೆ !

ನನ್ನ ಪಾಸ್‌ಪೋರ್ಟು ಸಿದ್ಧವಾಗಿದೆ. 'ಎಸ್. ಎಸ್. ಒಲಿಂಪಿಯಾದಲ್ಲಿ ಒಂದು ಬರ್ಥ್ ಕೂಡ ರಿಝರ್ವ್ ಆಗಿದೆ.

ನೈರೋಬಿ! ಎಂಥ ಊರೋ ಏನೋ !

'ಒಳ್ಳೆಯ' ನೌಕರಿ ! ... ಒಳ್ಳೆಯದೋ ಕೆಟ್ಟದ್ದೋ ?

ಯಾರಿಗೆ ಗೊತ್ತು ?

ನಾನು ಹೋಗುತ್ತಿರುವುದು.... ಒಳ್ಳೆಯದೋ ?

ಇದು ಒಳ್ಳೆಯದು, ಇದು ತಪ್ಪು, ಇದು ಕೆಟ್ಟದ್ದು – ಎಂದು ಯಾರು ತಾನೆ ಶಾಶ್ವತವಾಗಿ ಹೇಳಬಲ್ಲರು ?

ಇಪ್ಪತ್ತೆರಡು ದಿನಗಳ ನಂತರ ಹಿಂದುಸ್ತಾನವನ್ನು – ಎಲ್ಲರೂ ಕೂಗುವ ಭಾರತ ಮಾತೆಯನ್ನು, ಮಾತೃಭೂಮಿಯನ್ನು – ಬಿಟ್ಟು ಹೊರಡುವೆ– ಪುರಾತನವಾದ ಆಫ್ರಿಕೆಗೆ – ಕತ್ತಲೆಯ ಖಂಡಕ್ಕೆ !

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಇರಬಹುದು ಭಾಗ್ಯವಂತರಿಗೆ – ನನಗಲ್ಲ !

ಕೆಲವು ಜನರಿಗೆ ಅಸೂಯೆ – ನಾನು ಪರದೇಶಕ್ಕೆ ಹೋಗುವುದರ ಬಗ್ಗೆ, ನನ್ನ ಅಲ್ಲಿಯ ಸಂಬಳದ ಬಗ್ಗೆ. ಹಾಯಸ್ಕೂಲ ಮಾಸ್ತರನಿಗೆ ತಿಂಗಳಿಗೆ ಏಳು ನೂರು ರೂಪಾಯಿ! .... ನಾನು ಮುಖ್ಯ ಹಣ ಗಳಿಸಲಿಕ್ಕೆ ಹೊರಟಿದ್ದೇನೆಂದು ಕೆಲವರ ನಂಬಿಕೆ. ಮೊನ್ನೆ ಸತ್ಯೇಂದ್ರನ ಮನೆಯಲ್ಲಿ ಯಾರೋ – ಬಹುಶಃ ಲಕ್ಷಾಧಿಪತಿ ಯಾಗುವ ಹಂಬಲವುಳ್ಳ ರಾಮದಾಸ ಪೈ, ಎಂ.ಕಾಂ., ಎಂದು ಕಾಣಿಸುತ್ತದೆ. – ಅನ್ನಲಿಲ್ಲವೇ : "ಹತ್ತು ವರ್ಷ ಅಲ್ಲಿ ಇದ್ದು ಒಂದು ಲಕ್ಷ ರೂಪಾಯಿ ಸಹಜವಾಗಿ ಗಳಿಸಿಕೊಂಡು ಬರಬಹುದು.... ಆಮೇಲೆ ನಿನ್ನದೇ

ಒಂದು ಬೆಜಿನೆಸ್ಸನ್ನೋ, ಹಾಯಸ್ಕೂಲನ್ನೋ ತೆರೆಯ ಬಹುದು....ಆಮೇಲೆ..."

ಆಮೇಲೆ...?

ಎರಡನೆಯವರ ಬಗ್ಗೆಯೂ ಕನಸು ಕಟ್ಟಬೇಕೇ ಜನರು? ಹಣ – ಹಣದ ಅಂಕಿಯಲ್ಲಿಯ ಶೂನ್ಯಗಳೊಳಗಿಂದಲೇ ಭವಿಷ್ಯತ್ತಿನ 'ಸುಂದರ' ಕನಸುಗಳು ಜನಿಸಬೇಕೇ ? ಪಾಪ ! ಮತ್ತೇನು ಮಾಡಿಯಾರು ಅವರು...?

ಅವರಿಗೇನು ಗೊತ್ತು ?

* * *

ನಿಜವಾಗಿ ನೋಡಿದರೆ, ಒಂದು ದೃಷ್ಟಿಯಿಂದ ನಾನು ಓಡಿಹೋಗುತ್ತಿರುವೆ. ಇದು ಎಷ್ಟು ಜನರಿಗೆ ಗೊತ್ತು ? ಸತ್ಯೇಂದ್ರನಿಗೆ ಸ್ವಲ್ಪ ಕಲ್ಪನೆಯಿರಬಹುದೂ – ಅದು ಅಸ್ಪಷ್ಟವಾಗಿ ... ಹುಂ, ಯಾರಿಗೆ ಗೊತ್ತಾಗಿ ಏನಾಗುವುದಿದೆ?

ನನಗೆ ದೂರ. ಅತಿ ದೂರ ಹೋಗಬೇಕಾಗಿದೆ. ನನ್ನ ಗತ ಜೀವನದ ಸಂಪರ್ಕವಿಲ್ಲದಲ್ಲಿ ಹೋಗಬೇಕಾಗಿದೆ. ಯಾವ ಸ್ಥಾನದಲ್ಲಿ ಜೀವನಕ್ಕೆ ಹೊರತಾಗಿ ಅನಾಸಕ್ತಿಯಿಂದ ಇರಲು ಶಕ್ಯವೋ ಅಂಥಲ್ಲಿ ಹೋಗಬೇಕಾಗಿದೆ. ದೂರ ಪರದೇಶದಲ್ಲಿ ಯಾರ ಬಂಧನಕ್ಕೂ ಒಳಗಾಗದೆ ಶುದ್ಧ ಅಪರಿಚಿತನಂತೆ ನಿರ್ವಿಕಾರವಾಗಿ ಬದುಕಲು ಹೋಗಬೇಕಾಗಿದೆ....

ನಾನು ಇಲ್ಲಿಂದ ಹೋಗುವುದಕ್ಕೆ ಸತ್ಯೇಂದ್ರನ ಸಮ್ಮತಿ ಇಲ್ಲ. ನನ್ನ 'ಜೀವನ' ವನ್ನು, ನನ್ನ 'ಆತ್ಮ' ವನ್ನು ನಾನು ಇಲ್ಲಿಯೇ ಇದ್ದುಕೊಂಡು ಎದುರಿಸಬೇಕು ಎಂದು ಅವನ ಮತ. "ಎಲ್ಲಿ ಹೋದರೇನು ನಿನ್ನ ಆತ್ಮದಿಂದ ನೀನು ದೂರ ಹೋಗಲಾರೆ.... ಸ್ಮರಣ ಇರುವತನಕ ಆದದ್ದನ್ನು ಮರೆಯುವುದು ಶಕ್ಯವಿಲ್ಲ.... ಯಾವುದನ್ನ ಮರೆಯದೇ ಭೂತಕಾಲವನ್ನು ಅರಗಿಸಿ ಅದರ ಮೇಲೆ ವಿಜಯ ಸಂಪಾದಿಸುವುದರಲ್ಲಿಯೇ ಜೀವನದ ಸಾರ್ಥಕ್ಯವಿದೆ... ಜೀವನವೆಂದ ಮೇಲೆ ಎಲ್ಲ ತರಹದ ಅನುಭವ ಬರತಕ್ಕುವೇ. ಬಂದ ಅನುಭವಗಳನ್ನು ಧೈರ್ಯದಿಂದ ಅಂಗೀಕರಿಸಿ, ನಗುತ್ತ ಮುನ್ನಲೆಯುವದರಲ್ಲಿ ಜಾಣತನವಿದೆ...."

ಮುತ್ತಿನಂಥ ಮಾತು, ನಿಜ !

ಅವನ ಇಂಥ ಪ್ರೇರಣೆಯಿಂದಲೇ ಇದನ್ನು ಬರೆಯುತ್ತಿರುವೆ. "ಗೌರೀಶ ನಿನ್ನ ತಲೆಯಲ್ಲಿ ಯಾವಾಗಲೂ ವಿಪರೀತ ಗೊಂದಲ... ಮನುಷ್ಯನೆಂದ ಮೇಲೆ ಸ್ಪಷ್ಟವಾಗಿ ವಿಚಾರ ಮಾಡಲು ಕಲಿಯಬೇಕು. ಶ್ರೀಕಾಂತ ತನ್ನ ದಿನಚರಿಯನ್ನು ಬರೆದಿಟ್ಟಂತೆ, ನೀನೂ ನಿನ್ನ ಬಗ್ಗೆ ಸ್ಪಷ್ಟ-ಸ್ಪಷ್ಟವಾಗಿ, ವಿಶ್ಲೇಷಣಾತ್ಮಕವಾಗಿ ಏನಾದರೂ ಬರೆಯಲು ಯತ್ನಿಸು. ಅಂದರೆ ಸ್ವಲ್ಪ ಬುದ್ಧಿಗಿದ್ದಿ ಬಂದೀತು." ಸತ್ಯೇಂದ್ರನ ಈ

ಮಾತಿನಲ್ಲಿ ತಥ್ಯವಿದೆಯೆಂದೆನಿಸಿದೆ. ಹಾಗೂ ನಿನ್ನೆಯೇ ನನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟಿರುವೆ. ಇನ್ನು ಹಡಗನ್ನೇರುವ ತನಕ, ಈ ಉದ್ಯೋಗವನ್ನಾದರೂ ಮಾಡಬೇಕು .... ನನ್ನ ಗತಕಾಲವನ್ನು ರೂಪಿಸಿ, ಅದಕ್ಕೆ ಒಂದು (ಎಂಥದೇ ಆಗವಲ್ಲದೇಕೆ ?) ಆಕಾರ ಕೊಟ್ಟು, ನನ್ನಿಂದ ದೂರ ಸರಿಸಿ, ಪೆಟ್ಟಿಗೆಯ ಮೂಲೆಯಲ್ಲಿಡಬೇಕು....

ನಿಜ! ಆದರೆ ಇಲ್ಲಿಯೇ ಇದ್ದು ಎದುರಿಸಿ, ಅರಗಿಸಿ, ಜಯಸಿ ಜೀವಿಸುವುದು ನನ್ನಿಂದ ಸಾಧ್ಯವಿಲ್ಲ.... ಇಂಥ ಮಾತು ನೆಲಸಿದ, ನಿಶ್ಚಿತವಾದ ಮನಗಳಿಗೆ ಸಾಧ್ಯ! ನನ್ನದು ಹರಿದಾಡುವ ಚಂಚಲ ಮನಸ್ಸು !

ನನ್ನ ವಿಷಯದಲ್ಲಿ, ನಾನು ಇರುವ ಸ್ಥಾನ ಬಹಳ ಮುಖ್ಯವಾದದ್ದು ! ನಾನು ಇದ್ದ ಊರುಗಳಲ್ಲಿ ನಾನು ಇರದೇ ಇದ್ದಿದ್ದರೆ, ನಾನು 'ನಾನಾ'ಗ ಬಹುದಿತ್ತೇ, ನಾನು ಅನುಭವಿಸಿದ್ದನ್ನು ಅನುಭವಿಸಬಹುದಿತ್ತೇ? ನಾನು ಸಿರ್ಸಿಯಿಂದ ಧಾರವಾಡಕ್ಕೆ ಹೋಗದೆ ಮತ್ತೆಲ್ಲಿಯಾದರೂ ಹೋಗಿದ್ದರೆ, ಶ್ರೀಕಾಂತ – ಕಾಮಿನಿಯರು ನನ್ನ ಜೀವನದಲ್ಲಿ ಬರಬಹುದಿತ್ತೇ ? ಅವರು ನನ್ನ ಜೀವನದಲ್ಲಿ ಬರದೆ ಇದ್ದರೆ – ನಾನು ...? ಈ 'ರೆ' ವನ್ನು ಕಲ್ಪಿಸುವುದು ಸಾಧ್ಯವೆ? ... ಅವರು ನನ್ನ ಜೀವನದಲ್ಲಿ ಪ್ರವೇಶಿಸದಿದ್ದರೆ ನಾನು 'ನಾನಾ'ಗಿ ಉಳಿಯುತ್ತಿರಲಿಲ್ಲ. ಅವರು ನನ್ನ ಹೃದಯದ, ನನ್ನ ಆತ್ಮದ ಪ್ರಮುಖ ಅಂಗವಾಗಿದ್ದರೆ... ಆಮೇಲೆ ನಾನು ಮುಂಬಯಿಗೆ ಬರದೆ ಹೋಗಿದ್ದರೆ ಶಶಿಕಲೆಯು ಭೇಟಿಯಾಗಬಹುದಿತ್ತೇ? ಮತ್ತು ಮುಂಬಯಿಯನ್ನು ಬಿಟ್ಟು ಮತ್ತೆಲ್ಲಿಯಾದರೂ 'ಡಾಲಿ'ಯನ್ನು ಸಮಾಗಮಿಸುವುದು ಶಕ್ಯವಿತ್ತೇ?

* * *

ಇಂದು ಮಧ್ಯಾಹ್ನ (ರವಿವಾರ ತಾನೆ) ಡಾಲಿ ನನ್ನ ಕೋಣೆಗೆ ಬಂದಳು. ಅವಳ ಜೊತೆಗೆ 'ಮಡಾಮ್ ಬೊವ್ಹರಿ' ಸಿನೇಮಾ ನೋಡಲು ಹೋಗಲೇಬೇಕಾಯಿತು. (ನವ ತಾರುಣ್ಯದ ಕನಸುಗಳು ವಾಸ್ತವತೆಯನ್ನು ಮೆಟ್ಟಿ ಸಾಕಾರಗೊಳ್ಳಲು ಯತ್ನಿಸಿದಾಗ ವಿನಾಶ ನಿಶ್ಚಿತ, ಎಂದು ಮಡಾಮ್ ಎಮಾ ಬೊವ್ಹರಿ ತನ್ನ ಕಿವಿಯಲ್ಲಿ ಪಿಸುನುಡಿದಳು.... ಅವಳ ಆ ಮೃತ್ಯು – ಅಯ್ಯೋ ಶ್ರೀಕಾಂತ – ನನ್ನ ಕರುಳನ್ನೇ ಹಿಂಡಿದವು ....) ಸಿನೇಮಾ ಮುಗಿದ ನಂತರ 'ಪುರೋಹಿತ'ನಲ್ಲಿ ಉಪಹಾರ; ಆನಂತರ ಮರೀನ್ ಡ್ರಾಯಿವ್ಹದ ಮೇಲೆ ಸಮುದ್ರದ ದಂಡೆಗುಂಟ ಅವಳೊಡನೆ ತಿರುಗಾಟ.. ಗುಬ್ಬಿಗಳು ಚಿಂವ್ ಗುಟ್ಟುವಂತೆ ನಮ್ಮ ಮಾತು – ಕತೆಗಳು ! ಹೌದು ಗುಬ್ಬಿಗಳಂತೆ ! ಗುಬ್ಬಿಗಳಿಗೆ ಭೂತಕಾಲದ

ಭಾರವಿಲ್ಲ, ಭವಿಷ್ಯತ್ತಿನ ಚಿಂತೆಯಿಲ್ಲ ; ವರ್ತಮಾನದ ಸ್ವತಂತ್ರದ ಸ್ವಚ್ಛಂದ ವಿಹಾರ ಮಾತ್ರ ! .. ನಮ್ಮೀರ್ವರ ಸಂಬಂಧದಲ್ಲಿ ಯಾವ ತರದ ಉದ್ದೇಶವಿಲ್ಲ — ಉದ್ವೇಗವಿಲ್ಲ – ಬಂಧನವಿಲ್ಲ – ತೊಡಕಿಲ್ಲ. ಈ ವರ್ತಮಾನದ ಸಹವಾಸವನ್ನು ಮೀರಿದ ಯಾವ ಆಶೆಯೂ ಇಲ್ಲ. ನಾವಿಬ್ಬರೂ ಸ್ವತಂತ್ರರು. ಜೀವನದ ಸಮುದ್ರದಲ್ಲಿ ಕೆಲವು ನಿಮಿಷಗಳವರೆಗೆ ಕೂಡಿ, ಅಂಟಿ ನಡೆದ ಕಟ್ಟಿಗೆಯ ತುಂಡುಗಳು ನಾವು ಇಪ್ಪತ್ತೆರಡು ದಿನಗಳ ನಂತರ ನಾವು ಬೇರ್ಪಟ್ಟು ದೂರ ಸರಿಯಲಿರುವೆವು – ಬಹುಶಃ ಕೊನೆಯತನಕ ! ಆದರೆ ನಮ್ಮ ಅಗಲಿಕೆಯಲ್ಲಿ ಯಾವ ತರದ ದುಃಖವಿರಲಾರದು, ಹೃದಯದ ಉರಿ ಇರಲಾರದು. ಬರಿಯ ಮಾನುಷ– ಅಮಾನುಷ, ಬೆಚ್ಚಗಿನ ಕೈಕುಲುಕಾಟ !

"ನಾನು ಬರಲೇನು ನಿನ್ನೊಡನೆ ?" ಅವಳು ನಗುತ್ತ ಚೆಲ್ಲಾಟದಿಂದ ಕೇಳಿದಳು.

"ಬರಬಾರದೇಕೆ ?" ನನ್ನದೂ ಅಂಥದೇ ಪ್ರಶ್ನೆ.

"ನಾನು ಬಂದರೆ ತಾಯಿಯ ಗತಿಯೇನು ? ನನ್ನ ಉಳಿದ ಗೆಳೆಯರ ಗತಿಯೇನು ?" ಅವಳ ನಗೆಯಲ್ಲಿ ವಿನೋದವಿತ್ತು.

"ಪಾಪ ! ...ಹಾಂ, ಆ ಗೆಳೆಯರನ್ನು ಪ್ಯಾಕ್ ಮಾಡಿಕೊಂಡು ತೆಗೆದುಕೊಂಡು ಬಾ ಅಲ್ಲ ನಿನ್ನೊಡನೆ...."

"ಆಮೇಲೆ ನಿನ್ನ ಗತಿಯೇನು ?"

"ನಾವೆಲ್ಲರೂ ಕೂಡಿ ಆಫ್ರಿಕೆಯಲ್ಲಿ ಅಮರಣ ಪಿಕ್‌ನಿಕ್ ಮಾಡೋಣ"

"ಆಮೇಲೆ ನನ್ನನ್ನು ಲಗ್ನವಾಗುವಿಯಾ?" ಡಾಲಿ ಒಮ್ಮೆಲೆ ಗಂಭೀರಳಾದಂತೆ ನಟಿಸಿದಳು.

"ಓ ಯೆಸ್! ಆದರೆ ಒಂದು ಕರಾರು : ನೀನು ನನ್ನನ್ನು ಎಂದು ಪ್ರೀತಿಸಬಾರದು."

"ಒಪ್ಪಿದೆ. ನನ್ನದೂ ಒಂದು ಕರಾರು : ನನ್ನಿಂದ ನೀನು ಎಂದೂ ಮಕ್ಕಳನ್ನು ಪಡೆಯಬಾರದು."

"ಒಪ್ಪಿದೆ"

"ಆದರೆ ಲಗ್ನವಾದ ಮೇಲೆ ನಾವು ಒಬ್ಬರಿಗೊಬ್ಬರು ಏನು ಮಾಡಬೇಕು"?

"ಏನೂ ಇಲ್ಲ ವಿಶೇಷವಾಗಿ! ಇರುವುದು – ಅಷ್ಟೆ... ತಿನ್ನುವದು, ಕುಡಿಯುವದು, ಮಜಾ ಹೊಡೆಯುವದು – ಅಷ್ಟೆ..."

ನಮ್ಮ ಹುಡುಗಾಡಿಕೆಗೆ ನಾವೇ ನಕ್ಕೆವು. ಒಬ್ಬರನ್ನೊಬ್ಬರು ನೋಡಿದೆವು.

ನಂತರ ಸಮುದ್ರದ ಮೆತ್ತನ್ನ ತೆರೆಗಳತ್ತ ದೃಷ್ಟಿ ಹೊರಳಿಸಿದೆವು. ಸಂಜೆಯ ಮಂದ ಪ್ರಕಾಶ ಮೆತ್ತಗೆ ಪಸರಿಸಿತ್ತು. ಸೂರ್ಯ ಅದೇ ಮುಳುಗಿದ್ದ. ಎಲ್ಲಿಂದಲೋ ಏನೋ ಕತ್ತಲೆ ಹನಿ ಹನಿಯಾಗಿ ಒಸರತೊಡಗಿತ್ತು.... ಜನರು ತಮ್ಮ ತಮ್ಮ ಸ್ವತಂತ್ರ ಜಗತ್ತುಗಳಲ್ಲಿ ಮಗ್ನರಾಗಿದ್ದರು.

– ಎಲ್ಲ ತರಹದ ಜನರು : ಸಮುದ್ರದ ತೆರೆಗಳು !

ಈ ಮಹಾಪಟ್ಟಣವನ್ನು ವಸ್ತುನಿಷ್ಠವಾಗಿ ನೋಡುವ ದೃಷ್ಟಿ ಈಗ ಬಂದಿದೆ

* * *

ಈ ಮಹಾಪಟ್ಟಣಕ್ಕೆ ಮೊದಲಿಗೆ ಬಂದಾಗ ನನ್ನಲ್ಲಿ ಮೂಡುತ್ತಿದ್ದ ಭಾವನೆಗಳ, ವಿಚಾರಗಳ ನೆನಪು ಸ್ಪಷ್ಟವಿದೆ ನನಗೆ !

ಆಗ ಪ್ರೇಮ ಭಂಗದ ದುಃಖದ ಭಾರ ಹೊತ್ತು ಓಡಿಬಂದಿದ್ದೆ. ಪ್ರೇಮ ಭಂಗವಲ್ಲವದು ! ಪ್ರೇಮದ ಅಸಾಫಲ್ಯತೆ ಮಾತ್ರ – ಅಥವಾ ಅದಕ್ಕೆ, ಏನೆನ್ನಬೇಕೋ ನನಗೆ ತಿಳಿಯದು ... ದುಃಖಾಂತ ನಾಟಕದ ನಾಯಕನಂತೆ ವರ್ತಿಸುತ್ತಿದ್ದ ಕಾಲವದು. ನನ್ನ ದುಃಖವೆಂದರೆ ಅಗಾಧವಾದದ್ದು, ಅದ್ವಿತೀಯವಾದದ್ದು ಎಂಬ ಕಲ್ಪನೆ ಆಗ !

ಜನಜಂಗುಳಿಯಿಂದ ತುಂಬಿ ತುಳುಕುತ್ತಿದ್ದ ಮುಂಬಯಿಯು ನಾನು ಕಲ್ಪಿಸಿಕೊಂಡ ನನ್ನ ದೊಡ್ಡತನಕ್ಕೆ ಮೊದಲನೆಯ ಧಕ್ಕೆ ಕೊಟ್ಟಿತು. ವ್ಯಕ್ತಿಗೆ ಕಿಮ್ಮತ್ತಿಲ್ಲ, ಅವನ ಭಾವನೆ–ವಿಚಾರಣೆಗಳಿಗೆ ಮಹತ್ವವಿಲ್ಲ–ಈ ಜನ–ಸಮೂಹದಲ್ಲಿ ಬಿಂದುಮಾತ್ರನಾದ ಒಬ್ಬ ಯಃಕಶ್ಚಿತ ವ್ಯಕ್ತಿಯ ಆಗು–ಹೋಗುಗಳಿಗೆ ಎಳ್ಳಷ್ಟೂ ಬೆಲೆಯಿಲ್ಲ–ಎಂಬ ಪಾಠವನ್ನು ಕಲಿಸಿತು.

ಅಂದು ದಾದರಿನಲ್ಲಿ ಇಳಿದು, ಸತ್ಯೇಂದ್ರನೊಡನೆ ಲೋಕಲ್ ಗಾಡಿಯಿಂದ ಚರ್ನಿರೋಡಿಗೆ ಹೋದೆ. ಸತ್ಯೇಂದ್ರ ತಾನು ಲಗ್ನವಾಗಲಿರುವ ಹುಡಿಗಿಯ ಬಗ್ಗೆ ಏನೇನೋ ಹೇಳುತ್ತಿದ್ದ. ಶ್ರೀಕಾಂತ–ಕಾಮಿನಿಯರ ಕ್ಷೇಮ–ಸಮಾಚಾರ ಒಂದೆರಡು ಮಾತುಗಳಲ್ಲಿ ಮುಗಿದು ಹೋಗಿತ್ತು... ನಾನು ಅವನು ಹೇಳುತ್ತಿದ್ದ ಕಿವಿಗೊಡಲು ಯತ್ನಿಸುತ್ತಿದ್ದೆ. ಆದರೆ ಮುಂಬಯಿಯ ಜನಸಮುದ್ರ ನನ್ನ ತಲೆಯಲ್ಲಿ ಬಿರುಗಾಳಿಯನ್ನೆಬ್ಬಿಸಿತ್ತು :

ನನ್ನ ಯಃಕಶ್ಚಿತತೆಯ, ನನ್ನ ಅಲ್ಪತೆಯ ಅರಿವು ನನಗಾದದ್ದು ಆ ದಿನವೇ!

ಶ್ರೀಕಾಂತ ನನ್ನನ್ನು ಸೋಶಿಯಲಿಸ್ಟನನ್ನಾಗಿ ಮಾಡಿಟ್ಟಿದ್ದ : ಜನತಾ ಜನಾರ್ದನನಸೇವೆ ! ದಲಿತ ಜನತೆಯ ಉದ್ಧಾರ ! ಸ್ವಾತಂತ್ರ್ಯ, ಸಮತೆ, ಭ್ರಾತೃತ್ವ!! – ಮುಂತಾದ ಆದರ್ಶಗಳ ಬೀಜಗಳನ್ನು ಈ ಜನಸಮುದ್ರದಲ್ಲಿ

ಬಿತ್ತುವದು ಹೇಗೆ ? ಆದರ್ಶ ಸಮಾಜ ಕನಸಿನ ರಾಜ್ಯದ ಮಾತು... ಜನರು – ಜನರು – ಎಲ್ಲೆಲ್ಲಿಯೂ ಜನರು – ತಮ್ಮ ತಮ್ಮ ಚಿಕ್ಕ – ಪುಟ್ಟ ಜೀವನಗಳಲ್ಲಿ ಆಸಕ್ತರಾಗಿ ಧಾವಿಸುತ್ತಿರುವ ಜನರು ! ನಿಮಿಷ – ನಿಮಿಷಕ್ಕೆ ಹೊಸ ಮುಖಗಳು – ಎಲ್ಲ ಬಗೆಯ ಮುಖಗಳು – ಇಂದು ಕಂಡ, ಮುಂದೆ ಎಂದೂ ಕಾಣದಿರುವ ಸಹಸ್ರಾರು ಮುಖಗಳು ... ತಮ್ಮ ತಮ್ಮ ಜೀವನದ ಭಾರವನ್ನು ಹೊತ್ತು ನಿರ್ವಿಕಾರವಾಗಿ ಸಾಗಿದ ನಾಟಕೀಯ ಮುಖವಾಡಗಳು !

ನನ್ನ ತಲೆಯೇ ಗಿಮ್ಮೆಂದಿತ್ತು. ಈ ಭಯಂಕರ ಕನಸಿನೂರಿನ ತಡೆಯಿಲ್ಲದ ಗದ್ದಲದಲ್ಲಿ ಯಾವುದಕ್ಕೂ ಅರ್ಥವಿಲ್ಲ, ಮೂಲ್ಯವಿಲ್ಲ ! ಸಿರಿವಂತಿಕೆ – ಬಡತನ; ಪಾಪ–ಪುಣ್ಯ; ದೊಡ್ಡಸ್ತನ, ಅಲ್ಪತೆ – ಯಾವುದಕ್ಕೂ ನಿಶ್ಚಿತ ಅರ್ಥವಿಲ್ಲ !

ಜೀವನಕ್ಕೂ ಅರ್ಥವಿಲ್ಲ ! ಮರಣಕ್ಕೂ ಅರ್ಥವಿಲ್ಲ !

ಯಾರು ಸತ್ತರೇನು, ಯಾರು ಇದ್ದರೇನು, ಜೀವನ ಸಾಗುವದು ಅವಿರತವಾಗಿ – ನಿಶ್ಚಿಂತೆಯಿಂದ (ಟೆನಿಸನ್ನನ ನದಿಯಂತೆ) !

ನಾನು ಯಃಕಶ್ಚಿತ, ನಾನು ಅಲ್ಪ, ನಾನು ಕ್ಷುಲ್ಲಕ – ನಾನು ಇಲ್ಲದಿದ್ದರೂ ಜಗತ್ತು ನಡದೇ ನಡೆಯುವದು... ನಾನಾದರೂ ಯಾಕೆ ಕಾಳಜಿ ಮಾಡಬೇಕು – ಚಿಂತಿಸಬೇಕು ? ಈ ಎಲ್ಲ ಜನರೂ ಅಲ್ಪರು, ಕ್ಷುಲ್ಲಕರು, ಯಃಕಶ್ಚಿತರು – ಬಸ್ಸಿನಲ್ಲಿ ಕುಳಿತು ಹೋಗುವ ಜನರು, ಕಾರುಗಳಲ್ಲಿ ಧಾವಿಸುವ ಜನರು, ಟ್ರಾಮಿನಲ್ಲಿ ತೇಲುತ್ತ ನಡೆದ ಜನರು, ಟ್ರೇನುಗಳಲ್ಲಿ ಓಡುತ್ತಿರುವ ಜನರು – ಎಲ್ಲರೂ ... ಅವರು ಸಮುದ್ರದ ತೆರೆಗಳು ! ಸಮುದ್ರದ ತೆರೆಗಳನ್ನು ನಿರ್ವಿಕಾರತೆಯಿಂದ ನೋಡುವಂತೆ ಈ ಜನರನ್ನೂ ನಿರ್ವಿಕಾರತೆಯಿಂದ, ನಿರ್ಲಿಪ್ತತೆಯಿಂದ ನೋಡಬೇಕು.

ಜನರು, ಎಲ್ಲ ಬಗೆಯ ಜನರು : ಸಮುದ್ರದ ತೆರೆಗಳು...

*

ಅಂದು ಸತ್ಯೇಂದ್ರ ನನ್ನನ್ನು ಮುಂಬಯಿಗೆ ಸ್ವಾಗತಿಸಿದ್ದ : "ಗೌರೀಶ, ನೀನು ಮುಂಬಯಿಗೆ ಬಂದದ್ದು ನೆಟ್ಟಗಾಯಿತು – ಧಾರವಾಡದಲ್ಲಿ ವ್ಯರ್ಥ ತಲೆಕೆಡಿಸಿಕೊಳ್ಳತ್ತಾ ಇದ್ದಿ. ಯಾಕಪ್ಪ ಸುರುಮಾಡಿದಿ ಭಾನಗಡಿ – ಕಾಮಿನಿಯ ಜೊತೆಗೆ ? ಅದಕ್ಕೆ ಈಗ ಪೂರ್ಣವಿರಾಮ ತಾನೆ?"

* * *

ಸತ್ಯೇಂದ್ರನ ದೃಷ್ಟಿಯಲ್ಲಿ ನನ್ನ ಮತ್ತು ಕಾಮಿನಿಯ ಸಂಬಂಧ ಬರಿಯ "ಭಾನಗಡಿ"ಯಾಗಿತ್ತು !

ಸತ್ಯೇಂದ್ರನ ಮನವನ್ನು ನಾನು ಚಿಕ್ಕಂದಿನಿಂದ ಬಲ್ಲೆ, ಯಾವಾಗಲೂ

ಅವನು ಸರಳಜೀವಿ. ತನ್ನ ಕಾರ್ಯವಾಯಿತು, ತಾನಾಯಿತು. ಬೇರೆ ಯಾವ 'ಫಾಲತೂ' ವಿಷಯಗಳಲ್ಲಿ ಎಂದೂ ಮನಸ್ಸು ಹಾಕಿದವನಲ್ಲ... ಧಾರವಾಡದಲ್ಲಿ ಕೂಡ, ಶ್ರೀಕಾಂತ ಮತ್ತು ನಾನು ರಾಜಕಾರಣ ರಾಜಕಾರಣ ಎಂದು ಮೈಮರೆತರೆ, ಆತ ಮಾತ್ರ ರಾಜಕಾರಣದಲ್ಲಿ ವಿಶೇಷ ಆಸಕ್ತಿ ಎಂದೂ ತೋರಿಸಲಿಲ್ಲ. ಅಷ್ಟೇ ಅಲ್ಲ – ಕಾಲೇಜಿನಲ್ಲಿ ಒಳ್ಳೆಯ ಆಟಗಾರನೆಂದು ಅವನ ಪ್ರತೀತಿ ಇದ್ದಾಗ, ಆ ದೇಶಪಾಂಡೆಯವರ ಹುಡುಗಿ ಅವನ ಮೇಲೆ ಬಲೆ ಬೀಸಿದ್ದಳು. ಉಳಿದವರು ಯಾರಾದರು ಇದ್ದಿದ್ದರೆ, ಆನಂದದಿಂದ ಆ ಬಲೆಯಲ್ಲಿ ಬೀಳಬಹುದಿತ್ತು. ಆದರೆ ಸತ್ಯೇಂದ್ರ ಇಂಥ ಅರೆಕ್ಷಣದ ಒಣ ಮೋಹಕ್ಕೆ ಬಲಿ ಬೀಳಲಿಲ್ಲ. ನೇರವಾಗಿ ತನ್ನ 'ಕರಿಯರ್'ನ್ನು ಸಾಧಿಸಿಕೊಂಡು ಎಂಜಿನಿಯರಾಗಿದ್ದಾನೆ. ಒಳ್ಳೆಯ ನಗುಮುಖದ ಹೆಣ್ಣನ್ನು ಲಗ್ನವಾಗಿ ತನ್ನ ಸಂಸಾರವನ್ನು ಒಳ್ಳೆಯ ಥಾಟನಿಂದ ಸಾಗಿಸಿದ್ದಾನೆ...

"ಇಂಥವರು ಸಮಾಜದ ಕಂಬಗಳು – ಸಮಾಜಕ್ಕೆ ಬೇಕಾಗುವ ಸ್ಥಿರತೆ ಮತ್ತು ಶಕ್ತಿಗಳನ್ನು ಕೊಡುವವರು", ಶ್ರೀಕಾಂತ ಆಗಾಗ್ಗೆ ಹೇಳುತ್ತಿದ್ದ, "ಇಂಥವರು ಒಳ್ಳೆಯ ತಂದೆಯಾಗುತ್ತಾರೆ. ಇಂಥವರೇ ಮಕ್ಕಳನ್ನು ಹಡೆದು, ಅವರನ್ನು ಚೆನ್ನಾಗಿ ಬೆಳೆಸಿ, ಜೀವನದ ಮುನ್ನಡೆಗೆ ಕಾರಣರಾಗುತ್ತಾರೆ."

ನಾನು ಮುಂಬಯಿಗೆ ಬರುವಾಗ ಶ್ರೀಕಾಂತ ನನ್ನನ್ನು ಬೀಳ್ಕೊಡುವಾಗ ಹೇಳಿದ್ದ : "ಸತ್ಯೇಂದ್ರನ ಸಾನಿಧ್ಯ ನಿನ್ನ ಬೆಳವಣಿಗೆಗೆ ಒಳ್ಳೆಯ ಸಹಾಯ ಮಾಡುವದೆಂಬುವುದರಲ್ಲಿ ಸಂಶಯವಿಲ್ಲ..."

ಸತ್ಯೇಂದ್ರನ ಮನೆಯಲ್ಲಿ ಕೆಲವು ತಿಂಗಳು ಇರುವವನಿದ್ದೇನೆಂದು ನನ್ನ ತಂದೆ–ತಾಯಿಯವರಿಗೆ ಹೇಳಿದಾಗ, ಅವರಿಗೆ ಸಮಾಧಾನವಾಗಿತ್ತು : ಸತ್ಯೇಂದ್ರ ಒಳ್ಳೆಯ ಹುಡುಗ ; ಅವನ ಮೂಲಕ ತಮ್ಮ ಮಗನಲ್ಲಿ ಸ್ವಲ್ಪ ಬುದ್ಧಿ ಹುಟ್ಟಿದರೆ ಬಹಳ ಒಳ್ಳೆಯದು – ಎಂದು !

ಸತ್ಯೇಂದ್ರನಿಗೆ ನನ್ನ ಮತ್ತು ಕಾಮಿನಿಯ 'ಭಾನಗಡಿ'ಯ ವಿಷಯ ಆಗಾಗ್ಗೆ ವಿಶದವಾಗಿ ನಿರೂಪಿಸಿದ್ದೆ. ಅವನ ಸಹಾನುಭೂತಿಪರ ವ್ಯಕ್ತಿತ್ವದ ಮುಂದೆ ನನ್ನ ಭಾವನೆಗಳು ತಮ್ಮಿಂದ ತಾವೇ ಶಬ್ದರೂಪವಾಗಿ ಹೊರಬರುತ್ತಿದ್ದವು...

ಶ್ರೀಕಾಂತ–ಕಾಮಿನಿಯರು ನನ್ನ ಗತಜೀವನದ ಮಧ್ಯವರ್ತಿ ಬಿಂದುಗಳು...

–ನನ್ನ ಗತಜೀವನದ ಪ್ರಮುಖ ಭಾಗವನ್ನು ರೂಪಿಸಿದ ಕರ್ತಾರರು.

–ನನ್ನ ಭವಿಷ್ಯತ್ತು ಕೂಡ ಇವರ ಪ್ರಭಾವದಿಂದ ಸ್ವತಂತ್ರವಾಗಲಾರದು – ಬಹುಶಃ !

ಈ ಹೃದ್ಬಂಧನವು ಅಮರಣವಾದದ್ದು...

ಶ್ರೀಕಾಂತ ಈಗ ಇಲ್ಲ !

ಅಯ್ಯೋ ದೇವರೆ... !

ಆದರೂ, ಅವನು ಶೂನ್ಯದಲ್ಲಿ ಕರಗಿದರೂ, ನನ್ನ ಜೀವನದ ಭಾಗವಾಗಿದ್ದಾನೆ ಶ್ರೀಕಾಂತ, ನನ್ನ ಆತ್ಮದ ಅಂಗವಾಗಿದ್ದಾನೆ... ಅವನ ಆ ದೀಪ್ತಿಮಂತವಾದ, ಮಿಂಚಿನಂಥ ಆತ್ಮವನ್ನು ನನ್ನಲ್ಲಿ ಹಿಡಿದಿಡುವುದು ಶಕ್ಯವೇ? ನನ್ನಲ್ಲಿ ಹಿಡಿದಿಟ್ಟದ್ದು – ಬರಿಯ ನೆನಹುಗಳು.. ನನ್ನ ಶ್ರೀಕಾಂತನನ್ನು ನುಂಗಿದ ಆ ಕೊನೆಯ ಅಗ್ನಿಯ ಜ್ವಲಂತಸ್ಮೃತಿಯೇ – ಆ ನೆನಹುಗಳ ಹೊತ್ತಿಗೆಯ ಕೊನೆಯ ಪುಟ !

ಏಳು ತಿಂಗಳು ಸಂದಿವೆ... ಶ್ರೀಕಾಂತ ಸತ್ತು. ಭಯಂಕರವಾದ ಮರಣವದು. ಅವನು ಸಾಯುವನೆಂದು ಬಹುಶಃ ಎಲ್ಲರಿಗೂ ಗೊತ್ತಿತ್ತು... ಆದರೆ ಆ ಸಾವು ಬಂದ ರೀತಿ ಮಾತ್ರ ಯಾರ ಕನಸಿನಲ್ಲಿಯೂ ಇರಲಿಲ್ಲ... ಮಹಾಭಯಂಕರ ಸಾವು ! ಸಿಡಿಲು !!

ಶ್ರೀಕಾಂತನು ಸಾಯುವನೆಂದೂ ಎಲ್ಲರಿಗೂ ಗೊತ್ತಿತ್ತು... ಅವನಿಗೆ. ಟೀ.ಬೀ. ಯಾಗಿತ್ತು. ರೋಗದ ಮೊದಲನೆಯ ಸ್ಟೇಜಿನಲ್ಲಿಯೇ ಡಾಕ್ಟರರು ಅದನ್ನು ಗೊತ್ತು ಹಚ್ಚಿ ಉಪಾಯ ನಡೆಸಿದ್ದರು... ಕೊನೆಗೆ ಬಲ ಪುಪ್ಪುಸದ ಆಪರೇಷನ್ ಆದ ನಂತರ ಆತ ಸಂಕಟದಿಂದ ಪಾರಾದ ಎಂದು ನಮಗೆಲ್ಲ ಅನಿಸಿತ್ತು.... ಆದರೆ ಮರಣದ ಕರಿಛಾಯೆ ಶ್ರೀಕಾಂತನನ್ನು ಬಿಡಲಿಲ್ಲ. ಅವನಲ್ಲಿಯ ಆಶೆ ಎಂದೋ ಹಿಂಗಿ ಹೋಗಿತ್ತು – ಆದರೆ ಹೊರಗೆ ಮಾತ್ರ ಯಾವಾಗಲೂ ಆಶಾವಾದಿ ! ನನ್ನಲ್ಲಿಯಂತೂ ಭೀತಿ ಮೊದಲಿನಿಂದಲೂ ಮನೆಮಾಡಿತ್ತು – ಆದರೆ ಶ್ರೀಕಾಂತ ನೆಟ್ಟಗಾಗುವ, ನೆಟ್ಟಗಾಗಲೇ ಬೇಕು, ಎಂಬ ದೃಢವಿಶ್ವಾಸ ಕೊನೆಯವರೆಗೂ ಇತ್ತು.

ಶ್ರೀಕಾಂತನ ಮೃತ್ಯುವಿನ ವಿಚಾರ ಬಂದೊಡನೆ ನನ್ನ ಎಲ್ಲ ಶಕ್ತಿಯೇ ಉಡುಗಿ ಹೋಗುವದು....ಕರುಳಿನಲ್ಲಿ ವಿಚಿತ್ರ ವೇದನೆ, ರಕ್ತದ ಪ್ರತಿ ಹನಿಯಲ್ಲಿ ಭೀತಿಯ ಮಿಡಿತ. ಕಣ್ಣಿಗೆ ಕಾವಳ – ಆಳಅಂತವಿಲ್ಲದ ಕಣಿವೆಯಲ್ಲಿ ಬೀಳುತ್ತಿರುವೆನೋ ಎಂಬಂತೆ ಬುದ್ಧಿ ಮಂದವಾಗಿ ಬಧಿರವಾಗುವುದು. ಹೃದಯ ಕಲ್ಲಾಗಿ ಕುರಡಾಗುವುದು...ಜೀವನದ ಅಂತಿಮ ಶೂನ್ಯತೆಯ ಸತ್ಯ ಹಸಿದ ರಾಕ್ಷಸನ ತೆರೆದ ಬಾಯಿಯಾಗುವುದು, ಸ್ಮಶಾನದ ಆ ನಗ್ನ ಜ್ವಾಲೆಗಳ ಅಖಂಡ ತಾಂಡವ ನೃತ್ಯವಾಗುವುದು.... ಅಯ್ಯೋ, ನಾನು ಓಡಿಹೋಗಬೇಕು. ನನ್ನನ್ನು ನಾನು ರಕ್ಷಿಸಲು ಎಲ್ಲಿಯಾದರೂ ದೂರ ದೂರ ಓಡಿ–ಹೋಗಬೇಕು, ಸದಾ ಓಡುತ್ತಲೇ

ಇರಬೇಕು.... ಆದುದರಿಂದ ಆಫ್ರಿಕೆಗೆ ನಾನು 'ಓಡಿಹೋಗುತ್ತಿರುವೆ'ನೆಂದೇ ನನ್ನ ಭಾವನೆ ! ಅಲ್ಲಿ, ಆ ಅಜ್ಞಾತ ಆಫ್ರಿಕೆಯಲ್ಲಿ ನನ್ನ ಮುಕ್ತಿ ನನ್ನನ್ನು ಕಾದಿದೆ ಎಂಬ ಇನ್ನೊಂದು ಭಾವನೆ ನನ್ನಲ್ಲಿ ಬಲವಾಗಿದೆ... ಸತ್ಯೇಂದ್ರ ಹೇಳುವಂತೆ ಅದು ನನ್ನ ಭ್ರಾಂತಿ ಇದ್ದರೂ ಇರಬಹುದು.

ದಿಕ್ಕಿಲ್ಲದೆ ಹರಿಯುವ ಈ ಮನಃಪ್ರವಾಹಕ್ಕೆ ವಸ್ತುಸ್ಥಿತಿಯ ಬಂಧ ಕಲ್ಪಿಸಬೇಕು.... ನಾನು ಹುಚ್ಚನಾಗುವುದು ನನಗೆ ಬೇಡವಾಗಿದ್ದರೆ ನನ್ನ ಮನಸ್ಸನ್ನು ವಸ್ತುಸ್ಥಿತಿಗೆ ಬಂಧಿಸಿ ಇಡಬೇಕು.... ವಸ್ತುಸ್ಥಿತಿ, ವಸ್ತುಸ್ಥಿತಿ, ವಸ್ತುಸ್ಥಿತಿ --- facts, facts, facts.. ಇದೇ ಮುಕ್ತಿಯ ಹಾದಿಯನ್ನು ಸಿದ್ಧಗೊಳಿಸಲು ಬೇಕಾದ ಕಚ್ಚಾ ಮಾಲು !

ಶ್ರೀಕಾಂತನು ಇಂಗ್ಲಿಷ್ ವಿಷಯ ತೆಗೆದುಕೊಂಡು ಎಂ.ಎ. ಮಾಡಿದ ಮುಂದೆ ಎಲ್ಲಿಯಾದರೂ ಪ್ರಾಧ್ಯಾಪಕನಾಗಲು ಹವಣಿಸುತ್ತಿರುವಷ್ಟರಲ್ಲಿ, ಆಕಸ್ಮಿಕವಾಗಿ ಅವನಿಗೆ ಟೀ. ಬೀ. ಯಾದದ್ದು ಗೊತ್ತಾಯಿತು. (ಅವನ ತಂದೆ ಅದೇ ರೋಗದಿಂದ ತೀರಿಕೊಂಡಿದ್ದರಂತೆ.)

ನಾನು ಅದೇ ಬಿ.ಎಸ್‌ಸಿ. ಮಾಡಿದ್ದೆ. ಸತ್ಯೇಂದ್ರ ಬಿ.ಇ. ಮುಗಿಸಿ ಮುಂಬಯಿಯಲ್ಲಿ ಅದೇ ನೌಕರಿ ಹಿಡಿದಿದ್ದ.

ನಾನು ಮುಂಬಯಿಗೆ ಹೋಗಿ ಎಂ.ಎಸ್‌ಸಿ. ಮಾಡಬೇಕೆಂದು ನನ್ನ ಎಲ್ಲ ಹಿತಚಿಂತಕರ ಇಚ್ಛೆ -- ಉಪದೇಶ. ಆದರೆ ಶ್ರೀಕಾಂತನನ್ನು ಬಿಟ್ಟು ಹೋಗಲು ಮನಸ್ಸಾಗಲಿಲ್ಲ. ಶ್ರೀಕಾಂತನಿಗೆ ನನ್ನ ಅವಶ್ಯಕತೆ ತುಂಬ ಇತ್ತು. ಮತ್ತು....

ಆಗ – ನಮ್ಮೀರ್ವರ ಗೆಳೆತನ ನಾಲ್ಕು ವರುಷದ್ದು.

ಸತ್ಯೇಂದ್ರನು ಶ್ರೀಕಾಂತನ ಗುರುತು ಮಾಡಿಕೊಟ್ಟಾಗ ನಾನು ಫಸ್ಟ್ ಇಯರದಲ್ಲಿದ್ದೆ. ಶ್ರೀಕಾಂತ ಬಿ.ಎ. ದಲ್ಲಿದ್ದ. ಸತ್ಯೇಂದ್ರ ಆ ಮೊದಲೇ ಸೂಟಿಯಲ್ಲಿ ಊರಿಗೆ ಬಂದಾಗ ಶ್ರೀಕಾಂತನ ಬಗ್ಗೆ ಆಗಾಗ್ಗೆ ಹೇಳಿದ್ದ. ಆಗಿನಿಂದಲೇ ಶ್ರೀಕಾಂತನ ಬಗ್ಗೆ ಆದರ – ಕುತೂಹಲಗಳು ನಿರ್ಮಾಣವಾಗಿದ್ದವು.

ಶ್ರೀಕಾಂತನ ಗುರುತು ಆದ ದಿನ ನನ್ನ ಚಿತ್ತಭಿತ್ತಿಯಲ್ಲಿ ಕೊರೆದು ನಿಂತಿದೆ: ಕಾಲೇಜು ಸುರುವಾಗಿ ಮೂರು ನಾಲ್ಕು ದಿನಗಳಾಗಿದ್ದವು. ನಾನೊಂದು ಹೊಸ ಜಗತ್ತಿನಲ್ಲಿಯೇ ವಿಹರಿಸುತ್ತಿದ್ದೆ – ಪರದೇಶದಲ್ಲಿಯ ಅಪರಿಚಿತನಂತೆ ! ಪುಣ್ಯಕ್ಕೆ ಸತ್ಯೇಂದ್ರನಿದ್ದನೆಂದು ಒಳ್ಳೆಯದು. ಅದು ಹೀಗೆ, ಇದು ಹಾಗೆ ; ಅವನು ಹೀಗೆ, ಅವಳು ಹಾಗೆ ಎಂದು ನನ್ನ ಮಾರ್ಗದರ್ಶನ ಮಾಡುತ್ತಿದ್ದ.... ನನ್ನ ತಲೆತುಂಬ

ಅಸ್ಪಷ್ಟ ಕನಸುಗಳು ಲಾಸ್ಯವಾಡುತ್ತಿದ್ದವು : ಅದೋ, ಅಲ್ಲಿ ಹೋಗುವ ಚಂದ ಹುಡುಗಿ ನನ್ನ ಗೆಳತಿಯಾಗಬಹುದೆ? ಆ ಕ್ರಿಶ್ಚಿಯನ್ ಹುಡುಗಿಯನ್ನು ಒಮ್ಮೆ ಯಾದರೂ ಮುದ್ದಿಸಬಹುದೆ? ನಾನು ಪ್ರೇಮಿಸಿ ವರಿಸಲಿರುವ ಹೆಣ್ಣು ಇದೇ ಕಾಲೇಜಿನಲ್ಲಿ ಅವತರಿಸಲಿರುವಳೆ.... ಮುಂತಾದ ಹಗಲುಗನಸುಗಳ ಮುಗಿಲುಗಳು ಆಕಾಶ ತುಂಬೆಲ್ಲ ವಿಹರಿಸುತ್ತಿದ್ದವು....

ಸತ್ಯೇಂದ್ರ ಮತ್ತು ನಾನು ಅಂದು ಕಾಲೇಜಿನ ಆವಾರದೊಳಗಿಂದ ನಡೆದಿದ್ದೆವು: "ಜೀವನ ಒಂದು ಕಲೆ; ಆ ಕಲೆಯ ಮೊದಲನೆಯ ಪಾಠ ಕಾಲೇಜಿನಲ್ಲಿ ಕಲಿಯಬೇಕು.... ಇತ್ತಿತ್ತಲಾಗಿ ಪಾಠ ಕಲಿಯುವುದು ದೂರೇ ಉಳಿದಿದೆ – ನೇರವಾಗಿ ಪ್ರಯೋಗಕ್ಕೆ ಕೈ ಹಾಕುವ ವಿದ್ಯಾರ್ಥಿ – ವಿದ್ಯಾರ್ಥಿನಿಯರ ಸಂಖ್ಯೆ ಬೆಳೆಯುತ್ತಿದೆ...." ಎಂದೇನೋ ಸತ್ಯೇಂದ್ರ ಹೇಳುತ್ತಿದ್ದ.

"ಆದರೆ ಪ್ರಯೋಗದಿಂದ ಕೂಡ ಮನುಷ್ಯ ಕಲಿಯುತ್ತಾನಲ್ಲವೆ?" ನನ್ನ ವಾದ.

ಅಷ್ಟರಲ್ಲಿ ಸತ್ಯೇಂದ್ರ ಒಮ್ಮೆಲೇ ನನ್ನ ಕೈ ಜಗ್ಗಿ ಹೇಳಿದ : "ಗೌರೀ, ಅಲ್ಲಿ ನೋಡು – ಅವನೇ ಶ್ರೀಕಾಂತ. ಗುರ್ತು ಮಾಡಿಕೊಡಲೇನು?"

"ಯಾರು? – ಹಾಂ – ಅವನೇ?" ನನ್ನ ಧ್ವನಿ ನನಗೆ ಗೊತ್ತಿಲ್ಲದೇ ಕಂಪಿಸಿತು.

"ಹುಂ – ಆದರೆ ಆ ಹುಡುಗಿಯರಿದ್ದಾರಲ್ಲ ಅವನ ಜೊತೆಗೆ. ಅವರು ಅವನನ್ನು ಬಿಡುವತನಕ ನಿಲ್ಲೋಣ.... ಅಥವಾ ಆ ಹುಡುಗಿಯರ ಗುರ್ತೂ ಮಾಡಿ ಕೊಡಲೇನು?"

"ಬೇಡಪ್ಪಾ !" ಸಂಕೋಚದಿಂದ ಹೇಳಿದೆ.

ನಾವಿಬ್ಬರೂ ಕಲ್ಲಿನ ಕಟ್ಟೆಗೆ ಆತು ನಿಂತುಕೊಂಡೆವು. ನನ್ನ ಲಕ್ಷ್ಯವೆಲ್ಲ ಶ್ರೀಕಾಂತನ ಮೇಲೆಯೇ ಇತ್ತು.... ಶ್ರೀಕಾಂತ ಸತ್ಯೇಂದ್ರನನ್ನು ನೋಡಿದನೆಂದು ಕಾಣುತ್ತದೆ. ಕೂಡಲೇ ಆ ಹುಡುಗಿಯರನ್ನು ನಗಿಸಿ, ನಗುವಿನ ಘಂಟಾನಾದದೊಡನೆ ಅವರಿಂದ ದೂರ ಸರಿದು, ಮುಗುಳುನಗೆ ನಗುತ್ತ ನಮ್ಮ ಬಳಿಗೆ ಬಂದ. ಕೌತುಕ–ಆದರಗಳಿಂದ ಭಾರವಾದ ಮನಸ್ಸು ಸಂಕೋಚದಿಂದ ಇನ್ನಿಷ್ಟು ಬಗ್ಗಿತು, ವಿನೀತವಾಯಿತು !

ಶ್ರೀಕಾಂತನ ರೂಪ ಮೋಹಕವಾಗಿತ್ತು. ಅಷ್ಟೊಂದು ಎತ್ತರವಿಲ್ಲದಿದ್ದರೂ, ಕೊಂಚ ತೆಳುವಾಗಿದ್ದರಿಂದ, ಎತ್ತರ ಕಾಣಿಸುತ್ತಿದ್ದ. ಅವನ ಸಣ್ಣ ಸುಕುಮಾರ ಮುಖದಲ್ಲಿ ಎದ್ದು ಕಾಣುವ ಭಾಗವೆಂದರೆ ಅವನ ದೊಡ್ಡ.... ದೊಡ್ಡ.. ಕೊಂಚ

ಹೊರ ಬಂದ ಕಣ್ಣುಗಳು. ಕಣ್ಣುಗಳ ಮೋಹಕ ತೇಜಸ್ಸಿನಿಂದ ನಿರ್ಲಿಪ್ತರಾಗಲು ಬಯಸಿದರೆ ಅವನ ಮನೋವೇಧಕ ಸ್ಮಿತ ಹಾಸ್ಯ ನಮ್ಮ ಮೇಲೆ ಮೋಡಿ ಬೀರುವುದು....

ಆ ಕ್ಷಣದ ನನ್ನ ಭಾವನೆಗಳನ್ನೆಲ್ಲ ಸರಿಯಾಗಿ ನೆನಪಿಗೆ ತರುವುದು ಕಷ್ಟ. ಇಷ್ಟೊಂದು ನಿಜ.... ಮೊದಲ ನೋಟದಲ್ಲಿಯೇ ನಾನು ಮಾರು ಹೋದೆ.

ಶ್ರೀಕಾಂತನ ಮುಂದೆ ಸತ್ಯೇಂದ್ರನ ವ್ಯಕ್ತಿತ್ವ ಬಾಡಿತು, ನಿರ್ವರ್ಣವಾಯಿತು.

"ಹಲ್ಲೋ – ಅಸತ್ಯಾ ! ಎಂದು ಬಂದೆ ನೀನು?"

"ನಾಲ್ಕೈದು ದಿನಗಳಾದವು."

"ನಾಲ್ಕೈದು? ಇನ್ನೂ ನಮ್ಮ ಮನೆಯ ಕಡೆಗೆ ಬರಲು ಸಮಯ ಸಿಗಲಿಲ್ಲವೆಂದು ಕಾಣಿಸುತ್ತದೆ ನಮ್ಮ ಸ್ಕಾಲರನಿಗೆ !.... ಇಂಟರ ಸಾಯನ್ಸ ಎಂದರೆ ಒಳ್ಳೆಯ ಜನರೂ ಸ್ವಾರ್ಥಿಗಳಾಗುತ್ತಾರೆ. ತಾವಾಯಿತು, ತಮ್ಮ ಅಭ್ಯಾಸವಾಯಿತು. ಕರೀಯರಾಯಿತು.... ಇವರಾರು? ಕಾಲೇಜಿಗೆ ಹೊಸಬರೆಂದು ಕಾಣುತ್ತಾರೆ...."

"ಗೌರೀಶ ಉಪಾಸನಿ–ನಮ್ಮ ಊರಿನವರು. ಎಫ್. ವಾಯ್‌ಗೆ ಬಂದಿದ್ದಾರೆ."

"ನಿಮ್ಮ ಗುರ್ತಾಯಿತು–ಆನಂದ ! Pleased to meet you" ಎಂದು ಶ್ರೀಕಾಂತ ತನ್ನ ಕೈ ಮುಂದೆ ಚಾಚಿದ. ಸಂಕೋಚದಿಂದ ಹಿಂಜರಿಯುತ್ತ ನಾನು ಅವನ ಕೈ ಹಿಡಿದೆ. ಅವನ ಬೆಚ್ಚಗಿನ ಕೈಯಲ್ಲಿ ಗೂಢವಾದ ಶಕ್ತಿಯಿತ್ತು–ವಿದ್ಯುಚ್ಛಕ್ತಿ!

"ಗೌರೀ, ಇವರೇ ಶ್ರೀಕಾಂತ ರಾವ !.... ಇವರ ಬಗ್ಗೆ ಈಗಾಗಲೇ ಎಲ್ಲ ಹೇಳಿರುವೆ ತಾನೇ?"

"ಏನು ಹೇಳೀಯಪ್ಪಾ ಮತ್ತೆ ?" ಎಂದು ನಗುತ್ತ ಶ್ರೀಕಾಂತ ಕೇಳಿದ. "ನನ್ನ ಅಜ್ಜ–ಮುತ್ತಜ್ಜರಿಂದ ಹಿಡಿದು ನನ್ನ ಮಕ್ಕಳು–ಮರಿಮಕ್ಕಳ ತನಕ ಎಲ್ಲ ಪುರಾಣ ಈಗಾಗಲೇ ಹೇಳಿದಿಯೇನು? .... ಛೆ, ಛೆ, ಛೆ – ಅಥವಾ ಬೆನ್ನ ಹಿಂದೆ ಬೈಯುವದು ಸುಲಭ ತಾನೇ? –– ಏನೇನು ಹೇಳಿದ್ದಾನಪ್ಪಾ ಈ ಅಸತ್ಯ ನಿನ್ನೆದುರಿಗೆ ಗೌರೀಶ?"

'ನಿನ್ನೆದುರಿಗೆ' – ಶ್ರೀಕಾಂತನ ಏಕವಚನಪ್ರಯೋಗ ಮನಸ್ಸಿಗೆ ಸುಖಕರವೆನಿಸಿತು : ಅಹ, ನನ್ನ ಭಾಗ್ಯ, ಇಷ್ಟು ಬೇಗ ಇಷ್ಟು ಆತ್ಮೀಯತೆ ! – ಶ್ರೀಕಾಂತನ ಪ್ರಶ್ನೆಗೆ ಉತ್ತರಕೊಡುವ ಭಾರ ನನ್ನ ಮೇಲೆ ಬಿದ್ದೊಡನೆ ನಾನು ತಬ್ಬಿಬ್ಬಾದೆ. ಏನಾದರೂ ಹೇಳಲೇಬೇಕಲ್ಲ ಎಂದು, "ಅವನು ಹೇಳಿದ್ದನ್ನು ಹೇಳಿದರೆ ಮುಖಸ್ತುತಿ ಮಾಡಿದಂತಾಗುತ್ತದೆ.... ಆದ್ದರಿಂದ –"

ಶ್ರೀಕಾಂತ ಮನ ಬಿಚ್ಚಿ ನಕ್ಕ.

"ಸತ್ಯೇನ್, ನೀನು ಗೌರೀಶನನ್ನು ನಮ್ಮ ಮನೆಗೆ ಕರೆದುಕೊಂಡು ಬರಬೇಕು. He looks promising" ಎಂದು ಕೌತುಕದಿಂದ ನನ್ನೆಡೆಗೆ ನೋಡಿದ. ನನ್ನ ಮೈ ಉಬ್ಬಿತು.

"ಯಾಕೆ – ಅವನನ್ನೂ ಸೋಶಿಯಲಿಸ್ಟನನ್ನಾಗಿ ಮಾಡಬೇಕೆನ್ನುವಿಯೇನು?" ಸತ್ಯೇಂದ್ರ ಕೇಳಿದ.

"ಅಲ್ಲ–ಸೋಶಿಯಲಿಸ್ಟ ಮಾಡುವ ಪ್ರಶ್ನೆ ಎಲ್ಲಿಂದ ಬಂತು? ಪ್ರತಿಯೊಬ್ಬ ಒಳ್ಳೆಯ ತರುಣ ಹುಟ್ಟು–ಸೋಶಿಯಲಿಸ್ಟನಿರುತ್ತಾನೆ ! ಸೂಕ್ಷ್ಮ ಮನಸ್ಸಿನ ತರುಣನಿಗೆ ಸೋಶಿಯಲಿಸ್ಟ ತತ್ವಜ್ಞಾನ ಸಹಜವಾಗಿ ಸೇರುತ್ತದೆ."

"ಆದರೆ ನಾನೆಲ್ಲಿ ಸೋಶಿಯಲಿಸ್ಟನಿದ್ದೇನೆ?" ಸತ್ಯೇಂದ್ರ ಪ್ರತಿಭಟಿಸಿ ಕೇಳಿದ.

"ನೀನೊಂದು ಬೇರೆ ಬಗೆಯ ತತ್ತಿ ! ಗಟ್ಟಿ, ಕಲ್ಲಿನಂಥ ತತ್ತಿ–ನಮ್ಮ ಹೊಸ ಸಮಾಜದ ಬುನಾದಿಗಲ್ಲು ನೀನು.... ನಾವು ಶಿಲ್ಪಿಗಳು.... ಕರ್ಮಕಾರರು ! ಗೌರೀಶ, ನೀನೇನಾಗಬೇಕೆನ್ನುವಿ? ಬುನಾದಿಗಲ್ಲೋ? ಶಿಲ್ಪಿಯೋ?"

ಇಂಥ ಮಾತಿನ ಲಹರಿ ಆಗ ನನಗೆ ತೀರ ಹೊಸದು. ಇಂಥ ಪ್ರಶ್ನೆಗಳಂತೂ ಯಾವ ಪರೀಕ್ಷೆಯಲ್ಲಿಯೂ ಇದ್ದಿಲ್ಲ.

"ನನಗೆ ಗೊತ್ತಿಲ್ಲ," ಅತಿ ಪ್ರಯಾಸದಿಂದ ಉತ್ತರಿಸಿದೆ.

"ಅದಿರಲಿ – ನೀನೇನು ತೆಗೆದುಕೊಂಡಿರುವಿ? ಆರ್ಟ್ಸೋ? ಏನು ಸಾಯನ್ಸೊ?"

"ಸಾಯನ್ಸ"

"ಸಾಯನ್ಸ್ ! ಹುಂ ಮಾರ್ಕೆಟ್ಟಿನಲ್ಲಿ ಕಿಮ್ಮತ್ತು ಜಾಸ್ತಿ ಅದಕ್ಕೆ ಅಲ್ಲವೆ? ಯಾರು ಉಪದೇಶ ಮಾಡಿದರು ಸಾಯನ್ಸ ತೆಗೆದುಕೊಳ್ಳಲಿಕ್ಕೆ? ಸತ್ಯೇಂದ್ರನಿರಬೇಕು.... ಅವನು ಎಂಜಿನಿಯರನಾಗುವವನಿದ್ದಾನೆ. ನೀನೇನು – ಆಗಲಿರುವಿ? ಎಂಜಿನಿಯರೋ? ಡಾಕ್ಟರೊ?"

"ನನಗೆ ಗೊತ್ತಿಲ್ಲ."

ಕೊಳೂರು ಕೊಡಗೂಸು !" ಎಂದು ಶ್ರೀಕಾಂತ ನಕ್ಕ.

ಅದರ ಅರ್ಥ ತಿಳಿಯದೆಯೇ ನಾನು ನಾಚಿಕೆಯಿಂದ–ನಾಚಿಕೆಯನ್ನು ಮುಚ್ಚಲು –ನಕ್ಕೆ !

"ಸತ್ಯೇಂದ್ರ, ಈ ರವಿವಾರ ಕರೆದುಕೊಂಡು ಬಾ ಗೌರೀಶನನ್ನು – ಹಾಂ, ಊಟಕ್ಕೇನೆ ಬರ್ರಿ, ಚೆನ್ನಾಗಿ ಹರಟೆ ಕೊಚ್ಚುವ – ಬಾ ಏನು, ಗೌರೀಶ !" ಎಂದು

ನನ್ನ ಹೆಗಲ ಮೇಲೆ ಕೈಯೊತ್ತಿ ಹೇಳಿದ.

ನನ್ನ ಗತಕಾಲದ ಅನುಭವಗಳ ಈ ನೆನಹಿನಲ್ಲಿ ಒಂದು ಬಗೆಯ ನೋವು ನನ್ನ ನರ ಮೂಳೆಗಳೊಳಗಿಂದ ಹರಿಯುವುದು ನಿಜ. ಆದರೆ ನಿಜವಾಗಿ ನೋಡಿದರೆ ಬರಿಯ ನೋವೇ ನನ್ನಲ್ಲಿಲ್ಲ.... ಈ ಗತಕಾಲದ ಸ್ಮರಣೆಯಲ್ಲಿ ಒಂದು ಬಗೆಯ ಅವ್ಯಕ್ತ ಆನಂದವೂ ಇದೇ. ಅಷ್ಟೇ ಅಲ್ಲ, ಈ ಸ್ಮೃತಿಗಳನ್ನು ಶಬ್ದಗಳ ರೂಪದಿಂದ ಮರಳಿ ಸಾಕಾರ ಮಾಡುವಾಗ ಒಂದು ಕಲಾತ್ಮಕ ಆನಂದವೂ ಉಂಟಾಗುತ್ತಿದೆ.

ಬರೆಯುವದೆಂದರೆ ಬರಿಯ ಕಥನ, ಶಬ್ದಜೋಡಣೆ ಎಂಬ ಭಾವನೆ ಇತ್ತು ಮೊದಲು. ಆದರೆ ಈಗ ಅದೊಂದು ಪ್ರತ್ಯೇಕವಾದ ಪ್ರತ್ಯಕ್ಷ ಅನುಭವ ಎಂದು ಸ್ಪಷ್ಟವಾಗಿ ಅನಿಸುತ್ತಿದೆ.

"ಕಲೆಯಿಂದರೆ ಜೀವನವನ್ನು ಅನುಭವಿಸುವ ಒಂದು ರೀತಿ.... ವಾಸ್ತವತೆಯನ್ನು ಜಯಿಸುವ ಒಂದು ಮಾರ್ಗ," ಎಂದು ಶ್ರೀಕಾಂತ ಒಮ್ಮೆ ಹೇಳಿದ್ದ. ಅದರ ಪ್ರತೀತಿ ಈಗ ಬರುತ್ತಿದೆ ನನಗೆ. ಈ 'ಸ್ಮೃತಿ'ಯನ್ನು ಬರೆಯುವಾಗ, ನನ್ನಲ್ಲಿ ವಸ್ತುನಿಷ್ಠತೆ ತಾನೇ ತಾನಾಗಿ ಬೆಳೆಯುತ್ತಿದೆ.

ಈ ವಸ್ತುನಿಷ್ಠತೆಯೇ ನನ್ನ ಮುಕ್ತಿಯ ಮಾರ್ಗದಲ್ಲಿಯ ಮೊದಲ ಹಂತ....

ಹೌದು, ನನ್ನ ಮುಕ್ತಿಯ ಸಲುವಾಗಿ ನಾನು ಬರೆಯುತ್ತಿರುವೆ. ನನ್ನ ಮುಕ್ತಿಯ ಸಲುವಾಗಿಯೇ ಆಫ್ರಿಕೆಗೆ ನಡೆದಿರುವೆ....

ಆದರೆ ಲೇಖನವೇ ನನ್ನ ಜೀವನ–ಸರ್ವಸ್ವವಾಗಲಾರದು. ಕೆಲವು ಮಹಾನ್ ಲೇಖಕರಿಗೆ–ಉದಾಹರಣೆಗಾಗಿ ಜೇಮ್ಸ ಜಾಯ್ಸ, ಪ್ರೊಸ್ಟರಿಗೆ–ಲೇಖನಕಲೆಯೇ ಜೀವನದ ಸರ್ವಸ್ವವಾಗಿತ್ತು. ಆ ಕಲೆಯೇ ಅವರ ಏಕಮೇವ ಮುಕ್ತಿಮಾರ್ಗವಾಗಿತ್ತು. ಆದುದರಿಂದಲೇ ಪ್ರೂಸ್ಟನು ತನ್ನ ಜೀವನದ ಕೊನೆಯ ಕ್ಷಣದತನಕ ಬರೆಯುತ್ತಲೇ ಇದ್ದ, ತನ್ನ ಜೀವನದ ಎಲ್ಲ ಅನುಭವಗಳನ್ನು ಕಲೆಯನ್ನಾಗಿ ಮಾರ್ಪಡಿಸಲು ಹೆಣಗಿದ್ದ.... ಹೀಗೆ ಬರೆಯುತ್ತ ಹೋಗಲು ನನಗೆ ಸಮಯವಿಲ್ಲ, ಶಕ್ತಿಯಿಲ್ಲ. ನನಗೆ ಜೀವಿಸಬೇಕಾಗಿದೆ, ಜೀವಂತವಿರಬೇಕಾಗಿದೆ – ಕಲೆಯಲ್ಲಿ ನನ್ನನ್ನು ಹುಗಿದಿಡಲಾರೆ, ಕಲೆ ಒಂದು ಅನುಭವ ನಿಜ – ಜೀವನದ ವಾಸ್ತವ ಅನುಭವಗಳನ್ನು ರೂಪಿಸುವ ಅನುಭವ.... ಆದರೆ ಕಲೆಯ ಸಲುವಾಗಿ ನನಗೆ ಅನುಭವಗಳು ಬೇಡ.... ಅನುಭವಗಳಲ್ಲಿ ಕಲೆಯೂ ಒಂದು ಅನುಭವ ಮಾತ್ರ!

ಇವೆಲ್ಲ ನನ್ನ ಸ್ವಂತ ವಿಚಾರಗಳಲ್ಲ. ಶ್ರೀಕಾಂತನ ವಿಚಾರಗಳಿವು. ಆದರೆ ಅವನ ವಿಚಾರಗಳನ್ನು ಮೇಲಿಂದ ಮೇಲೆ ಕೇಳಿ, ಅವನ ದಿನಚರಿಯನ್ನು

ಆಗಾಗ್ಗೆ ಓದಿ. ಅವನ ವಿಚಾರಗಳು ನನ್ನ ವಿಚಾರಗಳಾಗಿ ಪರಿಣಮಿಸಿವೆ....

.... ಇದುವೇ ಶ್ರೀಕಾಂತನ ಅಮರತ್ವವಿರಬಹುದೇ ?

ಇಂದು ಸಂಜೆ ನಾನು ಸತ್ಯೇಂದ್ರನ ಮನೆಗೆ ಹೋದೆ – ನನ್ನಲ್ಲಿಯೇ ಮುಳುಗಿರುವದು ಒಳ್ಳೆಯದಲ್ಲವೆಂದು, ಸತ್ಯೇಂದ್ರ–ಸುಶೀಲೆಯರ ಸರಾಗವಾದ ಸುಖಜೀವನದ ಪರಿಮಳವನ್ನು ಆಸ್ವಾದಿಸಲೆಂದು....

ಹಿಂದೆ ಸತ್ಯೇಂದ್ರನ ಸುಖಜೀವನದ ಬಗ್ಗೆ ಅಸೂಯೆಪಟ್ಟಿದ್ದುಂಟು. ಈಗ ಆ ಅಸೂಯೆ ಇಲ್ಲ.... ಒಬ್ಬ ಮನುಷ್ಯ ಮತ್ತೊಬ್ಬನಾಗಲು ಶಕ್ಯವಿಲ್ಲ – ಈ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನ–ತತ್ವ ಅವನಲ್ಲಿಯೇ ಅಡಗಿದೆ; ಅದನ್ನು ಸಹಜವಾಗಿ ಆತ ಮೀರಲಾರ....ನಾವು ನಮ್ಮ ಕಕ್ಷೆಗಳಲ್ಲಿಯೇ ತಿರುಗುವ ಗ್ರಹಗಳು!

ಈ ಮಾತು ಶ್ರೀಕಾಂತನಿದ ಕಲಿತದ್ದು. ಇಲ್ಲಿ ಅವನ ದಿನಚರಿಯಲ್ಲಿಯ ಒಂದು ಅವತರಣ ಕೊಡಬೇಕು. (ಶ್ರೀಕಾಂತ ಟೀ. ಬೀ. ಯಿಂದ ನರಳುತ್ತಿದ್ದಾಗ ಆಗ್ಗಾಗೆ ದಿನಚರಿಯನ್ನು ಬರೆಯುತ್ತಿದ್ದ.) ಒಮ್ಮೆ ಈ 'ಅಸೂಯೆ'ಯ ಬಗ್ಗೆ ಆತ ಹೀಗೆ ಬರೆದಿದ್ದಾನೆ :

"ನನ್ನ ಜೀವನ (ಬಹುಶಃ) ತನ್ನ ಕೊನೆಯನ್ನು ಸಮೀಪಿಸುತ್ತಿದೆ – ಎರಡೂ ಬದಿಗೆ ಉರಿಯುವ ಮೇಣದಬತ್ತಿಯಂತೆ ! 'ನನ್ನ' ಜೀವನ ! 'ನಾನು' 'ನನ್ನ' 'ನನಗೆ' ಈ – ಶಬ್ದಗಳು ಎಷ್ಟೊಂದು ಅರ್ಥಪೂರ್ಣವಾಗಿವೆ ನನಗೆ ! ವಜ್ರದೊಳಗಿನ ಬೆಳಕಿನಂತೆ ಈ ಅರ್ಥ ತೀಕ್ಷ್ಣವಾಗಿ ಹೊಳೆಯುತ್ತದೆ.... ನನ್ನ ಅಸ್ತಿತ್ವದ ಬಗ್ಗೆ, ಇಷ್ಟು ಅಖಂಡ ತೀಕ್ಷ್ಣ ಅರಿವು ಹಿಂದೆ ಎಂದೂ ನಾನು ಅನುಭವಿಸಿರಲಿಲ್ಲ.... ನನ್ನ ದಿನಚರಿಯ ಒಂದು ಮುಖ್ಯ ವಿಷಯವಾಗಿಬಿಟ್ಟಿದೆ ಈ ತೀಕ್ಷ್ಣ ಪ್ರಜ್ಞೆ! ....

ಇಂದು ಸಂಜೆ [Zಕಾಮಿನಿಯ ಪ್ರತೀಕ 'Z' ಈ ಡಾಯರಿಯಲ್ಲಿ ಚಂದಾಗಿ ಅಲಂಕರಿಸಿಕೊಳ್ಳುತ್ತಿದ್ದಳು. ಅವಳು ಎಲ್ಲಿ ಹೋಗುವವಳಿದ್ದಳೆಂದು ನನಗೆ ಗೊತ್ತು, 'ಕ್ಷ' ನೊಡನೆ–ಪಿಕ್ಚರಿಗೆ ಅಥವಾ ತಿರುಗಾಟಕ್ಕೆ.... !

– ನನಗೆ ಗೊತ್ತಿಲ್ಲದೆಯೇ ಅಸೂಯೆಯ ಮೊನೆ ಆಕಸ್ಮಿಕವಾಗಿ ನನ್ನ ಅಂತರಂಗವನ್ನು ಚುಚ್ಚಿತು. ಜಗತ್ತು ಉಪಯೋಗಿಸುತ್ತಿದೆ : ನಾನು ಮಾತ್ರ ಏಕಾಂತದ ಕತ್ತಲೆಯಲ್ಲಿ ನರಳುತ್ತಿರುವೆ – ಎಂಬ ವಿಚಾರ ಕೆಲಹೊತ್ತು ಹೊಗೆಯಂತೆ ಸುಳಿದಾಡಿತು....

ಆದರೆ – ಇದು ಅಜ್ಞಾನ !

ಜೀವನ ನಿರ್ಮಾಣಕ್ಕೆ ಅವಶ್ಯವಾದ ಭಾವನೆಗಳಲ್ಲಿ ಅಸೂಯೆಗೆ ಮುಖ್ಯವಾದ

ಸ್ಥಾನವಿದೆ ಎಂದು ಕೆಲವರ ಮತ: 'ಅವರ' ಹತ್ತಿರ ಇದ್ದ ವಸ್ತು 'ನನಗೂ ಬೇಕು' ಅವರಿದ್ದಂತೆ ನಾನಾಗಬೇಕು, ಎಂಬ ಭಾವನೆಯೇ ಅಸೂಯೆ. ಆದರೆ ಇದು ಎಂದಾದರೂ ಶಕ್ಯವಿದೆಯೇ ?

ಪ್ರತಿಯೊಂದು ವ್ಯಕ್ತಿಗೆ, ಪ್ರತಿಯೊಂದು ಆತ್ಮಕ್ಕೆ ಅದರದೇ ಆದ ಪರಿಮಿತಿ ಇದೆ. ಈ ಪರಿಮಿತಿಯು ಜೀವನದ ತೊಡಕು ತೊಡಕಾದ ಶಕ್ತಿಗಳಿಂದ ನಿರ್ಣಯಿಸಲ್ಪಟ್ಟಿದೆ. ಆದುದರಿಂದ 'ನಾನು' ಮತ್ತು 'ನೀನು'ಗಳ ನಡುವೆ ಸದೈವ ಭಿನ್ನತೆ ಇದೆ. 'ನಾನು' 'ನೀನಾ'ಗಬೇಕೆಂಬ ಇಚ್ಛೆಯ ಮೂಲ, 'ನನ್ನ' ವ್ಯಕ್ತಿತ್ವದ ಬಗ್ಗೆ ಇದ್ದ ಅಜ್ಞಾನದಲ್ಲಿದೆ. 'ನಾನು' ಯಾರು ಎಂಬುದರ ಅರಿವು ಪೂರ್ಣವಿದ್ದರೆ, 'ನಾನು' 'ನೀನಾ'ಗಲು ಯಾಕೆತಾನೆ ಹವಣಿಸಬೇಕು?

ಅವರ ಬಗ್ಗೆ ನಾನು ಯಾಕೆ ಅಸೂಯೆಪಡಬೇಕು ? ಅವನು ನನ್ನ ಬಗ್ಗೆ ಯಾಕೆ ಅಸೂಯೆ ಪಡಬಾರದು ? ಈ ಪ್ರಶ್ನೆ ವಿಚಿತ್ರವಾಗಿ ತೋರಬಹುದು! ಆದರೆ ಇದು ನಿಜ : ನನ್ನ ಕಾಯಿಲೆಯ ಮೂಲಕ ಇರವಲ್ಲದೇಕೆ–ನನ್ನಲ್ಲಿ ಈಗ ಇದ್ದ ಜ್ವಾಲಾ ಸಮತೀಕ್ಷ್ಣ ಜೀವನ–ಪ್ರಜ್ಞೆ ನನ್ನದೇ–ಇಂಥ ಪ್ರಜ್ಞೆ ಅವರ ಕಲ್ಪನೆಗೂ ನಿಲುಕದ ವಿಷಯ. ಆತ್ಮದ ಅತಿ ವಿರಳ ಕೊಹಿನೂರು–ಈ ಪ್ರಜ್ಞೆ–ನನ್ನದು!.... ಇದರಲ್ಲಿಯೇ ನನ್ನ ಸಮಾಧಾನ !

ಪ್ರತಿ ಆತ್ಮನ ಜೀವತತ್ವ ಅದರಲ್ಲಿಯೇ ಅಡಗಿದೆ. ಅದನ್ನು ಆ ಆತ್ಮವು ಮೀರಲಾರದು. ಪ್ರತಿ ಆತ್ಮಕ್ಕೆ ಒಂದು ಪ್ರತ್ಯೇಕವಾದ ಕಕ್ಷೆ ಇದೆ.... ಆ ಕಕ್ಷೆಯಲ್ಲಿಯೇ ಆ ಆತ್ಮ ಚಲಿಸಬೇಕು, ತಿರುಗಬೇಕು–ಸೊರಗಬೇಕು–ಕರಗಬೇಕು!"

–ಶ್ರೀಕಾಂತನ ಇಂಥ ತಾತ್ವಿಕ ಉಡ್ಡಾಣಗಳು ಅವನ ದಿನಚರಿಯಲ್ಲಿ ಪದೇ ಪದೇ ಕಣ್ಣಿಗೆ ಬೀಳುತ್ತವೆ....

ಹಿಂದೆ–ಎರಡು ಮೂರು ವರ್ಷಗಳ ಹಿಂದೆ–ನನ್ನನ್ನು ಯಾವಾಗಲೂ ಬೇರೆಯವರೊಡನೆ ತುಲನೆ ಮಾಡುವ ಅಭ್ಯಾಸ ನನ್ನದಾಗಿತ್ತು. ಅವನ ಕಣ್ಣು ಎಷ್ಟು ಚಂದವಿವೆ–ಅವನಂತೆ ನನಗೆ ಕಣ್ಣುಗಳಿದ್ದಿದ್ದರೆ .... ಅವನು ಎಷ್ಟು ಸುಂದರವಾಗಿ ಭಾಷಣ ಮಾಡುತ್ತಾನೆ – ಆ ಕಲೆ ನನ್ನಲ್ಲಿರಬೇಕಾಗಿತ್ತು. ಅವನ ಪ್ರೀತಿಪ್ರಕರಣ ಎಷ್ಟು ಸರಳವಾಗಿ–ಸರಾಗವಾಗಿ ಸಾಗಿದೆ–ನನ್ನದು ಮಾತ್ರ ಎಲ್ಲ ತೊಡಕಿನದು.... ಎಂದು ಮುಂತಾಗಿ....! ನಾನು ಹಾಯಸ್ಕೂಲಿನಲ್ಲಿ ಇದ್ದಾಗ ಸತ್ಯೇಂದ್ರ ನನ್ನ ಆದರ್ಶ ! ಆ ಮೇಲೆ ಶ್ರೀಕಾಂತ ! ಆ ಮೇಲೆ ನೂರೆಂಟು ಮಂದಿ.... ಈಗ ನನ್ನ ನಿಷ್ಕರ್ಷೆ : 'ನಿನ್ನ ಕಕ್ಷೆಯನ್ನು ಹುಡುಕಿ ತೆಗೆ ! ನೀನು ನೀನಾಗು!'

ಇಂದು ಸಂಜೆ ಸತ್ಯೇಂದ್ರ–ಸುಶೀಲೆಯರು ಉತ್ಸಾಹದಿಂದ ನನ್ನನ್ನು ಸ್ವಾಗತಿಸಿದರು.

ನಾನೆಂದರೆ ಅವರೀರ್ವರಿಗೆ ಮಾತಾಡಲು ಒಳ್ಳೆಯ ವಿಷಯ. ಇತ್ತಿತ್ತಲಾಗಿ ನಾನು ಅವರಲ್ಲಿ ಹೋದಾಗ, ನಮ್ಮ ಮಾತುಕತೆಗಳ ಮುಖ್ಯ ವಿಷಯ: ಗೌರೀಶ!

"ನೋಡ್ರಿ ಗೌರೀಶ, ನೀವು ಮತ್ತು ಕಾಮಿನಿ ಲಗ್ನವಾಗಿ ಕೂಡಿ ಇದ್ದಿದ್ದರೆ ಬಹಳ ಚನ್ನಾಗುತಿತ್ತು. ಹೌದೇನಲ್ರೀ?" ಎಂದು ಸುಶೀಲೆ ತನ್ನ ಪತಿಯತ್ತ ನೋಡಿದಳು.

"ಅದೆಲ್ಲ ಸರಿ.... ಅದೇನೋ ಅಂತಾರಲ್ಲ : ಮನುಷ್ಯ ಯೋಚಿಸುವದೊಂದು ದೈವ ಮಾಡುವದಿನ್ನೊಂದು."

"ಗೌರೀಶ, ಇವರು ಹೇಳಿದ್ದು ನೋಡಿದರೆ, ಕಾಮಿನಿಯ ಪ್ರೇಮ ನಿಮ್ಮ ಮೇಲೆ ಒಮ್ಮೆ ಇತ್ತು ಅಂತ ಕಾಣಿಸುತ್ತದೆ.... ನಿಜಕ್ಕೂ ನಿಮ್ಮನ್ನು ಲಗ್ನವಾಗಲು ನಿರಾಕರಿಸಲು ಯಾವ ಒಳ್ಳೆಯ ಹುಡುಗಿಗೆ ಮನಸ್ಸಾದೀತು?"

"ನಿಮ್ಮ ಸ್ತುತಿಗೆ ಥ್ಯಾಂಕ್ಸ್ ! ಸತ್ಯೇಂದ್ರನಿಗೆ ಇಂಥ ಸ್ತುತಿಯನ್ನು ದಿನಾಲು ಉಣಿಸುತ್ತೀರೆಂದು ಕಾಣುತ್ತದೆ–ಆದುದರಿಂದಲೇ ಅವನು ಕೆಡುತ್ತಿದ್ದಾನೆ" – ನಾನು ನಗೆಯಾಡಿದೆ.

"ಗೌರೀಶ, ಅವಳೆಲ್ಲಿರುವಳು? ಧಾರವಾಡದಲ್ಲಿ ತಾನೆ? ಅವಳನ್ನು ಇಲ್ಲಿಗೆ ಆಮಂತ್ರಿಸುವುದು ಶಕ್ಯವಾದೀತೆ?"

ಸುಶೀಲೆಯ ಸರಳ ಪ್ರಶ್ನೆ ಕೇಳಿ ನಗು ಬಂತು : "ನಿಮ್ಮ ಯೋಚನೆಯೇನೋ ಸರಳವಾಗಿದೆ. ಸುಶೀಲಕ್ಕ.... ಆದರೆ...."

"ಒಂದು ದೃಷ್ಟಿಯಿಂದ, ಶಶಿಕಲೆಯನ್ನು ನೀವು ಒಪ್ಪಿ ಲಗ್ನವಾಗಿದ್ದರೆ ಎಷ್ಟು ಚನ್ನಾಗುತ್ತಿತ್ತು – ಅಲ್ಲವೇ?"

"ಸುಶೀಲಾತಾಯೀ, ನನ್ನನ್ನು ಅಥವಾ ಯಾವುದೇ ತರುಣನನ್ನು ಚತುಷ್ಪಾದನನ್ನಾಗಿ ಮಾಡದೆ ಸಮಾಧಾನವಾಗುವುದಿಲ್ಲವೇನು ನಿಮಗೆ?"

ಸತ್ಯೇಂದ್ರ ತಾನು ಓದುತ್ತಿದ್ದ ವರ್ತಮಾನ ಪತ್ರದಿಂದ ಕೊಂಚ ಮುಖವನ್ನೆತ್ತಿ ಹೇಳಿದ : "ಚತುಷ್ಪಾದಗಳಾದರೂ, ತಲೆ ಎರಡಾಗುವವಲ್ಲ.... ನಿನ್ನ ತಲೆಯಿಲ್ಲದ ಬುದ್ಧಿ ಅವಳ ತಲೆಯಲ್ಲಿರಬಹುದು."

"ಅವಳ ತಲೆಯಲ್ಲಿಯೂ ಬರೀ ಅರಳೆಯೇ ಇದ್ದರೆ....!" ನಾನು ನಗೆಯಾಡಿದೆ.

"ಜೋಡಿ ಕೂಡಿತೆನ್ನಬೇಕು!" ಸುಶೀಲೆ ನಕ್ಕಳು.

* * *

ಈ ಪ್ರಪಂಚದ ವಿಷಯಗಳಿಗೆ ಸರಳ ರೂಪು ಕೊಟ್ಟು ನೋಡುವ ಜನರೇ ಹೆಚ್ಚು! ಬಹುಶಃ ಅದುವೇ ಸುಖದ ರಾಜಮಾರ್ಗವಿರಬಹುದು... ಆದರೇ ಸುಖವೇ ಜೀವನದ ಪರಮ ಗುರಿಯೇನು?....

'ಸರಳರೂಪ ಕೊಡಿರಿ'.... ಸಾಮಾನ್ಯರ ಜನರ ಮುಖ್ಯ ತತ್ವ !

ಆದರೆ ಜೀವನ ಮಾತ್ರ ಸರಳವಾದ ಬೀಜಗಣಿತವೂ ಅಲ್ಲ, ರೇಖಾ ಗಣಿತವೂ ಅಲ್ಲ. ಜೀವನವೆಂದರೆ ಗಂಟು ಗಂಟಾದ ಭಯಂಕರ ತೊಡಕು! ಅದರ ಆಗು-ಹೋಗುಗಳನ್ನೆಲ್ಲ ಪ್ರತ್ಯೇಕವಾಗಿ ಬಿಡಿಸಿಟ್ಟು ಡಿಸ್ಸೆಕ್ಟಿಂಗ್ ಟೇಬಲಿನ ಮೇಲೆ ಪರೀಕ್ಷಿಸುವುದು ಶಕ್ಯವಿಲ್ಲ.... ಮಾನವನ ದೇಹವನ್ನು ತುಂಡು ತುಂಡಾಗಿ ಡಿಸ್ಸೆಕ್ಟ್ ಮಾಡಿ ನೋಡಬಹುದು. ಆದರೆ ಮಾನವನ ಮನಸ್ಸನ್ನು? ಜೀವನವೆಂದರೆ ಎಷ್ಟೋ ದೇಹಗಳ, ಮನಸ್ಸುಗಳ ಕ್ರಿಯೆ-ಪ್ರತಿಕ್ರಿಯೆಗಳನ್ನೊಳಗೊಂಡ ಅವಿರತ ಪ್ರವಾಹ!...

ಸತ್ಯೇಂದ್ರನ ಮನೆಯಿಂದ ಮರಳುವಾಗ ಬಂದ ಮತ್ತೊಂದು ವಿಚಾರವೆಂದರೆ : ಸರಳವಾದ ಸುಖ-ಜೀವನವು ಮನಸನ್ನು ಕೊಂಚ ಮೊಂಡ ಮಾಡುತ್ತದೆ. ಸತ್ಯೇಂದ್ರ-ಸುಶೀಲೆಯರ ಸಹಾನುಭೂತಿ ಎಷ್ಟೇ ಹಿರಿದಾಗಿದ್ದರೂ, ಅವರು ನನ್ನನ್ನು ತಿಳಿಯಲಾರರು--ಸಂಪೂರ್ಣವಾಗಿ, ಆಳವಾಗಿ.

ಶ್ರೀಕಾಂತ ಅತ್ಯಂತ ಏಕಾಕಿಯಾಗಿದ್ದಂತೆ, ನಾನೂ ಏಕಾಕಿ!

ಆದುದರಿಂದಲೇ ಈ ಬರವಣಿಗೆ-- ಆತ್ಮನಿವೇದನೆ!

* * *

'ಸರಳರೂಪು ಕೊಡಿರಿ!'

ಜೀವನಕ್ಕೆ ಸರಳರೂಪು ಕೊಟ್ಟು ನೋಡುವದರಲ್ಲಿ ತಪ್ಪೇನಿಲ್ಲ. ಆದರೆ ಮುಖ್ಯತಃ ಜೀವನ ತೊಡಕಿನದು ಎಂಬ ಮಾತನ್ನು ಲಕ್ಷ್ಯದಲ್ಲಿಟ್ಟು, ಸರಳ ರೂಪುಕೊಟ್ಟು ನೋಡಿದರೆ ಅಡ್ಡಿಯಿಲ್ಲ.

ನನ್ನ ಹಾಗೂ ಶ್ರೀಕಾಂತನ ಐದು ವರ್ಷದ ಧಾರವಾಡದ ಸಹವಾಸವನ್ನು ಮೊದಲು ಸರಳರೂಪು ಕೊಟ್ಟು ನೋಡಿದರೆ ಹೇಗೆ?

ಸತ್ಯೇಂದ್ರ ಮತ್ತು ನಾನು ಶ್ರೀಕಾಂತನ ಮನೆಗೆ ಊಟಕ್ಕೆ ಹೋದ ದಿನದಿಂದಲೇ, ನನ್ನ ಹಾಗೂ ಶ್ರೀಕಾಂತನ ಗೆಳೆತನ ಒಳ್ಳೆಯ ಜೋರಿನಿಂದ ಸುರುವಾಯಿತು.

ಶ್ರೀಕಾಂತನ ತಂಗಿ ಕಾಮಿನಿ ಆಗಿನ್ನೂ ಹಾಯಸ್ಕೂಲಿಗೆ ಹೋಗುವ ಹುಡುಗಿ. ಆದರೂ ಒಂದು ಬಗೆಯ ವಿಲಕ್ಷಣ ಆಕರ್ಷಣ ಅವಳಲ್ಲಿ ಮನೆ

ಮಾಡಿತ್ತು. ಕಾಮಿನಿ ಇನ್ನೂ ಓರ್ವ ಪ್ರತ್ಯೇಕ ವ್ಯಕ್ತಿಯಾಗಿ ಪರಿಣಮಿಸಿರಲಿಲ್ಲ; ಅವಳು ಶ್ರೀಕಾಂತನ ತಂಗಿ ಮಾತ್ರ–ನನಗೂ ತಂಗಿಯಂತೆಯೇ !

ಒಂದು ತಿಂಗಳೊಳಗಾಗಿ ಶ್ರೀಕಾಂತ ನನ್ನನ್ನು ಸೋಶಿಯಲಿಸ್ಟನನ್ನಾಗಿ ಮಾಡಿದ. 'ಪ್ರಗತಿ' ಪತ್ರಿಕೆಯಲ್ಲಿ ಶ್ರೀಕಾಂತ ಕೆಲಸ ಮಾಡುತ್ತಿದ್ದ–ಸಹಾಯಕ ಸಂಪಾದಕನೆಂದು. ಲೇಖನಗಳನ್ನು ಬರೆಯಲು ಹಾಗೂ ಭಾಷಾಂತರ ಮಾಡಲು ನನ್ನನ್ನು ಆಗಾಗ್ಗೆ ಹಚ್ಚುತ್ತಿದ್ದನಾತ, ಎಷ್ಟೋ ಸಲ ಪತ್ರಿಕೆಯನ್ನು ಮಾರಲು ಕೂಡ ಕರೆದೊಯ್ಯುತ್ತಿದ್ದ. ಸ್ವಾತಂತ್ರ್ಯ ನಂತರದ ಮೊದಲನೆಯ ಮಹಾಚುನಾವಣೆ ಸಮೀಪಿಸಿದ್ದರಿಂದ ಪಾರ್ಟಿಯ ಕಾರ್ಯ ಒಳ್ಳೆಯ ಸ್ಫೂರ್ತಿಯಿಂದಲೂ ಉತ್ಸಾಹದಿಂದಲೂ ಸಾಗಿತ್ತು.

ಮನೆಯಿಂದ ತಂದೆಯವರ ಕಠೋರ ಪತ್ರ ಬರತೊಡಗಿದವು. 'ನಿನ್ನ ಕಾಲೇಜು ಶಿಕ್ಷಣ ಬಂದುಮಾಡುವೆ....' ಎಂಬ ಬೆದರಿಕೆಯನ್ನು ಹಾಕಿದರು. ಶ್ರೀಕಾಂತನ ಸ್ಫೂರ್ತಿಯ ಆದಾರವಿದ್ದುದರಿಂದ ನಾನೇನು ತಂದೆಯವರ ಬೆದರಿಕೆಗೆ ಉಪ್ಪು ಹಾಕಲಿಲ್ಲ. ಎಫ್. ವಾಯ್. ಸಾಯನ್ಸ ಪರೀಕ್ಷೆಯಲ್ಲಿ ಫರ್ಸ್ಟಕ್ಲಾಸು ದೊರಕಿಸಿದ್ದರಿಂದ ತಂದೆಯವರ ಸಿಟ್ಟೂ ಶಾಂತವಾಯಿತು.... ಸತ್ಯೇಂದ್ರ ಮಾತ್ರ 'ಈ ರಾಜಕಾರಣದ ಭಾನಗಡಿಯಲ್ಲಿ ಬೀಳಬೇಡ, ಗೌರಿ–' ಎಂದು ಆಗಾಗ್ಗೆ ಎಚ್ಚರಿಸುತ್ತಿದ್ದ. ಅವರ ಸಹಾಯದಿಂದಲೇ ನನಗೆ ಫರ್ಸ್ಟಕ್ಲಾಸು ಸಿಕ್ಕಿತು....

ಮೂರನೆಯ ವರ್ಷ ಸತ್ಯೇಂದ್ರ ಪುಣೆಗೆ ಹೋದ, ಎಂಜಿನಿಯರಿಂಗ್ ಕಾಲೇಜಿಗೆ ನನ್ನ ಇಂಟರ ಸಾಯನ್ಸದ ಅಭ್ಯಾಸ ಕುಂಟುತ್ತ ಸಾಗಿತ್ತು. ಶ್ರೀಕಾಂತ ಆಗ ಸೀನಿಯರ್ ಬಿ.ಎ.ದಲ್ಲಿದ್ದ. ಅದೇವರ್ಷ ಚುನಾವಣೆಯಲ್ಲಿ ಪಾರ್ಟಿಗೆ ಅಪಯಶ ಬಂದ ನಂತರ – ಶ್ರೀಕಾಂತನ ವಿಚಾರಗಳಲ್ಲಿ ಬದಲಾವಣೆಯಾಗತೊಡಗಿತು. ಪಾರ್ಟಿಯ ಲೀಡರರೊಡನೆ ಮತ ಭೇದವಾಗಿ ಶ್ರೀಕಾಂತ ಪಾರ್ಟಿಯನ್ನು ತ್ಯಜಿಸಿದ. ಅವನ ಜೊತೆಗೆ ಅವನ ಆತ್ಮೀಯ ವಿಧೇಯ ಶಿಷ್ಯನಾದ ನಾನೂ ಪಾರ್ಟಿಯನ್ನು ತ್ಯಜಿಸಿದೆ. ಬಿ. ಎ. ಪರೀಕ್ಷೆ ಆದೊಡನೆ ಶ್ರೀಕಾಂತ ತನ್ನದೇ ಸ್ವತಂತ್ರ ಜ್ಞಾನವನ್ನು ಕಟ್ಟುವ ತನ್ನವೇ ರಾಜಕೀಯ ಆದರ್ಶಗಳನ್ನು ಕಲ್ಪಿಸುವ ತನ್ನವೇ ವೈಯಕ್ತಿಕ ಹಾಗೂ ಸಾಮಾಜಿಕ ಮೌಲ್ಯಗಳನ್ನು ಹುಡುಕುವ ಹವ್ಯಾಸಕ್ಕೆ ಬಿದ್ದ.... ಇಂಟರ ಸಾಯನ್ಸದಲ್ಲಿ ನನ್ನ ಅಭ್ಯಾಸ ಚನ್ನಾಗಿ ಆಗಲಿಲ್ಲ. ಪಾಲಿಗೆ ಬಂದದ್ದು ಸೆಕೆಂಡ್‌ಕ್ಲಾಸು. ಎಂಜಿನೀಯರಿಂಗಿಗೆ ಅಡ್ಮಿಶನ್ ದೊರೆಯಲಿಲ್ಲ. ನನಗೆ ಅಷ್ಟೇನೂ ನಿರಾಶೆಯಾಗಲಿಲ್ಲ ಎಂಜಿನೀಯರಿಂಗ್ ಇಲ್ಲವಾದರೆ ಇಲ್ಲ ಅಲ್ಲಿಯೇ ಶ್ರೀಕಾಂತನ ಸಹವಾಸದಲ್ಲಿ ಬಿ. ಎಸ್‌ಸಿ ಮಾಡುವದೇ ನೆಟ್ಟಗೆ – ಎಂಬ ಸಮಾಧಾನವಿತ್ತು.

ನಾನು ಜ್ಯೂನೀಯರ ಬಿ.ಎಸ್‌ಸಿ.ಯಲ್ಲಿದ್ದಾಗ ಕಾಮಿನಿ ನನ್ನ ಕ್ಷಿತಿಜದಲ್ಲಿ ಸ್ಪಷ್ಟವಾಗಿ ಮೂಡಿದಳು. ಅವಳ ಎಸ್.ಎಸ್‌ಸಿ.ಯ ಅಭ್ಯಾಸದಲ್ಲಿ ಸಾಕಷ್ಟು ಸಹಾಯವಿತ್ತೆ.... ಶ್ರೀಕಾಂತನ ವಿಚಾರಲಹರಿ ಕೊಂಚ ನನ್ನ ಆಳ ಮೀರಿ ಸಾಗಿತ್ತು ಅವನ ತತ್ವಜ್ಞಾನ–ಸಾಹಿತ್ಯಗಳ ಅಭ್ಯಾಸ ಚಿಂತನೆಗಳು ಅವ್ಯಾಹತವಾಗಿ ಸಾಗಿದ್ದವು....

ಮೂರನೆಯ ವರ್ಷ ನನ್ನ ಜೀವನದಲ್ಲಿ ಮನ್ವಂತರವಾಯಿತು. ಕಾಮಿನಿ ಕಾಲೇಜಿಗೆ ಬಂದಳು. ಮತ್ತು.... ಮುಂದಿನದು ಸರಳ ಗದ್ಯಕ್ಕೆ ನಿಲುಕದ ವಿಷಯ....! ಶ್ರೀಕಾಂತನ ಆತ್ಮ–ತಲ್ಲೀನತೆ ಪರಮಾವಧಿಯನ್ನು ಮುಟ್ಟಿದ ಕಾಲವದು.

ಮುಂದೆ ನನ್ನ ಬಿ.ಎಸ್‌ಸಿ. ಮುಗಿಯಿತು. ಶ್ರೀಕಾಂತನ ಎಂ.ಎ. ಮುಗಿಯಿತು. ಕಾಮಿನಿ ಇಂಟರಕ್ಕೆ ಕಾಲಿಟ್ಟಳು. ಆನಂತರ ಶ್ರೀಕಾಂತನಿಗೆ ಟೀ.ಬಿ.... ನನ್ನ ಎಮ್.ಎಸ್‌ಸಿ. ಕುಂಟುತ ಸಾಗಿತು.... ಕಾಮಿನಿ ಇಂಟರ ನಾಪಾಸಾದಳು...ಮುಂದೆ ಎಲ್ಲರ ಆಗ್ರಹದ ಮೇರೆಗೆ ಮುಂಬಯಿಗೆ ಬಂದೆ.

ಥೂ – ಈ ಸರಳ ರೂಪಿಗೆ ಬೆಂಕಿಯಿಡಲಿ!

ಇತಿಹಾಸವೆಂದರೆ ಬರಿ ಇಸ್ವಿಗಳ ಪಟ್ಟಿಯೇನು?

* * *

ಶ್ರೀಕಾಂತ ಒಮ್ಮೆ ಹೀಗೆ ಬರೆದಿದ್ದಾನೆ;

"ಜೀವನದ ಸರಳತೆ–ಅಗಾಧತೆ ಎಲ್ಲ ನಮ್ಮ ದೃಷ್ಟಿಯಲ್ಲಿದೆ .... ನಮ್ಮ ಪ್ರಜ್ಞೆಯನ್ನು ಜಾಗೃತವಾಗಿಟ್ಟರೆ, ಜೀವನದ ಸಣ್ಣ ಪುಟ್ಟ ವ್ಯಾಪಾರಗಳಲ್ಲಿಯೂ ಅನಂತ ಸೌಂದರ್ಯವನ್ನೂ, ಅನಂತ ವೈಚಿತ್ರ್ಯವನ್ನೂ, ಅನಂತ ಗೂಢವನ್ನೂ, ನಾವು ಕಾಣಬಹುದು. ಬ್ಲೇಕ್ ಹೇಳುತ್ತಾನೆ :

"To see a World in Grain of Sand
And a Heaven in a wild Flower,
Hole Infinity in the palm of your hand
And Eternity in an hour"

('ಮಳಲಿನ ಒಂದು ಕಣದಲ್ಲಿ ಒಂದು ಇಡಿಯ ವಿಶ್ವವೇ ಕಾಣಬಹುದು. ಕಾಡಿನ ಒಂದುಕುಸುಮದಲ್ಲಿ ಒಂದು ಸ್ವರ್ಗವೇ ಕಾಣಬಹುದು. ನಿನ್ನ ಒಂದು ಅಂಗೈಯಲ್ಲಿ ಅಪಾರತ್ವವನ್ನು ಹಿಡಿಯಬಹುದು. ಒಂದೇ ಒಂದು ತಾಸಿನಲ್ಲಿ ಅನಂತತೆಯನ್ನು ಹಿಡಿಯಬಹುದು....')

ಆದರೆ ನಾವು ಅಜ್ಞಾನದ ದೋಣಿಯಲ್ಲಿ ಕುಳಿತು ನುಣ್ಣಗೆ ಜುಣುಗಿ ಹೋಗುತ್ತೇವೆ !

ಉದಾಹರಣೆಗಾಗಿ – ನಮ್ಮ ದೇಹದ ವ್ಯಾಪಾರಗಳನ್ನೇ ತೆಗೆದುಕೊಳ್ಳೋಣ. ಈ ದೇಹದಲ್ಲಿ ವರ್ಷ ವಾಸಮಾಡಿಯೂ, ಈ ದೇಹದಿಂದ ಸುಖ–ದುಃಖಗಳನ್ನು ಪಡೆದೂ, ಈ ದೇಹದ ಇಂದ್ರಿಯಗಳಿಂದ ಪ್ರಪಂಚದ ಸಾವಿರಾರು ಆಗುಹೋಗುಗಳನ್ನು ಅನುಭವಿಸಿಯೂ ಈ ದೇಹದ ಬಗ್ಗೆ ಅಜ್ಞಾನವಿಟ್ಟುಕೊಂಡೇ ದೇಹತ್ಯಾಗ ಮಾಡುವೆವು.... ಹಾಗೆ ನೋಡಿದರೆ, ದೇಹದ ಪ್ರತಿಯೊಂದು ಅವಯವವೂ, ಪ್ರತಿಯೊಂದು ವ್ಯಾಪಾರವೂ ಎಷ್ಟು ಅಗಾಧವಾಗಿದೆ : ಆಶ್ಚರ್ಯಯುಕ್ತವಾಗಿದೆ ಕೈ–ಕಾಲು ಬೆರಳುಗಳು, ಪಚನಕ್ರಿಯೆ, ರಕ್ತಾಭಿಸರಣ, ಮಿದುಳು–ಮಿದುಳಿನಲ್ಲಿಯ ವಿಚಾರ ಶಕ್ತಿ, ಕಲ್ಪನಾಶಕ್ತಿ, ಸ್ಮರಣಶಕ್ತಿ.... ಮುಂ– ಎಲ್ಲವೂ ಅಗಮ್ಯವಾಗಿವೆ, ಅಗಾಧವಾಗಿವೆ.... ಕಣ್ಣುಗಳು ! ಅಹ ಕಣ್ಣುಗಳಷ್ಟು ಸುಂದರವಾದ ಗೂಢ ಜಗತ್ತಿನಲ್ಲಿ ಬೇರೊಂದಿಲ್ಲ –

ಎಲ್ಲಕ್ಕಿಂತ ತೊಡಕಿನ ವಿಷಯ ಮಾನವನ ಮನಸ್ಸು. ಮ್ಯಾಕ್‌ಡೂಗಲ್ಲನು ಹೇಳುವಂತೆ– "ಮಿದುಳನ್ನು ಬೃಹತ್ಕರಿಸಿ, ಮಿದುಳಿನ ಪ್ರತಿಯೊಂದು ಭಾಗದಲ್ಲಿ ಸಾವಿರಾರು ತಜ್ಞರನ್ನು ಅತ್ಯಂತ ಆಧುನಿಕಯಂತ್ರಗಳ ಸಮೇತ ಇಟ್ಟು, ಸಾವಿರಾರು ವರ್ಷ ಅಭ್ಯಾಸ ನಡೆಸಿದರೂ, ಮನಸ್ಸೆಂದರೆ ಏನು ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ಸಿಗಲಾರದು.... ಮನೋವಿಶ್ಲೇಷಣ ತಜ್ಞರಂತೂ ಮಾನವೀ ಮನಸ್ಸಿನ ಮೂರು–ನಾಲ್ಕಾಂಶ ಭಾಗವನ್ನು ಅಂತರ್ಮನ (unconscious) ವೆಂದು ಕರೆದು, ಮನಸ್ಸಿನ ಅಗಾಧತೆಯನ್ನು ಸೂಚಿಸಿದ್ದಾರೆ...."

* * *

ಅಂದು ಹುಣ್ಣಿಮೆಯ ರಾತ್ರಿ ! ನನ್ನ ಹೃದಯದಲ್ಲಿ ತೂಗುಬಿಟ್ಟ ಒಂದು ಅತ್ಯಂತ ಪ್ರಕಾಶಮಾನವಾದ ರತ್ನ !

ಅಕ್ಟೋಬರ, ಟರ್ಮಿನಲ್ ಪರೀಕ್ಷೆ ಅದೇ ಮುಗಿದಿತ್ತು. ಶ್ರೀಕಾಂತನ ಮತ್ತು ನನ್ನ ಮೊದಲನೆಯ ವಿರಹ. ಮೂರು ತಿಂಗಳಲ್ಲಿ ನಮ್ಮ ಗೆಳೆತನ, ನಮ್ಮ ಪ್ರೀತಿ ಗಾಢವಾಗಿ, ಗಿಡವಾಗಿ ಬೆಳೆದಿತ್ತು....

ಅದು ಎಫ್. ವಾಯ್.ದ ವರ್ಷವಾದ್ದರಿಂದ, 'ಪರೀಕ್ಷೆಯಾದೊಡನೆ ಬಾ' ಎಂದು ತಂದೆಯವರ ಆದೇಶವಾಗಿತ್ತು.... ಮನಸ್ಸಿಲ್ಲದ ಮನಸ್ಸಿನಿಂದ ಊರಿಗೆ ಹೊರಟಿದ್ದೆ....

ಅಂದು ಸಂಜೆ ಶ್ರೀಕಾಂತನ ಮನೆಗೆ ಊಟಕ್ಕೆ ಹೋದೆ. ನಾನು ಹೋದಾಗ ಶ್ರೀಕಾಂತ ಗುರುನಾಥ–ಗೋಪಾಲರೊಡನೆ ಮಾತನಾಡುತ್ತ ಕುಳಿತಿದ್ದ. ಅವನೇನೋ ಪಾರ್ಟಿಯ ವಿಷಯವಾಗಿ ಎಂದಿನಂತೆ ವ್ಯಾಖ್ಯಾನ ಬಿಗಿಯುತ್ತಿದ್ದ:

"ಈ ಇಲೆಕ್ಷನ್‌ದಲ್ಲಿ ನಮ್ಮ ಸೋಲು ನಿಶ್ಚಿತ. ಆದರೆ ಈ ಸೋಲಿನತ್ತ ನೋಡುವ ನಿಮ್ಮ ದೃಷ್ಟಿ ಸಂಕುಚಿತವಾಗಿವೆಯೆಂದು ನನಗನಿಸುವುದು.... ಸೋಲಾದರೇನು? ನಾವು ಜನತೆಯ ಮನಸ್ಸನ್ನು ಸ್ವಲ್ಪ ಮಟ್ಟಿಗಾದರೂ ಎಚ್ಚರಿಸದಿರಲಾರೆವು. ಲೋಕ ರಾಜ್ಯದಲ್ಲಿ ಜನತೆ ಎಲ್ಲ ತತ್ವಗಳನ್ನು, ಎಲ್ಲ ವಿಚಾರಗಳನ್ನು ಪರಾಮರ್ಶಿಸಿ ನೋಡಬೇಕು.... ನಾವಂತೂ ಈ ಚುನಾವಣೆಯೆಂದರೆ ಒಳ್ಳೆಯ ಸುವರ್ಣಸಂಧಿಯೆಂದೇ ಬಗೆಯಬೇಕು. ನಮ್ಮ ತತ್ವಪ್ರಣಾಲಿಯನ್ನು ಜನತೆಯ ಮುಂದೆ ಇಡಲು.... ಸ್ವಾತಂತ್ರ್ಯದ ಘೋಷಣೆಯಲ್ಲಿ ಹೋರಾಟದಲ್ಲಿ ಭಾವನೆಗಳಿಗೆ ಮಹತ್ವವಿತ್ತು. ಸ್ವಾತಂತ್ರ್ಯ ಈಗ ತಾನಾಗಿಯೇ ಬಾಗಿಲಿಗೆ ಬಂದಿದೆ. ಇಂಥ ಸಮಯದಲ್ಲಿ ಬುದ್ಧಿಗೆ, ನಿರ್ಮಾಣಶೀಲ ಕರ್ತೃತ್ವಶಕ್ತಿಗೆ ನಾವು ಮಹತ್ವ ಕೊಟ್ಟು, ಹೊಸ ಸಮಾಜವನ್ನು ಕಟ್ಟಲು ಹೆಣಗಬೇಕು...." ನನಗಂತೂ ಶ್ರೀಕಾಂತನ ಮಾತು ಯಾವಾಗಲೂ ಉಜ್ವಲವಾಗಿ ತೋರುತ್ತಿದ್ದವು. ನಾನು ಅವನ ನುಡಿಗಳಲ್ಲಿಯ ಶಕ್ತಿಗೆ ಮಾರು ಹೋಗಿ ಪುಲಕಿತನಾಗುತ್ತಿದ್ದೆ. ಹದಿನೇಳು ವರ್ಷದ ಭಾವನಾ ಪ್ರಧಾನ ಮನಸ್ಸಿಗೆ ಸ್ವಾತಂತ್ರ್ಯ ಆದರ್ಶ, ನವಸಮಾಜ ಮುಂತಾದ ಶಬ್ದಗಳಲ್ಲಿ ಒಂದು ಬಗೆಯ ಮಾಂತ್ರಿಕಶಕ್ತಿ ಇತ್ತು....

ಅಷ್ಟರಲ್ಲಿ ಕಾಮಿನಿ ಹೊರಬಂದು: "ದಾದಾ, ಅಮ್ಮ ಕರೆಯುತ್ತಾಳೆ," ಎಂದು ಶ್ರೀಕಾಂತನಿಗೆ ಹೇಳಿದಳು. ಶ್ರೀಕಾಂತ ಕಾಮಿನಿಯೊಡನೆ ಒಳಗೆ ಹೋದ.

"ಕಾಮಿನಿ ಬೆಳೆದಿದ್ದಾಳಲ್ಲ, ವಾಹ್ !" ಗುರುನಾಥ ಕಣ್ಣು ಹಿಗ್ಗಿಸಿ ನುಡಿದ.

" 'ಬೆಳೆದು ನಿಂತಿದೆ ಹುಡುಗಿ. ಕಂಡಕಂಡವರ ಎದೆ ಸೆಳೆದು ನಿಂತಿಹೆ ಮತ್ತೆ'.... ಕಾಲೇಜಿಗೆ ಬಂದ ನಂತರ ಹುಡುಗರ ತಲೆ ತಿರುಗಿಸದೆ ಬಿಡಳು." ಗೋಪಾಲ ನುಡಿದ.

"ನಾನು ಎರಡು ವರ್ಷ ಸಣ್ಣವನಿರಬೇಕಿತ್ತು....ಅಂದರೆ...." ಗುರುನಾಥ ಹಳಹಳಿಸಿದ.

"ನೀನು ಎರಡು ವರ್ಷ ಸಣ್ಣವನಿದ್ದರೇನು, ಎರಡು ವರ್ಷ ದೊಡ್ಡವನಿದ್ದರೇನು, ನಿನ್ನ ಕಡೆಯಿಂದ ಏನಾಗುವದಿದೆ?"

ಇವರ ಮಾತುಗಳನ್ನು ಕೇಳುತ್ತಿದ್ದ ನನಗೆ ಸಿಟ್ಟು ಬಂದರೂ ನಾನು ಸುಮ್ಮನೆ ಕುಳಿತೆ. ಅವರಿಗೆ ಏನಾದರೂ ಕಠೋರವಾಗಿ ಹೇಳಿ ಅವನ ಬಾಯಿ ಮುಚ್ಚಿಸಬೇಕೆಂದು ಅನಿಸಿತು. ಆದರೆ ಏನೂ ಹೇಳಲೂ ನಾನು ಸಮರ್ಥನಾಗಲಿಲ್ಲ....ಅವರ ಮಾತಿನ ಪರಿಣಾಮ ನನಗೆ ಗೊತ್ತಿಲ್ಲದೆಯೆ ನನ್ನ ಮೇಲೆ ಆಗಿರಬೇಕು, ಯಾಕೆಂದರೆ–

ಮೊದಲನೆಯ ಸಲ ಕಾಮಿನಿಯನ್ನು ಹೊಸ ಬೆಳಕಿನಲ್ಲಿ ಕಂಡೆ. ಕಾಮಿನಿ! ಬೆಳೆಯುತ್ತಿರುವ ಕಮನೀಯ ಹುಡುಗಿ! ಹದಿನೈದರ ಹೊಸತಿಲಲ್ಲಿ ಅರಳುತ್ತಿರುವ ಹೂವು – ಕಾಮಪುಷ್ಪ!

ಗುರುನಾಥ–ಗೋಪಾಲರು ಹೋದ ನಂತರ, ಶ್ರೀಕಾಂತನೂ ನಾನೂ ಊಟಕ್ಕೆ ಕುಳಿತೆವು. ಕಾಮಿನಿಯೂ ನಮ್ಮ ಜೊತೆಗೆ ಕುಳಿತಳು. ಅಣ್ಣ ತಂಗಿಯರ ಜೋಡಿ ಬಹಳ ಸುಂದರವಾಗಿ ಶೋಭಿಸುತ್ತಿತ್ತು. ನನಗೂ ಇಂಥ ಒಬ್ಬ ತಂಗಿಯಿದ್ದಿದ್ದರೆ – ಎಂಬ ವಿಚಾರ ಮನಸ್ಸನ್ನು ಸವರಿ ಹೋಯಿತು....

ಊಟವಾದ ನಂತರ ಶ್ರೀಕಾಂತ 'ಹಸೀ ಚಾಂದ್‌ಕೀ ಆಜ ನಿರಾಲೀ....' ಎಂಬ ರೆಕಾರ್ಡ್ ಹಚ್ಚಿದ. ಆ ಮೇಲೆ ನಮ್ಮ ಆಗ್ರಹದ ಮೇರೆಗೆ ಕಾಮಿನಿ ಒಂದು ಹಿಂದೀ ಹಾಡನ್ನೂ ಒಂದು ಮರಾಠೀ ಹಾಡನ್ನೂ ಹೇಳಿದಳು. ಕಾಮಿನಿಯ ಸಹಜತೆ, ಅವಳ ದಿಟ್ಟತನ, ಅವಳ ಕಣ್ಣುಗಳಲ್ಲಿ ಆಗಾಗ್ಗೆ ಹೊಳೆಯುವ ಮಾದಕತೆ ನನ್ನಲ್ಲಿ ಆಶ್ಚರ್ಯವನ್ನುಂಟು ಮಾಡಿದವು.

"ನಾನೂ ಬರಲೇನು, ದಾದಾ, ತಿರುಗಾಡಲು?" ಕಾಮಿನಿಯ ಕೊಂಕಣಿ ಭಾಷೆಯಷ್ಟು ಮೃದುವಾದ ಭಾಷೆ ನಾನು ಎಲ್ಲಿಯೂ ಕೇಳಿಲ್ಲ.

"ಬೇಡ, ನಾವು ಬಹಳ ದೂರ ತಿರುಗಾಡಲು ಹೋಗುವವರಿದ್ದೇವೆ..." ಎಂದ ಶ್ರೀಕಾಂತ.

ಕಾಮಿನಿಯ ಮುಖದ ಮೇಲೆ ಅಸಮಾಧಾನದ ಛಾಯೆ ಬಂತು. ಮೂಗಿನ ಹೊರಳೆಗಳು ಕಠೋರವಾದವು....

ಶ್ರೀಕಾಂತನೂ ನಾನೂ ಮನೆಯ ಹೊರಗೆ ಬಿದ್ದು ಒಂದೆರಡು ಹೆಜ್ಜೆ ಹೋಗುವಷ್ಟರಲ್ಲಿ ಕಾಮಿನಿ ಬಾಗಿಲಲ್ಲಿ ಬಂದು ನಿಂತು ಕೂಗಿ ಹೇಳಿದಳು : "ದಾದಾ, ಬೇಗ ಬರ್ರಿ ಎಂದು ತಾಯಿ ಹೇಳಿದ್ದಾಳೆ."

ನಾನು ಹಿಂತಿರುಗಿ ನೋಡಿದೆ. ಚಂದಾದ ಸ್ಕರ್ಟಿನಲ್ಲಿ ನಿಂತ ಆ ದೇಹ ಚಂದ್ರ ಪ್ರಕಾಶದ ಮುದ್ದೆಯಂತೆ ಕಂಡಿತು ! ನಿಜವಾಗಿ ಆಗಲೇ ನನ್ನ ಅಂತರಂಗದಲ್ಲಿ ಪ್ರೇಮದ ಬೀಜ ಬಿತ್ತಲ್ಪಟ್ಟಿರಬೇಕು. ಆದರೆ ಶ್ರೀಕಾಂತನ ಪ್ರಭಾವದ ಮೂಲಕ ಆ ಬೀಜ ಅಂತರ್ಮನದಲ್ಲಿಯೇ ಉಳಿದು, ಎರಡು ವರ್ಷಗಳ ನಂತರ ಒಳ್ಳೆಯ ರಭಸದಿಂದ ಹೊರಬಿದ್ದು ಬೆಳೆದಿರಬೇಕು – ಮಹಾ ಭಯಂಕರವಾಗಿ, ವರೆಯಿಂದ ಹೊರ ಬಿದ್ದ ಖಡ್ಗದಂತೆ !

ನಾವಿಬ್ಬರೂ ಮೊದಲು ಎರಡು ಫರ್ಲಾಂಗ ದೂರವಿದ್ದ ಸ್ಟೇಶನ್ನಿನತ್ತ ಹೋದೆವು. ಆಗ ಹತ್ತು ಹೊಡೆದದ್ದರಿಂದ ಹಾದಿಯ ಮೇಲೆ ವಿಶೇಷ ಜನರಿದ್ದಿಲ್ಲ.

ದಟ್ಟವಾಗಿ ಬೆಳೆದ ಗಿಡಗಳೊಳಗಿಂದ ತೂರಿ ಬರುವ ಚಂದ್ರಪ್ರಕಾಶ ಡಾಂಬರ ರೋಡಿನ ಮೇಲೆ ಬಿದ್ದ ಎಲೆಗಳ ನೆರಳಾಟ : ವಾತಾವರಣವು ಕೃತಕ-ಕನಸಿನಂತೆ! ಅದೇ ಹುಬ್ಬಳ್ಳಿಯಿಂದ ಬಂದ ರೇಲುಗಾಡಿಯೂ ಕೂಡ ಕನಸಿನಲ್ಲಿ ಕಂಡಂತಾಗಿತ್ತು. ನಾವು ಬಲಕ್ಕೆ ಹೊರಳಿ ಕರ್ನಾಟಕ ಕಾಲೇಜದತ್ತ ಸಾಗಿದ್ದೆವು. ಅನಂತರ ಎಡ ಬದಿಯ ದೊಡ್ಡ ಬಯಲನ್ನು ದಾಡಿ ರಹದಾರಿಗಳಿಂದ ದೂರ ಹೋಗಿ ಸಣ್ಣ ದಿನ್ನೆಯೊಂದರ ಮೇಲೆ ಕುಳಿತು ಕೊಂಡೆವು. ಮಾತಿನಕಿಂತ ಮೌನ ಹೆಚ್ಚು! ಮಿದುಳಿನಕಿಂತ ಹೃದಯದ ವೇಗ ಹೆಚ್ಚು! ಬೆಳೆದಿಂಗಳು ಹೃದಯವನ್ನು ತುಂಬಿತ್ತು. ಗೆಳೆತನದ ಒಲವು ಬೆಳದಿಂಗಳಲ್ಲಿ ಪರಿಮಳದಂತೆ ಪಸರಿಸಿತ್ತು.... ದೂರದಲ್ಲಿ ಕರ್ನಾಟಕ ಕಾಲೇಜಿನ ಅಸ್ಪಷ್ಟವಾದ ಆಕಾರ, ಹೃದಯದಲ್ಲಿಯ ಯಾವುದೋ ಅಸ್ಪಷ್ಟ ಭಾವನೆಯ ಪ್ರತೀಕದಂತಿತ್ತು. ದೂರದಲ್ಲಿಯ ಗಿಡಗಳ ಜೊಂಪಿನಲ್ಲಿ ಅಡಗಿದ ಚಾರರಂತಿದ್ದವು....

ಭಾವನೆಯಿಂದ ಭಾರವಾದ ವಾತಾವರಣದಲ್ಲಿ ಮಾತಿನಕಿಂತ ಮೌನವೇ ಹಗುರ ಆದರೂ ಕೊಂಚ ಹೊತ್ತಿನ ನಂತರ ಮಾತು ಬೆಳೆಯತೊಡಗಿದವು. ಶ್ರೀಕಾಂತನೇ ವಿಶೇಷವಾಗಿ ಮಾತನಾಡುವವ : ದೇಶೋನ್ನತಿ, ಜನತಾ ಸೇವೆ, ಲೋಕ ಕಲ್ಯಾಣ, ಆತ್ಮೋನ್ನತಿ, ಆತ್ಮ-ಬಲಿದಾನ, ನವ-ಸಮಾಜ ಮುಂತಾದ ಮಂತ್ರ-ಶಬ್ದಗಳಿಂದ ಮುಗ್ಧನಾಗಿದ್ದೆ -

"ಗೌರೀ, ನೀನು ಯಾವಾಗಲೂ ನನ್ನ ಜೊತೆಯಾಗಿರಬೇಕು."

"ಹುಂ"

"ಯಾವಾಗಲೂ"

"ಸದೈವ"

"ನನ್ನಿಂದ ತಪ್ಪುಗಳಾಗಬಹುದು, ಪ್ರಮಾದಗಳಾಗಬಹುದು, ಆದರೂ ನಿನ್ನ ಪ್ರೇಮ"....

"ಅಚಲವಾಗಿರುವದು...."

"ನೀನು ಇಷ್ಟು ಒಳ್ಳೆಯವ; ನಿನ್ನಲ್ಲಿ ಇಷ್ಟು ನಯ-ವಿನಯ.... ಗೌರೀ ನೀನು ಆ-ಆ ಚಂದ್ರನಂತೆ !"

"ಆ ಚಂದ್ರನಿಗೆ ಬೆಳಕು ಸೂರ್ಯನದು !" ಎಂದು ನಾನವನೆಡೆಗೆ ನೋಡಿದೆ....

"ನನ್ನ ಮುಖವನ್ನು ಮೃದುವಾಗಿ ತನ್ನೆಡೆಗೆ ಎಳೆದು, ಗಲ್ಲದ ಮೇಲೆ ಮುದ್ದಿಟ್ಟ ಶ್ರೀಕಾಂತ.

"ಗೌರೀ, ಇದು ನಮ್ಮ ವ್ರತ : ನಮ್ಮ ಈ ಪ್ರೀತಿಯು ಪವಿತ್ರವಾಗಿ, ಉದಾತ್ತವಾಗಿ, ಉಜ್ವಲವಾಗಿ–ದೇವರ ಮುಂದಿನ ನಂದಾದೀಪದಂತೆ–ಸದೈವ ಬೆಳಗುವಂತೆ ನಾವು ನೋಡಿಕೊಳ್ಳುವ ವ್ರತವನ್ನು ಕೈಕೊಳ್ಳೋಣ.... ಏನೇ ಆದರೂ, ಎಂಥ ಅಡ್ಡಿ ಬಂದರೂ ಈ ನಲ್ಮೆ–ಈ ಬಂಧನ ಅನಂತವಾಗಿರಲ್ಲಿ...."

"ಹೌದು....ಇದ್ದೇ ಇರುವದು.... ಖಂಡಿತ...."

ಆನಂದದ ಪರಮಾವಧಿ, ಸಹಿಸಲಾಗದ ಹರ್ಷ ! ತುಟಿಗೆ ತುಟಿ ಮುಟ್ಟಿದವು: ಎರಡು ಆತ್ಮಗಳ ಸಂಯೋಗದ ಪ್ರತೀಕವೆಂದು.

ಮನೆಗೆ ಮರಳಿದಾಗ ಒಂದು ಗಂಟೆ.

ಆ ರಾತ್ರಿಯು ನಮ್ಮೀರ್ವರ ಅಪ್ಪುಗೆಯಲ್ಲಿ ಉಷೆಯನ್ನು ಸಂದರ್ಶಿಸಿತು.

* * *

ಮೊನ್ನೆ ಮೊನ್ನೆಯ ತನಕ ಶ್ರೀಕಾಂತನ ಬಗ್ಗೆ ಸತ್ಯೇಂದ್ರನ ಆರೋಪವೊಂದಿತ್ತು. ಶ್ರೀಕಾಂತನಲ್ಲಿ ಅನೈಸರ್ಗಿಕ ಸಮಲೈಂಗಿಕತೆ [illegible] ಎಂದು. ಎಷ್ಟೋ ದೊಡ್ಡ ದೊಡ್ಡ ಲೇಖಕರಲ್ಲಿ ಕಲಾವಂತರಲ್ಲಿ ಇದ್ದಂತೆ....

"ಗೌರೀ, ನಿನ್ನಲ್ಲಿಲ್ಲ ಅದು–ಆ ಅನೈಸರ್ಗಿಕತೆ.... ನಿನ್ನಲ್ಲಿ ಅದಿಲ್ಲವೆನ್ನುವದಕ್ಕೆ ಸಾಕಷ್ಟು ಪುರಾವೆಗಳನ್ನು ಕೊಟ್ಟಿರುವಿ.... ಕಾಮಿನಿ....ಡೊಲಿ....ಮತ್ತಿನ್ನಾರೋ? .... ಆದರೆ ಶ್ರೀಕಾಂತನಲ್ಲಿ ಮಾತ್ರ–" ಸತ್ಯೇಂದ್ರ ಹೇಳುತ್ತಿದ್ದ.

"ಶ್ರೀಕಾಂತನಿಗೆ 'ಪುರಾವೆ' ತೋರಿಸಲು ಅವಕಾಶ ಸಿಗುವ ಮೊದಲೇ ಅವನಿಗೆ ಟಿ.ಬಿ. ಯಾಗಲಿಲ್ಲವೇನು?" ನಾನೆಂದೆ.

"ಆದರೂ ನನಗೆ ಸಂಶಯ...."

ಅವನು ಹಾಗೆಂದಾಗ ನಾನು ಸಿಟ್ಟಿನಿಂದ ಉರಿದುಬೀಳುತ್ತಿದ್ದೆ : "ನಿನಗೇನು ಗೊತ್ತು? ನೀನೆಂದೂ ಅವನ ಜತೆಗೆ ಮಲಗಿಲ್ಲ–ಮಲಗಿದವನು ನಾನು.... ನನಗೆ ಗೊತ್ತು....ಸುಮ್ಮನಿರು...."

ಶ್ರೀಕಾಂತನ ಮರಣದ ನಂತರವೇ ಸತ್ಯೇಂದ್ರನ ಭ್ರಮೆ ನಿರಸನವಾಯಿತು....

* * *

ನಾನು ಮುಂಬಯಿಗೆ ಬಂದ ನಂತರ ನನಗೆ ಬರೆದ ಮೊದಲನೆಯ ಪತ್ರದಲ್ಲಿ ಶ್ರೀಕಾಂತ ನಮ್ಮ ಗೆಳೆತನದ ವಿಶ್ಲೇಷಣೆ ಸ್ವಲ್ಪ ಮಾಡಿರುವ :

"ಗೌರೀ, ನನಗೂ ನಿನಗೂ ಅಂಟಿದ ನಂಟಿನ ಪ್ರಾರಂಭ ಹೇಗಾಯಿತು? (ಕೊನೆ ಬಲ್ಲವರಾರು? – ನಾನು ಬಲ್ಲೆ).... ನಿನ್ನ ಮುಗ್ಧತೆ, ನಿನ್ನ ನಯ–ವಿನಯ, ನಿನ್ನ ಶಿಶು–ಸರಳತೆ ಇವೇ ಮೊದಲಾದ ಗುಣಗಳು ಮೊದಲಿಗೆ

ನನ್ನನ್ನು ಆಕರ್ಷಿಸಿರಬೇಕು.... ನಿನ್ನ ಸಹವಾಸದಲ್ಲಿ ಯಾವಾಗಲೂ ಮೃದು ಭಾವನೆಗಳಿಗೇಸ್ಥಾನ....ಹಾಗೆ ನೋಡಿದರೆ ನಿನ್ನಲ್ಲಿ (ಕ್ಷಮಿಸಬೇಕು) ಕೆಲವು ಸ್ತ್ರೀ–ಗುಣಗಳಿವೆ....ನನ್ನನ್ನು ಸಂಪೂರ್ಣವಾಗಿ ಅರಿತು ಕೊಂಡವರಲ್ಲಿ ನೀನೇ ಮೊದಲಿಗ. ನಿನ್ನೆದುರಿಗೆ ನಾನು ನನ್ನ ಹೃದಯವನ್ನೇ ಬಿಚ್ಚಿಡ ಬಲ್ಲೆ. ನಿನ್ನ ಮನಸ್ಸಿನಲ್ಲಿ ಪಾರದರ್ಶಕ ಮೀನಿನಂತೆ ಹಾಯಾಗಿ ಸರಾಗವಾಗಿ ಚಲಿಸಬಲ್ಲೆ!.... ಆದುದರಿಂದಲೇ, ಬೊಟಿಸೆಲಿಯ ವ್ಹೀನಸ್ಸಿನಂತೆ, ನಮ್ಮ ನಲ್ಮೆ ಒಮ್ಮೆಲೆ ಕೈ – ಕಾಲುಯುಕ್ತವಾಗಿ ಬೆಳೆದು ನಿಂತಿತು....

....ನಮ್ಮ ಸಾರಸ್ವತರಲ್ಲಿ ಗೆಳತಿಯರಿಗೇನು ಕಡಿಮೆ? ನನಗೆ ಎಷ್ಟೋ ಗೆಳತಿಯರಿದ್ದರು. ಆದರೆ ಪುರುಷಸಹಜ ಲೈಂಗಿಕ ಭಾವನೆಯನ್ನು ಬಿಟ್ಟು ಅದಕ್ಕಿಂತ ಹೆಚ್ಚಿನ 'ಆತ್ಮೀಯ' ಭಾವನೆ ನನ್ನಲ್ಲುಂಟಾಗಿರಲಿಲ್ಲ. ಬುದ್ಧಿಯ ಮೆಟ್ಟಲನ್ನು ಹತ್ತುವವರಲ್ಲ ಅವರು? ಅವರದು ಬರಿಯ ಪಾರಿವಾಳ ಜೀವನ.... ! ಪಾರಿವಾಳ – ಜೀವನದ ಬಯಕೆ ಈಡೇರದಿದ್ದರೆ ಪಾತರಗಿತ್ತಿ ಜೀವನ.... ! ನಿನ್ನಲ್ಲಿ ನನ್ನ ಮಾನಸಿಕ ಹಂಬಲುಗಳಿಗೆ ಒಂದು ಸುಂದರ ಕೇಂದ್ರ ದೊರಕಿತು. ಕೆಲವರಿಗೆ ನನ್ನ ನಿನ್ನ ನಂಟು ಅನೈಸರ್ಗಿಕವಾಗಿ ತೋರಬಹುದು.... ಆದರೆ ಅವರ ಸಂಶಯದಲ್ಲಿ ಎಳ್ಳಷ್ಟೂ ತಥ್ಯವಿಲ್ಲವೆನ್ನುವದು ನನಗೂ ಗೊತ್ತು, ನಿನಗೂ ಗೊತ್ತು.

ನಿನ್ನ ಮುಗ್ಧತೆ, ನಿನ್ನ ಸಲೀಲವಾದ ಆತ್ಮದಾದ ನನ್ನನ್ನು ಮೊದಲು ಆಕರ್ಷಿಸಿದರೂ ಅನಂತರ ಆ ಆಕರ್ಷಣೆ ನಲ್ಮೆಯಲ್ಲಿ ರೂಪಾಂತರ ಹೊಂದಿದ್ದು ನಿನ್ನ ಬುದ್ಧಿಯ ತೀಕ್ಷಣತೆಯಿಂದ, ನಿನ್ನ ಆಳವಾದ ತಿಳುವಳಿಕೆಯಿಂದ, ನಿನ್ನ ಆತ್ಮದ ಸುಸಂಸ್ಕೃತಿಯಿಂದ...."

* * *

ಶ್ರೀಕಾಂತನ ಪತ್ರಗಳ ಕಟ್ಟು, ಅವನ ದಿನಚರಿ ಇಲ್ಲಿ ನನ್ನ ಹತ್ತಿರ ಮೇಜಿನ ಮೇಲೆ ಬಿದ್ದಿವೆ.

ರಾತ್ರಿ ಸರ್ಪದಂತೆ ಸರಿಯುತ್ತಿದೆ.

ಶ್ರೀಕಾಂತನ ಸ್ಪರ್ಶಜನಿತ ಈ ವಸ್ತುಗಳ ಮೇಲೆ ನಾನು ಕೈಯಾಡಿಸುವೆ....

ಶ್ರೀಕಾಂತನ ನಿಜಸ್ಪರ್ಶಕ್ಕಾಗಿ ಕಾತರಿಸುವೆ....

–ಹೃದಯ ಮಳೆಗಾಲದ ಮೋಡದಂತೆ ಭಾರವಾಗುತ್ತಿದೆ–

'ಶ್ರೀಕಾಂತ !'–

ನಾನಿನ್ನು ಬರೆಯನಾರೆ....

* * *

ಮೊನ್ನೆ ರಾತ್ರಿಯಿಂದ ಇಂದಿನ ತನಕ ನಾನು ಏನೂ ಬರೆದಿಲ್ಲ. ಮೊನ್ನೆ ರಾತ್ರಿ ಕಂಬನಿಯಿಂದ ಉರಿಯುತ್ತಿದ್ದ ತಲೆಯನ್ನು ಮೇಜಿನ ಮೇಲಿಟ್ಟು ಎಷ್ಟೋ ಹೊತ್ತು ಕುಳಿತೆ...ನನ್ನ ಲ್ಯಾಂಡಲೇಡಿಯು ಕದ ಬಡೆದು, "ಲೈಟನ್ನಿಟ್ಟು ಮಲಗಬೇಡಿ," ಎಂದು ಎಚ್ಚರಿಸಿ ಹೋದಾಗಲೇ ಎಚ್ಚರ.... ಆನಂತರ ಕತ್ತಲೆಯ ಮಗ್ಗುಲಲ್ಲಿ ಹೊರಳಾಡುತ್ತ ಮಲಗಿದೆ.

ನಿನ್ನೆ ಬೇಕೆಂತಲೇ ಪೋರ್ಟಿನಲ್ಲಿ ತಿರುಗಾಡಿದೆ....ಜನಜಂಗುಳಿ, ನೂರಾರು ಮುಖಗಳು : ನೂರಾರು ಜೀವನ-ಕೇಂದ್ರಗಳು. ಈ ಗದ್ದಲ : ಅವಿಚ್ಛಿನ್ನ ತಡೆಯಿಲ್ಲದ ಗದ್ದಲ. ಇಂಥ ಗೊಂದಲದಲ್ಲಿ ಜೀವನದ 'ಅರ್ಥ,' ಬಿಳಿಯ ಮೋಡದಂತೆ, ಹಂಚಿ, ಹರಿದು ಬಯಲಾಗುವದು ! ಅಥವಾ ಯಾರಿಗೆ ಗೊತ್ತು – ಜೀವನದ ನಿಜ ಅರ್ಥ ಈ ಗದ್ದಲದ ಮಥನದೊಳಗಿಂದಲೇ ಕಾಲಕೂಟದಂತೆ ಹೊರಹೊಮ್ಮಬಹುದು.... ಜೀವನವೆಂದರೆ ತಡೆಯಿಲ್ಲದ ಓಡಾಟ – ಸಣ್ಣಪುಟ್ಟ ಉದ್ದೇಶಗಳನ್ನು ಕಲ್ಪಿಸಿಕೊಂಡು ಅವುಗಳನ್ನು ನೆರವೇರಿಸುತ್ತ ಅವಿರತವಾಗಿ ಓಡಾಡುವದು....

ನಾನೂ ಒಂದು ಉದ್ದೇಶವನ್ನು ಕಲ್ಪಿಸತೊಡಗಿದೆ –

ಡಾಲಿಯನ್ನು ಭೆಟ್ಟಿಯಾಗಲು ಮಹೇಂದ್ರ ಮತ್ತು ಕಂಪನಿಯ ಆಫೀಸಿಗೆ ಹೋಗಬೇಕೆಂದೆನಿಸಿತು.... ಸುಮ್ಮನೆ ಅವಳ ಟೈಪಿಂಗದ ಕೆಲಸದಲ್ಲಿ ವ್ಯತ್ಯಯವೇಕೆ ತರಬೇಕು, ಹಾಗೂ ನನ್ನ ಇಂಥ ಕುಂದಿದ ಮನಸ್ಥಿತಿಯನ್ನ ಅವಳೆದುರಿಗೆ ಒಯ್ದು ಮುಖ ಗಂಟು ಹಾಕಿ ಯಾಕೆ ನಿಲ್ಲಬೇಕು? – ಎಂದು ನಾನು ಇನ್ನಿಷ್ಟು ಅಲೆದಾಡಿದೆ.... ಅಷ್ಟರಲ್ಲಿ ನನ್ನ ಪಾರ್ಸೀ ಗೆಳೆಯ ನಾಯಗಾಮವಾಲಾ ಭೆಟ್ಟಿಯಾಗಬೇಕೇ? ಅವನ ಆ ಬಾಲ-ಹುರುಪು, ಆಟದ ವಿಪರೀತ ಹುಚ್ಚು, ಚಹ-ಸಿಗರೇಟುಗಳ ತೀಟೆ ಒಂದೆರಡು ತಾಸು ನನ್ನ ಮನರಂಜನೆ ಮಾಡಿದವು. ಮೂರನೆಯ ಸಲ ಚಹ, ಸಿಗರೇಟುಗಳಾದ ನಂತರ ಸಿನೇಮ ನೋಡಲು ಆಗ್ರಹಪಡಿಸತೊಡಗಿದ.

" 'On an Island with You' – ವಂಡರಫುಲ್ ಸಿನೇಮ ! ಎಸ್ಥರ್ ವಿಲಿಯಮ್ಸ ಇದ್ದಾಳೆ. ಏನು ಹೇಳಲಿ ಅವಳ ಈಸು-ದೃಶ್ಯಗಳ ಸೌಂದರ್ಯ– ವಾಹ್, ಅವಳ ಫಾರ್ಮು.... ಈ ಸಿನೇಮವನ್ನು ತಪ್ಪಿಸುವದೆಂದರೆ ತೀರ ಹುಚ್ಚುತನ.... ನನಗಂತೂ ಕಂಪನಿ ಬೇಕು : ನಾನು ತಿಕೀಟ ತೆಗೆಯುವ ನಡೆ...."

"ಈಗ ಸಿನೇಮ-ಗಿನೇಮ ನೋಡುವ ಮನಸ್ಥಿತಿಯಲ್ಲಿಲ್ಲ ನಾನು.... ನಾನು ಬೇಗ ಮನೆಗೆ ಹೋಗಬೇಕು," ನಾನೆಂದೆ.

"ಮನೆಗೆ ಹೋಗಿ, ಏನು ಮಾಲಿಶ್ ಮಾಡುವಿಯೇನು?"

"ನಾನು ಏನಾದರೂ ಬರೆಯುತ್ತಿರುವೆ-ಕನ್ನಡದಲ್ಲಿ."

"ಏನು? ಸಣ್ಣ ಕತೆಗಳಿದ್ದರೆ ಇಂಗ್ಲೀಷಿನಲ್ಲಿ ಬರೆ. 'ಕೆರವ್ಹಾನ' ಕ್ಕೆ ಕಳಿಸುವ. ನನ್ನ ಗುರುತಿನವರು ಒಂದಿಬ್ಬರಿದ್ದಾರೆ ಆ ಸ್ಟಾಫಿನಲ್ಲಿ...."

"ಥ್ಯಾಂಕ್ಸ...."

ಈ ಗೆಳೆಯರಿದ್ದಾರೆ....ಹೌದು, ! ಆದರೆ.... ಹೆಸರಿಗೆ ಮಾತ್ರ !

ಗೆಳೆತನದ ಔನ್ನತ್ಯವನ್ನನುಭವಿಸಿದನಂತರ, ಉಳಿದವರಿಗೆ 'ಗೆಳೆಯ' ಎಂಬ ಪದವನ್ನು ಹಚ್ಚಲು ಕೂಡ ಮನ ಹಿಂಜರಿಯುವುದು, ಹೇಸುವುದು. ಎಲ್ಲ ಭಾವನೆಗಳ ರೀತಿಯೇ ಹಾಗೆ ! ಒಮ್ಮೆ ಒಂದು ಭಾವನೆಯ ಶಿಖರಕ್ಕೆ ಏರಿದನಂತರ, ಆ ಭಾವನೆಗೆ ಸಂಬಂಧಿಸಿದ ಉಳಿದ ಅನುಭವಗಳು ಅರ್ಥ ಹೀನವಾಗಿ ತೋರುವವು.... ಯೋಗಿಗೆ ಒಮ್ಮೆ ಸಚ್ಚಿದಾನಂದದ ಅನುಭವ ದೊರೆತಿತೆಂದರೆ, ಜಗದ ಉಳಿದ 'ಆನಂದ'ಗಳು ನಿರ್ಜೀವವಾಗಿ ತೋರುವವು. ಆದುದರಿಂದಲೇ ಯೋಗಿಯು ಹರ್ಷದಿಂದ ಜಗತ್ತನ್ನು ನಿರಾಕರಿಸಬಲ್ಲ....ಅಲ್ಲವೇ?

ನಾಯಗಾಮವಾಲಾನನ್ನು ಬೀಳ್ಕೊಟ್ಟು ನನ್ನ ಖೋಲಿಯತ್ತ ಬರುವಾಗ.... ಬಾಂದ್ರಾ ಸ್ಟೇಶನ್ನಿನ ಮೇಲೆ ಡಾಲಿ ಭೆಟ್ಟಿಯಾದಳು.

"ಹಲೋ, ಗೋರಿ ! ನಿನ್ನನ್ನು ಭೆಟ್ಟಿಯಾಗಿ ಒಂದು ಯುಗವಾಯಿತು. ನಿನ್ನ ಆಫ್ರಿಕೆಯ ಗುಂಗಿನಲ್ಲಿ ಎಲ್ಲರನ್ನೂ ಮರೆಯುವಂತೆ ಕಾಣುತ್ತದೆ.... ಈಗ ಎರಡು ಮೂರು ದಿನಗಳಿಂದ ನಿನ್ನ ಪತ್ತೆಯಿಲ್ಲ.... ನೀನು ಬರಬರುತ್ತ ಬಹಳ ಬಹಳ ಕೆಟ್ಟ ಕೆಟ್ಟ ಹುಡುಗನಾಗುತ್ತಿರುವೆ.... ಇಂದು ನಿನ್ನನ್ನು ಬಿಡುವುದೇ ಇಲ್ಲ. ನನಗೆ ದಣಿವಾಗಿದೆ. ಚಹಾ ಕುಡಿದು ಸಮುದ್ರದ ದಂಡೆಯತ್ತ ತಿರುಗಾಡಲು ಹೋಗೋಣ...."

ಅವಳ 'ಬಾಲ-ಅಧಿಕ-ಸ್ತ್ರೀ'-ಅಗ್ರಹದ ಮುಂದೆ 'ಅಪೀಲೇ' ಇಲ್ಲ ! ಮೇಲಾಗಿ....

ಪ್ರತಿ ಗಾಳಿಗೆ ಹಾರಾಡುವ ಪಕ್ಕ ನಾನು !

ನಾವಿಬ್ಬರೂ 'ಸಿ' ಬಸ್ಸು ಹತ್ತಿ ಪಾಲಿ ಹಿಲ್ಸಿಗೆ ಹೋದೆವು. ಹಾಳು ಹರಟೆ ಕೊಚ್ಚುತ್ತ, ಕೈಯಲ್ಲಿ ಕೈ ಸೇರಿಸಿ ಸಮುದ್ರದ ದಂಡೆಯ ಗುಂಟ ತಿರುಗಾಡಿದೆವು.

"ಆಫ್ರಿಕೆಗೆ ಹೋದ ಮೇಲೆ ಒಂದು ನಿಗ್ರೋ ಹುಡುಗಿಯನ್ನು ಲಗ್ನವಾಗು!" ಅವಳ ವಿನೋದ.

"ಯಾಕೆ?" ನನ್ನ ಪ್ರಶ್ನೆ

"ಅಂತರಾಷ್ಟ್ರೀಯ ಸಂಬಂಧ ಬೆಳೆಯಬೇಕು – ನೆಹರೂ ಹೇಳುವುದಿಲ್ಲವೇ?"

"ಹೌದು. ಹಾಗೆಯೇ ಮಾಡುವ.... ಡಾ ಕೋಟನೀಸ ಚೈನೀಜ ಹುಡುಗಿಯನ್ನು ಲಗ್ನವಾಗಿ ಅಮರನಾದ. ನಾನು ನೀಗ್ರೋ ಹುಡುಗಿಯನ್ನು ಲಗ್ನವಾಗಿ "ಅಮರನಾಗುವೆ....

"ಆದರೆ ಅಮರನಾಗಲು ಮೊದಲು ಸಾಯಬೇಕಾಗುವುದು!"

"(ನೀಗ್ರೋ ಹುಡುಗಿಯೊಡನೆ) ಲಗ್ನವೆಂದರೆ ಸಾವೇ ಅಲ್ಲವೇ?"

ಇಬ್ಬರೂ ನಕ್ಕೆವು.... ಇಂಥವೇ ಮಾತುಕತೆಗಳಲ್ಲಿ ಎರಡು ತಾಸುಗಳುರುಳಿದವು.

"ಇಂದು ನೀನು ನನ್ನ ರೂಮಿಗೆ ಬರಬೇಕು ಊಟಕ್ಕೆ," ನಾನು ಆಗ್ರಹಮಾಡಿದೆ.

"ಏನು ಡಬ್ಬಿಯಲ್ಲಿಯ ಶಾಕಾಹಾರ ತಿನ್ನಲಿಕ್ಕೆ?"

"ನಿನಗೆ ಮಾಂಸಾಹಾರ ಬೇಕಾದರೆ.... ನಾನಿಲ್ಲವೇ, ನನ್ನ ಮಾಂಸವಿಲ್ಲವೆ?"

ಡಾಲಿಯ ನಗೆಯ ತೆರೆ ನನ್ನ ತುಟಿಗಳ ಸುತ್ತಮುತ್ತ ನೊರೆಯಾಡಿತು.

ನಾನು ನನ್ನ ಕೋಣೆಯನ್ನು ಮುಟ್ಟಿದಾಗ ರಾತ್ರಿ ೯ ಗಂಟೆಯಾಗಿತ್ತು. ಬಾಗಿಲಲ್ಲಿ ಊಟದ ಡಬ್ಬಿ ಹಾದಿ ಕಾಯುತ್ತಿತ್ತು.

ಡಾಲಿ ಊಟವನ್ನು ಬಹಳ ರುಚಿಯಿಂದ ಮಾಡಿದಳೂ. ಅವಳ ಉತ್ಸಾಹ-ವಿನೋದಗಳಿಂದ ಉತ್ತೇಜಿತನಾದ ನಾನು ಎಂದಿನಕ್ಕಿಂತ ಹೆಚ್ಚು ಉಂಡೆ....

"ನನ್ನನ್ನು ೧೨/೧ ಗಂಟೆಗೆ ಮನೆಗೆ ಮುಟ್ಟಿಸಬೇಕು, ಗೋರೀ."

"ಇಂದು ಯಾವ ಸಿನೇಮಾಕ್ಕೆ ಹೋಗಲಿರುವಿ?"

"On an Island with You" ಎಂದವಳೆ ನಗುತ್ತ ನನ್ನ ಹಾಸಿಗೆಯ ಮೇಲೆ ಉರುಳಿದಳು. "ನನ್ನನ್ನು ಮನೆಗೆ ಮುಟ್ಟಿಸುವಾಗ ಮತ್ತೊಮ್ಮೆ ನೆನಪುಮಾಡು – ಸಿನೇಮದ ಹೆಸರನ್ನು ! – ತಾಯಿಯ ಸಮಾಧಾನಕ್ಕೆ ಸಿನೇಮದ ನೆವ ಹೇಳಬೇಕಾಗುವುದು.... ಹಾಹಾಹಾ – ಎಷ್ಟು ಯೋಗ್ಯವಾದ ಹೆಸರು – On Island with You ! ಯಾವ ದ್ವೀಪಕ್ಕೆ ಹೋಗೋಣ?"

"ದೀಪವಿಲ್ಲದ ದ್ವೀಪಕ್ಕೆ" ಎಂದು ನಕ್ಕು, ಲೈಟನ್ನಾರಿಸಿದೆ.

ಕೆಲವು ನಿಮಿಷಗಳ ನಂತರ ಕಿಟಕಿಯ ಹೊರಗಿನ ಮುಂಬಯಿಯ ಎಂದೂಬಾಡದ ಪ್ರಕಾಶದ ಕೋಮನ ಪ್ರತಿಧ್ವನಿ ಕೋಣೆಯಲ್ಲಿ ಪಿಸುಗುಡಲು ಪ್ರಾರಂಭವಾಯಿತು.

ನಮ್ಮ ಲೈಂಗಿಕ ಸಂಬಂಧದಲ್ಲಿ ಕಾಮೋತ್ಕಟತೆ ಇಲ್ಲ, ಭಾವೋದ್ವೇಗವಿಲ್ಲ – ನಮ್ಮ ಸಹವಾಸದ ವಿಕಾಸ–ವಿಸ್ತಾರ ಮಾತ್ರ.

ಅವಳು ಕೊಡುವ ಆನಂದದಲ್ಲಿ –– ಶಾಂತ ತಟಸ್ಥತೆ ಇದೆ; ವಿಲಕ್ಷಣವಾದ ಮಾತೃತ್ವವಿದೆ !

ಈ ಮಾತೃತ್ವದ ಗುಣವೇ ನನ್ನನ್ನು ಅವಳೆಡೆಗೆ ಆಕರ್ಷಿಸಿತಲ್ಲವೇ?

* * *

ನನ್ನ ಈ ಇತಿಹಾಸದಲ್ಲಿ ಭೂತ ಮತ್ತು ವರ್ತಮಾನಕಾಲಗಳು, ಸಮುದ್ರದ ತೆರೆಗಳಂತೆ, ಒಂದರೊಳಗೊಂದು ಬೆರೆಯುತ್ತ ಸಾಗಿವೆ....

ಕಾಲನದಿಯು ಒಮ್ಮೆ ಹರಿದಿದೆ–ಈಗಲೂ ಹರಿಯುತ್ತಿದೆ. ಆದರೆ ಎಲ್ಲಿ ಬೇಕಾದಲ್ಲಿ ಬೊಗಸಿಯೊಡ್ಡಿ ನೀರು ಕುಡಿಯುವ ಸ್ವಾತಂತ್ರ್ಯ ಮನಸ್ಸಿಗಿದೆಯಷ್ಟೆ !

* * *

ಸದ್ಯಕ್ಕೆ ಡಾಲಿಯ ವಿಷಯ ನನ್ನ ತಲೆಯಲ್ಲಿ (ನನ್ನ ಅಂಗಾಂಗಗಳಲ್ಲಿ ಕೂಡ) ತುಂಬಿದೆ.

ಇಂಥ ವ್ಯಕ್ತಿಯನ್ನು ಮುಂಬಯಿಯಲ್ಲಲ್ಲದೆ ಮತ್ತೆಲ್ಲಿ ಸಂಧಿಸುವದು ಶಕ್ಯ?.... ಇಂಥ ಸಂಬಂಧ ಮುಂಬಯಿಯಲ್ಲಲ್ಲದೆ ಮತ್ತೆಲ್ಲಿಯೂ ಇಷ್ಟು ಸರಾಗವಾಗಿಯೂ, ನಿರಾಗಸವಾಗಿಯೂ, ತಿಳಿಯಾಗಿಯೂ ಸಾಗುವದು ಶಕ್ಯವಿಲ್ಲ.... ಸಣ್ಣ ಊರುಗಳಲ್ಲಿ ನಮ್ಮ ಸಂಬಂಧದ ವಿಷಯ ಜನರ ಹರಕು ಬಾಯಲ್ಲಿ ಸಿಕ್ಕು ಹೊಲಸಾಗಬಹುದಿತ್ತು....

ಡಾಲಿಯ ಗುರುತು ಆದದ್ದು 'ಮಹೇಂದ್ರ ಮತ್ತು ಕಂಪನಿ'ಯ ಆಫೀಸಿನಲ್ಲಿ. ನನ್ನ ಎಮ್.ಎಸ್‌ಸಿ. ಪರೀಕ್ಷೆಯಲ್ಲಿ ನಾನು ಎಣಿಸಿದಂತೆ ಥರ್ಡ್‌ಕ್ಲಾಸು ಬಂದನಂತರ, ಎಲ್ಲಿಯಾದರೂ ಕ್ಲರ್ಕನ ನೌಕರಿಯನ್ನಾದರೂ ಹಿಡಿಯುವದು ಅವಶ್ಯವಾಯಿತು.... ನನ್ನ ಮೇಲಿನ ತಂದೆಯವರ ಸಿಟ್ಟು ದ್ವಿಗುಣಿತವಾದ್ದರಿಂದ, ಅವರ ಸಹಾಯದಿಂದ ಸಂಪೂರ್ಣವಾಗಿ ಮುಕ್ತನಾಗ ಬೇಕಾಗಿತ್ತು.... ಸತ್ಯೇಂದ್ರನ ಸಹಾಯದಿಂದ 'ಮಹೇಂದ್ರ ಮತ್ತು ಕಂಪನಿ'ಯಲ್ಲಿ ಸೇಲ್ಸ್ ಆರ್ಗನ್ಯಾಜರನ ನೌಕರಿ ದೊರೆಯಿತು....

ಸಹಾನುಭೂತಿಯ ಅಕ್ಷಯ ಕಲಶಗಳಾದ ಡಾಲಿಯ ಕಣ್ಣುಗಳು ನನ್ನ ಜೀವನದಲ್ಲಿ ಅವತರಿಸಿದ್ದು ಅಲ್ಲಿಯೇ ! ಆ ಆಫೀಸಿನ ಟಾಯಪಿಸ್ಟ ಮತ್ತು ರಿಸೆಪ್ಷನಿಸ್ಟ ಅವಳೇ ಆಗಿದ್ದರಿಂದ, ಅವಳ ಸಹವಾಸ ಅನಾಯಾಸವಾಗಿಯೇ ನನ್ನ ಪಾಲಿಗೆ ಬಂತು. ಸಹವಾಸದಿಂದ ಸಂಬಂಧ.... !

ಮನುಷ್ಯರ ಸಂಬಂಧ ಬೆಳವಣಿಗೆ ಗರ್ಭದಲ್ಲಿಯ ಕೂಸಿನ

ಬೆಳವಣಿಗೆಯಂತೆಯೇ ಗೂಢವಾದುದು.

ನನ್ನಲ್ಲಿ ಅವಳು ಏನೇನನ್ನು ಮೆಚ್ಚಿದಳೋ ಅವಳಿಗೇ ಗೊತ್ತು ! ನನ್ನ (ಶ್ರೀಕಾಂತನು ಹೇಳಿದ) ನಯ-ವಿನಯಗಳನ್ನೋ? ಲಜ್ಜಾಶೀಲತೆಯನ್ನೊ? 'ಪರ್ಸನ್ಯಾಲಿಟಿ'ಯನ್ನೋ? ಅವಳು ಒಂದು ಸಲ ಹೇಳಿದಂತೆ, ನನ್ನಲ್ಲಿಯ ವಿಶಿಷ್ಟ ಭಿನ್ನತೆಯನ್ನೋ ("ನೀನು ಉಳಿದವರಿಗಿಂತ ತೀರ ಭಿನ್ನವಾಗಿರುವಿ, ಗೊತ್ತೇ, ಗೋರೀ?)"

ಅವಳ ವೈಶಿಷ್ಟ್ಯವೆಂದರೆ ಯಾವಾಗಲೂ ನಗುಮುಖ. ನಿಜವಾಗಿ ನೋಡಿದರೆ. ಅವಳಲ್ಲಿ ಸೌಂದರ್ಯ ಕಡಿಮೆಯೆಂದೇ ಹೇಳಬೇಕು. ಅವಳ ಸಾದಗಪ್ಪಾ ಕೃಶ ದೇಹದಲ್ಲಿ ತರುಣರ ತಲೆ ತಿರುಗಿಸುವ ಮಾದಕತೆಯೂ ಇಲ್ಲ.... ಹಾಂ, ಅವಳು ಹೆಚ್ಚು ಕಡಿಮೆ ಜ್ಯೂನ್ ಆ್ಯಲಿಸನ್ನಳಂತೆ ತೋರುವಳೆಂಬುದರಲ್ಲಿ ಸಂಶಯವಿಲ್ಲ.... ಅವಳ ಉಕ್ಕುವ ಉತ್ಸಾಹ ಹಾಗೂ ವಿನೋದೀ ವೃತ್ತಿಯ ಮೂಲಕ ಅವಳಿಗೆ ಸಾಕಷ್ಟು ಗೆಳೆಯ-ಗೆಳತಿಯರಿದ್ದರು. ಅವರಲ್ಲಿ ಅವಳ ಧರ್ಮದವರೇ ಅಂದರೆ ಕ್ರಿಶ್ಚನರೇ ಹೆಚ್ಚು !

ಅವಳ ತಂದೆ ಅವಳು ಸಣ್ಣವಳಿರುವಾಗಲೇ ತೀರಿಕೊಂಡಿದ್ದರಿಂದ, ಅವಳು ಮ್ಯಾಟ್ರಿಕ್ ಪಾಸಾದೊಡನೆ ಮನೆಯ ಭಾರವನ್ನು ಹೊರಬೇಕಾಯಿತಂತೆ. ಆದುದರಿಂದ ಟೈಪಿಂಗ್, ಸ್ಟೆನೋಗ್ರಾಫಿ ಕೋರ್ಸ್‌ಗಳನ್ನು ಮಾಡಿ ಮುಗಿಸಿ, 'ಮಹೇಂದ್ರ ಮತ್ತು ಕಂಪನಿ'ಯಲ್ಲಿ ಕೆಲಸ ಮಾಡತೊಡಗಿದಳು. ಅವಳ ಮನೆಯಲ್ಲಿ ಅವಳ ತಾಯಿ ಮತ್ತು ಹಾಯಸ್ಕೂಲಿಗೆ ಹೋಗುವ ಸಣ್ಣ ತಮ್ಮ.... ಮದುವೆಯ ವಿಷಯವನ್ನಂತು ತನ್ನ ಜೀವನದಿಂದ ದೂರ ಸರಿಸಿ ಇಟ್ಟಿದ್ದಾಳೆ ಅವಳು. ಮೊದಲನೆಯ ಕಾರಣ-ಮನೆಯ ಭಾರ, ಎರಡನೆಯ ಕಾರಣ-ಅವಳ ಮಾತಿನಲ್ಲಿಯೇ ಹೇಳುವುದಾದರೆ : "ನನಗೆ ಸಾಕಷ್ಟು ಗೆಳೆಯರಿದ್ದಾರೆ. ಆದರೆ ಅವರಲ್ಲಿ ಒಬ್ಬರೂ ನನ್ನ ಮೇಲೆ ಪ್ರೇಮ ಮಾಡಿಲ್ಲ. ನನ್ನ ಹತ್ತಿರ ಉನ್ಮಾದ ಪ್ರಚೋದಿಸುವ ದೇಹಯಷ್ಟಿಯಿಲ್ಲ....ವ್ಹಾಯ್‌ಟಲ್ ಸ್ಟ್ಯಾಟಿಸ್ಟಿಕ್ಸ ಎಲ್ಲ ಕಡಿಮೆ ! .... ಈ ಗೆಳೆಯರಿಗೆ ನಾಲ್ಕು ಹರಟೆಯಾದರೆ ತೀರಿತು ! ಒಂದೆರಡು ಸಲ ಒಬ್ಬಿಬ್ಬರಿಗೆ 'ಹಸಿವೆ' ಹಿಂಗಿಸುವ ಮಟ್ಟಿಗೆ ನನ್ನ ಅವಶ್ಯಕತೆಯನಿಸಿತ್ತು.... ಒಮ್ಮೆ ಒಬ್ಬ ಗೆಳೆಯನ ಮೇಲೆ ನನಗೆ ಸ್ವಲ್ಪ ಮೋಹವಾಗಿತ್ತು.... ಆ ಮೋಹದ ರಭಸದಲ್ಲಿ ನಾನು ಅವನ ಎಲ್ಲ ಬಯಕೆಗಳನ್ನು ತೃಪ್ತಿ ಪಡಿಸಿದೆ.... ಆದರೆ 'ನನ್ನನ್ನು ಲಗ್ನವಾಗುವಿಯಾ?' ಎಂಬ ಪ್ರಶ್ನೆ ಅವನ ಬಾಯಿಂದ ಬರಲಿಲ್ಲ.... ಅಂದಿನಿಂದ ನಾನು ಆಜನ್ಮ ಕುಮಾರಿಯಾಗಿರುವ ಪಣವನ್ನೇತೊಟ್ಟಿರುವೆ...."

ಅವಳ ಮನೆಯೂ ಬಾಂದ್ರಾದಲ್ಲಿಯೆ – ಸೇಂಟ ಪೀಟರ್ಸ ಚರ್ಚಿನ ಹತ್ತಿರ. ಅಲ್ಲಿಂದ ಒಂದು ಮೈಲಿನ ಮೇಲೆ ನನ್ನ ಕೋಣೆ – ಖಾರ ರೊಡಿನ ಹತ್ತಿರ.... ಆದುದರಿಂದ ಎಷ್ಟೋ ಸಲ ಆಫೀಸಿಗೆ ಕೂಡಿ ಹೋಗುವದೂ ಆಫೀಸಿನಿಂದ ಕೂಡಿ ಬರುವದೂ ಶುರುವಾಯಿತು.... ಮುಂದೆ ಬರಬರುತ್ತ ಸಂಜೆಗೆ ತಿರುಗಾಡಲು ಹೋಗುವದೂ.... ಆನಂತರ....

ಇದೆಲ್ಲ ಎಂಟು – ಒಂಬತ್ತು ತಿಂಗಳ ಹಿಂದಿನ ಮಾತು ! ಆಗ ನನ್ನ ಮನಸ್ಸು ಬಹಳೇ ವಿಚಿತ್ರದೆಶೆಯಲ್ಲಿತ್ತು : ನನ್ನನ್ನು ಮನಬಂದಂತೆ ಹಳಿದುಕೊಳ್ಳುವದು ಒಂದು ಅಭ್ಯಾಸವಾಗಿತ್ತು ; ನಾನು ನಿಜವಾಗಿಯೂ ನಿರುಪಯೋಗಿ, ಹೇಡಿ ಕೈಲಾಗದವ, ಸ್ವಂತ ವಿಚಾರವಿಲ್ಲದವ, ನನ್ನ ಶಕ್ತಿಯ ಮೇಲೆ ಕಾಲೂರಿ ನಿಲ್ಲುವ ಶಕ್ತಿಯಿಲ್ಲದವ – ಎಂಬ ವಿಚಾರಗಳನ್ನು ನನ್ನ ಮೆದುಳನ್ನು ಸತತ ಮುತ್ತುತ್ತಿದ್ದವು...ಎಲ್ಲ ಕ್ಷೇತ್ರಗಳಲ್ಲಿ ಸೋಲೇ ನನ್ನ ಪಾಲಿಗೆ ಬಂದಿತ್ತು. ಭಾವಕ್ಷೇತ್ರದಲ್ಲಿಯಂತೂ ಸೋಲಿನ ಜೊತೆಗೆ ಹೃದಯದ ಸತ್ಯಾನಾಶವಾಗಿತ್ತು. ವೈಯಕ್ತಿಕ ಕಾರ್ಯಕ್ಷೇತ್ರದಲ್ಲಿ – ಪರೀಕ್ಷೆಯಲ್ಲಿ ಮೂರನೆಯ ವರ್ಗ ಬಂದು ಅಲ್ಲಿಯೂ ವಿಧಿಯ ಹೊಡೆತ ಬಿದ್ದಿತ್ತು. ಆ ಮೂರನೆಯ ವರ್ಗವೆಂದರೆ ನನ್ನ ಮನೋಶಕ್ತಿಯ ಅವನತಿಯ ಪ್ರತಿಕವೇ ಆಗಿತ್ತು.... ಶ್ರೀಕಾಂತನ ಆಸರೆಯೂ ತಪ್ಪಿತ್ತು. ಅವನು ತನ್ನದೇ ಆದ ಅತಿ ಪ್ರಜ್ಞೆಯ ಜಗತ್ತಿನಲ್ಲಿ, ಮರಣದ ಕರಿದಾದ, ಉದ್ದಾಗುತ್ತ ಸಾಗಿದ ಛಾಯೆಯಲ್ಲಿ, ಜೀವನಾನುಭವದ ಬಗ್ಗೆ ಇದ್ದ ಅತಿಯಾದ, ಎಲ್ಲೆ ಮೀರಿದ ಹುಚ್ಚು-ಹಂಬಲದ ಉರಿಯಲ್ಲಿ – ಮಗ್ನನಾಗಿ ಏಕಾಂಗಿಯಾಗಿ ನಡೆದಿದ್ದ ; ಜೀವನದ ನೈಸರ್ಗಿಕ ಮಾರ್ಗಕ್ಕೆ ಎರವಾಗಿದ್ದ .... ಮಹಾಪೂರ ಬಂದ ನದಿಯಲ್ಲಿ ಬೇರುಸಹಿತ ಕಿತ್ತು ಬಂದ ಗಿಡದಂತೆ, ನಾನು ಎತ್ತೆತ್ತಲೋ ಹರಿಯುತ್ತಿದ್ದೆ. ಎಷ್ಟೋ ಸಲ ಆತ್ಮಹತ್ಯೆಯ ವಿಚಾರ ಬಾವಿಯಲ್ಲಿಯ ಪಾತಾಳಗಡದಂತೆ ತಲೆಯಲ್ಲಿ ಅಸ್ಪಷ್ಟವಾಗಿ ಸುಳಿದಾಡುತ್ತಿತ್ತು ! .... ಇಂಥ ಹುಚ್ಚು ಗೊಂದಲದ ಮನಸ್ಥಿತಿಯಲ್ಲಿ ಎರಡು ವಿರುದ್ಧ ಭಾವನೆಗಳ ತೀಕ್ಷ್ಣ ತಾಕಲಾಟ ಸುರುವಾಗಿತ್ತು : ಒಂದು – ನನ್ನ ವಿರುದ್ಧ, ನನ್ನ ಹಳೆಯ ಮನೋಗಂಡದ ವಿರುದ್ಧ ಬಂಡು ಹೂಡಬೇಕು ನಾನು, ಅಂದರೆ ಅನುಪೇಕ್ಷಿತವಾದ, ಅಸಾಧಾರಣವಾದ ಯಾವುದಾದರೂ ಸಂಗತಿಯನ್ನು ಮಾಡಬೇಕು ನಾನು– ಎಂಬ ಸೇಡಿನ ಭಾವನೆ; ಇನ್ನೊಂದು–ಎಲ್ಲವನ್ನೂ ಮರೆಯಲು ತಾಯ ಎದೆ ಬೇಕು, ಸ್ತ್ರೀಯ ಸಹಾನುಭೂತಿ ಬೇಕು ಎಂಬ ಹಂಬಲ, ಕಾತರ.... ಈ ಎರಡೂ ಭಾವನೆಗಳಿಗೆ ಉತ್ತರರೂಪವಾಗಿ ಬಂದವಳು–ಡಾಲಿ ! ಅವಳ ಸಹವಾಸದಲ್ಲಿ

ಒಂದು ಬಗೆಯ ಅಸಾಧಾರಣ ನಾವೀನ್ಯದ ಅನುಭವ ನನಗುಂಟಾಯಿತು. ಅದರ ಜೊತೆಗೆ ನನ್ನ ಬೆಂದ ಹೃದಯಕ್ಕೆ ಬೇಕಾದ ಶುಷ್ರೂಷೆ ಅವಳಲ್ಲಿ ದೊರೆಯಿತು....

ನನ್ನ ಆಗಿನ ವಿಕ್ಷುಬ್ಧಸ್ಥಿತಿಯಲ್ಲಿ, ಅನಿವಾರ್ಯವಾಗಿ ಡಾಲಿಯ ಸಹಾನುಭೂತಿಯುಕ್ತ ಕಣ್ಣುಗಳಲ್ಲಿ ಕಣ್ಣು ಮುಚ್ಚಿ ಜಿಗಿ ಹೊಡೆದೆ – ಹೃದಯದ ಉರಿ ತಾಳದೇ!

ಮರ್ತ್ಯಲೋಕದ ಅಮೃತವೆಂದರೆ – ಸ್ತ್ರೀ – ಸಹಾನುಭೂತಿ !

ಅಂದು, ನಮ್ಮ ಗುರ್ತಾದ ಒಂದು ತಿಂಗಳ ನಂತರ ನಾನು ಸಹಜವಾಗಿ ಡಾಲಿಯನ್ನು ಸಿನೆಮಾಕ್ಕೆ ಕರೆದೆ. ಅವಳು ಕಣ್ಣರಳಿಸಿ 'ಹೂಂ' ಎಂದಳು. ಸಿನೇಮದ ನಂತರ ಏಶಿಯಾಟಿಕದಲ್ಲಿ ಊಟ ಮಾಡಿದೆವು. ಆ ನಂತರ ಲೋಕಲ್ ಹಿಡಿದು ಬಾಂದ್ರಾಕ್ಕೆ ಬಂದು ಮುಟ್ಟಿದಾಗ ರಾತ್ರಿ ಹನ್ನೊಂದಾಗಿತ್ತು. ಸುತ್ತಲಿನ ನೀರವತೆ ನಮ್ಮೀರ್ವರನ್ನು ಹೆಚ್ಚು ಸಮೀಪ ತಂದಿತ್ತು. ರಹದಾರಿಯ ಮೇಲೆ ಹೋಗುವಾಗ ಮಾತಿನ ಗುಂಗಿನಲ್ಲಿ ನನ್ನ ಕೈಯು ಅವಳ ಕೈಯನ್ನು ಸಂಧಿಸಿತ್ತು.... ಬಾದ್ರಾ ಕೆರೆಯ ದಂಡೆಯ ಮೇಲಿಂದ ಹೋಗುವಾಗ ಒಮ್ಮೆಲೆ ನನ್ನಲ್ಲಿ ತುಂಟ, ಪ್ರಬಲ ಶಕ್ತಿಯೊಂದು ಸಂಚರಿಸಿತು. ನಾನು ಅವಳ ಎರಡು ಬಾಹುಗಳನ್ನು ಗಟ್ಟಿಯಾಗಿ ಹಿಡಿದು ಕೇಳಿದೆ :

"ಡಾಲಿ, ಈ ಕೆರೆಯಲ್ಲಿ ನಿನ್ನನ್ನು ಎತ್ತಿ ಒಗೆಯಲೇನು?"

"ಓಹೋ, ಅದರಲ್ಲೇನು–ಒಗೆದುಬಿಡು ಹೋಗಲಿ. ಜಗತ್ತಿಗೆ ಒಂದು ಪೀಡೆ ಕಡಿಮೆ!.... ನಾಳೆ ವರ್ತಮಾನ ಪತ್ರದಲ್ಲಿ ದೊಡ್ಡ ಅಕ್ಷರಗಳಲಿ ಸುದ್ದಿ : ಡಾಲಿ ಡಿಸೋಜಳ ಆತ್ಮಹತ್ಯೆ ! ಪ್ರೇಮಭಂಗದ ಮೂಲಕ .... ವಾಹ್, ರೊಮ್ಯಾಂಟಿಕ್ ವಿಷಯ–" ಡಾಲಿ ಜೋರಿನಿಂದ ನಕ್ಕಳು.

"ವಂಡರಫುಲ್–ಹಾಗಾದರೆ–ಇಗೋ ಒಗೆದೇಬಿಡುವೆ," ಎಂದು ಅವಳನ್ನೆತ್ತಿದೆ. "ತಡೆ, ಡೆಸ್ಡಿಮೋನಾಳನ್ನು ಕೊಲ್ಲುವದಕ್ಕಿಂತ ಮುಂಚೆ ಅಥೆಲೋ ಅವಳನ್ನು ಚುಂಬಿಸುವಂತೆ, ನಾನೂ ನಿನ್ನನ್ನು ಮುದ್ದಿಸುವೆ–ಮೊದಲು–" ಎಂದು ಅವಳನ್ನು ಗಟ್ಟಿಹಿಡಿದು ಮುದ್ದಿಸಿದೆ. (ಕಾಮಿನಿಯ ತುಟಿಗಳು ನನ್ನ ಸ್ಮೃತಿಪಟಲದ ಮೇಲೆ ಮೂಡಿ, ಅಣಕಿಸಿ ನಕ್ಕು ಹೋದವು !)

ಡಾಲಿ ಸ್ವಲ್ಪವೂ ಮಿಸುಕಾಡದೆ ನನ್ನ ಅಪ್ಪುಗೆಯಲ್ಲಿ ಸುಮ್ಮನೆ ನಿಂತಳು – ಮುಗುಳುನಗೆ ನಗುತ್ತ....

"ಡಾಲಿ!"

"ಉಂ?"

"ಮೊದಲು ನನ್ನ ಕೋಣೆಗೆ ಹೋಗಿ – ಕಾಫೀ ಮಾಡಿ ಕುಡಿಯೋಣ. ಏನಂತೀ ಈ ಯೋಜನೆಗೆ?"

"ಗುಡ್ ! ಅಡ್ಡಿಯಿಲ್ಲ."

ನನ್ನ ಕೋಣೆಗೆ ಹೋಗಿ, ಕಾಫಿ ಕುಡಿದಾಯಿತು. ಡಾಲಿ ಹೊರಟು ನಿಂತಳು : "ರೈಟ್, ಉಪಾಸನಿ–ಥ್ಯಾಂಕ್ಸ್! ಇಂದಿನ ಸಂಜೆ ಉತ್ಕೃಷ್ಟವಾಗಿ ಕಳೆದೆವೆಷ್ಟೆ– ನನ್ನನ್ನು ಕಳಿಸಲು ಆ ಕ್ರಾಸ್‌ರೋಡಿನತನಕ ಬಾರಲ್ಲ!" ಎಂದು ಮುಂದಾದಳು.

ನನ್ನ ತಲೆಯಲ್ಲಿ ಏನೋ ಮಿಂಚಿದಂತಾಯಿತು. ನಾನು ಸಹಜವಾಗಿಯೇ ಚೇಷ್ಟೆಯ ಧ್ವನಿಯಲ್ಲಿ ಕೇಳಿದೆ :

"ಡಾಲಿ, ಇಂದು ಇಲ್ಲಿಯೇ ಮಲಗಬಾರದೇಕೆ ನೀನು?"

ಅವಳು ನನ್ನೆಡೆಗೆ ಬೀರಿದ ದೃಷ್ಟಿಯಲ್ಲಿ ಪ್ರಶ್ನೆಯೊಂದು ಮೂಡಿತ್ತು; ಆ ಪ್ರಶ್ನೆ ನನ್ನನ್ನು ಒಮ್ಮೆಲೇ ಉತ್ತೇಜನಗೊಳಿಸಿತೇನೋ : ನನ್ನ ರಕ್ತ ವೇಗದಿಂದ ಧಾವಿಸತೊಡಗಿತು. ವಿಲಕ್ಷಣ ಧೈರ್ಯ–ವಿಲಕ್ಷಣ ಭೀತಿ! ಅವಳು ಉತ್ತರ ಕೊಡಲೆಂದು ತುಟಿ ತೆಗೆಯುವುದರೊಳಗೇ ನಾನು ಅವಳನ್ನು ಬರಸೆಳೆದು ಚುಂಬಿಸಿದೆ. ನಂತರ ಎರಡೂ ಕೈಗಳಲ್ಲಿ ಅವಳ ಮುಖವನ್ನು ಹಿಡಿದು, ನನ್ನಿಂದ ಕೊಂಚ ಅಂತರದ ಮೇಲೆ ಎತ್ತಿ ಹಿಡಿದೆ. "ಡಾಲೀ–ಡಾಲೀ!" ಎಂದೆ ನನ್ನ ಧ್ವನಿ ಆರ್ತತೆಯಿಂದ ಕಂಪಿಸಿತ್ತು.

ಡಾಲಿಯ ಕಣ್ಣುಗಳಲ್ಲಿ ಸಹಾನುಭೂತಿಯ ಜೊತೆಗೆ ಕರುಣೆ ಮಿಣುಕುತ್ತಿತ್ತು. "ಉಪಾಸನಿ, ನಿಜವಾಗಿಯೂ ನಿನಗೆ ಹಾಗೆ ಅನಿಸುವದೆ?"

ನನ್ನ ಉತ್ತರ ನನ್ನ ದೃಷ್ಟಿಯಲ್ಲಿಯೇ ಇತ್ತು.

" 'ಇಂಥ' ಅನುಭವ ನಿನಗೆ ಹಳೆಯದೇನು?"

"ಊಂ ಹುಂ...." ನಾನು ಮುಖ ಕೆಳಗೆ ಹಾಕಿದೆ.

"ಇದಕ್ಕಿಂತ ಮೊದಲು ಇಂಥ ಅನುಭವ ಗೊತ್ತೇ ಇಲ್ಲವೆ?"

"ಇಲ್ಲ."

"ಎಲಾ, ಮಗುವೇ! ನೀನು ಇಷ್ಟು ದೊಡ್ಡವನಾಗಿ ಇನ್ನೂ ಶುದ್ಧ ವರ್ಜಿನ್ ಇದ್ದೀಯಾ?"

"ಹೌದು."

"ಹಸುಗೂಸು ! – ಲಗ್ನವಾಗುವುದಿಲ್ಲವೇ"

"ನಾನೂ ಎಂದೂ ಲಗ್ನವಾಗಲಾರೆ–"

ಯಾಕೆ ? ಪ್ರೇಮಭಂಗದ ಛಾಯೆಯಿದೆಯಲ್ಲ ನಿನ್ನ ಧ್ವನಿಯಲ್ಲಿ !"

"ಅಹುದೇನು?"

"ನಿಜವಾಗಿ ಹೇಳು, ಪ್ರೇಮದಲ್ಲಿ ನಿರಾಶೆಯಾಗಿದೆಯೇ ?"

"ಹು...."

"ಆ ಹುಡುಗಿ ಇಲ್ಲಿ ಮುಂಬಯಿಯಲ್ಲಿರುವಳೇ ?"

"ಇಲ್ಲ...."

"ಅವಳನ್ನು ನೀನು ಮರೆಯಲು ಯತ್ನಿಸುತ್ತಿರುವೆಯಾ ?"

"ಹುಂ–" ಅನ್ನದೆ ಗತ್ಯಂತರವಿರಲಿಲ್ಲ.

"ನಿನಗೆ ನಾನು ಸೇರುವೆನೇ?"

"ಹುಂ...." ಅವಳ ಸೀರವಾದ ಕೈಯನ್ನು ಎತ್ತಿ ಮೃದುವಾಗಿ ಒತ್ತಿದೆ, ನನ್ನ ತುಟಿಯವರೆಗೆ ಎತ್ತಿ ಮುತ್ತನ್ನಿತ್ತೆ.

"ನೀನಿನ್ನೂ ಕೂಸು, ಗೋರಿ", ಎಂದು ಅವಳು ನನ್ನ ತುಟಿಯ ಮೇಲೆ ತನ್ನ ತುಟಿಗಳನ್ನೊತ್ತಿದಳು.

ನಾನು ಕೃತಜ್ಞತೆಯಿಂದ ಅವಳೆಡೆಗೆ ನೋಡಿದೆ.... ಆಗ ನನ್ನ ಹೃದಯದೊಳಗಿಂದ ಏನೋ ಉಕ್ಕಿಬಂದಂತಾಯಿತು. ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತು. ನಾನು ಒಮ್ಮೆಲೇ ನೆಲದ ಮೇಲೆ ಕುಳಿತು ಅವಳ ತೊಡೆಗಳಲ್ಲಿ ತಲೆಯನ್ನಿರಿಸಿದೆ. ನನ್ನ ಕೈಗಳು ಅವಳ ದೇಹವನ್ನು ಬಳಸಿ ನಿತಂಬವನ್ನಾವರಿಸಿದವು.... ಅವಳ ಬೆರಳುಗಳು ನನ್ನ ಕೂದಲಲ್ಲಿ ಆಡತೊಡಗಿದವು.... ಆ ಕಾರುಣ್ಯ, ಆ ಸಹಾನುಭೂತಿ, ಆ ಕೋಮಲತೆ ಸ್ವರ್ಗೀಯವೆನಿಸಿದವು. ಆ ಹುಡುಗಿಯಲ್ಲಿ ದೇವತಾಸಾಕ್ಷಾತ್ಕಾರವಾದಂತೆನಿಸಿತು. ಅವಳೂ ನನ್ನನ್ನು ಮೃದುವಾಗಿ ಎಬ್ಬಿಸಿ, ನನ್ನ ತಲೆಗೆ ತನ್ನ ಎದೆಯ ಸ್ಪಂದಿಸುವ ಆಸರೆಯನ್ನಿತ್ತಳು.... ನನ್ನ ಕಂಬನಿಯನ್ನು ಕೈಯಿಂದ ಒರೆಸುತ್ತ –

"ನಿನ್ನ ಹೃದಯದಲ್ಲಿ ಇಂಥ ಭಯಂಕರ ದುಃಖವನ್ನು ಬಚ್ಚಿಟ್ಟಿದ್ದೀಯೆಂದು ನನಗೆ ಅನಿಸಿರಲಿಲ್ಲ.... ಮನುಷ್ಯ ನಗುತ್ತಾನೆ, ಆದರೆ ಆ ನಗೆಯ ಹಿಂದೆ ಒಮ್ಮೊಮ್ಮೆ ವೇದನೆಯ ಹಿಮಾಲಯವೇ ಅಡಗಿರುತ್ತದೆ ಅಲ್ಲವೇ?" ಎಂದು ಉಸುರಿದಳು.

ಡಾಲಿಯ ಕೃಪೆಯಿಂದ ಆ ರಾತ್ರಿಯು ಜೀವನದ ಒಂದು ಅಗಾಧ ರಹಸ್ಯದ ಮೇಲೆ ಮಧುರವಾದ ಪ್ರಕಾಶವನ್ನು ಬೀರಿತು !

ಅವಳ ದೇಹವು ನನ್ನ ದೇಹಕ್ಕೆ ಜೋಗುಳ ಹಾಡಿ, ಚಪ್ಪಡಿಸಿ, ಉಯ್ಯಾಲೆ

ಯಾಡಿಸಿ ಮಲಗಿಸಿತು !

ಈ ಮೊದಲ ಅನುಭವದ ಭಯಂಕರ ಮಹಾಪೂರದಲ್ಲಿ ಹರಿದು ಹೊರಟ ನನಗೆ ದಿಗ್ಭ್ರಮೆಯಾಯಿತು, ದಿಗ್‌ಶೂನ್ಯವಾಯಿತು....

ನನ್ನ ಆತ್ಮದಲ್ಲಿ ಅನಂತ ಕಾಲದಿಂದ ಮುಚ್ಚಿದ ಯಾವುದೋ ಬಾಗಿಲು ಒಮ್ಮೆಲೆ ತೆರೆದು, ಹೊರಗಿನ ಚಿತ್ರ–ವಿಚಿತ್ರವಾದ (ಇಷ್ಟು ದಿನ ಬರಿಯ ಕನಸುಗಳಲ್ಲಿ ಅಸ್ಪಷ್ಟವಾಗಿ ರೂಪುಗೊಂಡ) ಉದ್ಯಾನದ ಸಮ್ಯಗ್ದರ್ಶನವಾಯಿತು....

ನನ್ನ ಹಳೆಯ ತ್ವಚೆಯೊಳಗಿಂದ ಸರ್ರನೆ ಹೊರ ಜಿಗಿದು, ನಾನು ಒಮ್ಮೆಲೆ ವಾಮನನಂತೆ, ಬೆಳೆದಂತೆ, ಪ್ರೌಢನಾದಂತೆ ಅನಿಸಿತು....

"ಡಾಲಿ, ಡಾಲಿ, ಡಾರ್ಲಿಂಗ್, ನೀನು ನನಗೆ ಮಾಡಿದ ಉಪಕಾರದ ಮಹತಿ ನಿನಗೇ ಗೊತ್ತಿಲ್ಲ...." ಕೃತಜ್ಞತೆಯಿಂದ ನನ್ನ ಕಣ್ಣುಗಳು ಮರಳಿ ತುಂಬಿದವು.

"ಅಳಬೇಡ, ಗೋರೀ," ಎಂದು ಒದ್ದೆಯಾದ ಕಣ್ಣುಗಳನ್ನು ಮೃದುವಾಗಿ ಮುದ್ದಿಸಿದಳು.

ಅನಂತರ ಮರಳಿ ನಮ್ಮ ನಗೆಚಾಟಿಕೆ, ಚೇಷ್ಟೆ, ವಿನೋದ ಶುರುವಾಯಿತು....

"ನಿನ್ನ ಹಾಗೂ ನಿನ್ನ ಆ ಹುಚ್ಚು ಹುಡುಗಿಯ ಕತೆಯನ್ನು ಹೇಳಲ್ಲ– ಪ್ರೇಮ ಭಂಗದ ಕತೆಗಳು ಕೇಳಲಿಕ್ಕೆ ಚಂದವಿರುತ್ತವೆ !"

ನಾನು ನನ್ನ ಪ್ರೇಮ ಕತೆಯನ್ನು ಅತಿರಂಜಿತವಾದ ಬಣ್ಣಗಳಲ್ಲಿ ಚಿತ್ರಿಸಿದೆ: ಕಾಮಿನಿ ನನ್ನನ್ನು ಬಹಳ ಪ್ರೀತಿಸಿದಳು ಮೊದಲು ; ಅವಳು ಎಷ್ಟೋ ಸಲ ನನ್ನನ್ನು ಆಲಂಗಿಸಿ, ಮುದ್ದಿಸಿದಳು ಕೂಡ. ಆದರೆ ನಾನು ಮುಂಬಯಿಗೆ ಬಂದ ಮೇಲೆ ಮತ್ತೊಬ್ಬ ಅವಳ ಬೆನ್ನು ಹತ್ತಿ ಒಂದು ಸಲ ಅವಳ ಮೇಲೆ ಬಲಾತ್ಕಾರ ಮಾಡಿದ. ಆ ಅಪಘಾತದ ಮೂಲಕ ಅವಳು ನನ್ನನ್ನೂ, ನನ್ನ ಪ್ರೇಮವನ್ನೂ ನಿರಾಕರಿಸಿದಳು.... ಸ್ವಲ್ಪ ಹಾರ್ಡಿಯ 'ಟೆಸ್ಸಿ' ನಂತೆ ಇದೆಯಲ್ಲವೇ ನನ್ನ ಕತೆ?

"ಹಳೆಯದನ್ನು ಒಯ್ದು ಹಿತ್ತಲಲ್ಲಿ ಹುಗಿಯಬೇಕು," ಎಂದು ಹೇಳಿ, ನಗುತ್ತ, ನನ್ನ ತಲೆಯನ್ನು ಡಾಲಿಯ ವಕ್ಷಸ್ಥಳದಲ್ಲಿ ಹುಗಿದೆ !

* * *

ನಾನು ಡಾಲಿಗೆ ಹೇಳಿದ ನನ್ನ 'ರೊಮ್ಯಾಂಟಿಕ್' ಪ್ರೇಮ ಕತೆ ಸುಳ್ಳಿತ್ತು. ಆ ಸಂದರ್ಭದಲ್ಲಿ ನನ್ನ ನಿಜವಾದ ಪ್ರೇಮಕತೆಯನ್ನು ಹೇಳುವದು ಶಕ್ಯವಿದ್ದಿಲ್ಲ....

—ತೋಡೀ ರಾಗವನ್ನು ಮುಂಜಾನೆಯೇ ಹಾಡಬೇಕು. ಮಾಲ ಕಂಸವನ್ನು ರಾತ್ರೆಯೇ ಹಾಡಬೇಕು.... ವಾತಾವರಣಕ್ಕೆ ತಕ್ಕಂತೆ ಹಾಡುವ ರಾಗವಿರಬೇಕು....

"ಕಾಮಿನಿ ನನ್ನನ್ನು ಬಹಳ ಪ್ರೀತಿಸಿದಳು ಮೊದಲು. ಅವಳು ಎಷ್ಟೋ ಸಲ ನನ್ನನ್ನು ಆಲಂಗಿಸಿ ಮುದ್ದಿಸಿದ್ದಳು ಕೂಡ...."

ಇದರಲ್ಲಿ ಎಷ್ಟು ಸತ್ಯ, ಎಷ್ಟು ಅಸತ್ಯ? – ಇಂಥ ಒಂದೆರಡು ವಾಕ್ಯಗಳಲ್ಲಿ ಹಿಡಿದಿಡುವ ವಿಷಯವೇ ಅದು?

ಸತ್ಯಾಸತ್ಯತೆಯ ವಿಷಯ ಬಹಳ ತೊಡಕಿನದು, ಗಹನವಾದದ್ದು.

ಈ ವಿಷಯದ ಬಗ್ಗೆ ಶ್ರೀಕಾಂತ ಒಂದು ಚಿಂತನವನ್ನು ಬರೆದಿಟ್ಟಿದ್ದಾನೆ :

"ಈ ಕುರ್ಚಿಯ ಅಸ್ತಿತ್ವ ಸತ್ಯವಾದದ್ದು–ನಿಜ ! ಈ ಸತ್ಯದ ವರ್ಣನೆ ಮಾಡಲು ಶಕ್ಯವಿದೆಯೇ? 'ಇದು ಕುರ್ಚಿ' ಎಂದೊಡನೆ 'ಈ' ಕುರ್ಚಿಯ ಎಲ್ಲ ಗುಣ–ಧರ್ಮಗಳನ್ನೂ, ವೈಶಿಷ್ಟ್ಯವನ್ನೂ ಹೇಳಿದಂತಾಗುವದೇ? ಇಲ್ಲ. ಇದರ ಚಿತ್ರ ತೆಗೆದು, ಇದನ್ನು ಪ್ರತ್ಯಕ್ಷ ಪ್ರದರ್ಶಿಸಿ ಕೂಡ, ನನ್ನ ಮನಸ್ಸಿನಲ್ಲಿಯ ಈ ಕುರ್ಚಿಯ ಅನುಭವವನ್ನು ವ್ಯಕ್ತಪಡಿಸುವದು ಕಷ್ಟ ಈ ಕುರ್ಚಿಯ ವಿಷಯದಲ್ಲಿ ನನ್ನ ಮನಸ್ಸಿನಲ್ಲಿ ನೂರೆಂಟು ಸಹಜವಾಸಜನ್ಯ ವಿಚಾರ (associations) ಗಳಿರಬಹುದು. ಅವುಗಳನ್ನೆಲ್ಲ ಸೂಚಿಸುವದು ಕಷ್ಟ.. ಹಾಗೂ ಈ ಕುರ್ಚಿಯನ್ನು ಪ್ರತ್ಯಕ್ಷ ನೋಡಿದರೂ, ಇಬ್ಬರ ಅನುಭವಗಳು ಅವರವರ ಇಂದ್ರಿಯಗಳ ಮೇಲೆ ಹಾಗೂ ಅವರವರ ಅನುಭವ–ಬುದ್ಧಿ–ಮನಸ್ಥಿತಿ ಮುಂತಾದವುಗಳ ಮೇಲೆ ಅವಲಂಬಿಸಿವೆ.... ಆದುದರಿಂದ ನಾವು ಸತ್ಯದರ್ಶನವೆಂದು ಯಾವುದಕ್ಕೆ ಕರೆಯುತ್ತೇವೆಯೋ ಅದು ಒಂದು ವಿಶಿಷ್ಟ ಅನುಭವ–ಪದ್ಧತಿಯಿಂದ ಉದ್ಭವಿಸಿದ ಅಭಾಸವೇ ಸರಿ !...."

ಅಂದಿನ ಅನುಭವ ಇಂದು ಬದಲುಗೊಂಡಿದೆ....ಎಷ್ಟೋ ವಿಷಯಗಳು ಮರೆತು ಹೋಗಿವೆ.... ಹಾಗೂ ಆ ಅನುಭವದ ನೆನಪು. ಅವಿರತವಾಗಿ ಸಾಗಿದ ಮನೋ ಜೀವನದ ಲಹರಿಯಲ್ಲಿ ಸಿಕ್ಕು, ಕಲ್ಪನೆಯ ವಿವಿಧ ಪ್ರಕಾಶಗಳ ಬಣ್ಣಗಳನ್ನುಟ್ಟು, ಇಂದು ಈ ಬೆಳೆದ ಮನಸ್ಸಿನಲ್ಲಿ ಮರುಕಳಿಸಿದಾಗ, ಆ ಅನುಭವದ ಸ್ವರೂಪವೇ ಬದಲಾಗಿದೆ.

ಆ ನವ ಯೌವನದ ಪ್ರಕ್ಷುಬ್ಧ ಮನಸ್ಸಿನ ಅನುಭವ ಒಂದು ; ಮುಂದೆ ಕಲ್ಪನೆಯ ಅತಿರಂಜಿತ ಬಣ್ಣಗಳ ತೊಡವನ್ನುಟ್ಟು ನನ್ನ ಸ್ಮೃತಿಯಲ್ಲಿ ಇದ್ದ ಅನುಭವ ಬೇರೊಂದು, ಇಂದು ಈ ಬೆಳೆದ ಮನಸ್ಸಿನ ವಿವೇಕ ಬುದ್ಧಿಯ ತೀಕ್ಷ್ಣ ಬೆಳಕಿನಲ್ಲಿ ಕಾಣುವ ಆ ಅನುಭವದ ಸ್ವರೂಪ ಮಗುದೊಂದು; ಅಷ್ಟೇ ಅಲ್ಲ, ಆ ಅನುಭವ ಶಬ್ದಗಳಲ್ಲಿ ಸಾಕಾರವಾದಾಗ ತಳೆಯುವ ಸ್ವರೂಪ ಇನ್ನೊಂದು....

ಇವುಗಳಲ್ಲಿ ಯಾವುದು ಸತ್ಯ, ಯಾವುದು ಅಸತ್ಯ?

ಇಷ್ಟು ಮಾತ್ರ ನಿಜ : ನಾನು ಡಾಲಿಗೆ ಹೇಳಿದ ಕತೆ ಅಸತ್ಯ....

ಕಾಮಿನಿ ಆಗ ೧೬ ವರ್ಷದ ನವೋದಿತ, ನವೋನ್ಮೀಲಿತ ತರುಣಿ....

ನನಗೆ ೧೯ ವರ್ಷ....

ನನ್ನ ಇಂಟರ ಸಾಯನ್ಸ ಪರೀಕ್ಷೆ ಮುಗಿದಿತ್ತು. ಶ್ರೀಕಾಂತನ ಬಿ.ಎ. ಪರೀಕ್ಷೆ ಮುಗಿಯುವ ತನಕ ತಾನು ಧಾರವಾಡದಲ್ಲಿಯೇ ಇದ್ದೆ. ಅವನು ಸೀನಿಯರ ಬಿ.ಎ. ದಲ್ಲಿ ಅಭ್ಯಾಸ ಸರಿಯಾಗಿ ಮಾಡಿರಲಿಲ್ಲ.... ರಾಜಕಾರಣದ ವಿಷಯ ಅವನ ತಲೆಯಲ್ಲಿ ಭೂತದಂತೆ ಸೇರಿ, ಅದೇ ವರ್ಷ ಹುಚ್ಚು ನೃತ್ಯವಾಡಿತ್ತು.... ಇಲೆಕ್ಷನ್‌ದಲ್ಲಿ ಎಣಿಸಿದಂತೆ ಪಾರ್ಟಿಗೆ ಪರಾಭವವಾಯಿತು... ಇನ್ನು ಮುಂದೆ ಸ್ವಲ್ಪ ಹೃದಯ ಪರಿಶೋಧನೆ ಮಾಡಬೇಕು ; ಈ ಪಾರ್ಟಿಯ ದೃಷ್ಟಿಕೋನದಲ್ಲಿ, ಅದರ ಮೂಲಭೂತ ವಿಚಾರಗಳಲ್ಲಿ ಏನೋ ದೋಷವಿದೆ. ಅದನ್ನು ಹುಡುಕಿ ತೆಗೆದು ನಿರ್ಮೂಲಗೊಳಿಸಬೇಕು. ಬರಿಯ ಚುನಾವಣೆಯಲ್ಲಿ ಹೋರಾಡುವದರಿಂದ ಜನತೆಯ ಉದ್ಧಾರವಾಗಲಾರದು. ನಿಜವಾದ ಲೋಕರಾಜ್ಯ ಪ್ರತಿಯೊಬ್ಬ ವ್ಯಕ್ತಿಯ ಯೋಗ್ಯತೆಯನ್ನವಲಂಬಿಸಿದೆ.... ನಮ್ಮ ತತ್ವಜ್ಞಾನವನ್ನೇ ಅಮೂಲಾಗ್ರವಾಗಿ ಬದಲಿಸವೇಕು. ಎಂಬ ವಿಚಾರಗಳು ಶ್ರೀಕಾಂತನಲ್ಲಿ ಶುರುವಾದವು. ಮುಂದೆ ಪಾರ್ಟಿಯ ಮುಖಂಡರೊಡನೆ ಆತನ ಮತಭೇದವಾಗಿ, ಪಾರ್ಟಿಯಿಂದ ಹೊರಬಿದ್ದ –

"ಇನ್ನು ಕೆಲವು ವರ್ಷ ನಾನು ಬರೇ ಓದುವೆ.... ಜ್ಞಾನ ಗಳಿಸುವೆ.... ಹೊಸ ಜೀವನಕೇಂದ್ರವನ್ನು ಹುಡುಕದ ಹೊರತು ನನ್ನ ಮನಸ್ಸಿಗೆ ಶಾಂತಿ ಸಿಗದು.... ಎಲ್ಲವನ್ನೂ ತಿಳಿದುಕೊಳ್ಳಬೇಕು, ಜೀವನದ ಪರೆಪರೆಗಳನ್ನು ಕೆದಕಿ ಕೆದಕಿ ನೋಡಬೇಕು.... ಮನಸ್ಸಿನ, ಹೃದಯದ ಎಲ್ಲ ಕಿಡಕಿ ಬಾಗಿಲುಗಳನ್ನು ತೆರೆದಿಟ್ಟು ಜಗತ್ತಿನಲ್ಲಿಯ ಎಲ್ಲ ಗಾಳಿಗಳಿಗೆ ಸುಳಿದಾಡಲು ಅವಕಾಶವೀಯಬೇಕು.... ಅನುಭವ, ಅಭ್ಯಾಸ, ಚಿಂತನ, ಮನನ ಇದುವೇ ನನ್ನ ಮುಂದಿನ ಮಾರ್ಗ.... ಗೌರೀಶ, ನೀನು ನನ್ನ ಈ ಮಾರ್ಗದಲ್ಲಿ ಸಹಾಯ ಮಾಡಬೇಕು. ನೀನು ನಿನ್ನ ವಿಜ್ಞಾನದ ದೃಷ್ಟಿಯಿಂದ ಸತ್ಯಾನ್ವೇಷಣೆ ಮಾಡಿ, ನನಗೆ ತಿಳಿಸಿಕೊಟ್ಟು, ನನ್ನ ಕ್ಷಿತಿಜವನ್ನು ವಿಸ್ತಾರಗೊಳಿಸಿದರೆ, ಗೌರೀ, ನಿನ್ನ ಸಹಾಯ ಅಷ್ಟಿಷ್ಟಾಗದು.... ನಿನ್ನ ಪ್ರೀತಿಯ ಮೇಲೆ, ನನ್ನ ಬುದ್ಧಿಯ ಮೇಲೆ ನನ್ನ ಅರ್ಧ ಜೀವನ ಅವಲಂಬಿಸಿದೆ.... ಗೌರೀಶ–ನೀನು ನನ್ನ...." ("ಲಕ್ಷಣ" "ಎಂದು ನಾನು ಮನಸ್ಸಿನಲ್ಲಿಯೇ ಅವನ ವಾಕ್ಯವನ್ನು ಪೂರ್ಣಗೊಳಿಸಿದೆ.)

ಶ್ರೀಕಾಂತನಿಂದ ಅವನ ಬೀ. ಎ.ದ ಅಭ್ಯಾಸ ಮಾಡಿಸುವ ಭಾರ ನನ್ನ

ಮೇಲೆಯೇ ಬಿದ್ದಿತು.... ಪ್ರತಿ ದಿನ ರಾತ್ರಿ ಅವನ ಮನೆಗೆ ಹೋಗತೊಡಗಿದೆ. ರಾತ್ರಿ ೧೨-೧ ಗಂಟೆಯವರೆಗೆ ಶ್ರೀಕಾಂತನಿಗೆ ನಿದ್ದೆ ಬರದಂತೆ ನೋಡಿಕೊಳ್ಳುತ್ತಿದ್ದೆ ಅವನಿಗೆ ಬೇಸರ ಬಂದರೆ ಹರಟೆ ಕೊಚ್ಚುತ್ತಿದ್ದೆ, ಅಥವಾ ತಿರುಗಾಡಲು ಒಯ್ಯುತ್ತಿದ್ದೆ. ಮುಂಜಾನೆ ಬೇಗನೆ ಎಬ್ಬಿಸುವುದೂ, ಅವನ ಜೊತೆ ಎದ್ದು ಕೂಡುವದೂ ನನ್ನ ದಿನದ ಕಾರ್ಯಕ್ರಮದ ಭಾಗ.... ಈ ಮಿತ್ರ-ಸಹಕಾರದಿಂದ ಉದ್ಭವಿಸಿದ ಆ ನಿರಾಗಸ ಆನಂದದ ಸೊಬಗು ನನ್ನ ಹೋದ ಯುಗದ ಮಾತು !

ಶ್ರೀಕಾಂತನ ಪರೀಕ್ಷೆ ಮುಗಿದೊಡನೆ, ಜೋಗದ ಜಲಪಾತಕ್ಕೆ ನಾಲ್ಕೈದು ದಿನಗಳ ಮಟ್ಟಿಗೆ ಹೋಗುವುದು ನಿಶ್ಚಿತವಾಯಿತು. ಸತ್ಯೇಂದ್ರ ಪುಣೆಯಿಂದ ಬೀ. ಇಯ ಮೊದಲ ಪರೀಕ್ಷೆ ಮುಗಿಸಿಕೊಂಡು ಧಾರವಾಡಕ್ಕೆ ಬಂದಾಗ, ಅವನ ಬೆಂಬಲವೂ ದೊರೆತಿತು – ಈ ಕಾರ್ಯಕ್ರಮಕ್ಕೆ. ಕಾಮಿನಿ ತಾನೂ ಬರುವವಳೆಂದು ಹಟ ಹಿಡಿದಾಗ ನನ್ನ ಹೃದಯದಲ್ಲಿ ಅಸ್ಪಷ್ಟವಾದ ಆಶೆ ಮಂಜಿನಂತೆ ಪಸರಿಸಿತು. ಅವಳು ಬರುವುದಕ್ಕೆ ಶ್ರೀಕಾಂತನ ಸಮ್ಮತಿ ದೊರೆತಾಗ ನಾನು ಅಸ್ಪಷ್ಟ ಭೀತಿಯಿಂದ ನಡುಗಿದೆ.... ಕಾಮಿನಿಯ ಜೊತೆಗೆ ಅವಳ ಗೆಳತಿಯೂ, ಶ್ರೀಕಾಂತನ ಬೆನ್ನು ಹತ್ತಿದ ಹುಡುಗಿಯೂ ಆದ ರೋಹಿಣಿ ಸ್ವತಃ ಆಮಂತ್ರಿಸಿಕೊಂಡಳು. ಶ್ರೀಕಾಂತನ ತಾಯಿ ಬಲವಂತ ಪಡಿಸಿದ್ದರಿಂದ ರೋಹಿಣಿಯನ್ನು ಕಾಮಿನಿಗೆ ಜೋಡಿಯೆಂದು ಕರೆದೊಯ್ಯುಗವದು ನಿಶ್ಚಿತವಾಯಿತು.

ನಾವು ಐವರೂ ಮುಂಜಾನೆಯ ಬಸ್ಸಿನಿಂದ ಧಾರವಾಡದಿಂದ ಹುಬ್ಬಳ್ಳಿಗೆ ಹೋದೆವು. ಹುಬ್ಬಳ್ಳಿಯಿಂದ ಎಂಟು ಗಂಟೆಯ ಗಾಡಿಯಿಂದ ಸಿರ್ಸಿಗೆ ಪ್ರಯಾಣ ಮಾಡಿದೆವು....

ನವಯುವಕನ ಮನಸ್ಸೆಂದರೆ ವಿಚಿತ್ರ, ಅನೈಸರ್ಗಿಕ ವಿಚಾರಗಳ ಕಲ್ಪನೆಗಳ ಸ್ಟೂಡಿಯೋ ! ಆ ಸ್ಟೂಡಿಯೋದಲ್ಲಿಯ ಕ್ಯಾಮರಾಕ್ಕೆ ಸೂಕ್ಷ್ಮವಾದ, ವಿಕೃತವಾದ ಲೆನ್ಸಿರುತ್ತದೆ.... ಜೀವನದ ಮೌಲ್ಯಗಳ ಸ್ಪಷ್ಟ ಕಲ್ಪನೆ ಅವನ ಮನಸ್ಸಿನಲ್ಲಿರುವುದಿಲ್ಲ; ಆದುದರಿಂದ ಸಣ್ಣ ಪುಟ್ಟ ವಿಷಯಗಳೂ ಕೂಡ ಅವನ ಭೂತಗನ್ನಡಿಯ ಕಣ್ಣಿಗೆ ಅರ್ಥಯುಕ್ತವಾಗಿ ಕಾಣುತ್ತವೆ :

'ಅರ್ಥ'ವೆನ್ನುವದಕ್ಕಿಂತ 'ಅನರ್ಥ – ಅಪಾರ್ಥ – ವಿಕೃತಾರ್ಥ'ವೆನ್ನುವದು ಲೇಸು.... ಭಾವನೆಗಳ ಗೊಂದಲವಂತೂ ಸದೈವಸಾಗಿರುತ್ತದೆ. ಈ ಜಾತ್ರೆಯಲ್ಲಿ ಆತನಿಗೆ ತನ್ನ ನಿಜವಾದ ಆತ್ಮಮೂರ್ತಿಯ ದರ್ಶನವೇ ಆಗುವುದಿಲ್ಲ ! ಅಸ್ಪಷ್ಟ ಹಂಬಲಗಳು, ಕನಸುಗಳು, ಆಸೆ-ಅಪೇಕ್ಷೆಗಳು ಅವಿರತವಾಗಿ (ಅವನು ನಿದ್ರಿಸುವಾಗ

ಕೂಡ!) ಅವನ ಮನಸ್ಸಿನಲ್ಲಿ ಕಣ್ಣುಮುಚ್ಚಾಲೆ ಯಾಡುತ್ತಿರುತ್ತವೆ....

ಇಂಥ ಮನಸ್ಸಿನ ಅನುಭವಗಳನ್ನು ಯಥಾವತ್ತಾಗಿ ನಿರೂಪಿಸುವದೆಂದರೆ ಕಷ್ಟಸಾಧ್ಯವಾದ ಮಾತು....

ಬಸ್ಸಿನಲ್ಲಿ ಕೂಡ್ರವಾದ ನನ್ನ ಅಸ್ಪಷ್ಟ ಅಪೇಕ್ಷೆ, ಆ ಅಪೇಕ್ಷೆ ಈಡೇರಿದಾಗ ಉಂಟಾದ ತೀಕ್ಷ್ಣ ರೋಮಾಂಚ, ತಲೆ ತುಂಬ ಇಲಿಗಳಂತೆ ಓಡಾಡುವ ಕಳ್ಳ ಕಲ್ಪನೆಗಳು – ನೆನೆದರೆ ಈಗ ನಗು ಬರುವದು !

ಹುಬ್ಬಳ್ಳಿಯಲ್ಲಿ ಸಿರ್ಸಿಯ ಗಾಡಿಯಲ್ಲಿಯ ರಿಝರ್ವ್ ಬೆಂಚಿನ ಮೇಲೆ ಕೂಡ್ರುವಾಗಿನ ನನ್ನ ಮನಃಸ್ಥಿತಿ ಇನ್ನೂ ನೆನಪಿದೆ, ಎಲ್ಲಕ್ಕಿಂತ ಮೊದಲು ರೋಹಿಣಿ ಹತ್ತಿ ಕಿಡಕಿಯ ಹತ್ತಿರ ಕುಳಿತುಕೊಂಡಳು. ಆನಂತರ ಸಾಮಾನುಗಳನ್ನು ವ್ಯವಸ್ಥೆಯಿಂದ ಇಡಲು ಶ್ರೀಕಾಂತ ಹತ್ತಿದ. ರೋಹಿಣಿಯ ತಡೆ ಇಲ್ಲದ ಮಾತುಗಳನ್ನು ಕೇಳುತ್ತ ಆತ ಅವಳ ಬದಿಗೆ ಸಹಜವಾಗಿ ಕುಳಿತುಕೊಂಡ.

"ಗೌರೀಶ, ನಿನ್ನ ಪ್ರೀತಿಯ ಗೆಳೆಯನ ಹತ್ತಿರದ ಸ್ಥಾನ ನಿನ್ನ ಹಕ್ಕಿನ ಸ್ಥಾನ" – ಎಂದು ಹೇಳಿ ಕಾಮಿನಿ ನಕ್ಕಳು.

"ಹೌದು!" ಸತ್ಯೇಂದ್ರನ ಧ್ವನಿಯಲ್ಲಿಯೂ ಸ್ವಲ್ಪ ವ್ಯಂಗ್ಯವಿತ್ತು– "ನಿನ್ನ ಜನ್ಮಸಿದ್ಧ ಹಕ್ಕು ಅದು!"

"ಆದರೆ ಅವನ ಬೆನ್ನ ಮೇಲೆ ಹುಟ್ಟಿದ ತಂಗಿ ನೀನು. ಅವನ ಬೆನ್ನ ಹಿಂದಿನಿಂದ ನೀನು ಹತ್ತಬೇಕು ಮೊದಲು!" ನಾನೂ ನಕ್ಕೆ, ನನ್ನ ವಿನೋದಕ್ಕೆ ನಾನೇ ಮೆಚ್ಚಿ.

ಅಷ್ಟರಲ್ಲಿ ಶ್ರೀಕಾಂತ ನಮಗೆ ಒಳಗೆ ಕೂಡ್ರಲು ಕರೆದ. ಅವನ ಬದಿಗೆ ಕೂಡ್ರುವ ಪಾಳಿ ಬಂತು. ಕಾಮಿನಿ ನನ್ನ ಎಡಬದಿಗೆ ಕುಳಿತಾಗ ನನ್ನ ಅಸ್ಪಷ್ಟ ಅಪೇಕ್ಷೆ ಸಫಲವಾಯಿತು. ಆದರೆ ಸತ್ಯೇಂದ್ರ ಕಾಮಿನಿಯ ಎಡಬದಿಗೆ ಕೂತದ್ದು ಅನಿವಾರ್ಯವಾಗಿದ್ದರೂ, ನನ್ನ ಮನಸ್ಸಿಗೆ ಸ್ವಲ್ಪ ಚುಚ್ಚಿತು....

ನವಯೌವನದಲ್ಲಿ ಸ್ತ್ರೀ ಸಂಪರ್ಕವೆಂದರೆ ಭಯಂಕರ ರೋಮಾಂಚಕಾರಿಯಾದ ಸಂಗತಿ. ಬಸ್ಸಿನ ಹೊಯ್ದಾಟಕ್ಕೆ ಕಾಮಿನಿಯ ತುಂಬು ತೋಳಿನ ಸ್ಪರ್ಶ, ಬಸ್ಸು ಒಮ್ಮೆಲೆ 'ಟರ್ನು' ತೆಗೆದುಕೊಳ್ಳುವಾಗ ಅಕಸ್ಮಾತ್ತಾಗಿ ನನ್ನ ತೊಡೆಯಮೇಲೆ ಬೀಳುವ ಅವಳ ಕೈಯ ಸ್ಪರ್ಶ, ನನ್ನ ಎಡಗೈಯನ್ನು ಸೀಟಿನ ಮೇಲ ಬದಿಗೆ ಚಾಚಿ ಇಟ್ಟಾಗ ಆ ಕೈಗೆ ಆಗುವ ಅವಳ ಕೇಶರಾಶಿಯ ಸ್ಪರ್ಶ ನನ್ನ ತನು ಮನಗಳನ್ನು ಪುಲಕಿತಗೊಳಿಸುತ್ತಿದ್ದವು. ಪ್ರೇಮಕ್ಕೂ ಸ್ಪರ್ಶೇಂದ್ರಿಯಕ್ಕೂ ಎಷ್ಟೊಂದು ನಿಕಟ ಸಂಬಂಧವಿದೆ!.... ಶ್ರೀಕಾಂತನು ಹೇಳುವ

ತಾತ್ವಿಕ ವಿಚಾರ ಅಥವಾ ಇಂಗ್ಲೀಷ ಕವಿಗಳ ಚರಿತ್ರೆ ಇವುಗಳತ್ತ ನನ್ನ ಕಿವಿಗಳ ಲಕ್ಷ್ಯವಿದ್ದರೂ, ನನ್ನ ದೇಹ ಮಾತ್ರ ಕಾಮಿನಿಯ ಸಂಪರ್ಕದ ಅಪೇಕ್ಷೆಯಿಂದ ಕಾತರಿಸುತ್ತಿತ್ತು....

ಸತ್ಯೇಂದ್ರ ಪುಣೆಯಲ್ಲಿ ಕಲಿತುತಂದ ಕೆಲವು ವಿನೋದಗಳನ್ನು ಹೇಳಿದ. ವಿನೋದ – ಕತೆಗಳನ್ನು ಹೇಳುವದರಲ್ಲಿ ಸತ್ಯೇಂದ್ರನದು ಎತ್ತಿದ ಕೈ. ಕಾಮಿನಿಗೆ ಈ ವಿನೋದಗಳೆಂದರೆ ತೀರಿತು – ಅವಳ ಮುಕ್ತಕಂಠದ ಹಾಸ್ಯಕ್ಕೆ ಮಿತಿಯೇ ಇರಲಿಲ್ಲ .... ಆಗ ಸತ್ಯೇಂದ್ರನ ಬಗ್ಗೆ ನನ್ನಲ್ಲಿ ಅಸೂಯೆ ಉಂಟಾಗದಿರಲಿಲ್ಲ. ನಾನು ಕೂಡ ಇಂಥ ಸಾವಿರಾರು ವಿನೋದಗಳನ್ನು ಕಲೆ ಹಾಕಿ, ಜನರನ್ನು (ಮುಖ್ಯ ಕಾಮಿನಿಯನ್ನು) ನಗಿಸುವ ಕಲೆಯನ್ನು ಕಲಿಯಬೇಕು ಎಂದು ಮನಸ್ಸಿನಲ್ಲಿಯೇ ದೃಢನಿಶ್ಚಯ ಮಾಡಿದೆ....

ಕಾಮಿನಿಯ ನಗೆಯ ಮೋಹಕತೆ ವೈಶಿಷ್ಟ್ಯ ಪೂರ್ಣವಾಗಿತ್ತು. ಅವಳ ಬೆಳ್ಳಿ ನಗೆಗೆ ಮಾರುಹೋಗದಿರುವವರೇ ಕಡಿಮೆ. ಅವಳ ನಗೆಯಲ್ಲಿ ನೂರೆಂಟು ಭಾವಗಳನ್ನು ವ್ಯಕ್ತಗೊಳಿಸುವ ಸ್ತ್ರೀ–ವಿಶೇಷ ಕಲೆಯೂ ಶಕ್ತಿಯೂ ಅವಳಿಗೆ ಅವಗತವಾಗಲು ಇನ್ನೂ ಎರಡು–ಮೂರುವರುಷ ಬೇಕಾಗಿದ್ದುವು....

ಅವಳು ಸುಮ್ಮಸುಮ್ಮನೆ ಜಗಳವಾಡುವ ರೀತಿಯೂ ಅತ್ಯಂತ ಮೋಹಕವಾಗಿತ್ತು :

ಬಸ್ಸಿನಲ್ಲಿ ವೇಳೆ ಕಳೆಯಲು ಹಸ್ತಸಾಮುದ್ರಿಕದತ್ತ ನಮ್ಮ ಆಸ್ಥೆ ತಿರುಗಿತು.

"ಇದೆಲ್ಲ ಬರೀ ಅಂಧಶ್ರದ್ಧೆ (Superstition) ! " ಎಂದು ಶ್ರೀಕಾಂತ ಹೀಗಳೆದ.

"ಅದು ಅಂಧಶ್ರದ್ಧೆ ಹೇಗೆ? ಕೈ ಗೆರೆಗಳ ಮೇಲಿಂದ ಹೇಳಿದ ಭವಿಷ್ಯ ಎಷ್ಟೋಸಲ ಖರೆ ಬರುತ್ತದೆ." ಕಾಮಿನಿ ಪ್ರತಿಪಾದಿಸಿದಳು.

'ಹಾಂ–ಎಷ್ಟೋ ಸಲ–ಎಲ್ಲ ಸಲವಲ್ಲ, ಅಲ್ಲಿದೆ ಮುಖ್ಯ ಪ್ಯಾಂಟು....ಕೈ. ಗೆರೆಗಳಲ್ಲಿ ಭವಿಷ್ಯದ ಸೂಚನೆ ಇದೆ ಎಂಬ ವಿಚಾರವೇ ಹುಚ್ಚು ಕಲ್ಪನೆ..." ಶ್ರೀಕಾಂತ 'ಕೈಗೆರೆಗಳಲ್ಲಿಯ ಆಸ್ಥೆಯ ಮೂಲ' ಎಂಬ ವಿಷಯದ ಮೇಲೆ ವ್ಯಾಖ್ಯಾನ ಕೊಡುವದರಲ್ಲಿದ್ದ.

"ನೀನು ಏನೇ ಹೇಳು, ದಾದಾ, ನನಗಂತೂ ಹಸ್ತರೇಖೆಗಳಲ್ಲಿ ವಿಶ್ವಾಸವಿದೆ. ನಮ್ಮ ಮಾಂಶಿಯ ಉದಾಹರಣೆ ಗೊತ್ತಿಲ್ಲವೇ? ಅವಳು ವಿಧವೆಯಾಗುವಳೆಂದು ಮೊದಲೇ ಯಾರೋ ಜೋತಿಷಿ ಹೇಳಿದ್ದನಂತೆ...." ಕಾಮಿನಿಯ ಹಟ ಮನೋವೇಧಕವಾಗಿತ್ತು !

"ಏನಿದ್ದರೂ ವೇಳೆ ಕಳೆಯಲು ಮಾತ್ರ ಬಹಳ ಉಪಯುಕ್ತವಾದ ಸಾಧನ!" ಎಂದು ಶ್ರೀಕಾಂತ ನಕ್ಕ.

ಸತ್ಯೇಂದ್ರ ಕಾಮಿನಿಯ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಅವಳ ಭವಿಷ್ಯ ಹೇಳಲು ಉದ್ಯುಕ್ತನಾದ.

"ಇದು ಹೃದಯ-ರೇಷೆ Line of heart," ಎಂದು ಅಂಗೈಯ ಮೇಲಿನ ಗೆರೆಯನ್ನು ತೀಡಿದ ಸತ್ಯೇಂದ್ರ.

"ಛೆ-ಅದು ಆಯುಷ್ಯರೇಖೆ" ಎಂದು ಖಂಡಿತ ಸ್ವರದಲ್ಲಿ ನುಡಿದಳು ಕಾಮಿನಿ.

"ಅದು ನಿಮ್ಮ ಭಾರತೀಯ ಹಸ್ತ ಸಾಮುದ್ರಿಕೆ-ನನ್ನದು ಕೀರೋನ ಪಾಮಿಸ್ಟ್ರಿ !"

ಪಾಮಿಸ್ಟ್ರಿ ಸುರುವಾದದ್ದೇ ಭಾರತದಲ್ಲಿ. ಕೀರೊ-ಪಿರೋ ಎಲ್ಲ ಸುಳ್ಳು." ಕಾಮಿನಿ ದನಿ ಏರಿಸಿ ಹೇಳಿದಳು.

"ಆದರೆ ಕೀರೋನ ಭವಿಷ್ಯಗಳೂ ಖರೇ ಆಗಿವೆ." ಸತ್ಯೇಂದ್ರ ನಗುತ್ತ ನುಡಿದ.

"ಹೀಗೆ ಎರಡು ರೀತಿಯ ಹಸ್ತ ಸಾಮುದ್ರಿಕೆಗಳಿದ್ದರೆ ಎರಡೂ ಸುಳ್ಳಿರಬೇಕು'.... 'ಯಾಕಂದರೆ-' ಶ್ರೀಕಾಂತ ಮರಳಿ ವಾದಿಸಿದ.

"ಅದು ಹೇಗೆ ? ಒಂದು ನಿಜ, ಮತ್ತೊಂದು ಸುಳ್ಳಿರಬೇಕು, ಪ್ರಾಚೀನವಾದ ನಮ್ಮ ಪದ್ಧತಿ ನಿಜ ಹಾಗೂ ಕೀರೋ ಸುಳ್ಳು-ಫಾಲ್ಸ್ !" ಕಾಮಿನಿಯ ಮಾತುಗಳಲ್ಲಿ ಒಂದು ಬಗೆಯ ಲಾಜಿಕ್ ಇತ್ತು ! .... ಅವಳ 'ಫಾಲ್ಸ' ಅಂದ ರೀತಿ (ಗಲ್ಲ ಮೇಲೇರೆಸಿ, ಕಣ್ಣು ಸಣ್ಣಗೆ ಮಾಡಿ ಹುಬ್ಬು ಗಂಟಿಕ್ಕಿ-) ನೋಡಿ ನನಗಂತೂ, ವಾದ-ವಿವಾದ ಈ ಲಕ್ಷಣ-ರೇಖೆಯನ್ನು ದಾಟಿ ಹೋಗಲಶಕ್ಯವೇನೋ ಎಂದೆನಿಸಿತು. ಅವಳ ಆ ಶಬ್ದದಲ್ಲಿ ಅಷ್ಟೊಂದು ಶಕ್ತಿಯಿತ್ತು....

"ನಿನ್ನ ಮತವೇನು ಗೌರೀಶ?" ಕಾಮಿನಿ ಕೇಳಿದಳು.

"ನನ್ನ ಮತವೇನೂ ಇಲ್ಲ. ನಿನಗೆ ಭಾರತೀಯ ಪದ್ಧತಿ ಬೇಕಿದ್ದರೆ ನನಗೆ ಗೊತ್ತಿದೆ." ನಾ ಹೇಳಿದೆ. ನನ್ನ ಮಾತಿನಲ್ಲಿ ಒಂದು ಉದ್ದೇಶ ಅಡಗಿತ್ತು ಎಂಬುವದು ಆಗ ನನಗೇ ಅನಿಸಿರಲಿಲ್ಲ. ಅಷ್ಟು ಸಹಜವಾಗಿ ನನ್ನ ಬಾಯಿಂದ ಮಾತು ಹೊರಬಂದಿತ್ತು.

"ಹಾಗಾದರೆ ನನ್ನ ಭವಿಷ್ಯ ಹೇಳು. "ಕಾಮಿನಿ ತನ್ನ ಮುದ್ದಾದ ಮಾಟಾದ, ಪ್ರೇಮದಂತೆ ಕೆಂಪಾದ, ಅಂಗೈಯನ್ನು ನನ್ನ ಮುಂದೆ ಚಾಚಿದಳು.

ನನ್ನ ಮೈತುಂಬಾ ಮಲ್ಲಿಗೆ ಅರಳಿತು. ಶ್ರೀಕಾಂತನತ್ತ ಲಜ್ಜೆಯಿಂದ

ಕಳ್ಳನೋಟವೊಂದನ್ನು ಬೀರಿ, ತೀರ ಸಹಜವಾಗಿ ಎನ್ನುವಂತೆ (ಶ್ರೀಕಾಂತನ ಹುಡುಗಿಯರೊಡನೆಯ ವರ್ತನದಲ್ಲಿ ಇಂಥದೇ ಸರಳತೆ, ಸಹಜತೆ ಇದ್ದಿತಷ್ಟೆ!) ಕಾಮಿನಿಯ ಕೈಯನ್ನು ನನ್ನ ಅಂಗೈಯಲ್ಲಿ ಹಿಡಿದೆ, (ಮನಸ್ಸಿನಲ್ಲಿಯೇ 'ಸುಮುಹೂರ್ತೇ ಸಾವಧಾನ' ಎಂದೆ !)

"ನಿನ್ನ ಆಯುಷ್ಯ ಸಾಕಷ್ಟು ದೀರ್ಘವಿದೆ." ನಾನೆಂದೆ.

"ಮುದುಕಿಯಾಗುವತನಕ ಇರುವದೇ. ಅಶುಭ ಮಾತು !"

"ನಿನ್ನ ಧನರೇಷೆ ನಡುವೆ ಹರಿದಿದೆ. ಇದರರ್ಥ...."

"ಇವಳ ಗಂಡ ಇವಳನ್ನು ಬಿಟ್ಟು ಹೋಗುವ." ಶ್ರೀಕಾಂತ ನಗೆಯಾಡಿದ.

"ನಾನು ಲಗ್ನವನ್ನೇ ಆಗದಿದ್ದರೆ ಎಲ್ಲಿಯ ಗಂಡ ಓಡಿ ಹೋಗುವನು ?" ಕಾಮಿನಿಯ ಮರುಪ್ರಶ್ನೆಯಿಂದ ನಗೆಯ ತೆರೆ ಮೊರೆಯಿತು.

"ಆದರೆ ನಿನ್ನ ಕೈಯಲ್ಲಿ ನಾಲ್ಕೈದು ಮಕ್ಕಳಿವೆ." ನಾನೆಂದೆ.

ನಗೆಯ ತೆರೆ ಹೆದ್ದೆರೆಯಾಯಿತು. ರೋಹಿಣಿಯೂ ಬಿದ್ದು ಬಿದ್ದು ನಕ್ಕಳು....

"ಲಗ್ನವಿಲ್ಲದೇ ಮಕ್ಕಳೇನು?" ಎಂದು ರೋಹಿಣಿ ಕೇಳಿಯೇ ಬಿಟ್ಟಳು.

ಕಾಮಿನಿ ನಾಚಿಕೆಯಿಂದಲೋ ಸಿಟ್ಟಿನಿಂದಲೋ ಕೆಂಪೇರಿದಳು. ಗಕ್ಕನೆ ತನ್ನ ಕೈಯನ್ನು ಕೊಸರಿಕೊಂಡಳು.

"ಇನ್ನೂ ಬಹಳ ಇಂಟರೆಸ್ಟಿಂಗ್ ವಿಷಯಗಳಿವೆಯಲ್ಲ; ಪ್ರೇಮ, ಲಗ್ನ, ಗಂಡ, ವಿದ್ಯೆ, ಸುಖ ಸಾಫಲ್ಯ...." ಶ್ರೀಕಾಂತ ಕಾಮಿನಿಯನ್ನುದ್ದೇಶಿಸಿ ನುಡಿದ.

"ಅದೇನೂ ಬೇಡ ! ನಾಲ್ಕೈದು ಮಕ್ಕಳಿಂದ ಮೇಲೆ ಭವಿಷ್ಯ ತಿಳಿದ ಹಾಗಾಯಿತು." ಕಾಮಿನಿ ನಿರುತ್ಸಾಹದಿಂದ ನುಡಿದಳು.

ಎಲ್ಲರೂ ಖೊಳ್ಳೆಂದು ನಕ್ಕರು.

*

ಸಿರ್ಸಿಯನ್ನು ಮುಟ್ಟಿದಾಗ ೧೨॥-೧ ಗಂಟೆಯಾಗಿತ್ತು.

ನನ್ನ ಮನಸ್ಸಿನಲ್ಲಿ ಕಾತರತೆ ತುಂಬಿಕೊಂಡಿತು. ಯಾಕಂದರೆ ಈ ಮಂಡಳಿಯ ವ್ಯವಸ್ಥೆ ನಮ್ಮ ಮನೆಯಲ್ಲಿಯೇ ಮಾಡಬೇಕಾಗಿತ್ತು. ನಮ್ಮ ಮನೆಯ ಬಗ್ಗೆ, ನಮ್ಮ ಮನೆಯಲ್ಲಿಯ ಅವ್ಯವಸ್ಥೆಯ ಬಗ್ಗೆ ವೈಷ್ಣವ ಬ್ರಾಹ್ಮಣರ ಕರ್ಮಠ ಸಂಸ್ಕೃತಿಯ ಬಗ್ಗೆ, ಸ್ತ್ರೀಯರ ಸಂಕುಚಿತ ದೃಷ್ಟಿಯ ಬಗ್ಗೆ, ಅವರ ಅರಿವೆ-ವರ್ತನಗಳ ಬಗ್ಗೆ ನನ್ನಲ್ಲಿ ಮೊದಲಿನಿಂದಲು ಒಂದು ಬಗೆಯ ತೀವ್ರ ತಿರಸ್ಕಾರವಿತ್ತು. ಆ ತಿರಸ್ಕಾರ ಈಗ ದಶಗುಣಿತವಾಯಿತು. ಕಾರಣ : ಶ್ರೀಕಾಂತ ನಮ್ಮ ಮನೆಗೆ ಮೊದಲಸಲ ಬರುತ್ತಿದ್ದಾನೆಂದಲ್ಲ; ಶ್ರೀಕಾಂತನಿಗೆ ನಮ್ಮ ಮನೆಯ ಪರಿಸ್ಥಿತಿಯನ್ನು ಎಂದೋ

ವಿವರಿಸಿ ಹೇಳಿದ್ದೆ.... ಆದರೆ ಕಾಮಿನಿ ನಮ್ಮ ಮನೆಗೆ ಬರುತ್ತಿದ್ದಾಳೆಂದು! "ಕಾಮಿನಿ ಬಂದರೇನಾಯಿತು, ಅವಳನ್ನು ಲಗ್ನವಾಗುವದು ಅಷ್ಟರಲ್ಲಿಯೇ ಇದೆ,' ಎಂದು ನನ್ನನ್ನು ನಾನೇ ಸಂತೈಸಿಕೊಂಡರೂ, ಅಸ್ವಸ್ಥತೆ ಹೋಗಲಿಲ್ಲ–ದಶ ಗುಣಿತವಾಯಿತು.

– ಆದುದರಿಂದ ನಾವೆಲ್ಲ ನಮ್ಮ ಮನೆಯತ್ತ ಸಾಗಿದಾಗ ಒಂದು ಮಾತು ಕೂಡ ನನ್ನ ಬಾಯಿಂದ ಹೊರಬರಲಿಲ್ಲ. ಶ್ರೀಕಾಂತನೇ ಮಾತನಾಡುತ್ತಿದ್ದನೆಂದು ಒಳ್ಳೆಯದಾಯಿತು. ರೋಹಿಣಿಗೆ ಆತ ಸಿರ್ಸಿಯ ಇತಿಹಾಸ–ಭೂಗೋಲಗಳನ್ನು ವಿವರಿಸುತ್ತಿದ್ದ. ನಾನು ನನ್ನ ತಲೆಯ ಗದ್ದಲದೊಳಗಿಂದ ಕಾಮಿನಿಯ ಮಾಟಾದ ಮೂರ್ತಿಯತ್ತ, ಕೊಂಚ ಕೆದರಿದ ತಲೆಗೂದಲಿನ ಮೂಲಕ ಹೆಚ್ಚು ಆಕರ್ಷಕವಾಗಿ ಕಾಣಿಸುವ ಅವಳ ಮುಖದತ್ತ, ಆಗಾಗ್ಗೆ ಅಸ್ಪಷ್ಟ ನಿರಾಶೆಯ ದೃಷ್ಟಿಯನ್ನು ಕಳ್ಳತನದಿಂದ ಬೀರುತ್ತ ಸಾಗಿದ್ದೆ.... ಸತ್ಯೇಂದ್ರ ತನ್ನ ಮನೆಗೆ ಹೋಗಿ ನಂತರ ಬರುತ್ತೇನೆಂದು ಹೇಳಿ ಮಾರ್ಕೆಟ್ಟಿನ ಬಲಬದಿಯ ರಸ್ತೆಯಿಂದ ತಮ್ಮ ಮನೆಗೆ ಹೋದ–

ನಮ್ಮ ಮನೆಯವರಿಗೆ ನಾನು ಮೊದಲೇ ಪತ್ರ ಬರೆದು ತಿಳಿಸಿದ್ದರಿಂದ ಮನೆಯ ಅಟ್ಟವನ್ನು ನಮ್ಮ ಸಲುವಾಗಿ ಸಜ್ಜುಗೊಳಿಸಿ ಇಟ್ಟಿದ್ದರು. ಅಟ್ಟದ ಮೇಲೆ ಒಂದು ಪ್ರತ್ಯೇಕ ಕೋಣೆಯಲ್ಲಿ ಕಾಮಿನಿ–ರೋಹಿಣಿಯರ ವ್ಯವಸ್ಥೆ ಮಾಡಲ್ಪಟ್ಟಿತು. ಆ ಕೋಣೆಯ ಬದಿಯ ಹಾಲಿನಲ್ಲಿ ನಮ್ಮ ಮುಖ್ಯ ಛಾವಣಿ.

"ಒಳ್ಳೆಯ ಮನೆ ! ಎಷ್ಟು ದೊಡ್ಡದಿದೆಯಲ್ಲ !" ಎಂದು ಕಾಮಿನಿ ನುಡಿದ ನಂತರವೇ ನನ್ನ ಮನಸ್ಸಿಗೆ ಸಮಾಧಾನ !

ಮನೆಗೆ ಗೆಳೆಯ–ಗೆಳತಿಯರನ್ನು ಕರೆದು ತರುವ ಸಾಹಸ ಮಾಡಿದ್ದರಿಂದ ನನ್ನಲ್ಲಿ ಹೀರೋನ ಉತ್ಸಾಹ ಬಂದಿತ್ತು. ನಮ್ಮ ಮನೆಯಲ್ಲಿ ಇಂಥ ಘಟನೆ ಸಂಭವಿಸುತ್ತಿರುವದು ಇದೇ ಮೊದಲು–ನನ್ನ ಜೀವನದಲ್ಲಿ ! (ಹಿಂದೆ ನಮ್ಮ ಅಜ್ಜ ಮಾತ್ರ ತನ್ನ ಕಾಲಕಿರ್ದಿಯಲ್ಲಿ ಒಂದು ಸಲ ಒಂದು ಹೆಣ್ಣನ್ನು ತಂದು ಇದೇ ಅಟ್ಟದ ಮೇಲೆ ಇಟ್ಟುಕೊಂಡಿದ್ದನಂತೆ !).... ಮನೆಯಲ್ಲಿ ತಾಯಿ, ಅತ್ತೆ ಮುಂತಾದವರು ನನ್ನನ್ನು ಸಂಶಯಯುಕ್ತ ದೃಷ್ಟಿಯಿಂದಲೇ ನೋಡತೊಡಗಿದರು....

ಶ್ರೀಕಾಂತ ನಮ್ಮ ತಂದೆಯವರ ಮೇಲೆ, ಆನಂತರ ತಾಯಿಯ ಮೇಲೆ ಕೂಡ, ಮೊದಲನೆಯ ಸಂದರ್ಶನದಲ್ಲಿಯೇ ಒಳ್ಳೆಯ ಪ್ರಭಾವ ಬೀರಿದ. ಶ್ರೀಕಾಂತನ ಬಿಚ್ಚು ಮನಸ್ಸಿನ ವರ್ತನ, ಅವನ ಮಾತಿನ ವೈಖರಿ, ಅವನ ಸಹಾನುಭೂತಿಯ ಪ್ರಶ್ನೆಗಳು–ಅವರ ಮನಸ್ಸನ್ನು ಸೂರೆಗೊಂಡವು.

ಕಾಮಿನಿ–ರೋಹಿಣಿಯರಿಗೆ ಮಾತ್ರ ಮನೆಯ ಹಳಬರೊಡನೆ ಔಪಚಾರಿಕ

ನಾಲ್ಕು ಮಾತನಾಡುವದು ಕೂಡ ಸಾಧಿಸಲಿಲ್ಲ. ತಾಯಿ–ಅತ್ತೆಯವರ ಸಂಶಯಯುಕ್ತವಾದ ಸಂಕೋಚದ, ಗಂಟುಮಾರಿಯ ವರ್ತನ ಕಾಮಿನಿ–ರೋಹಿಣಿಯರನ್ನು ಹೆದರಿಸಿರಬೇಕು....

ಊಟವಾದ ಮೇಲೆ ಸತ್ಯೇಂದ್ರ ಬಂದ. ಅವನು ಬಂದ ನಂತರ ಅಟ್ಟದ ಮೇಲೆ ನಗುವಿನ ವಾತಾವರಣ ಹಬ್ಬಿತು. ನಾನು ಚಹಾ ಹೇಳಲು ಕೆಳಗೆ ಹೋದಾಗ ನಮ್ಮ ಅತ್ತೆ : "ಎಂಥ ನಿರ್ಲಜ್ಜ ಹುಡುಗಿಯರಪ್ಪ ! ಹುಡುಗರೊಡನೆ ಹರಟೆಯೇನು ! ಫಿದಿ, ಫಿದಿ ನಗುವದೇನು ! .... ಕಾಲೇಜು ತುಂಬ ಇಂಥಾವೇ ಹುಡುಗಿಯರೇನು?.... ಏನು ಕಾಲ ಬಂತವ್ವ !" ಎಂದಳು. ನಾನು ನಗುತ್ತ, "ಹೊಸ ಯುಗ ಸುರುವಾಗಿದೆ, ಅತ್ತೀ. ಸ್ವಾತಂತ್ರ್ಯ ಯುಗ ! – ಮತ್ತು ಆ ಹುಡುಗಿಯರು ನನ್ನ ತಂಗಿಯಂತೆ ತಿಳಿಯಿತೇನು?" ಎಂದು ಗಂಭೀರವಾಗಿ ನುಡಿದೆ.

ಸಂಜೆಗೆ ನಾವೆಲ್ಲ ಕೂಡಿ ಊರಲ್ಲಿ ತಿರುಗಾಡಲು ಹೋದಾಗ ಒಂದು ದ್ವೀಪವನ್ನೇ ಗೆದೆಯಲು ಹೊರಟಂತೆ, ವೀರ್ಯ–ಶೌರ್ಯಗಳಿಂದ ಉಬ್ಬಿತ್ತು ಹೃದಯ. ಹಾದಿಯಲ್ಲಿ ಯಾರಾದರೂ ಮುಂಚಿನ ಗೆಳೆಯರು ನನಗೆ ಭೇಟ್ಟಿಯಾದರೆ, ಆನೆಯ ಅಂಬಾರಿಯ ಮೇಲೆ ಕುಳಿತು ಮಾತನಾಡುತ್ತಿದ್ದಂತೆ ಮಾತನಾಡುತ್ತಿದ್ದೆ.... (ಈ 'ನಿರ್ವಿಕಾರ' ಮುಂಬಯಿಯಲ್ಲಿ, ಹುಡುಗೆಯ ಕೈಯಲ್ಲಿ ಕೈ ಹಾಕಿ, ಅವಳ ಕಂಕುಳದಲ್ಲಿ ಕೈಯಿಟ್ಟು ನಗಿಸುತ್ತಾ ನಾವು ಸಾಗಿದರೂ, ಇಂಥ ಸಾಹಸೀ ಭಾವನೆಯ ನಮ್ಮ ನಮ್ಮ ಮನಸ್ಸನ್ನು ಸೋಂಕುವದಿಲ್ಲ–)

* * *

ಮಾರನೆಯ ದಿನ ಸಂಜೆ ನಾಲ್ಕು ಗಂಟೆಗೆ ನಾವು ಜೋಗ ಮುಟ್ಟಿದೆವು. ಶ್ರೀಕಾಂತನ ಉತ್ಸಾಹ, ಆನಂದಗಳು ಮೇರೆವರೆದವು. "ಪ್ರಕೃತಿಯ ಹೃದಯದಲ್ಲಿ ಎಷ್ಟೊಂದು ಅಗಾಧ ಸೌಂದರ್ಯವಿದೆಯಲ್ಲ!" ಎಂದು ಉದ್ಗಾರತೆಗೆದ....

"ಬೇಕಾದರೆ ಒಂದು ಕವಿತೆ ಬರೆಯಲು ಅಡ್ಡಿಯಿಲ್ಲ...." ನಾನು ಸೂಚಿಸಿದೆ.

"ಮೊದಲು ಅನುಭವ. ಆಮೇಲೆ ಕವಿತೆ. ಕವಿತೆಯೆಂದರೆ ಅನುಭವದ ಗಿಡಕ್ಕೆ ಬಿಡುವ ಹೂವು !" ಶ್ರೀಕಾಂತ ನುಡಿದ.

"Poetry i semotion recollected in tran-quility" ರೋಹಿಣಿ ತನ್ನ ಎಫ್.ವಾಯ್. ಆರ್ಟ್ಸದ ಪಾಂಡಿತ್ಯವನ್ನು ಪ್ರದರ್ಶಿಸಿದಳು.

"ವರ್ಡ್ಸವರ್ಥನ ಕವಿತೆಯಮಟ್ಟಿಗೆ ಅದು ನಿಜ. ಆದರೆ ಒಮ್ಮೊಮ್ಮೆ ಅನುಭವ

ಪಡೆಯುವಾಗಲೇ ಕವಿತೆ ಹೊರಹೊಮ್ಮಬಹುದು : ಮಲ್ಲಿಗೆಯ ಬಳ್ಳಿ ಬೆಳೆಯುತ್ತಲೂ ಇರುತ್ತದೆ–ಹೂವು ಬಿಡುತ್ತಲೂ ಇರುತ್ತದೆ.... ತತ್ವ ಬೇಡ ಈಗ ವರ್ಡ್ಸ್‌ವರ್ಥನ The cataract haunted me like a passion' ಎಂಬುದರ ಅರ್ಥ ನನಗೆ ಈಗ ಸ್ಪಷ್ಟವಾಗುತ್ತಿದೆ...."

"ನಾನು ಎಣಿಸಿದಷ್ಟು ದೊಡ್ಡದಿಲ್ಲ ಧಬಧಬೆ," ಕಾಮಿನಿ ಸರಳವಾಗಿ ನುಡಿದಳು.

"ಅದರ ಭವ್ಯತೆ ಇಲ್ಲಿಂದ ಕಾಣುವುದಿಲ್ಲ; ಕೆಳಗೆ ಧಬೆಧಬೆಯ ಅಡಿಗೆ ಹೋಗಿ ನೋಡಬೇಕು." ನಾನೆಂದೆ,

"ಅಲ್ಲಿ ಹೋಗಲು ಬರುವದೇ?" ಕಾಮಿನಿಯ ಕಣ್ಣುಗಳಲ್ಲಿ ಕೂತೂಹಲ, ಸಾಹಸ ಕುಣಿದಾಡಿದವು.

"ಹೌದು, ನಾಳೆ ಮುಂಜಾನೆ ಹೋಗೋಣಲ್ಲ...."

ಸತ್ಯೇಂದ್ರ ರೋಹಿಣಿಯನ್ನು ಕರೆದುಕೊಂಡು, ಮತ್ತೊಂದು ನವೀನ ಕೋನದಿಂದ ಜಲಪಾತವನ್ನು ತೋರಿಸಲು, ಮೈಸೂರ ಬಂಗಲೆಯ ಎಡಬದಿಗೆ ಹೋದ.

ಶ್ರೀಕಾಂತ ಅರಿವೆ ಬದಲಾಯಿಸಲು ಬಂಗಲೆಯಲ್ಲಿ ಸೇರಿದ.

ನಾನು, ಕಾಮಿನಿ–ಮತ್ತು ಜೋಗದ ಜಲಪಾತ !

ಜೋಗದ ಭಯಂಕರ ಶಕ್ತಿ ಧುಮುಕಿತ್ತು – ನನ್ನ ಅಂತರಂಗದಲ್ಲಿ !

"ಎಡಕ್ಕೆ ಇದ್ದದ್ದು ರಾಜಾ, ಅದರ ಬಲಕ್ಕೆ ರೋರರ್–ಅಬ್ಬರದ ತಡಸಲು; ಅದರ ಬಲಕ್ಕೆ ರಾಕೆಟ್–ಬಾಣದ ತಡಸಲು, ಕೊನೆಯದಾಗಿ ಲೇಡಿ–ರಾಣೀ ತಡಸಲು ನಿನಗೆ ಯಾವುದು ಸೇರಿತು ಕಾಮಿನಿ?" ನಾನು ಕೇಳಿದೆ.

"ನನಗಂತೂ ಎಲ್ಲವೂ ಸೇರಿದವು ! ಒಂದೊಂದರಲ್ಲಿ ಒಂದೊಂದು ಬಗೆಯ ಸೌಂದರ್ಯವಿದೆಯಷ್ಟೇ ! ನಿನಗೆ ?"

"ನಾನು ಸಣ್ಣವನಿದ್ದಾಗ ಬಾಣದ ತಡಸಲು ಬಹಳ ಸೇರಿತ್ತು....

ಈಗ ರಾಣೀ ತಡಸಲಿನ ಸ್ತ್ರೀ ಸೌಂದರ್ಯಕ್ಕೆ ಮಾರುಹೋಗಿದ್ದೇನೆ" ಎಂದು ಕಾಮಿನಿಯತ್ತ ತೀಕ್ಷ್ಣವಾಗಿ ನೋಡಿದೆ.

ಕಾಮಿನಿ ಆ ನೋಟಕ್ಕೆ ಉತ್ತರವಾಗಿ ಮುಗುಳುನಗೆ ನಕ್ಕಳು.

ಮೋನಾಲೀಸಾಳ ನಗೆ !

"ಕೆಲವು ವರ್ಷಗಳ ಹಿಂದೆ ಪ್ರೇಮಭಂಗವಾದ ಒಬ್ಬ ತರುಣ ಆ ರಾಜಾ ತಡಸಲಿನಲ್ಲಿ ಜಿಗಿದನಂತೆ...." ನಾನು ಹೇಳತೊಡಗಿದೆ.

"ವಾಹ್ ! ಎಷ್ಟೊಂದು ಸುಂದರವಾದ ಮೃತ್ಯು–ಅಲ್ಲವೇ?....

ನೀನೂ ಅಲ್ಲಿಯೇ ಜಿಗಿಯುವಿಯೇನು ಪ್ರೇಮಭಂಗವಾದರೆ?" ಕಾಮಿನಿಯ ಪ್ರಶ್ನೆ–ಪ್ರಶ್ನೆಯ ಜೊತೆಗೆ ನಗುವಿನ ಒಗಟು ಬೇರೆ!

ನಾನು ಹುಚ್ಚು ನಗೆ ನಕ್ಕೆ. "ನಿನಗೆ ಆ ಮೃತ್ಯು ಸುಂದರವಾಗಿ ತೋರಿದೆ–ನನಗಲ್ಲ?" ನಾನೆಂದೆ : "ಕದಾಚಿತ್ ನಿನಗೆ ಪ್ರೇಮಭಂಗವಾದರೆ–?" ನನ್ನ ಹುಚ್ಚು ಪ್ರಶ್ನೆ.

"ನಾನು ನನ್ನ ಪ್ರೇಮಿಯನ್ನೇ ಅಲ್ಲಿ ನೂಕಿಬಿಡುವೆ–" ಎಂದು ಕ್ರೂರ ವಿನೋದದಿಂದ ನಕ್ಕಳು.

"ನಾನು ನಕ್ಕೆ – ಆದರೆ ಆ ಚಿಕ್ಕ ಹುಡುಗಿಯ ಇಂಥ ಕ್ರೂರ ಕಲ್ಪನೆಗೆ ಹೆದರಿದೆ !

ಅವಳ ಇಂಥ ಕಲ್ಪನೆ ಅವಳಲ್ಲಿಯ ಸುಪ್ತ ಶಕ್ತಿಯು, ಸತ್ವದ ಕುರುಹಾಗಿದ್ದಿರಬಹುದಷ್ಟೆ !

* * *

ಆ ದಿನ ಸಂಜೆ ನಾವೆಲ್ಲ ನಗುತ್ತ ಕಲಿಯುತ್ತ ಅಲ್ಲಿಯೇ ಸುತ್ತು ಮುತ್ತು ಸುಳಿದಾಡಿದೆವು. ಆದಷ್ಟು ಪ್ರಯತ್ನ ಮಾಡಿ, ಸಹಜವಾಗಿ ಎನ್ನುವಂತೆ, ನಾನು ಕಾಮಿನಿಯ ಬದಿಯನ್ನು ಸಾಧಿಸಿ; ಅವಳೊಡನೆ ಮಾತನಾಡುತ್ತಿದ್ದೆ. ಆ ಮಾತುಗಳೆಲ್ಲ ಈಗ ನೆನಪಿಲ್ಲದಿದ್ದರೂ ಮಾತನಾಡುವಾಗ ಹೃದಯ ಉಕ್ಕಿಬರುವ ಆ ಅನುಭವ ಮಾತ್ರ ಇನ್ನೂ ನೆನಪಿದೆ ! ಅವಳ ಪ್ರತಿಯೊಂದು ಹಾವ–ಭಾವದಲ್ಲಿ ಅದೇನೋ ಅಗಾಧ ಮೋಡಿ ಇತ್ತು : ('ನಿಂತ ನಿಲುವೆಲ್ಲವೂ ತ್ರಿಭಂಗಿಯೇ!') ಅವಳ ತುಟಿಗಳ ಸುಕುಮಾರ ಚಲನವಲನ, ಅವಳ ಕೈಗಳ ಸ್ವೈರ ಹಾವ ಭಾವ, ಅವಳ ತುಂಬುತ್ತಿದ್ದ ಎದೆಯ ಮೇಲಿನ ಸೀರೆಯೊಡನೆ ನಡೆಸಿದ ಗಾಳಿಯ ಹಾಗೂ ಅವಳ ಕೈ ಬೆರಳುಗಳ ಅವಿರತ ಆಟ–ಇವುಗಳತ್ತ ನನ್ನ ಲಕ್ಷ್ಯವಿತ್ತು ! ಹೋಗ ಹೋಗುತ್ತ ತೀರ ಸಹಜವಾಗಿ ಎನ್ನುವಂತೆ ಅವಳ ತೋಳಿಗೆ ನನ್ನ ತೋಳನ್ನು ತಾಕಿಸಿ, ಅವಳ ಮೃದುತ್ವದ ಅನುಭವ ಪಡೆಯುವ ಸಾಹಸವೇ ನನ್ನ ಗುರಿ ಆಗ.... ಒಂದೆರಡು ಸಲ ಹಾಗೆ ಮಾಡುವಾಗ ನನ್ನ ಮೊಣಕೈಗೆ ಅವಳ ಸ್ತನಗಳ ಕಠಿಣ ಮೃದುತ್ವದ ಪರಿಚಯವಾಯಿತು–ಮೈ ಪುಲಕಿತವಾಯಿತು... ನನ್ನ ಮನಸ್ಸು ಆಗ ಸಂಧ್ಯಾಕಾಲದ ಗಿಡಗಳ ಎಲೆಗಳಂತೆ, ಅದೃಷ್ಟ ಗಾಳಿಯ ಸೆಳೆತಕ್ಕೆ ಸಿಕ್ಕು ಅಲೆದಾಡುತ್ತಿತ್ತು. ಹೊರಗೆ ಮಾತ್ರ ನಾನು ಸಂಭಾವಿತ ! ಶ್ರೀಕಾಂತನ ರಮ್ಯ ಕಲ್ಪನೆಗಳನ್ನೂ ಉಚ್ಚ ವಿಚಾರಗಳನ್ನೂ,

ಸತ್ಯೇಂದ್ರನ ವಿನೋದಗಳನ್ನೂ ಕೇಳಿ ಮೆಚ್ಚುವ, ನಗುವ ಸಂಭಾವಿತ !

ರೋಹಿಣಿಗೆ ಮಾತ್ರ ತನ್ನ 'ಗುರಿ'ಯನ್ನು ಸಾಧಿಸುವದರಲ್ಲಿ ಒಳ ಹೊರಗಿಲ್ಲ! ಅವಳದು ನೇರವಾದ ದಾರಿ, ಸರಳವಾದ ಸಾಧನೆ ! ತನ್ನ ಹೃದಯವನ್ನು ಅಂಗೈ ಮೇಲಿಟ್ಟು ತೋರಿಸುವ ಅಸಭ್ಯತೆ ಆತುರತೆ ಅವಳದು.... ಅವಳ ನಡತೆ ನನಗೆ ಎಳ್ಳಷ್ಟೂ ಸೇರಲಿಲ್ಲ : ಅವಳು ಶ್ರೀಕಾಂತನಿಗೆ ಮೇಲಿಂದ ಮೇಲೆ ಪ್ರಶ್ನೆ ಕೇಳುವ ಹಾಯಸ್ಕೂಲು ಹುಡುಗಿಯರ ರೀತಿ, 'ಅದು ನೋಡು ಎಷ್ಟು ಸುಂದರವಾಗಿದೆ, ಇದು ನೋಡು ಎಷ್ಟು ಅಗಾಧವಾಗಿದೆ,' ಎಂದು ಅವನ ಮೈಗೆ ಅಂಟಿ ಹೇಳುವ ಅವಳ ಅನ್ಯೋನ್ಯವಾದ ರೀತಿ ನನ್ನಲ್ಲಿ ತುಂಬ ಬೇಸರವನ್ನುಂಟುಮಾಡಿದವು. ರೋಹಿಣಿ ಕಾಣಿಸಲಿಕ್ಕೆ, ಅತ್ಯಂತ ಸುಂದರಳಿಲ್ಲದಿದ್ದರೂ, ನೆಟ್ಟಗಿದ್ದಳು : ತೆಳುವಾಗಿ ಎತ್ತರವಾಗಿ ಬಳಕುವ ಬಿಳಿ ದೇಹ ಅವಳದು. (ಕಾಮಿನಿ ಅವಳೆದುರಿಗೆ ಕೊಂಚ ಗಿಡ್ಡ, ಕೊಂಚ ಕಪ್ಪು, ಕೊಂಚ ಲಠ್ಠವಾಗಿ ತೋರುತ್ತಿದ್ದಳು.) ರೋಹಿಣಿಯಲ್ಲಿ ಒಂದು ಬಗೆಯ ಆಕರ್ಷಣವಿದ್ದರೂ, ಅವಳ ಬಿಚ್ಚು ನಡತೆಯ ಮೂಲಕ ಆ ಆಕರ್ಷಣೆಯಲ್ಲಿ ನ್ಯೂನತೆ ಬಂದಿತು. ಶ್ರೀಕಾಂತನ ಬೆನ್ನು ಹತ್ತಿದ ಹುಡುಗಿ ಎಂದು ಅವಳ ಮಾತು ನಡತೆಯ ಮೇಲಿಂದ ಯಾವ ಬಾಲಕನೂ ಹೇಳಬಹುದಿತ್ತು... ಆದರೆ ಶ್ರೀಕಾಂತ ಅವಳೊಡನೆ 'ಭ್ರಾತೃ' ಭಾವದಿಂದಲೇ ವರ್ತಿಸುತ್ತಿದ್ದ. ಮುಂದೆ ಒಮ್ಮೆ ಶ್ರೀಕಾಂತನಿಗೆ (ಅವನಿಗೆ ಟೀ. ಬಿ. ಯಾದಾಗ) ರೋಹಿಣಿಯ ಬಗ್ಗೆ ಪ್ರಶ್ನಿಸಿದಾಗ, ಆತ ಹೀಗೆ ಹೇಳಿದ್ದ :

"ಯಾಕೋ ಏನೋ ನನಗೆ ಅವಳು ಸೇರುತ್ತಾಳೆ. ಆದರೆ ಈ 'ಸೇರುವಿಕೆ'ಯನ್ನು ಮೀರಿ ನನ್ನ ಭಾವನೆಗಳು ಎಂದೂ ಬೆಳೆಯಲಿಲ್ಲ– ಬೆಳೆಯಲಾರವು.... ರೋಹಿಣಿಯ ಗುಣಗಳು ಕಾಮಿನಿಯಲ್ಲಿದ್ದರೆ ಎಷ್ಟೊಂದು ಚೆನ್ನಾಗುತ್ತಿತ್ತು....! ರೋಹಿಣಿ ಮೂಲತಃ ನಿರುಗಸ ಮನಸ್ಸಿನವಳು, ಸ್ತ್ರೀ–ಸಹಜ ಹಂಬಲುಗಳುಳ್ಳವಳು. ಆದುದರಿಂದಲೇ ಅವಳಲ್ಲಿ ಯಾವ ತರದ ಯುಕ್ತಿ–ಕುಯುಕ್ತಿ (tactics)ಗಳಿಲ್ಲ : ಆದುದರಿಂದಲೇ ಅವಳಲ್ಲಿ ಯಾವ ತರದ ಮೂಢ ಹುಡುಗಿಯಂತೆ ತೋರಿರಲು ಸಾಕು! ಅವಳಲ್ಲಿ ತೋರಿಕೆಗೆ ತುಂಬ ಜೀವನೋತ್ಸಾಹವಿದೆ : ಆದರೆ ಅದು, ಗಿಡದ ಆಧಾರ ಬಯಸುವ ಬಳ್ಳಿಯ ಜೀವನೋತ್ಸಾಹ! – ಅವಳೂ ಈಗಲೂ ನನ್ನನ್ನು ನೋಡಲು ಆಗಾಗ್ಗೆ ಬರುತ್ತಾಳೆ. ನೀನು ಲಗ್ನವಾಗುವದು ನೆಟ್ಟಗೆ ಎಂದು ಅವಳಿಗೆ ನನ್ನ ಉಪದೇಶ ಅವಿರತ ಸಾಗಿದೆ...."

ನನ್ನಲ್ಲಿ ಮಾತ್ರ ಅವಳ ಬಗ್ಗೆ ಮೊದಲಿನಿಂದಲು ತಿರಸ್ಕಾರ, ಅಸೂಯೆ ಆಗ ! ಶ್ರೀಕಾಂತನನ್ನು ನನ್ನಿಂದ ದೂರ ಒಯ್ಯುತ್ತಿದ್ದಾಳೆ, ಒಯ್ಯಲು ಶತಪ್ರಯತ್ನ ನಡೆಸಿದ್ದಾಳೆ ಎಂಬ ಭಾವನೆ !

ಅಯ್ಯೋ – ನನ್ನನ್ನು ಈ ರೀತಿಯಾಗಿ ಯಾರಾದರೂ ಪ್ರೀತಿಸಿದ್ದರೆ – ತೋಳ್ತೆರದು 'ಈಕೋ. ನನ್ನನ್ನು ತೆಗೆದುಕೋ.' ಎಂದಿದ್ದರೆ.... ಯಾರಾದರೂ ಅಲ್ಲ–ಕಾಮಿನಿಯೇ ಹಾಗೆ ಬಿಚ್ಚು ಹೃದಯದಿಂದ, ಶುದ್ಧ ಹೃದಯದಿಂದ 'ಸ್ವೀಕರಿಸು' ಎಂದಿದ್ದರೆ....

ಶಶಿಕಲಾ ನಾಯಕಳಲ್ಲಿ ಈ ಬಗೆಯಾದ ಭಾವ ಇತ್ತು–ಆದರೆ....

* * *

ಮಾರನೆಯ ದಿನದ ಮುಂಜಾವು, ಹಿರಿ ಮುಂಜಾವು !

ಮಹಾ ಪ್ರಾತಃಕಾಲ !

ಇಡಿಯ ರಾತ್ರಿ ಸುಪ್ತ ಕಿವಿಯಲ್ಲಿ ಮರುದನಿಗೊಳ್ಳುತ್ತಿದ್ದ ಜೋಗೊ ಸಪ್ಪಳ, ನಾವು ಎದ್ದೊಡನೆ, ಹೊರಹೊಮ್ಮಿತು–ಜಲಪಾತದಂತೆ....

ಸೂರ್ಯ ಉದಯಿಸಿದ, ದೇವರು ಕಣ್ಣು ತೆರೆದಂತೆ, ಪ್ರಕೃತಿಯ ನಗ್ನ ಸೌಂದರ್ಯವನ್ನು ಮತ್ತನಾಗಿ ಸವಿಯಲು.... ಪ್ರಕೃತಿ ಪುಲಕಿತಳಾಗಿ ಚೈತನ್ಯ ಸೂಸುತ್ತ ಜೀವನವನ್ನು ಎಚ್ಚರಿಸಿದಳು.

ಶ್ರೀಕಾಂತ ಎದ್ದೊಡನೆ ನಮ್ಮ ಕಿವಿಯಲ್ಲಿ ಪಿಸುನುಡಿದ : "ನಿನ್ನೆ ರಾತ್ರಿ ಧಬಧಬೆಯನ್ನು ನೋಡಲು ಎರಡು ಸಲ ಎದ್ದಿದ್ದೆ. ಆಗ ನಾನು ಕಂಡದ್ದೇನು? – ಪ್ರಕೃತಿಯೊಡನೆ ದೇವ ಸುರತವಾಡುತ್ತಿದ್ದ.... !" ನಾವು ನಗಲಿಲ್ಲ. ಯಾಕಂದರೆ ಅವನ ಗಂಭೀರ ಮಾತಿನಲ್ಲಿ ಅಶ್ಲೀಲದ ಛಾಯೆ ಇದ್ದಿಲ್ಲ.

ನಾವು ಚಹಾ ಮುಗಿಸಿದೊಡನೆ ನಮ್ಮ ಆ ದಿನದ ಕಾರ್ಯಕ್ರಮಕ್ಕೆ ಮೊದಲಾಯಿತು. ಜೋಗದ ಅಡಿಗೆ ಹೋಗಲು ಉದ್ಯುಕ್ತರಾದೆವು.

ನಾಗರಹಾವಿನಂತಹ ಆ ಕಾಲುದಾರಿಯಿಂದ ಕೆಳಗೆ ಇಳಿಯುವಾಗ ನಡೆಯುವುದಕ್ಕಿಂತ ಓಡುವದೇ ಹೆಚ್ಚಾಯಿತು. ಶ್ರೀಕಾಂತ ಹಿರಿ ಹುಮ್ಮಸಿನಿಂದ ನಮ್ಮೆಲ್ಲರಿಗಿಂತ ಮುಂದೆ ಓಡಿದ. ಎಲ್ಲರಿಗಿಂತ ಹಿಂದುಳಿದ ರೋಹಿಣಿಯನ್ನು ಸಾವಕಾಶವಾಗಿ ಕರೆ ತರಲು ಸತ್ಯೇಂದ್ರ ಹಿಂದಾದ. ಮಧ್ಯದಲ್ಲಿ ನಾನು ಹಾಗೂ ನನಗಿಂತ ಜೋರಿನಿಂದ, ಉತ್ಸಾಹದಿಂದ ಓಡುತ್ತಿದ್ದ ಕಾಮಿನಿ.

"ಕಾಮಿನಿ, ಎಲ್ಲಿಯಾದರೂ ಬಿದ್ದು–ಗಿದ್ದೀ, ಪೆಟ್ಟು ತಗಲೀತು...." ಎಂದು ಎಚ್ಚರಿಸಿದೆ.

"ಬಿದ್ದರೆ ಹಿಂದೆ ನೀನಿದ್ದೀಯಲ್ಲ ಎತ್ತಿಕೊಂಡು ಹೋಗಲು," ಎಂದು ಕಾಮಿನಿ ನಕ್ಕಳು.

ಇದರಲ್ಲಿ ಏನಾದರೂ ಗೂಢವಿರಬಹುದೇ ಎಂದು ನಾನು ಯೋಚಿಸಿದೆ.

ಜೋಗದ ಪ್ರಚಂಡತೆ, ಅದರ ಭೀಕರತೆ ನಿಮಿಷ ನಿಮಿಷಕ್ಕೆ ನಮ್ಮ ಕಣ್ಣು ಮುಂದೆಯೇ ಬೆಳೆಯುತ್ತಿದ್ದವು. ಜೋಗದ ಅವಿರತ, ಅನಂತ ಧೋ ಧೋ ಧೋ ಸಪ್ಪಳವು ಸರ್ವ ಪ್ರಪಂಚವನ್ನೇ ತುಂಬಿತು. ನಮ್ಮ ತನುಮನ ಆತ್ಮಗಳಲ್ಲಿ ಆ ಧೋಂಕಾರದ ಶಂಖನಾದ ದುಮುದುಮಿಸ ತೊಡಗಿತು.

"ಕಾಮಿನಿ, ಸಾವಕಾಶ ! ಆ ಕಲ್ಲುಗಳಲ್ಲಿ ಜಾರಿಕೆ ಬಹಳ. ತೀರ ಕಾಳಜಿಯಿಂದ ಹೋಗಬೇಕು," ನಾನು ಕೂಗಿ ಹೇಳಿದೆ.

"ಜಾರುವಂತಹ ಈ ಕಲ್ಲುಗಳ ಮೇಲೆ ಜೋರಿನಿಂದ ಹೋಗುವದರಲ್ಲಿಯೇ ಮಜಾ ಇದೆ !" ಕಾಮಿನಿಯ ಉತ್ತರದ ಜೊತೆಗೆ ತೀಕ್ಷ್ಣವಾದ ಕಂಚಿನಂಥ ನಗೆ– "ನೋಡು, ಶ್ರೀಕಾಂತದಾದಾ ಎಷ್ಟು ದೂರ ಹೋಗಿದ್ದಾನೆ?"

ಶ್ರೀಕಾಂತ ಬೀಳುತ್ತ ಏಳುತ್ತ ಯಾವುದರ ಪರಿವೆಯಿಲ್ಲದವನಂತೆ ಧಬಧಬೆಯ ತುಷಾರಗಳ ಮಳೆಯಲ್ಲಿ ಸಂಪೂರ್ಣವಾಗಿ ತೋಯಿಸಿಕೊಂಡು ಮುಂದೆ, ಮುಂದೆ ನಡೆದಿದ್ದ – ಒಬ್ಬನೇ !

ಸತ್ಯೇಂದ್ರ –ರೋಹಿಣಿಯರು ಇನ್ನೂ ಬಹಳ ಹಿಂದೆ ಇದ್ದರು–ಬಹಳ ಹಿಂದೆ...

ನಾನು, ಕಾಮಿನಿ ನಡುವೆ !

ಕಾಮಿನಿಯ ಹುಚ್ಚು ಹುಮ್ಮಸು ಅಗಾಧವಾಗಿತ್ತು. ನನ್ನ ಹೃದಯ ತಡೆಯಿಲ್ಲದೆ ಬಡಿದುಕೊಳ್ಳುತ್ತಿತ್ತು.

ಶ್ರೀಕಾಂತ ದೂರ ಒಂದು ಬಂಡೆಗಲ್ಲಿನ ಅಡಿಯಲ್ಲಿಯ ಸಣ್ಣ ಕಲ್ಲಿನ ಮೇಲೆ ನಿಂತು, ತಲ್ಲೀನನಾಗಿ–ಮೇಲಿಂದ ಮೇಲೆ ಮುಖದ ಮೇಲಿನ ಮಳೆಯನ್ನು ಒರೆಸುತ್ತ ಜೋಗದ ದಿವ್ಯತೆಯಲ್ಲಿ ಒಂದಾಗಿದ್ದ.

ತುಷಾರಗಳ ಮಂಜು–ಮಳೆ ಕಂಗೆಡಿಸುತ್ತಿತ್ತು. ತಲೆ ಗಿಮ್ಮೆಂದಿತ್ತು.

ಕಾಮಿನಿ ಜಾರಿದಳು–ನೀರಿನಲ್ಲಿ ಬಿದ್ದಳು. ಹತ್ತು ಅಡಿ ಹಿಂದೆ ಇದ್ದ ನಾನು ಗಕ್ಕನೆ ಹೋಗಿ ಅವಳನ್ನು ಸಾವರಿಸಿ ಹಿಡಿದೆ. ಸಂಪೂರ್ಣವಾಗಿ ಒದ್ದೆಯಾದ ಅವಳ ವಸ್ತ್ರ ಅವಳ ದೇಹಕ್ಕೆ ಅಂಟಿಕೊಂಡಿದ್ದವು–ನನ್ನ ಹೃದಯದಂತೆ ! ಆಗಿನ ನನ್ನ ಅಂತರಂಗದಲ್ಲಿಯ ಧಬಧಬೆ ಜೋಗನ್ನು ಮೀರಿತು ! .... ಅವಳ ಮುಖದ ಮೇಲೆ ಚಲ್ಲಾಪಿಲ್ಲಿಯಾಗಿ ಬಿದ್ದ ಅವಳ ಒದ್ದೆ ಕೂದಲನ್ನು ಹಿಂದೆ

ಸರಿಸುವ ಧೈರ್ಯಮಾಡಿದೆ. ಕಾಮಿನಿ ಲಜ್ಜೆಯಿಂದ, ಸಂಕೋಚದಿಂದ ನಕ್ಕಳು.

"ಆದರೆ ನನಗೆಲ್ಲಿಯೂ ಪೆಟ್ಟು ಹತ್ತಿಲ್ಲ."

"ನಿಜವಾಗಿಯೂ ?" ನನ್ನ ಧ್ವನಿ ನಡುಗುತ್ತಿತ್ತು.

"ಹು...."

"ಕಾಮಿನಿ–"

"ಉಂ?"

"ನನ್ನನ್ನು ಕ್ಷಮಿಸು," ಎಂದವನೆ, ನನ್ನ ಸುಡುತ್ತಿದ್ದ ತೋಳಿನಲ್ಲಿ ಅಂಕಿತವಾದ ಕಾಮಿನಿಯ ದೇಹವನ್ನು ಗಟ್ಟಿಯಾಗಿ ಅಪ್ಪಿದವನೇ ಅವಳ ನಡಗುತ್ತಿದ್ದ ಅಧರದ ಮೇಲೆ ಮುತ್ತನೊತ್ತಿದೆ.

ಕೂಡಲೆ–ಅವಳು ನಗುತ್ತ ನನ್ನನ್ನು ಸರಿಸಿ, ಕಾಮನ ಬಾಣದಂತೆ ಮುಂದೆ ಜಿಗಿದಾಗಲೇ ನನಗೆ ಎಚ್ಚರ.... ಮುಂದೆ ಹೋಗುವ ಶಕ್ತಿಯೇ ಇರಲಿಲ್ಲ ನನ್ನ ಪಾದಗಳಲ್ಲಿ !

ಕಾಮಿನಿಯ ತೀಕ್ಷ್ಣವಾದ ಕಂಚಿನಂಥ ನಗೆ ಜೋಗದ ಧೋಂಕಾರದಲ್ಲಿ ಮುಳುಗಿಹೋಯಿತು.

ನಾನು ಹಿಂದಿರುಗಿ ನೋಡಿದಾಗ, ದೃಷ್ಟಿಪಥದಲ್ಲಿ ಅದೇ ಅವತರಿಸಿದ ಸತ್ಯೇಂದ್ರ–ರೋಹಿಣಿಯರು ಅಲ್ಲಿಯೇ ನಿಂತಿದ್ದರು ನೋಡುತ್ತ–ನಮ್ಮತ್ತ, ಜೋಗದತ್ತ!

ಮುಂದೆ – ದೂರ, ಶ್ರೀಕಾಂತ ನಿಂತಿದ್ದ – ಬಂಡೆಗಲ್ಲಿನ ಆಸರೆಯಲ್ಲಿ, ಏಕಾಕಿ !

ಅವನ ಬೆನ್ನ ಹಿಂದೆ – ಜೋಗದ ಸಾಕ್ಷಿಯಲ್ಲಿ – ಮಹಾಕ್ರಾಂತಿಯಾಗಿತ್ತು

ನಮ್ಮ ಬೆನ್ನ ಹಿಂದೆ, ಸದಸದ್ವಿವೇಕದ ಕಣ್ಣುಗಳಂತೆ, ಸತ್ಯೇಂದ್ರ – ರೋಹಿಣಿಯರು !

ಆ ಕ್ಷಣಕ್ಕೆ – ನನ್ನ ಪ್ರಾಣ ಒಮ್ಮೆಲೆ ಹಾರಿಹೋದರೆ ಎಷ್ಟು ಚೆನ್ನು ಎಂಬ ಭಾವನೆ, ಜೋಗದಲ್ಲಿ ಕಾಣುತ್ತಿದ್ದ ಮಳೆಬಿಲ್ಲಿನಂತೆ, ಹೊಯ್ದಾಡಿತು....ಒಂದು : ಕ್ಷಣಮಾತ್ರ !

ಮನಸ್ಸಿನಲ್ಲಿ ಅಗಾಧ ಭೀತಿ ! ತಿರುಗಣಿಮಡುವು !! ನಾನು ದಿಙ್ಮೂಢನಾಗಿ ಅಲ್ಲಿಯೇ ಆ ಕಲ್ಲಿಗೆ (ಕಾಮಿನಿಯು ಜಾರಿದ ಕಲ್ಲಿಗೆ) ಅಂಟಿಕೊಂಡು ಕೂತಿದ್ದೆ.

ನೀರಿನ ಪ್ರಚಂಡ ಪರ್ವತ ಉರುಳುತ್ತಿತ್ತು ನನ್ನ ಕಣ್ಣೆದುರಿಗೆ : ಅದೇ ನೀರಿನ ತುಂತುರ–ಮಳೆ ಮೈ ಮೇಲೆ : ಅದೇ ನೀರಿನ ಹರಿತ ಕಾಲಡಿಯಲ್ಲಿ –

ಶ್ರೀಕಾಂತ ತಿರುಗಿ ಬರುತ್ತಿದ್ದ – ಕಾಮಿನಿಯೊಡನೆ ಮಾತನಾಡುತ್ತ, ಅವಳ ಕೈ ಹಿಡಿದು ಕರೆದುಕೊಂಡು ಬರುತ್ತಿದ್ದ ....

ನನ್ನ ಭೀತಿಗೆ ಒಂದು ನಿಶ್ಚಿತ ರೂಪು ಬರತೊಡಗಿತು : ಕಾಮಿನಿ ಶ್ರೀಕಾಂತನಿಗೆ ಹೇಳಿದರೆ? .... ಸತ್ಯೇಂದ್ರ ರೋಹಿಣಿಯರು ನನ್ನ ಮೂರ್ಖತನವನ್ನು ನೋಡಿದರೆ? ....

ಶ್ರೀಕಾಂತ ಕೂಗಿ ಹೇಳಿದ ನನಗೆ : "It's tremendous ! ಜೋಗದ ಅಡಿಯಲ್ಲಿ ಕೂತು ತಪಶ್ಚರ್ಯೆ ಮಾಡಿದರೆ ದಿವ್ಯ ದರ್ಶನವಾಗಲಿಕ್ಕೆ ಏನು ತಡ! – ನನಗಂತೂ ಇಲ್ಲಿಂದೇ ಕುಳಿತುಬಿಡೋಣ ಇಡೀಯ ದಿನ ಎಂದೆನಿಸತೊಡಗಿದೆ...."

ಮನಸ್ಸಿನಲ್ಲಿಯ ಭೀತಿ ಸಣ್ಣಾಯಿತು. ಕಾಮಿನಿಯ ಒದ್ದೆಯಾದ ಮುದ್ದು ಮುಖದಲ್ಲಿ ಒಂದು ಮೃದು ಹಾಸ್ಯ ತೇಲುತ್ತಿತ್ತು. ಆ ತೇಲು ನಗೆಯಲ್ಲಿ ಒಂದು ಅಸ್ಪಷ್ಟ ಆಶ್ವಾಸನ ಕಂಡೆ : ಆ ನನ್ನ ಭ್ರಾಂತ ಉತ್‌ಸ್ಫೂರ್ತ ಚುಂಬನವು ಅವಳ ಹೃದಯ ಸೇರಲಿಕ್ಕೆ ಸಾಕು ! ಆ ಅಸ್ಪಷ್ಟ ಆಶ್ವಾಸನದ ಜೊತೆಗೆ ಸ್ಪಷ್ಟವಾದ ಶಂಕೆಗಳೆದ್ದವು : ನಿಜವಾಗಿಯೂ ಅವಳ ಹೃದಯವನ್ನು ಸೇರಿರಬಹುದೇ ಆ ಮುತ್ತು ? ಅಥವಾ ಜೋಗದ ತುಷಾರ ಮಳೆಯಲ್ಲಿ ತೊಳೆದು ಹೋಗಿ, ಕೆಳಗೆ ಹರಿಯುವ ನೀರಿನಲ್ಲಿ ಹರಿದು ಹೋಯಿತೇ ?

* * *

ನನ್ನ ಜೀವನದಲ್ಲಿಯೇ ಮೊದಲ ಸಲ, ನಾನು ಸ್ವತಃ ಸ್ವಂತ ಶಕ್ತಿಯ ಮೇಲೆ ಒಂದು 'ಕಾರ್ಯ' ಮಾಡಿದೆ !

ಅದಕ್ಕಿಂತ ಮೊದಲು – ಆಮೇಲೆ ಸಹ ! – ಜೀವನದ ಪ್ರವಾಹದೊಡನೆ ಹರಿಯುವದೊಂದೇ ನನಗೆ ಗೊತ್ತು ! ಸ್ವಭಾವತಃ ನಾನು ಕರ್ಮಶೀಲ ಮನುಷ್ಯನಲ್ಲ ಬಿರುಗಾಳಿ ಬೀಸಿ ಹೋಗುವತನಕ. ಎಂಥ ಕಾರ್ಯ ಹೇಗೆ ಮಾಡಬೇಕು ಎಂಬ ವಿಚಾರವಿಲ್ಲದವ. ವಿಚಾರವಿದ್ದರೂ ಆ ಕಾರ್ಯ ಎಸಗಲು ಬೇಕಾದ ಮನೋಧೈರ್ಯ ವಿಲ್ಲದವ....ಬಿರುಗಾಳಿ–ಪ್ರವಾಹಗಳು ನನ್ನನ್ನು ಎಲ್ಲಿ ಒಯ್ಯುತ್ತವೆಯೋ ಒಯ್ಯುತ್ತವೆ. ಒಯ್ಯಲಿ–ನನ್ನ ಆತ್ಮದ ಅಸ್ತಿತ್ವವನ್ನು ಕಾಪಾಡುವುದೇ ನನ್ನ ಧರ್ಮ ! ಬಹುಶಃ ಇದರಲ್ಲಿಯೇ ನನ್ನ ಶಕ್ತಿ ಇರಬಹುದು. ಹೊರಗೆ ತೋರುವ ಬಲಹೀನತೆಯಲ್ಲಿಯೇ ನನ್ನ ಆಂತರಿಕ ಶಕ್ತಿ ಇರಬಹುದು !

'ನನ್ನ ಜೀವನದಲ್ಲಿಯೇ ಮೊದಲ ಸಲ, ನಾನು ಸ್ವತಃ, ಸ್ವಂತ ಶಕ್ತಿಯ ಮೇಲೆ ಒಂದು ಕಾರ್ಯಮಾಡಿದೆ' – ಎಂದು ಬರೆದಿದ್ದೇನೆ. ಇದು ನಿಜವೇ?

ಆಭಾಸವೇ? ಆ 'ಕಾರ್ಯ' 'ನಾನೇ' ಮಾಡಿದ್ದೇ? ಅಥವಾ ಜೋಗದ ಪ್ರಚಂಡ ಶಕ್ತಿ ಹಾಗೂ ಮಾನವನಲ್ಲಿಯ ಪುರಾತನ ಹಂಬಲಿನ ಶಕ್ತಿ ಕೂಡಿ, ನನ್ನಿಂದ ಆ 'ಕಾರ್ಯ'ವನ್ನು ಮಾಡಿಸಿದ್ದವೋ?

ಮುಂದೆ ಎಷ್ಟೋ ದಿನ ನಾನು ತಪ್ಪು ಮಾಡಿದೆ ಎಂಬ ಭಾವನೆ ನನ್ನ ಮನಸ್ಸನ್ನು ತಿನ್ನುತ್ತಿತ್ತು. ಆದರೆ ನನ್ನಲ್ಲಿ ಇಂಥ 'ತಪ್ಪು ಮಾಡುವ ಧೈರ್ಯಶಕ್ತಿ, ಇವೆಯಲ್ಲ ಎಂಬ ಅಭಿಮಾನ ಬೇರೆ, ಆನಂದ ಬೇರೆ, ನನ್ನ 'ಶಕ್ತಿ'ಯ ಮುಂದೆ ನಾನೇ ಆಶ್ಚರ್ಯಚಕಿತನಾಗಿದ್ದೆ!

ನಾನು ಆಫ್ರಿಕೆಗೆ ಹೋಗುತ್ತಿರುವುದು ನನ್ನ ಜೀವನದಲ್ಲಿಯ ಎರಡನೆಯ ಸ್ವಂತ ಕಾರ್ಯ!

ಎಲ್ಲರೂ ಬೇಡವೆಂದರೂ, ಮನೆಯವರಂತೂ 'ನೀನು ನಮಗೆ ಸತ್ತಂತೆಯೇ' ಎಂದರೂ ನಾನು ನನ್ನ ಈ ನಿಶ್ಚಯದಲ್ಲಿ ಅಚಲನಾಗಿರುವೆ.

ಇಂಥ ಶಕ್ತಿಯ ಮೂಲವೆಲ್ಲಿದೆ?

ಶರಾವತಿ ನದಿಗೆ ಗೊತ್ತಿತ್ತೇ—ಕಣಿವೆಯಲ್ಲಿ ಕಡಕೊಂಡು ಬಿದ್ದನಂತರ ತನ್ನಲ್ಲಿ ಪ್ರಚಂಡ ಶಕ್ತಿ ಉತ್ಪನ್ನವಾಗುವದೆಂದು?

ಆದರೆ ನನ್ನಲ್ಲಿ ಆ ಶಕ್ತಿ ಬರಲು ಬಿದ್ದ ಕಣಿವೆ ಯಾವುದು?

ಜೋಗದ ಆ ಕಣಿವೆಯಲ್ಲಿಯೆ ನನ್ನ ಆತ್ಮದ ಕಣಿವೆಯ ಜನ್ಮವಿತ್ತೇನೋ!

* * *

ಆಗ ನಾನು ಒಂದು ನಿಜವಾದ ತಪ್ಪು ಮಾಡಿದೆ, ಒಂದು ಬಗೆಯ ಮಿತ್ರದ್ರೋಹ, ಮಿತ್ರನ ತಂಗಿಯ ಮೇಲೆ ಮೋಹ ಮಾಡಿದ್ದು ಮಿತ್ರದ್ರೋಹವಲ್ಲ.... ಆದರೆ ಈ ಸಂಗತಿಯನ್ನು ಅವನಿಂದ ಬಚ್ಚಿಟ್ಟದ್ದು ಮಿತ್ರದ್ರೋಹ. 'ನನ್ನ ಹೃನ್ಮನಗಳು ನಿನ್ನ ಸೊತ್ತು, ನಿನ್ನ ಹೃನ್ಮನಗಳನ್ನು ನನ್ನ ಸೊತ್ತು' ಎಂದು ಪಣ ಮಾಡಿದ್ದೆವು ನಾವು.... ಈ ವ್ರತವನ್ನು ನಾನು ಮೊದಲ ಸಲ ಭಂಗ ಮಾಡಿದೆ ! – ಹೀಗೆ ಭಂಗ ಮಾಡುವ ಕಲ್ಪನೆ ಗುಪ್ತವಾಗಿ ನನ್ನ ಮನಸ್ಸಿನಲ್ಲಿ ಇದ್ದುದರಿಂದಲೇ ಶ್ರೀಕಾಂತ ಜೋಗದ ಕಣಿವೆಯಲ್ಲಿ ಏಕಾಕಿಯಂತೆ ನನಗೆ ಕಂಡಿರಬಹುದೆ?

ಶ್ರೀಕಾಂತ ಕಾಮಿನಿ–ರೋಹಿಣಿಯರೊಡನೆ ಧಾರವಾಡಕ್ಕೆ ಹೋದ ನಂತರ, ಪತ್ರದ ಮುಖಾಂತರ ನನ್ನ ಹೃದಯವನ್ನು ಅವನೆದುರಿಗೆ ತೆಗೆದಿಡಬೇಕೆಂದು ನಾನು ಮೊದಲು ನಿಶ್ಚಯಿಸಿದರೂ, ಆ ಸಂಗತಿ ಸಮನಿಸಲಿಲ್ಲ. ನಿಶ್ಚಯವು ವಿಚಾರಗಳ ಹೊಡೆತಕ್ಕೆ ಸಿಕ್ಕು ಬಲಹೀನವಾಗುವದೆಂದು ಹ್ಯಾಮ್ಲೆಟ್ಟನು ತನ್ನ ಒಂದು ಪ್ರಸಿದ್ಧ ಸ್ವಗತದಲ್ಲಿ ಹೇಳಿದ್ದಾನೆ !

ಹಾಂ, ಆಗಿನ ನನ್ನ ವಿಚಾರಗಳನ್ನು ಸ್ವಗತದ ರೂಪದಲ್ಲಿಟ್ಟರೆ ಹೇಗೆ?

"ಶ್ರೀಕಾಂತನಿಗೆ ಹೇಳಬೇಕೆ? ಬೇಡವೇ? ಶ್ರೀಕಾಂತ ನನ್ನ ಜೀವನದ ಗೆಳೆಯ–ಆದುದರಿಂದ ನನ್ನ ಅಂತರಂಗವನ್ನು ಅವನೆದುರಿಗೆ ತೆರೆದಿಡುವದು ನನ್ನ ಕರ್ತವ್ಯ. ಆದರೆ ಶ್ರೀಕಾಂತನಿಗೆ ಈ ಮಾತು ಸೇರಲಿಕ್ಕಿಲ್ಲ. ನನ್ನ ಹೃದಯದ ಮೇಲೆ ಸಂಪೂರ್ಣ ಅಧಿಕಾರ ಅದನದು ! ನನ್ನ ಹೃದಯದ ಡಿಕ್ಟೇಟರನಾತ ! ಹೀಗಿರುವಾಗ, ನನ್ನ ಈ ಹೃದಯದ ಸ್ವತಂತ್ರ ವೃತ್ತಿಯನ್ನು ನೋಡಿ, ಅವನು ರೇಗದೆ ಇರಲಾರ. ಅವನು ರೇಗಿದರೆ–ನಮ್ಮ ಆದರ್ಶ ಗೆಳೆತನವೇ ಕುಸಿಯಬಹುದು. ನಮ್ಮ ಗೆಳೆತನ ಕುಸಿಹಿತೆಂದರೆ ಮುಗಿಯಿತು – ಕಾಮಿನಿಯೂ ದೂರವಾದಂತೆಯೇ ನಮ್ಮ ಪ್ರೇಮಾಂಕುರ ಕತ್ತರಿಸಿ ಬಿದ್ದಂತೆಯೇ–ಒಂದು ವೇಳೆ ಉದಾರನಾಗಿ ಶ್ರೀಕಾಂತ ಸಮ್ಮತಿ ಕೊಟ್ಟರೆ, ಆಗಲೂ ತೊಂದರೆ ! ಪ್ರತಿಸಲ ನಾನು ಅವನ ಮನೆಗೆ ಹೋದಾಗ, ಅವನ ಮನಸ್ಸಿನಲ್ಲಿ ಸಂಶಯ ಬರದೆ ಇರಲಾರದು : 'ಗೌರೀಶ ಈಗ ನನ್ನ ಸಲುವಾಗಿ ಬರುವುದಿಲ್ಲ–ಕಾಮಿನಿಯ ಸಲುವಾಗಿ ಬರುತ್ತಾನೆ,' ಎಂದು. ಹಾಗೂ ಸಾವಕಾಶವಾಗಿ ನನ್ನಲ್ಲಿಟ್ಟ ಪ್ರೀತಿಯನ್ನು ಹಿಂತೆಗೆದು ಕೊಳ್ಳಬಹುದು....ಅವನ ಪ್ರೀತಿ ಇರದ ಹೊರತು ನನ್ನ ಬಾಳು ಹಾಳು – ಕಾಮಿನಿ ದೊರೆತರೂ, ಪಟ್ಟಣಕ್ಕೆ ಬೆಂಕಿ ಹಚ್ಚಿ, ಬೂದಿ ಮಾಡಿ, ಪಟ್ಟಣವನ್ನು ಗೆದ್ದಂತೆ – !

–ಶ್ರೀಕಾಂತನಿಗೆ ಈಗಲೇ ಹೇಳುವದು ತರವಲ್ಲ !

– ಆದರೆ ಮುಂದಿನ ದಾರಿ ? ಶ್ರೀಕಾಂತನಲ್ಲಿಯೇ, ನನ್ನ ಹಾಗೂ ಕಾಮಿನಿಯ ಸಂಬಂಧದ ಯೋಗ್ಯತೆಯ ಬಗ್ಗೆ, ಆದರೆ ಲಾಭದ ಬಗ್ಗೆ, ವಿಚಾರ ಉತ್ಪನ್ನವಾಗುವಂತೆ ನಾನು ವರ್ತಿಸಬೇಕು. ಕಾಮಿನಿಯ ಮೇಲಿನ ನನ್ನ ಸಲಿಗೆಯ 'ಭ್ರಾತೃ' ಪ್ರೇಮ ನೋಡಿ, ಅವನಲ್ಲಿಯೇ ಕಲ್ಪನೆ ಮೂಡಬಹುದು; 'ಗೌರೀಶ–ಕಾಮಿನಿಯರು ಲಗ್ನವಾದರೆ ಎಷ್ಟು ಚಂದ,' ಎಂದು. ಹಾಗೆ ಕಲ್ಪನೆ ಮಾಡಿ, ತಾನಾಗಿಯೇ ನನಗೆ ಸೂಚಿಸಿ ಉತ್ಸಾಹವಿತ್ತರೆ ಎಷ್ಟು ಚಂದ !

– ಆದರೆ ಇದು 'ಕುಟಿಲ ನೀತಿ' ಯಾಗುವುದಿಲ್ಲವೆ ? ಯುದ್ಧ ಮತ್ತು ಪ್ರೇಮ : ಈ ಸಂದರ್ಭಗಳಲ್ಲಿ ಯಾವ ನೀತಿಗೂ ಮಾಫಿಯಂತೆ ! ಇದು ಕುಟಿಲ ನೀತಿಯಲ್ಲ ! ಇನ್ನು ಮೇಲೆ ಕಾಮಿನಿಯೊಡನೆ ಹೆಚ್ಚು ಸಲಿಗೆಯಿಂದ ಪ್ರೀತಿಯಿಂದ ವರ್ತಿಸುವದೆಂದರೆ ಕುಟಿಲನೀತಿಯಲ್ಲ ! ಇನ್ನು ಮೇಲೆ – ನಾನು ಒಮ್ಮೆ ಅವಳನ್ನು ಮುದ್ದಿಸಿದ ಮೇಲೆ – ಹಾಗೆ ವರ್ತಿಸದೆ ಗತ್ಯಂತರವಿಲ್ಲ ! – ಅಷ್ಟೇ ಅಲ್ಲ, ನಮ್ಮ ನಡುವೆ, ಅಂದರೆ ನನ್ನ ಮತ್ತು ಕಾಮಿನಿಯ ನಡುವೆ,

ತಿಳುವಳಿಕೆ ಬೆಳೆಯಬೇಕು; ಸಹಾನುಭೂತಿ ಬೆಳೆಯಬೇಕು ; ಬರಿಯ ಮೋಹಕ್ಕೆ ಬಲೆಬೀಳುವದರಲ್ಲಿ ತಥ್ಯವಿಲ್ಲ.... ಪರಸ್ಪರ ತಿಳುವಳಿಕೆ ಬೆಳೆಯಬೇಕಾದರೆ ಭ್ರಾತೃಪ್ರೇಮದಂಥ ಪ್ರೀತಿ ಅವಶ್ಯ – ಸಲಿಗೆಯ ಸಹವಾಸ ಅವಶ್ಯ.... ಕಾಮಿನಿ ಇನ್ನೂ ಚಿಕ್ಕವಳು. ದೇಹದಿಂದ ಬೆಳೆದು ನಿಂತಿದ್ದರೂ ಮನಸ್ಸಿನಿಂದ, ಬುದ್ಧಿಯಿಂದ ಇನ್ನೂ ಚಿಕ್ಕವಳೇ ಸರಿ! ಅವಳು ನನ್ನ ಪತ್ನಿಯಾಗಬೇಕಾದರೆ, ಅವಳ ಮತ್ತು ನನ್ನ ವಿಚಾರ ಸಾಂಗತ್ಯ, ಹೃನ್ಮನ ಸಾಮರಸ್ಯ ಅವಶ್ಯ.... ಅದಕ್ಕಾಗಿ ಆ ದಾರಿಯಲ್ಲಿ ಅವಳ ಮಾರ್ಗದರ್ಶನ ಮಾಡಬೇಕು : ಅವಳ ವೈಚಾರಿಕ ಬೆಳವಣಿಗೆಯ ಭಾರವನ್ನು ಹೊರಬೇಕು.... ಅಷ್ಟೇ ಅಲ್ಲ, ಕಾಮಿನಿಯ ಹೃದಯದ ನೆಲೆಯೇ ಇನ್ನೂ ಹತ್ತಿಲ್ಲ ! ನನ್ನ ಚುಂಬನವನ್ನು ಪ್ರೀತಿಯಿಂದ ಸ್ವೀಕರಿಸಿದವಳೇ? ಅಥವಾ – 'ಅಥವಾ'ದ ವಿಚಾರ ಸಹ ನಾನು ಸಹಿಸಲಾರೆ –

– ಏನಿದ್ದರೂ ಈ ನಡುವಿನ ದಾರಿಯೇ ಯೋಗ್ಯವಾದದ್ದು.... ಯೋಗ್ಯವೋ ಅಯೋಗ್ಯವೋ – ಈ ದಾರಿಯೇ 'ನನ್ನ' ದಾರಿ!

ಈ ಬಗೆಯ ಸ್ವಗತವು ಆ ಸೂಟಿಯಲ್ಲಿ ನನ್ನ ಮನೋರಂಗದ ತುಣುಕು–ತುಣುಕಾಗಿ ಸಾಗಿಯೇ ಇತ್ತು.

ಕೊನೆಗೆ ನನ್ನ ಸ್ವಗತಕ್ಕೆ ಪ್ರೇಕ್ಷಕನೊಬ್ಬನನ್ನು ಹುಡುಕಲೇಬೇಕಾಯಿತು. ಸತ್ಯೇಂದ್ರ ಸಹರ್ಷ ಒಪ್ಪಿದ ! ಸತ್ಯೇಂದ್ರನ ಮುಂದೆ ನನ್ನ ಹೃದಯದ ಭಾರ ಬಿಚ್ಚತೊಡಗಿದೆ.... ಆದರೆ ನಂತರ ಸತ್ಯೇಂದ್ರನ ಉಪದೇಶದ ಭಾರ ಮಾತ್ರ ನಾನು ಹೊರಬೇಕಾಯಿತು;

"ನೀವಿಬ್ಬರೂ ಇನ್ನೂ ಸಣ್ಣವರು.... ಎರಡು–ಮೂರು ವರ್ಷ ತಡೆಯಿರಿ. ಆಮೇಲೆ ನಿಮ್ಮ ನಿಮ್ಮ ಹೃದಯಗಳನ್ನು ಪರೀಕ್ಷಿಸಿ ನೋಡಿರಿ. ಅವುಗಳಲ್ಲಿ ಇನ್ನೂ ಪ್ರೇಮ ಉಳಿದಿದ್ದಿದ್ದರೆ – well, go ahead ಅಲ್ಲಿಯತನಕ ಬಾಯಿ ಮುಚ್ಚಿಕೊಂಡು ಸುಮ್ಮನಿರು... ನೀನು ಹುಚ್ಚು ಮೋಹದ ಲಹರಿಯಲ್ಲಿ ಅವಳಿಗೆ ಮುದ್ದು ಕೊಟ್ಟೆ, ನಿಜ. ಅದರರ್ಥ ಅವಳ ಬಗ್ಗೆ ಸಂಪೂರ್ಣ ಪ್ರೇಮ ನಿನ್ನಲ್ಲಿದೆ ಎಂದ ಹಾಗಲ್ಲ. ಕ್ಷಣಿಕ ಮೋಹ ಮತ್ತು ಪ್ರೇಮ – ಇವೆರಡೂ ಬೇರೆ ಬೇರೆ ವಿಷಯಗಳು .... ಅವಳಂತೂ ಏರುಜವ್ವನೆ. ಅದೇನೋ ಅಂತಾರಲ್ಲ ಹರೆಯದ ಹುಡುಗಿಗೆ ನೆಲ ಕಾಣುವದಿಲ್ಲ ಅಂತ ! ಅವಳ ಮನ ಅವಳಿಗೇ ತಿಳಿಯಲು ಎರಡು ಮೂರು ವರ್ಷಗಳಾದರೂ ಬೇಕು... ಅಲ್ಲಿಯತನಕ ನಿಮ್ಮ ನಿಮ್ಮ ಅಭ್ಯಾಸ ಚನ್ನಾಗಿ ಮಾಡಿರಿ. ಕ್ಲಾಸು ದೊರಕಿಸಿ ಒಳ್ಳೆಯ ನೌಕರಿ ಹಿಡಿಯುವ ಗುರಿಯಿಟ್ಟುಕೊಂಡು ಅಭ್ಯಾಸ ಮಾಡು... ಕದಾಚಿತ್, ಕರ್ಮ–ಧರ್ಮ

ಸಂಯೋಗದಿಂದ ನಿಮ್ಮೀರ್ವರ ಲಗ್ನ ಆಗುವದೇ ಆದರೆ, ನೀನು ಮನೆಯಿಂದ ಹೊರಬೀಳಬೇಕಾಗುವದು, ನಿನ್ನ ಕಾಲಮೇಲೆ ನೀನು ನಿಲ್ಲಬೇಕಾಗುವದು – ಅದಕ್ಕೆ ಒಳ್ಳೆಯ, ಬಹಳ ಸಂಬಳದ ನೌಕರಿ ಅವಶ್ಯ... ಇಷ್ಟು ಬೇಗ ಈ ಹುಚ್ಚನ್ನು, ಈ ದೆವ್ವವನ್ನು ತಲೆಯಲ್ಲಿ ಸೇರಿಸಬೇಡ.... ನೀನಿನ್ನೂ ಬೆಳೆಯಬೇಕು..."

ಸತ್ಯೇಂದ್ರನ ಉಪದೇಶದಲ್ಲಿ ನಿಜಕ್ಕೂ ವ್ಯವಹಾರ ಜ್ಞಾನ (common sense) ತುಂಬ ಇತ್ತು. ಕುಲಕರ್ಣಿ ಹೆಡ್‌ಮಾಸ್ತರರ ಮಗನಲ್ಲವೇ ಆತ !

* * *

ಧಾರವಾಡದಿಂದ ಶ್ರೀಕಾಂತನ ಪತ್ರಗಳು ಎಂಟುದಿನಕ್ಕೊಂದರಂತೆ ಬರುತ್ತಲೇ ಇದ್ದವು. ಶ್ರೀಕಾಂತನ ಮನನ, ಅಭ್ಯಾಸ, ಚಿಂತನಗಳು ಅವ್ಯಾಹತವಾಗಿ ಸಾಗಿದ್ದರಿಂದ, ಅವನ ಪತ್ರಗಳಲ್ಲಿ ತಾತ್ವಿಕ ಟಿಪ್ಪಣಿಗಳೇ ಬಹಳ... ಪತ್ರ ಬಂದೊಡನೆ ನನ್ನ ಮೊದಲ ಆತುರತೆ : 'ಕಾಮಿನಿ' ಶಬ್ದವನ್ನು ಶೋಧಿಸುವದು; ಆನಂತರ ಕಾಮಿನಿಗೆ ಸಂಬಂಧಿಇದ ಎಲ್ಲ ವಾಕ್ಯಗಳನ್ನು ಓದುವದು. ಆಮೇಲೆ, ಹೃದಯದ ಬಡಿತ ಕಡಿಮೆಯಾದಮೇಲೆ, ಇಡಿಯ ಪತ್ರ ಓದುವದು... ಪ್ರತಿ ಸಲವೂ ಒಂದು ಬಗೆಯ ಭೀತಿಯಿಂದಲೇ ಪತ್ರವನ್ನು ಒಡೆಯುತ್ತಿದ್ದೆ; ಕಾಮಿನಿ ಶ್ರೀಕಾಂತನಿಗೆ ಹೇಳಿರಬಹುದೆ?

'ಕಾಮಿನಿ, ರೋಹಿಣಿ ಮತ್ತು ನಾನು ಸುಖರೂಪವಾಗಿ ಬಂದು ಮುಟ್ಟಿದೆವು.' 'ಕಾಮಿನಿಗೆ ಟ್ರಿಪ್ಪು ಬಹಳ ಸೇರಿದೆ. ಈಗ ಎಂಟು ದಿನಗಳಾದವು – ಬರಿಯ ಜೋಗದ ಬಗ್ಗೆಯೇ ಅವಳ ಮಾತುಕತೆಗಳು.', 'ಕಾಮಿನಿಯ ಕನಸುಗಳ ತುಂಬ ಇನ್ನೂ ಜೋಗದ ಜಲಪಾತವೇ ಇದೆ.' 'ಕಾಮಿನಿ ತನ್ನ ಸಪ್ರೇಮ ವಂದನೆಗಳನ್ನು ಕಳಿಸಿದ್ದಾಳೆ.'....

ಇಂಥ ವಾಕ್ಯಗಳನ್ನು ಓದುವಾಗಿನ ನನ್ನ ಮನಸ್ಥಿತಿ ವರ್ಣಿಸಲು ಅಸಾಧ್ಯ. ನೋಡಲಿಕ್ಕೆ ತೀರಾ 'ಸಾದಾ' ವಾಕ್ಯಗಳು : ಆದರೆ ನಾನು ಅವುಗಳಲ್ಲಿ ತುಂಬಿದ ಅರ್ಥ ನನ್ನ ಹೃದಯ–ಪ್ರೇರಿತ ಕಲ್ಪನೆಗೆ ಸಂಬಂಧಿಸಿದ್ದು ! ಶ್ರೀಕಾಂತನ ತಾತ್ವಿಕ ಟಿಪ್ಪಣಿಗಳನ್ನು ಓದುವಾಗಲೂ, ನನ್ನ ಮತ್ತು ಕಾಮಿನಿಯ ಸಂಬಂಧದ ಭೂಮಿಕೆಯ ಮೇಲಿಂದಲೇ ಓದತೊಡಗಿದೆ :

ಶ್ರೀಕಾಂತ ಒಂದು ಪತ್ರದಲ್ಲಿ ಬರೆದಿದ್ದ :

"ಜೋಗದಿಂದ ಬಂದ ನಂತರ, ಜಿಜ್ಞಾಸೆ ನೂರ್ಮಡಿಯಾಗಿದೆ. ಜೀವನದ ಅರ್ಥವೇನು, ಉದ್ದೇಶವೇನು? ಎಂಬ ಪ್ರಶ್ನೆಗೆ ಉತ್ಕಟತೆ ಬಂದಿದೆ.... ಜೀವನದ ಮೌಲ್ಯಗಳ ಬಗ್ಗೆಯೂ ನನ್ನ ಶೋಧ ನಡೆದಿದೆ.... ಜೋಗದಿಂದ ಬಂದ ನಂತರ

ನನ್ನ ಮೊದಲ ಸಮಸ್ಯೆ : ಸೌಂದರ್ಯವೆಂದರೇನು? ಜೋಗದ 'ಸೌಂದರ್ಯ' ಎಲ್ಲಿದೆ? – ವಿಜ್ಞಾನದ ದೃಷ್ಟಿಯಿಂದ, ವಸ್ತುನಿಷ್ಠವಾಗಿ ನೋಡಿದರೆ, ಜೋಗಜಲಪಾತವೆಂದರೆ ಬರಿಯ ನೀರು – $H_2O$ ! ನಿಜ. ಆದರೆ ಆ ನೀರಿನ ಬೀಳುವಿಕೆ ನಮ್ಮ ಮನಸ್ಸಿನ ಮೇಲೆ 'ಪರಿಣಾಮ' ಮಾಡುವದು : ಆಶ್ಚರ್ಯ, ಆನಂದ, ಅಗಾಧತೆ, ಗೂಢತೆ ! ಆಗ ನಾವು ನುಡಿಯುವೆವು : 'ಅಹ ! ಎಷ್ಟು ಸುಂದರ ಇದೆಯಲ್ಲ ಜೋಗು !' ಎಂದು. 'ಸೌಂದರ್ಯವೆಂದರೇನು ?' ಅದು ಜೋಗದಲ್ಲಿದೆಯೇ? ನಮ್ಮ ಹೃದಯದಲ್ಲಿದೆಯೇ? ಅಥವಾ ಎರಡರಲ್ಲಿಯೂ ಇದೆಯೇ?

೧) ಜೋಗದ ಜಲಪಾತದಲ್ಲಿ 'ಏನಾದರೂ' ಇದೆ. ಆದುದರಿಂದಲೇ ಅದು ನಮ್ಮ ಮನಸ್ಸಿನ ಮೇಲೆ 'ಪರಿಣಾಮ' ಮಾಡುವದು....

೨) ಅದರ ಜೊತೆಗೆ ನಮ್ಮಲ್ಲಿಯೂ 'ಏನಾದರೂ ಇದೆ. ಯಾಕಂದರೆ ಪ್ರಾಣಿ ಮೇಲೆ ಪರಿಣಾಮ ಆಗುವದಿಲ್ಲ–ಮನುಷ್ಯನ ಮನಸ್ಸಿನ ಮೇಲೆ ಮಾತ್ರ ಇದರಿಂದ ಮೂರು ಮಾತು ಸಿದ್ಧವಾದಂತಾದವು :

೧) ಜಗತ್ತಿನ ವಸ್ತುಗಳು ಹಾಗೂ ನಮ್ಮ ಮನಸ್ಸು – ಇವುಗಳ ನಡುವೆ ಒಂದು ಬಗೆಯ ಸಂಬಂಧವಿದೆ.

೨) ಜೀವನದ ಮೂಲ್ಯಗಳು ನಮ್ಮ ಮನಸ್ಸಿಗೆ ಸಂಬಂಧಿಸಿವೆ. ಆದುದರಿಂದ ಅವು ಆತ್ಮನಿಷ್ಠವಾಗಿವೆ.

೩) ಆದರೆ ನಾವೂ ನಮ್ಮ ಆತ್ಮವೂ ಈ ಜಗತ್ತಿನ, ವಿಶ್ವದ ಭಾಗವೆಂದೇ ಹಿಡಿದರೆ ಮಾತ್ರ ಜೀವನ ಮೌಲ್ಯಗಳು ವಸ್ತುನಿಷ್ಠ ವಿಷಯಗಳೆಂದು ಹೇಳಬಹುದು....

ಶ್ರೀಕಾಂತನ ಇಂಥ ಟಿಪ್ಪಣಿಗಳ ಅರ್ಥ ಸಂಪೂರ್ಣ ತಿಳಿಯುತ್ತಿರಲಿಲ್ಲ ನನಗೆ ಆಗ! ನಾನು ಮಾತ್ರ ನನ್ನ ಪಾತಳಿಯ ಮೇಲೆ ವಿಚಾರ ಮಾಡುತ್ತಿದ್ದೆ : 'ಕಾಮಿನಿ ಸುಂದರಳಿರುವಳೆ? ಕಾಮಿನಿಯ ಸೌಂದರ್ಯವೆಂದರೆ ಅದು ನನ್ನ ಮಾನಸಿಕ ಅಭಾಸವೇ? ಕಾಮಿನಿಯ ಸೌಂದರ್ಯ ನನ್ನ ಮೇಲೆ ಮಾಡಿದ 'ಪರಿಣಾಮ' ಯಾವುದು? ಅವಳು ನನ್ನವಳಾಗಬೇಕೆಂಬ ಸ್ವಾರ್ಥಪರ ಇಚ್ಛೆಯನ್ನು ನಿರ್ಮಾಣಮಾಡಿತೇ? ಸೌಂದರ್ಯ ಹಾಗೂ ಇಂಥ ಇಚ್ಛೆಗೆ ಏನಾದರೂ ಸಂಬಂಧವಿದೆಯೇ? ಸೌಂದರ್ಯಕ್ಕೂ ಹಾಗೂ ಪ್ರೇಮಕ್ಕೂ ಇದ್ದ ಸಂಬಂಧವೇನು? ...'

– ನನ್ನ ಪ್ರಶ್ನೆಗಳನ್ನು ಆದಷ್ಟು ವಸ್ತುನಿಷ್ಠವಾಗಿ ರೂಪಿಸಿ, ನನ್ನ ಪತ್ರಗಳಲ್ಲಿ ಬರೆಯುತ್ತಿದ್ದೆ ! ಶ್ರೀಕಾಂತನಿಗೆ ನನ್ನ ಪ್ರಶ್ನೆಗಳನ್ನೋದಿ ಆನಂದವಾಗುತ್ತಿತ್ತು.

ಅವನು ಆ ಪ್ರಶ್ನೆಗಳಿಗೆ ಉತ್ತರ ಕೊಡಲು ಯತ್ನಿಸುತ್ತಿದ್ದ :

"....ನಿನ್ನ ಪ್ರಶ್ನೆಗಳಲ್ಲಿ ತಥ್ಯವಿದೆ... 'ಸೌಂದರ್ಯ'ಕ್ಕೂ ಮನಸ್ಸಿನಲ್ಲಿ ಆಗುವ 'ಆನಂದ' ಮುಂತಾದ ಭಾನೆಗಳಿಗೂ ನಿಕಟಸಂಬಂಧವಿದೆ.... ಇಂಥ 'ಆನಂದ'ದ ಸಹಜ ! ಅದರ ಅರ್ಥ ಜೋಗಜಲಪಾತವನ್ನು ನನ್ನ ಕಿಸೆಯಲ್ಲಿಯೇ ಹಾಕಿಕೊಂಡು ತಿರುಗಾಡಬೇಕೆಂದಲ್ಲ !... ಸುಂದರ ಸ್ತ್ರೀಯನ್ನು ಲಗ್ನವಾಗುವ ಪುರುಷನ ಆನಂದ, 'ಈ ಸೌಂದರ್ಯದ ಮೇಲೆ ನನ್ನ ಹಕ್ಕಿದೆ, ಎಂಬ ಸ್ವಾರ್ಥ ಬುದ್ಧಿಗೆ ಸಂಬಂಧಿಸಿದೆ! ಗಾಲ್ಸವರ್ದಿಯ 'The man of Property' ಎಂಬ ಕಾದಂಬರಿಯಲ್ಲಿ ಇದೇ ಸಮಸ್ಯೆ ಇದೆ : ಸೌಂದರ್ಯ ಹಾಗೂ ಮಾಲ್ಕೀ ಹಕ್ಕು : ಈ ಘರ್ಷಣದಿಂದ ಉಂಟಾಗುವ ದುಃಖ....

ಸೌಂದರ್ಯ ಮತ್ತು ಪ್ರೇಮ? ಸೌಂದರ್ಯವನ್ನು ಪ್ರೀತಿಸುವದು ಸಹಜ (ಸುಲಭ!). ಅಷ್ಟೇ ಅಲ್ಲ, ನಾವು ಪ್ರೀತಿಸುವ ವಸ್ತುಗಳಲ್ಲಿ ನಾವು ಯಾವಾಗಲೂ ಸೌಂದರ್ಯವನ್ನು ಕಾಣುತ್ತೇವೆ! ಆದುದರಿಂದ ಸೌಂದರ್ಯ ಮತ್ತು ಪ್ರೇಮ ಇವುಗಳಲ್ಲಿ ನಿಕಟ ಸಂಬಂಧವಿದೆಯೆನ್ನುವದು ತಪ್ಪು.... ಜನರು ಈ ತಪ್ಪನ್ನು ಹೇಗೆ ಮಾಡುತ್ತಾರೆ ಗೊತ್ತೇ? – ಗಣಿತ ರೂಪವಾಗಿ ನಾವು ಹೀಗೆ ಹೇಳಬಹುದು:

ಸೌಂದರ್ಯ = ಆನಂದ (ನಿಜವಾಗಿ ಆನಂದ ೧)

ಪ್ರೇಮ = ಆನಂದ (ನಿಜವಾಗಿ ಆನಂದ ೨)

ಈ ಎರಡೂ ಆನಂದಗಳಲ್ಲಿಯ ಭಿನ್ನತೆ ಸಾಧಾರಣ ಮನುಷ್ಯನಿಗೆ ಗೊತ್ತಾಗುವದಿಲ್ಲ : ಆದುದರಿಂದ ಸೌಂದರ್ಯಕ್ಕೂ ಪ್ರೇಮಕ್ಕೂ ನಿಕಟ ಸಂಬಂಧ ಹಚ್ಚುತ್ತಾನೆ. ತಿಳಿಯಿತೆ?

ಆನಂದ ೧ ಹಾಗೂ ಆನಂದ ೨ ಇವುಗಳ ಸ್ವರೂಪದ ಬಗ್ಗೆ ನಾನಿನ್ನೂ ಸೂಕ್ಷ್ಮವಾಗಿ ವಿಚಾರಮಾಡಿಲ್ಲ...."

ಶ್ರೀಕಾಂತನ ಉತ್ತರ ಓದಿ ನಾನು ಮಾಡಿದ ವಿಚಾರ ಬೇರೆಯೇ :

ಸೌಂದರ್ಯ = ಆನಂದ ೧ ; ಪ್ರೇಮ = ಆನಂದ ೨ ; ಎಂದ ಮೇಲೆ ಸೌಂದರ್ಯ + ಪ್ರೇಮ = ಆನಂದ ೧ + ಆನಂದ ೨ .... ಆದುದರಿಂದ ಎಲ್ಲವೂ ಸುಸೂತ್ರವಾಗಿ ಸಮನಿಸಿದರೆ, ನನ್ನ ಮನೋರಥಗಳೆಲ್ಲ ಈಡೇರಿಸಿದರೆ : ಕಾಮಿನಿ – ಶ್ರೀಕಾಂತ ಇಬ್ಬರೂ ನನ್ನ ಜೊತೆಗಿದ್ದರೆ –

ಕಾಮಿನಿ + ಶ್ರೀಕಾಂತ = (ಸೌಂದರ್ಯ + ಪ್ರೇಮ) + ಪ್ರೀತಿ

= ಆನಂದ ೧ + ಆನಂದ ೨ + ಆನಂದ ೩...

= ಸಚ್ಚಿದಾನಂದ = ಸ್ವರಲೋಕ !

ಈ ಮರಳು ವಿಚಾರವನ್ನು ನಾನು ಒಂದು ಕಾಗದದ ಮೇಲೆ ಬರೆದಿದ್ದೆ, ಹಾಗೂ ಆ ಕಾಗದ ಇನ್ನೂ ನನ್ನ ಹತ್ತಿರ ಇದೆ !

"ನೀನು ಬರೆಯುತ್ತಿರುವದನ್ನು ನಾನು ಓದಬಹುದೆ?" ಸತ್ಯೇಂದ್ರ ಕೇಳಿದ ಇಂದು. ನಾಲ್ಕೈದು ದಿನಗಳಿಂದ ಅವನ ಮನೆಗೆ ನಾನು ಹೋಗದೆ ಇದ್ದುದರಿಂದ, ನನ್ನ ಯೋಗಕ್ಷೇಮ ವಿಚಾರಿಸಲು ಬಂದಿದ್ದ.

'ದಯವಿಟ್ಟು ಈಗ ಬೇಡ" ನಾನೆಂದೆ.

"ಯಾಕೆ?"

"ಈಗ ಬೇಡ ಎಂದೆ... ನೀನು ಈಗ ಓದಿದರೆ, ನಿನ್ನ ಮತ, ಉಪದೇಶಗಳಿಗೆ ನಾನು ಬಲೆಬೀಳಬೇಕಾಗುವದು... ನೀನು ಸುಮ್ಮನೆ ಓದಿ, ಬಾಯಿ ಮುಚ್ಚಿಕೊಂಡು ಹೋದರೂ ನಿನ್ನ ಮೇಲೆ ಆದ ಪರಿಣಾಮದ ಬಗ್ಗೆ ನನ್ನ ತಲೆಯಲ್ಲಿ ವಿಚಾರ ಏಳದಿರಲಾರವು.... ನನಗೆ ಸದ್ಯಕ್ಕೆ – (ಕ್ಷಮಿಸಬೇಕು) – ಎಲ್ಲ ಪ್ರಭಾವಗಳಿಂದ ಮುಕ್ತನಾಗಬೇಕಾಗಿದೆ.... ಬೇಕಾದರೆ, ನಾನು ಇದನ್ನು ಮುಗಿಸಿದ ಮೇಲೆ, ಆಫ್ರಿಕೆಗೆ ಹೋಗುವುದಕ್ಕಿಂತ ಮುಂಚೆ ನಿನಗೆ ಕೊಟ್ಟು ಹೋಗುವೆ."

"ನಿನ್ನ ಮನಸ್ಸಿಗೆ ಬಂದಂತೆಯೇ ಆಗಲಿ," ಸತ್ಯೇಂದ್ರ ನಿರಾಶೆಯ ನಗೆ ನಕ್ಕ. "....ಅದಿರಲಿ, ನಿಮ್ಮ ತಂದೆಯವರ ಪತ್ರ ಬಂದಿದೆ ನನಗೆ."

"ನಮ್ಮ ತಂದೆಯವರ ಪತ್ರ !" ಆಶ್ಚರ್ಯದಿಂದ ಕೇಳಿದೆ.

"ಹೌದು. ಆಫ್ರಿಕೆಗೆ ಹೋಗುವ ಮೊದಲು ನೀನು ಸಿರ್ಸಿಗೆ ಒಮ್ಮೆ ಬಂದು ಹೋಗಬೇಕೆಂದು ಅವರ ಇಚ್ಛೆ. ನಿಮ್ಮ ತಾಯಿಯವರು ಬಹಳ ಹಚ್ಚಿಕೊಂಡಿರುವರಂತೆ.... ತಾವು ನುಡಿದ ಮಾತುಗಳನ್ನೂ, ಬರೆದ ಪತ್ರಗಳನ್ನೂ ನೀನು ಮರೆಯಬೇಕು ಎಂದು ನಿನ್ನ ತಂದೆಯವರ ವಿನಂತಿ."

ನಾನು ಉತ್ತರ ಕೊಡಲಿಲ್ಲ. ಸ್ವಲ್ಪ ವೇಳೆಯ ನಂತರ ಸತ್ಯೇಂದ್ರನೇ ಕೇಳಿದ : "ಯಾಕೆ ? ಹೋಗಿಬರುವಿರೋ ಇಲ್ಲವೋ ?"

"ವಿಚಾರಮಾಡಬೇಕು."

"ವಿಚಾರಮಾಡಬೇಕು ! ಹುಂ – ಇದರಲ್ಲಿಯೇ ಹೋಯಿತು ನಿನ್ನ ಎಲ್ಲ ಜೀವನ – ವಿಚಾರ, ವಿಚಾರ ವಿಚಾರ – ಎಲ್ಲದ್ದೂ ವಿಚಾರ ! ನಿದ್ದೆ ಮಾಡಿ ಏಳಲೂ ವಿಚಾರ, ಎದ್ದ ಮೇಲೆ ಮಲಗಲೂ ವಿಚಾರ... ಒಮ್ಮೆಯಾದರೂ ಥಟ್ಟನೆ ನಿಶ್ಚಯ ಮಾಡಿದ್ದೀಯಾ ನಿನ್ನ ಜೀವನದಲ್ಲಿ ?"

"ಯಾಕೆ – ಆಫ್ರಿಕೆಗೆ ಹೋಗುವ ನಿಶ್ಚಯ ನಾನು ಮಾಡಿರುವೆ – ನೀನಲ್ಲ."

"ನೀನು ಮಾಡಿಲ್ಲ ಗೌರೀಶ, ನನ್ನ ವಿಧಿ ಮಾಡಿದೆ ! ನೈರೋಬಿ ಶಾಲೆಗೆ ಸಂಬಂಧಿಸಿದ ಒಬ್ಬ ಶೇಠನ ಮಗನ ಗುರ್ತಾಯಿತು – ಕರ್ಮ ಸಂಯೋಗ ! ಅಲ್ಲಿ ಒಳ್ಳೆಯ – ವ್ಯವಹಾರಿಕ ದೃಷ್ಟಿಯಿಂದ ಒಳ್ಳೆಯದೇ !. ನೌಕರಿ ಸಿಕ್ಕಿತು ! ಆ ಶೇಠನ ಮಗನು – ಅವನ ಹೆಸರೇನು? – ಹಾಂ; ಥಡಾನಿ ನಿನ್ನ ಮೇಲೆ ಒಳ್ಳೆಯ ಪ್ರಭಾವ ಬೀರಿಲ್ಲ ಎಂದು ನೀನು ಖಂಡಿತ ಹೇಳಬಹುದೇ?"

"ಒಂದು ದೃಷ್ಟಿಯಿಂದ ನೀನನ್ನುವದು ನಿಜ. ಆದರೆ ಥಡಾನಿ ಬರಿಯ 'catalyic agent,' ಮಧ್ಯಸ್ಥ – ಅಲ್ಲವೇನು?"

"ಅದೇನೇ ಇರಲಿ, ವ್ಯವಹಾರ ನೋಡಿ ನಡೆಯಬೇಕು. ನಿಮ್ಮ ಮನೆಗೆ ಹೋಗಿ, ಎಲ್ಲರ ಹರಕೆ ತೆಗೆದುಕೊಂಡು ಬಂದು, ಆಮೇಲೆ ಹೋಗಲ್ಲ, ನಿನಗೆ ಬೇಕಾದಲ್ಲಿ."

"ಹರಕೆ ? ಎಲ್ಲ ಮುಗಿದ ಮೇಲೆ ಎಂಥ ಹರಕೆ ?"

"ಸಾಕುಮಾಡು ನಿನ್ನ ಇಂಥ ನಿರಾಶೆಯ ನಿಶ್ವಾಸ."

"ನಿರಾಶೆ ? ಅಲ್ಲ ; ನನಗೆ ಆಶೆಯೂ ಇಲ್ಲ, ನಿರಾಶೆಯೂ ಇಲ್ಲ..... ಬಂದದ್ದು ಬರಲಿ ಎಂಬ ಸ್ಥಿತ ಪ್ರಜ್ಞತೆ !"

"ವಾಹ್, ಸ್ಥಿತಪ್ರಜ್ಞಾ ! Buck up !... ಹಾಂ, ಅದೇ ಸ್ಥಿತ ಪ್ರಜ್ಞೆಯ ಭಾವದಿಂದ ಸಿರ್ಸಿಗೆ ಒಮ್ಮೆ ಹೋಗಿ ಬಾ ನೋಡೋಣ..."

"ವಿಚಾರ ಮಾಡುವೆ..."

ಬರಬೇಕಾದರೆ ಧಾರವಾಡಕ್ಕೆ ಹೋಗಿ ಕಾಮಿನಿಗೂ ಗುಡ್‌ಬಾಯ್ ಕೊಟ್ಟು ಬಾ – ಬೇಕಾದರೆ ! ನೀನು ಸ್ಥಿತಪ್ರಜ್ಞನಲ್ಲವೇ ! ನಿನಗೇನು ಅದರಿಂದ ಲಾಭವಿಲ್ಲ, ಹಾನಿಯಿಲ್ಲ–ಸುಖವಿಲ್ಲ, ದುಃಖವಿಲ್ಲ !"

ನಾನು ಸುಮ್ಮನೆ ಕಿಡಕಿಯ ಹೊರಗೆ ಆಕಾಶದಲ್ಲಿ ದೃಷ್ಟಿ ಇಟ್ಟೆ.

* * *

'ಲಾಭವಿಲ್ಲ, ಹಾನಿಯಿಲ್ಲ – ಸುಖವಿಲ್ಲ, ದುಃಖವಿಲ್ಲ !, ಆಗ ಎಷ್ಟೊಂದು ಸುಖವಿತ್ತು !

– ಎಷ್ಟೊಂದು ದುಃಖವೂ ಇತ್ತು !

ಆದರೆ ಆ ದುಃಖದಲ್ಲಿ ಒಂದು ಬಗೆಯ ಸೊಗಸಿತ್ತು – ಅರ್ಥವಿತ್ತು....

ನನಗೆ ಇಂಟರ ಸಾಯನ್ಸದಲ್ಲಿ ಸೆಕೆಂಡ್ ಕ್ಲಾಸ್ ಬಂತು. ಬರಿಯ ೫೦% ಗುಣಗಳು. ಎಂಜಿನಿಯರಿಂಗಿಗೆ ಪ್ರವೇಶ ದೊರೆಯಲಿಲ್ಲ. ಪ್ರಾಂತದ ಹೊರಗೆ, ಪ್ರಯತ್ನ ಪಟ್ಟರೆ, ಎಲ್ಲಿಯಾದರೂ ಪ್ರವೇಶ ದೊರೆಯಬಹುದಾಗಿತ್ತು. ಆದರೆ

ಆ ಕಡೆಗೆ ಮನಸ್ಸೇ ಇರಲಿಲ್ಲ. ಅಷ್ಟೇ ಅಲ್ಲ ನನ್ನನ್ನು ಧಾರವಾಡದಲ್ಲಿಯೇ ಇರುವದರಲ್ಲಿ ದೈವದ ಉದ್ದೇಶ ಏನೋ ಇದೆ ಎಂದು ನಾನು ಬಗೆದೆ! ಬಿ.ಎಸ್‌ಸಿ. ಆದನಂತರ ಬಿ.ಎಸ್‌ಸಿ. ಟೆಕ್ಕಿಗಿ ಹೋದರಾಯಿತು ಎಂದು ನನ್ನ ವಿವೇಕ ಬುದ್ಧಿ (superego)ಗೆ ಸಂತೈಸಿ, ಜ್ಯೂನಿಯರ್ ಬಿ.ಎಸ್‌ಸಿ. ಮಾಡತೊಡಗಿದೆ... ಹೊರಗೆ ತೋರಿಕೆಗೆ ಮಾತ್ರ ನಿರಾಶೆ–ಎಂಜಿನಿಯರಿಂಗಿಗೆ ಪ್ರವೇಶ ದೊರೆಯಲಿಲ್ಲವೆಂದು; ಆದರೆ ಒಳಗೆ ಮಾತ್ರ ಒಂದು ಬಗೆಯ ಸಮಾಧಾನ!– 'ಶ್ರೀಕಾಂತನನ್ನು ಬಿಟ್ಟು–ಅಲ್ಲ ಶ್ರೀಕಾಂತ – ಕಾಮಿನಿಯರನ್ನು ಬಿಟ್ಟು ಹೋಗುವದೆಂದರೆ ಜೀವದ ಸುತ್ತಿನ ಮಾತು.... ಈಗ ಧಾರವಾಡದಲ್ಲಿಯೇ ನಾನು ಉಳಿಯುವೆನಾದ್ದರಿಂದ, ಸಹವಾಸ ಸಂಬಂಧಗಳ ಬೆಳವಣಿಗೆಗೆ ಒಳ್ಳೆಯ ಆಸ್ಪದ.... ಯೋಗಾಯೋಗ!'

ಶ್ರೀಕಾಂತನಿಗೆ ಬಿ.ಎ. ಪರೀಕ್ಷೆಯಲ್ಲಿ ಫರ್ಸ್ಟ್‌ಕ್ಲಾಸು ದೊರೆಕಿತು. ಯುನಿವ್ಹರ್ಸಿಟಿಯ ಒಂದೆರಡು ಬಹುಮಾನಗಳೂ ದೊರೆತವು.

"ಇದರ ಶ್ರೇಯಸ್ಸು ನಿನಗೆ ಸಲ್ಲತಕ್ಕದ್ದು, ಗೌರೀಶ," ಎಂದು ಗದ್ದ ಹಿಡಿದು ಹೇಳಿದ ಶ್ರೀಕಾಂತ. "ನಿನ್ನ ಸಹಾಯ–ಸ್ಫೂರ್ತಿಗಳಿಲ್ಲದಿದ್ದರೆ, ನನ್ನಿಂದ ಅಭ್ಯಾಸ ಆಗುತ್ತಿರಲೇ ಇಲ್ಲ."

ಶ್ರೀಕಾಂತನ ಶ್ರೀಮಂತ ಕಕ್ಕನವರು ಅವನನ್ನು ಇಂಗ್ಲೆಂಡಿಗೆ ಕಳಿಸಿ ಕೊಡಲು (ಹಣ ಕಡ ಕೊಟ್ಟು) ತಯಾರಾದರು. 'ಎಮ್. ಎ. ಮುಗಿದ ನಂತರ ವಿಚಾರ ಮಾಡುವೆ, ಎಂದು ಸ್ವಾಭಿಮಾನಿಯಾದ ಶ್ರೀಕಾಂತ ಅವರ ಉದಾರತನಕ್ಕೆ ಆಸ್ಪದ ಕೊಡಲಿಲ್ಲ.....

"ಎಲ್ಲಕ್ಕಿಂತ ಮೊದಲು ಜೀವನಕ್ಕೆ ತಳಹದಿಯನ್ನು ತಯಾರಿಸಬೇಕು...." ಶ್ರೀಕಾಂತನ ಉದ್ದೇಶ.

ಜೀವನದ ತಳಹದಿಯೆಂದರೆ ಪ್ರೇಮ ಎಂಬ ಉತ್ತರ ನನ್ನ ನಾಲಿಗೆಯ ತುದಿಯವರೆಗೆ ಬಂತು.

"ನಿನ್ನ ಸ್ವಂತ ತತ್ವಜ್ಞಾನ ಕಟ್ಟಲು ಬಹಳ ವರ್ಷಗಳು ಹಿಡಿದರೆ" ನಾನು ನುಡಿದೆ.

"ಬೇಕಾದಷ್ಟು ವರ್ಷ ಹತ್ತಲಿ ! ಆದರೆ ನನ್ನ ತತ್ವಜ್ಞಾನದ ರೂಪು ರೇಷೆಗಳು ತಿಳಿಯಲು ಬಹಳ ವರ್ಷ ಬೇಕಾಗಿಲ್ಲ. ಒಂದೆರಡು ವರ್ಷಗಳಲ್ಲಿ ಆ ರೂಪುರೇಷೆಗಳು ತಾವಾಗಿಯೇ ಸ್ಪಷ್ಟವಾಗಿ ಮೂಡದಿರಲಾರವು....."

* * *

ಕಾಮಿನಿಯ ಮ್ಯಾಟ್ರಿಕ್ಕದ ಅಭ್ಯಾಸ ಜೋರಿನಿಂದ ಸಾಗಿತು.

ಸ್ವಯಂಕೇಂದ್ರಿತ ಶ್ರೀಕಾಂತ ಅವಳ ಅಭ್ಯಾಸದ ಕಡೆಗೆ ಲಕ್ಷ್ಯ ಕೊಡಲಿಲ್ಲ.

"ಗೌರೀಶ, ನೀನಾದರೂ ಸ್ವಲ್ಪ ನಮ್ಮ ಕಾಮಿನಿಗೆ ಸಹಾಯಮಾಡಪ್ಪ" ಎಂದು ಅವರ ತಾಯಿ, ಸರಲಾಮಾಂಶಿಯವರು ಹೇಳಿದಾಗ, ಆನಂದದಿಂದ ಗಿರಕಿ ಹೊಡೆದಿತ್ತು ಹೂದಯ.

ಶ್ರೀಕಾಂತನ ಮನೆಗೆ ದಿನಾಲು ಹೋಗಲು ನಾನು ಪ್ರಾರಂಭಿಸಿದೆ. ಆಗ ತಲೆಯಲ್ಲಿ ಯಾವಾಗಲೂ ನೀಳಾಂಜನೆಯ ನೃತ್ಯ ! ನೂರೆಂಟು ಕನಸುಗಳು, ಹಂಬಲುಗಳು ಅಪೇಕ್ಷೆಗಳು, ಶಂಕೆಗಳು ಕಣ್ಣು ಮುಚ್ಚಾಲೆಯಾಡುವ ಕಾಲ....' ಇಂದು ಕಾಮಿನಿಗೆ ಭೂಮಿತಿ ಕಲಿಸುವಾಗ, ಅವಳ ಕೈಯಮೇಲೆ ನನ್ನ ಕೈಯನ್ನಿಡಬೇಕು.... 'ನೀನು ಕಲಿಸಿದ್ದು ನನಗೆ ಏನೂ ತಿಳಿಯಲಿಲ್ಲ ; ಇನ್ನೊಮ್ಮೆ ಕಲಿಸು. ನನ್ನ ತಲೆಯಲ್ಲಿ ಬರೇ ಬಟಾಟೆ ತುಂಬಿರಬೇಕು....' ಎಂದು ಮುಖ ಕಿವುಚಿ ಮಾತನಾಡುವಾಗ ಮೂಡಿದ ತುಂಟ ದೈನ್ಯ ಎಷ್ಟು ನಾಟಕೀಯವಾಗಿ ಕಂಡಿತ್ತು ಇಂದು... ಬಟಾಟೆಯ ಭಾಜಿ ನನಗೆ ಬಹಳ ರುಚಿ, ಎಂದು ನಾನು ನುಡಿದಾಗ ಅವಳು ನಕ್ಕ ರೀತಿ, ನಕ್ಕನಂತರ ನನ್ನೆಡೆಗೆ ಸೂಕ್ಷ್ಮವಾಗಿ ನೋಡಿದ ಬಗೆ ಎಷ್ಟು ಮನೋವೇಧಕವಾಗಿದ್ದವು – ಅರ್ಥಸೂಚಕವಾಗಿದ್ದವು.... ಅವಳ ಸೂಕ್ಷ್ಮದೃಷ್ಟಿಯಲ್ಲಿ ನಿಜಕ್ಕೂ ಏನಾದರೂ ಅರ್ಥವಿತ್ತೇ?.... ಅವಳ ವಧರದ ವಾಟ ಲಾನಾಟರ್ನರಳಂತ ಇದೆಯಲ್ಲವೇ! ಅವಳಿಗೆ ಸೀರೆ ಹೆಚ್ಚು ಶೋಭಿಸುವದೋ' ಸ್ಕರ್ಟೊ?...ಸೀರೆಯುಟ್ಟಾಗ, ಆ ಸೀರೆಯ ನೀರಿಗೆಗಳು ಎಷ್ಟೊಂದು ರಹಸ್ಯಮಯವಾಗಿ ತೋರುವವಲ್ಲ!... ಇಂದು ಗುರುನಾಥ ಬಂದೊಡನೆ, ಕಾಮಿನಿ ತನ್ನ ಒಂದು ಹೆರಳನ್ನು ಮುಂದೆ ತನ್ನ ವಕ್ಷಸ್ಥಳದಮೇಲೆ ಯಾಕೆ ತಂದಳು?.... ಇಂದು ಗೋಪಾಲ ಬಂದಾಗ ಅವಳ ಮಾತಿಗೆ ಮಹಾ ಪೂರವೇಕೆ ಬಂದಿತ್ತು? ಗೋಪಾಲ ಎಷ್ಟು ನಿರ್ಭಿಡೆಯಿಂದ ಅವಳ ಮುಖಸ್ತುತಿ ಮಾಡುತ್ತಾನಲ್ಲ! 'ಕಾಮಿನಿ, ನೀನು ಡಾನ್ಸ ಯಾಕೆ ಕಲಿಯುವುದಿಲ್ಲ?' ಎಂದು ಎಷ್ಟು ಸಹಜವಾಗಿ ಕೇಳಿದನಲ್ಲ ಆತ ! ನಿನ್ನಲ್ಲಿ ಆ ಕಲೆ ಇದೆ ಎಂದು ನಾನು ಎದೆ ತಟ್ಟಿ ಹೇಳಬಲ್ಲೆ'.... ಗೋಪಾಲನಂತೆ ನನಗೇಕೆ ಸ್ಪಷ್ಟವಾಗಿ ಸ್ತುತಿಮಾಡಲು ಬರುವದಿಲ್ಲ? – ಗೋಪಾಲನೆಡೆಗೆ ಅವಳು ಆಕರ್ಷಿತಳಾಗಿರುವಳೇ?....ಶ್ರೀಕಾಂತ ಅವಳ ವಿಷಯದಲ್ಲಿ ಅಷ್ಟೊಂದು ಅಸ್ಥೆ ಯಾಕೆ ತೋರಿಸುವದಿಲ್ಲ?... ಕಾಮಿನಿಯನ್ನು ಇನ್ನೊಮ್ಮೆ ಮುದ್ದಿಸಬೇಕು–ಹೌದು! ಆದರೆ ಹೇಗೆ? ಎಲ್ಲಿ?–ಛೆ, ಆ ಧೈರ್ಯ ಇನ್ನೊಮ್ಮೆ ಬರಲಾರದು.... ಒಮ್ಮೆ–ಶ್ರೀಕಾಂತ ಕಾಲೇಜಿನಿಂದ ಮನೆಗೆ ಹೋಗುವದಕ್ಕಿಂತ ಮುಂಚೆಯೇ ಅವರ ಮನೆಗೆ ಹೋಗಿ ಕಾಮಿನಿಯ ಜೊತೆಗೆ ಮಾತನಾಡಬೇಕು....ಆದರೆ....

ತಲೆಯಲ್ಲಿ ಬಂದ ವಿಚಾರಗಳೆಲ್ಲ ಒಂದೇ ಕೇಂದ್ರದತ್ತ ಧಾವಿಸುತ್ತಿದ್ದವು ಆಗ !

ಶ್ರೀಕಾಂತಕೇಂದ್ರದಷ್ಟೆ ಮಹತ್ವದ್ದಾಯಿತು ಕಾಮಿನಿಕೇಂದ್ರ!

* * *

ಒಂದು ಸಂಜೆ ನಾನು ಶ್ರೀಕಾಂತನ ಮನೆಗೆ ಹೋದಾಗ ಆತ ಮನೆಯಲ್ಲಿರಲಿಲ್ಲ. ಆಗ ರಾಯಿಸ್ಟ ಪಕ್ಷದ ಓರ್ವ ಸ್ಥಾನಿಕ ಮುಖಂಡನೊಡನೆ ಎಲ್ಲಿಯೋ ಹೋಗಿದ್ದ, ಚರ್ಚೆಗೆ ! ಇತ್ತಿತ್ತಲಾಗಿ ಆತನಿಗೆ ಎಮ್. ಎನ್ ರಾಯನ ತತ್ವಜ್ಞಾನ ಕೊಂಚ ಹಿಡಿಸತೊಡಗಿತ್ತು....

"ಕಾಮಿನಿ, ಏನಾದರೂ ಡಿಫಿಕಲ್ಟೀಜ್ ಇವೆಯೇನು?" ನಾನು ಕೇಳಿದೆ.

"ವಿಶೇಷ ಏನಿಲ್ಲ.... ಅಣ್ಣನಿಲ್ಲ ಮನೆಯಲ್ಲಿ... ಆದರೂ ಕೂಡ್ರಲು ಏನೂ ಅಡ್ಡಿಯಿಲ್ಲವಷ್ಟೆ ?"

"ಥ್ಯಾಂಕ್ಸ್...." ನನ್ನ ಹೃದಯದಲ್ಲಿ ಆನಂದ ಒಸರಿಸಿತು!

ಕಾಮಿನಿ ಹರಟೆಹೊಡೆಯಲು ಪ್ರಾರಂಭಿಸಿದಳು. ಹರಟೆಯ ಮುಖ್ಯ ವಿಷಯ : ಅವಳ ಸಾಲೆ, ಸಾಲೆಯ ಮಾಸ್ತರರು, ಅವಳ ಗೆಳತಿಯರು....

"ಕಾಮಿನಿ, ನಿನ್ನೆ ನಿಮ್ಮ ಸಾಲೆಯ ಡ್ರಾಯಿಂಗ್ ಮಾಸ್ತರರು ನಿನ್ನೊಡನೆ ಮಾತನಾಡುವುದನ್ನು ನೋಡಿದೆ...."

"ಎಲ್ಲಿ?"

"ಸಿಲ್ವರ್‌ಜುಬಿಲಿ ಕ್ರಾಸಿನ ಹತ್ತಿರ...."

"ಮುಂದೆ ?"

"ಅಲ್ಲ–ಹಾಗೇ ಕೇಳಿದೆ.... ಆತ ಏನು ಮಾಡುತ್ತಿದ್ದ?"

"ಇಷ್ಟೇಕೆ ಕುತೂಹಲ?"

"ಅಲ್ಲ–ಅವನ ವಿಷಯದಲ್ಲಿ ಒಳ್ಳೆಯ ಮತವಿಲ್ಲ ಜನರಲ್ಲಿ...."

"ಜನರೇನು ಬೇಕಾದದ್ದನ್ನುತ್ತಾರೆ...."

"ಆದರೂ ಸುಮ್ಮ ಸುಮ್ಮನೆ ಏನೂ ಅನ್ನಲಿಕ್ಕೆ ಹೋಗುವದಿಲ್ಲ ಜನರು–ಕಾರಣವಿಲ್ಲದೆ....ನಿನ್ನೊಡನೆ ಆತ ಮಾತಾಡಿದ್ದಾದರೂ ಏನು? ಹೇಳಲ್ಲ..."

ಅವಳು ನನ್ನೆಡೆಗೆ ಸೂಕ್ಷ್ಮವಾಗಿ ನೋಡಿ ನಕ್ಕಳು. ಆ ನಗೆಯಲ್ಲಿ ನನ್ನ ಕುತೂಹಲದ ಬಗ್ಗೆ ಜಿಗುಪ್ಸೆ ಇತ್ತೆ, ಅಥವಾ ನನ್ನ ಕುತೂಹಲದ ಬಗ್ಗೆ ಕುತೂಹಲವೇ ಇತ್ತೇ?

"ನನ್ನ ಅಭ್ಯಾಸ ಹೇಗೆ ನಡೆದಿದೆಯೆಂದು ಕೇಳಿದರು."

"ನೀನೇನು ಉತ್ತರ ಕೊಟ್ಟೆ ?"

"ಒಳ್ಳೆಯ ಕ್ರಾಸ್-ಇಕ್ಸಾಮಿನೇಶನ್ ಸುರುವಾಯಿತಲ್ಲ ನಿನ್ನದು!" ಕಾಮಿನಿ ಮತ್ತೊಮ್ಮೆ ನಕ್ಕಳು.

"ತಪ್ಪೇನಿದೆ ಅದರಲ್ಲಿ?"

"ಹಾಗಲ್ಲ-ನಾ ಅವರಿಗೆ ಹೇಳಿದೆ : ನನ್ನ ಅಭ್ಯಾಸ ಸಾಧಾರಣ ನಡೆದಿದೆ. ನಮ್ಮಣ್ಣನ ಪರಮಭಕ್ತ-ಅಲ್ಲ, ಮಿತ್ರ-ಶ್ರೀಮಾನ್ ಗೌರೀಶರಾವ ಉಪಾಸನಿಯವರು ನನಗೆ ಆಗಾಗ್ಗೆ ತಮ್ಮ ಅಮೌಲ್ಯ ಸಹಾಯ ನೀಡುತ್ತಾರೆ..." ಕಾಮಿನಿಯ ನಾಟಕೀಯತೆ ನನ್ನಲ್ಲೇಕೋ ಸಂಕೋಚವನ್ನುಂಟುಮಾಡಿತು.

"ಆಮೇಲೆ?"

"ಇನ್ನೂ ತೃಪ್ತಿಯಾಗಲಿಲ್ಲವೇ? ....ಆಮೇಲೆ ಅವರು ಹೇಳಿದರು: "ನಾನು ಕುಂದಾ ಕುಮತೇಕರರಿಗೆ ಟ್ಯೂಶನ್ ಕೊಡುತ್ತಿರುವೆ-ನಿಮ್ಮ ಕಾ:ಲನಿಯಲ್ಲಿಯೇ. ಬೇಕಾದರೆ ನೀನೂ ಬಂದು ಕೂಡಬಹುದು. ನಾನೇನು ನಿನ್ನಿಂದ ರೊಕ್ಕ ತೆಗೆದುಕೊಳ್ಳುವದಿಲ್ಲ' ಎಂದು."

"ರೊಕ್ಕ ತೆಗೆದುಕೊಳ್ಳದೆ ಮತ್ತೇನನ್ನು ತೆಗೆದುಕೊಳ್ಳುವನಂತೆ ?" ನನಗೆ ಗೊತ್ತಿಲ್ಲದೆಯೇ ನನ್ನ ನುಡಿಯಲ್ಲಿ ವ್ಯಂಗ್ಯ ಮೂಡಿತ್ತು.

ಕಾಮಿನಿಗೆ ಸಿಟ್ಟು ಬಂತು. ಅವಳು ಉತ್ತರ ಕೊಡದೆಯೇ ಸಮೀಪಿನ ಪುಸ್ತಕವೊಂದನ್ನು ತೆಗೆದುಕೊಂಡು ಓದುವ ನಟನೆ ಮಾಡಿದಳು.

"ನನ್ನ ತಪ್ಪಾಯಿತು.... ಏನಾದರೂ ಡಿಫಿಕಲ್ಟೀಜ್ ಇದ್ದರೆ ಕೇಳು."

"ಏನೂ ಇಲ್ಲ." ಕಾಮಿನಿ ಮೇಲೆ ಕಣ್ಣೆತ್ತದೆ ನುಡಿದಳು.

ಅವಳ ತಣ್ಣನೆಯ ದನಿ ನನ್ನ ಮನಸ್ಸಿಗೆ ಚುಚ್ಚಿತು....

"ಹಾಗಾದರೆ ನಾ ಹೋಗಲೇ ?"

"ಹೋಗಬಹುದು."

ನನ್ನ ತಲೆ ಗಿರ್ರೆಂದಿತು ! ಹುಡುಗಿಯರನ್ನು ರಮಿಸುವ ಕಲೆ, ಅವರ ಸಿಟ್ಟು-ಸೆಡವುಗಳನ್ನು ಶಾಂತಪಡಿಸುವ ಕಲೆ ನನಗಿನ್ನೂ ಗೊತ್ತಿರಲಿಲ್ಲ. ನಾನು ನನ್ನ ಮನಸ್ಸಿಗೆ ಹಚ್ಚಿಕೊಂಡು ಜಡವಾದ ಕಾಲುಗಳನ್ನು ಅವರ ಮನೆಯಿಂದ ಎಳೆಯುತ್ತ ಹೊರಟೆ. ಬಾಗಿಲ ಹೊರಗೆ ಕಾಲಿಡುವಾಗ, 'ಕಾಮಿನಿ ಕ್ಷಮಿಸು, ತಪ್ಪು ತಿಳಿದುಕೊಳ್ಳಬೇಡ' ಎಂಬ ಶಬ್ದಗಳು ಬಾಯಲ್ಲಿಯೇ ಕರಿಗಿಹೋದವು.

ಆ ದಿನದ ನನ್ನ ಏಕಾಂಗಿ ತಿರುಗಾಟ, ರಾತ್ರಿಯಲ್ಲಿ ನನಗಾದ ತಳಮಳ, ಪಶ್ಚಾತ್ತಾಪ ಅಷ್ಟಿಷ್ಟಲ್ಲ. ಯಾವುದೋ ಅಸ್ಪಷ್ಟ ಭೀತಿ, ಸಂಶಯ ನನ್ನ ಕೋಣೆಯಲ್ಲಿ ಭೂತದಂತೆ ಚಲಿಸಿದವು.....

ಆದರೆ ನನ್ನ ದುಃಖದಲ್ಲಿ ಒಂದು ಬಗೆಯ ಪರಿಮಳವಿತ್ತು, ಪ್ರೇಮದ ಊದುಬತ್ತಿ ಹೊಗೆಯಿತ್ತು!

* * *

ದೀಪಾವಳಿ ಸೂಟಿಯಲ್ಲಿ ನಾನು ಸಿರ್ಸಿಗೆ ಹೋದಾಗ ಕಾಮಿನಿ ಕುಂದಾಕುಮತೇಕರಳ ಮನೆಗೆ ಅಭ್ಯಾಸಕ್ಕೆ ಹೋಗತೊಡಗಿದ್ದಳು. ನಾನು ಮರಳಿ ಧಾರವಾಡಕ್ಕೆ ಬಂದನಂತರ ಇದು ನನಗೆ ಗೊತ್ತಾಯಿತು :

ಆಗ ನನಗಾದ ನೋವು ಅಷ್ಟಿಷ್ಟಲ್ಲ !

ಪ್ರೇಮವೆಂದರೆ ರೋಮಿಯೋ–ಜ್ಯೂಲಿಯೆಟ್ಟರ ಪ್ರೇಮದಂತೆ ಸರಳ ಶುದ್ಧ ಮಾರ್ಗದಿಂದ ಹೋಗಬೇಕಾದದ್ದು ಎಂದು ನನ್ನ ಭಾವನೆ ಆಗ ಪ್ರೇಮವೆಂದರೆ ಒಂದು ದಿವ್ಯಭಾವನೆ ; ಅದು ಸುಂದರವಾಗಿರಬೇಕು, ಸರಾಗವಾಗಿರಬೇಕು, ಆದರ್ಶವಾಗಿರಬೇಕು. ಪ್ರೇಮದ ದಾರಿ ಬೆಳದಿಂಗಳಲ್ಲಿಯ ಮಲ್ಲಿಗೆಯ ದಾರಿ ; ಆ ದಾರಿಗುಂಟ ನಕ್ಷತ್ರಗಳ ದೀಪದ ಕಂಬಗಳು.... ಆ ದಾರಿದಲ್ಲಿ ಬೇಸರ – ದುಃಖ–ನೋವು–ನಿರಾಶೆಗಳಿಗೆ ಸ್ಥಾನವಿರಬಾರದು..... ಮರಣ ಬಂದರೂ ಅಡ್ಡಿಯಿಲ್ಲ ; ಆ ದಾರಿಯಲ್ಲಿಯ ಮರಣವೆಂದರೆ ಅನಂತತೆ!...

ಕಾಮಿನಿಯ ವರ್ತನೆ ನನ್ನಲ್ಲಿ ನೋವನ್ನುಂಟುಮಾಡಿತು. ಇಂಥ ನೋವು ನನಗೆ ತೀರ ಹೊಸದು ಆಗ ! ಈ ನೋವಿನ ಹೊಡೆತಕ್ಕೆ ನನ್ನ ಹೃದಯಲ್ಲಿ ಕಲಮಲವೆದ್ದಿತು, ದಿಕ್ಕು ತೋಚದಾಯಿತು....ನನ್ನ ದುಃಖವನ್ನು ತೋಡಿಕೊಳ್ಳುವದಾದರೂ ಯಾರ ಮುಂದೆ? ಶ್ರೀಕಾಂತನಿಗಂತೂ ನನ್ನ ಹೃದಯದಲ್ಲಿಯ ನಾಟಕದ ಪತ್ತೆ ಕೂಡ ಇರಲಿಲ್ಲ.... ಆಗ ನಾನು ಒಂದು ಹಳೆಯ ನೋಟಬುಕ್ಕಿನ ಕೊನೆಯ ಪುಟದ ಮೇಲೆ ಗೀಚಿ ಹಾಕಿದ್ದು ಹೀಗಿದೆ:

"ಕಾ...ಕಾ...ಕಾ...ಹೀಗೇಕೆ ಮಾಡಿದೆ ನೀನು? ನೀನೇಕೆ ಆ ಮಾಸ್ತರನ, ಅಲ್ಲ....ಸರ್ಪದ, ಹತ್ತಿರ ಸುಳಿದಾಡಿದೆ? ....ನಾನು ಇಷ್ಟು ಹೇಳಿದ ಮೇಲೆ ಕೂಡ ನೀನು ಹೋದಿಯೆಂದರೆ....ನನ್ನ ಅಪಮಾನವಲ್ಲವೆ?

"ಕಾ....ನಿನ್ನ ಪ್ರೀತಿಯ ಸಲುವಾಗಿ, ಅಲ್ಲ... ನಿನ್ನ ಪ್ರೀತಿಯ ಒಂದು ಮಾತು, ಒಂದು ದೃಷ್ಟಿಯ ಸಲುವಾಗಿ ನನ್ನ ಜೀವನವನ್ನೇ ನಾನು ಧಾರೆಯೆರೆಯಲು ಸಿದ್ಧನಿದ್ದಾಗ–ನಿನ್ನನ್ನು ಹೂವಿನಂತೆ ನನ್ನ ಹೃದಯದ ಅಂಗೈಯಲ್ಲಿ ರಕ್ಷಿಸಲು ನಾನು ಟೊಂಕಕಟ್ಟಿದ್ದಾಗ–ನೀನು ಹೀಗೆ, ನನ್ನ ಮಾತಿಗೆ ಬೆಲೆ ಕೊಡದೆ, ಒಂದು ಭಯಂಕರ ಸಿಂಹದ ಗುಹೆಯ ಬಳಿಗೆ ಬೇಕಂತಲೇ ಸುಳಿದಾಡಬಹುದೇ? .......ಅಯ್ಯೋ, ಯಾವುದೋ ಹೆಸರಿಲ್ಲದ ಭೂತವೊಂದು

ನನ್ನ ಹೃದಯವನ್ನು ಹಿಂಡಿ ಹಿಪ್ಪೆ ಮಾಡುತ್ತಿದೆಯಲ್ಲ!...."

ಈಗ ನನ್ನ ಈ ಶಬ್ದಗಳು, ಈ ಭಾವಲಹರಿಗಳು ಹಾಸ್ಯಾಸ್ಪದವಾಗಿ ತೋರುವವು!

ಯಾಕೆ?

ಮನಸ್ಸು ಬೆಳೆಯಿತೆಂದೇ? ಅನುಭವ ಬೆಳೆಯಿತೆಂದೇ? ನಾವು ಹೆಚ್ಚು ಹೆಚ್ಚು ವಿಕಾಸಗೊಂಡಂತೆ, ನಮ್ಮ ಗತಕಾಲವು ಹೀಗೆಯೇ ಹಾಸ್ಯಾಸ್ಪದವಾಗಿ ತೋರುವದೇ? ಇದೇ ತರ್ಕ ಪ್ರಕಾರ ಒಬ್ಬ ದೇವನ ದೃಷ್ಟಿಯಿಂದ, ಅತಿ ಮಾನವನ ದೃಷ್ಟಿಯಿಂದ ನಮ್ಮ ಮಾನವರ ಎಲ್ಲ ವ್ಯಾಪಾರಗಳು ಕ್ಷುಲ್ಲಕ, ಹಾಸ್ಯಾಸ್ಪದ, ತಿಳಿಗೇಡಿಗಳಾಗಿ ತೋರಲಿಕ್ಕಿಲ್ಲವೇ?

ಮಾನವನ ಬೆಳವಣಿಗೆ = ಹಾಸ್ಯಾಸ್ಪದ ವಸ್ತುಗಳ ಕ್ಷೇತ್ರದ ಬೆಳವಣಿಗೆ! ಈ ಸಮೀಕರಣ ಸರಿಯೇ?

* * *

ಕಾಮಿನಿ ಮ್ಯಾಟ್ರಿಕ್ ಪಾಸಾದಳು. ಮುಖ್ಯವಾಗಿ ನನ್ನ ಸಹಾಯದಿಂದ! ಕಾಮಿನಿಯ ಮೇಲೆ ನನಗೆ ಹೆಚ್ಚು ಅಧಿಕಾರ ಬಂದಂತೆ ನನಗನಿಸತೊಡಗಿತು.

ಆದರೂ, ನಾನು ಜೋಗದ ನಂತರ ಕಾಮಿನಿಯನ್ನು ಒಂದು ಸಲವೂ ಆಲಂಗಿಸಲಿಲ್ಲ, ಮುದ್ದಿಸಲಿಲ್ಲ.....

ನನ್ನ ಪ್ರೇಮವನ್ನು ಶುದ್ಧೀಕರಿಸುವುದೇ ನನ್ನ ಗುರಿಯಾಗಿತ್ತು ಆಲಿಂಗನ – ಚುಂಬನಗಳಲ್ಲಿ ದೈಹಿಕ ಮೋಹವೇ ಮುಖ್ಯ. ಈ ದೈಹಿಕ ಮೋಹದಿಂದ ಸ್ವತಂತ್ರವಾಗಿಡಬೇಕು ನನ್ನ 'ಆದರ್ಶ' ಪ್ರೇಮವನ್ನು ಹೃನ್ಮನಗಳ ಸಾಮರಸ್ಯವಾಗುವ ತನಕ ನಮ್ಮ ದೇಹಗಳಿಗೆ ಲಗಾಮು ಹಾಕಿ ಅವನ್ನು ದೂರ ದೂರವಿಡಬೇಕು.....

_ಕಾಮಿನಿಯ ಬುದ್ಧಿಯ ಪಾತಳಿಯನ್ನು ಏರಿಸಬೇಕು. ತತ್ವಜ್ಞಾನ–ಕಾವ್ಯ–ವಿಜ್ಞಾನ–ಸಮಾಜಸೇವೆ–ಸಾಮಾಜಿಕ ಕ್ರಾಂತಿ ಮುಂತಾದ ವಿಷಯಗಳಲ್ಲಿ ಅವಳ ಆಸ್ಥೆಯನ್ನು ಹುಟ್ಟಿಸಬೇಕು, ಬೆಳೆಸಬೇಕು....

–ನಮ್ಮ ಪ್ರೇಮವನ್ನು ಪ್ಲೆಟೋನಿಕ್ಕದ ಉಚ್ಚ ಪಾತಳಿಯ ಮೇಲೆ ಬೆಳೆಸಬೇಕು. ಅಂದಾಗಲೇ ನಮ್ಮ ಪ್ರೇಮ ಕಲ್ಪವೃಕ್ಷವಾದೀತು... ನಮ್ಮ ಜೀವನದ ತುಂಬ ಪುಷ್ಪವೃಷ್ಟಿಯಾದೀತು....

ನನ್ನ ಮೊದಲ ಚುಂಬನದಲ್ಲಿಯ ಪಾಪಾಂಶವನ್ನು ತೊಡೆದುಹಾಕಿ. ಅದನ್ನು ಆದರ್ಶೀಕರಿಸುವ ಯತ್ನಮಾಡಿದೆ...

"ಕಾಮಿನಿ, ಜೋಗದಲ್ಲಿ ಅಂದು ನಾನು ಮಾಡಿದ ಮೂರ್ಖತನವನ್ನು

ಕ್ಷಮಿಸಿರುವಿಯಾ? ನಿಜವಾಗಿಯೂ?" ನಾನು ಒಮ್ಮೆ ಧೈರ್ಯ ಮಾಡಿ ಕೇಳಿದೆ.

"ನಿನಗದು ಮೂರ್ಖತನವೆನಿಸಿತೇನು ?"

ಕಾಮಿನಿಯ ಪ್ರಶ್ನೆ ನನ್ನನ್ನು ಚಕಿತಗೊಳಿಸಿತು.

"ಹೌದು; ಹಾಗೆ ಒಮ್ಮೊಂದೊಮ್ಮೆಲೆ ಮೈಯಲ್ಲಿ ಬಂದವರಂತೆ ವರ್ತಿಸುವುದೆಂದರೆ ಮೂರ್ಖತನವಲ್ಲವೇ ? ಹಾಗೂ ಹಾಗೆ ವರ್ತಿಸಲು ಯಾವ ಅಧಿಕಾರವಿತ್ತು ?" ನಾನು ಸಂಭಾವಿತ ಪ್ರಶ್ನೆ ಕೇಳಿದೆ.

"ನಿನ್ನಲ್ಲಿ ಯಾವುದೋ ಭಾವನೆ ಉತ್ಕಟವಾಗಿರಬೇಕು ಆಗ_"

"ಕಾಮಿನಿ, ನಿನ್ನಲ್ಲಿ ಎಷ್ಟು ತಿಳಿವಳಿಕೆ ಇದೆಯಲ್ಲ ?"

ಕಾಮಿನಿ ನಕ್ಕಳು.....ಗೂಢ ನಗೆ !

"ಹೌದು-ಆ ಭಾವನೆ ಪವಿತ್ರವಾಗಿತ್ತು...." ನಾನು ಗುಣಗುಣಿಸಿದೆ. ಇಲ್ಲವೆಂದವರಾರು?.... ಪವಿತ್ರ ಭಾವನೆಗೂ ಮೂರ್ಖತನಕ್ಕೂ ಏನು ಸಂಬಂಧ ಹಾಗಾದರೆ ?"

"ಹೃದಯದ ಭಾವನೆ ಪವಿತ್ರ ; ದೈಹಿಕ ಹಂಬಲು – ಮೋಹ ಮೂರ್ಖತನ....."

"ಆದರೆ...." ಕಾಮಿನಿ ನಡುವೆಯೇ ಸುಮ್ಮನಾದಳು.

"ಆದರೆ... ಏನು?"

"ಏನೋ ನನಗೆ ಹೇಳಲಿಕ್ಕೆ ಬರುವದಿಲ್ಲ. ಎಷ್ಟು ಮಾತ್ರ ಹೇಳಬಲ್ಲೆ : ನಿನ್ನ ಮತ ಸಮಾಧಾನಕರವಾಗಿಲ್ಲ...."

"ಕಾಮಿನಿ !"

"ಉಂ ?"

"ನಿನ್ನಲ್ಲಿಯೂ ಅಂಥ ಪವಿತ್ರ ಭಾವನೆ ಉಂಟಾಗಿದೆಯೆ ?

ನನ್ನ ಜೀವ ಅವಳ ಉತ್ತರಕ್ಕೆ ಜೋತುಬೀಳುವುದರಲ್ಲಿತ್ತು !

"ಇಲ್ಲ...."

"ಆಂ?"

"...."

"ಏನಂದಿ?"

"ನನಗೇನು ತಿಳಿಯುವದಿಲ್ಲ_ನಾನಿನ್ನೂ ಸಣ್ಣವಳು. ದಯವಿಟ್ಟು ಇಂಥ ಪ್ರಶ್ನೆಗಳನ್ನು ಕೇಳಬೇಡ, ಗೌರೀಶ."

ನನ್ನ ಮುಖ ತಾನಾಗಿಯೇ ಇಳಿಯಿತು. ದೇಹದಲ್ಲಿಯ ಶಕ್ತಿ ಉಡುಗಿ

ಹೋದಂತಾಯಿತು. ಮನಸ್ಸಿನಲ್ಲಿ ಕಾವಳದ ಛಾಯೆ ಪಸರಿಸಿತು. ಕಾಮಿನಿಯ ಕಡೆಗೊಮ್ಮೆ ತೀಕ್ಷ್ಣವಾಗಿ ನೋಡಿ, ಹತ್ತಿರದ ಸಣ್ಣ ಟೇಬಲ್ಲಿನ ಮೇಲೆ ಬಿದ್ದ ಟೈಮ್ಸ ಪತ್ರಿಕೆಯಲ್ಲಿ ನನ್ನ ದೃಷ್ಟಿಯನ್ನು ಹುಗಿದೆ!

* * *

"ನನಗೇನೂ ತಿಳಿಯುವದಿಲ್ಲ"–ಕಾಮಿನಿಯ ಮಾತು !

ನನಗಾದರೂ ಏನು ತಿಳಿಯುತ್ತಿತ್ತು ಆಗ ? ಪ್ರೇಮದ–ಪ್ರೇಮೋದ್ರೇಕದ–ಕಾಮದ ವಾಸ್ತವ ರೂಪು ತಿಳಿದಿತ್ತೇ ? ಇಲ್ಲ ! ಕಾಲ್ಪನಿಕ ಆದರ್ಶಗಳ ಮಾಯಾ ಮಂದಿರವಾಗಿತ್ತು ನನ್ನ ಮನಸ್ಸು ಆಗ : ಆದರ್ಶಪ್ರೇಮ, ಹೃನ್ಮನ ಸಾಮರಸ್ಯ ; ಪ್ಲೆಟೋನಿಕ್ ಸಹವಾಸ ಮುಂತಾದ 'ಉದಾತ್ತ' ವಿಚಾರಗಳ ಗದ್ದಲದಲ್ಲಿ, ವಾಸ್ತವತೆಯ ಅಜ್ಞಾನ ಬೆಳೆಯುತ್ತಿತು. ನನ್ನ ಕಲ್ಪನೆಯ ಚೌಕಟ್ಟಿನೊಳಗೆ ಕೂಡದ ವಾಸ್ತವತೆಯಿಂದ ನಾನು ದಿಙ್ಮೂಢನಾಗುತ್ತಿದ್ದೆ, ದುಃಖಿತನಾಗುತ್ತಿದ್ದೆ...

ಶ್ರೀಕಾಂತ ಬೇರೊಂದು ಸಂದರ್ಭದಲ್ಲಿ ಬರೆದಿಟ್ಟ ಕೆಲವು ವಾಕ್ಯಗಳು ಎಷ್ಟು ಸತ್ಯವಾಗಿವೆ !

"...ಕತೆ–ಕಾವ್ಯ–ಕಾದಂಬರಿಗಳನ್ನೋದಿ, ದೊಡ್ಡದೊಡ್ಡ ಮುಖಂಡರ ದೊಡ್ಡದೊಡ್ಡ ಮಾತುಗಳನ್ನು ಕೇಳಿ, ನಮ್ಮ ಗುರು–ಹಿರಿಯರ ಉಪದೇಶಗಳನ್ನು ಕೇಳಿ ನಾವು ನಮ್ಮ ಮನಸ್ಸಿನಲ್ಲಿ ಆದರ್ಶಗಳನ್ನು ಕಟ್ಟುತ್ತೇವೆ....ಜೀವನದಲ್ಲಿ ಪ್ರತ್ಯಕ್ಷ ಅನುಭವ ಪಡೆಯುವಾಗ ಈ ಆದರ್ಶಗಳು ನಮ್ಮ ಕಣ್ಣು ಮುಂದೆಯೇ ಕುಸಿಯುವದನ್ನು ನೋಡುವಾಗ ನಾವು ರೋದಿಸುತ್ತೇವೆ....ಇದು ತಪ್ಪು ದಾರಿ, ದುಃಖದ ದಾರಿ.... ನಮ್ಮ ದಾರಿ Inductive logic–ವೈಜ್ಞಾನಿಕ ವಿಚಾರ ಸರಣಿಯಂತೆ ಸಾಗಬೇಕು deductiveದ ಪ್ರಕಾರವಲ್ಲ ! ನಮ್ಮ ನಿಜ ಅನುಭವಗಳ ಮುಖಾಂತರ ನಮ್ಮ ಆದರ್ಶಗಳನ್ನು ಶೋಧಿಸಬೇಕು. ಪ್ರತಿ ವ್ಯಕ್ತಿಯು ತನ್ನ ಸ್ವಂತ ಅನುಭವದೊಳಗಿಂದ (ಅವನ ಅನುಭವ, ಅವನ ಬುದ್ಧಿ ; ಕಲ್ಪನಾಶಕ್ತಿ, ಜೀವನಪ್ರಜ್ಞೆ, ಜ್ಞಾನ ಮುಂತಾದವುಗಳನ್ನವಲಂಬಿಸಿದೆ), ತನ್ನ ಶಕ್ತಿಗಳಿಗೆ ಅನುಗತವಾದ ಆದರ್ಶಗಳನ್ನು, ಮೌಲ್ಯಗಳನ್ನು ಕಲ್ಪಿಸಿ, ತನ್ನ ಜೀವನದ ಪರಿಮಿತಿ–ಕಕ್ಷೆಗಳನ್ನು ಕಂಡುಕೊಂಡು, ತನ್ನ ಆತ್ಮೋನ್ನತಿಯನ್ನು ಸಾಧಿಸಬೇಕು, ಅಥವಾ ಆತ್ಮಸ್ಪಂದನವನ್ನು ನೀಗಬೇಕು..."

ಶ್ರೀಕಾಂತನ ಕೊನೆಯ ದಿನಗಳಲ್ಲಿ, ಸ್ವಾನುಭವ, ಸ್ವಾನುಭೂತಿಗಳಿಗೆ ಮಹತ್ವದ ಸ್ಥಾನ ದೊರೆತಿತ್ತು....

ಅವನ ತಂಗಿ ಕಾಮಿನಿ ಅವನ ತತ್ವಕ್ಕಿಂತ ಎಷ್ಟೋ ವರ್ಷ ಮೊದಲು,

ಈ inductive ದಾರಿಯನ್ನು ತುಳಿಯತೊಡಗಿದ್ದಳು. 'ನನಗೇನೂ ತಿಳಿಯುವದಿಲ್ಲ,' 'ನನಗೆ ಹೇಳಲಿಕ್ಕೆ ಬರುವದಿಲ್ಲ' – ಇವು ಆ inductive ದೃಷ್ಟಿಯ ಕುರುಹುಗಳಾಗಿದ್ದವೇ?

* * *

ಕಾಮಿನಿಗೆ ಕಾಲೇಜೆಂದರೆ ಅವಳ inductive ಪದ್ಧತಿ'ಯ ಪ್ರಯೋಗ ಶಾಲೆ!

ಹದಿನೆಂಟು ವರ್ಷದ ಅವಳ ದೇಹ, ಅವಳ ಅಂಗಾಂಗಗಳಿಂದ ಹೊರಹೊಮ್ಮುವ ಗುರುತ್ವಾಕರ್ಷಣದ ಪ್ರವಾಹ, ತರುಣರ ಚಂಚಲ ಮನಸ್ಸುಗಳು ಹಾಗೂ ಕುದಿಯುವ ರಕ್ತ, ಇವು ಅವಳ ಸಾಧನಗಳು!

ಕಾಮಿನಿಗೆ ಬೇಕಾದಷ್ಟು ಗೆಳೆಯ–ಗೆಳತಿಯರು ! ಅವರಲ್ಲಿ ಗೆಳೆಯರೇ ಹೆಚ್ಚು ! ಮಾನಸಶಾಸ್ತ್ರಜ್ಞನ 'ಇಲಿ'ಗಳು !

ಅವಳ ಪ್ರಯೋಗಶಾಲೆಯ ಡಿಪಾರ್ಟಮೆಂಟುಗಳೆಂದರೆ : ಪಿಕ್ನಿಕ್ಕುಗಳು, ಟ್ರಿಪ್ಪುಗಳು, ನಾಟಕ_ಗ್ಯಾದರಿಂಗುಗಳು, ರೆಸ್ಟೋರೆಂಟಗಳು, ಸಿನೇಮಗಳು, ಕಾಲೇಜಿನ ಕಾರಿಡಾರಗಳು....!

* * *

ಆಗ–ನಾನು ಕೂಡ ಒಂದು 'ಇಲಿಯೇ'!... ಇಲಿಯಂತೆ, ಕಾಮಿನಿಯ ಹಿಂದೆ ಸುಳಿದಾಡುವ ಗುಪ್ತಚಾರ!

ಆಗಿನ ನನ್ನ ವರ್ತನೆ ವಿಚಿತ್ರವಾಗಿತ್ತು, ಹಾಸ್ಯಾಸ್ಪದವಾಗಿತ್ತು ; ತಲೆಯಲ್ಲಿ ಅಸೂಯೆ–ಸಂಶಯಗಳ ಭೂತಗಳು ಒಂದೇ ಸಮನೆ ನರ್ತಿಸತೊಡಗಿದ್ದವು....ನನ್ನ ಆತ್ಮ ಕೊರಗಿ ಕೊರಗಿ ಸೊರಗತೊಡಗಿತ್ತು....

ಆದರೆ ಜೀವನಕ್ಕೆ ಒಂದು ತೀಕ್ಷ್ಣ ಉತ್ಕಟತೆ ಬಂದಿತ್ತು, ಜ್ವಾಲಾಚಕ್ರದ ಮೇಲೆ ಗರಗರ ತಿರುಗುತ್ತಿತ್ತು ಹೃದಯ!

ಕಾಮಿನಿ ಏನು ಮಾಡುತ್ತಾಳೆ, ಯಾರೊಡನೆ ಮಾಡನಾಡುತ್ತಾಳೆ ಎಂದು ನೋಡಲು ಪಿರೇಡುಗಳನ್ನು ತಪ್ಪಿಸಿ ಹೋಗುತ್ತಿದ್ದೆ, ಏನಾದರೂ ಒಣ ನೆವ ತೆಗೆದು ಅವಳನ್ನು ಭೆಟ್ಟಿಯಾಗಿ ಮಾತನಾಡಿ ಬರುತ್ತಿದ್ದೆ..... ಅವಳು ಕಾಲೇಜಿನಿಂದ ಮನೆಗೆ ಹೋಗುವಾಗ, ಶ್ರೀಕಾಂತನ ಕಡೆಗೆ ಹೋಗುವ ನೆವದಿಂದ, ನಾನು ಅವಳನ್ನು ಸಂಧಿಸಿ, ಅವಳೊಡನೆಯೇ ಮಾತನಾಡುತ್ತ ಹೋಗುತ್ತಿದ್ದೆ.... ಹಾದಿಯಲ್ಲಿ ಅವಳ ಗೆಳೆಯರು ಭೆಟ್ಟಿಯಾಗಿ ಅವಳೊಡನೆ ಮಾತನಾಡುವಾಗ, ನನ್ನ ಉರಿಯುವ ಹೃದಯವನ್ನು ತೆಗೆದುಕೊಂಡು ಸ್ವಲ್ಪ ದೂರ ಹೋಗಿ ನಿಲ್ಲುತ್ತಿದ್ದೆ....

"ಕಾಮಿನಿ, ನಿನ್ನ ಜನಪ್ರಿಯತೆ ಹೆಚ್ಚುತ್ತಿದೆಯಲ್ಲ!"

"ಅದರಲ್ಲಿ ನನ್ನ ದೋಷವೇನು ?" ಕಾಮಿನಿಯ ಮಾತಿನಲ್ಲಿ ಅಭಿಮಾನವಿತ್ತು....

"ಆದರೆ ಎಲ್ಲ ಜನರು ಒಳ್ಳೆಯವರಿರುವುದಿಲ್ಲ!"

"ಜನರ ಒಳ್ಳೆಯತನ–ಕೆಟ್ಟತನಗಳನ್ನು ತೆಗೆದುಕೊಂಡು ನಾವೇನು ಮಾಡುವದಿದೆ?"

"ಅಲ್ಲ–ಹಾಗೇ ಹೇಳಿದೆ..... ನಿನ್ನಂಥ ಹುಡುಗಿಯರು ಹುಷಾರಾಗಿರಬೇಕು."

"ನನ್ನಂಥ ಎಂದರೆ ?" ಕಾಮಿನಿಯ ಕುತೂಹಲ ಕೆರಳಿತು.

"ನಿನ್ನಂಥ–ಸುಂದರ...."

"ವಾಹ್, ನೀನೂ ಕಲಿತಿರುವಿಯಲ್ಲ ಸ್ತುತಿ ಮಾಡಲು!"

"ಹಾಗೂ–ನಿನ್ನ ಬಿಚ್ಚು ಮನಸ್ಸಿನ ನಡತೆ, ಮಾತು–ಕತೆಗಳು ಜನರಲ್ಲಿ ತಪ್ಪು ತಿಳಿವಳಿಕೆಯನ್ನುಂಟುಮಾಡಬಹುದು...." ಬಹಳ ದಿನಗಳಿಂದ ಸಿದ್ಧಮಾಡಿಟ್ಟ ಮಾತು ಒಮ್ಮೆ ಹೊರಬಂದಿತು!

"ಅದರಲ್ಲಿ ನನ್ನ ದೋಷವೇನು ? ಜನರ 'ತಿಳುವಳಿಕೆ' ನಮ್ಮಪ್ಪನ ಮನೆಯದೇ?" ಕಾಮಿನಿಯ ಭಾಷೆ ಸ್ವಲ್ಪ ಕಠೋರವಾಯಿತು.

"ಹಾಗಲ್ಲ.... ನೀನು ನನ್ನ ...." ಮಾತು ಬಾಯಲ್ಲಿಯೇ ಉಳಿದವು.

"ನಾನು ನಿನ್ನ – ಮಿತ್ರನ ತಂಗಿ !.... ಮುಂದೆ ?"

"ಅಷ್ಟೇನೇ ?"

"ನೀನು ಒಮ್ಮೆ ಹುಚ್ಚನಂತೆ – ಮುದ್ದಿಸಿದ ಹುಡುಗಿ!"

"ಅದು ಹುಚ್ಚುತನವಲ್ಲವೆಂದು ನೀನೇ ಅಂದಿದ್ದಿ."

"ಅದು ಹುಚ್ಚುತನವೇ – ಎಂದು ಈಗ ಖಾತ್ರಿಯಾಗಿದೆ."

"ಅದು ಹೇಗೆ ?"

"ಎಲ್ಲ ತರುಣರಲ್ಲಿ ಒಂದೇ ಬಗೆಯ ಹುಚ್ಚುತನ ಹರಿಯುತ್ತಿರುತ್ತದೆ."

"ಎಂಟು ತಿಂಗಳಲ್ಲಿಯೇ ಇಷ್ಟೊಂದು ಅನುಭವ ಬಂತೇ ?"

"ಹುಂ..." ಎಂದು ನನ್ನ ವಿರುದ್ಧ ದಿಶೆಯಲ್ಲಿ ಮುಖ ತಿರುಗಿಸಿ ನಕ್ಕಳು ! ಕಾಮಿನಿಯ ನಗೆಯಲ್ಲಿ ತರತರದ ಭಾವಗಳನ್ನು ವ್ಯಕ್ತಪಡಿಸುವ ಶಕ್ತಿ ಎರಡು ವರ್ಷಗಳಲ್ಲಿ ಸಾಕಷ್ಟು ಬೆಳೆದಿತ್ತು ! –"ಹುಂ– ಎಂಥ ಅನುಭವ, ಎಲ್ಲಿ, ಯಾವಾಗ, ಯಾರು, ಯಾಕೆ, ಎಂತು ಎಂದು ಕೇಳುವ ಕುತೂಹಲವಿಲ್ಲವೇನು ?" ಕಾಮಿನಿ ನಗುತ್ತ ವ್ಯಂಗ್ಯವಾಗಿ ನುಡಿದಳು.

"ಅಂಥ ಕುತೂಹಲ ಶಿಷ್ಟವಲ್ಲವೇನೋ – ಹಾಗೂ 'Curiosity killed the cat' ಎಂಬ ಮಾತೂ ಗೊತ್ತಿದೆ ನನಗೆ !" ನನ್ನ ಹೃದಯದಲ್ಲಿಯ ನೋವನ್ನು ಮುಚ್ಚಿ ನಗುವ ಯತ್ನ ಮಾಡಿದೆ... ನನ್ನ ಕುತೂಹಲವನ್ನು ಕೆರಳಿಸಿ, ನಂತರ ಚಿವುಟಿ ಒಗೆದ ಅವಳ ಸ್ತ್ರೀ ಸಹಜ ಕಲೆಯನ್ನು ನಾನು ಮನಸ್ಸಿನಲ್ಲಿಯೇ ಮೆಚ್ಚಿದೆ!

ನನಗೆ ಕಾಮಿನಿಯ ಬಾಯಿಂದಲೇ ಅವಳ 'ಅನುಭವ'ಗಳನ್ನು ಕೇಳುವ ಅವಶ್ಯಕತೆ ಇದ್ದಿಲ್ಲ. ನನ್ನ ಗುಪ್ತಚಾರನ ದೃಷ್ಟಿ ಹಾಗೂ ಸಂಶಯಯುಕ್ತ ಕಲ್ಪನಾ ದೃಷ್ಟಿ ; ಈ ಎರಡು ಕಣ್ಣುಗಳಿಂದ 'ಕಂಡ' ಅವಳ 'ಅನುಭವಗಳು' ನನ್ನ ಮನಸ್ಸಿನಲ್ಲಿ ಸಾಕಷ್ಟು ಇದ್ದವು.

ಒಳ್ಳೆಯ ಆಟಗಾರ–ಶಿವರಾಮು ಕುಲಕರ್ಣಿ (ಬರಿಯ ಆಟಗಳಲ್ಲಿ ಒಳ್ಳೆಯವನಾತ!) ಕಾಮಿನಿಯೊಡನೆ ಎಷ್ಟೋ ಸಲ ಕಾಲೇಜಿನಿಂದ ಸ್ಟೇಶನ್ನಿನ ಕಡೆಗೆ ಹೋಗುವ ರಸ್ತೆಯಿಂದ ಹೋಗುತ್ತಿದ್ದುದನ್ನು ನಾನು ಕಣ್ಣಾರೆ ನೋಡಿದ್ದೆ. ನನ್ನ ಕ್ಲಾಸಿನಲ್ಲಿಯ ಒಬ್ಬ ಸಹವಿದ್ಯಾರ್ಥಿ, ಶಿವರಾಮನ ಕಾಮಿನಿಯ ಕೈ ಹಿಡಿದದ್ದನ್ನು ಒಮ್ಮೆ ನೋಡಿದ್ದನಂತೆ.....ಕಂಬಾರಗಣಿವೆಯ ಪಿಕ್‌ನಿಕ್ಕಿನಲ್ಲಿ ಡ್ರಾಮಾ ಸೆಕ್ರೆಟರಿಯಾದ ಮದಾರನೊಡನೆ flir ಮಾಡಿದ, ಚೆಲ್ಲಾಟವಾಡಿದ. ರೀತಿಯನ್ನು ನೋಡಿದರೆ ಏನೋ ಸಂಶಯ ಎಂದು ಹುಡುಗರು ಆಡಿದ್ದನ್ನು ನಾನು ಕೇಳಿದ್ದೆ .....ಸಾರಸ್ವತ ಹುಡುಗರಾದ ನಾಡಕರ್ಣಿ–ಲವಂಡೆ ಮುಂತಾದವರೊಡನೆ ರೆಸ್ಟೋರಂಟುಗಳಲ್ಲಿ ಗುಳು ಗುಳು ಕೊಂಕಣಿ ಮಾತನಾಡುತ್ತ ನಗುವದನ್ನು ಕೆಲೆಯುವದನ್ನು ನಾನು ನೋಡಿದ್ದೆ.... ಕೊಂಕಣಿ ನಾಟಕ ನಡೆದಾಗ ಗ್ರೀನ್ ರೂಮಿನಲ್ಲಿ ಹೀರೋ – ನಾಡಕರ್ಣಿಯು – ಸೈಡ್ ಹಿರೋಯಿನ್ ಕಾಮಿನಿಯ ಸೆರಗನ್ನು ಅವಳ ಎದೆಯ ಮೇಲೆ ಸರಿಪಡಿಸುವ ನಾಟಕವನ್ನು ನಾನು ಗುಪ್ತಚಾರನಾಗಿ ನೋಡಿದ್ದೆ....

ಕಾಲೇಜಿನಲ್ಲಿಯ ಇಂಥ ವಿಷಯಗಳಿಗೆ ಹೆಚ್ಚು ಮಹತ್ವ ಕೊಡಬಾರದು, ಕಾಲೇಜಿನಲ್ಲಿಯ ಸ್ವತಂತ್ರ ವಾತಾವರಣವು ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದದ್ದರಿಂದ ಒಮ್ಮೊಮ್ಮೆ ಸಮನಿಸುವ ಎಲ್ಲೆ ಮೀರಿದ ವರ್ತನಗಳು ಕ್ಷಮ್ಯವಾದವುಗಳು – ಎಂದು ನನ್ನ ಮನಸ್ಸನ್ನು ನಾನು ಸಂತೈಸಿಕೊಂಡರೂ ಕೂಡ, ನನ್ನ ತಳಮಳ ಎಲ್ಲೆ ಮೀರುತ್ತಿತ್ತು....

ಶ್ರೀಕಾಂತನಂತೂ ಸ್ವಾತಂತ್ರ್ಯ ಭಕ್ತ ! ಪ್ರತಿಯೊಬ್ಬ ವ್ಯಕ್ತಿ ತಪ್ಪು ಮಾಡಲು ಕೂಡ ಸ್ವತಂತ್ರನಿರಬೇಕು – ಎಂಬುದು ಅವನ ಮತ. ವ್ಯಕ್ತಿಯ ಬೆಳವಣಿಗೆಗೆ ಅಡ್ಡ ಬರುವ ಎಲ್ಲ ನಿರ್ಬಂಧಗಳನ್ನು ತೆಗೆಹಾಕುವದೇ ಸ್ವಾತಂತ್ರ್ಯ !.... ಒಮ್ಮೆ

ನಾನು ಅಪ್ರತ್ಯಕ್ಷವಾಗಿ 'ಸ್ವೈರ' ಹುಡುಗಿಯರ ಬಗ್ಗೆ ಚರ್ಚೆ ಸುರುಮಾಡಿದೆ.....

"ಹುಡುಗೆಯರು ಸ್ವಚ್ಛಂದದಿಂದ ವರ್ತಿಸಿದಲ್ಲಿ ತಪ್ಪೇನು ?" ಎಂದು ಶ್ರೀಕಾಂತನ ಪ್ರಶ್ನೆ.

"ಅವರ ನೈತಿಕ ಅಧಃಪತನಾಗುವದಿಲ್ಲವೇ?"

"ಅವರ 'ನೈತಿಕ ಅಧಃಪತನ'ಕ್ಕೆ ಅವರ ಸ್ವಚ್ಛಂದ ವರ್ತನ ಕಾರಣವಲ್ಲ ; ನಾವು–ಸಮಾಜ....ಕಾರಣ."

"ಅದು ಹೇಗೆ?"

"ಅವರ ಸ್ವಚ್ಛಂದ ವರ್ತನ, ಅವರಲ್ಲಿಯ life force - ಜೀವ ಶಕ್ತಿ, ಜೀವನ – ಚೈತನ್ಯದಿಂದ ಹುಟ್ಟಿದುದು.... ನಮ್ಮ ಕಲುಷಿತ ದೃಷ್ಟಿಯ ಮೂಲಕ, ಅವರ ತಲೆಯಲ್ಲಿ ಕಲುಷಿತ ವಿಚಾರಗಳನ್ನು ಹುಟ್ಟಿಸುತ್ತೇವೆ....ಮುಂದೆ ತಾವು ಕೆಟ್ಟ ನಡತೆಯವರೇ ಎಂಬ ಮತ ಅವರಲ್ಲಿ ದೃಢವಾಗುವದು.... ಆನಂತರ ಕಾಮುಕ ಜನರು ಕೂಡ ಅಂಥವರ ಬೆನ್ನು ಬಿಡುವದಿಲ್ಲ.... ಕುತೂಹಲದಿಂದಲೋ, ಸಾಹಸದಿಂದಲೋ, ತಾವು ಕೆಟ್ಟವರು ಎಂಬ ಭಾವನೆಯಿಂದಲೋ, ಬೇಜವಾಬ್ದಾರಿ ಗಂಡಸರ ಹಂಬಲಕ್ಕೆ ಬಲೆ ಬಿದ್ದರೆ, ಸಮಾಜವೆಲ್ಲಿ ಅವರಿಗೆ ಸುಧಾರಿಸಿಕೊಳ್ಳುವ ಅವಕಾಸ ಕೊಡುವದು?.... ಯುರೋಪದಲ್ಲಿಯಂತೆ, ಅಮೇರಿಕೆಯಲ್ಲಿಯಂತೆ virginity ಅಂದರೆ ಕೌಮಾರ್ಯದ ಬಗ್ಗೆ ನಮ್ಮಲ್ಲಿದ್ದ ಅನೈಸರ್ಗಿಕ ಮಹತ್ವ ಕಡಿಮೆಯಾಗುವ ತನಕ, ವ್ಯಕ್ತಿ ವಿಕಾಸಕ್ಕೆ ಬೇಕಾದ ಅನಿರ್ಬಂಧ ಸ್ವಾತಂತ್ರ್ಯದ ವಾತಾವರಣವನ್ನು ಕಲ್ಪಿಸುವದು ಶಕ್ಯವಿಲ್ಲ...."

"ನೀನು ಸೂಚಿಸುವದು anarchism – ಅನಿರ್ಬಂಧ ಅರಾಜಕತ್ವ!"

"anarchism ಅಲ್ಲ ! ಲಗ್ನ – ಬಿಗ್ನ ತೆಗೆದು ಹಾಕಿ, ಎಲ್ಲ ಸ್ತ್ರೀ–ಪುರುಷರಿಗೆ ಸ್ವೈರ ಲೈಂಗಿಕ ಸ್ವಾತಂತ್ರ್ಯ ಕೊಡಬೇಕೆಂದು ನಾನು ಹೇಳುವದಿಲ್ಲ. ಪ್ರೇಮ – ಲಗ್ನ – ಕುಟುಂಬ ನೈಸರ್ಗಿಕವಾದವುಗಳು... ಆದರೆ ತಾರುಣ್ಯದ ಅಂಥ ಹುಮ್ಮಸಿನಲ್ಲಿ, life force ಅಂದರೆ ಜೀವಶಕ್ತಿ ಹೆಚ್ಚಿದ್ದ ಹುಡುಗ – ಹುಡುಗೆಯರು 'ತಪ್ಪು' ಮಾಡಿದರೆ, ಅವರಿಗೆ ಸಮಾಜ ಶಾಪ ಕೊಡಬಾರದು ; ಅನುಭವದಿಂದ ಕಲಿತು ವಿವೇಕಿಗಳಾಗಲು ಅವಕಾಶ ಕೊಡಬೇಕು..."

"ನೀನು ಹೇಳುವದು ಯಟೋಪಿಯದ ಮಾತು ; ಆದರ್ಶಯುಗದ ವಿಷಯ...."

"ಆದರ್ಶ ಯುಗವನ್ನು ನಮ್ಮ ಕಣ್ಣುಮುಂದೆ ಇಟ್ಟುಕೊಂಡೇ ನಮ್ಮ ಜೀವನ ದೃಷ್ಟಿಯನ್ನು ಬದಲಿಸಬೇಕು, ಶುದ್ಧೀಕರಿಸಬೇಕು. ಆದರೆ ನಾನು ಹೇಳುವದು

ಆದರ್ಶ ಯುಗದ ಮಾತಲ್ಲ; ನೀನು ಇಂಗ್ಲಿಷ್ ಕಾದಂಬರಿಗಳನ್ನು ಓದಬೇಕು: ಆಗ ಲೈಂಗಿಕ ಶುದ್ಧತೆಯ ಅನಾವಶ್ಯಕತೆ ಗೊತ್ತಾಗುವದು. ಪ್ರೇಮ – ಸಹಾನುಭೂತಿಗಳಿಗೆ ಲೈಂಗಿಕ ಶುದ್ಧತೆಯ ಬಂಧನ ಹಾಕಬಾರದು... ಅಂದಾಗಲೇ ವಿಧವಾ ವಿವಾಹವೂ ಶಕ್ಯವಾಗುವದು..... ಎಲ್ಲ ಮೂಲ್ಯಗಳು ಆತ್ಮನಿಷ್ಠವಾದವುಗಳು. ಆದುದರಿಂದ ಸ್ವಾತಂತ್ರ್ಯವನ್ನು ವಿಕಾಸಗೊಳಿಸುವ ಮೂಲ್ಯಗಳನ್ನೇ ನಾವು ಆರಾಧಿಸಬೇಕು.

ಶ್ರೀಕಾಂತನ ತಾತ್ವಿಕ ಪಾತಳಿಯ ಮೇಲಿನ ವಿಚಾರಗಳಿಗೂ ಅವನ ಸ್ವಂತ ವ್ಯಕ್ತಿತ್ವದ ಆಂತರಿಕ ಮೂಲ್ಯಗಳಿಗೂ ಎಷ್ಟೋ ಅಂತರವಿತ್ತು ಎಂಬುದು ನನಗೆ ಮುಂದೆ ತಿಳಿಯಿತು !

ಶ್ರೀಕಾಂತ ಆ ವರ್ಷ ಸೀನಿಯರ್ ಎಮ್. ಏ. ದ ಅಭ್ಯಾಸದಲ್ಲಿ ಮಗ್ನನಾಗಿದ್ದ. ವಾರದಲ್ಲಿ ಎರಡು – ಮೂರು ಸಲ ಮಾತ್ರ ಆತ ನನ್ನೊಡನೆ ತಿರುಗಾಡಲು ಬರುತ್ತಿದ್ದ. ಅವನ ಮಾತುಗಳಲ್ಲಿ ಅವನು ಅಭ್ಯಾಸ ಮಾಡುತ್ತಿದ್ದ ಸಾಹಿತ್ಯದ ವಿಷಯವೇ ವಿಷಯ. ಬರ್ನಾರ್ಡ್ ಶಾ. ಎಚ್. ಜಿ. ವೆಲ್ಸ, ಟಿ. ಎಸ್. ಎಲಿಯಟ್, ಹಾಪ್ಕಿನ್ಸ. ಕೀಟ್ಸ, ಶೇಕ್ಸಪಿಯರ : ಅವರ ಸಾಹಿತ್ಯ ತತ್ವಜ್ಞಾನ, ಹಾಗೂ ಅವರ ಜೀವನದೃಷ್ಟಿ !

"ಈ ಪ್ರತಿಯೊಬ್ಬ ಸಾಹಿತಿಗೆ ತನ್ನದೇ ಆದ ಒಂದು ತತ್ವ ಪ್ರಣಾಲಿ ಇದೆ, ತನ್ನದೇ ಆದ ಜೀವನದರ್ಶನವಿದೆ...ಶಾಃನ 'ಫಿಲೊಸೊಪಿ' ಬೇರೆ, ವೆಲ್ಸನದು ಬೇರೆ, ಎಲಿಯಟ್‌ನದು ಬೇರೆ... ಇವರ ಫಿಲೊಸೊಫಿಯೆಂದರೆ ಸ್ವಂತ ಶಕ್ತಿ – ಜ್ಞಾನ – ಅನುಭವಗಳಿಂದ ಪ್ರೇರಿತವಾದ ವೈಯಕ್ತಿಕ ತತ್ವಪ್ರಣಾಲಿ, ವೈಯಕ್ತಿಕ ಜೀವನಮಾರ್ಗ ! ....ಉತ್ಕಟವಾದ ಜೇವನ ಪ್ರಜ್ಞೆ ಮುಖ್ಯ !_ ಉದಾಹರಣೆಗಾಗಿ ಶೇಕ್ಸಪಿಯರನಿಗೆ 'ತತ್ವಜ್ಞಾನ'ವಿಲ್ಲ – ಅಂದರೆ ಮುದ್ದೆಗಳುಳ್ಳ ವಿಶಿಷ್ಟ ತತ್ವ ಪ್ರಣಾಲಿಯಿಲ್ಲ. ! ಅವನ ನಾಟಕಗಳೆಂದರೆ ಅತಿ ಸ್ಪಷ್ಟವಾದ ವಿಶಾಲವಾದ ಜೀವನ – ದರ್ಶನ ! ಈ ಜೀವನ – ದರ್ಶನದ ಮೂಲ, ಉತ್ಕಟವಾದ ಜೀವನ – ಪ್ರಜ್ಞೆ, ಕೀಟ್ಸನು ಹೇಳುವ negative capability (ನಕಾರಾತ್ಮಕ ಪ್ರಜ್ಞೆ) ಅಥವಾ ವಾಲ್ಟರ ಪೇಟರನು ಹೇಳುವ ಧ್ಯಾನನಿಷ್ಠ, ವಿಚಾರಾತ್ಮಕ ಪ್ರಜ್ಞೆ..."

ಶ್ರೀಕಾಂತನಿಗೆ ಬಹುಶಃ ಟೀ. ಬಿ. ಆಗಲೇ ಸುರುವಾಗಿರಬೇಕು. ಯಾಕೆಂದರೆ ಬಹಳ ಮಾತನಾಡಿದರೆ, ಸ್ವಲ್ಪ ದಿನಕ್ಕಿಂತ ಹೆಚ್ಚು ತಿರುಗಾಡಿದರೆ, ಬಹಳ ಹೊತ್ತು ಅಭ್ಯಾಸ ಮಾಡಿದರೆ ಅವನಿಗೆ ಬಹಳ ದಣಿವಾಗುತ್ತಿತ್ತು.

"ಶ್ರೀಕಾಂತ, ನಿನ್ನ ಪ್ರಕೃತಿ ಕೆಡುತ್ತಿದೆಯಲ್ಲ !" ಎಂದು ನಾನು ಒಂದೆರಡು

ಸಲ ಅಂದಿದ್ದೆ.

"ಅಭ್ಯಾಸದ ಭಾರ ಹೆಚ್ಚಾಗಿದೆ – ಪರೀಕ್ಷೆ ಮುಗಿದೊಡನೆ ಎಲ್ಲಾ ಸರಿ ಹೋಗುವದು."

"ಅಭ್ಯಾಸ ಮಾಡುವದನ್ನು ಸ್ವಲ್ಪ ಕಡಿಮೆ ಮಾಡಲ್ಲ..."

"ಛೆ–ಬೀ.ಎ.ದಲ್ಲಿ ಸಿಕ್ಕ ಫರ್ಸ್ಟ್‌ಕ್ಲಾಸನ್ನು ಎಮ್. ಎ. ದಲ್ಲಿಯೂ ಉಳಿಸಿಕೊಳ್ಳುವದು ಬೇಡವೇ? ಎಮ್. ಎ. ದಲ್ಲಿ ಫಸ್ಟ್‌ಕ್ಲಾಸೆಂದರೆ ಸಾದಾ ವಿಷಯವಲ್ಲ – ಓಓಹ!'

"ಮಹಾತ್ವಾಕಾಂಕ್ಷೆ ಒಳ್ಳೆಯದಲ್ಲ ಎಂದು ನೀನೇ ಹೇಳುತ್ತೀರುತ್ತಿಯಲ್ಲ...." ನಾನೆಂದಿದ್ದೆ.

"ನನ್ನಲ್ಲಿ ಮಹತ್ವಾಕಾಂಕ್ಷೆ ಫಸ್ಟ ಕ್ಲಾಸನ್ನೇ ದೊರಕಿಸಬೇಕು ಎಂಬ ಉತ್ಕಟ ಇಚ್ಛೆ – ನಿಜವಾಗಿಯೂ ನನ್ನಲ್ಲಿಲ್ಲ ! ನನಗೆ ಗುರಿ ಮುಟ್ಟುವುದು ಮುಖ್ಯವಲ್ಲ. ಆ ಗುರಿ ಮುಟ್ಟಬೇಕಾದರೆ ಮಾಡಬೇಕಾದ ತೀಕ್ಷ್ಣ, ಉತ್ಕಟ, ಅವಿರತ ಸಾಧನೆ ಮುಖ್ಯ. ರೇಸಿನಲ್ಲಿ ನನಗೆ ಜಯ ಸಿಗಬೇಕು. ಆ ಮೇಲೆ ಅಭಿಮಾನದಿಂದ ಮುಖವನ್ನುಬ್ಬಿಸಿ, ಎದೆ ಸೆಟೆಸಿ ನಡೆಯಬೇಕು ಎಂಬ ಇಚ್ಛೆ ನನಗಿಲ್ಲ. ಆದರೆ ಓಟದ ವೇಗ, ಸ್ಪಂದಿಸುವ ಹೃದಯ, ಉತ್ಕಟ ತಲ್ಲೀನತೆ: ಇವುಗಳಲ್ಲಿ ದೊರೆಯುವ ಆನಂದ ಬಹಳ ರೋಮಾಂಚಕಾರಿಯಾದದ್ದು ! ಕಣ್‌ಪಟ್ಟು ಕಟ್ಟಿದ ಕುದುರೆಯಾಗುವದು (ಮಹತ್ವಾಕಾಂಕ್ಷೆ) ನನಗೆ ಸೇರುವದಿಲ್ಲ. ಆದರೆ ಆ ಕುದುರೆಯ ಭಯಂಕರ, ಉನ್ಮತ್ತ ನಾಗಾಲೋಟ ಮಾತ್ರ ಬೇಕೆನಿಸುವದು."

* * *

ಒಮ್ಮೆ ಶ್ರೀಕಾಂತನನ್ನು ತಿರುಗಾಡಲು ಕರೆದೊಯ್ಯಲು ನಾನು ಅವನ ಮನೆಗೆ ಹೋದೆ. (ಕಾಮಿನಿ ಗೆಳೆತಿಯರೊಡನೆ ತಿರುಗಾಡಲು ಪೇಟೆಗೆ ಹೋಗಿದ್ದಳು...) –ಡ್ರಾಯಿಂಗ್ ರೂಮು ದಾಟಿ ಎಡಬಿದಿಗೆ ಇದ್ದ ಶ್ರೀಕಾಂತನ ಕೋಣೆಯಲ್ಲಿ ಕಾಲಿಟ್ಟೆ, ಒಮ್ಮೆಲೆ ಎದೆ ಧಸ್ಸೆಂದಿತು.

ಶ್ರೀಕಾಂತ ಕಾಟಿನ ಮೇಲೆ ಒರಗಿದ್ದ. ರೋಹಿಣಿ ಅವನ ಬದಿಯಲ್ಲಿ ಕುಳಿತಿದ್ದಳು. ಶ್ರೀಕಾಂತನ ಕೈ ರೋಹಿಣಿಯ ಕೈಯಲ್ಲಿತ್ತು.

ನನ್ನ ಕಾಲು ಸಪ್ಪಳಕ್ಕೆ ಅವರೇನೂ ವಿಚಲಿತರಾಗಲಿಲ್ಲ.

(ರೋಹಿಣಿ ಹಾಗೆ ಶ್ರೀಕಾಂತನ ಮನೆಗೆ ಮೇಲಿಂದ ಮೇಲೆ ಬರುತ್ತಿದ್ದಳು. ಶ್ರೀಕಾಂತನ ಸಲುವಾಗಿ ಅವಳು ·ಬೀ. ಎ.ದಲ್ಲಿ ಇಂಗ್ಲೀಷ ವಿಷಯವನ್ನೇ ತೆಗೆದುಕೊಂಡಿದ್ದಳು.... ಶ್ರೀಕಾಂತನ ಸಹಾಯದ ನೆವಮಾಡಿ, ಕಾಮಿನಿಯ ಗೆಳೆತನದ

ನೆವಮಾಡಿ, ಅವನ ಸಹವಾಸವನ್ನು ಸಾಧಿಸುತ್ತಿದ್ದಳು...)

"ಬಾ, ಗೌರೀ– ನಿನ್ನದೇ ಹಾದಿ ಕಾಯುತ್ತಿದ್ದೆ" ಶ್ರೀಕಾಂತ ನುಡಿದ, ಧ್ವನಿಯಲ್ಲಿ ಯಾವದೇ ಬಗೆಯ ಕಂಪನ – ಸಂಕೋಚಗಳಿದ್ದಿಲ್ಲ....

ನನ್ನ ಕಣ್ಣುಗಳಲ್ಲಿ ಇನ್ನೂ ಪ್ರಶ್ನೆ ಇತ್ತು.

"ಶ್ರೀಕಾಂತನಿಗೆ ಇಂದು ಜ್ವರ ಬಂದಿವೆ – ಜ್ವರ ಬಂದರೂ ಹುಚ್ಚ ಲಾಯಬ್ರರಿಯಲ್ಲಿಯೇ ಕುಳಿತಿದ್ದ. ನಾನು ಒತ್ತಾಯದಿಂದ ಅವನನ್ನು ಮನೆಗೆ ಕರೆದು ತರಬೇಕಾಯಿತು." ರೋಹಿಣಿ ಉತ್ತರ ಕೊಟ್ಟಳು.

"ಎಷ್ಟಿವೆ ಜ್ವರ?" ನಾನು ಸಮೀಪ ಹೋಗಿ ಅವನ ಹಣೆಗೆ ಕೈ ಹಚ್ಚಿ ಕೇಳಿದೆ.

"ನೂರಕ್ಕಿಂತ ಹೆಚ್ಚು _ಸುಮಾರು ಒಂದು ಡಿಗ್ರಿ !" ರೋಹಿಣಿಯ ಉತ್ತರ ಗಂಭೀರವಾಗಿತ್ತು.

"ಬರೇ ನೂರು ಡಿಗ್ರಿ," ಶ್ರೀಕಾಂತ ತಿದ್ದಿದ.... "ಹುಡುಗಿಯರಲ್ಲಿ ಮಾತೃತ್ವದ ಅಂಶ ಬಹಳ ನೋಡು ! ಆದುದರಿಂದಲೇ ಅವರು ಒಳ್ಳೆಯ ನರ್ಸಾಗಬಲ್ಲರು...."

"ಡಾಕ್ಟರರ ಕಡೆಗೆ ಹೋಗಿ ಔಷಧ ತರಲೇ?" ನಾನು ಆತುರತೆಯಿಂದ ಕೇಳಿದೆ.

"ಡಾಕ್ಟರರನ್ನೇ ಇಲ್ಲಿಗೆ ಕರೆತಂದರೆ ಹೇಗೆ?" ರೋಹಿಣಿಯ ಪ್ರಶ್ನೆ.

"ಛೆ, ನಿಮ್ಮ ಹುಚ್ಚುತನ ಮಿತಿ ಮೀರುತ್ತಿದೆ. ನನಗೇನೂ ಧಾಡಿಯಾಗಿಲ್ಲ. ನಿನ್ನೆ ರಾತ್ರಿ ನಿದ್ದೆಗೆಟ್ಟಿದ್ದರಿಂದ, ಮೈ ಸ್ವಲ್ಪ ಬಿಸಿಯಾಗಿದೆ, ಅಷ್ಟೆ. ಗೌರಿ, ನಡೆ, ತಿರುಗಾಡಲು ಹೋಗೋಣ. ರೋಹಿಣೀ, ನಿನಗೆ ಮನೆಗೆ ಹೋಗಲು ಹೊತ್ತಾಗಲಿಲ್ಲವೇನು?" ಶ್ರೀಕಾಂತ ನಗುತ್ತ ಎದ್ದು ಕುಳಿತ.

"ಇಲ್ಲಿಯೇ ಕುಳಿತು ಬೇಕಾದರೆ ಹರಟೆ ಹೊಡೆಯುವೆ," ನಾನು ಸೂಚಿಸಿದೆ. ರೋಹಿಣಿ ಒಬ್ಬಳನ್ನೇ ಅಲ್ಲಿ ಬಿಟ್ಟು ಡಾಕ್ಟರರ ಕಡೆಗೆ ಔಷಧ ತರಲು ಕೂಡಲೇ ಹೋಗಲು ನನಗೆ ಮನಸ್ಸಾಗಲಿಲ್ಲ.

"ನನಗೆಂಥ ಹೊತ್ತು? ಯಾರಾದರೂ ಕೇಳುವವರಿದ್ದರೆ ಹೊತ್ತುಗಿತ್ತು ! ತಂದೆ ಬ್ಯಾಂಕಿನಿಂದ ಬಂದ ಕೂಡಲೇ ಚಹಾ ಕುಡಿದು ಆಫೀಸರರ ಕ್ಲಬ್ಬಿಗೆ ಹೋಗುತ್ತಾರೆ. ಅಲ್ಲಿ ಅವರಾಯಿತು ಅವರ ರಮಿ ಆಟವಾಯಿತು.... ತಾಯಿ ಲಕ್ಷ್ಮೀ–ನಾರಾಯಣನ ಗುಡಿಗೊ, ಪೇಟೆಗೋ, ಮತ್ತೆಲ್ಲಿಗೋ ಹೋಗಿರುತ್ತಾಳೆ.... ನಿಜವಾಗಿ ನನ್ನಷ್ಟು ಸ್ವಾತಂತ್ರ್ಯ ಯಾರಿಗೂ ಇಲ್ಲ" ಎಂದು ಅಭಿಮಾನದಿಂದ ರೋಹಿಣಿ ನುಡಿದಳು.

ನಾನು ಗಟ್ಟಿ ಮನಸ್ಸು ಮಾಡಿ, "ಬೇಗನೇ ಹೋಗಿ ಪ್ರಭು ಡಾಕ್ಟರರ ಕಡೆಯಿಂದ ಔಷಧ ತರುವೆ," ಎಂದು ಹೇಳಿ ಹೊರಟೆ.... "ಆಮೇಲೆ ಒಳ್ಳೆಯ ಹರಟೆ ಕೊಚ್ಚುವ...."

ರೋಹಿಣಿ ಇನ್ನೂ ಕಾಟಿನ ಮೇಲೆಯೇ ಕೂತದ್ದು ನನಗೆ ಎಳ್ಳಷ್ಟೂ ಸೇರಲಿಲ್ಲ!

ಶ್ರೀಕಾಂತನಿಗೆ ಆಗಾಗ್ಗೆ ಸಣ್ಣಾಗಿ ಜ್ವರ ಬರುತ್ತಿದ್ದರೂ, ಆತ ಅತ್ತ ಸಂಪೂರ್ಣ ದುರ್ಲಕ್ಷ್ಯ ಮಾಡಿದ.... ತಾನಾಯಿತು, ತನ್ನ ಅಭ್ಯಾಸವಾಯಿತು, ತನ್ನ ವಿಚಾರವ್ಯೂಹವಾಯಿತು.... ಅಂತೂ ಕೊನೆಗೊಮ್ಮೆ ಅವನ ಎಮ್.ಎ. ಪರೀಕ್ಷೆಯೂ ಸಮೀಪಿಸಿತು.

ನನ್ನ ಬಿ.ಎಸ್.ಸಿ ಪರೀಕ್ಷೆಯೂ ಸಮೀಪಿಸಿದ್ದರಿಂದ ಶ್ರೀಕಾಂತನತ್ತ ಸಂಪೂರ್ಣ ಲಕ್ಷ್ಯವಿಡಲು ನನಗೆ ಸಾಧ್ಯವಾಗಲಿಲ್ಲ....

ಜ್ಯೂನಿಯರ್ ಬಿ.ಎ. ಪರೀಕ್ಷೆಯನ್ನು ಮುಗಿಸಿದ ರೋಹಿಣಿ ಶ್ರೀಕಾಂತನ ಮನೆಗೆ ಹೋಗುವದನ್ನೂ, ಶ್ರೀಕಾಂತ ಕಾಮಿನಿಯರೊಡನೆ (ಕಾಮಿನಿಯೂ ಎಫ್. ವಾಯ್ ಆರ್ಟ್ಸದ ಪರೀಕ್ಷೆ ಮುಗಿಸಿ ಖಾಲಿಯಾಗಿದ್ದಳು), ಹರಟೆ ಹೊಡೆಯುವದನ್ನೂ ಶ್ರೀಕಾಂತನಿಗೆ 'ಸ್ಫೂರ್ತಿ', 'ಉತ್ಸಾಹ' ಕೊಡುವದನ್ನೂ ಕ್ರಮೇಣ ಬೆಳೆಸಿದ್ದಳು.....

ನಾನು ವಾರಕ್ಕೆರಡು ಮೂರು ಸಲ ಶ್ರೀಕಾಂತನ ಮನೆಗೆ ಹೋಗಿ ಅವನ ಕ್ಷೇಮಸಮಾಚಾರ ನೋಡಿಕೊಂಡು, ಕಾಮಿನಿಯ ದಿನಬಳಕೆಯ ಮಾತುಗಳಲ್ಲಿ, ಅವಳ ದಿನದ ನಗೆ-ನೋಟಗಳಲ್ಲಿ ಸ್ಫೂರ್ತಿಯನ್ನು ಹುಡುಕಿ (ತುಡುಗನಂತೆ!) ಒಯ್ದು, ಅಭ್ಯಾಸ ಮಾಡುತ್ತಿದ್ದೆ....

ಶ್ರೀಕಾಂತನ ಎಮ್.ಎ. ಪರೀಕ್ಷೆ ಮುಗಿಯಿತು. ನನ್ನ ಬಿ.ಎಸ್‌ಸಿ. ಯೂ ಮುಗಿಯಿತು.

ಶ್ರೀಕಾಂತನ ಪ್ರಕೃತಿ ನೆಟ್ಟಗಿಲ್ಲದ್ದರಿಂದ ನಾವೆಲ್ಲರೂ ಯೋಚಿಸಿದ ದಿಲ್ಲಿ-ಆಗ್ರಾ ಟ್ರಿಪ್ಪು ರದ್ದಾಯಿತು !

ಕಾಲೇಜಿನ ಕೆಲವು ಹುಡುಗ-ಹುಡುಗೆಯರು ಯೋಜಿಸಿದ ಮೈಸೂರು ಬೆಂಗಳೂರು ಟ್ರಿಪ್ಪಿಗೆ ಕಾಮಿನಿ ಹೋದಳು....

ನಾನು ಒಳಗೊಳಗೆಯೇ ತಳಮಳಿಸಿದೆ.

ಕಳವಳಿಸಿದೆ.

ಸಿರ್ಸಿಗೆ ಹೋದಾಗ ಸತ್ಯೇಂದ್ರನ ಮುಂದೆ ನನ್ನ ಎಲ್ಲ ದುಃಖ

ತೋಡಿಕೊಂಡೆ. ಸತ್ಯೇಂದ್ರನ ಉಪದೇಶ_ತೂಕದ ಕಾರ್ಡು ಉಗುಳುವ ಯಂತ್ರದಂತೆ_ಸಿದ್ಧವಿತ್ತು :

"ಕಾಮಿನಿಯ ವಿಷಯವನ್ನು ನಿನ್ನ ತಲೆಯಿಂದ ಸಂಪೂರ್ಣ ಕಿತ್ತು ಹಾಕು..... ಅವಳನ್ನು ಮರೆಯಲು ಯತ್ನಿಸು.... ಅವಳು ನಿನಗಾಗಿ ಅಲ್ಲವೆಂಬುದು ಖಂಡಿತ... ನೀನು ಧಾರವಾಡ ಬಿಡುವದೇ ಲೇಸು.... ನೀನು ಪುಣೆಗೆ ಬಾ ನನ್ನೊಡನೆ ಅಥವಾ ಮುಂಬಯಿಗೆ ಹೋಗು_ಎಮ್.ಎಸ್‌ಸಿ. ಅಥವಾ ಬೀ.ಎಸ್.ಸಿ. (ಟೆಕ್) ಮಾಡು... ನೀನು ವ್ಯರ್ಥವಾಗಿ ಚಡಪಡಿಸುವದನ್ನು ನಾನು ನೋಡಲಾರೆ !"

ಸತ್ಯೇಂದ್ರನ ಉಪದೇಶದಲ್ಲಿ ಬೆಳಕು ಕಾಣಿಸಲಿಲ್ಲ ನನಗೆ !

ಸತ್ಯೇಂದ್ರ ನನ್ನ ತಂದೆ_ತಾಯಿಯವರ ಮುಂದೆ ನನ್ನ ಬಗ್ಗೆ ಏನೇನು ಹೇಳಿದ್ದನೋ !

ಒಂದು ದಿನ ತಾಯಿಯವರ ಉಪದೇಶ ಸುರುವಾಯಿತು :

"ಗೌರೀಶ, ಎರಡು ಮೂರು ಕನ್ಯಾ ಬಂದಿವೆ! ನೋಡಬಾರದೇಕೆ?....

ಲಗ್ನವಾದ ಮೇಲೆ ಕಲಿಯಲಿಕ್ಕೆ ಬರುವುದಿಲ್ಲೇನು?.... ನಮಗೂ ನಿನ್ನ ಹಿತವೇ ಮುಖ್ಯ. ನಿನ್ನ ಸುಖದ ಮಾತೇ ನಾವೂ ಚಿಂತಿಸುವದು.... ನಿನಗೆ ನೌಕರಿ_ಗೀಕರಿ ಬೇಕೇಬೇಕು ಎಂದೇನೂ ಇಲ್ಲ.... ಮನೆಯಲ್ಲಿ ದೇವರ ಕೃಪೆಯಿಂದ ಸಾಕಷ್ಟಿದೆ.... ಜೋಶಿಯವರ ಹುಡುಗಿಯನ್ನು ನೋಡಿರುವೆಯಾ? ಲಕ್ಷಣವಾಗಿದ್ದಾಳೆ. ಸ್ವಭಾವದಿಂದ ಬಹಳ ಒಳ್ಳೆಯವಳು...ಏನು? ಪ್ರೇಮ? ಪ್ರೇಮ-ಗೀಮವೆಂದರೇನು? ಲಗ್ನವಾದ ಮೇಲೆ ಎಲ್ಲ ಸರಿಹೋಗುವದು.. ಪ್ರೇಮ-ಗೀಮ ಎಲ್ಲ ಉತ್ಪನ್ನವಾಗುವುವು.... ಕನ್ಯಾ ನೋಡು ಮೊದಲು _ನೀನು ಪಾಸು ಮಾಡಿದ ಮೇಲೇಯೇ, ನಿನಗೆ ಒಪ್ಪಿಗೆಯಾದ ನಂತರವೇ ಲಗ್ನ ಮಾಡೋಣ.... ಈಗ ಸಿನೇಮಾ – ನಾಟಕಾ ನೋಡಿ ಕತೆ_ಕಾದಂಬರಿ ಓದಿ ಹುಡುಗರ ತಲೆ ಕೆಟ್ಟಿವೆ! ಜಾತಿ – ಧರ್ಮ – ಮನೆತನ ಇವುಗಳ ಬಗ್ಗೆ ಆದರ – ಅಭಿಮಾನ ಎಲ್ಲ ಹೋಗಿವೆ ಈಗ!.... ಕಣ್ಣು–ಮೂಗಲೇ ಚಂದ. ಸೂಳೆಯರಂಥ, ಹುಡುಗಿಯರನ್ನು ನೋಡುವದು – ಆಮೇಲೆ ಪ್ರೇಮ – ಗೀಮ ಕೂತಿತೆಂದು ತಿಳಿದು, ಎಲ್ಲಿಯದಾದರೂ ಒಂದು ಕುಲಗೆಟ್ಟ ಹೆಣ್ಣು ತಂದು ಕೊರಳಲ್ಲಿ ಕಟ್ಟಿಕೊಳ್ಳುವದು_ ಇದಕ್ಕೇನು ನೀತಿ ಅನ್ನುತ್ತಾರೋ, ರೀತಿ ಅನ್ನುತ್ತಾರೋ?... ನಮಗೂ ತಿಳಿಯುತ್ತದೆ ನಿನ್ನ ಸುಖ_ಹಿತ! ನೀನಿನ್ನೂ ಸಣ್ಣವ_ಜಗತ್ತಿನ ಅನುಭವವಿಲ್ಲದವ! ಇನ್ನೂ ತಲೆಗೆ ಬಡಿದಿಲ್ಲ ನಮ್ಮಪ್ಪನಿಗೆ – ಬಡಿದ ಮೇಲೆಯೇ ಬುದ್ಧಿ ಬರುವದು...."

ತಂದೆಯವರದು ಬಿರುಸು ಪ್ರಕೃತಿ :

"ನಾವು ಹೇಳಿದಂತೆ ನೀನು ಕೇಳಿದರೇನೇ ನೆಟ್ಟಗೆ.... ಇಲ್ಲದಿದ್ದರೆ ನಿನಗೆ ತಕ್ಕ ಶಾಸನ ಮಾಡದೆ ಬಿಡಲಾರೆ.... ನನ್ನ ಕಿವಿತನಕವೂ ಬಂದಿದೆ ನಿನ ಚಲ್ಲಾಟ – ಜಿಗಿದಾಟದ ಸುದ್ದಿ! ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುವದೆಂದು, ಉಳಿದವರೂ ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತಾರೇನು?_ ನೀನು ಎರಡು ವರ್ಷದ ಹಿಂದೆ ನಿನ್ನ ಗೆಳತಿ–ಗೆಳತಿಯರನ್ನು ಕರಕೊಂಡು ಬಂದಾಗೇನೇ ನಾನು ಅಂದಿದ್ದೆ: ಇದೇನು ನನಗೆ ಚಲೋ ಕಾಣಿಸುವದಿಲ್ಲ....ಎಂದು. ನೀನು ದಾರಿ ತಪ್ಪುವಿ ಎಂದು ಆಗೇನೇ ವಾಸನೆ ಬಡಿದಿತ್ತು.... ಇನ್ನು ನೀನು ಧಾರವಾಡದಲ್ಲಿರುವದು ಸಾಕು. ಬೇಕಾದರೆ ಮತ್ತೆಲ್ಲಿಯಾದರೂ ಹೋಗು – ಪುಣೆಗೆ ಹೋಗು – ಮುಂಬಯಿಗೆ ಹೋಗು – ಅಥವಾ ನಿನ್ನ ತಾಯಿ ಹೇಳುವಂತೆ ಬೇಕಾದರೆ ಲಗ್ನ ಮಾಡಿಕೋ – ಕನ್ಯಾ ತಯಾರಿದ್ದಾವೆ.... ಮನೆತನಕ ಬಂದು, ಕಾಲಿಗೆ ಬಿದ್ದು ಕೊಟ್ಟು ಹೋಗುವವರಿದ್ದಾರೆ.... ನಿನ್ನ ಚಲ್ಲಾಟ – ಜಿಗಿದಾಟ ಅದೆಲ್ಲಾ ಹೋರೀ ಹದ! ಕೊರಳಲ್ಲಿ ಗುದ್ದೀ ಕಟ್ಟಿದ ಮೇಲೆಯೇ ಎಲ್ಲ ಹುಚ್ಚು ಇಳಿಯುವದು, ಬುದ್ಧಿ ಬರುವದು.... ಸತ್ಯೇಂದ್ರ ನಿನ್ನ ಹಾಗೆಯೇ ಮಾಡುತ್ತಾನೇನು? ಬೇರೆ ಚಲೋ ಹುಡುಗರನ್ನು ನೋಡಿಯಾದರೂ ಕಲಿಯಬೇಕು.... ನಮ್ಮ ಗೌರೀ ಸಂಭಾವಿತ ಶಾಣ್ಯಾ ಎಂದು ನಾವು ಅಂದೆವು. – ಈಗ ಈ ಶಾಣ್ಯಾ ಹೋಗಿ, ಅಟ್ಟದ ಮೇಲೆ ಹಾರಿ, ಮಂಗತನ ನಡೆಸಿದ್ದಾನೆ... ಹುಂ... ಅಂಥಾದ್ದೇನೂ ನನ್ನ ಮುಂದೆ ನಡೆಯಲಾರದು_ ತಿಳೀತೇನು?"

ನನ್ನ ಸ್ವಗತ ಆಗ :

ಅಜ್ಞಾನ! ಇವರಿಗೆ ನನ್ನ ಬಗ್ಗೆ ಸಂಪೂರ್ಣ ಅಜ್ಞಾನ! ಇವರ ಮಗನಾದರೇನು, ಇವರ ರಕ್ತ ಮಾಂಸಗಳಿಂದ ಉದ್ಭವಿಸಿದರೇನು, ಇವರ ಕಾಲ ಬೇರೆ, ನನ್ನ ಕಾಲ ಬೇರೆ! ತಂದೆ ಹೇಳಿದಂತೆ ಮಗನು ನಡೆಯುತ್ತ ಹೋದರೆ ಪ್ರಗತಿ ಎಲ್ಲಿಂದ ಬಂತು?...

ನನ್ನ ಜೀವನವನ್ನು ನನಗೆ ಕಟ್ಟಲು ಸಂಪೂರ್ಣ ಸ್ವಾತಂತ್ರ್ಯವಿದೆ ನನಗೆ. ಸ್ವಾತಂತ್ರ್ಯ ಕಳೆದುಕೊಂಡರೆ ಜೀವನವೆಲ್ಲಿಂದ ಬಂತು?....

ನನ್ನ ಹೃದಯದ ಹಂಬಲುಗಳು, ನನ್ನ ಮನಸ್ಸಿನ ವಿಚಾರಗಳು ನನ್ನ ಆತ್ಮದ ಆದರ್ಶಗಳು ನನ್ನವೇ! ಇವುಗಳ ಪ್ರೇರಣೆಯಿಂದ ಸಾಗುವದೇ ನನ್ನ ದಾರಿ....

ನನ್ನ ದಾರಿಯನ್ನು ಬಿಟ್ಟು, ಇವರು ಹೇಳುವ ಅಜ್ಞಾನ – 'ವ್ಯವಹಾರ' ಪ್ರೇರಿತ ಹಳೆಯ ದಾರಿಯನ್ನು ತುಳಿಯುವದೆಂದರೆ ಮೂರ್ಖತನ, ಹೇಡಿತನ....

ನನ್ನ 'ಹಿತ' ಇವರಿಗೇನು ಗೊತ್ತು ?

ನನ್ನ 'ಸುಖ' ಇವರಿಗೇನು ಗೊತ್ತು ?

ನನ್ನ ದುಃಖ – ಯಾರಿಗೇನು ಗೊತ್ತು ?

ನನ್ನ ಮನಸ್ಸಿನಂತೆ ನಾನು ನಡೆಯಬೇಕು... ಆದರೆ ನನ್ನ ಮನಸ್ಸಿನಂತೆ ನಾನು ನಡೆದರೆ, ಮರಳಿ ಮನೆಯಲ್ಲಿ ಪ್ರವೇಶ ದೊರೆಯಲಿಕ್ಕಿಲ್ಲ.... ಇಲ್ಲದಿದ್ದರೆ ಇಲ್ಲ !....

_ನನ್ನ ಕಾಲಮೇಲೆ ನಿಲ್ಲುವ ಶಕ್ತಿ ಇಲ್ಲವೇ ನನ್ನಲ್ಲಿ ?....

ಆದರೆ ನಾನು ಪ್ರಕಟವಾಗಿ ಹೇಳಿದ್ದು :

"ಇಷ್ಟು ಬೇಗ ಲಗ್ನದ ಮಾತು ಬೇಡ.... ನನಗಿನ್ನೂ ಕಲಿಯಬೇಕಾಗಿದೆ. ಧಾರವಾಡ ಬಿಟ್ಟು ಮುಂಬಯಿಗೆ ಹೋಗಲು ನಾನು ತಯಾರಿರುವೆ...."

ಹೌದು–ಮುಂಬಯಿಗೆ ಹೋಗಲು ನಾನು ತಯಾರಾದೆ. ಶ್ರೀಕಾಂತನೂ ಎಲ್ಲಿಯಾದರೂ ನೌಕರಿಯ ಸಲುವಾಗಿ ಧಾರವಾಡ ಬಿಟ್ಟು ಹೋಗುವವ. ಅವನಿಲ್ಲದಿದ್ದರೆ ಧಾರವಾಡದಲ್ಲಿದ್ದು ಏನು ಪ್ರಯೋಜನ? ಹಾಗೂ ನನ್ನ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಬೇಕಲ್ಲವೇ?.... ಕಾಮಿನಿಯೂ ಶ್ರೀಕಾಂತನೊಡನೆ ಹೋಗಬಹುದು. ಅಥವಾ ಅವಳು ಧಾರವಾಡದಲ್ಲಿಯೇ ಉಳಿದರೂ, ನನಗೇನು ಪ್ರಯೋಜನ? ನನ್ನ ವಿಷಯದಲ್ಲಿ ಅವಳಿಗೆ ಅಭಿಮಾನ, ಆದರ ಹುಟ್ಟಬೇಕಾದರೆ ನಾನು ಅವಳಿಂದ ದೂರವಿರಬೇಕು... ಸತ್ಯೇಂದ್ರ ಹೇಳುವಂತೆ ನಾನು ನನ್ನ ಜೀನವ – ಸ್ಥಿರತೆಯನ್ನು ಪಡೆಯಬೇಕು. ಅದಕ್ಕೆ ಕಾಮಿನಿಯ ವಿಚಾರ ಬಿಟ್ಟು, ಏಕಾಗ್ರತೆಯಿಂದ ಅಭ್ಯಾಸ ಮಾಡಿ, ಎಮ್.ಎಸ್‌ಸಿ. ಅಥವಾ ಬಿ.ಎಸ್‌ಸಿ. (ಟೆಕ್) ಮುಗಿಸಬೇಕು.... ಕಾಮಿನಿಯ ವಿಚಾರ ಬಿಡಬೇಕು.? ಅದು ಸಾಧ್ಯವೇ?... ಆದರೆ ಅವಳ ವಿಚಾರದಿಂದ ಈಗ ಸುಖವಿಲ್ಲ, ಸಮಾಧಾನವಿಲ್ಲ.... ಅವಳ ಆಚಾರ ವಿಚಾರ ಬದಲಾಗುವತನಕ ನನಗೆ ಅವಕಾಶವಿಲ್ಲ.... ಅವಳಿಗೆ ಬುದ್ಧಿ ಬರುವತನಕ ನಾನು ಕಾಯಬೇಕು...

* * *

ಜ್ಯೂನ್ ಏಳನೆಯ ತಾರೀಖು !.... ಮಧ್ಯಾಹ್ನದ ರಣರಣ ಬಿಸಿಲು.... ಇಳೆಯು ಮಳೆಗಾಗಿ ಕಾತರಿಸಿ ಕುಳಿತಿತ್ತು.... ನಾನು ಶ್ರೀಕಾಂತನ ಪತ್ರಕ್ಕಾಗಿ !_ ಹೊರಗಿನ ಕಟ್ಟೆಯ ಮೇಲೆ ವರ್ತಮಾನಪತ್ರವನ್ನು ಓದುವ ನಟನೆ ಮಾಡುತ್ತ, ಪೋಸ್ಟಮನ್ನನ ಹಾದಿ ಕಾಯುತ್ತಿದ್ದೆ. ಕೊನೆಗೊಮ್ಮೆ ಆತ ಬಂದ; 'ಗೌರೀಶ ಉಪಾಸನಿ', ಎಂದು ಒದರಿ, ಹೊಸ್ತಿಲದ ಹತ್ತಿರ, ಒಳಗೆ ನಿರ್ವಿಕಾರವಾಗಿ

ಒಗೆದ – ಪತ್ರವೊಂದನ್ನು. ಆತುರತೆಯಿಂದ ನಾನು ಅದನ್ನೆತ್ತಿ, ಅಟ್ಟ ಹತ್ತಿ, ಕಾಟಿನ ಮೇಲೆ ಕುಳಿತು ಓದ ತೊಡಗಿದೆ.

"ನನ್ನ ಗೌರಿ,

ನಿನ್ನನ್ನು ಅಭಿನಂದಿಸಿ_ಬಿ.ಎಸ್‌ಸಿ.ಯಲ್ಲಿ ಸೆಕಂಡ್ ಕ್ಲಾಸ ಬಂದದ್ದಕ್ಕೆ_ನಾನು ದಿನಗಳ ಹಿಂದೆಯೇ ಪತ್ರ ಬರೆಯಬೇಕಾಗಿತ್ತು. ಆದರೆ....

ಗೌರಿ, ನಿನ್ನಲ್ಲಿ ಬುದ್ಧಿ ಸಾಮರ್ಥ್ಯಗಳಿದ್ದರೂ ಅವುಗಳಿಗೆ ತಕ್ಕ ಫಲ ನಿನಗೆ ಇನ್ನೂ ಸಿಕ್ಕಿಲ್ಲ. ನಿನಗೆ ಫಸ್ಟಕ್ಲಾಸು ಸಿಗಬೇಕಾಗಿತ್ತು.... ಆದರೆ....

ನಿನ್ನೆ ನನ್ನ ರಿಜಲ್ಟೂ ಆಯಿತು. ನನಗೂ ಸೆಕೆಂಡ್‌ಕ್ಲಾಸ ಬಂದಿದೆ ಈ ಸಲ.....

ಈಗ ಯಾವ ಕ್ಲಾಸು ಬಂದರೇನು?...

ಗೌರೀ, ಹೇಗೆ ಹೇಳಲಿ?

ನನಗೆ ಟೀ. ಬಿ. ಯಂತೆ!

ಅಯ್ಯೋ, ನಾನು ಸತ್ತೆ..... ಗೌರೀ, ಗೌರೀ.... ಬೇಗ ಬಾ.... ನಿನ್ನ ಸಾನಿಧ್ಯವೆಂದರೆ ನನಗೆ ಅಮೃತ....

ಧೈರ್ಯಗುಂದುವ ಕಾರಣವಿಲ್ಲ. ಡಾಕ್ಟರರು ಹೇಳಿದ್ದಾರೆ....

ಗೌರೀ, ನಾನು ಧೈರ್ಯ ಬಿಡಲಾರೆ... ಜೀವದ ಕೊನೆಯ ಉಸುರಿನ ತನಕ ನಾನು ಹೋರಾಡುವೆ... 'ಒದ್ದಾಡುವೆ!'

ಗೌರೀ, ನಿನ್ನ ಪ್ರೀತಿಯ ಆಸರೆ ಬೇಕು – ಸ್ಫೂರ್ತಿ ಬೇಕು.

ಗೌರೀ. ನನ್ನ ತಲೆಯಲ್ಲಿ ಟ್ರಾಯ್ ಉರಿಯುತ್ತಿದೆ!

ಬೇಗ ಬಾ....

ಆದರೆ.... ಅಂಜಬೇಡ, ಚಿಂತಿಸಬೇಡ....

ಜೀವನವನ್ನು ಧೈರ್ಯದಿಂದ ಎದುರಿಸಬೇಕು_

ಸ್ಥೈರ್ಯದಿಂದ....

–ನಿನ್ನವನೇ

ಶ್ರೀಕಾಂತ

ಜಗತ್ತು ಒಮ್ಮೆಲೆ ಶೂನ್ಯವಾಯಿತು!

ಗೋಡೆಯ ಮೇಲೆ ಹಚ್ಚಿದ ಶ್ರೀಕಾಂತನ ಫೋಟೋದ ಕಡೆಗೆ ಕಣ್ಣು ಹೋದಾಗಲೇ, ಜಗತ್ತು ಮರಳಿ ಅವತರಿಸಿತು. ಆ ಜಗತ್ತಿನ ತುಂಬೆಲ್ಲ ಶ್ರೀಕಾಂತನೇ ಶ್ರೀಕಾಂತ...ಒಮ್ಮೆಲೆ ಆ ಜಗತ್ತು ನಡುವೆಯೇ ಒಡೆದಂತೆ, ಶ್ರೀಕಾಂತನನ್ನು ನುಂಗಿದಂತೆ

ಅನಿಸಿತು....ಮರಳಿ ಶೂನ್ಯವಾಯಿತು ವಿಶ್ವ. ನನ್ನ ಕಂಬನಿಯ ಮಳೆಯಿಂದ ಶೂನ್ಯ ತುಂಬಿ ಬರಲಿಲ್ಲ....

ಅಂದಿನ ಮನಸ್ಥಿತಿಯನ್ನು ನಾನು ವರ್ಣಿಸಲಾರೆ....

ಅಂದಿನ ನೋವು_ನಿರಂತರ ಮುಳ್ಳು!

ನನ್ನ ಆತ್ಮದಲ್ಲಿ ಒಂದು ಭಯಂಕರವಾದ ಭೀತಿ ಸೇರಿತು_ಅಂದು !

* * *

ನಿನ್ನೆಯೇ_ದೇವರು ಕಳಿಸಿದಂತೆ_ಡಾಲಿ ಬರಬೇಕೇ ನನ್ನ ರೂಮಿಗೆ! ಬಂದವಳೇ ನನ್ನ ಕೈಯಲ್ಲಿದ್ದ ನೋಟ ಬುಕ್ಕನ್ನು ಸೆಳೆದುಕೊಂಡು ಟೇಬಲ್ಲ ಮೇಲೆ ಇಟ್ಟಳು.

"ಆಫ್ರಿಕೆಗೆ ಹೋದ ಮೇಲೆ ಬರೆದೀಯಂತೆ!.... ಇಂದು ರವಿವಾರ.... ಎಲ್ಲಿಯಾದರೂ ದೂರ ತಿರುಗಾಡಲು ಹೋಗೋಣ...."

"ಡಾಲೀ ಕ್ಷಮಿಸಬೇಕು. ತಿರುಗಾಡುವ 'ಮೂಡಿ'ನಲ್ಲಿಲ್ಲ ನಾನು.... ಇಲ್ಲಿಯೇ ಕುಳಿತುಕೊಳ್ಳೋಣ ಬೇಕಾದರೆ...."

"ಯಾಕೆ ಏನಾಯಿತು ನನ್ನ ಪುಟ್ಟ ಗೋರಿಗೆ? –ನೀನು ಬರೆಯುತ್ತಿರುವಿಯಾದರೂ ಏನು?"

"ನನ್ನ ಆತ್ಮಕಥೆ–ಇತಿಹಾಸ...."

"ವಾಹ್! ಇಷ್ಟರಲ್ಲಿಯೇ ನೀನು ದೊಡ್ಡ ಮನುಷ್ಯನಾಗಿಬಿಟ್ಟಿಯೇನು? ನಾನು ಎಚ್ಚರದಿಂದಿರಬೇಕು ಹಾಗಾದರೆ....? ಹಾಗೂ ಆತ್ಮ ಕಥನ ಬರೆಯಲು ನೀನೇನು ರಿಟಾಯರ್ಡ್ ಆದಿಯೇನು? ಇಷ್ಟರಲ್ಲಿಯೇ ನಿನ್ನ ಆಯುಷ್ಯ ಮುಗಿಯಿತೇನು?"

"ಹೌದು_ಒಂದು ಆಯುಷ್ಯ ಮುಗಿದಂತೆಯೇ ! ಮುಗಿದ ಆಯುಷ್ಯವನ್ನು ಗಂಟು ಕಟ್ಟಿ ಇಡುವ ಕೆಲಸ ಸುರುಮಾಡಿದ್ದೇನೆ.... ಹೌದು, ದೊಡ್ಡ ಮನುಷ್ಯರು ಆತ್ಮಕಥೆ ಬರೆಯುತ್ತಾರೆ_ಯಾಕೆ? ಯಾಕಂದರೆ, ತಮ್ಮ ದೊಡ್ಡಸ್ಥನದ ಅರಿವು, ತಮ್ಮ ಅನುಪಮೇಯ ಜೀವನದ ಬಗ್ಗೆ ಸ್ವಾಭಿಮಾನ ಅವರಲ್ಲಿ ತುಂಬ ಇರುತ್ತದೆ. ಹಾಗೂ ಜಗತ್ತಿನೆದುರಿಗೆ ತಮ್ಮ ವೈಶಿಷ್ಟ್ಯ ಪೂರ್ಣವಾದ ಜೀವನದ ಪ್ರದರ್ಶನ ಮಾಡುವ ಹಂಬಲವೂ ಅವರಲ್ಲಿ ತೀವ್ರವಾಗಿರುತ್ತದೆ! ನಮ್ಮಂಥ ಅಲ್ಪರು ಬರೆಯಬೇಕಾದರೆ, ತಮ್ಮ ಹೃದಯದ ತಳಮಳದ ಉರಿಯನ್ನು ಆರಿಸಲು ಬರೆಯುತ್ತಾರೆ : ಅಥವಾ ಹೃದಯದಲ್ಲಿ ಜಟಿಲವಾಗಿ ಬೆಳೆದ ಸಮಸ್ಯೆಗಳನ್ನು ಬಿಡಿಸಲು ಬರೆಯುತ್ತಾರೆ..... ನಾನು ಬರೆಯಬೇಕಾದರೆ ಈ ಎರಡೂ ಉದ್ದೇಶಗಳಿವೆ.

ಆದರೆ ಹೊರತಾಗಿ..." ಕೌತುಕದಿಂದ ನಗುತ್ತಿದ್ದ ಡಾಲಿಯ ಕಣ್ಣುಗಳು ನನ್ನ ಭಾಷಣಕ್ಕೆ ಅರ್ಧವಿರಾಮ ಕೊಟ್ಟವು !

"ವಾಹ್, ಗೋರೀ ! ಎಷ್ಟು ಚಂದ ಮಾತಾಡುತೀಯಲ್ಲ...... ಅವರ ಸಲುವಾಗಿ ಇದೋ ಒಂದು ಮುತ್ತು..."ಎಂದು ಡಾಲಿ-ತಾಯಿ ಮಗುವನ್ನು ಮುದ್ದಿಸುವಂತೆ_ನನ್ನ ಹಣೆಯ ಮೇಲೆ ಮುದ್ದಿಸಿದಳು.

"ನನಗೆ ಓದಿ ತೋರಿಸಬೇಕು ನಿನ್ನ ಕತೆಯನ್ನು.... ನಿನ್ನ 'ಹೃದಯದ ತಳಮಳ,' 'ಜಟಿಲ ಸಮಸ್ಯೆಗಳು_ನನ್ನಲ್ಲಿ ನಿಜಕ್ಕೂ ಕುತೂಹಲವುಂಟಾಗಿದೆ.... ಗೋರಿ, ಇಷ್ಟು ದಿನ ನೀನು ನನಗೆ ಏನೂ ಹೇಳಿಲ್ಲವಲ್ಲ !"

"ಅಚ್ಛಾ, ಓದಿ ಹೇಳುವೆ – ಒಂದು ಸಲ, ನಾನು ಆಫ್ರಿಕೆಗೆ ಹೋಗುವ ಮೊದಲು. ಆಯ್ ಪ್ರೊಮಿಚ್"

"ಗೋರೀ, ನಾನು ನಿನ್ನ ಕತೆಯಲ್ಲಿ ಬರುವೆನೇ ?"

"ಸ್ವಲ್ಪ... ಸ್ವಲ್ಪ."

"ಹೂಂ –! ನನ್ನ ಬಗ್ಗೆ ಏನೂ ಬರೆಯಬೇಡ, ಪ್ಲೀಜ್ –"

"ಯಾಕೆ ? ನಾನೂ ಏನನ್ನೂ ಬಚ್ಚಿಡಬಾರದೆಂದು ಮಾಡಿದ್ದೇನೆ..."

'ನೀನು ನನ್ನನ್ನು ನಿನ್ನ ಕತೆಯಲ್ಲಿ ಹಾಕಿದರೆ, ನಾನೋರ್ವ ಕೆಟ್ಟ ನೀತಿಗೆಟ್ಟ ಹುಡುಗಿಯಂತೆ ಕಾಣುವದರಲ್ಲಿ ಸಂಶಯವಿಲ್ಲ..."

ಛೇ... ನಿನ್ನ ಬಗ್ಗೆ ಇದ್ದ ನನ್ನ ದೃಷ್ಟಿಕೋನ ಸಾಮಾನ್ಯ ಕಾಮುಕನದೆಂದು ತಿಳಿದಿರುವಿಯೇನು ? ಡಾಲಿ, ಡಾಲಿ... ನಾನು ಬೇರೊಂದು ದೃಷ್ಟಿಯಿಂದಲೇ ಚಿತ್ರಿಸಿದ್ದೇನೆ ನಿನ್ನ 'ಪಾತ್ರ'ವನ್ನು... ಅದಿರಲಿ, ನಿನ್ನ ಸ್ತುತಿ ಮಾಡುತ್ತ ಕೂಡ್ರುವದಿಲ್ಲ ನಾನೀಗ....ನನ್ನ ಆತ್ಮಚರಿತ್ರೆಯನ್ನು ಪ್ರಕಟಿಸುವುದು ಅಷ್ಟರಲ್ಲಿಯೇ ಇದೆ – ನಾನು ಬರೆಯುತ್ತಿರುವದು ಬರಿಯ ನನ್ನ ಸಲುವಾಗಿ, ಮಿದುಳಿನಲ್ಲಿಯ ರಾಡಿಯನ್ನು ತೊಳೆದು ಸ್ವಚ್ಛ ಮಾಡುವದೇ ನನ್ನ ಮುಖ್ಯ ಉದ್ದೇಶ..."

"ಹಾಗಾದರೆ ನಿನ್ನ ಕತೆಗೆ ತಾಳ-ತಂತಿಯೇನೂ ಇರಲಿಕ್ಕಿಲ್ಲ..."

"ಹಾಗೇನಿಲ್ಲ. ನನಗೂ ಸ್ವಲ್ಪ ಕಲಾದೃಷ್ಟಿಯಿದೆ ಎಂದು ಇತ್ತಿತ್ತಲಾಗಿ ಅನಿಸತೊಡಗಿದೆ... ನನ್ನ ಅನುಭವಗಳನ್ನು ಕಲಾತ್ಮಕವಾಗಿ ಬರೆದಾಗಲೇ ಆ ಅನುಭವಗಳಿಗೆ ಅರ್ಥ ಬರುತ್ತದೆ. ಹಾಗೂ ಅನುಭವಗಳು ಭಾವನಾತೀತವಾಗುತ್ತವೆ..."

"ಗೋರೀ... ಯು ಸೀ, ಇತ್ತಿತ್ತಲಾಗಿ ನೀನು ಬೇರೊಬ್ಬ ಮನುಷ್ಯನಾಗುತ್ತ ನಡೆದಂತೆ ನನಗನಿಸುತ್ತದೆ... ಈಗ ಹೋದ ಹದಿನೈದು ದಿನಗಳಲ್ಲಿ ಮೂರ್ನಾಲ್ಕು

ಸಲ ನಾವು ಭೆಟ್ಟಿಯಾದೆವು, ಅಲ್ಲವೆ? ನನಗೆ ಕ್ರಮೇಣ ಅನ್ನಿಸಿದ್ದೇನೆಂದರೆ ನೀನು ಸಾವಾಕಾಶವಾಗಿ ಬದಲಾಗುತ್ತ, ಬೆಳೆಯುತ್ತ, ದೊಡ್ಡವನಾಗುತ್ತ ಹೋಗುತ್ತಿರುವಿ –– ಎಂದು. ಅದು ಹೇಗೆ? ನೀನು ಬರೆಯುತ್ತಿರುವುದಕ್ಕೂ ನೀನು ಬೆಳೆಯುತ್ತಿರುವದಕ್ಕೂ ಏನಾದರೂ ಸಂಬಂಧವಿದೆಯೇ?"

"ಇರಬಹುದು... ಆದರೆ ನೀನು ಹೇಳುವದು ನಿಜವೇ?"

"ಹುಂ.... ಇಲ್ಲಿ ನೋಡು, ಇನ್ನು ಮೇಲೆ ನಾನೂ ಬರೆಯುವೆ ತಡೆ ನನ್ನ ಕತೆಯನ್ನು." ಡಾಲಿ ನಕ್ಕಳು. "ನನ್ನ ಕತೆ ನಿನ್ನ ಕತೆಗಿಂತ ಹೆಚ್ಚು ಇಂಟರೆಸ್ಟಿಂಗ್ ಆಗದಿರಲಾರದು !"

"ಉಪ್ಪು–ಖಾರ ಹಾಕಿದರೆ ಎಲ್ಲ ಕತೆ ಇಂಟರೆಸ್ಟಿಂಗ್ ಆಗುವವು."

"ನಿನ್ನ ಕತೆಯಲ್ಲಿ ಉಪ್ಪು–ಖಾರ ಇಲ್ಲವೇನು ?"

"ಇರಬಹುದು ; ಆದರೆ ನಾನು ಮುದ್ದಾ ಮಾಗಿ ಏನೂ ಹಾಕಿದಲ್ಲ..."

"ಗೋರಿ, ಇಂದು ನಾನೊಂದು ಬಹಳ ಇಂಟರೆಸ್ಟಿಂಗ್ ವಿಷಯ ಹೇಳಬೇಕೆಂದು ಮಾಡಿದ್ದೆ ನಿನಗೆ !" ಡಾಲಿ ಕಣ್ಣರಳಿಸಿ ನನ್ನೆಡೆಗೆ ತೀಕ್ಷ್ಣವಾಗಿ ನೋಡಿದಳು...

"ಅದೇನದು ?" ಎಂದೆ, ಸಹಧ್ವನಿಯಲ್ಲಿ.

ಈಗ ಹೇಳುವದಿಲ್ಲ – ನಿನಗೆ ಅಷ್ಟು ಕುತೂಹಲವೇ ಇಲ್ಲ..."

"ಊಂಹುಂ, ಮೊದಲು ಲೇಮನ್ ಜ್ಯೂಸ್ ತಯಾರ ಮಾಡೋಣ ; ಆಮೇಲೆ..."

ಎರಡು ನಿಮಿಷಗಳಲ್ಲಿ ನಿಂಬೇಹಣ್ಣಿನ ಪಾನಕ ಮಾಡುವದರಲ್ಲಿ ಮಗ್ನಳಾದಳು ಡಾಲಿ. ನನ್ನ ಬದಿಗೆ ಬೆನ್ನು ಮಾಡಿ ನಿಂತ ಅವಳ ದೇಹದಲ್ಲಿ ಆಹ್ವಾನವಿರದಿದ್ದರೂ, ಒಂದು ಬಗೆಯ ಆಶ್ವಾಸನವಿತ್ತು... ಅವಳ ತೇಳುವಾದ ದೇಹಕ್ಕೆ ಸ್ಕರ್ಟಿಗಿಂತ ಸೀರೆ ಹೆಚ್ಚು ಶೋಭಿಸಬಹುದೆಂದು ಅನಿಸಿತು. ಈ ಮಾತನ್ನು ಅವಳಿಗೆ ಹೇಳಬೇಕೆನ್ನುವಷ್ಟರಲ್ಲಿ, ಅವಳು ನನ್ನೆಡೆಗೆ ತಿರುಗಿ, ಕೈಯಲ್ಲಿ ಎರಡು ಗ್ಲಾಸುಗಳನ್ನು ಹಿಡಿದು, ಮುಗುಳು ನಗೆ ನಗುತ್ತ ಮುಂದೆ ಬಂದಳು.... ಒಂದು ಗ್ಲಾಸನ್ನು ನನ್ನ ಕೈಯಲ್ಲಿಡುತ್ತ, "ನನ್ನ – ಲೇಮನ್‌ಜ್ಯೂಸು ನಿನಗೆ ಸೇರುವದೋ ಇಲ್ಲವೋ ಯಾರಿಗೆ ಗೊತ್ತು ?" ಎಂದಳು.

"ಸೇರದೆ ಏನು ? ಏಪ್ರಿಲ್ ಸೆಕೆಯಲ್ಲಿ ಇದು ಅಮೃತ – ನಿನ್ನ ತುಟಿಗಳಂತೆ" ಎಂದು ತುಂಟತನದಿಂದ ಉತ್ತರಿಸಿದೆ...

"ಗೋರಿ, ಚೇಷ್ಟೆ ಬೇಡವೀಗ... ಇದು ನೋಡು, ಗೋರೀ, ನನಗೊಂದು

ವಿಚಾರ ಒಂದಿದೆ..."

"ಉಂ ? ಏನದು ?"

"ಒಂದು ಇಚ್ಛೆ ಉಂಟಾಗಿದೆ : ನಾನು ತಾಯಿಯಾಗಬೇಕೆಂದು...!"

"ಆಂ ?" ನಾನು ಆಶ್ಚರ್ಯಚಕಿತನಾದೆ, ಭಯಗೊಂಡೆ,

ಆಶ್ಚರ್ಯವೇನಿದೆ ಅದರಲ್ಲಿ ?"

"ಅಲ್ಲ – ಅಂದರೆ ಲಗ್ನಮಾಡಿಕೊಳ್ಳುವ ವಿಚಾರ ಬಂತನ್ನು ತಲೆಯಲ್ಲಿ?"

"ಲಗ್ನ ? ಛೇ, ಆ ವಿಚಾರವನ್ನೇ ಕಿತ್ತುಹಾಕಿರುವೆ ಎಂದೋ..."

"ಲಗ್ನ ಬೇಡ ಮಕ್ಕಳು ಬೇಕು, ಇದು ಒಳ್ಳೆಯ ನ್ಯಾಯ !"

"ಹೌದು, ಯಾಕೋ ಏನೋ ಇತ್ತಿತ್ತಲಾಗಿ ಬಹಳ ಅನಿಸತೊಡಗಿದೆ : ನನ್ನದೇ ಒಂದು ಪುಟ್ಟ ಮಗು ಇರಬೇಕು, ಅದನ್ನು ಆಡಿಸಬೇಕು, ರಕ್ಷಿಸಬೇಕು, ಎದೆಗವಚಿಕೊಳ್ಳಬೇಕು, ಆ ಮುಗುವಿಗಾಗಿ ಜೀವಿಸಬೇಕು, ಜೀವ ಸವೆಸಬೇಕು... ನನ್ನದೇ ಒಂದು ಮಗುವಿದ್ದರೆ, ನನ್ನ ಜೀವವಿರುವತನಕ ನನ್ನ ಜೀವನಕ್ಕೆ ಅರ್ಥ ಬಂದೀತು... ಮುದುಕಿ ತಾಯಿಯ ಜೀವನ ಮುಗಿಯುತ್ತ ಬಂದಿದೆ. ನನ್ನ ತಮ್ಮನೂ ಒಂದೆರಡು ವರ್ಷಗಳಲ್ಲಿ ಸ್ವತಂತ್ರನಾಗುವವ, ಹಾಯಸ್ಕೂಲ ಶಿಕ್ಷಣ ಮುಗಿದೊಡನೆ ಮೋಟಾರ – ರಿಪೇರಿಂಗ್ ಫರ್ಮಿನಲ್ಲಿ ಕೆಲಸಕ್ಕೆ ಸೇರುವವನಿದ್ದಾನೆ. ಈಗಾಗಲೇ ಉಮೇದವಾರಿ ನಡೆಸಿದ್ದಾನೆ... ಗೋರೀ, ಮುಂದೆ ನನ್ನ ಜೀವನಕ್ಕೆ ಒಂದು ಕೇಂದ್ರ ಬೇಡವೇ?"

ಡಾಲಿಯ ಸರಳ ಗಾಂಭೀರ್ಯ ನನ್ನ ಮನವನ್ನು ಕದಡಿತು.

"ಡಾಲೀ, ನೀನು ಒಂದು ರೀತಿಯಿಂದ ಸ್ವಯಂಪೂರ್ಣ ಹುಡುಗಿ ಇರುವಿ. ನನಗೂ ಓರ್ವ ಸ್ವಯಂಪೂರ್ಣ ಮಿತ್ರನಿದ್ದ."

"ಈಗೆಲ್ಲಿದ್ದಾನೆ ಆತ ?"

"ಮೇಲೆ –" ನಾನು ಮೇಲೆ, ಕಾಣದ ಆಕಾಶದತ್ತ ಬೆರಳು ತೋರಿಸಿದೆ.

"ಪಾಪ !... ಏನಾಗಿತ್ತು ?"

"ಟೀ.ಬಿ.... ಆದರೆ ಮುಂದೆ ಅವನು..." ಹೇಗೆ ಹೇಳಬೇಕೆಂದು ನಾನು ಯೋಚಿಸುತ್ತಿದ್ದೆ.

"ಆಯ್ಮ್ ವ್ಹೆರಿ ಸಾರಿ..."

ಸ್ವಲ್ಪ ಮೌನದ ನಂತರ ಅವಳು ಮುಂದುವರಸಿದಳು :

"ಗೋರೀ, ಸಾಯುವದು ಇದ್ದೇ ಇದೆ. ಅದಕ್ಕಾಗಿಯೇ ನನ್ನ ಒಂದು ಅಂಶವನ್ನು ನನ್ನ ಹಿಂದೆ ಈ ಜಗತ್ತಿನಲ್ಲಿಡಬೇಕೆಂಬ ಆಶೆ..." ಎಂದು ಹೇಳಿ

ಡಾಲಿ ನನ್ನೆಡೆಗೆ ತೀಕ್ಷ್ಣವಾದ ದೃಷ್ಟಿಯೊಂದನ್ನು ಬೀರಿದಳು.

"ಆದರೆ illegitimate child – ಬೇಕಾಯದೇಶೀರ ಮಗು – ಅಂದರೆ ಒಂದು ಸಮಸ್ಯೆಯಾಗುವದು..."

"ಅದಕ್ಕೆ ನನ್ನದೊಂದು ಉಪಾಯವಿದೆ..."

"ಏನು ?"

"ಗುಪ್ತವಾಗಿ ಹಡೆದು – ಆನಂತರ ದತ್ತಕ ತೆಗೆದುಕೊಳ್ಳುವದು – ಜನರ ಕಣ್ಣಲ್ಲಿ ಮಣ್ಣು ಹಾಕಲು..."

ಡಾಲಿಯ ನಗೆ ನನ್ನನ್ನೂ ನಗಿಸಿತು.. ನಾನೆಂದೆ :

"ಇನ್ನೂ ಐದಾರು ವರ್ಷ ಹೋಗಲಿ ; ಅನಂತರ ನಿನ್ನ ಯೋಜನೆಯನ್ನು ಕಾರ್ಯರೂಪದಲ್ಲಿ ತಂದೀಯಂತೆ..."

ಡಾಲಿಯ ವಿಚಾರಗಳು ನನ್ನಲ್ಲಿ ಸಂಶಯ – ಭೀತಿಗಳನ್ನುಂಟುಮಾಡಿದವು...

ಆ ದಿನ ರಾತ್ರೆ ಅವಳೊಡನೆ ಮಲಗಿದಾಗ, ಒಮ್ಮೆಲೆ ನನ್ನ ತಲೆಯಲ್ಲಿ ಮಿಂಚಿನಂತೆ ಹೊಳೆಯಿತು – ಒಂದು ಭೀತಿ :

– ಇವಳು ನನ್ನನ್ನು ತನ್ನ ಸಾಧನವನ್ನಾಗಿ ಉಪಯೋಗಿಸುತ್ತಿರುವಳೇ ? ಅಥವಾ ನನ್ನ ಒಳ್ಳೆಯತನದ ಉಪಯೋಗ ತೆಗೆದುಕೊಂಡು ನನ್ನನ್ನು ವಂಚಿಸಿ ಬಲೆಯಲ್ಲಿ ಹಾಕುತ್ತಿರುವಳೇ?

ನಾನು ಬೇಗನೇ ಓಡಿ ಹೋಗಬೇಕು ಆಫ್ರಿಕೆಗೆ – ಎಂಬ ವಿಚಾರ ಬಲವತ್ತರವಾಯಿತು!

* * *

ಜೀವ ಹುಟ್ಟಲಿಕ್ಕೆ ತಡವಿಲ್ಲ. ಸಹಜವಾಗಿ – ಗಿಡಕ್ಕೆ ಎಲೆ ಮೂಡುವಂತೆ – ನಿಮ್ಮ ಅರಿವಿಲ್ಲದೆ, ಮಾನವ – ಜೀವದ ಸೃಷ್ಟಿಯಾಗಬಹುದು.... ಯಾರಿಗೆ ಗೊತ್ತು ನಿನ್ನೆ ರಾತ್ರೆಯೇ ಸೃಜನಕಾರ್ಯ ಪ್ರಾರಂಭವಾಗಿರಬಹುದು...? ಸಮುದ್ರದಲ್ಲಿ ಎರಡು ಕಟ್ಟಿಗೆಯ ತುಂಡುಗಳು ಅಕಸ್ಮಾತ್ತಾಗಿ, ಸಹಜವಾಗಿ ಕೂಡುವಂತೆ, ನಾವು ಕೂಡಿದೆವು ನಿಜ! ಆದರೆ ಕೆಲವು ಸಲ ಎರಡು ಕಟ್ಟಿಗೆಯ ತುಂಡುಗಳ ಘರ್ಷಣದಿಂದ ಬೆಂಕಿ ಉತ್ಪನ್ನವಾಗುವದಷ್ಟೆ! ನಮ್ಮ ಮನಸ್ಸು, ಹೃದಯ, ಆತ್ಮಗಳನ್ನು ಎಷ್ಟೇ ನಿರ್ಲಿಪ್ತವಾಗಿಟ್ಟರೂ, ನಮ್ಮ ದೇಹಮಾತ್ರ ಜೀವ–ಶಕ್ತಿಯ ಅಂಧ ಜೀತದಾಳೇ! ... ಅಯ್ಯೋ ...ನಾನೂ ಕುರುಡನೇ? ಇಲ್ಲ, ನಾನು ಎಂದೂ ಎಂದೆಂದಿಗೂ – ಮಾನವ ಜೀವದ ನಿರ್ಮಾಣಕ್ಕೆ ಕಾರಣವಾಗಲಾರೆ... ಒಂದು ಜೀವದ ಸುಖ– ದುಃಖ, ಆಶೆ – ನಿರಾಶೆ, ಕನಸು – ಕುನಸು, ಪ್ರೇಮ – ದ್ವೇಷ, ಜಯ –

ಅಪಜಯ, ಕೊನೆಗ ಮೃತ್ಯು : ಇವುಗಳಿಗೆ ನಾನು ಕಾರಣವಾಗಲಾರೆ... ಮೃತ್ಯು ! ಹೌದು ಒಂದು ಜೀವದ ಮೃತ್ಯುವಿಗೆ ನಾನು ಕಾರಣವಾಗಲಾರೆ... ಒಂದು ಜೀವಕ್ಕೆ ಜನ್ಮ ಕೊಡುವದೆಂದರೆ ಆ ಜನ್ಮದ ಕೂಡ ಆ ಜೀವದ ಮೃತ್ಯುವನ್ನು ಹುಟ್ಟಿಸಿದಂತೆಯೇ... ಮೃತ್ಯು ಎಂದರೇನು ಎಂಬುದರ ಸ್ಪಷ್ಟ ಕಲ್ಪನೆ ನನಗಿದ್ದಾಗ, ಮರಣದ ಸತ್ಯತೆ, ನಿಶ್ಚಿತತೆ, ಅನಿವಾರ್ಯತೆ, ಭೀಕರತೆಗಳ ಅಖಂಡ ಪ್ರಜ್ಞೆ ಜ್ಞಾನಗಳಿದ್ದಾಗ, ನಾನು ಕಣ್ಣಿಲ್ಲದ ಮೂರ್ಖತನ ಮಾಡಬಹುದೇ? – ಮೃತ್ಯು – ಶ್ರೀಕಾಂತನ ಮೃತ್ಯು ಹೃದಯದಲ್ಲಿ ಜ್ವಲಂತ–ಜ್ವಾಲೆಯಾಗಿ ನಿರಂತರ ಉರಿಯುತ್ತಿರುವಾಗ ನಾನು ಕುರುಡನಾಗಬಹುದೇ?

– ಶ್ರೀಕಾಂತನ ಮೃತ್ಯು : ಅದರ ಬೀಜವೆಲ್ಲಿತ್ತು? ಮೊದಲನೆಯದಾಗಿ, ಅವನ ಜನ್ಮದಲ್ಲಿ – ಇದು ಸಾರ್ವತ್ರಿಕ ಸತ್ಯ – ಎರಡನೆಯದಾಗಿ, ಅವನ ಅಕಾಲಮೃತ್ಯುವಿನ ಬೀಜ ಅವನ ಟೀ. ಬಿ. ಯಲ್ಲಿತ್ತು... (ಆದರೆ ಇದು ಸಂಪೂರ್ಣ ಸತ್ಯವೇ?) ಮೂರನೆಯಾಗಿ, ಅವನ ಮನಸ್ಸಿನಲ್ಲಿಯೇ ಇತ್ತು ಮರಣದ ಕಾರಣ!... ಅಥವಾ ಈ ಮೂರು ಕಾರಣಗಳ 'ಏಕೀಕರಣ'ವೇ ಶ್ರೀಕಾಂತನ ಮರಣಕ್ಕೆ ಕಾರಣ !...

– ಆದರೆ ಜನರಿಗೆ ಮಾತ್ರ ದುರ್ದೈವಿ ಟೀ. ಬಿ.ಯೇ ಕಾರಣ – ಎಲ್ಲದಕ್ಕೂ !

ಶ್ರೀಕಾಂತನ ಪತ್ರ ಬಂದ ಮಾರನೆಯ ದಿನ ನಾನು ಗಡಬಡಿಸಿ ಧಾರವಾಡಕ್ಕೆ ಓಡಿದೆ... ಟೀ.ಬೀ. ಭೂತದ ನೆರಳಿನಲ್ಲಿ ನಿರ್ವಿಣ್ಣನಾಗಿ ಶ್ರೀಕಾಂತ ಕೈ ಚೆಲ್ಲಿ ಬಿದ್ದಿರಬಹುದೆಂದು ನಿರೀಕ್ಷಿಸಿದ್ದೆ...

ನಾನು ಅವರ ಮನೆ ಮುಟ್ಟಿ ಕದ ತಟ್ಟುವ ತನಕ ಒಂದು ಬಗೆಯ ದಿಗ್ಭ್ರಮೆ – ಶೂನ್ಯತೆ ನನ್ನ ಮನವನ್ನಾವರಿಸುತ್ತು. ಕದ ತೆರೆದ ವ್ಯಕ್ತಿ ಕಾಮಿನಿಯಾಗಿದ್ದಳು... ಕಾಮಿನಿ – ಯಾಕೋ ಏನೋ – ಒಮ್ಮೆಲೆ ತೀರ ಹತ್ತಿರ ಬಂದವಳಂತೆ ತೋರಿದಳು.

"ಕಾಮಿನಿ, ಶ್ರೀಕಾಂತ ಹೇಗಿದ್ದಾನೆ ?" ನನ್ನ ಬ್ಯಾಗನ್ನು ಬಾಗಿಲಬದಿಗೆ ಗೋಡೆಯ ಹತ್ತಿರ ಇಡುತ್ತ ಕೇಳಿದೆ.

"ನೆಟ್ಟಗಿದ್ದಾನೆ. ಓದುತ್ತ ಮಲಗಿದ್ದಾನೆ ತನ್ನ ಕೋಣೆಯಲ್ಲಿ."

ಕಾಮಿನಿಯ ಧ್ವನಿಯಲ್ಲಿ, ಮುಖದಲ್ಲಿ ವ್ಯಾಕುಲದ ಚಿಹ್ನವಿರಲಿಲ್ಲ. ಹಾಯೆನಿಸಿತು. ಆಗಲೇ ಕಾಮಿನಿಗೆ ಮೀಸಲಾದ ನನ್ನ ಮನದ ಭಾಗ ಚೇತನಗೊಳ್ಳಲು, ನಾನು ಸ್ವಲ್ಪ ಕೂಲಂಕಷವಾಗಿ ಅವಳೆಡೆಗೆ ನೋಡಿದೆ.

"ನೀನು ನೆಟ್ಟಗಿರುವೆಯಾ ?"

"ನನಗೇನಾಗಿದೆ ಧಾಡಿ ?"

ಅವಳ 'ಧಾಡಿ.' ಶಬ್ದ ನನ್ನನ್ನು ಚುಚ್ಚಿತು. ಖುರ್ಚಿಯ ಮೇಲೆ ಕುಳಿತು ಬೂಟುಗಳನ್ನು ಕಳಚತೊಡಗಿದೆ.

"ನಿನ್ನ ಸೂಟಿ ಚನ್ನಾಗಿ ಹೋಯಿತೋ ? ನಿಮ್ಮ ಮೈಸೂರ ಟ್ರಿಪ್ಪು ಹೇಗಾಯಿತು ?"

"ಆಂ ? – ಟ್ರಿಪ್ಪೋ ?..." ಅವಳ ದೃಷ್ಟಿ ಕಿಡಕಿಯ ಹೊರಗೆ ನೆಲಸಿತು

ಅವಳ ಮೌನ ನನ್ನ ಮನಸ್ಸಿನಲ್ಲಿ ಗದ್ದಲವೆಬ್ಬಿಸಿತು. ಅಸ್ಪಷ್ಟ ಸಂಶಯಗಳ ಕಲ್ಲೋಲ ಸುರುವಾಯಿತು ; ಒಂದು ನಿಮಿಷ ಮಾತ್ರ ಅವಳು ಮತ್ತೇನನ್ನಾದರೂ ಉಸುರುವಳೋ ಅಥವಾ ಅವಳ ಕಣ್ಣುಗಳು ಏನನ್ನಾದರೂ ಸೂಚಿಸುವವೋ ಎಂದು ಅವಳೆಡೆಗೆ ನಿರುಕಿಸಿದೆ. ಬೂಟು ಬದಿಗೆ ಸರಿಸಿ ಎದ್ದು ನಿಂತೆ. ಅವಳ ವಿಚಾರ ಮಗ್ನತೆ ಅವಳ ಮುಖದ ಸೌಂದರ್ಯಕ್ಕೆ ಪ್ರಬಲವಾದ ಚುಂಬನಶಕ್ತಿಯನ್ನಿತ್ತಂತೆ ಅನಿಸಿತು. ಆ ಮೊದಲೇ ಜರ್ಜರಿತವಾದ ನನ್ನ ಹೃದಯದಲ್ಲಿ ಒಂದು ಬಗೆಯ ಅನುಕಂಪ ಒಸರಿಬಂತು. ನಾನು ಒಮ್ಮೆಲೆ ಅವಳ ಹತ್ತಿರ ಹೋಗಿ, ಅವಳ ಗದ್ದ ಹಿಡಿದು ಅವಳ ಮುಖ ನನ್ನೆಡೆಗೆ ತಿರುಗಿಸಿ, ಪ್ರಯತ್ನಪೂರ್ವಕವಾಗಿ ನಗೆ ಬೀರಿದೆ:

"ಕಾಮಿನೀ... ನಿನ್ನ ಟ್ರಿಪ್ಪಿನ ಬಗ್ಗೆ ನಂತರ ಹೇಳುವಿಯಂತೆ, ಆಂ ?" ಎಂದೆ, ಅವಳ ದೃಷ್ಟಿಯಲ್ಲಿಯ 'ದೂರತ್ವ' ಇನ್ನೂ ಇದ್ದುದನ್ನು ಕಂಡು ಗಡಬಡಿಸಿದೆ. "ನಡೆ, ಶ್ರೀಕಾಂತನನ್ನು ನೋಡುವ..." ಎಂದು ಲಗುಬಗೆಯಿಂದ ಶ್ರೀಕಾಕಂತನ ಕೋಣೆಯ ಕದ ದೂಡಿ ಒಳಗೆ ಹೋದೆ.

"ಶ್ರೀಕಾಂತ !" ನನ್ನ ಕರೆಯಲ್ಲಿ ಕಂಪನವಿತ್ತು. ಆ ಕಂಪನದ ಮೂಲ ಕಾಮಿನಿಯ ಸಂಪರ್ಕದಲ್ಲಿತ್ತೋ ಅಥವಾ ಶ್ರೀಕಾಂತನನ್ನು ನೋಡಿದೊಡನೆ ಉಕ್ಕಿಬಂದ ದುಃಖ – ಸಹಾನುಭೂತಿಗಳಲ್ಲಿತ್ತೋ, ಅಥವಾ ಈ ಎರಡರಲ್ಲಿಯೂ ಇತ್ತೋ ?

"ಹಲೋ, ಗೋರಿ !" ಎಂದವನೇ ಶ್ರೀಕಾಂತ ಕಾಟಿನಿಂದ ಕೆಳಗೆ ರಭಸದಿಂದಲೇ ಜಿಗಿದ. "ಬಂದುಬಿಟ್ಟಿಯೇನು ? ಗುಡ್" ಎಂದು ನಗುತ್ತ ಕೈಚಾಚಿದ.

ನಿರಾಶೆಯಿಂದ ಕುಂದಿದ ಮುಖವನ್ನು ಅಪೇಕ್ಷಿಸಿದ ನನಗೆ ಅವನ ಉತ್ಸಾಹಪೂರ್ಣ ನಗೆ ಆಶ್ಚರ್ಯವನ್ನುಂಟುಮಾಡಿತು. ನನಗೆ ಏನು ಹೇಳಬೇಕು,

ಏನ ಕೇಳಬೇಕೆಂಬುದು ತಿಳಿಯಲಿಲ್ಲ. ದಿಙ್ಮೂಢನಾಗಿ, ಒಮ್ಮೆ ತೀಕ್ಷ್ಣವಾಗಿ ಅವನೆಡೆಗೆ ನೋಡಿ, ನಿರ್ಜೀವ – ಹಸ್ತದಿಂದ ಅವನ ಬೆಚ್ಚಗಿನ ಹಸ್ತವನ್ನು ಹಿಡಿದು, ಮುಖ ಕೆಳಗೆ ಹಾಕಿದೆ.

"ಗೌರೀ, ಹುಚ್ಚ – ಹೀಗೇಕೆ ಮುಖ ಕೆಳಗೆ ಹಾಕಿದೆ ? ನಾನಿನ್ನೂ ಸತ್ತಿಲ್ಲ... ಹಾಗೂ ಸಾಯ ಹೊರಟಿಲ್ಲ...."

ಸಾವು ಎಂದೊಡನೆ ನನ್ನನ್ನು ನಾನು ಸಾವರಿಸಿಕೊಂಡೆ.

"ಸಾವಿನ ಮಾತೇಕೆ ?" ಎಂದು ಪ್ರಯಾಸದಿಂದ ನುಡಿದೆ.

"ಅಲ್ಲ, ಸಾವಿನ ಬಗ್ಗೆ ಮಾತನಾಡಲು ಯಾಕೆ ಹೆದರಿಕೆ ? ಮನುಷ್ಯನೆಂದ ಮೇಲೆ ಸಾವು ನಿಶ್ಚಿತ. ಮೃತ್ಯು ಎಂಬ ಸತ್ಯವನ್ನು ಪ್ರತಿಯೊಬ್ಬನೂ ಎದುರಿಸಲೇಬೇಕು.

"ಅದೆಲ್ಲ ನಿಜ. ಆದರೆ ನಿನ್ನ ಸಾವಿನ ಮಾತೇಕೆ ?"

"ಯಾಕೆ, ನಾನು ಒಂದು ದಿನ ಖಂಡಿತ ಸಾಯಲಿರುವೆನಷ್ಟೆ ! ಆದರೆ ನಾನು ಈಗ – ಈ ಟೀ.ಬಿ. ಯಿಂದ ಸಾಯಲು ಹೊರಟಿಲ್ಲವಲ್ಲ."

"ಅದೇ ನನಗೆ ಬೇಕಾದದ್ದು. ನಾನು ಎಷ್ಟೊಂದು ಹೆದರಿದ್ದೆ ಗೊತ್ತೇ?" ಎದೆಯ ಮೇಲಿನ ಕಲ್ಲು ಉರುಳಿತು. ಹಾಯನಿಸಿತು. ಅಷ್ಟರಲ್ಲಿ ಶ್ರೀಕಾಂತ ಕಾಟಿನ ಮೇಲೆ ಕುಳಿತದ್ದರಿಂದ ನಾನು ಅವನ ಬದಿಗೆಯೇ ಕುಳಿತೆ.

"ಆದರೆ ಒಂದು ಮಾತು. ನಾನು ನೇಮದಿಂದ ಡಾಕ್ಟರರು ಹೇಳಿದಂತೆ ಔಷಧೋಪಚಾರ ತೆಗೆದುಕೊಳ್ಳಬೇಕು."

"ಮತ್ತೆ.... ?"

"ಡಾಕ್ಟರರ ಹೇಳಿಕೆಯ ಪ್ರಕಾರ ನಾನು ಮಿರಜಿಯ ಹತ್ತಿರ ವಾನಲೆಸ್‌ವಾಡಿಯಲ್ಲಿ ಹೋಗಿ ಇರಬೇಕಂತೆ."

* * *

ಶ್ರೀಕಾಂತ ಹೊರಗೆ ಆಶೆ, ಉತ್ಸಾಹ ತೋರಿಸಿದ್ದರೂ ಅವನ ಮನಸ್ಸು ಮೃತ್ಯುವಿನ ಮೇಲೆಯೇ ಕೇಂದ್ರೀಕೃತವಾಗಿತ್ತೆಂಬುದು ನಂತರ ನನಗೆ ತಿಳಿಯಿತು. ಅದೇ ಕಾಲಕ್ಕೆ ಬರೆದ ದಿನಚರಿಯಲ್ಲಿ ಶ್ರೀಕಾಂತ ಪ್ಲೇಟೋನ 'ಸೊಕ್ರೆಟಿಸನ ಕೊನೆಯ ದಿನಗಳು' ಎಂಬ ಪುಸ್ತಕದಲ್ಲಿಯ ಅವತರಣ ಬರೆದಿಟ್ಟಿದ್ದಾನೆ :

"ಮರಣವೆಂದರೆ ಎರಡು ಸಂಗತಿಗಳಲ್ಲೊಂದು : ಮರಣವೆಂದರೆ ಸಂಪೂರ್ಣನಾಶ, ಶೂನ್ಯತೆ, ಹಾಗೂ ಸತ್ತವನಿಗೆ ಯಾವದೇ ತರದ ಪ್ರಜ್ಞೆಯೆಂಬುದುದಿಲ್ಲ. ಅಥವಾ ಮರಣವೆಂದರೆ, ಕೆಲವರು ಹೇಳುವಂತೆ, ನಿಜಕ್ಕೂ ಒಂದು ಬಗೆಯ ಬದಲು, ಸ್ಥಿತ್ಯಂತರ – ಆತ್ಮದ ಸ್ಥಳಾಂತರ, ಈ ಜಗತ್ತಿನಿಂದ

ಮತ್ತೊಂದು ಜಗತ್ತಿಗೆ. ಮರಣವೆಂದರೆ ಪ್ರಜ್ಞಾನಾಶವಿದ್ದರೆ, ಅದು ಸ್ವಪ್ನರಹಿತ ನಿದ್ರೆಯಂತಲ್ಲವೇ ? ಹಾಗಿದ್ದ ಪಕ್ಷದಲ್ಲಿ ಮರಣವೆಂದರೆ ಆತ್ಮದ ಸ್ಥಳಾಂತರವಾಗಿದ್ದರೆ ಹಾಗೂ ಕೆಲವರು ಹೇಳುವಂತೆ ಆ ಮತ್ತೊಂದು ಸ್ಥಳದಲ್ಲಿ ಸತ್ತವರೆಲ್ಲ ಇದ್ದರೆ ಆ ಸ್ಥಳದಲ್ಲಿರುವದಕ್ಕಿಂತ ಹೆಚ್ಚಿನ ಅನುಗ್ರಹವೇನು ?... ಹೌದು ಈಗ ನಾವು ಹೊರಟಿದ್ದೇವೆ : ನಾನು ಸಾಯಲು, ನೀವು ಜೀವಿಸಲು. ಆದರೆ ಯಾರ ಭವಿಷ್ಯ ಸುಖಮಯವಾಗಿದೆಯೆಂಬುದು ಯಾರಿಗೂ ಗೊತ್ತಿಲ್ಲ. ಗೊತ್ತಿದ್ದರೆ ದೇವರೊಬ್ಬನಿಗೆ ಗೊತ್ತು."

ಮುಂದೆ ಶ್ರೀಕಾಂತ ಮೃತ್ಯುವನ್ನೇ ಕೇಂದ್ರವನ್ನಾಗಿ ಮಾಡಿ ತನ್ನದೇ ಒಂದು ತತ್ವಜ್ಞಾನ ಕಟ್ಟುವದರಲ್ಲಿದ್ದ.

* * *

ನನ್ನ ಜೀವನದಲ್ಲಿ ಅದು ಬಹುಶಃ ಮೊದಲನೆಯ ಸಂಧಿಕಾಲವಾಗಿರಬೇಕು. ತಂದೆ – ತಾಯಿ – ಸತ್ಯೇಂದ್ರರು ಹೇಳಿದಂತೆ ಮುಂಬಯಿಗೆ ಹೋಗಬೇಕೊ, ಅಥವಾ ಶ್ರೀಕಾಂತನ ಶುಶ್ರೂಷೆ ಮಾಡುತ್ತ ಧಾರವಾಡದಲ್ಲಿ ಅಥವಾ ಅವನಿದ್ದಲ್ಲಿ ಇರಬೇಕೋ? ನಾನು ಮಾಡಬೇಕಾದದ್ದೇನು? ಇದೋಅದೋ? ಇದನ್ನು ನಾನೇ ನಿರ್ಣಯಿಸಬೇಕು. ಶ್ರೀಕಾಂತನಿಗೆ ಈ ಪ್ರಶ್ನೆ ಕೇಳಲು ಸಾಧ್ಯವಿಲ್ಲ. ಕೇಳಿದರೆ ಅವನು ಹೀಗೆ ಹೇಳಬಹುದಾಗಿತ್ತು. (ಮುಂದೆ ಎಷ್ಟೋ ಸಲ ತಾನಾಗಿಯೇ ಹೀಗೆ ಅಂದಿದ್ದ) : "ನೀನು ಮುಂಬಯಿಗೆ ಹೋಗಿ ಬಿ.ಎಸ್‌ಸಿ. ಟೆಕ್ ಅಥವಾ ಒಳ್ಳೆಯ ಕಾಲೇಜೊಂದರಲ್ಲಿ ಎಮ್. ಎಸ್‌ಸಿ. ಮಾಡುವದೊಳಿತು."– ಹೀಗೆ ಅವನು ತನ್ನ ಉದಾರಬುದ್ಧಿಯನ್ನು ತೋರಿಸಬಹುದಿತ್ತು... ಶ್ರೀಕಾಂತನ ಈ ದೆಸೆಯಲ್ಲಿ ನಾನು ಮುಂಬಯಿಗೆ ಹೋಗುವ ವಿಚಾರ ಕೂಡ ಅಸಹ್ಯವಾಯಿತು. "ಇಲ್ಲ. ಅದು ತೀರ ಅಶಕ್ಯ. ನಾನು ಇಲ್ಲಿಯೇ ಇರುವೆ... ಹಾಗೆ ನೋಡಿದರೆ ಇಲ್ಲಿಯೂ ಎಮ್. ಎಸ್‌ಸಿ. ಮಾಡುವದು ಶಕ್ಯವಿದೆ. ಟೆಕ್ ಹಾಳಾಗಿ ಹೋಗಲಿ. ಶ್ರೀಕಾಂತನಿಗೆ ಈಗ ಯಾರಾದರೂ ಬೇಕು – ನಾನು ಬೇಕು. ಅಲ್ಲ, ನನಗೆ ಅವನು ಬೇಕು. ಸದ್ಯ ಅವನ ಜೊತೆಗಿರುವದು ನನ್ನ ಕರ್ತವ್ಯ, ಅಲ್ಲ, ನನ್ನ ಆತ್ಮದ ಅವಶ್ಯಕತೆ." ಹೀಗೆ ಏನೇನೋ ನನ್ನೊಡನೆ ನಾನು ಚರ್ಚಿಸಿದೆ. ಆದರೆ ಒಳಗಿನ ಮನಸ್ಸೊಂದು ನಾನು ಧಾರವಾಡದಲ್ಲಿಯೇ ಇರಲು ಇನ್ನೊಂದು ಕಾರಣ ಹೇಳಿತು : "ಹೌದು, ನನಗೆ ಗೊತ್ತು – ಇನ್ನೊಂದು ಕಾರಣವಿದೆಯೆಂದು. ಹೇಳಲೇ ? ಕಾಮಿನಿ. ಅವಳ ಮೇಲಿನ ಪ್ರೀತಿಯ ಯಕ್ಷ ಪ್ರಶ್ನೆಯನ್ನು ಬಿಡಿಸದ ಹೊರತು ಅವಳಿಂದ ನೀನು ಬಿಡಿಸಿಕೊಳ್ಳಲಾರೆ. ಅದಕ್ಕಾಗಿ ಅವಳಿದ್ದಲ್ಲಿ ನೀನಿರಲೇ

ಬೇಕು."

ಈ ಒಳಮನಸ್ಸಿನ ಮಾತು ಸತ್ಯೇಂದ್ರನ ಪತ್ರದ ಮುಖಾಂತರ ನನಗೆ ಸ್ಪಷ್ಟ ಕೇಳಬಂತು. ನಾನು ಧಾರವಾಡದಲ್ಲಿಯೇ ಇರುವ ತೀರ್ಮಾನಕ್ಕೆ ಬಂದಿದ್ದರೂ ಕೂಡ, ಈ ವಿಷಯದಲ್ಲಿ ಸತ್ಯೇಂದ್ರನ ಉಪದೇಶ ಕೋರಿದೆ. ಅವನಿಂದ ಉತ್ತರ ಬಂತು.

"ನೀನು ಧಾರವಾಡದಲ್ಲಿಯೇ ಇರುವದು ನಿನ್ನ – ಶ್ರೀಕಾಂತರಪ್ರೀತಿಯ ದ್ಯೋತಕವೇನೋ ನಿಜ.... ಶ್ರೀಕಾಂತನ ಕಾಯಿಲೆಯ ಬಗ್ಗೆ ನಿನ್ನಂತೆ ನನಗೂ ಸಹಾನುಭೂತಿಯಿದೆ .... ಆದರೆ ನೀನು ಅಲ್ಲಿ ಇದ್ದು ಏನು ಮಾಡಲಿರುವಿ ? ಶ್ರೀಕಾಂತನಿಗೆ ಈಗ ಡಾಕ್ಟರರ ಅವಶ್ಯಕತೆಯಿದೆ. ಅವನು ವಾಸನೆಸ್‌ವಾಡಿಯಲ್ಲಿರಬೇಕಾಗುವದೆಂದು ನೀನೇ ಬರೆದಿರುವಿ. ಸದ್ಯ ಅವನ ಕಾಳಜಿ ತೆಗೆದುಕೊಳ್ಳಲು ಡಾಕ್ಟರರಿಲ್ಲವೇ, ಅವನ ತಾಯಿಯಿಲ್ಲವೇ, ತಂಗಿಯಿಲ್ಲವೇ? ನೀನೇ ಬೇಕೆಂದಿಲ್ಲವಲ್ಲ. ನಿನ್ನ ಈ ತರಹದ ತ್ಯಾಗದ ಅವಶ್ಯಕತೆ ನನಗೆ ತೋರುವದಿಲ್ಲ... ಹಾಂ, ನೀನು ಹೇಳದಿದ್ದರೂ ನನಗೆ ಗೊತ್ತು, ಇನ್ನೊಂದು ಕಾರಣವಿದೆಯೆಂದು. ಕಾಮಿನಿ... ಹಾಂ, ತುಡಗಾ, ಹೌದೋ ಅಲ್ಲವೋ ? ಗೌರೀಶ, ನೀನು ವ್ಯರ್ಥವಾಗಿ ಬೆಂಕಿಯಲ್ಲಿ ಕೈ ಹಾಕಿ ಸುಡಿಸಿಕೊಳ್ಳುತ್ತಿರುವಿ. ಎಚ್ಚರಿಕೆ !"

ಈ ಪತ್ರವನ್ನೋದಿ ಒಂದು ಬಗೆಯ ವಿಲಕ್ಷಣಸಿಟ್ಟು ನನ್ನ ಮನಸ್ಸಿನಲ್ಲಿ ಹೊಗೆಯಾಡಿತ್ತು. ಇವನ ಸಹಾನುಭೂತಿ ಅರ್ಥವಿಲ್ಲದ ಸಹಾನುಭೂತಿ ; ಇವನ ಎಚ್ಚರಿಕೆ ಜೀವನದ ಉತ್ಕಟತೆಯನ್ನು ನಾಶಮಾಡುವ ಎಚ್ಚರಿಕೆ.... ಇವನಿಗೆ ನನ್ನ – ಶ್ರೀಕಾಂತನ ಪ್ರೀತಿಯ ಬಗ್ಗೆ ಹೊಟ್ಟೇಕಿಚ್ಚೇ ? ನನ್ನ ಕಾಮಿನಿಯ ಸಂಬಂಧ – ಅದು ಎಂಥದೇ ಇರವಲ್ಲದೇಕೆ – ಅದರ ಬಗ್ಗೆ ಅಂತರಿಕ (unconscious) ಅಸೂಯೆಯೇ ?....

* * *

ಮೊನ್ನೆ ಓದಿದ ಒಂದು ಅಮೇರಿಕನ್ ಕತೆಯಲ್ಲಿ ಈ ಬಗೆಯ ಅಸೂಯೆಯ ವರ್ಣನೆಯಿದೆ. ನಡುಹರೆಯದ ಗಂಡ–ಹೆಂಡಿರು. ಗಂಡನಿಗೊಬ್ಬ ಕಲಾವಂತ ಮಿತ್ರ, ಕುಡಿಯುವದು, ಹುಡುಗೆಯರನ್ನು ಉಪಭೋಗಿಸುವದು, ಅರ್ಧಮರ್ಧ ಬರೆಯುವದು – ಇದು ಆ ಮಿತ್ರನ 'ಹೇಯ' ಜೀವನ. ಇಂಥ ಮಿತ್ರನಿರುವದೆಂದರೆ ಅಪಮಾನ, ಅಸಹ್ಯಕರವಾದ ಅವಮಾನ – ಆ ಮಿತ್ರನನ್ನು ಬಿಟ್ಟು ಬಿಡಲು ಹೆಂಡತಿ ಗಂಡನಿಗೆ ಪ್ರಚೋದಿಸುವಳು... ಆದರೆ ಆ ಗಂಡನಿಗೆ ನಿಜವಾಗಿಯೂ

ತನ್ನ ಮಿತ್ರನ 'ಬಣ್ಣಬಣ್ಣದ' (colourful) ಜೀವನದ ಬಗ್ಗೆ ಆಂತರಿಕ ಅಸೂಯೆ. ಹೆಂಡತಿಯ ಪ್ರಚೋದನೆಯ ಮೂಲಕ ಗಂಡ ಕೆರಳುವನು. ಆಗ ಆ ಗಂಡನ ಆಂತರಿಕ ಅಸೂಯೆ ಹೊರಹೊಮ್ಮುವದು. ಆಗ ತಾನು ಹೆಂಡತಿಯ ಸಲುವಾಗಿ ತಂದ ಕೈ – ಆಭರಣ ನಿಜವಾಗಿ ಟೈಪಿಸ್ಟ – ತರುಣಿಯೊಬ್ಬಳ ಸಲುವಾಗಿ ಕೊಂಡದ್ದರ ಅರಿವಾಗುವದು... ಆ ತರುಣಿಯ ಬಗ್ಗೆ ಅವನ ಸುಪ್ತಮನಸ್ಸಿನಲ್ಲಿ ವಾಸಮಾಡಿದ ಪ್ರೇಮ – ಇಚ್ಛೆಗಳ ಬಹಿರಂಗ – ಕಲ್ಪನೆ ಆತನಿಗಾಗುವುದು...!

* * *

ನಾನು ಮುಂಬಯಿಗೆ ಹೋಗಬೇಕೆಂದು ಮಾಡಿದ್ದೆ ಎಂಬುದು ಶ್ರೀಕಾಂತನಿಗೆ ಗೊತ್ತಿರಲಿಲ್ಲ. ಆ ಬಗ್ಗೆ ನಾನು ಅವನಿಗೆ ಸಿರ್ಸಿಯಿಂದ ಪತ್ರ ಬರೆಯಬೇಕೆನ್ನುವಷ್ಟರಲ್ಲಿಯೇ ಅವನ ಆ ಸಿಡಿಲಿನಂಥ ಪತ್ರ ಬಂದಿತ್ತು. ಅದುದರಿಂದ ನನ್ನ 'ಇದೋ – ಅದೋ' ಪ್ರಶ್ನೆಯ ಬಗ್ಗೆ ಅವನಿಗೆ ಏನೂ ಗೊತ್ತಿರಲಿಲ್ಲ. ನಾನು ಧಾರವಾಡ ಕಾಲೇಜಿನಲ್ಲಿಯೇ ಎಮ್.ಎಸ್.ಸಿಗೆ ಅಡ್ಮಿಶನ್ – ಅರ್ಜಿ ಮಾಡಿದಾಗ ಅವನಿಗೆ ಅದೆಲ್ಲ ಸ್ವಾಭಾವಿಕವೆಂದು ತೋರಿದ್ದಲ್ಲಿ ಆಶ್ಚರ್ಯವೇನಿಲ್ಲ. ನನ್ನ ತಂದೆಯವರಿಗೆ ಮಾತ್ರ ಸುಳ್ಳು ಕಾರಣಕೊಟ್ಟು ಪತ್ರ ಬರೆದೆ : "ಮುಂಬಯಿಯ ಒಳ್ಳೆಯ ಪ್ರೊಫೆಸರರೊಬ್ಬರು ವರ್ಗವಾಗಿ ಇಲ್ಲಿ ಬಂದಿದ್ದಾರೆ. ಆದುದರಿಂದ ನಾನು ಇಲ್ಲಿಯೇ ಎಮ್.ಎಸ್‌ಸಿ. ಮಾಡಬೇಕೆಂದಿರುವೆ.... ಇಲ್ಲಿಯ ಲೆಬೋರೆಟರಿಯನ್ನೂ ಈ ವರ್ಷ ಸಾಕಷ್ಟು ಬೆಳೆಸಿದ್ದಾರೆ.... ಮಿತವ್ಯಯದ ದೃಷ್ಟಿಯಿಂದ ಧಾರವಾಡದಲ್ಲಿಯೇ ಇರುವದು ಒಳ್ಳೆಯದು. ಕಾಲೇಜು ನಾಲ್ಕೈದು ದಿನಗಳಲ್ಲಿ ಸುರುವಾಗಲಿದೆ. ಕೂಡಲೇ ೩೦೦ ರೂ. ದಯವಿಟ್ಟು ಕಳಿಸಬೇಕು." 'ಮಿತವ್ಯಯ' ಶಬ್ದ ಅವರ ಹೃದ್ಗತನಾಗಿರಬೇಕು. ಅವರಿಂದ ಕೂಡಲೇ, "ಅಡ್ಡಿಯಿಲ್ಲ... ಸದ್ಯಕ್ಕೆ ೧೫೦ ರೂ. ಕಳಿಸುತ್ತಿರುವೆ" ಎಂಬ ಉತ್ತರ ಬಂತು.

ಶ್ರೀಕಾಂತ ಅವನ ತಾಯಿ ಹಾಗೂ ನಾನು ಕೂಡಲೆ ವಾನಲೆಸ್‌ವಾಡಿಗೆ ಹೋಗುವದು ನಿಶ್ಚಿತವಾಯಿತು. ಅವರ ಮನೆಯಲ್ಲಿ ಕಾಮಿನಿಯ ಜೊತೆಗೆ ಇರಲು ಹುಬ್ಬಳ್ಳಿಯಲ್ಲಿದ್ದ ಅವರ ದೂರದ ಸಂಬಂಧಿಕಳೊಬ್ಬಳು ೪೦–೪೫ ವರ್ಷದ ವಿಧವೆ – ಬಂದಳು.

ಶ್ರೀಕಾಂತನ ತಾಯಿ : "ಗೌರೀಶ, ನೀನು ದೇವರು ಕಳಿಸಿದಂತೆ ನಮ್ಮಲ್ಲಿ ಬಂದಿರುವೆಯಾ... ಶ್ರೀಕಾಂತನಿಗೆ, ನಮಗೆ ಅಷ್ಟೇ ಒಂದು ಆಸರ... ವಾನಲೆಸ್ ವಾಡಿಗೆ ಹೋಗಲು ಅವನ ಕಕ್ಕನಿಗೆ ಬರೆಯಬೇಕೋ ಎಂದೆನ್ನುತ್ತಿದ್ದೆ. ಸುಮ್ಮನೆ ಅವನಿಗೆ ತೊಂದರೆ ಕೊಟ್ಟಂತಾಗುತ್ತಿತ್ತು.... ನಿನ್ನ ಉಪಕಾರ.... ಎಂದೇನೋ

ಹೇಳುತ್ತಿದ್ದರು. ಅಷ್ಟರಲ್ಲಿ ನಾನು ನಡುವೆಯೇ ಬಾಯಿ ಹಾಕಿದೆ.

"ಮಾಂಶೀ, ಉಪಕಾರ – ಗಿಪಕಾರ ಏನಿದೆ ಅದರಲ್ಲಿ ? ಒಂದು ರೀತಿಯಿಂದ ನನ್ನ ಕರ್ತವ್ಯ ನಾನು ಮಾಡುತ್ತಿರುವೆ. ಅದರಲ್ಲಿಯೇ ನನಗೆ ಆನಂದವಿದೆ."

ಶ್ರೀಕಾಂತನ ತಾಯಿ ಸರಲಾಬಾಯಿಯವರ ಬಗ್ಗೆ ಇಲ್ಲಿಯ ತನಕ ನಾನು ಏನೂ ಬರೆದಿಲ್ಲವಲ್ಲ... ಅವರ ಮಕ್ಕಳಲ್ಲಿದ್ದ ಒಂದು ಪ್ರಕಾರದ ತೀವ್ರ ಅಸ್ವಸ್ಥತೆ (ಅಸ್ತಿತ್ವವಾದಿಗಳು ಹೇಳುವ ಜೀವನದ ಅಸ್ವಸ್ಥತೆ angst) ಅವರಲ್ಲಿ ಎಳ್ಳಷ್ಟೂ ಇರಲಿಲ್ಲ. ಅವರ ಸ್ವಭಾವ ತೀರ ಶಾಂತ ಜೀವನವನ್ನೇ ದಾಟಿ ನಿಂತಂತೆ. ಅವರ ಗಂಡನ ಮರಣದ ನಂತರ ಬಹುಶಃ ಅವರಲ್ಲಿಯೇ ಜೀವನಾಸಕ್ತಿಯೇ ಕುಂದಿ ಹೋಗಿರಬೇಕು. ಅವರ ಗಂಡನನ್ನು ಒಯ್ದ ಟೀ.ಬಿ. ಯೇ ಮಗ ಶ್ರೀಕಾಂತನ ಬೆನ್ನು ಬಿತ್ತಲ್ಲ ಎಂದು ಅವರ ಹೃದಯಕ್ಕೆ ಪೆಟ್ಟು ಬಿದ್ದಿರಬೇಕು. ಆದರೆ ಹೊರಗೆ ಮಾತ್ರ ಮೌನ, ಶಾಂತ. ಆದದ್ದು ಆಗುತ್ತದೆ, ಬಂದದ್ದನ್ನು ಎದುರಿಸಲೇಬೇಕು ಎಂಬ ಒಂದು ಬಗೆಯ ಅದೃಷ್ಟವಾದ ಅವರಲ್ಲಿ. ಅವರ ತಾಳ್ಮೆ, ಸಹನಶಕ್ತಿ ಅದ್ಭುತವಾದುವು...

... (ಬಹುಶಃ ಇಂಥ ಮನೋವೃತ್ತಿಯಲ್ಲಿಯೇ ಮುಕ್ತಿಯ ಮೂಲವಿದೆ! ಆದರೆ ತಾರುಣ್ಯದ ಕುದಿಯುವ ರಕ್ತದಲ್ಲಿ ಇಂಥ ಮನೋವೃತ್ತಿ ಎಂದಾದರೂ ಬೇರು ಬಿಟ್ಟೀತೇ ? ಇಂದ್ರಿಯಗಳ ಹಾಗೂ ಜೀವನ ಪ್ರವೃತ್ತಿಗಳ ಸಮಾಧಾನವಾದ ನಂತರ, ರಕ್ತದ ಕುದಿ ಇಳಿದನಂತರ ಇಂಥ ಮನೋವೃತ್ತಿಗೆ ಕೊಂಚ ಆಸ್ಪದ ದೊರಕೀತು !...)

:... ಸರಲಾಮಾಂಶಿಯವರ ಶಾಂತ – ಮೌನ ವೃತ್ತಿಯಲ್ಲಿ ಕಂಡಬರುವ ಮರಣದ ಛಾಯೆಯನ್ನು ನೋಡಿ ನನ್ನ ಹೃದಯದಲ್ಲಿ, ಹೊಟ್ಟೆಯಲ್ಲಿ ಅಸ್ಪಷ್ಟ ಕಸಿವಿಸಿ ಒಮ್ಮೊಮ್ಮೆ : ಈ ಹೆಂಗಸು ಬರೇ ನೋಡುತ್ತಾಳೆ – ಸುಮ್ಮನೆ ನೋಡುತ್ತಾಳೆ – ಕಲ್ಲಿನ ಕಣ್ಣಿಂದ ! ಅವಳ ಕಲ್ಲು – ಕಣ್ಣಿನಲ್ಲಿ ಒಂದು ಪ್ರಶ್ನೆ, ಒಂದು ಭಾವ ಯಾವಾಗಲೂ ಕೊರೆದು ನಿಂತಿದೆ : "ಯಾಕಪ್ಪಾ ಈ ಜೀವನ ? ಏನಿದೆ ಅದರಲ್ಲಿ ಮನುಷ್ಯ ಯಾಕಾರೆ ಒದ್ದಾಡಬೇಕು, ತಳಮಳಿಸಬೇಕು ? ಸಾಯುವತನಕ ಇದ್ದರಾಯಿತು, ಅಂತೂ ಇಂತೂ ! ಅದು ಬೇಕು, ಇದು ಬೇಕು ಎಂಬ ಆಶೆ ಮಾಡಿ ಉಪಯೋಗವಿಲ್ಲ, ಧಡಪಡಿಸಿ ಉಪಯೋಗವಿಲ್ಲ, ಆದದ್ದು ಆಗುತ್ತದೆ, ಬಂದದ್ದು ಬರುತ್ತದೆ... ದೈವ !"

* * *

"ದೈವ ! ದೈವವಾದ ಭಾರತೀಯರ ಮಿದುಳಿಗೆ ಹಿಡಿದ ಗ್ರಹಣ.... ನಿಸರ್ಗದ ಶಕ್ತಿ – ಪ್ರವೃತ್ತಿಗಳ ಅಜ್ಞಾನ ಹಾಗೂ ಮಾನವನಲ್ಲಿ ತನ್ನ ಸುಖ-ದುಃಖಗಳ ಬಗ್ಗೆ ಇದ್ದ ವಿಪರೀತ ಆಸಕ್ತಿ, ಇವೇ ಈ ದೈವದ ತಂದೆ-ತಾಯಿಗಳಲ್ಲವೇ? ಪ್ರತಿಯೊಂದು ಘಟನೆಗೆ ಕಾರಣಗಳಿದ್ದೇ ಇವೆ. ವೈಜ್ಞಾನಿಕ ಹಾಗೂ ಬುದ್ಧಿವಾದದ ದೃಷ್ಟಿಯಿಂದ ನೋಡಿದರೆ ಅದು ಸಣ್ಣ ಘಟನೆಗೆ ಸಾವಿರಾರು ಕಾರಣಗಳಿರುತ್ತವೆ. ಆದರೆ ಸಾಮಾನ್ಯ ಮನುಷ್ಯನಿಗೆ ಅವನ್ನೆಲ್ಲ ಸೂಕ್ಷ್ಮವಾಗಿ ವಿಂಗಡಿಸಿ ನೋಡುವ ಸಾಮರ್ಥ್ಯವಿರುವದಿಲ್ಲ, ತಾಳ್ಮೆಯಿರುವದಿಲ್ಲ ಆದುದರಿಂದ ಕಣ್ಣಿಗೆಕಾಣದ ಕಾರಣಗಳಿಗೆ ದೈವ ಎನ್ನುತ್ತಾನೆ..." ಎಂದು ಶ್ರೀಕಾಂತ ಅಂದಿದ್ದ, ದೈವದ ಬಗ್ಗೆ ಒಮ್ಮೆ ಮಾತನಾಡುವಾಗ.

"ದೈವವಾದ ಸಾಮಾನ್ಯ ಮನುಷ್ಯನಿಗೆ ಒಂದು ಬಗೆಯ ಸಮಾಧಾನಕೊಡುವದಿಲ್ಲವೇ?" ನಾನು ಕೇಳಿದ್ದೆ.

"ಹೌದು. ಆದರೆ ಇಂಥ ಕಣ್ಣಿಲ್ಲದ ಸಮಾಧಾನ ಮಾನವನಿಗೆ ಉಚಿತವಾದುದಲ್ಲ... ಉದಾಹರಣೆಗಾಗಿ, ಒಬ್ಬ ಮನುಷ್ಯ ಮೋಟಾರಿನ ಕೆಳಗೆ ಸಿಕ್ಕು ಸತ್ತನೆಂದು ತಿಳಿ. ಅದು ಅವನ ದೈವ ಎಂದೊಡನೆ ಏನು ಹೇಳಿದಂತಾಯಿತು? ಆ ಮನುಷ್ಯನ ಮೃತ್ಯುವಿನ ಸತ್ಯತೆಯೇನು ಇಲ್ಲದಂತಾಗುವದೇ?... ಎಲ್ಲದಕ್ಕೂ ದೈವ ಎಂದು ಹೇಳಿ ಜನರು ಸತ್ಯದ ಬಗ್ಗೆ, ವಾಸ್ತವ ಜೀವನದ ಬಗ್ಗೆ ಒಂದು ಉದಾಸೀನತೆ, ಅಲ್ಲ, ಉಪೇಕ್ಷೆ ಪ್ರದರ್ಶಿಸುತ್ತಾರೆಂದು ನನ್ನ ನಂಬಿಗೆ."

"ಅಲ್ಲ, ನಮ್ಮ ಭಾರತೀಯ ತತ್ವಜ್ಞಾನದಲ್ಲಿಯೇ ಕರ್ಮ ಹಾಗೂ ದೇವ ಈ ವಿಚಾರಗಳಿಗೆ ಮಹತ್ವದ ಸ್ಥಾನವಿದೆಯಲ್ಲವೇ? ಆ ತತ್ವಜ್ಞಾನಿಗಳೆಲ್ಲ ಮೂರ್ಖರೇ?" ನಾನು ಧೈರ್ಯದಿಂದ ಪ್ರಶ್ನಿಸಿದ್ದೆ.

"ಹೌದು, ಒಂದು ದೃಷ್ಟಿಯಿಂದ ಮೂರ್ಖರೇ ಎನ್ನಬೇಕು," ಶ್ರೀಕಾಂತ ಸ್ವಲ್ಪ ಬಿಸಿಯಾಗಿಯೇ ಹೇಳಿದ್ದ, "ಆತ್ಮ ಅಮರವಾಗಿದೆ. ಪುನರ್ಜನ್ಮ, ಇರಲೇಬೇಕು – ಎಂಬುದು ಅವರ ವಿಧಾನ.... ಈ ವಿಧಾನ ಹೇಗೆ ಹುಟ್ಟಿತು ಗೊತ್ತೆ? ಮರಣದ ನಂತರ ಶೂನ್ಯತೆಯಿದೆ ಎಂಬ ಕಟು ಸತ್ಯ ಜೀವನಾಸಕ್ತನಾದ ಮನುಷ್ಯನ ಗಂಟಲಲ್ಲಿಳಿಯುವದು ಕಠಿಣ! ಒಮ್ಮೆ ಪುನರ್ಜನ್ಮದ ಕಲ್ಪನೆಯನ್ನು ಗೃಹಿತ ಹಿಡಿದ ಮೇಲೆ–ಮುಂದಿನ ಪ್ರಶ್ನೆ : ಪುನರ್ಜನ್ಮಕ್ಕೂ ಈ ಜೀವನಕ್ಕೂಏನಾದರೂ ಸಂಬಂಧ ಬೇಡವೇ? ಅಲ್ಲಿ ಬಂತು ಕರ್ಮದ ವಿಚಾರ, ಪಾಪ – ಪುಣ್ಯದ ವಿಚಾರ ! ಈ ಜೀವನದಲ್ಲಿ ನೀನು ಮಾಡಿದ ಕರ್ಮಕ್ಕೆ ತಕ್ಕಂತೆ ನಿನಗೆ ಪುನರ್ಜನ್ಮ ಲಭಿಸುವದು! ಕರ್ಮದ ಮಾತು ಬೇರೆ, ದೈವದ ಮಾತು ಬೇರೆ.... ಕರ್ಮ–ತತ್ವದಲ್ಲಿ ಮನುಷ್ಯನಿಗೆ

ತನ್ನ ಕಾರ್ಯದಲ್ಲಿ ಸ್ವಲ್ಪಾದರೂ ಸ್ವಾತಂತ್ರ್ಯವಿದೆ... ಆದರೆ ದೈವ – ತತ್ವದಲ್ಲಿ ಎಲ್ಲವೂ ಅಂದರೆ, ಭೂತ –ವರ್ತಮಾನ – ಭವಿಷ್ಯ ಈ ಮೂರೂ ವಿಧಿಲಿಖಿತವಿವೆ. ನಾನು ನಿನ್ನೊಡನೆ ಈಗ ಮಾತನಾಡುವದೂ ವಿಧಿಲಿಖಿತ, ನೀನು ಕೇಳುವದೂ ವಿಧಿಲಿಖಿತ, ನಾನು ಮಾತನಾಡುವಾಗ ಕೆಮ್ಮುವದೂ ವಿಧಿಲಿಖಿತ, ನೀನು ಕೇಳುವಾಗ ಆಗಾಗ್ಗೆ ಕದದೆಡೆಗೆ ನೋಡುವದೂ ವಿಧಿಲಿಖಿತ... ಈ ವಿಧಿಯ ಕಲ್ಪನೆಯ ಮೂಲಕವೇ ಅಲ್ಲವೇ ಹಿಂದೂ ಸ್ಥಾನದಲ್ಲಿ ಜ್ಯೋತಿಷ್ಯ, ಹಸ್ತ ಸಾಮುದ್ರಿಕೆ ಮುಂತಾದ ಸುಳ್ಳು–ಸುಡೋ ಸಾಯನ್ಸಗಳ ವಿಪರೀತ ಪ್ರಾಬಲ್ಯ?... ಎಲ್ಲವೂ ವಿಧಿಲಿಖಿತವಿದ್ದುದರಿಂದ ಭವಿಷ್ಯವನ್ನು ತಿಳಿದುಕೊಳ್ಳುವ ಮಾರ್ಗವಿರಲೇಬೇಕು. ಹಾಂ ; ಆಕಾಶದಲ್ಲಿ ನಿಯಮಿತವಾಗಿ ಅನಂತವಾಗಿ ತಿರುಗುವ ನಕ್ಷತ್ರಗಳಿವೆ – ಆ ನಕ್ಷತ್ರಗಳಿಗೂ ನಮ್ಮ ಜೀವನಕ್ಕೂ ಏನಾದರೂ ಸಂಬಂಧ ಹಚ್ಚಿದರೆ ಭವಿಷ್ಯವನ್ನು ಮುಂಚಿತವಾಗಿ ತಿಳಿದುಕೊಳ್ಳುವ ಮಾರ್ಗ ದೊರೆಯದಿರಲಾರದು... ಹೀಗಿದೆ ಅವರ 'ತತ್ವಜ್ಞಾನ' – ತಿಳಿಯಿತೇ? – ಇಲ್ಲಿ ನೋಡು, ಈಗ ನಾನೂ ಸತ್ತರೂ, ನನ್ನ ಸಾವಿನ ಬಗ್ಗೆ ನನ್ನ ದೈವವನ್ನು ಹಳಿಯಲಾರೆ. ಜಗತ್ತಿನಲ್ಲಿ ಎಲ್ಲ ತರಹದ ರೋಗಗಳ ಜಂತುಗಳಿವೆ – ಟೀ. ಬಿ. ರೋಗದ ಅಣುಜೀವಿಗಳೂ ಇವೆ. ನನ್ನ ರಕ್ತದಲ್ಲಿ ಹೇಗೋ (ಸಂಪೂರ್ಣ ರಿಸರ್ಚ ಮಾಡಿದರೆ ಅದು ಗೊತ್ತಾಗುವುದೇನೂ ಕಠಿಣವಲ್ಲ) ಸೇರಿದವು.... ಈಗ ಅವುಗಳ ವಿರುದ್ಧ ಯುದ್ಧ ಮಾಡಬೇಕು. ಯುದ್ಧವೆಂದ ಮೇಲೆ ಒಂದು ಪಕ್ಷದ ಜಯ, ಮತ್ತೊಂದು ಪಕ್ಷದ ಅಪಜಯ.... ಜಯಾಪಜಯಗಳೂ, ನಮಗೆ ವಿಶ್ಲೇಷಿಸಿ ತೋರಿಸಲಿಕ್ಕಾಗದಿದ್ದರೂ ಸತ್ಯವಾದ ನೂರೆಂಟು ಶಕ್ತಿ–ಪ್ರವೃತ್ತಿಗಳ ತಾಕಲಾಟದಿಂದ ಉದ್ಭವಿಸುವ ಪರಿಣಾಮಗಳು–ಫಲಗಳು!..."

ಬುದ್ಧಿಯ ಪಾತಳಿಯ ಮೇಲೆ ಮರಣ ಒಪ್ಪಿಗೆಯಾದೀತು... ಆದರೆ ಮರಣದ ಸತ್ಯವನ್ನು ಕಣ್ಣಿಂದ ಪ್ರತ್ಯಕ್ಷ ನೋಡಿದಾಗ ಹೃದಯದ ಮೇಲೆ ಆಗುವ ಪ್ರಚಂಡ ಆಘಾತದ ಮಾತೇನು ? ಆ ಆಘಾತದ ಮೂಲಕ ಜೀವನದ ನಿರರ್ಥಕತೆ ಅಬದ್ಧತೆ ಆಕಾಶವನ್ನೆಲ್ಲ ವ್ಯಾಪಿಸಿ, ಜೀವನದ ಸೂರ್ಯನನ್ನೇ ನುಂಗಿದರೆ ಮುಂದೇನು?

...ಆಲ್ಬರ್ಟ ಕಾಮೂನ 'The Outsider' ದೊಳಗಿನ ನಾಯಕನಂತೆ ಜೀವನಕ್ಕೇ ಪರಕೀಯನಾಗಿ ಸಿಕ್ಕತ್ತ ತೇಲುತ್ತ ಹೋಗಬೇಕಾದೀತು...

... ಬರಿಯ ಬುದ್ಧಿಯಿಂದ ಜೀವನಕ್ಕೆ ಅರ್ಥ ಸಿಕ್ಕೀತೆ? ಅಥವಾ ಜೀವನಕ್ಕೆ ಅರ್ಥ ನೀಡುವ ಆತ್ಮದ ಮೂಲಶಕ್ತಿ ಬೇರೆಯೇ ಇದೆಯೇ? ಹಾಗೂ

ಈ ಆತ್ಮಶಕ್ತಿಯ ಮೂಲ ಮತ್ತೆಲ್ಲಿಯೂ ಇರದೆ ಪ್ರಾಣಿ – ಸಹಜವಾದ ಕುರುಡು ಜೀವನಾಸಕ್ತಿಯಲ್ಲಿಯೇ ಇದೆಯೇ?

* * *

ಎಲ್ಲಿಂದ ಎಲ್ಲಿಯೋ ಜಿಗಿಯುತ್ತಿದ್ದೇನೆ. ತತ್ವಜ್ಞಾನದ ಬಾಲ ಹಿಡಿದರೆ ಜಗತ್ತಿನ ತುಂಬ ಜಿಗಿದಾಡಿಸದೆ ಬಿಡುವದಿಲ್ಲ !... ಶ್ರೀಕಾಂತ ತಾತ್ವಿಕ ವಿವೇಚನೆಯ ಬ್ಯಾಟಿನಿಂದ ಜಗತ್ತನ್ನೇ ಚಂಡುಮಾಡಿ ಆಡುತ್ತಿದ್ದ. ಆತನ ಚಟ ನನಗೂ ಸ್ವಲ್ಪ ಅಂಟಿದರೆ ಆಶ್ಚರ್ಯವೇನು?

... ಆದರೂ, ಇದು ನನ್ನ ಮೂಲಭೂತ ಪ್ರಶ್ನೆ : ಮರಣ, ಮರಣಾನಂತರದ ಶೂನ್ಯತೆ ಇವು ಸತ್ಯ.... ಹೀಗಿದ್ದರೂ ಜೀವನಾಸಕ್ತಿಯ ಕಾರಣವೇನು?

ಇರಲಿ....

ಹೌದು, ನಾನು ಮುಖ್ಯವಾಗಿ ಹೇಳುತ್ತಿದ್ದುದು ಸರಲಾಬಾಯಿಯವರ ವಿಷಯ. ಅವರ ತಟಸ್ಥವೃತ್ತಿಗೂ ಕಾಮಿನಿಯ ನಡತೆಗೂ ತೀರ ನಿಕಟವಾದ ಸಂಬಂಧವಿತ್ತೆಂಬುಂದು ಸ್ಪಷ್ಟವಾದ ಮಾತು. ವಿಚಾರದ ತ್ರಿಶಂಕು ಲೋಕದಲ್ಲಿ ವಿಹರಿಸುವ ಅಣ್ಣ, ಕಲ್ಲು–ಕಣ್ಣಿನ ತಾಯಿ, ಹೀಗಿದ್ದಾಗ ಕಾಮಿನಿಯ ಸ್ವಾತಂತ್ರ್ಯಕ್ಕೆ, ಸ್ವೈಸರತೆಗೆ ಅಂಕೆ ಎಲ್ಲಿಂದ? ಅವಳ ಮಂಗಮನ ಬೇಕಾದತ್ತ ಜಿಗಿಯದಿರದು....

... ಏನಾದರೂ ಮಾಡಿ ಕಾಮಿನಿಯನ್ನು, ನನ್ನ ಕಾಮಿನಿಯನ್ನು ಉಳಿಸಬೇಕು, ರಕ್ಷಿಸಬೇಕು ಎಂದು ಆಗ ತೀವ್ರವಾಗಿ ಅನಿಸತೊಡಗಿತು... ಅವಳ ಜೀವನ ಯಾವುದೋ ಅಜ್ಞಾತ ಬಂಡೆಗಲ್ಲಿಗೆ ಅಪ್ಪಳಿಸಿ ಒಡೆಯಲಿರುವದು... ಅದನ್ನು ಉಳಿಸಬೇಕು, ರಕ್ಷಿಸಬೇಕು! ನನ್ನನ್ನು ಸ್ವಲ್ಪವಾದರೂ ಅವಳು ಪ್ರೀತಿಸಿದ ಪಕ್ಷದಲ್ಲಿ – ಹೌದು, ನನ್ನ ಪ್ರೇಮದಲ್ಲಿ ನನ್ನ ಆತ್ಮವನ್ನೆಲ್ಲ ಸುರಿಯುವೆ, ನನ್ನ ಶಕ್ತಿಯನ್ನೆಲ್ಲ ಎರೆಯುವೆ ಎಂಬ ಪ್ರತಿಜ್ಞೆ ಮಾಡಿದೆ....

ಆಗಿನ ಇಷ್ಟು ಉದಾತ್ತವಾದ ಪ್ರತಿಜ್ಞೆಗೆ ಕಾರಣವೇನಿತ್ತು ? ಕಾರಣ ಇಷ್ಟೇ:

ಧಾರವಾಡಕ್ಕೆ ಹೋದ ಏಳೆಂಟು ದಿನಗಳ ನಂತರ ಒಂದು ಸಂಜೆ ಶ್ರೀಕಾಂತನ ಸಲುವಾಗಿ ಔಷಧ ತರಲು ಪೇಟೆಯತ್ತ ನಡೆದಿದ್ದೆ. ಗೋಪಾಲ ಗುರುನಾಥರ ಜೋಡಿ ಹಾದಿಯಲ್ಲಿ ಭೆಟ್ಟಿಯಾಯಿತು. ಅವರು ನನಗೆ ಒಂದು ಸುದ್ದಿ ಹೇಳಿದರು : ಮೈಸೂರು ಟ್ರಿಪ್ಪಿನಲ್ಲಿ ಒಂದು ಅದ್ಭುತ ಘಟನೆ : ಶಿವರಾಮ ಕುಲಕರ್ಣಿ ಹಾಗೂ ಕಾಮಿನಿ ಮೈಸೂರಿನಲ್ಲಿ ಮುಂಜಾನೆಯಿಂದ ರಾತ್ರಿಯವರೆಗೆ ಬೇಪತ್ತೆಯಾಗಿದ್ದರಂತೆ, ಹೇಳದೇ ಕೇಳದೆ ಪರಾರಿಯಾಗಿದ್ದರಂತೆ!

"ನಿಮಗಾರು ಹೇಳಿದರು?"

ಕಾಲೇಜಿಗೆ ಕಾಲೇಜೇ ಈ ಬಗ್ಗೆ ಗುಣು ಗುಟ್ಟುತ್ತಿದೆ... ಅದಿರಲಿ, ಶ್ರೀಕಾಂತ ಹೇಗಿದ್ದಾನೆ?" ಗುರುನಾಥ ನುಡಿದ.

"ಸದ್ಯಕ್ಕೆ ನೆಟ್ಟಗಿದ್ದಾನೆ.... ಎರಡು ಮೂರು ದಿನಗಳಲ್ಲಿ ವಾನಲೆಸ್ ವಾಡಿಗೆ ಹೋಗುವವರಿದ್ದೇವೆ... ಶಿವರಾಮ ಕುಲಕರ್ಣಿ ಪಾಸಾದನೇನು?

"ಅವನೇನು ಪಾಸಾಗಲಿಕ್ಕೆ ಕಾಲೇಜಿನಲ್ಲಿದ್ದಾನೆಯೇ? He is having the time of his life that's all... ಜೀವನದ ಹೂವನ್ನು ಮೂಸಿ, ಮೂಗು ಮೇಲೆಮಾಡಿ ಅಡ್ಡಾಡುವದು ಅವನ ಸದ್ಯದ ಧ್ಯೇಯ I envy him ... ಅವನ ಬಗ್ಗೆ ನಿಜಕ್ಕೂ ಅಸೂಯೆ ನನಗೆ... ಅದೇನೋ ಅಂತಾರಲ್ಲ... ಹಾ... ಅವನ ಥಳಥಳಿಸುವ ಬೂಟಿನಲ್ಲಿ ನನ್ನ ಕಾಲುಗಳಿದ್ದರೆ.... ಎಂದೆನಿಸುವದು." ಗೋಪಾಲ ನಕ್ಕ.

"ನಿನಗೇನು ಸಿಕ್ಕೀತು? ಕಾಮಿನಿಯ ಬೂಟೇ!" ಎಂದು ಗುರುನಾಥ ತನ್ನ ಕೈಯಿಂದ ಗೋಪಾಲನ ಗಲ್ಲದ ಮೇಲೆ ಹೊಡೆಯುವ ನಟನೆಮಾಡಿದ. ಇಬ್ಬರೂ ಜೋರಿನಿಂದ ನಕ್ಕರು....

ಅವರ ನಗೆಚಾಟಿಕೆಯಿಂದ ನನಗೆ ಸಿಟ್ಟು ಬರಲಿಲ್ಲ... ಯಾಕಂದರೆ ಆಗಲೇ ಶಿವರಾಮ – ಕಾಮಿನಿಯರು ಮೈಸೂರಿನಲ್ಲಿ ಇಡಿಯ ದಿನ ಮುಂಜಾನೆಯಿಂದ ಸಂಜೆಯವರೆಗೆ – ಅಂದರೆ ಏಳೆಂಟು ತಾಸು – ಯಾವ ಪಾರ್ಕಿನಲ್ಲಿ, ಯಾವ ಹೋಟಲು –ಕೋಣೆಯಲ್ಲಿ, ಏನು, ಹೇಗೆ, ವೇಳೆ ಕಳೆದಿರಬೇಕು ಎಂದು ಊಹಿಸುವದರಲ್ಲಿ ಮಗ್ನನಾಗಿದ್ದೆ. ನನ್ನ ಕಲ್ಪನೆ ನನ್ನ ತಲೆಯನ್ನು ಸುಡತೊಡಗಿತು. ಕಿವಿಗಳ ಹಿಂದೆ ಕೆಂಡ ಉರಿಯತೊಡಗಿದವು...

"ಔಷಧದ ಅಂಗಡಿಗೆ ಹೋಗಬೇಕಾಗಿದೆ. ಮತ್ತೆ ಭೆಟ್ಟಿಯಾಗೋಣ" ಎಂದು ಹೇಗೆ ಹೇಗೋ ನುಡಿದು, ಅವರಿಂದ ಜಾರಿದೆ.

ಅಯ್ಯೋ... ಇವಳಿಗೆ ಬೇಕಾದದ್ದಾದರೂ ಏನು, ಎಂದು ನನ್ನನ್ನು ನಾನೇ ಪ್ರಶ್ನಿಸಿದೆ.

ಡಾಕ್ಟರರ ಚೀಟಿಯನ್ನು ಓದಿ, ಅಂಗಡಿಯವ ಔಷಧದ ಬಾಟಲಿ ನನ್ನ ಕೈಯಲ್ಲಿತ್ತು. ನಾನು ಬಾಟಲಿಯ ಮೇಲಿನ ಕಾಗದ ಓದುವಾಗ, ಕೆಂಪು ಗೆರೆಯ ಚೌಕಟ್ಟಿನಲ್ಲಿ ಬರೆದ 'Poison' (ವಿಷ) – ಎಂಬ ಶಬ್ದ ನನ್ನ ಕಣ್ಣು ಸೇರಿತು... 'ವಿಷ' – ಅಂದು ಓದಿದ ಆ ಶಬ್ಧ ಯಾಕೋ ಏನೋ ಇನ್ನೂ ನನ್ನ ಹೃದಯದಲ್ಲಿ ಅಚ್ಚೊತ್ತಿ ನಿಂತಿದೆ...

* * *

ನಾನಾಗ ಶ್ರೀಕಾಂತನ ಮನೆಯಲ್ಲಿಯೇ ಇದ್ದೆ. ಇನ್ನೂ ಕಾಲೇಜು ಸುರುವಾಗಿಲ್ಲವಾದ್ದರಿಂದ ಹಾಸ್ಟೆಲಿನಲ್ಲಿ ಕೋಣೆಯನ್ನು ದೊರಕಿಸುವ ಮಾತು

ದೂರವಿತ್ತು. ಹಾಗೂ ಊರಲ್ಲಿ ಎಲ್ಲಿಯಾದರೂ ಕೋಣೆ ತೆಗೆದುಕೊಳ್ಳುವದಂತೂ – ಶ್ರೀಕಾಂತನ ಕಾಯಿಲೆಯ ಕಾರಣದಿಂದ ಅಸಂಬದ್ಧವಾದ ಮಾತು. ಆದುದರಿಂದ ಶ್ರೀಕಾಂತನ ಆಗ್ರಹದ ಮೇರೆಗೆ ಅವನ ಮನೆಯಲ್ಲಿಯೇ ನನ್ನ ವಾಸ್ತವ್ಯ ಆಗ... ಆದರೆ ನಾನು ಅವನ ಕೋಣೆಯಲ್ಲಿಯೇ ಮಲಗಲು ಅವನ ಸಮ್ಮತಿ ಇರಲಿಲ್ಲ. "ಗೌರೀ ಇದು ಅನ್ಯಾಯ, ನಿಜ ಆದರೆ... ಹೊರಗಿನ ಹಾಲಿನಲ್ಲಿಯ ಮಂಚದ ಮೇಲೆ ನಿನ್ನ ವ್ಯವಸ್ಥೆ ಮಾಡದೆ," ಎಂದು ನಾನು ಧಾರವಾಡಕ್ಕೆ ಬಂದ ಮೊದಲ ದಿನವೇ ಶ್ರೀಕಾಂತ ನನಗೆ ಹೇಳಿದ್ದ. "ನಾನು ಸಂಪೂರ್ಣ ನೆಟ್ಟಗಾಗುವ ತನಕ ನೀನು ನನ್ನ ರೂಮಿನಲ್ಲಿ ಸಹ ಬಹಳ ಹೊತ್ತು ಕೂಡ್ರಬೇಡ... ನೀನು ಜೀವಿಸಬೇಕು, ಗೌರೀ – ಈ ಟಿ.ಬಿ.ಯ ಬ್ಯಾಸಿಲಸ್ಸುಗಳೆಂದರೆ ಮಹಾ ದ್ರೋಹಿಗಳು... ಮೊದಲಿನಿಂದಲೇ ನಾವು ಜೋಕೆಯಿಂದಿದ್ದರೆ ನೆಟ್ಟಗೆ ಅಲ್ಲವೇ ..." ಎಂದು ನನ್ನನ್ನು ಆ ದಿನ ರಾತ್ರೆ ತನ್ನ ಕೋಣೆಯಿಂದ ಹೊರಗೆ ದೂಡಿದ್ದ... ಅಂದಿನಿಂದ ಹೊರಗಿನ ಮಂಚಕ್ಕೂ ನನ್ನ ಅಸ್ತವ್ಯಸ್ತ ತಲೆಗೂ ಕಂಗೆಟ್ಟ ದೇಹಕ್ಕೂ ಒಂದು ಬಗೆಯ ನಂಟು ಸುರುವಾಯಿತು.

* * *

ಆಗಿನ ಭಾವೋತ್ಕಟತೆಯ ರೀತಿಯೇ ಬೇರೆ. ಅದಕ್ಕೆ ಕಣ್ಣೇ ಇರಲಿಲ್ಲ ! ಎಲ್ಲಿಯಾದರೂ ಅಡ್ಡಗಲ್ಲು ಬಂದರೆ ತೀರಿತು, ಅದಕ್ಕೆ ಹಾದಿಯೇ ಗೊತ್ತಾಗುತ್ತಿರಲಿಲ್ಲ, ನೀರಿನಂತೆ ಸಿಕ್ಕತ್ತ ಓಡುತ್ತಿತ್ತು.... ಕಂದಕ ಬಂದರೆ ಕಡಕೊಂಡು ಬಿತ್ತೆಂದು ತಿಳಿಯಬೇಕು. – ಜಲಪಾತದಂತೆ !.... ಮತ್ತೊಂದು ಮಾತು ; ಭಾವನೋತ್ಕಟತೆಯನ್ನು ಪ್ರತ್ಯಕ್ಷವಾಗಿ ಎದುರಿಸುವ ಶಕ್ತಿ ಧೈರ್ಯ ಆಗ ಇದ್ದಿಲ್ಲವೆಂದೇ ಹೇಳಬೇಕು –

... ಆದುದರಿಂದ ಕಾಮಿನಿಗೆ ಆ ದಿನ ರಾತ್ರೆ ಕುಳಿತು, ಪತ್ರ ಬರೆದೆ : ರಾತ್ರೆಯ ಏಕಾಂತದಲ್ಲಿ ಹೊರಹೊಮ್ಮಿದ ಕುದಿಯುವ ಆ ಭಾವನೆಗಳ ನೆನಪು ಸಂಪೂರ್ಣವಿಲ್ಲ. ನನಗೆ... ಪತ್ರ ಬರೆಯುವ ಮುಖ್ಯ ಉದ್ದೇಶ : ಸಾಕು... ಹೀಗೆ ಒಳಗೊಳಗೇ ಸಣ್ಣಾಗುವದು ಸಾಕು... ನನ್ನ ಸಹನಶಕ್ತಿ ತೀರುತ್ತ ಬಂದಿದೆ... ನನ್ನ ಮತ್ತು ಕಾಮಿನಿಯ ಸಂಬಂಧವನ್ನು ಒಂದು ಗತಿಗೆ ಹಚ್ಚಬೇಕು... ಅದು ಕೊನೆಗೊಂಡರೂ ಅಡ್ಡಿಯಿಲ್ಲ. ನಿಶ್ಚಿತ ಮೂರ್ತ ದುಃಖವನ್ನು ಸಹಿಸಿಯೇನು, ಆದರೆ ಈ ಬಗೆಯ ಅನಿಶ್ಚಿತ ಕೊರಗನ್ನು ಸಹಿಸುವದು ಶಕ್ಯವಿಲ್ಲ... ಕಾಮಿನಿಗೆ ಕೊನೆಯ ಪ್ರಶ್ನೆ ಕೇಳಬೇಕು... ಅವಳ ಕೊನೆಯ... ಕೊನೆಯ ಉತ್ತರವನ್ನು ಬೇಡಬೇಕು : ಹೌದು ಅಥವಾ ಇಲ್ಲ...

ಆ ಪತ್ರದಲ್ಲಿ ನನ್ನ ಪ್ರೇಮದ ಉಗಮ, ಅದರ ಬೆಳವಣಿಗೆ, ಅದರ ಸ್ವರೂಪ, ನನ್ನ ಆಗಿನ ವಿಚಿತ್ರ ತಳಮಳ, ನನ್ನ ಭವಿಷ್ಯತ್ತಿನ ಆಶೆ – ಕನಸುಗಳು – ಮುಂತಾದವುಗಳ ಬಗ್ಗೆ ವಿಶದವಾಗಿ ಬರೆದಿದ್ದೆ. ಕೊನೆಗೆ "ಕಾಮಿನೀ, ನಿನ್ನ ಸಲುವಾಗಿ ನನ್ನ ಸರ್ವಸ್ವವನ್ನೇ ಧಾರೆಯರೆಯಲು ಸಿದ್ಧನಿದ್ದೇನೆ... ನನ್ನ ಹೃದಯವನ್ನೇ ಅರ್ಪಿಸಿ ನಿನ್ನ ಅನುಗ್ರಹಕ್ಕಾಗಿ ಕಾದು ಕುಳಿತಿರುವೆ. ಹೇಳು, ಕಾಮಿನಿ – ನನ್ನ ಬಗ್ಗೆ ನಿನಗೆ ಅನಿಸುವದನ್ನು ಸ್ಪಷ್ಟವಾಗಿ ಹೇಳು... ಈ ಅನಿಶ್ಚಿತತೆಯ ಚಿತ್ರ ಹಿಂಸೆ ಅಸಹ್ಯವಾಗಿದೆ... ಒಮ್ಮೆ ನಿಶ್ಚಿತವಾದ ಉತ್ತರವನ್ನು ಕೊಟ್ಟುಬಿಡು : ಹೌದು ಅಥವಾ ಇಲ್ಲ... (ಇಲ್ಲ – ಅಯ್ಯೋ !) ನನಗೆ ನಿರಾಶೆಯಾದೀತೆಂಬ ಭೀತಿ ಬೇಡ, ಸಂಕೋಚ ಬೇಡ... ಒಮ್ಮೆ ಈ ಅನಿಶ್ಚಿತತೆ ಕೊನೆಗೊಳ್ಳಲಿ.... ಮುಂದಿನದು ಮುಂದೆ..."

* * *

ಮಾರನೆಯ ದಿನ ಸಂಜೆ ಕಾಮಿನಿ ಚೆನ್ನಾಗಿ ಸಿಂಗರಿಸಿಕೊಂಡು ಎಲ್ಲಿಗೊ ಹೊರಟಿದ್ದಳು. ಇದೇ ಸುಸಮಯವೆಂದು ನೀನು ಪೋಸ್ಟಿಗೆ ಹೋಗಿ ಬರುವ ನೆವಮಾಡಿ ಅವಳ ಬೆನ್ನು ಹತ್ತಿದೆ.

"ಕಾಮಿನಿ ಎಲ್ಲಿಗೆ ಹೊರಟಿರುವಿ?"

"ಹೊರಗೆ ಹೊರಟಾಗ 'ಎಲ್ಲಿಗೆ' ಎಂದು ಕೇಳಬಾರದು... ಹೊರಟ ಕೆಲಸ ಯಶಸ್ವಿಯಾಗುವದಿಲ್ಲವಂತೆ!" ಕಾಮಿನಿ ನಕ್ಕಳು. ಅವಳ ಉತ್ಸಾಹ ಪೂರ್ಣ ನಗೆ ನನಗೇಕೋ ಸೇರಲಿಲ್ಲ. ಒಂದು ಬಗೆಯ ಅಸೂಯೆ ನನ್ನ ಅಂತಃಕರಣವನ್ನು ಚಿವುಟಿರಬೇಕು.

"ಸಾರಿ... ಹಾಗಾದರೆ ಹೀಗೆ ಮಾಡುವ : ನಾನು ಊಹಿಸುತ್ತೇನೆ. ನೀನು 'ಹೌದು' ಅಥವಾ 'ಅಲ್ಲ' ಹೇಳು – ಆಂ?"

"ನಿನ್ನ ಕುತೂಹಲವೂ ವಿಪರೀತವಪ್ಪಾ... ನಿನ್ನ ಈ ಆಟಕ್ಕಿಂತ ನಾನೇ ಸ್ಪಷ್ಟ ಹೇಳುವದು ಒಳಿತು... ನಾನು ಸಿನೇಮಾಕ್ಕೆ ಹೊರಟಿರುವೆ... ಯಾವ ಸಿನೇಮ? 'ಮಹಲ್'. ಯಾರೊಡನೆ? ಅದನ್ನೂ ಉತ್ತರಿಸಬೇಕೇ – ನನ್ನ ಹೊಸ ಗೆಳತಿ ಲೀಲಾ ಶಿರೋಡಕರಳೊಡನೆ..."

ನನಗೇಕೋ ತಡೆಯಲಾಗಲಿಲ್ಲ. "ನನ್ನನ್ನು ಫೂಲ್ ಮಾಡಬೇಡ, ಕಾಮಿನಿ... ಅದೇನೋ ಅಂತಾರಲ್ಲ ಬೆಕ್ಕು ಕಣ್ಣು ಮುಚ್ಚಿ...."

ನನ್ನ ಮುಖದ ಮೇಲಿನ ಭಾವ ಅವಳಿಗೆ ವಿಚಿತ್ರವೆನಿಸಿರಬೇಕು. ಆದರೂ ನಾನು ಹೇಳಿದ್ದು ತನಗೆ ತಿಳಯಲೇ ಇಲ್ಲವೆಂಬಂತೆ – "ನನ್ನಾಣೆ ನಿಜ...

ಬೇಕಾದರೆ ನಡೆ ನನ್ನೊಡನೆ... ಹಾಂ, ಲೀಲಾಳ ಗುರ್ತು ಮಾಡಿ ಕೊಡುವೆ ನಡೆ... ನಿನ್ನ ಬಗ್ಗೆ ಮೊನ್ನೆ ಕೇಳುತ್ತಿದ್ದಳು..."

ಲೀಲಾ ಶಿರೋಡಕರ – ಅವಳೋರ್ವ ಹೇಳಿಕೇಳಿ ಕುಪ್ರಸಿದ್ಧ ಹುಡುಗಿ. ಕಾಲೇಜಿನ 'ಕ್ಲಿಯೋಪಾತ್ರಾ' !...,

ನಾನು ನನ್ನ ಸಿಟ್ಟಿಗೆ ನಾನೇ ನಾಚಿ ತಲೆ ತಗ್ಗಿಸಿದ್ದೆ. "ಇಲ್ಲ ಕಾಮಿನಿ, ನಿನ್ನ ಮೇಲೆ ನನ್ನ ಸಂಪೂರ್ಣ ವಿಶ್ವಾಸವಿದೆ." ಎಂದೆ.

ಆಮೇಲೆ ತಾನು ನೋಡಲಿರುವ 'ಮಹಲ್' ಪಿಕ್ಚರಿನ ಬಗ್ಗೆ ಒಂದೆರಡು ಮಾತು ಹೇಳತೊಡಗಿದಳು – ಡಾಯರಕ್ಟರ್, ನಟ, ನಟಿ, ಹಾಡು ಮುಂತಾದವುಗಳ ಕುರಿತು...

ನಾನು ಹೇಳಬೇಕೆನ್ನುವ ಮಾತು ನಾಲಿಗೆಯ ತನಕ ಬಂದೊಡನೆ ನರಗಳು ಕಂಪಿತವಾದುವು. ಆದರೂ ಧೈರ್ಯದಿಂದ ಸುರುಮಾಡಿದೆ.

"ಕಾಮಿನಿ, ನಿನಗೆ ಗೊತ್ತೇ ನಿನ್ನ ವಿಷಯದಲ್ಲಿ..." ('ಜನ ಏನೆನ್ನುತ್ತಾರೆ' ಎಂದು ಹೇಳುವವನಿದ್ದೆ....)

"ನನ್ನ ವಿಷಯದಲ್ಲಿ – ಏನು?" ಕಾಮಿನಿ ನನ್ನ ಕಣ್ಣುಗಳಲ್ಲಿ ತನ್ನ ಕಣ್ಣನ್ನಿಟ್ಟು ನಗುಮುಖದಿಂದ ನಿರಾಯಾಸವಾಗಿ ಕೇಳಿದಳು.

ಅವಳ ಆ ಸಾತ್ವಿಕ ಭಾವಕ್ಕೆ ನಾನು ಮುಗ್ಧನಾದೆ. ನನ್ನನ್ನು ನಾನು ಸಾವರಿಸಿಕೊಂಡು ಕಲಾವಂತನ ಸ್ಫೂರ್ತಿಯಿಂದ – ಒಂದು ಸನ್ನಿವೇಶಕ್ಕೆ ನಾಟಕೀಯ ಬದಲು (twist) ರೂಪಿಸುವಂತೆ – ಹೇಳಿದೆ :

"ನಿನಗೆ ಗೊತ್ತೇ ನಿನ್ನ ವಿಷಯದಲ್ಲಿ ನನ್ನ ಭಾವನೆಗಳೇನಿವೆಯೆಂಬುದು?"

"ತಂಗಿಯ ವಿಷಯದಲ್ಲಿಯ ಅಣ್ಣನ ಭಾವನೆಗಳು !" ಎಂದು ಕಾಮಿನಿ ನಕ್ಕಳು.

"ಅಂಥ ಭಾವನೆಗಳಂತೂ ಮೊದಲಿನಿಂದಲೂ ಇದೆ. ಈಗ ಆ ಸಾಮಾನ್ಯ ಭಾವನೆಗಳನ್ನು ಮೀರಿದ ಭಾವನೆಯೊಂದು...

"ಹುಂ, ಗೌರೀಶ, ನನ್ನ ಅಣ್ಣನಿಗೆ ಹೇಳುವೆ ನೋಡು," ಕಾಮಿನಿ ಸೂಚ್ಯನಗೆ ನಕ್ಕಳು.

"ನಿನಗಿಂತ ಮೊದಲು ನಾನೇ ಹೇಳಲಿರುವೆ...."

"ಅವನಿಗೆ ಹೇಳಿದರೆ ನಿನಗೇನು ಸಿಗುವದು ?"

"ಯಾಕೆ – ಹೇಳಬೇಡವೇ ?'

"ಹೇಳಿದರೂ ಅಷ್ಟೇ ಬಿಟ್ಟರೂ ಅಷ್ಟೇ..."

ಅವಳ ಆ ಅರ್ಥ ನನಗೆ ತಿಳಿಯಲಿಲ್ಲ. ಸದ್ಯಕ್ಕೆ ತಿಳಿದುಕೊಳ್ಳುವ ಧೈರ್ಯವೂ ನನ್ನಲ್ಲಿರಲಿಲ್ಲ. ಆ ವಿಷಯ ಅಲ್ಲಿಯೇ ಬಿಟ್ಟು –

"ಕಾಮಿನೀ, ಇದನ್ನು ತೆಗೆದುಕೊ, ನಿನಗೆ ಸಮಯ ಸಿಕ್ಕಾಗ ಇದನ್ನು ಓದು... enjoy yourself as the picture... ಅಚ್ಛಾ, ನಾನು ತಿರುಗಿ ಹೋಗುವೆ" ಎಂದು ಅವಳ ಕೈಯಲ್ಲಿ ಪತ್ರವನ್ನು ತುರುಕಿ ಅವಳ ಮುಖದ ಕಡೆಗೆ ಸಹ ನೋಡದೆ ಲಗುಬಗೆಯಿಂದ ಬೆನ್ನು ತಿರುಗಿಸಿ ಹೊರಳಿ ನಡೆದೆ...

ಪತ್ರವನ್ನು ಅವಳ ಕೈಯಲ್ಲಿಡುತ್ತಲೇ – ಯಾಕೋ ಏನೋ – ನನ್ನ ಶಕ್ತಿ – ಧೈರ್ಯ ಒಮ್ಮೆಲೇ ಉಡುಗಿಹೋದವು. ನಾನು ಏನೋ ಅಪರಾಧ ಮಾಡಿದಂತೆ ಅಲ್ಲಿಂದ ಕಾಲು ಕಿತ್ತೆ !... ಸ್ವಲ್ಪ ದೂರ ಹೋದ ಮೇಲೆ ನನ್ನ ದುರ್ಬಲತೆಯನ್ನು ನಾನೇ ಹಳಿದೆ... ಆನಂತರ ವಿಚಾರಕ್ಕೀಡಾದೆ : 'ಈಗ ಅವಳು ಅದನ್ನು ತೆರೆದು ನೋಡಿರಬೇಕು, ಮೊದಲಿನಿಂದ ಕೊನೆಯವರೆಗೆ ಲಗುಬಗೆಯಿಂದ ದೃಷ್ಟಿ ಹಾಯಿಸಿರಬೇಕು, ಅವಳ ತಲೆಯಲ್ಲಿ ವಿಚಾರಗಳ ತಾಕಲಾಟ ಶುರುವಾಗಿರಬೇಕು... ಆಹಾ ! ಗೌರೀಶ ಹೀಗಿದ್ದಾನೆಂದು ನನಗೆ ಅನಿಸಿರಲಿಲ್ಲ – ಎಂದು ತನ್ನಷ್ಟಕ್ಕೆ ತಾನೇ ನುಡಿದು ಪತ್ರವನ್ನು ವಿವರವಾಗಿ ಸಾವಕಾಶವಾಗಿ ಓದಿದರಾಯಿತೆಂದು ಪರ್ಸಿನಲ್ಲಿ ಈಗ ಅದನ್ನಿಡುತ್ತಿರಬೇಕು... ಮರೆತು ಪರ್ಸಿನಲ್ಲಿಯೇ ಉಳಿದಿರಲಿಕ್ಕಿಲ್ಲವಷ್ಟೇ ?... ಎಂದು ಮುಂತಾದ್ದಾಗಿ ಕಲ್ಪಿಸುತ್ತ ನಾನು ಶ್ರೀಕಾಂತನ ಮನೆ ಮುಟ್ಟಿದೆ.

* * *

ಕಾಮಿನಿ ಸಿನೇಮ ನೋಡಿ ಮನೆಗೆ ಬಂದಾಗ ನಾನು ಊಟ ಮುಗಿಸಿ ಶ್ರೀಕಾಂತನೊಡನೆ ಮಾತನಾಡುತ್ತ ಕುಳಿತಿದ್ದೆ. ಕಾಮಿನಿ ತನ್ನ ಊಟವಾದ ಮೇಲೆ ಶ್ರೀಕಾಂತನ ಕೋಣೆಗೆ ಎಂದಿನಂತೆ ಬರಬಹುದೆಂದು ಬಗೆದಿದ್ದೆ. ಪತ್ರದ ಪರಿಣಾಮವನ್ನು ಅವಳ ಮುಖದಲ್ಲಿ ಓದಬೇಕೆಂಬ ಲವಲವಿಕೆ ನನ್ನಲ್ಲಿ ಮನೆಮಾಡಿತ್ತು... ಆದರೆ ಅವಳು ಊಟವಾದೊಡನೆ ತನ್ನ ಕೋಣೆಗೆ (ಅದು ಅವಳ ತಾಯಿಯ ಕೋಣೆಯೂ ಹೌದು) ಹೋಗಿ ಮಲಗಿಕೊಂಡಳು.

ಶ್ರೀಕಾಂತ ಯೇಟ್ಸನ ಕವಿತೆಗಳನ್ನು ಓದಿ ತೋರಿಸುತ್ತಿದ್ದ. ಆ ಕವಿತೆಗಳಿಗಿಂತ ಅವುಗಳ ಹಿನ್ನೆಲೆಯಾದ ಯೇಟ್ಸನ ಅಸಫಲ ಪ್ರೇಮದ ಕತೆ ನನ್ನ ಮನಸ್ಸನ್ನು ಸೆಳೆದಿತ್ತು, ತುಂಬಿತ್ತು. ಯೇಟ್ಸ್ ಕವಿಯು ಮಾಡಗಾನಳನ್ನು ಅತ್ಯಂತ ಪ್ರೀತಿಸಿದ; ಆದರೆ ಅವಳೇನು ಅವನಿಗೆ ಉಪ್ಪು ಹಾಕಲಿಲ್ಲ. ಆ ಪ್ರೇಮಭಂಗದ ನಿರಾಶೆ – ದುಃಖಗಳಲ್ಲಿಯೇ ಯೇಟ್ಸನ ಉತ್ತಮ ಕಾವ್ಯದ ಉಗಮವಿದೆ... ಯೇಟ್ಸನ 'No

Second Troy' ಕವಿತೆಯನ್ನು ಶ್ರೀಕಾಂತ ಓದಿ, ಆ ಕವಿತೆಯಲ್ಲಿ ಯೇಟ್ಸನು ತೋರಿಸುವ ನಿಜವಾದ ಪ್ರೇಮದ ಔನ್ನತ್ಯ – ಔದಾರ್ಯ ಆ ಕವಿತೆಯ ಆಶಯ – ಸೌಂದರ್ಯ ಇವುಗಳ ಬಗ್ಗೆ ಲೆಕ್ಚರ್ ಕೊಡುತ್ತಿರುವಾಗ, ನನ್ನ ಮನಸ್ಸು ಕಾಮಿನಿಯನ್ನು ಮಾಡಗಾನಳೊಡನೆಯೂ, ನನ್ನನ್ನು ಯೇಟ್ಸನೊಡನೆಯೂ ಹೋಲಿಸುವುದರಲ್ಲಿ ತಲ್ಲೀನವಾಗಿತ್ತು....

ಆಗ ನಾನು ಸಾಹಿತ್ಯ ಸವಿಯುವ ರೀತಿಯೇ ಅದು ! ಕತೆ ಕಾವ್ಯಗಳಲ್ಲಿ ವರ್ಣಿಸಲ್ಪಟ್ಟ ಭಾವನೆಗಳಿಗೂ ನನ್ನ ಭಾವನೆಗಳಿಗೂ ಅಂತರವೇನು ಎಂದು ನೋಡುವುದರಲ್ಲಿಯೇ ತಲ್ಲೀನನಾಗುತ್ತಿದ್ದೆ.... ಸಾಹಿತ್ಯ ಓದುವಾಗ ನನ್ನನ್ನು ನಾನು ಶೋಧಿಸುತ್ತ ಹೋಗುತ್ತಿದ್ದೇನಲ್ಲದೆ ಸಾಹಿತ್ಯವನ್ನು ವಸ್ತುನಿಷ್ಠವಾಗಿ ಓದಿಯೇ ಗೊತ್ತಿರಲಿಲ್ಲ....

ನಾನು ಮಲಗಲು ಹೋಗುವಾಗ ಯೇಟ್ಸನ ಒಂದು ಕವನದೊಳಗಿನ ಮೂರು ಪಂಕ್ತಿಗಳು ಯಾಕೋ ನನ್ನ ಬೆನ್ನು ಹತ್ತಿದವು !

"But I, being poor, have only my dreams ;
I hae spread my dreams under your feet ;
Tread softly because you tread on my dreams"

("ನಾನು ಬಡವ. ನನ್ನ ಕನಸುಗಳ ಹೊರತಾಗಿ ನನ್ನೆಡೆಗೆ ಬೇರೊಂದಿಲ್ಲ. ನನ್ನ ಕನಸುಗಳನ್ನೇ ಹಾಸಿರುವೆ ನಿನ್ನ ಚರಣಗಳ ಕೆಳಗೆ. ಮೆಲ್ಲಗೆ ನಡೆ – ಮೆಲ್ಲಗೆ, ಯಾಕೆಂದರೆ ನನ್ನ ಕನಸುಗಳ ತುಳಿಯುತ್ತ ನಡೆದಿರುವಿ ನೀನು.")

* * *

ನಾನು ಮಲಗಲೆಂದು ಹೊರಮಂಚದ ಮೇಲೆ ಕುಳಿತಾಗ ತಲೆದಿಂಬಿನ ಕೆಳಗೆ ಸರಿಸಿಟ್ಟ ಒಂದು ಕಾಗದ ಕಣ್ಣಿಗೆ ಬಿತ್ತು. ಆ ಕಾಗದವನ್ನು ಕೈಯಲ್ಲಿ ತೆಗೆದುಕೊಂಡು ಅದರ ಮಡಿಕೆ ಬಿಚ್ಚುವಾಗ ನನ್ನ ಹೃದಯ ಪಂಜಾಬ ಮೇಲಿನಂತೆ ಓಡುತ್ತಿತ್ತು. ನನ್ನ ಭವಿಷ್ಯದ ಕೀಲಿಕೈಯೇ ಆ ಕಾಗದದಲ್ಲಿದೆ ಎಂಬ ಭಯಂಕರ ಭೀತಿ ಇಲೆಕ್ಟ್ರಿಕ್ ಶಾಕಿನಂತೆ ನನ್ನ ನರಗಳನ್ನ ದುರಿಸಿತು. ಆದರೆ ಏನಿತ್ತು ಅದರಲ್ಲಿ:

"ಗೌರೀಶ, ನಾಳೆ ಮಧ್ಯಾಹ್ನ ಸುಮಾರು ಎರಡು ಗಂಟೆಗೆ ಸ್ಟೇಶನ್ನಿನ ಹತ್ತಿರ ಭೆಟ್ಟಿಯಾಗು – ಕಾಮಿನಿ." – ಎಂದಿಷ್ಟೇ !.... ಆದರೆ ನನ್ನ ರಕ್ತದಲ್ಲಿ ಮಿಂಚಿನ ಹೊಳೆ ತುಳುಕಾಡಿತು... ಕಾಮಿನಿಯ ಜೊತೆಗೆ ಮೊದಲ ಪ್ರೇಮಸಂಚಾರ!... ಏನಾಗಲಿರುವದೋ? ಅವಳು ಏನು ಹೇಳಲಿರುವಳೋ? ನಾನು ಏನೇನು ಹಲುಬಲಿರುವೆನೋ? ನಾವು ಏನೇನು ಮಾಡಲಿರುವೆವೋ?...

ಇದೇನು ಗುಪ್ತ ಭೆಟ್ಟಿಯೋ, ಚಾರುದತ್ತ ವಸಂತಸೇನೆಯರ ಸಮಾಗಮದಂತೆ? – 'ಮಧ್ಯಾಹ್ನ' : ಶ್ರೀಕಾಂತ ವಿಶ್ರಮಿಸುವ ಸಮಯ, ಅವರ ತಾಯಿ ಅಡ್ಡಾಗುವ ಕಾಲ. 'ಸ್ಟೇಶನ್ನಿನ ಹತ್ತಿರ'... ಸ್ಟೇಶನ್ನು ದಾಟಿ ಆ ಬದಿಗೆ ಹೋದರೆ ಅಲ್ಲಿ ಬೇಕಾದಷ್ಟು ಏಕಾಂತ ತಾಣಗಳು – ಸ್ವಲ್ಪ ವಿಚಾರ ಮಾಡಿದ ಮೇಲೆ ಯಾಕೋ ಅವಳ ಗುಪ್ತಭೆಟ್ಟಿಯ ಯೋಜನೆ ಮನ ಹಿಡಿಸಲಿಲ್ಲ. – ನನಗೆ ಬೇಡ ಇಂಥ ರಹಸ್ಯ, ಇಂಥ ಸಂಚು – ಆಗುವದೆಲ್ಲ ಸರಳವಾಗಿ, ಬಹಿರಂಗವಾಗಿ ಆಗಲಿ – ಹುಂ ಶ್ರೀಕಾಂತನಿಗೆ ಈಗ ಹೇಳಲೇಬೇಕು. ಅವನಿಂದ ಗೌಪ್ಯವಾಗಿಟ್ಟು ಪ್ರಯೋಜನವಿಲ್ಲ ಅವನೇನು ಹಳೇ ಸಂಪ್ರದಾಯದ ಮುದುಕನೇ ನಮ್ಮ ಪ್ರೀತಿಗೆ ಅಡ್ಡಬರಲು?... ನಿಜವಾಗಿ ನೋಡಿದರೆ ಅವನ ಸಹಾನುಭೂತಿ, ಉತ್ತೇಜನಗಳ ಮೂಲಕ, ನಮ್ಮ ಪ್ರೀತಿಗೆ ಮಹಾಪೂರವೇ ಬರಬಹುದು... ಎಂದೆಲ್ಲ ವಿಚಾರಮಾಡುತ್ತ ನಾನು ಮಂಚದ ಮೇಲೆ, ಯಾವುದೋ ಪುಸ್ತಕದ ಅ – ದೃಷ್ಯ ಪುಟದ ಮೇಲೆ ಕಣ್ಣಾಡಿಸುತ್ತ ಕುಳಿತೆ...

ಆ ದಿನ ರಾತ್ರೆ ನಿದ್ದೆಯ ತುಂಬೆಲ್ಲ ಹರಕು – ಮುರುಕು ಕನಸುಗಳೇ.... ನಡು ರಾತ್ರೆ ಒಮ್ಮೆಲೆ ಎಚ್ಚರವಾಯಿತು : ಕದದ ಸಪ್ಪಳವನ್ನು ಗಾಳಿದಂತಾಯಿತು ಅಸ್ಪಷ್ಟ ಕುತೂಹಲದಿಂದ ನಾನು ಕಣ್ದೆರೆದೆ ಯಾರೋ ಕತ್ತಲೆಯಲ್ಲಿ ನನ್ನೆಡೆಗೆ ಬರುತ್ತಿರುವಂತೆ ಭಾಸವಾಯಿತು. ನನ್ನ ಎದೆಯ ಬಡಿತ ಒಂದರೆ ನಿಮಿಷ ನಿಂತಿರಬೇಕು.... ಕಣ್ಣು ಕದಕಿ ನೋಡಿದೆ. ಅಷ್ಟರಲ್ಲಿ ಕುರ್ಚಿಯು ಸರಿದ ಸಪ್ಪಳವಾಯಿತು. ಒಣಗಿದ ಬಾಯಿಂದ ಹೇಗೋ ಶಬ್ದಗಳನ್ನು ಹೊರಚೆಲ್ಲಿದೆ.

"ಯಾರು?... ಶ್ರೀಕಾಂತ?"

"ಶ್ ಶ್"

ಶ್ರೀಕಾಂತನಿದ್ದರೆ ದೀಪ ಹಚ್ಚುತ್ತಿದ್ದ... ಯಾರು, ಕಾಮಿನಿಯೇ? ಕಿಡಕಿಯೊಳಗಿಂದ ಸೂಸಿ ಬರುವ ತೀರ ಮಂದತಮವಾದ ರಾತ್ರೆಯ ಬೆಳಕಿನಲ್ಲಿ ಕಂಡ ಆಕಾರ ಸ್ತ್ರೀಯ ಆಕಾರವಾಗಿತ್ತು... ಇದೇನು ಕನಸೇ?.... ಕಾಮಿನಿಯೆ?..

"ಯಾರು? – ಕಾಮಿನಿ?"

"ಶ್ಶ್ಶ್"

ಆ ವ್ಯಕ್ತಿ ನನ್ನ ಮಂಚದ ದಿಶೆಯಲ್ಲಿಯೇ ಬರತೊಡಗಿತು. ನಾನು ಗಕ್ಕನೆ ಎದ್ದು ಕುಳಿತೆ..... ಹೌದು, ಇವಳು ಕಾಮಿನಿಯೇ ಎಂಬುದು ಸ್ಪಷ್ಟವಾಯಿತು... ಮೈತುಂಬ ಜ್ವಾಲಾಸರ್ಪಗಳು ಹರಿದಾಡತೊಡಗಿದವು.

"ಕಾಮಿನಿ, ನೀನು ?" ನನ್ನ ಪಿಸುನುಡಿಯು ಕೂಡ ಕ್ಷೀಣವಾಗಿತ್ತು,

"ಹುಂ"

"ಏನು..." ನನ್ನ ಬಾಯಿಂದ ಶಬ್ದಗಳಲ್ಲ, ಶಬ್ದಗಳ ಭೂತ ಸಹ ಹೊರ ಬರಲಿಲ್ಲ...

ನನ್ನ ಪತ್ರಕ್ಕೆ ಉತ್ತರ – 'ಹೌದು', 'ಹುಂ' ಎಂಬ ಉತ್ತರ ಮೂರ್ತಿಮಂತ್ರವಾಗಿ ಬಂದಂತೆ ಅನಿಸಿತು ! ಹಾಗೆ ಅನಿಸುವದೇ ತಡ, ನನ್ನ ಅವಳ ನಡುವಿನ ಆಂತರ ಅಸಹ್ಯವಾಯಿತು. ಜಗತ್ತು ಸುಟ್ಟು ಬೂದಿಯಾದರೂ ಅಡ್ಡಿಯಿಲ್ಲ, ಈ ಅಂತರವನ್ನು ಕೂಡಲೇ ಕಡಿಯಬೇಕು, ನಿರ್ನಾಮ ಮಾಡಬೇಕು ಎಂಬ ಪ್ರಬಲ ಇಚ್ಛೆಯುಂಟಾಯಿತು... ನಾನು ಗಕ್ಕನೆ, ಮಾಂತ್ರಿಕ ಧೈರ್ಯದಿಂದ – ಧೈರ್ಯವಲ್ಲವದು, ಒಂದು ಬಗೆಯ ವಿಲಕ್ಷಣ ಪ್ರಬಲ ಭೀತಿಯೇ ಅದು – ಕಂಗೆಟ್ಟ ಭ್ರಾಂತಿಯಿಂದ ಅವಳ ಕೈ ಸೆಳೆದು, ಅವಳನ್ನೂ ನನ್ನ ಆಲಿಂಗನದಲ್ಲಿ ಬಂಧಿಸಿದೆ... ಮೈಯೆಲ್ಲ ತಪ್ತವಾಗಿತ್ತು : ಹೀಗೆಯೇ ಇಲ್ಲಿಯೇ ನಾನು ಉರಿದು ಸುಟ್ಟು ಬೂದಿಯಾಗಬೇಕೆಂದೆನಿಸಿತು !

"ಗೌರೀಶ..."

ಅವಳ ಶಾಂತಸ್ವರದಲ್ಲಿಯ ಒಂದು ಬಗೆಯ ತೀಕ್ಷ್ಣವಾದ ಶೈತ್ಯ ನನ್ನ ಮನಸ್ಸಿಗೆ, ನನಗೆ ಗೊತ್ತಿಲ್ಲದೆಯೇ, ಬರೆ ಕೊಟ್ಟಿತು.

"ಉಂ..."

ಅವಳಿನ್ನೂ ನನ್ನ ಬಾಹುಪಾಶದಲ್ಲಿಯೇ ಇದ್ದುದರಿಂದ ಒಂದು ತರದ ವಿಲಕ್ಷಣ ಧೈರ್ಯ – ಸ್ಫೂರ್ತಿ – ಹುಚ್ಚು ! ಅವಳ ವಕ್ಷಸ್ಥಳದ ಮೇಲೆ ನನ್ನ ನಡುಗುವ ಕೈಯನ್ನಿಟ್ಟು, ಅದೇ ಕೈಯಿಂದ ಕೂಡಲೇ ಅವಳ ಗಲ್ಲ ಹಿಡಿದು ಅವಳ ತುಟಿಗೆ ನನ್ನ ತುಟಿಯನ್ನೊತ್ತಿದೆ...

...ಅದೇನು ಆನಂದವೋ ಅಥವಾ ನಿರ್ವಾಣವೋ ಅಥವಾ ವೇದನೆಯೋ? – ಏನೋ !

ಅದೊಂದು ವಿಶಿಷ್ಟ 'ನ ಭೂತೋ ನ ಭವಿಷ್ಯತಿ' ಸ್ವರೂಪದ ಅನುಭವ ಎಂದಿಷ್ಟೇ ನಾನು ಹೇಳಬಲ್ಲೆ....

ಕಾಮಿನಿ ತನ್ನನ್ನು ತಾನು ಸಾವರಿಸಿಕೊಂಡು, ನನ್ನನ್ನು, ನನ್ನ ದೇಹವನ್ನು ಮೆಲ್ಲಗೆ ದೂರ ಸರಿಸಿದಳು...

"ಗೌರೀಶ, ಇದೇನು ಒಮ್ಮೆಲೆ.... ? ಇಲ್ಲಿ ನೋಡು, ನಾನು ಬಂದುದು ಯಾಕೆ ಗೊತ್ತೇ ? ನಿನಗೆ ನನ್ನ ಚೀಟಿ ಸಿಕ್ಕಿತೇ ?"

ಅವಳ ಆ ಪಿಸುಮಾತಿನಲ್ಲಿಯ ಶಾಂತ ಶೈತ್ಯ ಮರಳಿ ಶಲ್ಯದಂತೆ ಚುಚ್ಚಿತು.

"ಹುಂ."

"ಅದನ್ನು ನಿನ್ನ ತಲೆದಿಂಬಿಗೆ ಇಟ್ಟಿದ್ದೆ. ಬಹುಶಃ ನಿನಗೆ ಅದು ಕಂಡಿರಲಿಕ್ಕಿಲ್ಲ ಹಾಗೂ ನಾಳೆ ಸಹ ನಿನ್ನ ಲಕ್ಷ್ಯದಲ್ಲಿ ಹೋಗಲಿಕ್ಕಿಲ್ಲ ಎಂದು ಅನಿಸಿದ್ದರಿಂದ ನಾನು ನಿನಗೆ ಹೇಳಲು ಬಂದೆ...."

"ಇಷ್ಟು ರಾತ್ರಿ.... ?

"ಹುಂ. ನನಗೆ ಒಮ್ಮೆಲೆ ನೆನಪಾಯಿತು, ಹಾಗೂ ನನಗೆ ಇನ್ನೂ ನಿದ್ದೆ ಹತ್ತಿರಲಿಲ್ಲ... ಹೋಗೇ ಹೇಳಿಬಂದರಾಯಿತು ಎಂದು ಬಂದೆ.... ಅಚ್ಛಾ, ಶಾಂತವಾಗಿ ಮಲಗಿಕೋ – ನಾನು ಹೋಗುವೆ."

"ಕಾಮಿನಿ ....!" ನನ್ನ ಜೀವದ ಸುಪ್ತ ಬಯಕೆಗಳೆಲ್ಲ ಆ ಶಬ್ದ–ಸ್ವರಗಳಲ್ಲಿ ಕೇಂದ್ರೀಕೃತವಾಗಿದ್ದವು !

"No" ಎಂದು ಕಠೋರವಾಗಿ ನುಡಿದಳು. (ಆ ಇಂಗ್ಲೀಷ ಶಬ್ದದಲ್ಲಿ ಚೂರಿಯ ಇಷ್ಟು ಚೂಪಾದ ಮೊನೆ ಇದೆಯೆಂಬುದರ ಅರಿವು ಆದದ್ದು ನನಗೆ ಜನ್ಮದಲ್ಲಿಯೇ ಮೊದಲನೆಯ ಸಲ !)

ಅವಳ ಆ ಕಠೋರ 'ನೋ' ನನ್ನ ಬಯಕೆಯ ಅರ್ಥವನ್ನು ಸಂಕುಚಿತಗೊಳಿಸಿತು... ನನ್ನ ಜೀವದ ಬಯಕೆಗೆ ಬರಿಯ ಕಾಮೇಚ್ಛೆಯ ರೂಪುಬಂತೇ ಎಂದು ನಾನು ನಾಚಿದೆ, ಸಿಡಿಮಿಡಿಗೊಂಡೆ...

ಆಮೇಲೆ ಮೌನ !

ರಾತ್ರೆಯ ನೀರವತೆಯಲ್ಲಿ ನಮ್ಮ ಮೌನ ಕರಗಿ ನಿರ್ನಾಮವಾಯಿತು... ಅರ್ಥಹೀನವಾಯಿತು...

ಕಾಮಿನಿ ಮೆಲ್ಲನೆ ತನ್ನ ಕೋಣೆಗೆ ಹೋದಳು...

ನಾನು ಎಷ್ಟೋ ಹೊತ್ತು ಹಾಗೆಯೇ ಕುಳಿತೆ – ದಿಙ್ಮೂಢನಾಗಿ, ನಿರ್ವಿಣ್ಣನಾಗಿ...

ಆ ದಿನದಿಂದ ನನ್ನ ನಿದ್ರೆ ಒಡೆದ ಕನ್ನಡಿಯಾಯಿತು.... ರಾತ್ರಿಯ ತುಂಬ ನನ್ನ ಚಲ್ಲಾಪಿಲ್ಲಿಯಾದ ಮುಖಗಳೇ ನನ್ನ ಕಣ್ಣಮುಂದೆ ವಿಕಟ ನೃತ್ಯ ಪ್ರಾರಂಭಿಸಿದವು....

ಆ ನೃತ್ಯ ಇನ್ನೂ ಸಂಪೂರ್ಣ ನಿಂತಿಲ್ಲ !

* * *

ಆಗ ಕಾಮೇಚ್ಛೆ ಎಂದರೆ ನಾಚಿ ಚೂರಾಗಿದ್ದೆ. ಕಾಮ ತುಚ್ಛವಾದ ಸಂಗತಿ – ಪಾಯಖಾನೆಗಳ ಗೋಡೆಗಳ ಮೇಲೆ ರೂಪಿಸುವ ಸಂಗತಿ – ಎಂಬ ಕಲ್ಪನೆ ಆಗ....

– ನನ್ನ ದೃಷ್ಟಿಯಲ್ಲಿ ಕಮಲದ ಕಡೆಗಿತ್ತು, ಕಮಲದ ಕೆಳಗಿನ ಕೆಸರಿನ ಕಡೆಗಲ್ಲ !

ಸುಂದರವಾದ ಅನಂತವಾದ ದಿವ್ಯಪ್ರೇಮದ ಆದರ್ಶ ನಕ್ಷತ್ರದಂತೆ ನನ್ನ ಹೃದಯದಲ್ಲಿ ಯಾವಾಗಲೂ ಮಿಣುಕುತ್ತಿತ್ತು. ಕಾಮಿನಿಯನ್ನು ಆ ನಕ್ಷತ್ರದ ಬೆಳಕಿನಲ್ಲಿಯೇ ನೋಡಲು ನಾನು ಸದೈವ ಹಂಬಲಿಸುತ್ತಿದ್ದೆ.... ಹಗಲಿನ ಹಳೆ ಬೆಳಕು ನನಗೆ ಸಹಿಸದು – ಕಾಮಿನಿಯ ವಾಸ್ತವ ರೂಪು ನನಗೆ ನೋವನ್ನುಂಟುಮಾಡುತ್ತಿತ್ತು... ಆದರೂ .....

* * *

ನಿನ್ನೆ ಸಂಜೆ ಡಾಲಿ ಬಂದಳು.

ಅವಳ ಮೇಕಪ್ಪು, ಅವಳ ಹೊಸ ಸ್ಕರ್ಟ–ಬ್ಲಾವುಜುಗಳು ಮನೋಹರವಾಗಿದ್ದವು. ಅವಳ ತೆಳ್ಳಗಿನ ದೇಹ ಒಮ್ಮೆಲೆ ತುಂಬಿಕೊಂಡಂತೆ ಎನಿಸಿತು. ಅವಳ ಜ್ಯೂನ್‌ಆ್ಯಲಿಸನ್ – ನಗೆ ನನ್ನ ಮನಸ್ಸನ್ನೂ ದೇಹವನ್ನೂ ಒಮ್ಮೆಲೆ ಚೇತರಿಸಿತು. ಅವಳು ಕೋಣೆಯಲ್ಲಿ ಕಾಲಿಡುವುದೇ ತಡ, ಹಸಿದ ಹುಲಿಯಂತೆ ಮೇಲೆರಗಿದೆ. ಐದು ನಿಮಿಷದ ಸುದೀರ್ಘ ಚುಂಬನದಿಂದ ತೃಪ್ತನಾದೆ, ಮತ್ತನಾದೆ. ಅದೇ ಅಮಲಿನಲ್ಲಿ ಸಣ್ಣ ಹುಡುಗರಂತೆ ಚಿಕ್ಕಪುಟ್ಟ ಮಾತುಗಳನ್ನಾಡುತ್ತ ಕಾಟಿನ ಮೇಲೆ ಒಬ್ಬರಿಗೊಬ್ಬರು ಅಂಟಿಕೊಂಡು ಕುಳಿತುಕೊಂಡೆವು – ಒರಗಿದೆವು.....

"ಗೌರಿ,.... ನನಗೆ ನೀನು ಬೇಕು !" ಅವಳ ಧ್ವನಿಯಲ್ಲಿ ಮಾರ್ದವತೆ ಇತ್ತು, ಎಂದಿಲ್ಲದ ಗಾಂಭೀರ್ಯವಿತ್ತು.

"ಹೌದೇ ? ಯಾಕೆ ?" ನನ್ನ ಮುಖ ಅವಳ ಕೊರಳ ಕೆಳಗೆ ಸೇರಿತ್ತು.

"ನನಗೆ ಗೊತ್ತಿಲ್ಲ... ಹೋಗಬೇಡ ನೀನು ಆಫ್ರಿಕೆಗೆ."

"ಡಾಲಿ!"

"ಆಂ ?"

"ತುಡುಗೀ, ನೀನು ನನ್ನನ್ನು ಪ್ರೀತಿಸಲು ಸುರುಮಾಡಿರುವೆಯಾ ?"

"ಅದೂ ನನಗೆ ಗೊತ್ತಿಲ್ಲ... ಇಲ್ಲ !" ಒಮ್ಮೆಲೆ ತಲೆಯನ್ನಾಡಿಸಿ ಒತ್ತಿ ಹೇಳಿದಳು.

"ಡಾಲಿ, ನಿಜವಾಗಿಯೂ ನೀನು – ವಂಡರ್‌ಫುಲ್ !"

"ಯಾಕೆ ?"

"ನನಗೆ ಗೊತ್ತಿಲ್ಲ !"

ನಾವಿಬ್ಬರೂ ನಕ್ಕೆವು.

ನಗುವಿನ ತೆರೆಯೊಡನೆ ಏರಿಬಂತು ಕಾಮ.

ಇಬ್ಬರಲ್ಲಿಯೂ ನಿಯಂತ್ರಣಶಕ್ತಿ ಉಳಿದಿರಲಿಲ್ಲ – ನಿಗ್ರಹಿಸುವ ಇಚ್ಛೆಯೂ ಇರಲಿಲ್ಲ....

ಕೆಲ ಹೊತ್ತಿನ ನಂತರ ಎದ್ದು ಕುಳಿತಾಗ ನನಗೆ ಎಲ್ಲಿಲ್ಲದ ನಗೆ ಉಕ್ಕಿಬಂತು. ಒಂದು ಬಗೆಯ ದುರ್ಧರ ತುಂಟತನದಿಂದ ಪ್ರೇರಿತನಾದೆ....

"ಡಾಲಿ, come on – ನಡೆ, ನಾವಿಬ್ಬರೂ ಲಗ್ನವಾಗೋಣ..."

"ಉಂ ?"

"ಹುಂ – ಲಗ್ನ ! ಲಗ್ನ ! ಲಗ್ನ !" ಎಂದು ಜೋರಿನಿಂದ ನಕ್ಕೆ.

"ದೇಹ ತೃಪ್ತಿಯಲ್ಲಿ ಎಷ್ಟೊಂದು ಜಾದು ತುಂಬಿದೆ ನೋಡು !... ಎಲ್ಲಿಲ್ಲದ ಔದಾರ್ಯ, ಸಹಾನುಭೂತಿ, ಕಳಕಳಿ ತುಂಬಿರುತ್ತವೆ.... ಬೇಡಪ್ಪಾ ನಿನ್ನೊಡನೆ ಲಗ್ನ...."

"ಯಾಕೆ ?" ನಾನೆಂದೆ.

"ಯಾಕೆಂದರೆ ಲಗ್ನವಾದೊಡನೆ ಎಲ್ಲ ಜಾದು ಖಲಾಸ್ ! ಬರೇ ರುಟೀನ್.... ದೈನಂದಿನ ಚಕ್ರ... ಬೇಸರ ..... ಪಶ್ಚಾತ್ತಾಪ ..... ಬೇಡ.... ಹೋಗು ನೀನು ಆಫ್ರಿಕೆಗೆ... ನೆನಪಿರಲಿ... ಗುರುತಿರಲಿ." ಒಂದು ಬಗೆಯ ವಿಲಕ್ಷಣ ಉದಾಸೀನತೆ ಅವಳ ಧ್ವನಿಯಲ್ಲಿ ಹಣಿಕಿ ಹಾಕಿತು.

ನಾನು ಏನೋ ಹೇಳಬೇಕೆನ್ನುವಷ್ಟರಲ್ಲಿ ಅವಳು ಎದ್ದು "ಗೋರಿ come on, ನಡೆ, ನಾವಿಬ್ಬರೂ ಚಹಾ ಮಾಡೋಣ," ಎಂದು ಅಣಕಿಸಿದಳು. ನಾವು ನಕ್ಕನಂತರ ಅವಳು, "ಹುಂ ನಾನು ಮಾಡುವೆ ಚಹಾ.... ಚಹಾದ ಕೂಡ ಏನಾದರೂ ಇದೆಯೇ ಅಥವಾ ಬರೇ ನಮ್ಮ ಮುತ್ತುಗಳ ಕೇಕೇ ?" ಎಂದು ನಗುತ್ತ ನುಡಿದಳು.

"ಒಂದೆರಡು ದಿನ ನಾನು ಧಾರವಾಡ – ಸಿರ್ಸಿಗಳತ್ತ ಹೋಗಿಬರಬೇಕೆಂದು ಮಾಡಿರುವೆ. ಬರುವೆಯಾ ನನ್ನೊಡನೆ ?"

"ನನಗೆ ಜೋಗ ಫಾಲ್ಸ್ ತೋರಿಸುವಿಯೇನು?"

ಒಂದು ನಿಮಿಷ ಮನಸ್ಸು ಅಸ್ವಸ್ಥವಾಯಿತು... ಜೋಗದ ಅಡಿಯಲ್ಲಿನ ಕಾಮಿನಿಯ ನೆನಪಿನಿಂದ... ಆದರೆ ಕೂಡಲೇ ನಾನು "ಓಹೋ, ಅದೇನು ಮಹಾ..." ಎಂದೆ.

"ನೋಡು, ನಾನು ಬಂದುಗಿಂದೇನು ?"

"ಬಾರಲ್ಲ, ಬರುವಿಯೇನು ಹೇಳು ? ನನಗೇನೂ ಯಾವ ಹೆದರಿಕೆಯೂ

ಇಲ್ಲ... ಜನರು ಬೇಕಾದದ್ದನ್ನಲಿ. ನಾನು ಅಲ್ಲಿ ಇರುವವದಷ್ಟರಲ್ಲಿಯೇ ಇದೆ.... ಹಿಂದುಸ್ತಾನವನ್ನೇ ಬಿಟ್ಟು ಹೊರಟಿರುವೆನಂತೆ. ನನಗೇತರ ಪರಿವೆ ?.... ಹೇಳು, ಬರುವೆಯಾದರೆ ನಡೆ. ಇಂದು ಯಾವ ವಾರ ? ಹಾಂ. ಮಂಗಳವಾರ.... ಹೇಳು ರವಿವಾರ ಹೋಗೋಣವೇ ?"

"ಎಷ್ಟೊಂದು ಸೀರಿಯಸ್ ತೆಗೆದುಕೊಂಡಿಯಪ್ಪಾ ! ಗೋರೀ, ನೀನು ನಿಜಕ್ಕೂ 'ನೈಸ್' ಇರುವಿ ! ನಿನ್ನ ಒಳ್ಳೆಯತನಕ್ಕೆ ಇದೂ ಒಂದು ಮುತ್ತು.... ಆದರೆ, ಬೇಡ – ನಾನು ಬರುವದು ಬೇಡ. ಹಾಗೇ ಚೇಷ್ಟೆಗೆ ಹೇಳಿದೆ... ನೀನು ಆಫ್ರಿಕೆಗೆ ಹೋಗಲಿರುವಿ... ವ್ಮ ತಂದೆ–ತಾಯಿ–ಸಂಬಂಧಿಕರನ್ನು ಭೆಟ್ಟಿಯಾಗಲಿರುವಿ.... ನಾನೇಕೆ ಪೀಡೆ ಸುಮ್ಮನೆ ನಡುವೆ... ಆಮೇಲೆ ಧಾರವಾಡದಲ್ಲಿ ನಿನ್ನ ಪ್ರೇಯಸಿಯನ್ನು ಮುದ್ದಿಸಿ, ಗುಡ್‌ಬಾಯ್ ಹೇಳಿ ಬರುವವನಿದ್ದೀಯೇನು?"

ಡಾಲಿಯ ಆ ಅಸೂಯೆ – ರಹಿತ, ವಿನೋದಶೀಲ, ಬಿಚ್ಚುಮನಸ್ಸಿನ ಪ್ರಶ್ನೆ ಕೇಳಿ ನನಗೂ ನಗೆ ಬಂತು.

"ಹೌದು.... ಬರೇ ಮುದ್ದಿಸಿ ಬರಲೆ, ಅಥವಾ Parting-shot ಎಂದು ಅವಳೊಡನೆ.... ಹಾ–ಹಾ–ಹಾ"

"ಕೆಟ್ಟ ಹುಡುಗ ! – ಲುಚ್ಚ !..... ಎಲ್ಲರೂ ನನ್ನಂತೆ ಕೂಡಲೇ ಹೂಂ ಎನ್ನುವರೇನು?.... ಹುಚ್ಚ !"

* * *

ಡಾಲಿಯಿಂದ ನನ್ನ ವ್ಯಕ್ತಿತ್ವದ ಯಾವದೋ ಒಂದು ಭಾಗ ಸಂಪೂರ್ಣ ತೃಪ್ತವಾಗುವದು. ಆದರೂ ನನ್ನ ಮೂಲಭೂತ ಕೇಂದ್ರವನ್ನು ಅವಳು ಮುಟ್ಟಲಾರಳೆಂದೆನಿಸುವದು... "ನೀನೇ ಬೇಕು – ನೀನೇ ಬೇಕು," ಎಂದು ಅವಳಿಗೆ ನನ್ನ ಆತ್ಮ ಹೇಳಲಾರದು... ಯಾಕೆ ?

...ಕಾಮಿನಿಯು ನನ್ನನ್ನ ತುಳಿದು, ಹರಿದು ಚಿಂದಿ ಮಾಡಿ ಒಗೆದರೂ ಇನ್ನೂ ನಾನು ಅವಳಿಗೆ ಹೇಳಬಲ್ಲೆ : "ನೀನೇ ಬೇಕು, ನೀನೇ ಬೇಕು".... ಯಾಕೆ?

ಬೇಡ ! ಏನೂ ಬೇಡ ! ಏನೂ ಬೇಡ ನನಗೆ !...

ಏನೂ ಬೇಡವೆಂದೇ ಹೋಗಲಿರುವೆನಲ್ಲವೇ ಆಫ್ರಿಕೆಗೆ ?

* * *

ಆ ದಿನ ಎಲ್ಲ ಸಿಗಬಹುದೆಂಬ ಆಶೆಯಿಂದ ಹೋಗಲಿದ್ದೆ – ಕಾಮಿನಿಯ ಕೂಡ !

ಆ ದಿನ ಮಧ್ಯಾಹ್ನ ಊಟವಾದೊಡನೆ ಕಾಮಿನಿ, ಶ್ರೀಕಾಂತ ಹಾಗೂ ನಾನು ಕೆಲ ಹೊತ್ತು ಹರಟೆ ಹೊಡೆದೆವು. ನಮ್ಮ ಹರಟೆಯೆಂದರೆ ಶ್ರೀಕಾಂತನ ಮಾತುಗಳನ್ನು ಹೂಂಗುಟ್ಟುತ್ತ ಕೇಳುವದು. ಆ ದಿನ ಆತ ಅಂದೇ ಓದಿ ಮುಗಿಸಿದ ಹೆಮಿಂಗ್ವೇನ ಯಾವುದೋ ಕಾದಂಬರಿಯ ಬಗ್ಗೆ ಹೇಳುತ್ತಿದ್ದ. ಹೆಮಿಂಗ್ವೇನ ನಾಯಕರು ಮೃತ್ಯು ಹಾಗೂ ಸಂಕಟಗಳ ಕಕ್ಷೆಯಲ್ಲಿಯೇ ಜೀವಿಸುತ್ತಾರೆ. ಜೀವನದ ಉತ್ಕಟತೆಯಲ್ಲಿ ತಮ್ಮ ಅಸ್ತಿತ್ವದ ಅರ್ಥ ಸಾಧಿಸುತ್ತಾರೆ ಎಂದು ವಿವರವಾಗಿ ಹೇಳುತ್ತಿದ್ದ....

.... ಅವನ ಹರಟೆ ಒಳ್ಳೆಯ ರಂಗಿನಲ್ಲಿ ಬಂದಾಗ ಕಾಮಿನಿ ನನ್ನೆಡೆಗೆ ನೋಡಿ ಅರ್ಥಪೂರ್ಣವಾಗಿ ಕಣ್ಣಿನಿಂದ ಸನ್ನೆಮಾಡಿದಳು. (ನನಗೆ ಹೇಗೆ ಹೇಗೋ ಅನಿಸಿತು.) ಕೆಲವು ನಿಮಿಷಗಳ ನಂತರ ಅವಳು, "ರೋಹಿಣಿ ಸೂಟಿ ಮುಗಿಸಿ ಮರಳಿ ಬಂದಿದ್ದಾಳೆಯೇ ಎಂದು ನೋಡಿ ಬರುವೆ" ಎಂದು ಹೊರಗೆ ಹೊರಟಳು. ಅವಳು ಹೋದೊಡನೆ ನನ್ನ ಆತುರತೆ ಹೆಚ್ಚಾಯಿತು... ನನ್ನ ಅಸ್ವಸ್ಥತೆ ನನ್ನ (ಅಪರಾಧಿಯ) ಮುಖದ ಮೇಲೆ ಮೂಡಿರಬೇಕು.

ಶ್ರೀಕಾಂತ ಒಮ್ಮೆಲೆ – "ಗೌರೀ, ಪ್ರೊ. ಜೋಶಿಯವರೆಡೆಗೆ ಹೋಗಿ ಅವರು ಕೊಡುತ್ತೇವೆಂದ ಪುಸ್ತಕ ತರುವಿಯಾ ? ಹಾಗೂ, ಅವರಿಗೆ ಯುರೋಪಿಯನ್ ಸಾಹಿತ್ಯದಲ್ಲಿಯ ಒಳ್ಳೆಯ, ಅಲ್ಪ ಉತ್ಕೃಷ್ಟ ಗ್ರಂಥಗಳ ಲಿಸ್ಟುಮಾಡಿಕೊಡಲು ಹೇಳು... ನಾನು ಸ್ವಲ್ಪ ವಿಶ್ರಮಿಸುವೆ... ನನಗೆ ವ್ಯರ್ಥ ಬಡಿಬಡಿಸಲು ಹೆಚ್ಚು ಅವಕಾಶ ಕೊಡಬೇಡ," ಎಂದು ನನ್ನೆಡೆಗೆ ಸೂಕ್ಷ್ಮವಾಗಿ ನೋಡಿ ನಕ್ಕ.

"ಒಳ್ಳೇದು, ನಾನು ಹೋಗಿ ಬರುವೆ", ಎಂದು ಬೇಗಬೇಗನೆ ಅರಿವೆ ಹಾಕಿ ನೋಡು ಹೊರಬಿದ್ದೆ.

...ಸ್ಟೇಶನ್ನಿನ ದಾರಿ ಹಿಡಿದೆ. ತಲೆಯಲ್ಲಿಯ ಗೊಂದಲದ ಮೂಲಕವೋ ಅಥವಾ ಕಾಮಿನಿಯನ್ನು ಭೆಟ್ಟಿಯಾಗುವ ಆತುರತೆಯಿಂದಲೋ ನನ್ನ ನಡಿಗೆಯಲ್ಲಿ ಎಲ್ಲಿಲ್ಲದ ವೇಗ ಬಂತು... ಶ್ರೀಕಾಂತನಿಗೆ ಏನೋ ಸಂಶಯ ಬಂದಿದೆ. ಆದುದರಿಂದಲೇ ತಾನೇ ನನ್ನ ಬಿಡುಗಡೆ ಮಾಡಿರಬೇಕು. 'ವ್ಯರ್ಥ ಬಡಬಡಿಸಲು ಅವಕಾಶ ಕೊಡಬೇಡ' ಎಂದು ದಾರಿಯಲ್ಲಿ ಒಮ್ಮೆಲೆ, ಹೊಳೆಯಿತು. ಅವನ ಆ ಮಾತಿಗೆ ನಾನು ಪೆದ್ದ ಯಾವ ಬಗೆಯ ಉತ್ತರವನ್ನೇ ಕೊಟ್ಟಿಲ್ಲವಲ್ಲ ಎಂಬುದರ ತೀಕ್ಷ್ಣ ಅರಿವಾಯಿತು, ನನ್ನನ್ನು ನಾನೇ ಹಳಿದುಕೊಂಡೆ....

'ಹುಚ್ಚ, ಪೆದ್ದ, ಇನ್ನೂ ನನ್ನನ್ನು, ನನ್ನ ಭಾವನೆಗಳನ್ನು ನಿಯಂತ್ರಿಸುವ

ಶಕ್ತಿ ಎಂದು ಬರುವದೋ ?..... ಶ್ರೀಕಾಂತನಿಗೆ ಇಷ್ಟರಲ್ಲಿಯೇ ಎಲ್ಲ ಹೇಳಬೇಕಾಗಿತ್ತು .... ನನ್ನ ಪ್ರೇಮದ ವಿಶಯ. ಅವನಿಂದ ಈ ಮಾತು ಬಚ್ಚಿಡುವದು ಮೂರ್ಖತನ, ದ್ರೋಹ.... ಇಂದು ರಾತ್ರೆ ಹೇಳಲೇಬೇಕು, ಹೇಳಿ ನನ್ನ ಹೃದಯ ಹಗುರ ಮಾಡಿಕೊಳ್ಳಬೇಕು... ಅವನ ಕ್ಷಮೆ ಕೋರಬೇಕು... ಅವನಿಗೆ ತಿಳಿಸದೆಯೇ, ಅವನಿಗೆ ಗೊತ್ತಿಲ್ಲದೆಯೇ ತುಡುಗನಂತೆ ನನ್ನ ಹೃದಯ ಕಾಮಿನಿಯತ್ತ ಹರಿದಿದೆ.... ಶ್ರೀಕಾಂತನ ತಿಳುವಳಿಕೆ, ಸಹಾನುಭೂತಿ, ಔದಾರ್ಯ ನಿಜಕ್ಕೂ ಅಗಾಧವಾದುವು. ನಿಜವಾಗಿ ಮೊದಲಿನಿಂದ ಅವನಿಗೆ ಹೇಳುತ್ತ ಬಂದಿದ್ದರೆ ಇಷ್ಟರಲ್ಲಿ ಕಾಮಿನಿ ಸಂಪೂರ್ಣ ನನ್ನವಳಾಗಬಹುದಿತ್ತು – ಅವನ ಸಹಾಯದಿಂದ..... ಯಾರಿಗೆ ಗೊತ್ತು?'

ನಿಜವಾಗಿ ನೋಡಿದರೆ ನಾನು ಶ್ರೀಕಾಂತನಿಗೆ ಹೆದರುತ್ತಿದ್ದೆ : ಅವನಿಗೆ ನನ್ನ ಇಂಥ ಭಾವನೆಗಳು ಸೇರದಿದ್ದರೆ, ತಂಗಿಯ ಬಗ್ಗೆ ಅವನ ಅಪೇಕ್ಷೆಗಳು ಬೇರೆ ಏನಾದರೂ ಇದ್ದರೆ, ಅಥವಾ ಅವನಲ್ಲಿ ಅಸೂಯೆ ಉತ್ಪನ್ನವಾದರೆ – ಎಂದು ಮುಂತಾದ್ದಾಗಿ ಹೆದುರುತ್ತಿದ್ದೆನೆಂದು ಕಾಣುತ್ತದೆ..... ಆ ದಿನ ಮಧ್ಯಾಹ್ನ ಸ್ಟೇಶನ್ನಿಗೆ ಹೋಗುವಾಗಲೇ ನಾನು ದೃಢನಿಶ್ಚಯಮಾಡಿದೆ : 'ಶ್ರೀಕಾಂತನಿಗೆ ಎಲ್ಲ ಹೇಳಬೇಕು. ಅವನ ಮೊರೆಹೊಗಬೇಕು. ಅವನು ಛೀ, ಥೂ ಎಂದರೂ ಅಡ್ಡಿಯಿಲ್ಲ, ಮಿತ್ರದ್ರೋಹಿ ಎಂದು ಮನೆಯ ಹೊರಗೆ ಹಾಕಿದರೂ ಅಡ್ಡಿಯಿಲ್ಲ...... ನನ್ನ ಕರ್ತವ್ಯ ನಾನು ಮಾಡಲೇಬೇಕು.... ನನ್ನ ಹೃದಯ ಅವನ ಮುಂದೆ ಬಿಚ್ಚಿ ಇಡಬೇಕು....'

* * *

ಸ್ಟೇಷನ್ನಿನ ಸುತ್ತಮುತ್ತ ಎಲ್ಲ ಕಡೆಗೆ ಹುಡುಕಿ ಬಂದೆ : ಕಾಮಿನಿಯಿಲ್ಲ ! ತಲ್ಲಣಗೊಂಡಿತು ಮನ, ರೇಗಿತು, ಸಂಶಯಪಟ್ಟಿತು, ವಿಸ್ಮಯಗೊಂಡಿತು ಬೆದರಿತು. ಹದಿನೈದು ನಿಮಿಷ ಹುಚ್ಚನಂತೆ, ಭ್ರಾಂತನಂತೆ ಒಂದು ಗಿಡದ ಕೆಳಗೆ, ಬೇರು ಬಿಡದ ಗಿಡದಂತೆ, ಎಲ್ಲ ಆಶೆ ಬಿಟ್ಟು ನಿಂತೆ. ದೂರದಲ್ಲಿ ಯಾವ ಸೀರೆ ಕಂಡರೂ, ಕಂಡಂತಾದರೂ, ಕಾಮಿನಿ ಬಂದಳು ಎಂದು ಹೃದಯ ನಿಮಿರುತ್ತಿತ್ತು. ನನಗಿಂತ ಮುಂಚೆ ಬರಬೇಕಾದವಳು ಇನ್ನೂ ಹೇಗೆ ಬಂದಿಲ್ಲ, ಅಥವಾ ಬಂದು ತಿರುಗಿ ಹೋದಳೋ, ಅಥವಾ ನನ್ನ ತಾಳ್ಮೆಯ ಪರೀಕ್ಷೆ ನಡೆಸಿದ್ದಾಳೆಯೋ... ಅಥವಾ.... ಒಂದೇ ಎರಡೇ ವಿಚಾರಗಳು ? ತೆವಳುತ್ತ ಸಾಗಿದ ಗಡಿಯಾರದ ಮುಳ್ಳಿಗೆ ಈ ವಿಚಾರಗಳ ಭಾರ ಬೇರೆ ! ಹದಿನೈದು ನಿಮಿಷಗಳು ನಾಲ್ಕಾರು ತಾಸಿನಷ್ಟು ಉದ್ದವಾದವು, ಜಡವಾದವು...

ಕೊನೆಗೊಮ್ಮೆ.... ಅದೊ ದೂರದಲ್ಲಿ.... ಬಂದಳೊಮ್ಮೆ, ಪುಣ್ಯ ಕಟ್ಟಿಕೊಂಡಳು. ಹಾದಿಯಲ್ಲಿ ಎಲ್ಲಿ ನಿಂತಿದ್ದಳೋ.... ಮಲಗಿದ್ದಳೋ ಮಹಾರಾಯತಿ...

ಅವಳ ನಡಿಗೆಯಲ್ಲಿ ಯಾವದೇ ಬಗೆಯ ಗಡಿಬಿಡಿಯಾಗಲಿ ವ್ಯಗ್ರತೆಯಾಗಲಿ ಇರಲಿಲ್ಲ. ತಡವಾಗಿ ಬರುವದು, ಗೌರೀಶನಿಗೆ ಹಾದಿಕಾಯಲು ಹಚ್ಚುವದು ತನ್ನ ಜನ್ಮಸಿದ್ಧ ಹಕ್ಕೇ ಎಂಬಂತೆ ಸಾವಕಾಶವಾಗಿ, ಶಾಂತವಾಗಿ, ಆತ್ಮವಿಶ್ವಾಸದಿಂದ ಅವಳು ಬರುತ್ತಿದ್ದಳು...! ಅವಳ ಮಾಟಾದ ದೇಹ, ಮುಂದೆ ವಕ್ಷಸ್ಥಳದ ಮೇಲೆ ಆಟವಾಡುವ ಜಡೆ, ಜಡೆಯಲ್ಲಿಯ ಹೂವು, ದುಂಡು ಮಖದಲ್ಲಿಯ ಚಂಚಲ ದೃಷ್ಟಿ, ಆಗಾಗ್ಗೆ ಅಲುಗಾಡುವ ಹುಬ್ಬಿನ ಗೆರೆಗಳು.... ಇನ್ನೂ ಆ ಚಿತ್ರ ನನ್ನ ಸ್ಮೃತಿಯಲ್ಲಿ ಕೊರೆದು ನಿಂತಿದೆ. ಅವಳನ್ನು ನೋಡುತ್ತಲೇ ಮನಸ್ಸಿನಲ್ಲಿಯ ಎಲ್ಲ ಅಸಂಬದ್ಧ ವಿಚಾರಗಳು ಎತ್ತೋ ಓಡಿದವು ; ಬರಹೋಗುವ ಜನರು ಟಾಂಗಾಗಳು ಸುತ್ತಲಿನ ಗಿಡಗಳು – ಎಲ್ಲ ದೃಷ್ಟಿಪಥದಿಂದ ಮಾಯವಾದವು... ನನ್ನ ಕಾಮಿನಿ – ಇಡಿಯ ಜನ್ಮದ ದಾರಿಗುಂಟ ಅವಳು ಹೀಗೆ ನನ್ನೆಡೆಗೆ ಬರುತ್ತಲೇ ಇದ್ದರೆ ನಾನು ನನ್ನ ಜನ್ಮದ ತುಂಬ ಅವಳ ದಾರಿ ಕಾಯುತ್ತಲೇ ನಿಲ್ಲುವೆ ಎಂಬ ಭಾವನೆಯಿಂದ ನನ್ನ ಎದೆ ತುಂಬಿ ಬಂತು. ಒಂದು ದೀರ್ಘ ನಿಟ್ಟುಸಿರೂ ನನಗೆ ಗೊತ್ತಿಲ್ಲದೆಯೇ ಹೊರಬಿದ್ದು ಗಾಳಿಯನ್ನು ಕೂಡಿತು..... ನನ್ನ ಮುಖಕ್ಕೆ ನನ್ನ ಅಂದಗೇಡಿ, ಅಗಲ ನಗೆಯನ್ನು ಅಂಟಿಸಿದೆ – ಅವಳನ್ನು ಸ್ವಾಗತಿಸಲು.

ಅವಳು ಸಮೀಪ ಬರುತ್ತಲೇ ಒಂದು ತುಂಬ ನಗೆ ನಕ್ಕು – "ನನಗಿಂತ ಮುಂಚೆಯೇ ಬಂದಿದ್ದಿಯಾ ?" ಎಂದಳು,

"ನನಗಿಂತ ಮುಂಚೆ ಹೊರಟವಳು ನೀನು."

"ದಾದಾ ನಿನ್ನನ್ನು ಇಷ್ಟು ಬೇಗ ಬಿಡುವನೆಂದೆನಿಸಿರಲಿಲ್ಲ" ಎಂದು ಮತ್ತೊಮ್ಮೆ ತುಟಿಯ ಎಡಬದಿಯಿಂದ ಮಾತ್ರ ನಕ್ಕಳು.

"ಅಂದರೆ–?"

"ಅಂದರೆ, ಏನಿಲ್ಲ.... ಯಾವ ಬದಿಗೆ ಹೋಗೋಣ ?"

"ನೀನು ಹೇಳಿದತ್ತ – "

"ವಾಹ್, ಎಲ್ಲ ನಾನೇ ಹೇಳಬೇಕೆ ?"

"ಹೌದು, ಇಲ್ಲಿ ಬರಲು ಹೇಳಿದವಳು ನೀನು. ಮುಂದಿನ ಆಜ್ಞೆಯೂ ನಿನ್ನಿಂದಲೇ ಬರಲಿ..."

"ಮುಖ್ಯ ನಮಗೆ ಮಾತನಾಡಬೇಕಿದೆಯಷ್ಟೆ ?"

"ಹೌದು – ನಾನು ಮನೆಯಲ್ಲಿ ಸಹ ಮಾತನಾಡಬಹುದಿತ್ತು..."

ಮನೆಯಲ್ಲಿ ! ನಿನ್ನಷ್ಟು ಸರಳ – ಸಾಧು – ಮನುಷ್ಯನನ್ನು ನಾನು ಎಲ್ಲಿಯೂ ನೋಡಿಲ್ಲ... ನಡೆ, ರೇಲ್ವೆಯ ಹಳಿಗುಂಟ – ಮುಂಬಯಿಯತ್ತ ಸಾಗುವ." ತನ್ನ ವಿನೋದಕ್ಕೆ ತಾನೇ ನಕ್ಕು, ಪ್ರಶಂಸೆಯ ಅಪೇಕ್ಷೆಯಿಂದ ನನ್ನೆಡೆಗೆ ನೋಡಿದಳು.

ನಾನೂ ಸ್ವಲ್ಪ ಜೋರಿನಿಂದಲೇ ನಕ್ಕೆ – ಅವಳನ್ನು ಮೆಚ್ಚಿಸಲು.

ಸ್ಟೇಷನ್ನಿನ ಬಲಬದಿಯ ದಾರಿಯಿಂದ ರೇಲ್ವೆ ಹಳಿಗಳನ್ನು ಮುಟ್ಟಿ ಅಲ್ಲಿಂದ 'ಮುಂಬಯಿಯತ್ತ' ಸಾಗಿದೆವು. ಅಂದಿನ ಆ ರೇಲ್ವೆ ಹಳಿಗಳಲ್ಲಿ ಅಡಕವಾಗಿದ್ದುದು ಇಂದು ನನಗೆ ಸ್ಪಷ್ಟವಾಗಿದೆ.... ಅಂದು ಮಾತ್ರ ಎರಡು ರೇಲ್ವೆ ಹಳಿಗಳು ಕೊನೆಯವರೆಗೂ ಕೂಡಿಯೇ ಹೋಗುವಂತೆ ನಾವು ಸಾಗಿದ್ದೇವೆ ಎಂದೆನಿಸಿತು....

"ಕಾಮಿನಿ ನಿನ್ನೆ ರಾತ್ರಿ ಕೊನೆಗೆ ನಾನು 'ಕಾಮಿನಿ' ಎಂದಾಗ ನೀನು ತಪ್ಪು ತಿಳಿದುಕೊಂಡೆ."

"ಆಂ"

"ಅದಕ್ಕೇ ನೀನು 'ನೋ' ಎಂದಿ.... ನೀನು ಹೋದ ಮೇಲೆ ನನಗೆ ನಿದ್ದೆಯೇ ಹತ್ತಲಿಲ್ಲ..... ನೀನು ತಪ್ಪು ತಿಳಿದುಕೊಂಡ ಬಗ್ಗೆ ನನಗೆ ಬಹಳ ದುಃಖವಾಯಿತು..."

"ಹುಂ....?"

"ರಾತ್ರಿಯ ನನ್ನ ವರ್ತನೆಯ ಬಗ್ಗೆ ನಿನಗೆ..... ಅಂದರೆ ನೀನು ಮನಸ್ಸಿಗೆ ಹಚ್ಚಿಕೊಂಡಿಲ್ಲ ತಾನೆ ?"

"ಊಂ ?.... ಉಂಹುಂ..."

"ಅವಳ 'ಉಂಹುಂ' ದಿಂದ ನಾನು ಉತ್ತೇಜಿತನಾದೆ : ಅವಳನ್ನು ಬರಸೆಳೆದು ಮರಳಿ ಅಪ್ಪಿಕೊಳ್ಳಬೇಕೆಂದೆನಿಸಿತು. ಕನಿಷ್ಠ ಅವಳ ಕೈ ಹಿಡಿದು ಮೃದುವಾಗಿ ಒತ್ತಬೇಕೆಂದೆನಿಸಿತು.... ಆದರೆ ಇನ್ನೂ ಸ್ಟೇಶನ್ನು ಸಂಪೂರ್ಣ ಮರೆಯಾಗಿರಲಿಲ್ಲ.

ಕಾಮಿನಿ ರೇಲ್ವೆ ಹಳಿಯ ಮೇಲೆ ಜೋಲಿ ಹಿಡಿಯುತ್ತ ನಡೆಯ ತೊಡಗಿದಳು.

"ಕಾಮಿನಿ, ಬಿದ್ದೀಯಾ ಜೋಕೆ !" ಎಂದೆ.

ನಾನು ರೇಲ್ವೆ ಹಳಿಗಳ ಮಧ್ಯದಲ್ಲಿ ಸಾಗಿದೆ... ಅಷ್ಟರಲ್ಲಿ ಅವಳ ತೋಳು ನಾನಿದ್ದ ಬದಿಗೇ ಹೋಯಿತು. ಅವಳ ಈ ನಟನೆ ಉದ್ದೇಶ ಪೂರ್ವಕವಾಗಿತ್ತೆಂದು ತಿಳಿಯಲು ತಡ ಹಿಡಿಯಲಿಲ್ಲ. ಕೂಡಲೇ ಅವಳು ನೆಲಕ್ಕೇ ಅಪ್ಪಳಿಸಿ

ಬೀಳಲಿರುವಳೋ ಏನೋ ಎಂಬಂತೇ – ಅವಳನ್ನು ಎರಡೂ ಕೈಗಳಿಂದ ಸಾವರಿಸಿ ಹಿಡಿದೆ. ಅವಳಿಗೆ ತಿಳಿಯುವಂತೆ ಅವಳ ರಟ್ಟೆಗಳನ್ನು ಮೃದುವಾಗಿ ಹಿಚುಕಿದೆ...

"ಬಿದ್ದು ತಲೆ ಒಡೆದುಕೊಳ್ಳುತ್ತಿದ್ದಿ ನೋಡು."

"ತಲೆ ಒಡೆದಿದ್ದರೆ ನೆಟ್ಟಗಾಗುತ್ತಿತ್ತು."

"ಯಾಕೆ ?"

"ಯಾಕಂದರೆ ನನ್ನ ತಲೆಯೇ ವಿಚಿತ್ರವಿದೆ... ನನ್ನ ದಾದಾ ಹೇಳುವಂತೆ ಅದಕ್ಕೆ ಬ್ಯಾಲನ್ಸೆ ಇಲ್ಲ."

"ಛೇ, ಅಂಥ ಮಾತುಗಳನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬಾರದು...."

"ನಾನೆಲ್ಲಿ ಸೀರಿಯಸ್ ಆಗಿ ತೆಗೆದುಕೊಳ್ಳುವೆ... ಅದೇ ಅವನು ಅನ್ನುವದು: ನಾನೂ ಸೀರಿಯಸ್ ಆಗಿ ತೆಗಿದುಕೊಳ್ಳುವದಿಲ್ಲವೆಂದ...."

"ಅದೂ ಒಳ್ಳೆಯ ಗುಣವೇ !" ನಾನೆಂದೆ.

ಪ್ರೇಮಿಯು ತನ್ನ ಪ್ರೇಯಸಿಯನ್ನು ಮೆಚ್ಚಿಸಲು ಅವಳ ನ್ಯೂನತೆಗಳನ್ನೇ ಗುಣಗಳೆಂದು ಪ್ರಶಂಸಿಸುವದು ಆಶ್ಚರ್ಯಕರವಾದ ಸಂಗತಿ ! ಅದಕ್ಕೂ ಮುಂದೆಹೋಗಿ ಆ ನ್ಯೂನತೆಗಳೇ ಗುಣಗಳೆಂದು ಸಕಾರಣವಾಗಿ ವಿಚಾರಮಾಡುತ್ತಾರೆ – ಕೆಲವರು ಜೀವನವನ್ನು ಅನುಭವಿಸುತ್ತಾರೆ..."

"ಅಂದರೆ ನಾನು ವಿಚಾರಮಾಡುವದಿಲ್ಲ... ತಲೆ ಎಲ್ಲ ಖಾಲಿ ಎಂದು ನಿನ್ನರ್ಥವೇ?"

"ಛೆ – ಹಾಗಲ್ಲ – ಏನಾದರೂ ಒಂದು ಅನುಮಾನ ತೆಗೆಯುವಿ ನೋಡು... ನಿನಗೆ ಈ ವರ್ಷ Logic, ತರ್ಕಶಾಸ್ತ್ರವಿದೆಯಲ್ಲವೇ ಇಂಟರಕ್ಕೆ ? ಯಾರೋ ಹೇಳಿದ್ದಾರೆ ; 'women and logic do not go together' (ಸ್ತ್ರೀಗೂ ತರ್ಕ ಶಾಸ್ತ್ರಕ್ಕೂ ಮೂವತ್ತಾರು) ಎಂದು. ಅದನ್ನು ಖರೇ ಮಾಡಿ ತೋರಿಸಬೇಡ ಮತ್ತೆ !"

ನಾನೂ ನಕ್ಕೆ. ಅವಳೂ ನಕ್ಕಳು.

ಮರಳಿ ಕಾಮಿನಿಯ ಜೋಲಿ ಹೋಯಿತು.... ಇನ್ನೂ ಒಂಟಿ ಹಳಿಯ ಮೇಲೆ ನಡೆಯುವ ಪ್ರಯೋಗ ಸಾಗಿಯೇ ಇತ್ತು.... ಈ ಸಲ ತಾನಾಗಿಯೇ ನನ್ನ ರಟ್ಟೆ ಹಿಡಿದಳು. ನನ್ನ ಮೈಯುಬ್ಬಿತು....

"ಗೌರೀಶ, ನಿನ್ನ ಪತ್ರದಲ್ಲಿ ನನ್ನ ಬಗ್ಗೆ ಏನೇನೆಲ್ಲ ಬರೆದಿದ್ದೀ.... ಅದರಲ್ಲಿ ನಿನಗೆ ಸಂಪೂರ್ಣ ವಿಶ್ವಾಸವಿದೆಯೆ ?"

"ನನಗೆ ಅನಿಸಿದ್ದೆಲ್ಲ ಬರೆದಿರುವೆ."

"ನಾನು ನಿಜಕ್ಕೂ ನೀನು ಹೇಳುವಷ್ಟು ಸುಂದರ – ಆಕರ್ಷಕಳಿದ್ದೇನೆಯೇ?"

"ಕಾಮಿನೀ, ನನಗಂತೂ – ಯಾಕೆ ಉಳಿದವರೂ ಕೂಡ ನಿನಗೆ ಸೌಂದರ್ಯದ ಬಗ್ಗೆ ಹೇಳಿರಬೇಕು...."

"ಹಾಂ – ಅದೆಲ್ಲ ಮುಖಸ್ತುತಿ–ಈಗೆಲ್ಲ ಗೊತ್ತಾಗಿದೆ ತರುಣರ ತಂತ್ರ !"

ಅವಳ ತರುಣರ ವಿಷಯದ ಅನುಭವದ ಬಗ್ಗೆ ಕೇಳಬೇಕೆಂಬ ಕುತೂಹಲ ನನ್ನ ನಾಲಿಗೆಯ ತುದಿಯವರೆಗೆ ಬಂತು.... ಆದರೆ ಸನ್ನಿವೇಶ ಹದಗೆಟ್ಟೀತೆಂಬ ಭಾವನೆಯಿಂದ ನನ್ನನ್ನು ನಾನು ನಿಯಂತ್ರಿಸಿದೆ. ಹಾಗೂ ಅವಳ ಮನ ನೋಯಿಸುವದೆಂದರೆ ಆ ರಸಸಮಯದಲ್ಲಿ ನನ್ನಿಂದ ಎಳ್ಳಷ್ಟೂ ಸಾಧ್ಯವಿರಲಿಲ್ಲ....

"ನನ್ನ zest for life (ಜೀವನೋತ್ಸಾಹ)ದ ಬಗ್ಗೆ ಒಂದು ನಿಬಂಧವನ್ನೇ ಬರೆದಿರುವಿಯಲ್ಲ ಅದರಲ್ಲಿ..."

"ಹೌದು, ಅದು ನಿನ್ನ strong point – ಮುಖ್ಯ ಗುಣ..... ನಿನ್ನಲ್ಲಿಯ ಈ ಉತ್ಸಾಹ ಎಷ್ಟೊಂದು ಸ್ಫೂರ್ತಿದಾಯಕವಿದೆ ಗೊತ್ತೇ ನಿನಗೆ ?"

"ಸ್ಫೂರ್ತಿ ? ವಾಹವಾ... ಏನು ಮಾಡಲು ಸ್ಫೂರ್ತಿ ? ಕವಿತೆ ಬರೆಯಲು? ಕವಿತೆಯನ್ನಾದರೂ ಬರೆ ನೋಡೋಣ...."

"ನಾನು ಆರ್ಟ್ಸ ತೆಗೆದುಕೊಂಡು, ಶ್ರೀಕಾಂತನಂತೆ ಸಾಹಿತ್ಯದ ಅಭ್ಯಾಸ ಮಾಡಿದ್ದರೆ, ನಿನ್ನ ಬಗ್ಗೆ ದಿನಾಲು ಒಂದು ಕವಿತೆ ಬರೆಯುತ್ತಿದ್ದೆ...."

ಕಾಮಿನಿ ನಕ್ಕಳು. ಅವಳ ನಗೆಯ ಸ್ಫೂರ್ತಿಯಿಂದ ನನ್ನ ತುಟಿಗಳು ಅವಳ ತುಟಿಗಳ ಮೇಲೆ ಪ್ರಾಸಪೂರ್ಣ ಕಾವ್ಯ ರಚಿಸಬಹುದಿತ್ತು... ಆದರೆ ಆ ಬಿಸಿಲಿನ ಪ್ರಖರತೆಯ ಮೂಲಕವೋ ಏನೋ ನನಗೆ ಧೈರ್ಯವಾಗಲಿಲ್ಲ...

"ಗೌರೀಶ, ನನಗೆ ಮೊದಲು ಇದನ್ನು ಹೇಳು – ನನ್ನ ಮೇಲೆ ನಿನ್ನ ಪ್ರೇಮ ಇಷ್ಟೇಕೆ?"

"ಪ್ರೇಮ–ಯಾಕೆ?.... ಯಾವ ಉತ್ತರವೂ ಸಮಾಧಾನಕಾರಕವಾಗಲಾರದು...."

"ಹೇಳಾದರೂ ನೋಡೋಣ... ನಾನು ನಿನ್ನ ಪ್ರಿಯ ಮಿತ್ರನ ತಂಗಿಯೆಂದೋ?"

"ಒಂದು ದೃಷ್ಟಿಯಿಂದ ಅದೂ ಒಂದು ಕಾರಣವೆ."

"ಅದೇ ಮುಖ್ಯಕಾರಣ !" ಕಣ್ತುದಿಯಿಂದ ನನ್ನೆಡೆಗೆ ನೋಡಿದಳು.

"–" ನಾನು ವಿಚಾರಮಗ್ನನಾದೆ.

"ನಾನು ಶ್ರೀಕಾಂತನ ತಂಗಿಯಲ್ಲದೇ ಮತ್ಯಾರಾದರೂ ಅಗಿದ್ದರೆ..."

"ರೇ–ರೇ–ರೇ–ಇಂಥ 'ರೆ' ಗಳಿಗೆ ಕೊನೆಯೇ ಇಲ್ಲ... ನಾನು ಹುಟ್ಟದೇ ಇದ್ದಿದ್ದರೆ..."

ರೇಲ್ವೆ ಹಳಿಗಳ ಬಲಬದಿಗೆ ಗಿಡಗಳ ಸಣ್ಣ ಗುಂಪೊಂದು ಅವರ ಕಣ್ಣಿಗೆ ಬಿತ್ತು.

"ಆ ಗಿಡಗಳ ನೆರಳಲ್ಲಿ ಹೋಗಿ ಕೂಡೋಣ ನಡೆ... ಬಿಸಿಲು ಇಳಿಯಲು ಇನ್ನೂ ಎಷ್ಟೋ ಹೊತ್ತು... ಇನ್ನೂ ನಾಲ್ಕು ಹೊಡೆದಿಲ್ಲ..." ಕಾಮಿನಿಯ ಸೂಚನೆ.

ನನಗೂ ಬೇಕಾದದ್ದು ಅದೇ !

ಒಂದು ಗಿಡದ ನೆರಳಿನಲ್ಲಿ ಅಡ್ಡಬಿದ್ದ ಒಂದು ಬೊಡ್ಡೆ ಇತ್ತು. ಕಾಮಿನಿ ಆ ಬೊಡ್ಡೆಯನ್ನು ತನ್ನ ಆಸನವನ್ನಾಗಿ ಮಾಡಿದಳು. ನಾನೂ ಅವಳ ಬದಿಗೆ, ಅದೇ ಬೊಡ್ಡೆಯ ಮೇಲೆ ಕುಳಿತೆ...

"ಇಲ್ಲಿ ಎಷ್ಟು ತಂಪಾಗಿದೆಯಲ್ಲವೇ ?"

"ಹೌದು," ನಾನೆಂದೆ.

"ಮಧ್ಯಾಹ್ನಕ್ಕೆ ಹೀಗೆ ಅಡ್ಡಾಡಲು ಬರುವುದರಲ್ಲಿ ಮಜಾ ಇದೆ ಅಲ್ಲವೆ?"

"ಹೌದು... ಮಧ್ಯಾನ್ನದ ತಿರುಗಾಟದ ರುಚಿಯೇ ಬೇರೆ..."

"ನಿನಗೂ ಸೇರಿತೇ ?"

"ವಾಹ್, .... ಕಾಮಿನಿಯಿದ್ದಲ್ಲಿ ಬಿಸಿಲುಕೂಡ ಬೆಳದಿಂಗಳಾಗುವದು..."

"ವಾಹವಾ, ಕವಿಯೇ !... ಪ್ರೇಮ ಎಂಬ ವಸ್ತು ಎಷ್ಟು ಜನರನ್ನು ಕವಿಗಳನ್ನಾಗಿ ಮಾಡಿದೆಯೋ ! ನಮ್ಮ ಆ ಸಂಸ್ಕೃತ ಪ್ರೊಫೆಸರರು ಹೇಳುವಂತೆ ಪ್ರೇಮದ ವಿಷಯ ವಜಾ ಮಾಡಿದರೆ ಸಾಹಿತ್ಯ ಶೂನ್ಯ...."

"ಜೀವನವೂ ಶೂನ್ಯ !" ನಾನೆಂದೆ.

"ನಮ್ಮ ಸಂಸ್ಕೃತ ಪ್ರೊಫೆಸರ್ ಶರ್ಮಾರ ಬಗ್ಗೆ ಗೊತ್ತಿದೆಯೇ ? ಬಹಳ ಚೆನ್ನಾಗಿ ಕಲಿಸುತ್ತಾರೆ – ಬಹಳ ರೊಮ್ಯಾಂಟಿಕ್ ಇದ್ದಾರೆ !"

"ಹೀಗೇನು ?" ಅನಾಸಕ್ತಿಯಿತ್ತು ನನ್ನ ಪ್ರಶ್ನೆಯಲ್ಲಿ.

"ಹುಂ ! I Like very much ... ನನಗೆ ಅವರು ಬಹಳ ಸೇರುತ್ತಾರೆ.. ಅವರ ಪರ್ಸನ್ಯಾಲಿಟಿ ಕೂಡ ಚೆನ್ನಾಗಿದೆ...."

"ಅವರ ಲಗ್ನವಾಗಿದೆಯೇ ?" ನಾನು ಆಶೆಯಿಂದ ಕೇಳಿದೆ.

"ಆಗಿದೆಯಂತೆ... ಆದರೆ ಅವಳಿಗೂ ಅವರಿಗೂ ಆಗುವದಿಲ್ಲವಂತೆ."

"ಹೀಗೇನು ?" ನಾನು ಒಣ ಕುತೂಹಲದಿಂದ ನುಡಿದೆ, "ನಿಮಗೆ

ಇಂಟರಕ್ಕೆ ಇದ್ದಾರೇನು ಅವರು ಈ ವರ್ಷ ?"

ಹೌದು. ಅವರು ಮೊನ್ನೆ ಹೇಳಿದರು : ಕಾಲಿದಾಸನ 'ಶಾಕುಂತಲ' ತಾವೇ ಕಲಿಸಲಿರುವರೆಂದು..."

"ಮೊನ್ನೆ ! – ಎಲ್ಲಿ ಭೆಟ್ಟಿಯಾಗಿದ್ದರು ? ಸೂಟಿಯಿಂದ ಅಷ್ಟು ಬೇಗ ಬಂದಿದ್ದಾರೆಯೇ ?"

"ಹೌದು – ಏನೋ ಕೆಲಸವಿದೆಯೆಂದು ಬೇಗನೆ ಬಂದಿದ್ದಾರೆ... ಹೆಂಡತಿಯನ್ನು ಬಿಟ್ಟೇ ಬಂದಿದ್ದಾರೆ... ಅವರದೂ ಒಂದು ಮಜ ! ತಮ್ಮ ಮನೆಯ ಬಗ್ಗೆ ತೀರ ಬಿಚ್ಚು ಮನಸ್ಸಿನಿಂದ ಎಲ್ಲ ಹೇಳುತ್ತಾರೆ. ನನ್ನನ್ನು ನೋಡಿದರಂತೂ ಅರ್ಧ ಗಂಟೆಯಾದರೂ ಬಿಡುವದಿಲ್ಲ. ಆ ಸುದ್ಧಿ, ಈ ಸುದ್ಧಿ; ನಗೆ ಚಾಟಿಕೆ, ವಿನೋದ.... ವಿನೋದದ ಕತೆಗಳ ಎನ್‌ಸಾಯ್‌ಕ್ಲೋಪೀಡಿಯಾದಂತಿದ್ದಾರೆ ಅವರು !"

ನನ್ನ ಹೃದಯದಲ್ಲಿ ಅಸೂಯೆಯ ಸರ್ಪ ಹೆಡೆಯೆಬ್ಬಿಸಿತು. ಅದನ್ನು ಕಷ್ಟದಿಂದ ಬುಟ್ಟಿಯಲ್ಲಿ ಹಾಕಿ ಬಾಯಿಮುಚ್ಚಿದೆ....

ಒಮ್ಮೆಲೆ ಹೃದಯದಲ್ಲಿ, ಏನೋ – ಯಾವುದೋ ಒಂದು ಬಗೆಯ ಭಯಂಕರ ಶಕ್ತಿ, ಕೆರಳಿ ನಿಂತಿತು.... ನಮ್ಮ ಸಂಬಂಧದ ಅಂತಿಮ ನಿರ್ಣಯವನ್ನು ಬೇಗನೇ ಹಚ್ಚಬೇಕೆಂಬ ತೀವ್ರ ಇಚ್ಛೆಯಾಯಿತು....

"ಕಾಮಿನೀ..."

"ಉಂ ?"

"ನಾನು ಕೆಳಗೆ ಹುಲ್ಲಿನ ಮೇಲೆ ಕೂಡಲೇನು, ನಿನ್ನ ಕಾಲ ಹತ್ತಿರ ?"

ಅವಳಿಗೆ ನಗೆ ಉಕ್ಕಿ ಬಂತು. "ಕೂಡಲ್ಲ ಬೇಕಾದರೆ," ಎಂದು ಅಪ್ಪಣೆ ಕೊಟ್ಟಳು.

ನಾನು ಅವಳ ಕಾಲ ಬದಿಗೆ, ಅವಳ ತೊಡೆಗಳ ಎಡಕ್ಕೆ ಕಾಲು ಚಾಚಿ ಕುಳಿತೆ.

"ಕಾಮಿನಿ, ನಿನ್ನ ಪಾದಗಳು ಎಷ್ಟು ಬೆಳ್ಳಗಿವೆಯಲ್ಲ !..."

"ನಿಜಕ್ಕೂ ?"

"ಹುಂ. ಹಾಗೂ ಮಾಟಾಗಿ ಚೆಂದವಿವೆ..." ಎಂದು ನಾನು ಅವಳ ಪಾದಗಳ ಮೇಲೆ ಕೈಯ್ಯಾಡಿಸಿದೆ. ಮೇಲೆ ಮುಖವೆತ್ತಿ ಅವಳೆಡೆಗೆ ನೋಡಿದಾಗ ಅವಳ ಕಣ್ಣಿನಲ್ಲಿ ಒಂದು ಬಗೆಯ ಹರ್ಷ ಮಿಣುಕುತ್ತಿತ್ತು. ಆ ಮಿಣಿಕಿನಿಂದ ನಾನು ಉತ್ತೇಜಿತನಾದೆ.

"…..ಅವುಗಳನ್ನು ಮುದ್ದಿಸಲೇ?

"– ಹುಚ್ಚು !…"

ಅವಳ ಧ್ವನಿಯಲ್ಲಿ ಆಹ್ವಾನದ ಛಾಯೆಯಿತ್ತು. ನಾನು ಬಗ್ಗಿ ಅವಳ ಪಾದದ ಸಂದಿಗೆ, ನಂತರ ಪಾದಗಳ ಮೇಲೆ ತುಟಿಯೊತ್ತಿದೆ…

ಕಾಮಿನಿ ನಗುತ್ತಿದ್ದಳು. ಅವಳ ನಗೆಯಲ್ಲಿ ತುಂಟತನವಿತ್ತೋ ಉನ್ಮತ್ತತೆಯಿತ್ತೋ ನನಗೆ ತಿಳಿಯಲಿಲ್ಲ…..

ಎಷ್ಟೋ ಹೊತ್ತು ಅವಳ ಪಾದಗಳ ಮೇಲೆ ನನ್ನ ತಲೆಯನ್ನಿಟ್ಟು ಹಾಗೆಯೇ ಒರಗಿದೆ. ಅವಳ ಸೀರೆಯ ನಿರಿಗೆಗಳು ನನ್ನ ತಲೆಯ ಮೇಲೆ ಮೃದುವಾಗಿ ಏನೋ ಪಿಸುನುಡಿದವು…

"ಗೌರೀಶ !" ಕಾಮಿನಿಯ ಧ್ವನಿಯಲ್ಲಿ ಎಲ್ಲಿಲ್ಲದ ಮಾರ್ದವತೆ ….

ನನ್ನ ಮೈಯ್ಯಲ್ಲಿ ವಿಜಯೋನ್ಮಾದ ಸಂಚರಿಸಿತು. ನನ್ನ ತಲೆಯನ್ನು ಮೇಲಕ್ಕೆತ್ತಿ, ಅವಳ ಬದಿಗೆ ಇನ್ನಷ್ಟು ಸರಿದು ಕುಳಿತು ಅವಳ ತೊಡೆಗಳ ಮೇಲೆ ನನ್ನ ತಲೆಯನ್ನಿಟ್ಟೆ – ಅವಳ ಬೆರಳುಗಳು ನನ್ನ ತಲೆಯಲ್ಲಿ ಸ್ವಲ್ಪ ಹೊತ್ತು ಆಡಿದವು–

….. ಆ ಕ್ಷಣದಲ್ಲಿ ನಾನು ಸತ್ತರೂ ಸುಖವಿತ್ತು… ಆಗಲೇ ನಾನು ಒಮ್ಮೆಲೇ ಶೂನ್ಯದಲ್ಲಿ ಕರಗಬೇಕಿತ್ತು…

ಮೆಲ್ಲನೆ ಮುಖವನ್ನೆತ್ತಿ ನಾನವಳಿಗೆ ಕೇಳಿದೆ :

"ಕಾಮಿನಿ, ನೀನು ನನ್ನನ್ನು ಪ್ರೀತಿಸುವೆಯಾ ?"

"ಊಂ ?"

"ಹೇಳು, ನಿನ್ನ ನಿಶ್ಚಿತ ಉತ್ತರ ಹೇಳು… ನನ್ನ ಭವಿಷ್ಯವೇ ನಿನ್ನ ಉತ್ತರವನ್ನವಲಂಬಿಸಿದೆ…"

"ಒಮ್ಮೆಲೇ ಇಷ್ಟೇಕೆ ಗಂಭೀರನಾದೆ ನೀನು ? ಹುಂ, ನಿನ್ನ ಪತ್ರವಂತೂ ನನ್ನನ್ನು ಒಳ್ಳೆಯ ಗೊಂದಲದಲ್ಲಿ ಹಾಕಿತು… ರಾತ್ರೆ ನಿದ್ರೆಯೇ ಹತ್ತಲಿಲ್ಲ…. ಇನ್ನೂ ಕಣ್ಣು ಉರಿಯುತ್ತಿವೆ !" ಎಂದು ಕಾಮಿನಿ ರೆಪ್ಪೆಗಳನ್ನು ಸ್ವಲ್ಪ ಜೋರಾಗಿಯೇ ಬಡಿದಳು –

"ಕಾಮಿನಿ – ಏನೇ ಆದರೂ ನೀನು ಉತ್ತರ ಕೊಡಬೇಕೆಂದು–"

"ಏನು ಉತ್ತರ ಕೊಡಬೇಕೋ ನನಗೆ ತಿಳಿಯುವುದಿಲ್ಲ – I Like you ನನಗೆ ನೀನು ಸೇರುವಿ – ನಿಜ"

"ಬರೀ ಸೇರುವಿಕೆಯೇ ?" ನನ್ನ ಗಂಟಲಿನಲ್ಲಿ ಬಂದ ಗಂಟನ್ನು ಪ್ರಯತ್ನ ಪೂರ್ವಕವಾಗಿ ಕೆಳಗೆ ಒತ್ತಿದೆ ನುಂಗಿದೆ – "ಕಾಮಿನೀ I can't understand you

– ನೀನು ನಿಜಕ್ಕೂ ಅಗಮ್ಯಳಿರುವಿ – ಜೋಗದ ಸಾಕ್ಷಿಯಲ್ಲಿ ನನ್ನ ಹೃದಯವನ್ನೇ ನಿನಗೆ ಕೊಟ್ಟಿರುವೆ – ನನ್ನ ಜೀವನವನ್ನೇ ಧಾರೆಯೆರೆದಿರುವೆ – ಅಂದಿನಿಂದ ಇಲ್ಲಿಯವರೆಗೆ ನಿಗ್ರಹಿಸಿ, ನಿಗ್ರಹಿಸಿ ಸತ್ತಿರುವೆ... ಇದಕ್ಕಿಂತ ಹೆಚ್ಚು ಸಹಿಸುವದು ಅಶಕ್ಯವಾದ ಮಾತು... ಕಾಮಿನೀ ಹೇಳು, ನನ್ನನ್ನು ಪ್ರೀತಿಸಲಾರೆಯಾ?"

"ಗೌರೀಶ, ಬಾ – ಇಲ್ಲಿ ಮೇಲೆ ಕುಳಿತು ಕೊ"...

ನಾನು ಪೆಚ್ಚನಂತೆ ಎದ್ದು ಅವಳ ಬದಿಗೆ ಕುಳಿತೆ.

"ಹುಂ, ನನಗೊಂದು ಮುದ್ದು ಕೊಡು ನೋಡೋಣ" ಎಂದು ಕಾಮಿನಿ ನಗುತ್ತ ಸುಮ್ಮನೆ ಕುಳಿತಳು... ಮೋನಾಲೀಸಾಳ ನಗೆ !

ನಾನು ಹುಚ್ಚನಂತೆ ಆ ಮೂರ್ತಿಗೆ ಒಂದು ನಾಟಕೀಯ ಮುತ್ತು ಕೊಟ್ಟೆ... ಅದು ಮುತ್ತಾಗಿರದೆ ಮುತ್ತಿನ ನೆರಳಾಗಿತ್ತು...

"ಗೌರೀಶ, ನನ್ನ ಮೈಯಲ್ಲಿ ರೋಮಾಂಚವೇಳಲಿಲ್ಲವಲ್ಲ.... ನನ್ನಲ್ಲಿ ಏನೋ ದೋಷವಿರಬೇಕು... ನೀನು ಮುದ್ದಿಸಿದಾಗ ಪ್ರೇಮದ 'ಕರಂಟು' ನನ್ನ ಮೈಯಲ್ಲಿ ಹರಿಯಲಿಲ್ಲ ನೋಡು.... ಗೌರೀಶ, ನೀನು ಒಳ್ಳೆಯ ಸಾಧು ಸರಳ ಹುಡುಗ.... ನಾನು... ಕೆಟ್ಟ... ಕೆಟ್ಟ... ಹುಡುಗಿ !"

ಅವಳ ಈ ಒಂದು ವರ್ಷದ ವಿವೇಕದ ಮುಂದೆ ನಾನು ನಾಚಿದೆ.

ಅವಳು 'ಹುಡುಗ' ಎಂದದ್ದು ನನ್ನ ವ್ಯಕ್ತಿತ್ವವನ್ನು ತೃಣೀಕರಿಸಿತು...

"ನೀನೇನು ಅಂಥಾದ್ದು ಮಾಡಿರುವಿ ಕೆಟ್ಟ ಹುಡುಗಿಯೆಂದು ಹೇಳಿಕೊಳ್ಳಲು?"

ಅವಳ ದೃಷ್ಟಿ ದಿಗಂತದಲ್ಲಿ ನಟ್ಟಿತು. ಸ್ವಲ್ಪ ಹೊತ್ತಿನ ಮೇಲೆ – "ಏನಿಲ್ಲ," ಎಂದು ಸುಮ್ಮನಾದಳು. ಅವಳ ವಕ್ಷಸ್ಥಳದ ಏರಿಳಿಕೆಯ ಮೇಲಿಂದ, ಮೆಲ್ಲಗೆ ಒಂದು ನಿಟ್ಟುಸುರು ಅವಳಿಗೆ ಗೊತ್ತಿಲ್ಲದೆಯೇ ಹೊರ ಬಿದ್ದಿರಬೇಕೆಂಬ ಅನುಮಾನ ಬಂತು... ಮರಳಿ ಪ್ರಶ್ನೆಕೇಳಿ ವಿಷಯವನ್ನು ಎಳೆದು ನೋಡುವ ಧೈರ್ಯ ಬರಲಿಲ್ಲ.

"ಏನಿದ್ದರೂ ನನ್ನ ಪ್ರೀತಿ ಅಚಲವಾಗಿರುವದು... ಕಾಮಿನೀ" ಅವಳ ಮೌನದಿಂದ ನಾನು ಉತ್ತೇಜಿತನಾದೆ... ಕಾಮಿನೀ ಹೇಳು, ನನ್ನನ್ನು ಲಗ್ನವಾಗಲು ಒಪ್ಪಿಗೆಯೇ?"

"ಒಮ್ಮೆಲೆ ಲಗ್ನಕ್ಕೆ ಜಿಗಿದಿಯಲ್ಲ !"

"ಹೌದು, ಅದರ ಹೊರತು ನನಗೆ ಮುಕ್ತಿಯಿಲ್ಲ.... ನೀನು ನನ್ನನ್ನು ಲಗ್ನವಾದರೆ ಎಷ್ಟೊಂದು ಒಳ್ಳೆಯದು ಗೊತ್ತೇ? ಶ್ರೀಕಾಂತ... ನೀನು.... ನಾನು....

ವಂಡರ್‌ಫುಲ್ !... ಶ್ರೀಕಾಂತ ಬೇಗ ಸುಧಾರಿಸಬಹುದು. ಅನಂತರ ನಾವು ಅವನ ಬಗ್ಗೆ ಒಳ್ಳೆಯ ಕಾಳಜಿ ತೆಗೆದುಕೊಳ್ಳೋಣ..." ಏನೇನೋ ಬಡಬಡಿಸುವದರಲ್ಲಿದ್ದೆ.

"ಹಾಂ. ಹಾಂ... ಶ್ರೀಕಾಂತನ ಸಲುವಾಗಿ ತಾನೇ ನನ್ನನ್ನು ನೀನು ಲಗ್ನವಾಗುವದು? ಅವಳ ಧ್ವನಿಯಲ್ಲಿಯ ಅಸೂಯೆಯ ಕಾಠಿಣ್ಯ ಕಲ್ಲಿನಂತೆ ನನ್ನನ್ನು ಚುಚ್ಚಿತು.

.... ನನಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ....

"ಹೌದು... ಶ್ರೀಕಾಂತನ ಸಲುವಾಗಿ... ನನ್ನ ಸಲುವಾಗಿ.... ನಿನ್ನ ಸಲುವಾಗಿ"

"ನನ್ನ ಸಲುವಾಗಿ ? ನಾನೇನು ಲಗ್ನ ಬೇಕೆಂದು ಬಾಯಿಬಿಟ್ಟು ಕುಳಿತಿಲ್ಲ..."

"ಕಾಮಿನಿ, ನೀನೇನಿರುವಿ, ನೀನಗೇನು ಬೇಕು ಎಂಬುವದು ನಿನಗೇ ಗೊತ್ತಿಲ್ಲ..."

"ವಾಹ್... ಮುಂದೆ ?"

"ನಿನಗೆ ನನ್ನಂಥ – ಅಲ್ಲ ನಾನೇ – ನನ್ನ ಪ್ರೀತಿಯೇ–ನನ್ನ ಅರ್ಪಣವೇ ನಿನಗೆ ಬೇಕು... ಅಂದಾಗಲೇ...." (ನೀನು ಹಾದಿಗೆ ಬರುವಿ, ನಿನಗೆ ನಿಜವಾದ ಸೌಖ್ಯ ಲಭಿಸುವದು, ನಿನ್ನ ಜೀವನ ಸುಸೂತ್ರವಾಗುವದು – ಎಂದು ಮನಸ್ಸಿನಲ್ಲಿಯೇ ಅಂದು ಮುಗಿಸಿದೆ.....)

"ನಿನ್ನ ತ್ಯಾಗ ಬೇಡ ನನಗೆ..."

"ಏನು ಬೇಕು ಹಾಗಾದರೆ ?"

"ಏನೋ !... ನನಗೆ ಗೊತ್ತಿಲ್ಲ."

"ಕಾಮಿನಿ, ನಿನಗೆ ನಾನು ಯೋಗ್ಯನಿಲ್ಲವೇ ?"

"ಯೋಗ್ಯ – ಅಯೋಗ್ಯ ! ಆ ಪ್ರಶ್ನೆಯೇ ಈಗ ಬರುವದಿಲ್ಲ.... ಗೌರೀಶ, ನೀನು ಸ್ವಲ್ಪ ಹೆಚ್ಚು ಗಟ್ಟಿಯಿದ್ದಿದ್ದರೆ – ನಿನ್ನಲ್ಲಿ ಸ್ವಲ್ಪ ಹೆಚ್ಚು ಸಾಮರ್ಥ್ಯ...." ಒಮ್ಮೆಲೇ ಕಾಮಿನಿಗೆ ತಾನು ಅನ್ನಬಾರದ್ದನ್ನು ಅಂದೆ ಎಂಬುದರ ಅರಿವಾಯಿತು.... ಬೊಡ್ಡೆಯ ತೊಗಟೆಯನ್ನು ಜೋರಿನಿಂದ ಕಿತ್ತೊಗೆದಳು.

ಕಾಮಿನಿಯ ಈ ಮಹಾಭಯಂಕರ ಮಾತು ನನ್ನ ಅಂತಃಕರಣವನ್ನು ಕದಡಿತು. ನಾನು ನಿರ್ಬಲ ! ಈ ಸತ್ಯವನ್ನು ಎಲ್ಲ ಬಿಟ್ಟು ಕಾಮಿನಿಯ ಬಾಯಿಂದ ಕೇಳುವ ಪ್ರಸಂಗ ಬಂತೇ ?... ಆದರೂ ಕಾಮಿನಿಯ ತಿಳುವಳಿಕೆಯನ್ನು ಮೆಚ್ಚಿದೆ... ಅವಳಿಗೆ ಮೊರೆಹೋಗಬೇಕೆಂದು ಬಲವಾದ ಇಚ್ಛೆಯುಂಟಾಯಿತು....

"ನೀನು ಪ್ರೀತಿಸಿದರೆ ನಿನ್ನ ಪ್ರೀತಿಯ ಆಸರೆಯಲ್ಲಿ ನನ್ನ ಶಕ್ತಿ

ಬೆಳೆಯದಿರಲಾರದು.... ಹೇಳು, ಸ್ಪಷ್ಟವಾಗಿ ಹೇಳು, ಪ್ರೀತಿಸಲಾರೆಯಾ ?...."

ಅವಳ ಮೌನ ನನ್ನನ್ನು ಸಂಪೂರ್ಣ ನಷ್ಟಗೊಳಿಸುವದರಲ್ಲಿತ್ತು. ಅಷ್ಟರಲ್ಲಿ ಇನ್ನೊಂದು ಪ್ರಶ್ನೆ ನನ್ನ ಸಹಾಯಕ್ಕೆ ಬಂತು. ನಾನು ಅವಳ ತೊಡೆಯ ಮೇಲೆ ಕೈಯಿಟ್ಟು ಗಡಬಡಿಸಿ ಕೇಳಿದೆ :

"ಅಥವಾ... ಪ್ರೀತಿಸಲು ಯತ್ನಿಸಲಾರೆಯಾ ?"

ಬಹಳ ಹೊತ್ತಿನ ನಂತರ, ಅವಳ ತೊಡೆಯ ಮೇಲೆ ನಿಶ್ಚೇಷ್ಟವಾಗಿ ಬಿದ್ದಿದ್ದ ನನ್ನ ಕೈಯ್ಯನ್ನು ಒತ್ತಿ ಕಾಮಿನಿ ನನ್ನಲ್ಲಿ ಕೊಂಚ ಜೀವ ತುಂಬಿದಳು.

"ಹುಂ ಯತ್ನಿಸುವೆ...."

ಒಂದು ನಿಮಿಷ, ಸ್ವರ್ಗ ಒಂದು ಗೇಣು ಸಮೀಪ ಬಂದಿತ್ತು....

"ಕಾಮಿನಿ, ನನಗೂ ಗೊತ್ತುಂಟು ದೌರ್ಬಲ್ಯ ! ಎರಡನೆಯವರ ಮೇಲೆ ಅವಲಂಬಿಸಿರುವ ವೃತ್ತಿ ನನ್ನಲ್ಲಿ ಯಾಕೋ ಮೊದಲಿನಿಂದ ಬೆಳೆದು ಬಂದಿದೆ.... ಶ್ರೀಕಾಂತನ ಮುಂದಂತೂ ನಾನು ದುರ್ಬಲನಾಗುತ್ತೇನೆ, ಚಿಕ್ಕವನಾಗುತ್ತೇನೆ.... ನಿನ್ನ ಸಲುವಾಗಿ ನಾನು ಬೆಳೆಯಲು ಯತ್ನಿಸುವೆ.... ಗಟ್ಟಿಯಾಗಲೂ ಯತ್ನಿಸುವೆ...."

"ನೀನು ಮುಂದೇನಾಗಬೇಕೆನ್ನುವಿ ?"

"ಎಮ್.ಎಸ್‌ಸಿಯನ್ನಂತೂ ಮೊದಲು ಮುಗಿಸುವದು... ಮುಂದಿನದು ಮುಂದೆ... ನಿನಗೇನನಿಸುವದು – ನಾನೇನಾಗಬೇಕೆಂದು ನಿನ್ನ ಇಚ್ಛೆ ?"

"ಒಬ್ಬ ದೊಡ್ಡ ಆಫೀಸರ – ಆಯ್. ಏ.ಎಸ್ಸಿಗೇಕೆ ಕೂಡ್ರುವದಿಲ್ಲ ?"

"ನಿನ್ನ ಇಚ್ಛೆ ಇದ್ದರೆ, ನೀನು ಸ್ಫೂರ್ತಿ ಕೊಟ್ಟರೆ.... ಕಾಮಿನೀ, ನೀನೇನಾಗಬೇಕೆನ್ನುವಿ ಮುಂದೆ ?"

"ನಾನು ? ಇದೊಳ್ಳೆಯ ನ್ಯಾಯ ! ಹುಂ, ಬೀ.ಎ. ಆದರೂ ಮುಗಿಯಲಿ. ಮುಂದಿನದು ಮುಂದೆ."

* * *

ಅಂದು ಸಂಜೆ ನಾನು ಮನೆಗೆ ಬೇಗ ಹೋಗಲಿಲ್ಲ. ಕಾಲೇಜಿನ ಮೇಲಿಂದ ಸಪ್ತಾಪುರದ ದಾರಿ ಹಿಡಿದು ಒಬ್ಬನೆ ತಿರುಗಾಡಲು ಹೋದೆ.... ಮೈ–ಮನಗಳಲ್ಲಿ ಒಂದು ಅಪೂರ್ವವಾದ ಭಾವನೆ ತುಂಬಿ ತುಳುಕುತ್ತಿತ್ತು : ವಿಲಕ್ಷಣ ಅಸಮಾಧಾನದ ದೊಡ್ಡ ದೊಡ್ಡ ಮೋಡಗಳು ತಲೆಯಲ್ಲಿ ಜೋತು ಬಿದ್ದಿದ್ದರೂ, ಒಂದು ಬಗೆಯ ಶುದ್ಧ ಅನುಭವದಿಂದ ಉಂಟಾದ ಸಮಾಧಾನ ಸಂಧ್ಯಾಪ್ರಕಾಶದಂತೆ ತುಂಬಿತ್ತು:

..... ಕಾಮಿನಿಯೊಡನೆ ತಿರುಗಾಡಲು ಹೋದೆ, ಅವಳೊಡನೆ ಜೀವನ – ಪ್ರೇಮ – ಲಗ್ನ ಮುಂತಾದವುಗಳ ಬಗ್ಗೆ ಮಾತನಾಡಿದೆ, ಪ್ರೇಮಿಸಿದೆ ಎಂಬ

ಒಂದು ಘಟನೆಯೇ ಸಾಕಾಗಿತ್ತು ನನ್ನ ಸಮಾಧಾನಕ್ಕೆ !

.... ಆದರೆ ಒಂದು ಸಂಭಾಷಣೆಯಲ್ಲಿ ಎಷ್ಟೊಂದು ಮಹತ್ವದ – ಮನ ಕದಡುವ ಪ್ರಶ್ನೆಗಳಿದ್ದವೆಂಬುದು ಆಗ ಗೊತ್ತಾಗಿರಲಿಲ್ಲ. ಉದಾಹರಣೆಗಾಗಿ : (೧) 'ಈಗೆಲ್ಲ ಗೊತ್ತಾಗಿದೆ ತರುಣರ ತಂತ್ರ.' – 'ನಾನು ಕೆಟ್ಟ ಹುಡುಗಿ' – ಈ ಮಾತುಗಳ ಹಿಂದಿನ ಸ್ವಾನುಭವದ ಸ್ವರೂಪವೇನು ? (೨) 'ನಿನ್ನ ಪ್ರಿಯ ಮಿತ್ರನ ತಂಗಿಯಂದೆ ?', 'ಅದೇ ಮುಖ್ಯ ಕಾರಣ!' ಈ ಮಾತಿನಲ್ಲಿಯ ಅಸೂಯೆ ಸ್ಪಷ್ಟವಾಗಿತ್ತಲ್ಲವೆ ? (೩) ಪ್ರೊ. ಶರ್ಮಾ ಅವರಲ್ಲಿ ಅವಳಿಗೆ ಒಂದು ಬಗೆಯ ಸಂಶಯಾಸ್ಪದ ಆಸ್ಥೆಯಿದ್ದಂತಿದೆ.... ಶರ್ಮಾರ ಕೀರ್ತಿ ಕೇಳಿದವರಿಗೆ ಆ ಆಸ್ಥೆ ಸ್ವಲ್ಪ ವಿಲಕ್ಷಣ ..... (೪) 'ನೀನು ಮುದ್ದಿಸಿದಾಗ ಪ್ರೇಮದ ಕರಂಟು ನನ್ನ ಮೈಯಲ್ಲಿ ಹರಿಯಲಿಲ್ಲ ನೋಡು' : ಅವಳ ಪ್ರೇಮದ ಕಲ್ಪನೆಯೆಂದರೆ ಬರಿಯ ದೈಹಿಕ ಸಂವೇದನೆಯೇ? ಅಥವಾ ಅವಳಿಗೆ ನನ್ನ ಬಗ್ಗೆ ನಿಜವಾಗಿಯೂ ಪ್ರೀತಿ ಅನಿಸುವದಿಲ್ಲವೇ? ಅಥವಾ – ಚುಂಬನದ ಅಭ್ಯಾಸ ಅವಳಿಗೆ ಬಹಳಷ್ಟಿರಬೇಕು – ಆದ್ದರಿಂದ ನನ್ನ ಚುಂಬನದಲ್ಲಿ ಅವಳಿಗೆ ವಿಶೇಷವೇನೂ ದೊರತಿರಲಿಕ್ಕಿಲ್ಲ ! (೫) 'ನೀನು ಒಳ್ಳೆಯ ಸಾಧು ಸರಳ ಹುಡುಗ!' .....ನನಗೆ ಇವಳು 'ಹುಡುಗ' ಎನ್ನಬೇಕಾದರೆ ಇವಳಲ್ಲಿ ತಾನು ಅನುಭವಿ, ದೊಡ್ಡವಳೆಂಬ ಭಾವನೆ ಇರಬೇಕು. ಹಾಗೂ ನನ್ನೆಡೆಗೆ ನೋಡುವ ದೃಷ್ಟಿಯಲ್ಲಿ ಒಂದು ತರದ ಉಪೇಕ್ಷೆ ಇರಬಹುದು..... 'ನೀನು ಸ್ವಲ್ಪ ಹೆಚ್ಚು ಗಟ್ಟಿಯಿದ್ದಿದ್ದರೆ' ಎಂದು ಅವಳು ಒಮ್ಮೆಲೆ ನುಡಿದಾಗ, ಅವಳಿಗೆ ನನ್ನ ದೌರ್ಬಲ್ಯದ ಬಗ್ಗೆ ಅನಿಸುವ ಭಾವನೆ ತನ್ನಷ್ಟಕ್ಕೆ ತಾನೇ ಹೊರಬಿದ್ದಿತಲ್ಲವೇ ? (೬) 'ಯತ್ನಿಸುವೆ' – ಅವಳ ಇಂಥ ಭರವಸೆ ಬರಿಯ ಗಾಳಿಮಾತಾಗಲಿಕ್ಕಿಲ್ಲವೆಂದು ಯಾತರ ಮೇಲಿಂದ ? (೭) ನಾನು 'ಒಬ್ಬ ದೊಡ್ಡ ಆಫೀಸರ'ನಾಗಬೇಕೆಂಬ ಅವಳ ಇಚ್ಛೆಯಲ್ಲಿ ಅವಳ ಸಾಮಾನ್ಯ ಭೌತಿಕ (materialistic) ಮೌಲ್ಯಗಳೇ ವ್ಯಕ್ತವಾಗುವುದಿಲ್ಲವೇ ?

.....ಈ ಏಳು ಬಗೆಯ ಪ್ರಶ್ನೆಗಳು, ಮಾರನೆಯ ದಿನ, ಏಳು ಸುತ್ತಿನ ಕೋಟೆಯಾಗಿ ಪರಿಣಮಿಸಿದವು !

..... ಇದಕ್ಕೆ ಮುಖ್ಯ ಕಾರಣ : ಶ್ರೀಕಾಂತ ! ಶ್ರೀಕಾಂತ ಆ ದಿನ ರಾತ್ರೆ ನನ್ನ ಮನಸ್ಸಿನಲ್ಲಿ ಹೊಸ ಬಿರುಗಾಳಿಯನ್ನೇ ಎಬ್ಬಿಸಿದ....

* * *

ಆ ದಿನ ರಾತ್ರೆ ಹನ್ನೊಂದರ ಸಮಯ. ನನಗೆ ತಡೆಯಲಾಗಲಿಲ್ಲ. ಶ್ರೀಕಾಂತನಿಗೆ ಇಂದೇ ಹೇಳಬೇಕು, ಎಲ್ಲ ಹೇಳಬೇಕೆಂದು ಅವನ ಕೋಣೆಗೆ

ಹೋದೆ. ಆತ ಕಾಟಿನ ಮೇಲೆ ಮಲಗಿ ಚಾದರ ಹೊತ್ತುಕೊಂಡ" ಶೆಲ್ಲಿಯ ಕವಿತೆಗಳನ್ನು ಓದುತ್ತಿದ್ದ....

"ಬಾ ಗೌರೀ, ಯಾಕೆ ಇನ್ನೂ ನಿದ್ದೆ ಬಂದಿಲ್ಲವೆಂದು ಕಾಣಿಸುತ್ತದೆ."

"ಇಲ್ಲ."

"ಇದು ನೋಡು, ಶೆಲ್ಲಿಯ ಈ ಕವಿತೆ ನಾನು ಎಂದಾದರೂ ಓದಿ ತೋರಿಸಿರುವೆನೇ?"

"ಯಾವದು ?"

"When the lamp is shattered....?"

"ನೆನಪಿಲ್ಲ"

ಆತ ಓದಲು ಸುರುಮಾಡಿದ :

"When the lamp is shattered....."

ಆ ಕವಿತೆಯಲ್ಲಿಯ :

'When the lips have spoken
The loved accents are soon forgot'

ಹಾಗೂ....

'When the hearts have mingled
Love first leaves its well - built nest'

... ಈ ಪಂಕ್ತಿಗಳಲ್ಲಿಯ ಸೂಕ್ಷ್ಮ ಅರ್ಥ ಅಪ್ರತ್ಯಕ್ಷವಾಗಿ ನನ್ನ ಹೃದಯ ಸೇರಿತು..... ಪ್ರೇಮದ ನಿಜ ಸ್ವರೂಪ ಇಷ್ಟು ಕ್ಷಣಭಂಗುರವಾದುದೇ ? ಪ್ರೇಮದ ದುಃಖದ ಭಾರ ದುರ್ಬಲ ಹೃದಯಕ್ಕೆ ಕಟ್ಟಿಟ್ಟದ್ದೆ :

'The weak one is singled
To endure what it once possessed'

ನಾನು ದುರ್ಬಲ : ನನ್ನ ಪಾಲಿಗೆ ಇಂಥ ದುಃಖ ಕಟ್ಟಿಟ್ಟದ್ದೆ – ಎಂಬುದರ ಅರಿವು ನನ್ನನ್ನು ಇನ್ನಷ್ಟು ದುರ್ಬಲನನ್ನಾಗಿ ಮಾಡಿತು.

"ಹುಂ, ಹೇಗಿದೆ ಕವಿತೆ ?"

"ಚನ್ನಾಗಿದೆ. ಹಿಂದೊಮ್ಮೆ ನೀನೇ ಓದಿ ಹೇಳಿ ಅರ್ಥ ಕೂಡ ವಿವರಿಸಿದ್ದಿ ಕೂಡ...."

"ಹೀಗೇನು ?"

"ಹುಂ"

"ಆದರೆ ಉತ್ತಮ ಕಾವ್ಯ ಎಷ್ಟು ಸಲ ಓದಿದರೂ ಬೇಸರ ಬರುವದಿಲ್ಲ. ನಿಜವಾಗಿ ನೋಡಿದರೆ ನಾವು ಹೆಚ್ಚು ಸಲ ಓದಿದಷ್ಟು ಕಾವ್ಯದ ಅರ್ಥ ಹಿಗ್ಗುತ್ತ ಹೋಗುವದು, ಸಂಪನ್ನವಾಗುತ್ತ ಹೋಗುವದು. ಶೇಕ್ಸಪಿಯರನ ನಾಟಿಕಗಳನ್ನು ಇಡಿಯ ಜನ್ಮ ಓದಬಹುದು.... ಹಾಂ, ನನ್ನದೊಂದು ವಿಧಾನವಿದೆ : ಶೇಕ್ಸಪಿಯರನ ನಾಟಕಗಳನ್ನು ನಮ್ಮ ಜೀವನದ ಬೇರೆ ಬೇರೆ ಮಟ್ಟಗಳಲ್ಲಿ ಓದಿ ನೋಡಬೇಕು... ಆಗ ಅವುಗಳ ಅರ್ಥ ಹೆಚ್ಚು ಹೆಚ್ಚು ಆಳವಾಗುತ್ತ ಹೋಗದಿರದು... ನಮ್ಮ ವ್ಯಕ್ತಿತ್ವದ ಬೆಳವಣಿಗೆಯನ್ನು ಅಳೆಯಲು ಶೇಕ್ಸಪಿಯರನ ನಾಟಕಗಳನ್ನು ಉಪಯೋಗಿಸಬಹುದು. ಆದುದರಿಂದಲೇ ನಾನೆನ್ನುವದು ; ಶೇಕ್ಸಪಿಯರನೆಂದರೆ ಮಾನವೀ ವ್ಯಕ್ತಿತ್ವದ ಅಳತೆಗೋಲು – ಎಂದು..."

....ಶೇಕ್ಸಪಿಯರನಿಂದ ಕಾಮಿನಿಯತ್ತ, ನನ್ನ 'ಕ್ಲಿಯೋಪಾಟ್ರಾ–ಜುಲಿಯೆಟ್–ಲೇಡಿ ಮ್ಯಾಕ್‌ಬೆಥ್–ಗೋನರಿಲ್'–ಳಾದ ಕಾಮಿನಿಯತ್ತ ಸಂಭಾಷಣೆಯನ್ನು ಹೇಗೆ ಒಯ್ಯಬೇಕೆಂಬುದು ನನಗೆ ತಿಳಿಯಲಿಲ್ಲ. 'ಇದು ನನ್ನ ದೌರ್ಬಲ್ಯ – ಧೈರ್ಯದಿಂದ ನನ್ನ ವ್ಯಕ್ತಿತ್ವವನ್ನು ನಾನು assert ಮಾಡಬೇಕು – ಪ್ರತಿಪಾದಿಸಬೇಕು.... ಹೀಗೆ ಬೇರೆಯವರ ವ್ಯಕ್ತಿತ್ವದ ಸಾಮರ್ಥ್ಯದ ಹೊಳೆಯಲ್ಲಿ ತೇಲಿ ಹೋಗಬಾರದು...' ಎಂದೇನೋ ಯೋಚಿಸಿದೆ. ಇಂಥ ವೇಳೆಯಲ್ಲಿ ಕುಡಿಯಲು ಮದ್ಯವಿದ್ದರೆ ಕೃತ್ರಿಮ ಶಕ್ತಿಯನ್ನಾದರೂ ತಂದುಕೊಳ್ಳಬಹುದಿತ್ತು....

....ಶ್ರೀಕಾಂತನ ಲೆಕ್ಚರು ಸಾಗಿಯೇ ಇತ್ತು. ಶೇಕ್ಸಪಿಯರನಿಂದ ಯಾವಾಗಲೋ ಇಬ್ಸೆನ್–ಶಾಃ ಅವರತ್ತ ಆತ ಜಿಗಿದಿದ್ದ..... ನನ್ನ ಲಕ್ಷ್ಯ ಆತನ ಮಾತಿನಲ್ಲಿ ಇಲ್ಲವೆಂಬುದು ಅವನಿಗೆ ಗೊತ್ತಾಗಿರಬೇಕು.

"ಗೌರಿ, ನಿನ್ನ ಲಕ್ಷ್ಯ ಎಳ್ಳಷ್ಟೂ ಇಲ್ಲದಿದ್ದರೂ ಕೇಳುವ ನಟನೆ ಯಾಕೆ ಮಾಡುತ್ತಿರುವಿ?"

ನಾನು ಜಿಗಿದು ಬಿದ್ದೆ !... ಇದೇ ಸಮಯವೆಂದು ನಾನು ಸಾವಕಾಶವಾಗಿ ಧೈರ್ಯದಿಂದ ನುಡಿದೆ :

"ಇಲ್ಲ, ನನ್ನ ಮನಸ್ಸಿನಲ್ಲಿ ಏನೋ ಗೊಂದಲವೆದ್ದಿದೆ – ಆದ್ದರಿಂದ..."

"ಏನೋ ಗೊಂದಲವಿದೆಯೆಂದು ನಿನ್ನ ಮುಖವೇ ಹೇಳುವದು."

"ಹೌದು – ಅದರ ವಿಷಯ ನಿನಗೆ ಹೇಳಲೆಂದೇ ಈಗ ನಾನು ಬಂದದ್ದು...."

"ಚು–ಚು–ಚು–ಪಾಪ !.... ಹೇಳಲು ಬಂದವನು ಕೇಳಲು ಕುಳಿತ !" (ಅವನ ಮಾತಿನಲ್ಲಿ ವಕ್ರತೆ ಹಣಿಕಿ ಹಾಕುತ್ತಿದೆ ಎಂಬುದರ ಅರಿವಾಯಿತು.)

"ಎಲೆಲೆ ಸಾರಥಿ, ಹೊಲಸು ನಾರತಿ – ನೀನು ಬಂದಂಥ ಕಾರ್ಯವಾವುದಯ್ಯ, ಪೇಳುವಂಥವನಾಗು. ನಾನು ಕೇಳುವಂಥವನಾಗುತ್ತೇನೆ...."

....ಅವನ ಯಕ್ಷಗಾನ-ಹಾಸ್ಯ ಯಾಕೋ ರುಚಿಸಲಿಲ್ಲ.... ನನ್ನ ಶಕ್ತಿ ಹನಿಹನಿಯಾಗಿ ಸೋರತೊಡಗಿದೆಯೆಂದೆನಿಸಿತು.... ಆದರೂ ಸುರುಮಾಡದೆ ಗತ್ಯಂತರವಿರಲಿಲ್ಲ :

"ಶ್ರೀಕಾಂತಾ, ಬಹಳ ದಿನಗಳಿಂದ ನಿನಗೆ ಹೇಳಬೇಕು, ಹೇಳಬೇಕು ಎಂದು ನಾನು ಯತ್ನಿಸುತ್ತಿರುವೆ. ಆದರೆ ಧೈರ್ಯವೇ ಸಾಲುತ್ತಿರಲಿಲ್ಲ. ಇಂದು ಹೇಳಿಯೇ ತೀರಬೇಕೆಂದು ನಿಶ್ಚಯಿಸಿರುವೆ."

"ಅದು ಯಾವ ಮಾತಪ್ಪ ನನ್ನಿಂದ ಇಷ್ಟು ದಿನ ಬಚ್ಚಿಟ್ಟದ್ದು? ಎಂದೂ ಹೀಗೆ ಗುಟ್ಟು ಬಚ್ಚಿಡುವ ಮನುಷ್ಯನಲ್ಲ ನೀನು!"

"ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು, ಕೆಡಕೆನ್ನಿಸಿಕೊಳ್ಳಬಾರದು...."

"ಕೆಡಕು? ವಾಹ್, ನಾನೇಕೆ ಕೆಡಕೆನ್ನಿಸಿಕೊಳ್ಳಲಿ? ನೀನು ಹೇಳದಿದ್ದರೇನೇ ಕೆಡಕೆನ್ನಿಸಿಕೊಳ್ಳುವೆ....."

"ಅದು – ಕಾಮನಿಯ ವಿಷಯ."

"ಕಾಮಿನಿಯ ವಿಷಯವೇನು? ಅವಳು ಕೆಟ್ಟ ದಾರಿ ಹಿಡಿದಿರುವಳೆಂದೇ?... ನನ್ನ ತಾಯಿಗೆ ಯಾರೋ ಹೇಳಿದರಂತೆ ಕಾಮಿನಿಯತ್ತ ಸ್ವಲ್ಪ ಲಕ್ಷ್ಯಕೊಡಿರಿ ಎಂದು. ನಾಲ್ಕು ಹುಡುಗರೊಡನೆ ಚೆಲ್ಲಾಟ ವಾಡಿರಬೇಕು. ಜನರು ಅದಕ್ಕೆ ಕೆಟ್ಟದಾರಿ ಎನ್ನುತ್ತಾರೆ. ಕಾಮಿನಿಯೂ ಸ್ವಲ್ಪ ತಲೆತಿರುಕ ಹುಡುಗಿ, ತಿಳಿಗೇಡಿ: ಯಾರ ಅಂಕೆಯೂ ಇಲ್ಲ. ಯಾರ ಮಾರ್ಗದರ್ಶನವೂ ಇಲ್ಲ, ಅವಳಾದರೂ ಏನು ಮಾಡಿಯಾಳು? ಸಾಕಷ್ಟು ಜೀವನೋತ್ಸಾಹವಿದೆ, ಜೊತೆಗೆ ದೈಹಿಕ ಆಕರ್ಷಣೆಯಿದೆ.... ಇನ್ನೇನು ಅವಳ ಗೆಳತಿಯರ ವಿಷಯ ಹೇಳಲಿರುವಿಯೇನು?"

ನಾನು ಏನೂ ಹೇಳುವ ಮುಂಚೆಯೇ ಶ್ರೀಕಾಂತನ ವಿವೇಚನೆ ಸುರುವಾಗಿತ್ತು. ಅವನ ಓಡುವ ಬುದ್ಧಿಯನ್ನು ಒಮ್ಮೆಲೇ ಲಗಾಮು ಎಳೆದು ನಿಲ್ಲಿಸುವ ಉದ್ದೇಶದಿಂದಲೋ ಅಥವಾ ಭೀತಿಯಿಂದಲೋ, ನಾನು ಒಮ್ಮೆಲೇ ನುಡಿದೆ....

"ಅಲ್ಲ, ನಾನು ನನ್ನ ಬಗ್ಗೆ ಹೇಳಲಿರುವೆ, ಕಾಮಿನಿಯನ್ನು ಲಗ್ನವಾಗಬಯಸುವೆ...." ನನ್ನ ಧ್ವನಿಯು ಕಂಪಿಸುತ್ತಿತ್ತು. ಬಾಯಿ ಒಣಗಿತ್ತು !"

ಶ್ರೀಕಾಂತನಿಗೆ ನಿಜವಾಗಿಯೂ ಆಶ್ಚರ್ಯದ ಆಘಾತವಾಗಿರಬೇಕು! "ಆಂ?.... ಹೂಂ ! ಪ್ರಕರಣ ಈಗಾಗಲೇ ಇಲ್ಲಿಯತನಕ ಬಂದಿದೆಯೇ ?" ಒಮ್ಮೆಲೇ

ಜೋರಿನಿಂದ ನಕ್ಕ.... ಕೂಡಲೇ ಗಂಭೀರನಾಗಿ ನುಡಿದ : "ಹೀಗೇನು? ನನಗೂ ಬಹಳ ದಿನಗಳಿಂದ ಸಂಶಯ ಬಂದಿತ್ತು. ಆದರೆ ಗೌರೀಶ ತನಗೆ ಅನಿಸಿದ್ದನ್ನು ಕೂಡಲೇ ನನಗೆ ಹೇಳುತ್ತಾನೆ. ಅವನು ನನಗೆ ಹೇಳಿಲ್ಲ ಎಂದ ಮೇಲೆ ನನ್ನ ಸಂಶಯದಲ್ಲಿ ತಥ್ಯವಿರಲಿಕ್ಕಿಲ್ಲವೆಂದು ಅನಿಸಿತ್ತು!.... ಅಚ್ಛಾ ! ಇಂದು ಮಧ್ಯಾಹ್ನ ಅವಳು ಹೊರಗೆ ಹೋದೊಡನೆ ನಿನ್ನ ಜೀವ ಚಡಪಡಿಸಿತು. ಏನು, ಅವಳ ಜತೆಗೆ ಎಲ್ಲಿಯಾದರೂ ತಿರುಗಾಡಲು ಹೋಗಿದ್ದಿಯಾ ? ಹುಂ, ಅಂತೆಯೇ ನಿನಗೆ ಪ್ರೊ. ಜೋಶಿಯವರಲ್ಲಿ ಹೋಗಲಾಗಲಿಲ್ಲ. ಆ ಸುಳ್ಳೇಕೆ ಸುಮ್ಮನೆ ಹೇಳಿದಿ, ಪ್ರೊ. ಜೋಶಿಯವರತ್ತ ಎರಡು ಸಲ ಹೋದೆ – ಅವರು ಮನೆಯಲ್ಲಿರಲಿಲ್ಲ – ಎಂದು?"

"ನೀನು ತಟ್ಟನೆ ಪ್ರೊ. ಜೋಶಿಯವರ ಪುಸ್ತಕಗಳ ಬಗ್ಗೆ ಕೇಳಿದಿ.... ಒಮ್ಮೆಲೆ ನನ್ನ ತಪ್ಪಿನ ಅರಿವು ಬಂತು. ಏನು ಹೇಳಬೇಕು ಎಂದು ತಿಳಿಯಲಿಲ್ಲ – ಹಾಗೆ ಉತ್ತರ ನನ್ನ ಬಾಯಿಂದ ಹೊರಬಿತ್ತು...."

"ಎಲ್ಲ ಬಿಟ್ಟು ಸುಳ್ಳು... ಇರಲಿ – ಒಳ್ಳೇದು. ಸತ್ಯೇಂದ್ರ ನನಗೆ ಮೊನ್ನೆ ಬರೆದ ಪತ್ರದಲ್ಲಿ – ನನ್ನ ಟೀ. ಬೀ. ಯ ಬಗ್ಗೆ ಸಹಾನುಭೂತಿ ಪ್ರದರ್ಶಿಸಿ ಬರೆದ ಪತ್ರ ಅದು – ಅದರಲ್ಲಿ : 'ಗೌರೀಶ ಮುಂಬಯಿಗೆ ಹೋಗುವವನಿದ್ದ. ನಿನ್ನ ಸಲುವಾಗಿ ಧಾರವಾಡದಲ್ಲಿಯೇ ಉಳಿದನೆಂದು ತೋರುವದು,' ಎಂದು ಬರೆದಿದ್ದಾನೆ... ನಿಜ ಹೇಳು – ನೀನು ನನ್ನ ಸಲುವಾಗಿ ಇಲ್ಲಿದ್ದಿಯಾ ಅಥವಾ ಕಾಮಿನಿಯ ಸಲುವಾಗಿ ?"

ನನ್ನ ಹೃದಯದಲ್ಲಿ ಏನೋ ತೀಕ್ಷ್ಣವಾಗಿ ಚುಚ್ಚಿದಂತೆನಿಸಿತು. ನಾನು ಕೂಗಿದೆ :

"ಶ್ರೀಕಾಂತಾ, ಎಂಥ ಮಾತುಗಳಿವು ?" ನನ್ನ ಕಂಠ ತುಂಬಿ ಬಂದಿತ್ತು....

ಶ್ರೀಕಾಂತನಿಗೆ ತನ್ನ ನುಡಿಯಲ್ಲಿಯ ವಕ್ರತೆಯ – ಒಂದು ಬಗೆಯ ವಿಲಕ್ಷಣ ಮತ್ಸರದ – ಅರಿವಾಗಿರಬೇಕು. ಕೂಡಲೆ ತನ್ನನ್ನು ತಾನು ಸಾವರಿಸಿ ಹೇಳಿದ :

"ಸಾರಿ...... ವ್ಹೆರಿ ಸಾರಿ.... ಹಾಗೇ ಚೇಷ್ಟೆಯಿಂದ ಕೇಳಿದೆ ಕ್ಷಮಿಸು...."

"ನಾನು ಇಲ್ಲಿರುವದಕ್ಕೂ ಕಾಮಿನಿಗೂ ಏನೂ ಸಂಬಂಧವಿಲ್ಲ. ಇದ್ದರೂ ಅದು ಗೌಣ.... ನಿನ್ನ ತಿಳುವಳಿಕೆ ತಪ್ಪಾಗಿದೆ. ನಿನ್ನ ಮೇಲೆ ನನ್ನ ಮಮತೆ ಇದ್ದುದರಿಂದಲೇ ಕಾಮಿನಿಯ ವಿಷಯದಲ್ಲಿ...."

"ಓಹೋ – ಹೀಗೋ ? ನಾನು ಕೆಲವು ದಿನಗಳಲ್ಲಿ ಸಾಯಲಿರುವೆ.

ಆದುದರಿಂದ ನನ್ನ ಮೇಲಿನ ಮಮತೆ ಪುಕ್ಕಟೆ ಹೋಗಬಾರದು, ಅದಕ್ಕೆ ಬೇರೆ ಸ್ಥಾನ ದೊರಕಿಸಬೇಕು, ಎಂದು ಸ್ಥಾನಾಂತರ ಮಾಡಿದಿಯೇನು ನಿನ್ನ ಮಮತೆ?" ಈ ಸಲ ಶ್ರೀಕಾಂತ ತನ್ನ ಧ್ವನಿಯಲ್ಲಿ ವ್ಯಂಗ್ಯದ ಛಾಯೆಯನ್ನು ಕೂಡ ತೋರಿಸಲಿಲ್ಲ!

ಅವನ ಕೆಂಡದಂಥ ಶಬ್ದಗಳು, ತಣ್ಣಗೆ ಉರಿಯುವ ಶಬ್ದಗಳು. ನನ್ನ ಗಂಟಲಿನಲ್ಲಿ ಕಲ್ಲೊಂದು ಏರಿ ಬಂತು. ಕಣ್ಣುಗಳಲ್ಲಿ ನೀರು ಉಕ್ಕಿ ಬಂದವು... ಅಲ್ಲಿ ಕೂಡ್ರುವದೇ ಅಸಹ್ಯವಾಯಿತು.... ನಾನು ಸುಮ್ಮನೆ ಎದ್ದು ಏನೂ ಮಾತನಾಡದೆ ಬಾಗಿಲತ್ತ ಹೊರಳಿದೆ. ಶ್ರೀಕಾಂತ ಥಟ್ಟನೆ ಓಡಿ ಬಂದು ನನ್ನನ್ನು ರಟ್ಟೆ ಹಿಡಿದೆಳೆದು ಕುರ್ಚಿಯ ಮೇಲೆ ಕೂಡ್ರಿಸಿದ.

"ಗೌರೀ, I am sorry ಸಾರಿ – ನಾನು ಹಾಗೇಕೆ ಒಮ್ಮೆಲೆ ನುಡಿದೆನೋ ನನಗೆ ಗೊತ್ತಿಲ್ಲ... ಒಂದು ಬಗೆಯ ಕಹಿ– ಜೀವನದ ಬಗ್ಗೆ ನಿರಾಶೆ ನನ್ನಿಂದ ಆ ಮಾತನ್ನಾಡಿಸಿರಬೇಕು.... ಅಥವಾ ಒಂದು ಬಗೆಯ ಅಸೂಯೆ ನನ್ನನ್ನು ಹುಚ್ಚನನ್ನಾಗಿ ಮಾಡಿರಬೇಕು.... ಕ್ಷಮಿಸು ನನ್ನ ತಪ್ಪಾಯಿತು... ಗೌರೀಶ, ಇಲ್ಲ, ನಿನ್ನದೇನೂ ತಪ್ಪಿಲ್ಲ. ನೀನು ಬೆಳೆಯುವ ತರುಣ. ಇಡಿಯ ಭವಿಷ್ಯವೇ ನಿನ್ನ ಮುಂದಿದೆ. ಕಾಮಿನಿ ಬೆಳೆದು ನಿಂತ ಹುಡುಗಿ. ನೀನು ಅವಳೆಡೆಗೆ ಆಕರ್ಷಿತನಾದುದರಲ್ಲಿ ಅಸಹಜವೇನೂ ಇಲ್ಲ... ಮುಂದೆ, ಹೇಳು ನಿನಗೆ ಹೇಳಬೇಕಾದದ್ದನ್ನು.... ನಾನು ಕೇಳುವೆ.... ನೀನು ಹೇಳಲೇಬೇಕು, ಗೌರೀಶ...."

ನನ್ನ ಕಣ್ಣಿನಲ್ಲಿಯ ನೀರು ಆರಲು ಎಷ್ಟೋ ಹೊತ್ತು ಹಿಡಿಯಿತು. ನನ್ನ ಮೌನ, ಹೆಪ್ಪುಗಟ್ಟಿದ ಮೌನ. ಶ್ರೀಕಾಂತನ ಮನಸ್ಸನ್ನು ಕರಗಿಸಿರಬೇಕು.

"ಗೌರೀಶ !" ಆತನ ಧ್ವನಿ ಗಂಭೀರವಾಗಿತ್ತು. "ಗೌರೀಶ ನಿಜಕ್ಕೂ ಕಾಮಿನಿಯ ಮೇಲೆ ಅಷ್ಟು ಪ್ರೀತಿಯುಂಟಾಗಿದೆಯೇ ?"

ನಾನು ಏನೂ ಮಾತನಾಡಲಿಲ್ಲ.

"ಗೌರೀ, ಯಾಕೋ ಏನೋ ನನಗೆ ಇದರ ಹೆದರಿಕೆ ಮೊದಲಿನಿಂದಲೂ ಇತ್ತು... ನೀನಿನ್ನೂ ಭಾವನಾಪ್ರಧಾನ ಸರಳ–ಮಳ್ಳ ಹುಡುಗ. ಕೆಟ್ಟನೆನಿಸಿಕೊಳ್ಳಬೇಡ– ಸತ್ಯ ಮಾತಾಡುತ್ತಿದ್ದೇನೆಂದು. ಸತ್ಯ ಕಟುವಾಗಿದ್ದರೂ ಅದನ್ನು ಎದುರಿಸಬೇಕು, ಅಲ್ಲವೇ? ಕಾಮಿನಿಯ ವಿಷಯ ನಿನಗೆ ಸಂಪೂರ್ಣ ಗೊತ್ತಿಲ್ಲ... ಅವಳನ್ನು ನಾನು ಚಿಕ್ಕಂದಿನಿಂದಲೂ ಬಲ್ಲೆ. ಸಣ್ಣವಳಿದ್ದಾಗಂತೂ ಅವಳು ಭಯಂಕರ ಹಟವಾದಿ. ಒಂದು ವಸ್ತು ಬೇಕೆಂದರೆ ತೀರಿತು – ಆ ವಸ್ತು ಅವಳಿಗೆ ಸಿಗುವತನಕ ಅಳುವುದೇನು ಕರೆಯುವದೇನು!... ಎಲ್ಲರೂ ತನ್ನ ಪ್ರಶಂಸೆ ಮಾಡಬೇಕು, ಎಲ್ಲರೂ ತನ್ನ ಮಾತು ಕೇಳಬೇಕು, ತಾನು ಮಾತ್ರ ರಾಣಿಯಂತೆ ಮೆರೆಯಬೇಕು

ಎಂಬ ವೃತ್ತಿಯವಳು... ತನ್ನ ಸ್ವಾರ್ಥದ ಗುಂಗಿನಲ್ಲಿ ಉಳಿದವರ ಭಾವನೆಗಳ ಬಗ್ಗೆ ಎಳ್ಳಷ್ಟೂ ಕಾಳಜಿಯಿಲ್ಲ ಅವಳಿಗೆ... ಅವಳನ್ನು ಲಗ್ನವಾಗುವವನು ಅಂಥಿಂಥವನಿದ್ದರೆ ಆಗದು..."

ನನ್ನ ದುಃಖ ಆರಿದ್ದರಿಂದ ಶ್ರೀಕಾಂತನಿಗೆ ಉತ್ತರಕೊಡಲು ಅಡ್ಡಿಯಿಲ್ಲವೆಂದೆನಿಸಿತು.

"ಅದೆಲ್ಲ ನನಗೆ ಗೊತ್ತಿದೆ... ಆದರೆ ಅವಳನ್ನು ಸುಧಾರಿಸಲು, ಅವಳನ್ನು normal ಒಳ್ಳೆಯವಳನ್ನಾಗಿ ಮಾಡಲು ಅವಳನ್ನು ಪ್ರೀತಿಸುವ ಮನುಷ್ಯನೇ ಬೇಕು..."

"ಹೌದು, ಅದೆಲ್ಲ ನಿಜ... ಆದರೆ..."

ನಾನು ನಡುವೆಯೇ ಬಾಯಿ ಹಾಕಿದೆ : "ಹಾಗೂ ನಾನು ಅವಳನ್ನು ಬಲ್ಲೆ... ಅವಳ ಬಗ್ಗೆ ಸಹಾನುಭೂತಿ ತುಂಬ ಇದೆ ನನಗೆ.... ನಿನ್ನ ತಂಗಿಯೆಂದ ಮೇಲೆ ಅವಳ ಸುಖ–ದುಃಖದ ಭಾರ ನನ್ನ ಮೇಲೆ ಸ್ವಲ್ಪ ಇದೆ ಎಂದು ನನ್ನ ಭಾವನೆ..."

"ನಿನ್ನ ತ್ಯಾಗಬುದ್ಧಿ ಪ್ರಶಂಸನೀಯ, ಗೌರೀಶ ! ಆದರೆ ಅದಕ್ಕೆ ಮಣಿಯುವ ಹೆಣ್ಣಲ್ಲ ಕಾಮಿನಿ. ನಿನ್ನ ತ್ಯಾಗದ ಉಪಯೋಗವೇನೂ ಆಗಲಾರದು. ಸಮ–ರಸೆಟ್ ಮಾಮನ "Of Human Bondage" ಕಾದಂಬರಿ ಓದಿರುವೆಯಲ್ಲವೇ? ಆ ಕಾದಂಬರಿಯ ನಾಯಕಿ ಮಿಲ್ಡ್ರೆಡ್‌ಳ ಪಾತ್ರ ನೆನಪಿದೆ ತಾನೇ?... ಕಾಮಿನಿ ನನ್ನ ತಂಗಿಯಾಗಿದ್ದರೂ ಅವಳ ವಿಷಯದಲ್ಲಿ ನನಗೆ ಅಷ್ಟೇನೂ ಪ್ರೀತಿಯಿಲ್ಲ, ಆಸ್ಥೆಯೂ ಇಲ್ಲ... ಹಾಗೆ ನೋಡಿದರೆ ನಮ್ಮ ಮನೆಯಲ್ಲಿ ಈ ಸ್ವಭಾವದ ಹುಡುಗಿ ಹೇಗೆ ಹುಟ್ಟಿ, ಬೆಳೆದಳೆಂಬುದೇ ಆಶ್ಚರ್ಯ... ನೋಡು, ದುಡುಕಬೇಡ. Look before you leap (ಜಿಗಿ ಹೊಡೆಯುವ ಮೊದಲು ನೋಡು) –"

"ಅದನ್ನೆಲ್ಲ ವಿಚಾರಮಾಡಿದ್ದೇನೆ."

"ವಿಚಾರ ಮಾಡಿದ್ದರೆ ತೀರಿತು. ಮುಂದೆ ನನ್ನ ಮಾತೇಕೆ, ನನ್ನ ಉಪದೇಶವೇಕೆ?... ಮುಂದೇನು ಬೇಕು?" ಶ್ರೀಕಾಂತ ರುಕ್ಷವಾಗಿ ನುಡಿದ.

"ನಿನ್ನ ಸಮ್ಮತಿ...."

"ನನ್ನ ಸಮ್ಮತಿ? ಅದರ ಅವಶ್ಯಕತೆಯೇನಿದೆ? ನೀನಾಯಿತು ಅವಳಾಯಿತು. ಬೇರೆಯವರ ಸಮ್ಮತಿ, ಸಲಹೆಗಳ ಅವಶ್ಯಕತೆಯೇನು? ಲಗ್ನವೆಂದರೆ ಇಬ್ಬರ ಖಾಸಗೀ ವಿಷಯ ಎಂದು ನನ್ನ ಮತ. ನಿಮಗೆ ಲಗ್ನವಾಗಬೇಕೆಂದೆನಿಸಿದರೆ, ಉಳಿದವರು ಸಮ್ಮತಿ ಕೊಡಲಿ ಬಿಡಲಿ ಅದರ ಅವಶ್ಯಕತೆ ಇಲ್ಲ,..."

"ಆದರೂ – ನಿನ್ನ ಅನುಮತಿ – ಸಹಾನುಭೂತಿ ಬೇಕೇ ಬೇಕು ನನಗೆ....

ನಿಮ್ಮ ತಾಯಿಯವರು ಒಪ್ಪಬಹುದೇ ?"

"ನಮ್ಮ ತಾಯಿಯ ಕಾಳಜಿ ಯಾಕೆ ನಿಮಗೆ ? ಕಾಮಿನಿಗೆ ತಾಯಿಯ ಬಗ್ಗೆ ವಿಶೇಷ ಆದರವೇನೂ ಇಲ್ಲ. ತಾಯಿಯ ಮಾತಿನಂತೆ ನಡೆಯಲೇ ಬೇಕು ಎಂಬ ಕರ್ತವ್ಯ ಕಾಮಿನಿಗೆ ಕಟ್ಟಿಟ್ಟಿಲ್ಲ. ಅವಳು ಸಾಕಷ್ಟು ದೊಡ್ಡವಳಾಗಿದ್ದಾಳೆ ; ತನ್ನ ದಾರಿ ತಾನು ನೋಡಿಕೊಳ್ಳಲು ಸಮರ್ಥಳಿದ್ದಾಳೆ ; ಸ್ವತಂತ್ರಳಿದ್ದಾಳೆ... ಆದರೆ ನಿಮ್ಮ ಮನೆಯವರ ಮಾತೇನು ?"

"ಅವರು ಎಂದೂ ತಮ್ಮ ಸಮ್ಮತಿ ಕೊಡಲಾರರು... ಆದರೆ ಶ್ರೀಕಾಂತಾ, ಇಷ್ಟೇಕೆ ಈ ವಿಷಯದ ಬಗ್ಗೆ ಅನಾಸ್ಥೆಯಿಂದ ಮಾತನಾಡುತ್ತಿರುವಿ ? ನೀನು ಬೇಡವೆಂದರೆ ನಾನು–ಬೇಕಾದರೆ–" ನನ್ನ ಧ್ವನಿ ಗದ್ಗದಿತವಾಯಿತೇನೋ. ಮರಳಿ ಕಣ್ಣುಗಳಲ್ಲಿ ನೀರಿನ ಪರೆಯೊಂದು ತೂರಿ ಬಂತು.

"ಚು–ಚು–ಚು–ಬರೇ ನನ್ನ ಮಾತಿನ ಮೇಲೆ ನಿನ್ನ ಪ್ರೀತಿಯನ್ನು ಓಡಿಸಬೇಡ. ನಿನ್ನ ಪ್ರೀತಿ ದೃಢವಾಗಿದೆಯಷ್ಟೇ ?"

"ಹೌದು."

"ಹಾಗಾದರೆ ಹೆದರಿಕೆ ಯಾಕೆ ? ಅವಳ ಪೂರ್ಣ ಪರಿಚಯ ನಿನಗೆ ಆಗಬೇಕು ಎಂದು ನಾನು ಹಾಗೆಲ್ಲ ಹೇಳಿದೆ. ಅವಳ ಪೂರ್ಣ ಪರಿಚಯವಾದ ಮೇಲೂ ನಿನ್ನ ಪ್ರೀತಿ ದೃಢವಾಗಿ ಉಳಿದರೆ ಅದು ನಿಜವಾದ ಪ್ರೀತಿ :

Love is not love
which alters when it alteration finds,
Or bends with the remover to remove :
O on ; it is an ever fixed mark,
That looks on tempests and is never shaken.

ಎಂದು ಶೇಕ್ಸಪಿಯರ ಹೇಳಿದ್ದಾನೆ... ಅವಳ ಸಲುವಾಗಿ ನೀನು ಏನು ಬೇಕಾದ್ದನ್ನು ಮಾಡಲು ಸಿದ್ಧನಿದ್ದೀಯಲ್ಲವೇ ?"

"ಹೌದು," ಯಾಂತ್ರಿಕವಾಗಿ ನುಡಿದೆ.

"ಹಾಗಾದರೆ – Let me not to the marriage of true minds Admit impediments – ನಿನ್ನ ಪ್ರೇಮದ ಪರೀಕ್ಷೆ ಮಾಡಿದೆ – ಅಷ್ಟೇ... ನಿನ್ನ ಪ್ರೇಮವನ್ನು ಕಾಮಿನಿಯ ಎದುರಿಗೆ ವ್ಯಕ್ತಮಾಡಿದ್ದಿಯಾ ಅಥವಾ..."

"ಅವಳಿಗೆಲ್ಲ ಗೊತ್ತಿದೆ... ಅವಳಿಗೆ ಒಂದು ಪತ್ರವನ್ನು ಕೂಡ ಬರೆದಿರುವೆ. ಇಂದು ಮಧ್ಯಾಹ್ನ ಪ್ರತ್ಯಕ್ಷ ಮಾತು ಕೂಡಾ ಆಡಿರುವೆವು.

"ಮುಂದೆ ಅವಳೇ–ನನ್ನುತ್ತಾಳೆ ? ಅವಳೂ ನಿನ್ನನ್ನು ಪ್ರೀತಿಸುತ್ತಾಳೆಯೇ?"

"ಅದಿನ್ನೂ ನನಗೆ ಖಾತ್ರಿಯಿಲ್ಲ... ಬಾಯಿಂದ ಇನ್ನೂ ಹಾಗೆ ಹೇಳಿಲ್ಲ ಅವಳು... ಆದರೆ ಅವಳಿಗೆ ನನ್ನ ಬಗ್ಗೆ, ನನ್ನ ಪ್ರೀತಿಯ ಬಗ್ಗೆ, ಸಹಾನುಭೂತಿ ಇದೆಯೆಂದು ಮಾತ್ರ ಹೇಳಬಲ್ಲೆ. ಆದರೂ ಅವಳ ಅಂತರಂಗ ನನಗೆ ಪೂರ್ಣ ಗೊತ್ತಾಗಿದೆಯೆಂದು ನಾನು ಧೈರ್ಯವಾಗಿ ಹೇಳಲಾರೆ."

"ಯಾರಿಗೆ ಗೊತ್ತು–ಅವಳು ಬೇರೊಬ್ಬನನ್ನು ಪ್ರೀತಿಸುತ್ತಿದ್ದರೆ ?"

"ಶ್ರೀಕಾಂತನ ಶಾಂತ ವಿಶ್ಲೇಷಣೆಗೆ ನಾನು ಬೆಚ್ಚಿದೆ...

"ನನಗಂತೂ ಹಾಗೇನೂ ಅನಿಸುವುದಿಲ್ಲ. ಹಾಗಿದ್ದರೆ ನನಗೆ ಈ ಮೊದಲೇ ಅವಳು ಹೇಳುತ್ತಿದ್ದಳು.

"ಹೆಣ್ಣು–ಹೃದಯ ಹೇಳಲಿಕ್ಕೆ ಬರುವದಿಲ್ಲ. Frailty thy name is woman ಹ್ಯಾಮ್ಲೆಟನ ವಾಕ್ಯ ನೆನಪಿದೆ ತಾನೇ ? ಗೌರೀ, ಹುಷಾರಾಗಿರು !"

"ಅವೆಲ್ಲ ಇರಲಿ, ನಾನು ಅವಳನ್ನು ಲಗ್ನವಾಗುವದು ಸಾಧ್ಯವೇ ?"

"Where there is a will there is a way" (ಸಂಕಲ್ಪವಿದ್ದೆಡೆ ಹಾದಿ ಇದ್ದೇ ಇದೆ.) ನಿನ್ನ ಅವಳ ಪ್ರೀತಿ ಅಷ್ಟು ಬಲವಾಗಿದ್ದರೆ ದಾರಿ ಹುಡುಕಲು ಬಂದೀತು... ಜಾತಿಯ ಪ್ರಶ್ನೆ ಬಂದರೆ ನಾನಿದ್ದೇನೆ... ಆದರೆ ಮೊದಲು ನಿನ್ನ ಹಾಗೂ ಅವಳ ಪ್ರೇಮ ದೃಢವಾಗಲಿ–ಆದರೆ ಅದನ್ನು ದೃಢಪಡಿಸಲು ನನ್ನಿಂದ ಮಾತ್ರ ಏನೂ ಸಹಾಯ ಕೇಳಬೇಡ.... ನಿಮ್ಮದನ್ನು ನೀವೇ ನೋಡಿಕೊಳ್ಳಿರಿ. ಎಲ್ಲ ನಿಶ್ಚಿತವಾದ ಮೇಲೆ ನನ್ನೆಡೆಗೆ ಬಾ. ಆಮೇಲೆ ಮುಂದಿನ ದಾರಿಯ ವಿಷಯವನ್ನು ಯೋಚಿಸುವ...."

ನನಗೆ ಅತ್ಯಾನಂದವಾಯಿತು. ಶ್ರೀಕಾಂತನ ಬಡಕಾಗುತ್ತ ನಡೆದ ಕೈಗಳನ್ನು ನನ್ನ ಕೈಯಲ್ಲಿ ತೆಗೆದುಕೊಂಡು ಮೃದುವಾಗಿ ಹಿಚುಕಿದೆ :

"ಶ್ರೀಕಾಂತಾ, ಎಷ್ಟು ಅಶಕ್ತನಾಗುತ್ತಿರುವೆಯಲ್ಲ... ನಾವು ಆದಷ್ಟು ಬೇಗನೆ ವಾನಲೆಸ್‌ವಾಡಿಗೆ ಹೋಗುವದೊಳಿತು. ಮೊದಲೇ ನಿಶ್ಚಿತಮಾಡಿದಂತೆ ಈ ರವಿವಾರ ಹೋಗುವದು ಖಂಡಿತ ತಾನೇ ?"

"ಹುಂ.... ಇದೇನು ಮಿತ್ರನ ಕಾಳಜಿಯೋ ಭಾವನ ಕಾಳಜಿಯೋ ?"

"ಎರಡರಲ್ಲಿಯೂ ಪರಸ್ಪರ ವಿರೋಧವಿಲ್ಲ ತಾನೇ ?... ಶ್ರೀಕಾಂತ, ಕಾಮಿನಿಯನ್ನು ಲಗ್ನವಾಗಿ ನಿನ್ನ ಪ್ರಕೃತಿಯ ಕಾಳಜಿ ತೆಗೆದುಕೊಳ್ಳುವದಕ್ಕಿಂತ ಹೆಚ್ಚಾದ ಕಾರ್ಯ ನನಗೆ ಈ ಜಗತ್ತಿನಲ್ಲಿ ಬೇರೊಂದಿಲ್ಲ.... ನಿನ್ನ ಸುಖವೆಂದರೆ ನನ್ನ ಸುಖ ನಮ್ಮ ಈ ಲಗ್ನದಿಂದ ನಾವೆಲ್ಲ ಎಷ್ಟು ಸುಖವಾಗಿರಬಹುದು

ಗೊತ್ತಿದೆಯೇ ?"

"ಹುಚ್ಚ – ಗೌರೀ, ನೀನು ಕನಸುಣಿ–ಸತ್ಯ ಜಗದ ಪರಿವೆ, ಅರಿವು ನಿನಗಿಲ್ಲವಿನ್ನೂ... ಬರಿಯ ಹೂವಿನಂತಹ ಕನಸುಗಳನ್ನು ಕಟ್ಟುವುದರಲ್ಲಿಯೇ ನಿನ್ನ ವೇಳೆಯನ್ನು ಕಳೆಯುತ್ತಿರುವಿ.... ಜೀವನವೆಂದರೆ ಭೂಮಿತಿಯಂತೆ ಸರಳರೇಖೆಗಳ ಆಕೃತಿಯೆಂದು ತಿಳಿದಿಯೇನು ? ಹುಚ್ಚನಿದ್ದೀ ನೀನು... ನೀನಿನ್ನೂ ಬೆಳೆಯಬೇಕು, ಜಗತ್ತಿನ ಬಗ್ಗೆ, ಜನರ ಬಗ್ಗೆ, ನಿನ್ನ ತಿಳುವಳಿಕೆ ಬೆಳೆಯಬೇಕು... ನೀನಿನ್ನೂ ಹುಡುಗ..."

"ಅದ್ಕೆಂದೇ ನಿನ್ನ ಸಹವಾಸ, ನಿನ್ನ ಬಾಂಧವ್ಯ ನನಗೆ ಅವಸ್ಯ...."

"ಗೌರೀ, ನಿನ್ನ ಮೇಲೆ ನನ್ನ ಮಮತೆ ಎಷ್ಟಿದೆ ಗೊತ್ತಿದೆಯಾ ? ....ನಿನ್ನ ಒಳ್ಳೆಯದನ್ನೇ ನಾನು ಹಾರೈಸುತ್ತೇನೆ. .....ನೀನು ಮುಂದೆ ನಿನ್ನ ಸರ್ವಾಂಗೀಣ ವ್ಯಕ್ತಿತ್ವವನ್ನು ಬೆಳೆಸಬೇಕು, ನಂತರ ಸುಖವಾಗಿ ಸಂಸಾರ ಸಾಗಿಸಬೇಕು, ಎಂದೇ ನನ್ನ ಆಶೆ... ಆದರೆ ಕಾಮಿನಿ ನಿನಗೆ ತಕ್ಕ ಹೆಂಡತಿಯಲ್ಲ... ನಿನ್ನಲ್ಲಿದ್ದ ಎಲ್ಲ ಕರ್ತೃತ್ವಶಕ್ತಿಯನ್ನು ಅವಳು ಹಿಂಡಿ ಒಗೆಯಬಹುದು... ಅವಳಿಗೆ ತನ್ನನ್ನು ಯಾವಾಗಲೂ ಪ್ರಶಂಸಿಸುವ ಗಂಡ ಬೇಕು. ಅವಳ ಹೆಬ್ಬೆರಳಿನ ಕೆಳಗೆ ಕುಂಯ್ಗುಡದೇ ಇರುವಂಥ ಮೆತ್ತನ್ನ ಪೆದ್ದ ಬೇಕು. ಅವಳ ನೂರೆಂಟು ಆಶೆ–ಹಂಬಲಗಳನ್ನು ಪೂರೈಸುವ ರೊಕ್ಕಸ್ಥ ದೊಡ್ಡ ಪಗಾರದ ಆಫೀಸರ್ ಬೇಕು... ನೋಡು, ನೀನೇ ವಿಚಾರಮಾಡಿ ನೋಡು... ಅಷ್ಟನ್ನೂ ಮೀರಿ ಅವಳೇ ನಿನಗೆ ಬೇಕು, ಅವಳಿಲ್ಲದೆ ಎಲ್ಲ ಜೀವನ ಹಾಳು ಎಂದು ಮುಂತಾಗಿ ನಿನಗೆ ಅನಿಸಿದರೆ, ನಿನ್ನ ದಾರಿಯು ಮಂಗಳದಾಯಕವಾಗಲಿ ಎಂದೇ ನಾನು ಆಶಿಸುವೆ, ಹಾರೈಸುವೆ... ಗೌರೀ, ಸಮಾಧಾನವಾಯಿತೇ ಈಗ?... ಅದು ನೋಡು ಒಂದು ಹೊಡೆಯಲು ಬಂದಿದೆ–ಹೊಸ ದಿನ ಸುರುವಾಗಿದೆ – ಕತ್ತಲಲ್ಲಿ !"

ಶ್ರೀಕಾಂತ ನಿಟ್ಟುಸಿರೊಂದನ್ನು ಬಿಟ್ಟ, ಕಿಡಕಿಯ ಹೊರಗಿನ ಕತ್ತಲಲ್ಲಿ ತನ್ನ ದೃಷ್ಟಿಯನ್ನು ನೆಟ್ಟ, "ಒಳ್ಳೇದು, ರಾತ್ರೆ ಬಹಳವಾಯಿತು... ಹೋಗಿ ಮಲಗಿಕೋ..."

ನನ್ನ ಕಂಠ ನನಗೆ ಗೊತ್ತಿಲ್ಲದೆ ತುಂಬಿ ಬಂದಂತಾಯಿತು.

ಶ್ರೀಕಾಂತ ! ಕತ್ತಲೆ ! ಹೊಸ ದಿನ !

* * *

ಒಂದು ಪ್ರಶಸ್ತವಾದ ಮನೆ. ಆ ಮನೆಯಲ್ಲಿ ಸುಂದರವಾದ ಕೋಣೆ. ಆ ಕೋಣೆಯ ನಡುಮಧ್ಯದಲ್ಲಿ ಒಂದು ಸುಂದರವಾದ ಮಂಚ. ಸುತ್ತಲೂ ಒಳ್ಳೊಳ್ಳೆಯ ಕಲಾಕೃತಿಗಳು. ಆ ಕೋಣೆಯ ಮೂಲೆಯಿಂದ ಸಂಗೀತ ಲಹರಿಲಹರಿಯಾಗಿ

ಬರುತ್ತಿದೆ. ಹೊರಗೆ ಕತ್ತಲೆಕತ್ತಲೆಯಿದ್ದರೂ ಮಸುಕಾಗಿ ಕಾಣುವ ತೋಟ ತಂಗಾಳಿ... ಕಾಮಿನಿಯ ದುಂಡಾದ ತೋಳುಗಳು ನನ್ನ ಕತ್ತನ್ನು ನೇವರಿಸಿವೆ ನಾನು ಅವಳ ಗದ್ದವನ್ನ, ಕುರುಳುಗಳನ್ನು ತೀಡುತ್ತಿರುವೆ. ಅವಳ ಪುಷ್ಪವಾದ ಸ್ತನಗಳ ಬೆಚ್ಚಗಿನ ಕೋಮಲತೆ ನನ್ನ ಅಂಗಾಂಗಳಲ್ಲಿ ವಿದ್ಯುತ್ತಿನಂತೆ ಹರಿಯುತ್ತಿದೆ... 'ಕಾಮಿನಿ, ಕಾಮಿನಿ... ನನ್ನ ಕಾಮಿನಿ, ನನ್ನ ಪ್ರಿಯೆ... my love, my darling ನನ್ನ ದೇವತೆ... ನನ್ನ ರಾಕ್ಷಸಿ....' ಹೌದು, ಅಷ್ಟರಲ್ಲಿ ಕಾಮಿನಿ ರಾಕ್ಷಸಿಯಂತೆ ಹುಬ್ಬುಗಳನ್ನು ಮೇಲೇರಿಸಿ, ತನ್ನ ಉದ್ದವಾದ ನಖಗಳನ್ನು ಕ್ರೂರವಾಗಿ ನನ್ನ ಕತ್ತಿನಲ್ಲಿ ಚುಚ್ಚುತ್ತಾಳೆ... ಆದರೂ ನನಗೆ ಅದರಿಂದ ಸಮಾಧಾನವೇ ಹೊರತು ಸಿಟ್ಟು ಬರುವುದಿಲ್ಲ. ಒಮ್ಮೆಲೇ ಉದ್ದೀಪಿತನಾಗಿ ಅವಳನ್ನು ಗಟ್ಟಿಯಾಗಿ ಅಪ್ಪಿ ಅವಳ ಮುಖದ ಪ್ರತಿಯೊಂದು ಭಾಗದ ಮೇಲೆ ಮುತ್ತುಗಳ ಸುರಿಮಳೆಗರೆಯುತ್ತೇನೆ.... 'ಕಾಮಿನಿ ನೀನು ಏನು ಮಾಡಿದರೂ ನಿನ್ನನ್ನು ಬಿಡುವದಿಲ್ಲ... ಸತ್ತರೂ ಬಿಡುವದಿಲ್ಲ,' ಎಂದು ನನ್ನಷ್ಟಕ್ಕೆ ಗುಣಗುಣಿಸುತ್ತ ನಿದ್ದೆ ಹೋದೆ... ಕತ್ತಲಲ್ಲಿ, ಏಕಾಕಿ!

ನನ್ನ ಆತ್ಮದ ಏಕಾಕಿತನ ಬಹುಶಃ ಆಗಲೇ ಸುರುವಾಗಿರಬೇಕು. ಸಾವಕಾಶವಾಗಿ ಶ್ರೀಕಾಂತನ ಆಸರೆ ಸಡಿಲಾಗಲು ಸುರುವಾಯಿತು. ಅವನು ತನ್ನದೇ ಆದ ಅತಿ – ಪ್ರಜ್ಞೆಯ ಜಗತ್ತಿನಲ್ಲಿ ಮಗ್ನನಾಗಲು ಪ್ರಾರಂಭಿಸಿದ... ಕಾಮಿನಿಯ ಪ್ರೇಮ ಇನ್ನೂ ಅಮೂರ್ತವಾಗಿಯೇ ಇದ್ದುದರಿಂದ ಅದರ ಅನಿಶ್ಚತತೆ ನನ್ನ ಹೃದಯವನ್ನು ಕ್ರಿಮಿಯಂತೆ ತಿನ್ನತೊಡಗಿತು... ನಾನು ಎತ್ತ ಹೋಗುತ್ತಿರುವೆ, ಎಲ್ಲಿಗೆ ಮುಟ್ಟುವೆ ಎಂಬುದನ್ನು ಕಲ್ಪಿಸುವುದು ಕೂಡ ಆಗ ಶಕ್ಯವಿದ್ದಿಲ್ಲ...

ಸದ್ಯ ಶ್ರೀಕಾಂತನ ಪ್ರಕೃತಿಯ ಕಾಳಜಿ ತೆಗೆದುಕೊಳ್ಳುವದೊಂದೇ ನನ್ನ ಕರ್ತವ್ಯ ಎಂದು ನಿಶ್ಚಯಿಸಿದೆ.

* * *

ನಾವು ವಾನಲೆಸ್‌ವಾಡಿಗೆ ಹೋಗುವ ಮುಂಚಿನ ದಿನ ರೋಹಿಣಿ ಸೂಟಿ ಮುಗಿಸಿ ಮರಳಿದಳು. ಅವಳು ಸೂಟಿಯಲ್ಲಿ ತಂದೆ–ತಾಯಿಯವರೊಡನೆ ಪುಣೆ–ಮುಂಬಯಿಗಳಿಗೆ ಹೋಗಿ ಬಂದಿದ್ದಳು....

"ಶ್ರೀಕಾಂತ, ನಾನೂ ಬರಲೇನು ವಾನಲೆಸ್‌ವಾಡಿಗೆ?" ರೋಹಿಣಿ ಮುಕ್ತ ಮನಸ್ಸಿನಿಂದ ಕೇಳಿದಳು.

"ನೋ, ಥ್ಯಾಂಕ್ಸ್," ಎಂದಿಷ್ಟೇ ನುಡಿದ ಶ್ರೀಕಾಂತ.

"ನನ್ನ ತಂದೆ–ತಾಯಿಯವರಿಗೆ ಹೇಳಿರುವೆ..."

"ಏನು ?"

"ನನ್ನ ಪ್ರೇಮದ ಬಗ್ಗೆ...."

"ಯಾರ ಮೇಲೆ ಪ್ರೇಮ ?"

"ವಾಹ್ – ನಿನ್ನ ಮೇಲೆ !"

ಶ್ರೀಕಾಂತ ನಕ್ಕ. "ನಿನ್ನ ತಲೆ ಕೆಟ್ಟಿದೆಯೇನು ?" ಎಂದು ಕೇಳಿದ.

"ಇದ್ದರೆ ಕೆಡುವ ಪ್ರಶ್ನೆ...." ನಾನು ಬಾಯಿ ಹಾಕಿದೆ,

"ಯಾಕೆ ಗೌರೀಶ. ನನಗೆ ತಲೆಯೇ ಇಲ್ಲವೇ ? ತಲೆ ಇಲ್ಲದಿದ್ದರೂ ಹೃದಯವಿದೆ... ಆದುದರಿಂದಲೇ ಶ್ರೀಕಾಂತನಿಗೆ ಏನೇ ಆದರೂ ನನ್ನ ಪ್ರೇಮ...."

"ಸಾಕು ನಿನ್ನ.... ಅದು ಏನೇ ಇರಲಿ, ನಿನ್ನ ಟ್ರಿಪ್ಪು ಹೇಗಾಯಿತು ? ಪುಣೆ–ಮುಂಬಯಿಯಲ್ಲಿ ಯಾರೂ ಸಿಗಲಿಲ್ಲವೇ ನಿನಗೆ ನಿನ್ನ ಪ್ರೇಮವನ್ನು ತೂಗುಹಾಕಲು?" ಶ್ರೀಕಾಂತ ನಗುತ್ತ ನುಡಿದ.

"ನೋಡು, ಪುಣೆಯಲ್ಲಿ ನಮ್ಮ ಮಾಂಶಿಯ ಮನೆಯ ನೆರೆಮನೆಯಲ್ಲಿ ಒಬ್ಬ ಸುಂದರ ತರುಣನಿದ್ದಾನೆ. ರಾಮೂ ಕಾಪ್ಸೆ – ಅವನ ಹೆಸರು. ಅವನು ಮೂರು–ನಾಲ್ಕು ಸಲ ನನ್ನೊಡನೆ ಮಾತಾಡಲು ಯತ್ನಿಸಿದ... ಆಮೇಲೆ ಮುಂಬಯಿಯಲ್ಲಿ... ಹಾಂ, ಎಂಥ ಮಂದಿ ಮುಂಬೆ ಜನರು !... ನಾನು ಸಿನೇಮಾಕ್ಕೆ ಒಬ್ಬ ಗೆಳತಿಯೊಡನೆ ಹೋಗಿದ್ದೆ. ಬದಿಗೆ ಕುಳಿತ ಯಾವನೋ ಲಫಂಗ – ಒಳ್ಳೆಯ ಡ್ರೆಸ್ಸು ಹಾಕಿದ್ದ ಮತ್ತೆ – ನನ್ನ ಕಾಲಿಗೆ ಕಾಲು ತಾಕಿಸಬೇಕೇ – ಆನಂತರ ಸಾವುಕಾಶ ನನ್ನ ತೊಡೆಯ ಮೇಲೆ ಕೈಯಿಡಬೇಕೇ.... ?

"ರೋಹಿಣಿ ಸ್ವಲ್ಪ ತಾಯಿಯ ಹತ್ತಿರ ಹೋಗಿ ಚಹಾ ಮಾಡಿಸಿಕೊಂಡು ಬಾ ನೋಡೋಣ." ಶ್ರೀಕಾಂತನ ಆಜ್ಞೆ,

ಅವಳು ಆಜ್ಞಾಧಾರಕ ಹೆಂಡತಿಯಂತೆ ಒಮ್ಮೆಲೆ ನಗುತ್ತ ಒಳಗೆ ಹೋದಳು.

ಅವಳು ಹೋಗುವದೇ ತಡ ನಾವಿಬ್ಬರೂ ಒಬ್ಬರನ್ನೊಬ್ಬರು ನೋಡಿ ನಕ್ಕೆವು...

* * *

ವಾನಲೆಸ್‌ವಾಡಿಯಲ್ಲಿ ಡಾ. ವಿಲ್ಸನರ ಚಿಕಿತ್ಸೆಯಂತೆ ಉಪಚಾರ ಸುರುವಾಯಿತು. ಕಡಿಮೆ ಕಡಿಮೆ ಎರಡು ತಿಂಗಳವರೆಗೆ ಇರಬೇಕಾಗುವದೆಂದು ಅವರು ಹೇಳಿದರು.

"ಗೌರೀ, ನಿನ್ನ ಕಾಲೇಜು ಸುರುವಾಗುವದಿಲ್ಲವೆ ? ನೀನು ಹೋಗು ಮರಳಿ ಧಾರವಾಡಕ್ಕೆ, ಅಂ ?" ಎಂದ ಶ್ರೀಕಾಂತ.

"ಲೆಕ್ಚರ್ಸು ಸುರುವಾಗಲು ಇನ್ನೂ ಒಂದು ತಿಂಗಳಾದರೂ ಬೇಕು. ಪ್ರಾಕ್ಟಿಕಲ್ಸಿಗೆ ಎರಡು ತಿಂಗಳು... ಒಂದು ತಿಂಗಳ ಮಟ್ಟಿಗಂತೂ ನಾನಿಲ್ಲಿ ಇರುವೆ."

ಸರಲಾಬಾಯಿಯವರಿಗೆ ಹಾಯೆನಿಸಿತು.... "ಗೌರೀಶ, ನಿನ್ನ ಉಪಕಾರ ಹೇಗೆ ತೀರಿಸಬೇಕೋ ತಿಳಿಯದು."

"ಮಾಂಶೀ, ಮರಳಿ ಉಪಕಾರದ ಮಾತು ತೆಗೆದಿರಲಿಲ್ಲ..." ಎಂದೆ ನಾನು.

* * *

ಒಂದು ತಿಂಗಳವರೆಗೆ ಶ್ರೀಕಾಂತನ 'ನರ್ಸಾದೆ'... ಆ ಸ್ನೇಹ–ಸಹವಾಸದಲ್ಲಿ ಒಂದು ಬಗೆಯ ಉದಾತ್ತತೆಯಿತ್ತು, ಕಂಪಿಸುವ ಕಳಕಳಿಯಿತ್ತು, ಒಂದು ಬಗೆಯ ಸಾರ್ಥಕತೆಯಿತ್ತು. ನನ್ನ ನಿಸ್ವಾರ್ಥತೆಯ ಮೂಲಕವೋ ಏನೋ ಒಂದು ಬಗೆಯ ಶಕ್ತಿ – ಅಭಿಮಾನ ನನ್ನಲ್ಲಿ ಮನೆಮಾಡತೊಡಗಿದ್ದವು. ಶ್ರೀಕಾಂತ ಖಂಡಿತವಾಗಿ ಸುಧಾರಿಸಿರಲಿರುವನೆಂಬ ಭರವಸೆ ಇದ್ದುದರಿಂದ ಮೊದಲಿನ ಚಿಂತೆ ಇಲ್ಲವಾಗಿತ್ತು. ಎಲ್ಲ ಸುಸೂತ್ರವಾಗುವದು, ಸದ್ಯ ತಾಳ್ಮೆಯಿಂದ ಶಾಂತವಾಗಿ ಇದ್ದು ಕರ್ತವ್ಯ ಮಾಡಿದರೆ ಸಾಕು...

ಶ್ರೀಕಾಂತನಿಗೆ ಡಾಕ್ಟರರು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳಿದ್ದರಿಂದ, ಅವನ ಓದು ಕಡಿಮೆಯಾಯಿತು – ಮಾತು ಹೆಚ್ಚಾಯಿತು. ಅವನ ಮಾತುಗಳಲ್ಲಿ ಮರಣದ ವಿಷಯ ಆಗಾಗ್ಗೆ ಹಣಕಿ ಹಾಕಿದರೂ ಅದರ ಬಗ್ಗೆ ಅವನಲ್ಲಿ ವಸ್ತುನಿಷ್ಠತೆ ಬಂದಂತೆ ಅನಿಸಿತು. ಉದಾಹರಣೆಗಾಗಿ, ಅವನ ಮೂರು ನಾಲ್ಕು ಸಂಭಾಷಣೆಗಳನ್ನು ಹೀಗೆ ಸಂಕ್ಷೇಪಿಸಬಹುದು :

"ಅಲ್ಲೋ ಗೌರೀಶ !.... ಚಾರ್ಲ್ಸ್ ಲ್ಯಾಂಬನ 'Convale scnce' ಎಂಬ ನಿಬಂಧವನ್ನು ಓದಿರುವೆಯಾ? ಅದರಲ್ಲಿ ಲ್ಯಾಂ ಹೇಳುವದೇನೆಂದರೆ : ಕಾಯಿಲೆ ಬಿದ್ದ ಮನುಷ್ಯ ಅತಿಶಯ ಸ್ವಾರ್ಥಿಯಾಗುತ್ತಾನೆ ; ಅವನ ದೇಹವೇ ಅವನ ಸಕಲ ವಿಶ್ವವಾಗುತ್ತದೆ; ಉಳಿದ ಎಲ್ಲ ವ್ಯವಹಾರಗಳಿಗೆ ಅವನ ಬುದ್ಧಿ ಕುರುಡಾಗುತ್ತದೆ... ಅದೆಲ್ಲ ಸುಳ್ಳು ಎಂದು ನನಗನಿಸುವದು. ನಿಜವಾಗಿ ನೋಡಿದರೆ ಜಗತ್ತಿನ ಜೀವನದ ಮುಖ್ಯ ಪ್ರಶ್ನೆಗಳ ಬಗ್ಗೆ ಮನುಷ್ಯನಲ್ಲಿ ತೀಕ್ಷ್ಣ ಪ್ರಜ್ಞೆಯುಂಟಾಗುವದು ಆತ ಕಾಯಿಲೆ ಬಿದ್ದಾಗಲೇ ಎಂದು ನನಗನಿಸುವದು. ಕಾಯಿಲೆಯಿಂದ ಹಾಸಿಗೆಯಲ್ಲಿದ್ದಾಗಲೇ ಆತನಿಗೆ ಮನುಷ್ಯನ ಅಲ್ಪತೆ ಹಾಗೂ ನಿಃಸಹಾಯತೆಗಳ ಅರಿವು ಚನ್ನಾಗಿ ಆಗುವದು... ಹಾಗೂ ಜೀವನ – ಮರಣದ – ಮುಖ್ಯವಾಗಿ ಮರಣದ ವಿಷಯ ಆತನಿಗೆ ಚುಚ್ಚುವಷ್ಟು ಬೇರಾರಿಗೂ ಚುಚ್ಚುವದಿಲ್ಲ... ಗೌರೀ, ಈ 'ಮರಣ'ದ ಬಗ್ಗೆ ವಿಚಾರ ಮಾಡಿ ನನ್ನ ತಲೆ

ಕೆಡುವ ಪ್ರಸಂಗ ಬಂದಿದೆ. ಒಂದು ವೇಳೆ ನಾನು ನೆಟ್ಟಗಿದ್ದರೆ ನಾನು ಒಂದು discourse ಅಥವಾ platonic dialogue ಒಂದನ್ನು ಬರೆಯದೇ ಇರುತ್ತಿರಲಿಲ್ಲ... ಮರಣದ ಬಗ್ಗೆ ಯೋಚಿಸಿ ಯೋಚಿಸಿ ಈಗ ಅದರ ವಿಷಯದಲ್ಲಿದ್ದ ಭೀತಿಯೇ ಹೋಗಿಬಿಟ್ಟಿದೆ... ಸ್ವಲ್ಪದರಲ್ಲಿ ನನ್ನ ವಿಚಾರಗಳಿಂತಿವೆ ; ಮರಣವೆಂದರೇನು? 'ನಾನು', 'ನನ್ನತನ' ಎಂಬುದರ ಅರಿವು ಇಲ್ಲವಾಗುವದು... ನಾನು ಸತ್ತಕೂಡಲೇ 'ನನ್ನತನ' 'ನಾನು' ಎಂಬುವದು ಮಾಯವಾಗುವದು. ಆದುದರಿಂದ 'ನಾನು ಸತ್ತೆ', 'ನನ್ನ ಜೀವ ಹೋಯಿತು', ಎಂದು ನನಗೆ ಅನಿಸಲಾರದು... ನನಗೆ ಅದರ ಅರಿವು ಕೂಡಆಗಲಾರದು. ಆದ್ದರಿಂದ ಯಾವ ಅನುಭವದ ಅರಿವು ನನಗಾಗುವುದಿಲ್ಲವೋ ಆ ಅನುಭವ ನನ್ನ ಪಾಲಿಗೆ ಇಲ್ಲವೇ ಇಲ್ಲ... ಆದ್ದರಿಂದ ನನ್ನ ಸಾವಿನ ಬಗ್ಗೆ ನಾನು ಹೆದರುವ ಕಾರಣವೇ ಇಲ್ಲ... ಇನ್ನು ಉಳಿದವರಿಗೆ ಕೊಂಚ ದುಃಖವಾಗುವದು. ಆದರೆ ಆ ದುಃಖದ ಅರಿವು ಸಹ ನಾನು ಸತ್ತನಂತರ ನನಗಾಗದು. ಯಾಕೆಂದರೆ 'ನಾನು' – ಎಂಬ ಪ್ರಜ್ಞೆಯೇ ಇರುವುದಿಲ್ಲವಲ್ಲ ಈ ಜಗತ್ತಿನಲ್ಲಿ.... ಆದ್ದರಿಂದ ನನ್ನ ಸಾವು 'ನನ್ನ'ದಲ್ಲ 'ನನ್ನ'ದಲ್ಲದುದರ ಸಂಗತಿಗೆ ನಾನೇಕೆ ಚಿಂತಿಸಬೇಕು ?... ತಿಳಿಯಿತೇನು ನನ್ನ ವಾದ.

"ಅಲ್ಲ, ಶ್ರೀಕಾಂತಾ, ನೀನು ದಿನಾಲು ಮರಣದ ಬಗ್ಗೆ ಇಷ್ಟೇಕೆ ವಿಚಾರ ನಡೆಸುತ್ತಿರುವಿ ? ನೀನೇನು ಸಾಯಲಿಕ್ಕೆ ಹೊರಟಿಲ್ಲ... ನೀನು ಖಂಡಿತವಾಗಿ ಗುಣಹೊಂದುವಿ ಎಂದು ನನಗೆನಿಸುವದು. ಡಾಕ್ಟರರು ಸಂಪೂರ್ಣ ಭರವಸೆ ಕೊಟ್ಟಿದ್ದಾರೆ." ನನ್ನ ವಾದ ಸರಣಿ.

"ಈಗ ಗುಣ ಹೊಂದಿದರೇನು, ಕೊನೆಗೊಮ್ಮೆ ಎಂದಾದರೊ ಸಾಯುವದು ಇದ್ದೇ ಇದೆ ತಾನೆ ? ಮನುಷ್ಯ ಈ ಮರಣದ ಪ್ರಶ್ನೆಯನ್ನು ಎದುರಿಸಲೇಬೇಕು... ಈ ಜೀವನ ಅನಿತ್ಯ. ಮರಣದ ನಂತರ ಎಲ್ಲವೂ ಶೂನ್ಯದಲ್ಲಿ ಕರಗುವದು ಎಂಬ ಅರಿವು ಪ್ರತಿಯೊಬ್ಬ ಮನುಷ್ಯನಿಗೆ ಇರುವದು ಅಗತ್ಯ. ನನಗೆನಿಸುವ ಮಟ್ಟಿಗೆ ಈ ಮೃತ್ಯು – ಶೂನ್ಯತೆಯ ಅರಿವು ತೀವ್ರವಿದ್ದರೆ ಜಗತ್ತಿನಲ್ಲಿ ಇಷ್ಟೊಂದು ಅಸಹ್ಯತನ, ಲಾಲಸೆ, ಸ್ವಾರ್ಥ, ದುಃಖ, ಕೌರ್ಯ ಇರುತ್ತಿರಲಿಲ್ಲ. ಎಲ್ಲರೂ ಒಂದು ಒಡೆದ ಹಡಗದಲ್ಲಿ ತೇಲುತ್ತಿದ್ದಾರೆ ಎಂಬ ಭಾವನೆ ಎಲ್ಲರಲ್ಲಿದ್ದರೆ, ಎಲ್ಲರಲ್ಲಿಯೂ ಒಂದು ಬಗೆಯ ಭ್ರಾತೃಭಾವನೆ ಬಂದೇ ಬರುವದು. ಬರ್ಟ್ರಾಂಡ್‌ರಸೆಲನ 'Free man's Worship' ಎಂಬ ನಿಬಂಧ ಓದು, ಚನ್ನಾಗಿದೆ, ಕಾವ್ಯಮಯವಾಗಿದೆ. ಅದರಲ್ಲಿ ಆ ಮಹಾತತ್ವಜ್ಞಾನಿ ಇದೇ ಮಾತನ್ನೇ ಹೇಳಿದ್ದಾನೆ. ನಿನಗೊಮ್ಮೆ ಓದಿತೋರಿಸುವೆ – ನೆನಪು ಮಾಡು... ರಸಲನ

ಪ್ರತಿಮೆ ಬೇರೆ ಇದೆ : ಮಾನವೀ ಜೀವನ ಅದೃಶ್ಯವೈರಿಗಳಿಂದ ತುಂಬಿದ ಕಾಳರಾತ್ರಿಯಲ್ಲಿ ಸಾಗಿದೆ.... ಯಾವ ಗುರಿಗೋ ಏನೋ... ಮೃತ್ಯು-ಶೂನ್ಯತೆಯ ಪ್ರಜ್ಞೆ ಇದ್ದರೆ, ಕಾಳರಾತ್ರಿಯಲ್ಲಿ ಅದೃಶ್ಯನಾಗುವ ಮೊದಲು, (ಅಥವಾ ಅಪಾರ ಸಾಗರದ ಒಡಲಲ್ಲಿ ಸೇರುವ ಮುಂಚೆ) ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ, ಕೆಲವು ಕಾಲ ಮೋಜಿನಿಂದ, ಆನಂದದಿಂದ, ಪ್ರೀತಿಯಿಂದ, ಶ್ರದ್ಧೆಯಿಂದ, ಸಹಾನುಭೂತಿಯಿಂದ, ಜೀವಿಸುವ ಬುದ್ಧಿ ಬರುವದು... ಆದುದರಿಂದಲೇ ನಾನು ಹೇಳುವದು : ಪ್ರತಿಯೊಬ್ಬನಿಗೂ ತನ್ನ ಮರಣದ ತೀವ್ರ ಅರಿವು ಇರಬೇಕು ಎಂದು... ಅಷ್ಟೇ ಅಲ್ಲ, ಈ ಪ್ರಚಂಡ ವಿಶ್ವದ ಹಿನ್ನೆಲೆಯಲ್ಲಿ ಮನುಷ್ಯ ತನ್ನನ್ನು ತಾನು ಅಳೆದುಕೊಳ್ಳಬೇಕು ; ತಾನು ಎಷ್ಟು ಕ್ಷುಲ್ಲಕ, ನಿಃಸಹಾಯನಿದ್ದೇನೆ ಎಂಬುದರ ಕಲ್ಪನೆ ಇರಬೇಕು. ಅದರ ಅರ್ಥ ತನ್ನಲ್ಲಿದ್ದ ಆತ್ಮಶ್ರದ್ಧೆಯನ್ನು ಕಳೆದುಕೊಂಡು, ಹೇಡಿಯಾಗಿ ನಿರಾಶಾವಾದಿಯಾಗಿ ಇರಬೇಕೆಂದಲ್ಲ... ನಾನು ಹೇಳುವದು ನಿರಾಶಾವಾದವಲ್ಲ, ಸತ್ಯವಾದ (realism) .... ವಿಶ್ವದ ಪ್ರಚಂಡತೆ, ಪ್ರಕೃತಿಯ ಕುರುಡತನ, ಮೃತ್ಯು-ಶೂನ್ಯತೆ, ಈ ಮೂರು ವಿಷಯಗಳ ಅರಿವು ಅವನಿಗೆ ಚನ್ನಾಗಿದ್ದರೆ ಆತ ನಿಜಕ್ಕೂ ಒಳ್ಳೇ ಜೀವನವನ್ನು ಸಾಗಿಸುವ. ಆತನಲ್ಲಿ ಸ್ವಾರ್ಥ-ಲಾಲಸೆಗಳು ಕಡಿಮೆಯಾಗುವವು ; ಪ್ರೀತಿ – ಸಹಾನುಭೂತಿ – ತಿಳುವಳಿಕೆಗಳು ಬೆಳೆಯುವವು ಜೀವನದ ಬಗ್ಗೆ ಒಂದು ಬಗೆಯ ನಿರ್ಲಿಪ್ತತೆ ಬರುವದು. ಈ ನಿರ್ಲಿಪ್ತತೆ ಮನುಷ್ಯನಿಗೆ ತೀರ ಅವಶ್ಯವಾದದ್ದು. ಜಗತ್ತಿನಲ್ಲಿಯ ಎಲ್ಲ ಮಹಾಪುರುಷರಲ್ಲಿ ಕಂಡುಬರುವ ಗುಣವಿದ್ದು ; ನಿರ್ಲಿಪ್ತತೆ ! ದೊಡ್ಡ ಲೇಖಕರಲ್ಲಿಯೂ ಕವಿಗಳಲ್ಲಿಯೂ ಕಂಡುಬರುವ ದೃಷ್ಟಿಯಿದು... ಅಧ್ಯಾತ್ಮವಾದವು ಜೀವನ ದೃಷ್ಟಿಗೆ ಏನಾದರೂ ಅರ್ಪಿಸಿದ್ದರೆ, ಅದು ಈ ನಿರ್ಲಿಪ್ತತೆ !"

"ನೀನು ಹೇಳಿದ್ದೇನೋ ಸರಿಯಿದೆ. ಆದರೆ ಆ ದೃಷ್ಟಿಕೋನ ಜೀವನದ ದೈನಂದಿನ ಸಮಸ್ಯೆಗಳಿಗೆ ಉಪಯೋಗವಾಗಲಾರದು."

"ಅಂದರೆ ?" ಶ್ರೀಕಾಂತನ ಕುತೂಹಲ ಕೆರಳಿತು.

"ಅಂದರೆ ವ್ಯಕ್ತಿ, ಸಮಾಜಗಳ ಸಮಸ್ಯೆ ವ್ಯಕ್ತಿಯ ದಿನದ ವ್ಯವಹಾರದಲ್ಲಿ ಬರುವ ಸಣ್ಣ ಪುಟ್ಟ ಸಮಸ್ಯೆಗಳು – ಉದಾ : ಮಾನವೀ ಸಂಬಂಧಗಳು : ತಂದೆ, ತಾಯಿ, ಬಂಧು, ಭಗಿನಿ, ಹೆಂಡತಿ, ಗಂಡ, ಮಗ, ಮೇಲಿನ ಅಧಿಕಾರಿ, ಕೈಕೆಳಗಿನ ಜನರು, ಗೆಳೆಯ, ಗೆಳತಿ, ಮುಂತಾದ ಮಾನವೀ ಸಂಬಂಧಗಳ ವಿಷಯದಲ್ಲಿ, ಸಮಾಜ ರಚನೆಯ ವಿಷಯದಲ್ಲಿ ನೀನು ಹೇಳಿದ ದೃಷ್ಟಿಕೋನ... ಉಪಯೋಗ ಬೀಳಲಾರದು... ಹಾಗೂ ಮೃತ್ಯುವಿನ ಬಗ್ಗೆ ಆದಷ್ಟು

ದುರ್ಲಕ್ಷ್ಯಮಾಡಿದರೇನೆ ನಾವು ಸುಖವಾಗಿ, ಆಶಾವಾದಿಗಳಾಗಿ ಇರಬಹುದು..."

"ನನ್ನ ದೃಷ್ಟಿಕೋನವೇ ನಿನಗೆ ತಿಳಿದಿಲ್ಲವೆಂದು ತೋರುತ್ತದೆ, ಗೌರೀಶ ! ನಾನೂ ಹೇಳುವದು ಅದನ್ನೇ – ನಿನ್ನ ಮಾನವೀ ಸಂಬಂಧಗಳಾಗಲಿ, ಸಮಾಜರಚನೆಯಾಗಲಿ ಜೀವನದ ಕೆಲವೊಂದು ಮೂಲಭೂತ ಮೌಲ್ಯಗಳ ಮೇಲೆ ನಿಲ್ಲಬೇಕಷ್ಟೇ ? ಜೀವನವನ್ನು ಸಮಗ್ರದೃಷ್ಟಿಯಿಂದ ನೋಡಿದಾಗಲೇ ಆ ಮೌಲ್ಯಗಳು ನಮಗೆ ಸ್ಪಷ್ಟವಾಗಿ ಎದ್ದುಕಾಣುವವು. ಜೀವನದ ಎಲ್ಲ ಕುಂದು-ಕೊರತೆಗಳನ್ನು ಕಣ್ಣು ತೆಗೆದು ನೋಡಿದಾಗಲೇ ನಮಗೆ ಈ ಮೌಲ್ಯಗಳ ಅವಶ್ಯಕತೆ ತಿಳಿಯುವದು... ಆದುದರಿಂದಲೇ ನಾನು ಹೇಳಿದ್ದು, ಜೀವನದ ಭಯಂಕರ ದೊಡ್ಡ ಮರ್ಯಾದೆಯಾದ ಮರಣವನ್ನು ಪ್ರತಿಯೊಬ್ಬನೂ ಕಣ್ಣುತೆರೆದು ನೋಡಿ, ಅದರೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕು –"

* * *

ಇಂದು ಸಂಜೆ ನಾನು ತಿರುಗಾಡಲು ಹೋಗಬೇಕೆನ್ನುವಷ್ಟರಲ್ಲಿ ಸತ್ಯೇಂದ್ರ ಬಂದ. ಅವನನ್ನು ನೋಡಿದೊಡನೆ ಸಮಾಧಾನದ ತೆರೆ ಏರಿ ಬಂತು.

"ವಾಹ್, ಗೌರೀಶ, ಏನು ನಮ್ಮ ಮನೆಯತ್ತ ಒಮ್ಮೆಯೂ ಹಾಯಬಾರದೇ? ನಾಲ್ಕೈದು ದಿನಗಳಾದವು ನಮ್ಮ ಭೆಟ್ಟಿಯಾಗಿ. ನೀನೂ ವಿಲಕ್ಷಣ ಮನುಷ್ಯಪ್ಪ... ನಿನ್ನ ಈ ಆತ್ಮಚರಿತ್ರೆಯ ರಾಡಿಯಲ್ಲಿಯೇ ಒದ್ದಾಡುತ್ತ ಬೀಳುವುದರಲ್ಲಿಯೇ ಎಲ್ಲ ವೇಳೆ ಕಳೆಯಬೇಕೆನ್ನುವಿಯೇನು?... ನನ್ನ ಸಾದಾ ಸೂಚನೆಯೊಂದನ್ನು ನೀನು ಇಷ್ಟು ಸಿರಿಯಸ್ಸಾಗಿ ತೆಗೆದುಕೊಳ್ಳಬಹುದೆಂದು ನನಗನಿಸಿರಲಿಲ್ಲ...?"

"I'm sorry – ನಿಜಕ್ಕೂ ಇಂದು-ನಾಳೆ ಇಷ್ಟರಲ್ಲಿಯೇ ನಿನ್ನೆಡೆಗೆ ಬರಬೇಕೆನ್ನುತ್ತಿದ್ದೆ. ಸುಶೀಲಕ್ಕನಿಗೆ ಮುಖ ತೋರಿಸದೆ ಒಂದು ಯುಗವಾಯಿತು... ಎರಡು-ಮೂರು ಸಂಜೆ ಡಾಲಿ ಬಂದಳು... ಉಳಿದ ಎಲ್ಲ ಸಂಜೆಗಳನ್ನು ನಾನು ಬರೆಯುವದರಲ್ಲಿ ಕಳೆದೆ. ಬರವಣಿಗೆಯೆಂದರೆ ಮೈಯಲ್ಲಿ ಭೂತ ಹೊಕ್ಕಂತೆ ನೋಡು!"

"ಅದಿರಲಿ, ನಾನು ಬಂದದ್ದು ಎರಡು ವಿಷಯಗಳ ಸಲುವಾಗಿ. ಒಂದು: ನೀನು ಸಿರ್ಸಿಗೆ ಹೋಗುವದರ ಬಗ್ಗೆ ಏನು ವಿಚಾರಮಾಡಿರುವಿ?"

"ಈ ರವಿವಾರ ನಾನು ಹೋಗಲಿರುವೆ..."

"ಗುಡ್, ಆ ರೀತಿ ನಿಮ್ಮ ತಂದೆಯವರಿಗೆ ಪತ್ರ ಬರೆದಿಯೇನು?"

"ಇಲ್ಲ. ಹೋಗುವದಕ್ಕಿಂತ ಮೊದಲು ಒಂದು ತಾರು ಕೊಟ್ಟರಾಯಿತು ಎಂದು ಬಿಟ್ಟಿರುವೆ."

"ನಾಟ್ ಸೊ ಗುಡ್... ನಾನು ಈಗಾಗಲೇ ಉತ್ತರ ಬರೆದಿರುವೆ.... ನೀನು ಬರಲಿರುವಿ, ಸರ್ವಪ್ರಯತ್ನ ಮಾಡಿ ನಾನು ಕಳಿಸಿಕೊಡುವೆನೆಂದು."

"ಮುಂದೆ ನಿನ್ನ ಎರಡನೆಯ ವಿಷಯವೇನು ?"

"ಅದು ಸ್ವಲ್ಪ ಡೆಲಿಕೇಟ್, ಸೂಕ್ಷ್ಮ ವಿಷಯ... ಗೌರೀಶ, ಮೊನ್ನೆ ಶಶಿಕಲೆ ಭೆಟ್ಟಿಯಾಗಿದ್ದಳು. ಅವಳು ನನ್ನ ಕಡೆಯಿಂದ ನಿನ್ನ ಪತ್ತೆ ತೆಗೆದುಕೊಂಡಳು... ಹಾಗೂ ನಿನ್ನ ಬಗ್ಗೆ ಎಲ್ಲ ತರದ ಚೌಕಸಿ ಮಾಡಿದಳು... ನಿನ್ನ ಲಗ್ನದ ಬಗ್ಗೆ ಸಹ ಕೇಳಿದಳು."

"ನೀನೇನು ಹೇಳಿದಿ ?"

"ಆಫ್ರಿಕೆಯಲ್ಲಿ ವಧು ಹುಡುಕಲಿರುವೆ ಎಂದು ಹೇಳಿದೆ."

"ಥ್ಯಾಂಕ್ಸ !"

"ಆಮೇಲೆ ನಾನು ಅವಳ ಲಗ್ನದ ಬಗ್ಗೆ ಕೇಳಿದೆ."

"ಹೀಗೇನು ?"

"ಹುಂ–ಅವಳ ಲಗ್ನವಾಗಿಲ್ಲವಂತೆ ಇನ್ನೂ."

"Poor thing ! ಪಾಪ ! ಮುಂದೆ ?"

"ಇಂದು ನಮ್ಮ ಆಫೀಸಿಗೆ ಅವಳ ಕಕ್ಕನೋ ಯಾರೊ ಬಂದಿದ್ದ. ನನಗೆ ಸ್ಪಷ್ಟ ಕೇಳಿದ : 'ನೀವು ಗೌರೀಶ ಉಪಾಸನಿಯವರ ಮಿತ್ರರಂತೆ, ನಮ್ಮ ಶಶಿಕಲೆಗೆ ಗೌರೀಶನ ಮೇಲೆ ಬಹಳ ಮನಸ್ಸು. ಒಂದೇ ಕ್ಲಾಸಿನಲ್ಲಿ ಎಮ್.ಎಸ್‌ಸಿಯಲ್ಲಿ ತಾನೇ ಅವರು ಕೂಡಿ ಇದ್ದುದ್ದ... ಇದ್ದ ಬಳಿಕ ಸ್ವಲ್ಪ ಗೆಳೆತನ ಬೆಳೆಯಿತೆಂದು ಕಾಣುತ್ತದೆ.... ಈಗೇನೋ ಆಫ್ರಿಕೆಗೆ ಹೋಗಲಿರುವನಂತೆ, ಒಳ್ಳೆಯ ಪಗಾರಿನ ಕೆಲಸದ ಮೇಲೆ. ಶಶಿಕಲೆಗೂ ಆಫ್ರಿಕೆಯ ಬಗ್ಗೆ ಉತ್ಸಾಹ... ಸ್ವಲ್ಪ ನೀವು ಪ್ರಯತ್ನ ಮಾಡಿದರೆ ಕೂಡಿ ಬರುವಂತಿದೆ ನೋಡಿರಿ,' ಎಂದೇನೇನೋ ಹೇಳಿದ... ಅದಕ್ಕೆ ನಿನ್ನದೇನು ಉತ್ತರ?"

"ಸಾರಿ, ಅವಳನ್ನು ಲಗ್ನವಾಗುವದು ಶಕ್ಯವಿಲ್ಲ.... ಲಗ್ನ ನನಗೆ ಬೇಕಿಲ್ಲ–"

"ಯಾಕೆ, ಡಾಲಿಯಂಥ ಹುಡುಗಿಯರು ಸಿಕ್ಕರೆ ಜೀವನ ಸುಸೂತ್ರ ಸಾಗುವದೆಂದು ನಿನ್ನ ನಂಬಿಗೆಯೇ ?"

"ಜೀವನ ಸುಸೂತ್ರ ಸಾಗಿಸುವ ವಿಚಾರವಿಲ್ಲ ನನಗೆ."

"ವಾಹ್ ! ನನಗೆನಿಸಿತ್ತು, ನಿನ್ನ ಸ್ಥಿತಪ್ರಜ್ಞೆಯ ಮೂಡಿನಲ್ಲಿ ಶಶಿಕಲೆಗೆ ಹುಂ ಎನ್ನಬಹುದೆಂದು... ಇಲ್ಲಿ ನೋಡು, ನೀನು ಸುಮ್ಮನೇ ಹುಚ್ಚನಂತೆ

ಬುದ್ಧಿಯ ವಿರುದ್ಧ ವರ್ತಿಸುವದು ತರವಲ್ಲ ಶಶಿಕಲೆಯೂ ಎಮ್.ಎಸ್‌ಸಿ. ಅವಳೂ ನಿನ್ನೊಡನೆ ಏನಾದರೂ ನೌಕರಿ ಮಾಡಬಹುದು. ಅವಳು ಕಾಣಿಸಲಿಕ್ಕೆ ಸುಂದರಳಲ್ಲದಿದ್ದರೂ – ನಿನ್ನ ಕಾಮಿನಿಯಂತೆ ಅವಳು ಅಷ್ಟೇನೂ ಕೆಟ್ಟೇನಿಲ್ಲ. ಅವಳ ತಿಳುವಳಿಕೆ, ಜ್ಞಾನ... ಮುಖ್ಯ ವ್ಯವಹಾರಜ್ಞಾನ ಇವುಗಳ ಬಗ್ಗೆ ಪ್ರಶ್ನೆಯೇ ಇಲ್ಲ. ನಿನ್ನನ್ನು ತಾಯಿಯಂತೆ ನೋಡಿಕೊಳ್ಳಬಲ್ಲಳವಳು ನಿನ್ನಂಥ... ನಾನು ಸ್ಪಷ್ಟ ಮಾತನಾಡುತ್ತೇನೆಂದು ಕೆಟ್ಟನಿಸಿಕೊಳ್ಳಬೇಡ... ನಿರ್ಬಲ, ಚಂಚಲ, ಅವ್ಯವಸ್ಥೆಯ ತವರುಮನೆಯಾದ ವ್ಯಕ್ತಿತ್ವಕ್ಕೆ ಸಬಲ ಸಹಾನುಭೂತಿಯ ಅವಶ್ಯಕತೆ ಯಾವಾಗಲೂ ಇದೆ... ನನ್ನ ಮಾತುಕೇಳು. ಅವಳ ಜೊತೆಗೆ ನೀನು ಖಂಡಿತವಾಗಿ ಸುಖಿಯಾಗುವಿ... ನಿನ್ನ ಜೀವನ ಸುಸೂತ್ರವಾಗುವದು.... ನಿನ್ನ ಪ್ರತಿಭೆಗೆ, ಶಕ್ತಿಗೆ ಸೃಜನಶೀಲ ದಾರಿ ಸಿಕ್ಕೀತು..."

"ನೀನು ಹೇಳುವದೆಲ್ಲ ನಿಜ ಸತ್ಯೇನ್. ಆದರೆ ಮನುಷ್ಯ ಬರಿಯ ವಿವೇಕದ ಸ್ಪ್ರಿಂಗಿನ ಮೇಲೆ ನಡೆಯುವ ಯಂತ್ರವಲ್ಲ. ಎಷ್ಟೇ ಅರ್ಗುಮೆಂಟ್ಸ ಹೇಳಿದರೂ, ನನ್ನ ಬುದ್ಧಿಗೆ ಪಟಾಯಿಸಿದರೂ, ಶಶಿಕಲೆಯೊಡನೆ ಜೀವನ ಜೀವಿಸುವದು ಶಕ್ಯವಿಲ್ಲ..., ನನಗೆ ಯಾರೂ ಬೇಡ ; ನನ್ನ ಏಕಾಕಿತನ ನನಗೆ ಬೇಕು ; ನನ್ನ ಮುಕ್ತಿ ನನಗೆ ಬೇಕು. ಸಾಕು – 'ಮುಗಿಯಿತಿನ್ನು ಈ ಜಗದ ಬಂಧ !' – ಯಾರ ಬಂಧನವೂ ಬೇಡ... ಯಾರ ಒಂದು ವರ್ಷದ ನಿತ್ಯದ ಸಹವಾಸದಲ್ಲಿ ನನ್ನ ಹೃದಯ ಒಂದು ಸಲವೂ ಜೋರಿನಿಂದ ಸ್ಪಂದಿಸಿಲ್ಲವೋ, ಅಂಥವಳ ಸಹವಾಸವಂತೂ ಮೊದಲೇ ಬೇಡ... ಒಂದು ವೇಳೆ ಜೀವನ ಅಸಹ್ಯವಾದರೆ ಡಾಲಿಯನ್ನು ಕಾಲಬಿದ್ದು ಕರೆದೊಯ್ದೇನೇ ಹೊರತು, ಶಶಿಕಲೆಯನ್ನು – ಅವಳ ಜ್ಞಾನಭಾಂಡಾರ, ದೇಹ ಭಾಂಡಾರ, ದ್ರವ್ಯ ಭಾಂಡಾರ ಎಲ್ಲವನ್ನೂ ನನ್ನೆದುರಿಗೆ ಸುರುವಿದರೂ – ಅವಳನ್ನು ನಾನು ಒಯ್ಯುವದು ಶಕ್ಯವಿಲ್ಲ..."

"ಸಾಕುಮಾಡು ನಿನ್ನ ಕಾವ್ಯ ! ನೀನು ಆಕಾಶದಲ್ಲಿ ವಿಹರಿಸುವ ಮೋಡಗಳಲ್ಲಿ ಜೀವಿಸುತ್ತಿಲ್ಲ. ಈ ಸತ್ಯಸೃಷ್ಟಿಯ ವ್ಯವಹಾರೀ ಜಗತ್ತಿನಲ್ಲಿ ಇರುವಿ... ನಿನ್ನ ಮುಕ್ತಿಯ ಸಲುವಾಗಿ ಸುಮ್ಮನೆ ಹಿಮಾಲಯಕ್ಕೆ ಹೋಗಿ ತಪಶ್ಚರ್ಯ ಮಾಡು... ಹಾಂ, ಹಾಗೆ ನೋಡಿದರೆ ಆಫ್ರಿಕೆಯಲ್ಲಿಯ ಕಿಲಿ ಮಂಜಾರೋದಲ್ಲಿಯೂ ತಪಶ್ಚರ್ಯ ಮಾಡಬಹುದೆನ್ನು.. ರಾಯ್ಟ! ಮುಖ್ಯ–ನನ್ನ ಎರಡನೆಯ ಪ್ರಶ್ನೆಗೆ ನಿನ್ನ ಉತ್ತರ: ನೋ... ಇಲ್ಲ....ವೆಂದೇ ಅಲ್ಲವೇ ? ಮುಗಿಯಿತು... ಒಣ ಚರ್ಚೆ ಯಾಕೆ ?...."

"ಚರ್ಚೆ ಸುರುಮಾಡಿದವನೇ ನೀನು !"

"ತಪ್ಪಾಯಿತು... ಏನು ನನ್ನ ಸ್ವಂತ ಹಿತಕೋಸ್ಕರ ಚರ್ಚೆ

ಸುರುಮಾಡಿದೆನಲ್ಲವೇ?"

"ಹಿತ ! ಹಿತ !! ಹಿತವೆಂದರೇನು ? ಯಾಕಾರೆ ಬೇಕು ಹಿತ ?... ಅಥವಾ ಪ್ರತಿಯೊಬ್ಬನ ಹಿತದ ಕಲ್ಪನೆ ಬೇರೆ ಇರಬಹುದಷ್ಟೇ ?"

"ಹೌದು, ನನ್ನದೇ ತಪ್ಪು... ನೀನು ಅತಿಮಾನವ ! ಮಾನವರಿಗೆ ಅನಿಸುವ ಹಿತ ನಿನಗೆ ಕಃಪದಾರ್ಥ ! ನಿನ್ನ ಹಿತ ಅದೇನೋ ಸ್ವರ್ಗದಿಂದ ಇಳಿದು ಬಂದ ರಮ್ಯ ಕಲ್ಪನೆ !.. ಅದೇನೇ ಇರಲಿ. ಮುಗಿಯಲಿ ಚರ್ಚೆ ಇಲ್ಲಿಗೆ... ಇನ್ನೇನು ?... ಮನೆಯ ಕಡೆಗೆ ಬರುವೆಯಾ ಇಂದು ?... ನಡೆ, ಒಣ ವಾದಕ್ಕಿಂತ ಒಳ್ಳೆಯ ರುಚಿ ರುಚಿಯಾದ ಊಟ ಮೇಲು..."

"ಕ್ಷಮಿಸು, ಸತ್ಯೇನ್. ಇಂದು ರಾತ್ರೆ ಡಾಲಿ ಬರುವವಳಿದ್ದಾಳೆ. ಚರ್ನಿ ರೋಡಿನ ತನಕ ಬಂದು ಊಟ ಮಾಡಿ ಮರಳಿ ಇಲ್ಲಿಗೆ ಬರುವಷ್ಟರಲ್ಲಿ ಡಾಲಿ ಬಂದು ಹೋಗಬಹುದು.... ಅನ್ಯಾಯ... ನಾಳೆ ಬರುವೆ, ಆಗದೇ ?"

* * *

ಡಾಲಿ ಹೋಗಿ ಅರ್ಧ ತಾಸಾಗಿದೆ. ಕಣ್ಣು ಜಡವಾಗಿವೆ. ಆದರೆ ನಿದ್ದೆ ಬಂದಿಲ್ಲ. ಅಂಗಾಂಗಗಳಲ್ಲಿ ಆಲಸ್ಯ ತುಂಬಿದೆ. ಒಂದು ಬಗೆಯ ವಿಲಕ್ಷಣ ಸುಸ್ತು ಬಂದಿದೆ. 'ಆತ್ಮ ಸಿದ್ಧವಿದೆ, ದೇಹ ಸಿದ್ಧವಿಲ್ಲ,' ಎಂಬ ವಿಚಿತ್ರ ಸ್ಥಿತಿಯಲ್ಲಿರುವೆ... ಮಾನವನಿಗೆ ಸ್ವ ಪ್ರಜ್ಞೆಯೆಂಬ ಶಾಪ ಯಾಕೆ ಉಂಟೋ ? ಉಳಿದ ಪ್ರಾಣಿಗಳಂತೆ, ನಿಸರ್ಗದತ್ತ ಬಯಕೆಗಳ ಪಾತಳಿಯ ಮೇಲೆ, ಆಹಾರ–ನಿದ್ರಾ–ಮೈಥುನಗಳ ಸರಳ ಜೀವನ ನಮ್ಮ ಪಾಲಿಗೆ ಯಾಕೆ ಇಲ್ಲವೋ?....

"ಗೋರಿ I think I love you ..... ನಿನ್ನನ್ನು ಪ್ರೀತಿಸತೊಡಗಿರುವೆ ನಾನು – ಎಂದೆನಿಸುವದು..."

"ಗೋರಿ, ನನ್ನನ್ನು ಬಿಟ್ಟು ಹೋಗಬೇಡ..."

ಅವಳ ಈ ಮಾತುಗಳು – ತೃಪ್ತಿಯ ನಿಶೆಯಲ್ಲಿ ನುಡಿದ ಮಾತುಗಳು – ನನ್ನ ರಕ್ತದಲ್ಲಿ ಇನ್ನೂ ಪಿಸುನುಡಿಯುತ್ತಿವೆ, ಹೃದಯದಲ್ಲಿ, ಅಲ್ಲ, ತಲೆ ಬುರುಡೆಯಲ್ಲಿ ಮಾರ್ದನಿಗೊಳ್ಳುತ್ತಿವೆ...

* * *

"ಕಾಮಿನಿ, ನಿನ್ನ ಯತ್ನ – ನನ್ನನ್ನು ಪ್ರೀತಿಸಲು ನೀನು ಮಾಡಲಿದ್ದ ಯತ್ನ – ಎಲ್ಲಿಯವರೆಗೆ ಬಂದಿದೆ ?"

ನಿನ್ನ ನೆನಪು ನನ್ನ ಹೃದಯದಲ್ಲಿ ಸದೈವ ಪ್ರಜ್ವಲಿಸುತ್ತಿದೆ...

ದಯವಿಟ್ಟು ನನ್ನನ್ನು ಕೊಲ್ಲಬೇಡ – ಚೆಲ್ಲಬೇಡ...

ನಿನ್ನ ಬಗ್ಗೆ ನನ್ನ ತಲೆಯಲ್ಲಿ ಎಷ್ಟೇ ಸಂಶಯಭೂತಗಳಿದ್ದರೂ ನಾನು ಅವುಗಳಿಗೆ ಎಳ್ಳಷ್ಟೂ ಎಡೆಗೊಡಲಾರೆ. ಪ್ರೇಮಕ್ಕೆ ಎರಡು ಕಣ್ಣು : ಒಂದು ಸಹಾನುಭೂತಿ, ಮತ್ತೊಂದು ಕ್ಷಮಾಬುದ್ಧಿ...

ನಿನ್ನ ಸಲುವಾಗಿ, ನಿನ್ನ ಪ್ರೇಮದ ಸಲುವಾಗಿ ನಾನು ಏನು ಮಾಡಲೂ ಸಿದ್ಧ. ಪ್ರೇಮದ ಹೃದಯ : ತ್ಯಾಗ..."

ಈ ವಿಚಾರಗಳುಳ್ಳ ಒಂದು ಉದ್ದ ಪತ್ರ ವಾನ್‌ಲೆಸ್‌ವಾಡಿಯಿಂದ ಕಾಮಿನಿಗೆ ಬರೆದೆ.

ಅವಳ ಉತ್ತರ ಬರಲಿಲ್ಲ.

ಶ್ರೀಕಾಂತನಿಗೊಂದು ಅವಳ ಪತ್ರ ಬಂತು, ಅದರ ಆಶಯ ಹೀಗಿತ್ತು :

"ನಾನೀಗ ಅಭ್ಯಾಸ ಮಾಡಲು ಸುರು ಮಾಡಿರುವೆ. ಸಂಸ್ಕೃತ ವಿಷಯದಲ್ಲಿ ಪ್ರೊ. ಶರ್ಮಾ ಅವರ ಸಹಾಯ ತೆಗೆದುಕೊಳ್ಳುತ್ತಿರುವೆ...

ನಿನ್ನ ಪ್ರಕೃತಿಯ ಬಗ್ಗೆ ಎಲ್ಲರೂ ಕೇಳುತ್ತಾರೆ...

ಎಂಟು ದಿವಸಗಳಿಂದ 'ಕಮ್ಯುನಿಸ್ಟ ಸರ್ಕಲಿ'ಗೆ ಗೆಳತಿಯ ಒತ್ತಾಯದ ಮೂಲಕ ನಾನು ಹೋಗುತ್ತಿರುವೆ. ಕಾಮ್ರೆಡ್ ಆಚಾರ್ಯರ ವಕ್ತೃತ್ವ, ಅವರ ವ್ಯಕ್ತಿತ್ವ, ಅವರ ಬುದ್ಧಿವಂತಿಕೆ ಆಗಾಧವಾದವುಗಳು.... ಅವರ ಮಾತು ಕೇಳಿದರೆ ನೀನು ಸಹ ಕಮ್ಯುನಿಸ್ಟನಾಗಬಹುದಿತ್ತು. ಕಮ್ಯುನಿಸ್ಟ ಪಕ್ಷದ ತತ್ವಗಳು ಹಾಗೂ ಪಕ್ಷದ ಕಾರ್ಯಕ್ರಮ ಬಹಳೇ ಆಕರ್ಷಣೀಯವಾಗಿವೆ. ಜಾಗತಿಕ ಕ್ರಾಂತಿ, ಹೊಸ ಸಮಾಜರಚನೆ, ಸಮತ್ವ, ಸರ್ವಾಂಗೀಣ ಉನ್ನತಿ ಇಂಥ ಆದರ್ಶಗಳು ಯಾರ ಹೃದಯವನ್ನೂ ಉತ್ತೇಜಿತಗೊಳಿಸದಿರಲಾರವು. ನೀನು ಸೋಶಿಯಲಿಜಮ್ಮದ ಬಗ್ಗೆ ಮಾತನಾಡುತ್ತಿದ್ದಾಗ ನಾನಿನ್ನೂ ಸ್ವಲ್ಪ ಸಣ್ಣವಳಿದ್ದೆ. ನಿನ್ನ ವಿಚಾರಗಳ ಮಹತ್ವ ನನಗೆ ಆಗ ಗೊತ್ತಿರಲಿಲ್ಲ... ಈಗ ನಾನೂ ಸಹ ರಾಜಕೀಯ ಕ್ಷೇತ್ರದಲ್ಲಿ ಸ್ವಲ್ಪ ಆಸ್ಥೆಯಿಂದ ಏನಾದರೂ ಕಾರ್ಯಮಾಡಬೇಕು ಎಂಬ ಇಚ್ಛೆ ಉಂಟಾಗುತ್ತಿದೆ. ಇದರ ಬಗ್ಗೆ ನಿನ್ನ ಅಭಿಪ್ರಾಯವೇನು?...

"ಗೌರೀಶನಿಗೆ ನನ್ನ ಸಪ್ರೇಮ ವಂದನೆಗಳು..."

ಅವಳ ಈ ಪತ್ರ ಓದಿ ನಮ್ಮಿಬ್ಬರಿಗೂ ಅತ್ಯಾಶ್ಚರ್ಯವಾಯಿತು. ಕೂಡಲೇ ಶ್ರೀಕಾಂತನ ವಿಶ್ಲೇಷಣೆ ಸುರುವಾಯಿತು :

"ಇದೆಲ್ಲ ಹಂಬಗ್... ಹುಚ್ಚು... ಅಣ್ಣನ ಬಗ್ಗೆ ಇದ್ದ ಅಂತರಿಕ, unconscious ಮತ್ಸರದಿಂದ ಅವನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಏನಾದರೂ ಮಾಡಬೇಕೆಂಬ ಇಚ್ಛೆ ಅವಳದು – ತಿಳಿಯಿತೆ ? ಅವಳ ತಾರುಣ್ಯದ ಅಸ್ವಸ್ಥತೆಗೆ,

ಏನಾದರೂ ಮಾಡಬೇಕೆನ್ನುವ ಹುಚ್ಚು ಹಂಬಲಕ್ಕೆ ಕಮ್ಯುನಿಜಮದಲ್ಲಿ ಆಶ್ರಯ ಅಥವಾ ಅಭಯಸ್ಥಾನ ಸಿಕ್ಕಂತೆ ತೋರುತ್ತದೆ. ಮುಖ್ಯವಾಗಿ ಅವಳ super-ego ದ ಬೆಳವಣಿಗೆಯಾಗಿಲ್ಲ. ಅವಳಲ್ಲಿ ಇನ್ನೂ ಬಾಲ್ಯದ ಬೇಜವಾಬದಾರಿತನ ಹಾಗೆಯೇ ಇದೆ... ಅದಕ್ಕೂ ಈ ಕಮ್ಯುನಿಜಮದಲ್ಲಿ ಒಳ್ಳೆಯ ಅವಕಾಶವಿದೆ..."

ಈ ಕಾಮ್ರೆಡ್ ಆಚಾರ್ಯನೆಂದರೆ ಹುಬ್ಬಳ್ಳಿಯಲ್ಲಿಯ ಕಾಮಗಾರ ಯೂನಿಯನ್ನನ್ನು ಸ್ಥಾಪಿಸಿದವನಲ್ಲವೆ ?"

"ಹೌದು. ಅವನೇ ಆ ಲಫಂಗ ! ನಾನು ಒಂದು ಸಲ ಅವನೊಡನೆ ಚರ್ಚೆಮಾಡಿದ್ದೆ, ಎಲ್ಲ ಪ್ರಶ್ನೆಗಳಿಗೂ ಅವನಲ್ಲಿ ರೆಡಿಮೇಡ್, ಖಡಾ ಖಂಡಿತವಾದ ಉತ್ತರಗಳಿವೆ... ಅವರ ದಿಟ್ಟತನ, ಅವನ ಗರ್ವ, ಅವನ ಮೌಢ್ಯ, ಅವನ ಉತ್ಸಾಹ ನಿಜಕ್ಕೂ ಬೆರಗುಗೊಳಿಸುವಂತಹವು..."

"ಅವನ ಮದಿವೆಯಾಗಿದೆಯೇ ?"

"ಈ ಮೊಂದ ಕಮ್ಯುನಿಷ್ಟರು ಲಗ್ನವಾದಾರೆ ? ಅವರದು `glass of water theory' – ನೀರಡಿಕೆಯಾದರೆ ನೀರು ಕುಡಿಯಬೇಕು ಎಂಬ ತತ್ವದವರು."

* * *

ನನ್ನ ತಲೆಯಲ್ಲಿ ಮರಳಿ ಸಂಶಯಗಳ ಭೂತನೃತ್ಯ ಸುರುವಾಯಿತು : ಪ್ರೊ. ಶರ್ಮಾ ಇವಳಿಗೆ ಸಂಸ್ಕೃತ ಕಲಿಸುತ್ತಿರುವನಂತೆ ಸಂಸ್ಕೃತ ! 'ಬಹಳ ರೊಮ್ಯಾಂಟಿಕ್ ಇದ್ದಾರೆ', 'I like him very much', 'ಅವರ ಪರ್ಸನಾಲಿಟಿ ಕೂಡ ಚನ್ನಾಗಿದೆ'... 'ನನ್ನನ್ನು ನೋಡಿದರಂತೂ ಅರ್ಧ ಗಂಟೆಯಾದರೂ ಬಿಡುವದಿಲ್ಲ'..... ನನ್ನ ತಲೆಯಲ್ಲಿ ಕ್ರಿಮಿಗಳು ಓಡಾಡತೊಡಗಿದವು. ಈಗಿಂದೀಗಲೇ ಧಾರವಾಡಕ್ಕೆ ಹೋಗಿ... ಅಯ್ಯೋ ಏನು ಮಾಡಲಿ, ಏನು ಬಿಡಲಿ... ಹತಬುದ್ಧನಾಗಿ, ನಿರ್ವೀರ್ಯನಾಗಿ, ಕೈಚಲ್ಲಿ ಕುಳಿತೆ...

'ಕಾಮ್ರೆಡ್ ಆಚಾರ್ಯರ ವಕ್ತೃತ್ವ, ವ್ಯಕ್ತಿತ್ವ, ಅವರ ಬುದ್ಧಿವಂತಿಕೆ ಅಗಾಧವಾದವುಗಳು'... ಪ್ರೊ. ಶರ್ಮಾನಿಂದ ಕಾ. ಆಚಾರ್ಯನತ್ತ ಜಿಗಿಯಿತು ಮನವೆಂಬ ಮರ್ಕಟ ! ನಡುವೆ ನಾನು ಆಯೆಂದು ಬಾಯಿಬಿಟ್ಟು ಕುಳಿತೆ – ಕೈಚಲ್ಲಿ ಹತಬದ್ಧನಾಗಿ, ನಿರ್ವೀರ್ಯನಾಗಿ !

ಬೇಗನೆ ಧಾರವಾಡಕ್ಕೆ ಹೋಗಬೇಕು. ಪ್ರತ್ಯಕ್ಷ ಕಣ್ಣಿನಿಂದ ನೋಡಬೇಕು – ಒಂದೇ ಗುಂಡಿನಿಂದ ಶರ್ಮಾ – ಆಚಾರ್ಯರ ಜೋಡಿಯನ್ನು ಕೊಂದು ಆ ರಕ್ತದಿಂದ....

ರಕ್ತ ಕುದ್ದು ಕುದ್ದು ಹುಚ್ಚಾಯಿತು !

'ಗೌರೀಶನಿಗೆ ಸಪ್ರೇಮ ವಂದನೆಗಳು'... 'ಸಪ್ರೇಮ'?... ಈ ರೂಢಿಯ ಶಬ್ಧ – ಪ್ರೇತದಲ್ಲಿ ನಿಜವಾಗಿಯೂ ಜೀವಕಳೆ ತುಂಬೀತೇ... ಎಂದಾದರೂ, ಎಂದು ತಳಮಳಿಸಿದೆ... ಕಳವಳಿಸಿದೆ !

* * *

ಲೋಂಡಾ ಸ್ಟೇಶನ್ ಹಿಂದೆ ಬಿಟ್ಟು ಗಾಡಿ ಧಾರವಾಡದತ್ತ ಸಾಗಿತು. ರಾತ್ರೆ ನಿದ್ದೆ ಗೆಟ್ಟಿದ್ದರಿಂದ ಮೈಯಲ್ಲಿ ಎಲ್ಲಿಲ್ಲದ ಆಲಸ್ಯ. ನನ್ನ ಮೈಯನ್ನು ನಾನೇ ಮುಟ್ಟಿ ನೋಡಿದಾಗ ಸ್ವಲ್ಪ ಬೆಚ್ಚಗೆನಿಸಿತು. ಜ್ವರವೆಂದೊಡನೆ ಸ್ವಲ್ಪ ಬೆಚ್ಚಿದೆ... ಧಾರವಾಡಕ್ಕೆ ಹೋದೊಡನೆ ಎಲ್ಲಿಗೆ ಹೋಗಬೇಕು ? ಶ್ರೀಕಾಂತ ಹಾಗೂ ಅವನ ತಾಯಿ ಹೇಳಿದಂತೆ ಅವರ ಮನೆಯಲ್ಲಿಯೇ ಮುಕ್ಕಾಮು ಮಾಡಬೇಕೇ? ಅಥವಾ ಗುರುನಾಥನ ಕೋಣೆಗೆ ಹೋಗಬೇಕೆ ? ಶ್ರೀಕಾಂತನಿಲ್ಲದಾಗ ಅವರ ಮನೆಯಲ್ಲಿ ಹೋಗಿ ಇರುವದು ಯೋಗ್ಯವೇ ?... ಜನ ಏನೆಂದಾರು ?... ಕಾಮಿನಿಯ ನಿಕಟ ಸಹವಾಸ ತಾನಾಗಿಯೇ ಒದಗಿ ಬರುವಾಗ, ನನ್ನ ಸದಸದ್ವಿವೇಕಬುದ್ಧಿ ಏನೇ ಹೇಳಿದರೂ, ಜೀವ ಕೇಳೀತೇ, ರಕ್ತ ಕೇಳೀತೇ ?... ಶ್ರೀಕಾಂತ ಮರಳಿ ಬರುವ ತನಕ ಒಂದು ತಿಂಗಳ ಮಟ್ಟಿಗೆ ಅವರ ಮನೆಯಲ್ಲಿರಲು ಏನೂ ಅಡ್ಡಿ ತೋರಲಿಲ್ಲ...

ನಾನು ಅವರ ಮನೆ ಮುಟ್ಟಿ ಕದ ತಟ್ಟಿದೆ. ಬಾಗಿಲ ತೆರೆದವಳು ಅವರ ಸಂಬಂಧಿಕಳಾದ ಸುಲೂಮಾಂಶಿ. 'ಕಾಮಿನಿ ಎಲ್ಲಿ ?' ಎಂಬ ಪ್ರಶ್ನೆ ನಾಲಿಗೆಯ ತುದಿಯತನಕ ಬಂದರೂ ಅದನ್ನು ನುಂಗಿದೆ...

ಮೈ ಇನ್ನೂ ಬೆಚ್ಚಗಿದ್ದುದರಿಂದ ಊಟ ಮಾಡದೇ ಕಾಫಿ ಒಂದು ಕಪ್ಪು ಕುಡಿದು ಶ್ರೀಕಾಂತನ ಕೋಣೆಗೆ ಹೋಗಿ ಕಾಟಿನ ಮೇಲೆ ಒರಗಿದೆ. ಹೃದಯ ಬರಿದೋ ಬರಿದು ಎಂದೆನಿಸಿತು. ಗಳಿಗೆಗೊಮ್ಮೆ ನಿಟ್ಟುಸಿರ ಬಿಡುತ್ತ ಮೇಲೆ ಬಛತ್ತಿನತ್ತ ಬರಿ ದೃಷ್ಟಿ ನೆಟ್ಟು ವಿಚಾರಶೂನ್ಯನಾದೆ. ನನಗೆ ಗೊತ್ತಿಲ್ಲದೆಯೆ ಕಿವಿಗಳು ಬಾಗಿಲತ್ತ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿದ್ದವು.

ಮೂರಾಯಿತು. ನಾಲ್ಕಾಯಿತು, ಐದಾಯಿತು. ನಡುನಡುವೆ ಹತ್ತುತ್ತಿದ್ದ ಜೊಂಪಿನಲ್ಲಿ ಹರಕು–ಮುರುಕು ಹಳವಂಡ ಕನಸುಗಳು : ಕಾಮಿನಿ ಬಂದು ನನ್ನ ಹಣೆಯ ಮೇಲೆ ಮೆತ್ತನ್ನ ಮುತ್ತು ಕೊಟ್ಟಂತೆ ; ಕಾಮಿನಿ ತನ್ನ ಹೊಸ ಮಿತ್ರ ಕಾ. ಆಚಾರ್ಯರೊಡನೆ ಬಂದಂತೆ ; ಕಾಮಿನಿ... ಕಾಮಿನಿ ಎಷ್ಟೊಂದು ಪ್ರಭಾವ ಬೀರುತ್ತಾಳಲ್ಲ ನನ್ನ ಹೃದಯದ ಮೇಲೆ ! ನನ್ನ ಜೀವನದ ಮೇಲಿದ್ದ ಅವಳ ಸಾಮರ್ಥ್ಯವೆಷ್ಟು ! ಎಲ್ಲಿಂದ ಬಂತು ಅವಳಿಗೆ ಈ ಭಯಂಕರ ಶಕ್ತಿ, ನನ್ನ

ಆತ್ಮವನ್ನು ಹಿಂಡಿ ಹಿಚುಕುವ ಶಕ್ತಿ ?... ಬೇಡ, ಏನೂ ಬೇಡ ನನಗೆ... ಈಗ ಮಲಗಿದಲ್ಲಿ ಹೀಗೆಯೇ ಇದ್ದಕ್ಕಿದ್ದಂತೆ ಸತ್ತುಹೋಗಬೇಕು... ಜೀವದ ಪಕ್ಷಿ ಸಹಜವಾಗಿ ಹಾರಿ ಹೋಗಬೇಕು ! ಕಾಮಿನಿ ಬಂದು ಕದ ತೆರೆದು ನೋಡಿದಾಗ ಅವಳಿಗೆ ನನ್ನ ಪ್ರೇತ ಕಾಣಬೇಕು... ಅವಳ ಹೃದಯ ದುಃಖದಿಂದ ಉಕ್ಕೇರಿ ಬಂದು ಅವಳು ಕೂಗಬೇಕು : "ಗೌರೀಶ, ನನ್ನ ಗೌರೀಶ..." ಅವಳ ಆ ಜೀವದ ಕೂಗಿಗೆ ನನ್ನ ಪ್ರೇತದಲ್ಲಿ ಥಟ್ಟನೆ ಜೀವ ಮರುಕಳಿಸಬೇಕು, ಕಣ್ತೆರೆದು "ಕಾಮಿನೀ, ನನ್ನ ಕಾಮಿನೀ..." ಎಂದು ಸಾವಕಾಶವಾಗಿ ಪಿಸುನುಡಿಯಬೇಕು. ಕಾಮಿನಿ ತನ್ನ ಕಂಬನಿ ಹರಿಯುವ ಮೊಗವನ್ನು ನನ್ನ ಎದೆಯಲ್ಲಿ ಹತ್ತಿಕ್ಕಿ ಬಿಕ್ಕಬೇಕು... "ಗೌರೀಶ, ಎಲ್ಲಿ ಹೋಗಿದ್ದಿ ನನ್ನನ್ನು ಬಿಟ್ಟು ? ನಿನ್ನನ್ನು ಒಂದು ಕ್ಷಣವೂ ನಾನು ಬಿಟ್ಟಿರಲಾರೆ...." ಎಂದು ಮುದ್ದಿನ ಸುರಿಮಳೆಯಲ್ಲಿ ಸೂರ್ಯಪ್ರಕಾಶ ಸೂಸಬೇಕು... ಆಗ– ಆಗ– ನಾನು ಮರಳಿ ಸಾಯಬೇಕು... ಅತ್ಯಾನಂದದಿಂದ !...

ಐದೂವರೆ ಗಂಟೆಗೆ ಕದದ ಸಪ್ಪಳಾಯಿತು."

"ಗೌರೀಶ !"

ನಾನು ಎದ್ದು ಕುಳಿತೆ.

"ಅಣ್ಣನ ಪತ್ರದಲ್ಲಿ ನೀನು ನಾಳೆ ಬರಬಹುದೆಂದಿತ್ತು.'

ಶ್ರೀಕಾಂತ ಅವಳಿಗೆ ಬರೆದ ಪತ್ರ ನಾನು ಓದಿದ್ದೆ. ಅವಳು ಹೇಳುವ ಮಾತು ಸುಳ್ಳಿದ್ದರೂ, ಅವಳ ಮೃದು ಸ್ವರದಲ್ಲಿಯ ಕ್ಷಮಾಯಾಚನೆಯ ಛಾಯೆ ನನಗೆ ಹಿತವೆನಿಸಿತು....

"ಹೌದು, ಆದರೆ... ಇಂದೇ ಬಂದುಬಿಟ್ಟೆ."

"ಊಟ ಮಾಡಲಿಲ್ಲವಂತೆ !"

"ಇಲ್ಲ. ಸ್ವಲ್ಪ ಜ್ವರ ಬಂದಂತಾಗಿತ್ತು."

"ನೋಡೋಣ," ಎಂದು ಹತ್ತಿರ ಬಂದು ಕೈಮುಟ್ಟಿ ನೋಡಿದಳು.

"ಹುಂ, ಇನ್ನೂ ಮೈ ಬೆಚ್ಚಗಿದೆ."

ಅವಳ ಕೈ ಇನ್ನೂ ನನ್ನ ಕೈ ಹಿಡಿದಿತ್ತು. ನಾನು ಅವಳ ಆ ಕೈಯನ್ನು ಎಡಗೈಯಿಂದ ಬಂಧಿಸಿ ತುಟಿಯವರೆಗೆ ಒಯ್ದು ಮುದ್ದಿಸಿದೆ.

"ಇದೇನು ಔಷಧವೇ ?"

"ಹುಂ..." ಎಂದೆ.

"ಚಹಾ ಮಾಡಿ ತರಲೇ ? ಚಹದಕೂಡ ಆ್ಯಸ್ಪಿರಿನ್ ಗುಳಿಗೆ ತಂದು ಕೊಡುವೆ."

"ಒಳ್ಳೇದು."

"ಕಾಮಿನಿ, ನನ್ನ ಪತ್ರಕ್ಕೆ ಉತ್ತರವನ್ನೇಕೆ ಕೊಡಲಿಲ್ಲ?" ಚಹ ಕುಡಿಯುತ್ತ ಕೇಳಿದೆ.

"ದಾದಾನಿಗೆ ತಿಳಿಯಬಹುದೆಂದು...."

"ನಾನವನಿಗೆ ಎಲ್ಲ ಹೇಳಿರುವೆ –"

"ಆಂ? ಅದೇ ಅಂದೆ... ಆತ ನನ್ನ ಪತ್ರದಲ್ಲಿ ಏನೋ ಸೂಚಿಸಿದ್ದಾನೆ. ನಿನ್ನ ವ್ಯವಸ್ಥೆ ಚೆನ್ನಾಗಿ ಮಾಡಬೇಕೆಂದು ಹೇಳುವಾಗ 'ಗೌರೀಶನ ವ್ಯವಸ್ಥೆಯ ಬಗ್ಗೆ ನನಗೆ ವಿಶೇಷವಾಗಿ ಹೇಳಬೇಕೆಂದಿಲ್ಲ' ಎಂದು ಬರೆದಿದ್ದಾನೆ."

"ಹೀಗೇನು?" ಬಹುಶಃ ತಾಜಾ ಕಲಮಿನಲ್ಲಿ ಬರೆದಿರಬೇಕು ಶ್ರೀಕಾಂತ ಎಂದು ಕಲ್ಪಿಸಿದೆ. "ನಿಜವಾಗಿ ನೋಡಿದರೆ ನಾನು ಮತ್ತೆಲ್ಲಿಯಾದರೂ ಹೋಗಿ ಇರಬೇಕೆಂದು ಮಾಡಿದ್ದೆ."

"ಹೀಗೇನು?" ಅರ್ಥಪೂರ್ಣವಾಗಿ ನನ್ನೆಡೆಗೆ ನೋಡಿದಳು.

"ಹುಂ... ಆದರೆ... ನೀನು..."

"ಬಹಳ ಮೋಜಿನ ಸಂಗತಿಯಾಯಿತಲ್ಲವೇ? – ನೀನು, ನಾನು.... ಬೇಕಾದಷ್ಟು ಏಕಾಂತತೆ!"

ನನ್ನ ಮನಸ್ಸಿನಲ್ಲಿಯ ವಿಚಾರವನ್ನೇ ಅವಳು ಇಷ್ಟು ದಿಟ್ಟವಾಗಿ ವ್ಯಕ್ತಮಾಡಿದ್ದನ್ನು ನೋಡಿ ಅಚ್ಚರಿಯಾಯಿತು. ಅವಳ ದಿಟ್ಟತನಕ್ಕೂ ಅವಳ ಹೊಸ ಕಮ್ಯುನಿಜಮ್ ಹುಚ್ಚಿಗೂ ಏನಾದರೂ ಸಂಬಂಧ ಉಂಟೇ ಎಂದೆ ಶಂಕಿಸಿದೆ. ಅವಳ ಧ್ವನಿಯಲ್ಲಿಯ ವ್ಯಂಗ್ಯ ನನ್ನ ಹೃದಯವನ್ನು ಚಿವುಟದೇ ಹೋಗಲಿಲ್ಲ...

'Excuse me .... ನಾನು ಪಿಕ್ಚರಿಗೆ ಹೋಗಬೇಕಾಗಿದೆ..."

"ಯಾರೊಡನೆ?"

"ಕಾ. ಆಚಾರ್ಯರೊಡನೆ. ಅದೇನೋ ರಶಿಯನ್ ಪಿಕ್ಚರಂತೆ : Battle of Stalingard ...ನೀನೂ ಬರಬಹುದಿತ್ತು. ಆದರೆ... ನಿನಗೆ ಜ್ವರ..."

ಹುಂ. ಇರಲಿ... ಹೋಗಿ ಬಾ."

ಅವಳು ಹೋದನಂತರ ನನ್ನ ಅಂಗಾಂಗಗಳಲ್ಲಿಯ ಶಕ್ತಿಯೇ ಉಡುಗಿ ಹೋದಂತಾಯಿತು. ಹೋದಳು ಕಾಮಿನಿ... ಹೀಗೆಯೇ ಸದಾ ಹೋಗುತ್ತಲೇ ಇರುವವಳಿವಳು... ನದಿಯಂತೆ – ಯಾವುದೋ ಅನಾಹುತ ದತ್ತ. ಇವಳ ಹರಿಯುವ ಸ್ತ್ರೀಶಕ್ತಿಯನ್ನು ನನ್ನಿಂದ ತಡೆಯಲಾದೀತೇ? ನನ್ನಲ್ಲಿ ಅಷ್ಟು ಸಾಮರ್ಥ್ಯನಿದೆಯೇ, ಧೈರ್ಯವಿದೆಯೇ?... ಎಂದೇನೋಓ ಯೋಚಿಸುತ್ತ ಕುಳಿತೆ.

"ಯಾಕೆ, ಗೌರೀಶ, ಹೇಗಿದೆ ಈಗ?" ಸುಲೂಮಾಂಶಿಯ ಪ್ರಶ್ನೆ.

"ಈಗ ಆರಾಮಿದೆ."

"ಕಾಮಿನಿ ಸಿನಿಮಾಕ್ಕೆ ಹೋಗಿಬರುತ್ತೇನೆಂದಳು?"

"ಹೌದು."

"ಏನೋ ಅಪ್ಪಾ, ಇವಳ ರೀತಿಯೇ ಬೇರೆ... ನನಗೇನೂ ಈಗಿನ ಹುಡುಗಿಯರ ವಿಷಯವೇ ತಿಳಿಯುವದಿಲ್ಲ. ಎಷ್ಟೊಂದು ಸ್ವಾತಂತ್ರ್ಯ! ನಮ್ಮ ಕಾಲಕ್ಕೆ ಹೀಗಿರಲಿಲ್ಲ... ಎಲ್ಲ ಕಾಲೇಜಿನ ಹುಡುಗಿಯರೂ ಹೀಗೇ ಎಂದು ಕಾಣುತ್ತದೆ –"

"ಯಾಕೆ? ಕಾಮಿನಿ ಏನು ಮಾಡುತ್ತಾಳೆ?...

"ಏನಿಲ್ಲ! ಹಾಗೆ, ಬಹಳ ಒಳ್ಳೆಯ ಹುಡುಗಿ... ಮಾತುಕತೆಯಾಡಲು ಬಹಳ ಒಳ್ಳೆಯವಳು. ನನಗೆ ಬೇಸರ ಬರದಂತೆ ನೋಡಿಕೊಳ್ಳುತ್ತಾಳೆ... ಎಷ್ಟೋ ಸಲ ನನ್ನನ್ನೂ ಸಿನೇಮಾಕ್ಕೆ ಕರೆದೊಯ್ದಿದ್ದಾಳೆ..."

"ಹುಂ! ಆ ಆಚಾರ್ಯರೆಂಬುವರು ಇಲ್ಲಿ ಬರುತ್ತಾರೆಯೇ?"

"ಹಾಂ... ಅವನೇನೋ ಕಮ್ಯುನಿಸ್ಟ ಲೀಡರನಂತೆ.... ಒಳ್ಳೆಯ ಮನುಷ್ಯ... ಎಷ್ಟೋ ಸಲ ಇಲ್ಲಿ ಬಂದಿದ್ದಾನೆ. ಇಬ್ಬರ ಮಾತಿಗೂ ಕೊನೆಯೇ ಇರುವದಿಲ್ಲ. ಒಂದು ಸಲವಂತೂ ಮಾತಿನ ಗುಂಗಿನಲ್ಲಿ ಅವನಿಗೆ ಟ್ರೇನೇ ತಪ್ಪಿಹೋಯಿತು. ಆ ರಾತ್ರೆ ಇಲ್ಲಿಯೇ ಇರಬೇಕಾಯಿತವನಿಗೆ... ಬಹಳ ಹುಷಾರ ಮನುಷ್ಯ !"

ಅವಳ ಮಾತಿನಲ್ಲಿ ವ್ಯಂಗ್ಯ ಎಲ್ಲಿಯೂ ಕಾಣಬರಲಿಲ್ಲ...

* * *

ಆ ದಿನಗಳ ಪ್ರತಿಯೊಂದು ಕ್ಷಣವನ್ನೂ ನಾನು ಚಿತ್ರಿಸಬಲ್ಲೆ. ಜೀವನವನ್ನು ಇಷ್ಟು ಉತ್ಕಟವಾಗಿ ಜೀವಿಸಿದ್ದು ಆಗಲೇ. ಪ್ರೇಮಕ್ಕಿಂತಲೂ ಅದರ ಮೂಲಕ ಉಂಟಾಗುವ ಅಸೂಯೆಯೇ ಜೀವನಕ್ಕೆ ಉತ್ಕಟತೆಯನ್ನು ಒದಗಿಸುತ್ತದೆ ಎಂಬ ಮಾತು (ಪ್ರೊ ಸ್ಟನ ತತ್ವ) ನಾನಾಗ ಕಲಿತೆ!

ಉತ್ಕಟತೆ ಜೀವನ ಮೌಲ್ಯವಾಗಬಹುದೇ?

.... ಈಗ ... ಉತ್ಕಟತೆ ಬೇಡ : ಜೋಗ ಧಬೆಧಬೆ ಬೇಡ ; ಜೀವನ ಶಾಂತವಾಗಿ ಸರಳವಾಗಿ ಹರಿದರೆ ಸಾಕು, ಅಥವಾ ಹರಿಯದಿದ್ದರೂ ನಡೆಯುವದು. ಸರೋವರದ ಸ್ತಬ್ಧತೆ, ನಿಶ್ಚಲತೆ ಬೇಕು... ಆಕಾಶದಲ್ಲಿ ಸತತ ನಡೆಯುವ ನಕ್ಷತ್ರ–ಚಂದ್ರ–ಸೂರ್ಯ–ಮೋಡ – ಮಿಂಚುಗಳ ನಾಟಕವನ್ನು ನೋಡುತ್ತ ನಿಶ್ಚಲವಾಗಿ ಮಲಗಿದೆ ನೀರಿನಂತೆ ಜೀವಿಸಿದರೆ ಸಾಕು, ಎಂಬ ನಿರ್ಧಾರಕ್ಕೆ ಬಂದಿರುವೆ.

ಇಂಥ ನಿಶ್ಚಲತೆ, ಸ್ತಬ್ಧತೆ, ಮುಕ್ತಿ ಆಫ್ರಿಕೆಯಲ್ಲಿ – ನನಗೆ ಏನೂ ಸಂಬಂಧವಿಲ್ಲದ ಸ್ಥಾನದಲ್ಲಿ, ಜನರಲ್ಲಿ, ಪ್ರಕೃತಿಯಲ್ಲಿ, ದೊರೆಯಬಹುದೆಂದು ಆಶಿಸಿದ್ದೇನೆ, ಅಪೇಕ್ಷಿಸಿದ್ದೇನೆ. ಅಲ್ಲಿ ನಾನು ಕಲಿಸಲಿರುವ ವಿಷಯಗಳೂ ಗಣಿತ, ಫಿಜಿಕ್ಸ, – ಮಾನವ ಹೃದಯದ ಭಾವನೆ – ವಿಕಾರಗಳಿಂದ ದೂರವಿರುವ ವಿಷಯಗಳು...

ಮುಂಬಯಿಯ ಈ ಮಧ್ಯಾಹ್ನದ ಸೆಕೆಯಲ್ಲಿ ತಲೆಯಲ್ಲಿ ಇದ್ದುದೆಲ್ಲ ಉಗಿಯಾಗಿ ಹೋಗುತ್ತಿರುವಂತೆ ಅನಿಸುತ್ತದೆ. ಬೆವರಿನ ಜೊತೆಗೆ ನಾನೇ ಕರಗಿ ನೀರಾಗಿ ನಿಲ್ಲಬಾರದೇಕೆ?

ಈ ಕ್ಷಣ, ಇದೆಲ್ಲ. ಈ ಆತ್ಮನಿವೇದನೆಯೆಲ್ಲ ಬರೇ ಶಬ್ದ ಜೋಡಣೆ, ವ್ಯರ್ಥ ಹೃದಯ–ಮಂಥನ ಎಂದೆನಿಸುತ್ತದೆ... ಸುಮ್ಮನೆ ಇನ್ನೆಂಟು ದಿನ ಹಾಯಾಗಿ ತಿರುಗಾಡಬೇಕು, ಡಾಲಿಯೊಡನೆಮಲಗಬೇಕು... ನಂತರ ಹಡಗನ್ನೇರಿ ಮೆಲ್ಲಗೆ ಬಿಡಬೇಕು... ಸಿರ್ಸಿಗೆ ಅಥವಾ ಧಾರವಾಡಕ್ಕೆ ಹೋಗುವದೇ ಬೇಡ. ಹೋಗಿ ಏನು ತಾನೇ ಮಾಡುವದಿದೆ ? ಪಾನಪ್ರತಿಬಂಧವಿಲ್ಲದಿದ್ದರೆ ವಿಸ್ಕಿಯನ್ನು ಕುಡಿಯುತ್ತ ಎಂಟು ದಿವಸ ಒಂದು ಬಗೆಯ ಅಖಂಡ ಅಮಲಿನಲ್ಲಿ ಕಳೆಯಬಹುದಿತ್ತು... ಟೆನಿಸನ್ನನ 'ಲೋಟಸ್ ಈಟರ'ರ ಮನಸ್ಥಿತಿ ನನ್ನದಾಗಿದೆಯಿಂದು. ಇದಕ್ಕೆ ಒಂದೇ ಉಪಾಯ : ಸ್ವಲ್ಪ ಮಲಗಬೇಕು !

* * *

ನಿದ್ದೆ ! ಆಗ ನಿದ್ದೆಯೇ ಚನ್ನಾಗಿ ಹತ್ತುತ್ತಿರಲಿಲ್ಲ !

ರಾತ್ರೆ ಶ್ರೀಕಾಂತನ ಆ ಬರಿದಾದ ಕೋಣೆಯಲ್ಲಿ ಒಬ್ಬನೇ ಮಲಗಿದಾಗ ಮನಸ್ಸೆಂದರೆ ಹುಚ್ಚರ ಚಿತ್ರಶಾಲೆಯಂತಿತ್ತು. ಒಂದೇ ಆಶೆ – ಇಚ್ಛೆ ಯಾವಾಗಲೂ, ಪ್ರಚ್ಛನ್ನ ತಾರೆಯಂತೆ, ಮಿನುಗುತ್ತಿತ್ತು : ಹಿಂದೆ ಒಂದು ರಾತ್ರೆ ಕಾಮಿನಿ ನನ್ನೆಡೆಗೆ ಬಂದಂತೆ ಇಂದು ಬಂದರೆ (ಬರಬಾರದೇಕೆ ?) ಅವಳು ಬಂದಾಗ ನಾನು ಗೊರಕೆ ಹೊಡೆಯುತ್ತ ಮಲಗಿದ್ದರೆ... ಛೇ, ಮಲಗಲೇಬಾರದು... ಇಂದಿಲ್ಲ ನಾಳೆ ಕಾಮಿನಿ ನನ್ನೆಡೆಗೆ ಬಂದೇ ಬರುವಳು...

ಅಚ್ಚರಿಯೆಂದರೆ ನಾನು ಕಾಮಿನಿ ತಾನಾಗಿಯೇ ನನ್ನೆಡೆಗೆ ಬರುವ ಹಾದಿ ಕಾಯುತ್ತಿದ್ದೆ. ಆದರೆ ನಾನಾಗಿಯೇ ಅವಳೆಡೆಗೆ ಹೋಗಲು ಅಥವಾ ಅವಳಿಗೆ ಅಧಿಕಾರವಾಣಿಯಿಂದ ನನ್ನೆಡೆಗೆ ಬರಲು ಹೇಳಲು ಸಮರ್ಥನಿದ್ದಿಲ್ಲ. ಅಷ್ಟೊಂದು ಸಾಮರ್ಥ್ಯ ನನ್ನಲ್ಲಿ ಇದ್ದಿದ್ದರೆ...

ಹಾಗೆ ನೋಡಿದರೆ ನನ್ನ ಹೃದಯದ ಏಕಾಂತತೆಯಲ್ಲಿ ನಾನೊಬ್ಬನೇ ಇದ್ದಾಗ ಒಮ್ಮೊಮ್ಮೆ ಕಾಮಿನಿಯ ಮೇಲೆ ಮನಸಾ ರೇಗುತ್ತಿದ್ದೆ : ಈ ಹುಚ್ಚು

ಹುಡುಗಿ ಎಷ್ಟೊಂದು ತೊಂದರೆ ಕೊಡುತ್ತಾಳಲ್ಲ. ನಾನು ನನ್ನ ಹೃದಯ ಬಿಚ್ಚಿ ಇವಳೆದುರಿಗೆ ಹಾಸಿದಾಗ ಎಳ್ಳಷ್ಟೂ ಪರಿವೆಯಿಲ್ಲದೆ ತುಳಿದು ಹೋಗುತ್ತಾಳಲ್ಲ ತೀರ ಸಹಜವಾಗಿ. ಅವಳಿಗೆ ನನ್ನ ಪ್ರೇಮದ, ನನ್ನ ಅಖಂಡ ಪ್ರೇಮದ ಪರಿವೆಯೇ ಇಲ್ಲವಲ್ಲ... ಅದರ ಮಹತ್ವ ಅವಳಿಗೆ ಅನಿಸದಿದ್ದರೆ, ಅವಳ ಮಮತೆ ನನ್ನ ಮೇಲೆ ಇಲ್ಲದಿದ್ದರೆ, ಅವಳನ್ನು ಲಗ್ನವಾಗಿ ಏನು ಮಾಡುವದು ?... ಬೇಡ. ಆ ವಿಚಾರವನ್ನೇ ಬಿಡಬೇಕು. ಅವಳೊಡನೆ ಇಷ್ಟು ದಿನ ಪ್ರೇಮದಾಟ ಆಡಿದ್ದೇ ತಪ್ಪಾಯಿತು... ಇಲ್ಲ, ಕಾಮಿನಿಯನ್ನು ಹಾಗೆಯೇ ಬಿಡಬಾರದು, ಅವಳನ್ನು ಹಾದಿಗೆ ತರಬೇಕು. ಅವಳಿಗೆ ಅವಳ ಹಿತದ, ಅವಳ ಸುಖದ ಅರಿವು ಮಾಡಿಕೊಡಬೇಕು. ಹಾಗೆಯೇ ಬಿಟ್ಟರೆ ಅವಳ ತನ್ನ ಜೀವನವನ್ನಷ್ಟೇ ಅಲ್ಲದೆ ಬೇರೆ ಕೆಲವು ಜನರ ಜೀವನಗಳನ್ನು ಹಾಳುಮಾಡದೆ ಇರಲಾರಳು. ಅವಳ ಹುಚ್ಚು ಹರಿಯುವ ಜೀವನಶಕ್ತಿಯನ್ನು ಒಳ್ಳೆಯ ದಾರಿಗೆ ಹಚ್ಚದಿದ್ದರೆ ಅದು ತನ್ನ ದಾರಿಯಲ್ಲಿಯ ಹಲವಾರು ಜೀವನಗಳನ್ನು ನಿರ್ದಾಕ್ಷಿಣ್ಯವಾಗಿ ಸೂರೆಗೊಳ್ಳಬಹುದು, ಮಹಾಪೂರದಂತೆ ! ಈ ದಾರಿಗೆ ಹಚ್ಚುವ ಕಾರ್ಯ ನನ್ನಿಂದ ಸಾಧ್ಯವೇ? ನನ್ನಲ್ಲಿ ಅಷ್ಟು ಶಕ್ತಿ ಇಲ್ಲ. ನಾನು ಹೇಡಿ, ಕೈಲಾಗದವ.... ನನ್ನ ಮೇಲೆ ಅವಳ ಪ್ರೀತಿಯಿದ್ದರೆ ಏನಾದರೂ ಮಾಡ ಬಹುದಿತ್ತು... ಆದರೆ... ಅವಳು ನನ್ನನ್ನು ತಿರಸ್ಕರಿಸುವದಿಲ್ಲ ನಿಜ, ಅಷ್ಟೇ ಅಲ್ಲದೆ ನನ್ನ ಪ್ರೇಮದ ಚಾಳಿಗಳಿಗೆ ಸಾಕಷ್ಟು ಉತ್ತೇಜನವನ್ನೂ ಕೊಟ್ಟಿದ್ದಾಳೆ... ಹಾಂ, ಅವಳ ಮನಸ್ಸು ರೋಮಾನ್ಸದ ಬಿಸಿಯಲ್ಲಿ ದುರ್ಬಲವಾದಾಗ, ಮೃದುವಾದಾಗ, ಅವಳನ್ನು ಬಲಾತ್ಕರಿಸಬೇಕು... ಮುಂದೆ ತಾನಾಗಿಯೇ ಹಾದಿಗೆ ಬರುವಳು... ಆ ಬಲಾತ್ಕಾರದಿಂದ ಪರಿಣಾಮವಾದರಂತೂ ಸರಿಯೇ... ಅವಳಿಗೆ ಬೇರೆ ದಾರಿಯೇ ಇಲ್ಲ : ನನ್ನೊಡನೆ ಲಗ್ನ... ನನ್ನ ತಂದೆ-ತಾಯಿಗಳ ಅನುಮತಿಯೂ ತಾನಾಗಿಯೇ ದೊರೆಯುವದು. ಹೆಚ್ಚು ಆತ್ಮೀಯನಾಗುವದಕ್ಕಿಂತ, ಪ್ರೇಮದ ಬೆಳವಣಿಗೆಯ ದಾರಿಕಾಯುತ್ತ ಕುಳಿತುಕೊಳ್ಳುವದಕ್ಕಿಂತ, ಒಮ್ಮೆಲೆ ಕಾಮಿನಿಯ ಮೇಲೆ ಪ್ರಭುತ್ವವನ್ನು ಪ್ರಸ್ಥಾಪಿಸುವದೇ ಲೇಸು... ಒಮ್ಮೆ ಅವಳ ದೇಹವು ಅಧೀನದಾದರೆ ಮುಂದೆ ಮನಸ್ಸೂ ತಾನಾಗಿಯೇ ಅಧೀನವಾಗದಿರದು' ಇಂಥ 'ಶಕ್ತಿವಂತ' ವಿಚಾರಗಳು ಎಷ್ಟೋ ಸಲ ಮನಸ್ಸಿನಲ್ಲಿ ಬಂದರೂ ಕಾಮಿನಿ ಪ್ರತ್ಯಕ್ಷ ನನ್ನ ಮುಂದೆ ಇದ್ದಾಗ ನನ್ನ ಶಕ್ತಿ ಉಡುಗಿಹೋಗುತ್ತಿತ್ತು. ಕಾಮಿನಿಯ ಮನಸ್ಸಿಗೆ ಹತ್ತುವಂತೆ ಮಾತನಾಡಲು ಕೂಡ ಭೀತಿ, ಅವಳ ಚಟುವಟಿಕೆಗಳ ಬಗ್ಗೆ ಸ್ಪಷ್ಟವಾಗಿ ಕೇಳಿದರೆ ಅವಳಿಗೆ ಎಲ್ಲಿ ಸಿಟ್ಟು ಬರುವದೋ ಎಂದು ಹೆದರಿಕೆ.

"ಕಾಮಿನಿ, ಇಂದು ಸಂಜೆ ಎಲ್ಲಿ ಹೋಗಿದ್ದೀ ?"

"ಕಾ. ಆಚಾರ್ಯರೊಡನೆ ಪಾರ್ಟಿ ಆಫೀಸಿಗೆ ಹೋಗಿದ್ದೆ."

"ಹೀಗೇನು ? ನೀನು ಈಗ ರೆಗ್ಯೂಲರ ಮೆಂಬರಳಾಗಿ ಬಿಟ್ಟಿಯೇನು?"

"ಹೌದು, ಒಂದು ದೃಷ್ಟಿಯಿಂದ..."

"ಕಾಮಿನಿ, ಆಚಾರ್ಯರ ಬಗ್ಗೆ ಜನರ ಮತ ಚನ್ನಾಗಿಲ್ಲ."

"ಜನರ ಮತ-ಗಿತ ತೆಗೆದುಕೊಂಡು ನಮಗೇನು ಮಾಡುವದಿದೆ ? ಕಮ್ಯುನಿಜಮದ ಬಗ್ಗೆಯೂ ಜನರ ಮತ ಚನ್ನಾಗಿಲ್ಲ. ಜನರಿಗೆ ಅದರ ತತ್ವಗಳನ್ನು ತಿಳಿಸಿ ಹೇಳಿ ತತ್ವಗಳನ್ನು ತಿಳಿಸಿ ಹೇಳಿ ಅವರ ಮನಸ್ಸಿನಲ್ಲಿ ಪರಿವರ್ತನೆ, ಕ್ರಾಂತಿ ಮಾಡುವದೇ ನಮ್ಮ ಧ್ಯೇಯ... ಗೌರೀಶ, ನೀನೇಕೆ ಸೇರಬಾರದು ಕಮ್ಯುನಿಸ್ಟ ಪಕ್ಷವನ್ನು ?"

"ನನಗೆ ಅವರ ತತ್ವ ಸೇರುವದಿಲ್ಲ."

"ಅಥವಾ ಶ್ರೀಕಾಂತನಿಗೆ ಕಮ್ಯುನಿಜಮ್ ಸೇರುವದಿಲ್ಲವೆಂದೇ ?... ನಿನಗೆ ಚರ್ಚೆಮಾಡುವದಿದ್ದರೆ ನಾನು ಆಚಾರ್ಯರನ್ನು ಕರೆತರುವೆ. ನಿನ್ನ ಎಲ್ಲ ಶಂಕೆಗಳ ನಿರಸವಾಗದಿರದು... ?

"ಅಂದರೆ ನನ್ನ ಶಂಕೆಗಳಿಗೆಲ್ಲ ಉತ್ತರ ದೊರಕಿದಂತಾಯಿತು... ಅಲ್ಲವೇ?"

ಅವಳಿಗೆ ನನ್ನ ವ್ಯಂಗ್ಯ ಸಹನವಾಗಲಿಲ್ಲ.

"ನನಗೆ ಹಾಗೇನೂ ಶಂಕೆಗಳಿದ್ದಿಲ್ಲ... ಬಹಳ ವಿಚಾರಮಾಡಿದರೆ ಮನಸ್ಸಿನಲ್ಲಿ ವ್ಯರ್ಥಗೊಂದಲವೇಳುವದು. ಅದಕ್ಕಿಂತ ಹೃದಯಕ್ಕೆ ಒಪ್ಪಿಗೆಯಾದೊಡನೆ ಕಾರ್ಯತತ್ಪರವಾಗುವದು ಒಳ್ಳೆಯದು..."

"ವಾಹ್, ಕಾಮಿನಿ, ಕಾ. ಆಚಾರ್ಯರ ಕೃಪೆಯಿಂದ ನಿನ್ನಲ್ಲಿ ಎಷ್ಟೋ ಕ್ರಾಂತಿಯಾಗಿದೆಯಲ್ಲ ! ಸ್ವಲ್ಪ ತತ್ವಜ್ಞಾನ ಮಾತನಾಡಲು ಕಲಿಯುತ್ತಿರುವಿ..."

"ಅವಳಿಗೆ ಅದೇ ಸಮಾಧಾನ ! ಅದರಲ್ಲೇನು ಮಹಾ ! ಕಮ್ಯುನಿಜಮದ ಸ್ಫೂರ್ತಿ ಸಣ್ಣದಲ್ಲ"

"ಬರೇ ಕಮ್ಯುನಿಜಮ್‌ದ ಸ್ಫೂರ್ತಿಯಷ್ಟೆ ?"

ನನ್ನ ವ್ಯಂಗ್ಯ ಅವಳಿಗೆ ನಟ್ಟಿತೇನೋ. ಕೂಡಲೇ ಅವಳ ಮುಖದ ಮೇಲೆ ಕಾಠಿಣ್ಯ ಮೂಡಿತು. ಅದು ನನಗೆ ಸಹನವಾಗಲಿಲ್ಲ ; ಅಷ್ಟೇ ಅಲ್ಲ, ಆ ಕಾಠಿಣ್ಯ ಒಮ್ಮೆಲೆ ನನ್ನಲ್ಲಿ ಭೀತಿಯನ್ನುಂಟುಮಾಡಿತು.

"ತಪ್ಪಾಯಿತು ಕಾಮಿನಿ, ಮಾತಿನ ಭರದಲ್ಲಿ ಏನೋ ಅಂದೆ." ಎಂದು ಸಣ್ಣಾದೆ.

* * *

ಶ್ರೀಕಾಂತ, ನಿನ್ನ ಪ್ರಕೃತಿ ಸುಧಾರಿಸುತ್ತಿದೆ ಎಂದು ಓದಿ ಎಷ್ಟೋ

ಸಮಾಧಾನ...

ನಿನ್ನನ್ನು ಬಿಟ್ಟುಬಂದಂದಿನಿಂದ ನನ್ನ ಮನಸ್ಸಿಗೆ ಮಾತ್ರ ಸಮಾಧಾನವಿಲ್ಲ...

ನೀನು ಕೂಡಲೇ ಬರಲಿರುವಿ ಎಂಬುದು ಅತ್ಯಂತ ಸಂತೋಷದ ಸಂಗತಿ... ನೀನು ಬರುವದರೊಳಗಾಗಿ ಸಿರ್ಸಿಗೆ ಒಮ್ಮೆ ಹೋಗಿಬರಬೇಕೆಂದು ಮಾಡಿರುವೆ.... ನೋಡಬೇಕು...

ಕಾಮಿನಿ ಈಗ ಕಮ್ಯುನಿಷ್ಟ ಪಾರ್ಟಿಯ ಸಂಪೂರ್ಣ ಮೆಂಬರಳಾಗಿದ್ದಾಳೆ... ಆ ವಿಷಯದಲ್ಲಿ ನೀನು ಉಪದೇಶಪರ ಪತ್ರ ಅವಳಿಗೆ ಬರೆಯುವದೊಳಿತು...

ಕಾ. ಆಚಾರ್ಯ ಅವಳ ಜೊತೆಗೆ ಮೊನ್ನೆ ಇಲ್ಲಿ ಬಂದಿದ್ದ. ಸ್ವಲ್ಪ ಚರ್ಚೆಯಾಯಿತು. ನೀನು ಅಂದಂತೆ ಅವಳ ಉತ್ತರಗಳೆಲ್ಲ ಖಂಡಿತವಿವೆ. ರಶಿಯದ ಕಮ್ಯುನಿಜಮ್‌ದಲ್ಲಿ ಯಾವದೇ ದೋಷ ತೋರಿಸಿದರೂ, 'ಅದು ಟೆಂಪರರಿ, ಸದ್ಯ ಅವಶ್ಯ', ಎಂದೇ ಹೇಳುವ ; ಸಂಕ್ರಮಣ ಪರಿಸ್ಥಿತಿಯಲ್ಲಿ ಇಂಥ ಡಿಕ್ಟೇಟರಶಿಪ್ ಇದ್ದುದೇ ಚೆನ್ನು ಎಂಬುದು ಅವನ ಮತ. 'ಕ್ಯಾಪಿಟಲಿಜಮ್‌ದ ನಂತರ ಕಮ್ಯುನಿಜಮ್ ತೀರ ಲೊಜಿಕಲ್ ಮೆಟ್ಟಲು... ನೀವು ಎಷ್ಟೇ ಗುದ್ದಾಡಿದರೂ ಇಂದಿಲ್ಲ ನಾಳೆ ಕಮ್ಯುನಿಜಮ್ ನಿಶ್ಚಿತ. ಆದುದರಿಂದ ಈಗಿನಿಂದಲೇ ಆ ಭಾವಿ ಸಮಾಜದ ಘಟಕಗಳಾಗಬೇಕು ನಾವು... ಜನತೆಯ ಹೃದಯದಲ್ಲಿದ್ದ ಅಸಂತುಷ್ಟತೆಯನ್ನು ಸಂಘಟಿಸಿ ಆ ಶಕ್ತಿಯನ್ನು ಹಳೆಯ ಕೊಳೆಯನ್ನೆಲ್ಲ ಕಿತ್ತುಹಾಕುವುದರಲ್ಲಿ ಉಪಯೋಗಿಸಬೇಕು... ಅದಕ್ಕೆ ಧ್ಯೇಯವಾದಿ ತರುಣರ ಅವಶ್ಯಕತೆಯಿದೆ. ರಶಿಯ ನಮ್ಮ ಆದರ್ಶ–ಹೌದೇ ಹೌದು. ರಶಿಯ ನಮ್ಮ ಸ್ಫೂರ್ತಿಕೇಂದ್ರವೆಂದು ಹೇಳಲು ಅಂಜಿಕೆಯೂ ಇಲ್ಲ, ನಾಚಿಕೆಯೂ ಇಲ್ಲ'... ಆಚಾರ್ಯನ ಮಾತಿನಲ್ಲಿ ಒಂದು ಬಗೆಯ ಚಮತ್ಕೃತಿಯಿದೆ. ಮನಸೆಳೆಯುವ ಶಕ್ತಿಯದೆ.... ಕಾಮಿನಿ ಕೊಂಚ ಬಹಿರಂಗವಾಗಿ ಅವನ ಪ್ರಭಾವಕ್ಕೆ ಒಳಗಾದುದು ದುಃಖದ ಸಂಗತಿ...

ಶ್ರೀಕಾಂತಾ, ನಿನ್ನ ಸಹಾಯವಿಲ್ಲದೇ ಕಾಮಿನಿಯ ಸಂಪೂರ್ಣ ಪ್ರೇಮ ಸಂಪಾದಿಸುವದು ಅಶಕ್ಯವಾದ ಮಾತು ಎಂಬುದರ ಅರಿವು ಈಗ ತೀಕ್ಷ್ಣವಾಗಿದೆ....

ಬಾಕಿ ಎಲ್ಲ ಕ್ಷೇಮ – ಕಾಲೇಜಿಗೆ ಹೋಗುತ್ತಿರುವೆ....

ನಿನ್ನ ಕೋಣೆಯಲ್ಲಿ ಒಬ್ಬನೇ – ಯಾವ ಆಧಾರವಿಲ್ಲದೆ – ಇರುವದೆಂದರೆ ಅದರ ನೋವು ನನಗೇ ಗೊತ್ತು !..."

ಈ ಆಶಯದ ಪತ್ರ ನಾನು ಶ್ರೀಕಾಂತನಿಗೆ ಬರೆದೆ, ನಿಜ. ಆದರೆ ಬರೆಯದೇ

ಇದ್ದ ಕೆಲವು ಸಂಗತಿಗಳು ನನ್ನ ಹೃದಯವನ್ನು ಸಾವಕಾಶವಾಗಿ ಒಳಗೊಳಗೇ ಕೊರೆಯುತ್ತ ನಡೆದಿದ್ದವು....

* * *

ಆಚಾರ್ಯ–ಕಾಮಿನಿಯವರ ಸಂಬಂಧ ಎಲ್ಲೆ ಮೀರಿ ಹೋಗಿದೆ ಎಂಬುದರ ಪ್ರತೀತಿ ಮುಂದೆ ನಾಲ್ಕೈದು ದಿವಸಗಳಲ್ಲಿ ನನಗಾಯಿತು.

ಆ ಮೊದಲು ಗೋಪಾಲ – ಗುರುನಾಥರು ಸ್ಪಷ್ಟವಾಗಿ ನನಗೆ ಹೇಳಿದ್ದರು: "it's a fact... ಆಚಾರ್ಯನಿಗೇನು ಯಾತರ ಭೀತಿ? ಅವನ ಪಾರ್ಟಿ ಆಯಿತು ಅವನಾಯಿತು. ಆ ಪಾರ್ಟಿಯ ನೈತಿಕ ಕಲ್ಪನೆಗಳ ವಿರುದ್ಧವೇನೂ ಆತ ಮಾಡುತ್ತಿಲ್ಲ. ಸಂಪೂರ್ಣ ವ್ಯಕ್ತಿ ಸ್ವಾತಂತ್ರ್ಯ... ಲೈಂಗಿಕ ವಿಷಯದಲ್ಲಿ ಪಾಶ್ಚಿಮಾತ್ಯರ ಸ್ವೈರ ಮನೋವೃತ್ತಿ.... ಈ ಕಮ್ಯುನಿಸ್ಟರಿಗೆ ಲೈಂಗಿಕ ಸ್ವಾತಂತ್ರ್ಯದಲ್ಲಿ ಒಂದು ಬಗೆಯ ಅಭಿಮಾನ : ಅದು ಹಳೆಯ ಸಮಾಜವನ್ನು ಧಿಕ್ಕರಿಸುವ ರೀತಿಗಳಲ್ಲೊಂದು.... ಗೋಪಾಲ ರಾಗ ಎಳೆದಿದ್ದ : "ಈ ಸ್ವಾತಂತ್ರ್ಯದ ಸಲುವಾಗಿಯಾದರೂ ನನಗೆ ಕಮ್ಯುನಿಷ್ಟ ಪಕ್ಷ ಸೇರಬೇಕೆಂದೆನಿಸುವದು... ಕೇಳುವಿಯೇನು ಕಾಮಿನಿಗೆ?" ನಾನು ಉರಿದು ಬಿದ್ದೆ : "ಗುರ್ರ್ಯಾ, ಹಾಗೆಲ್ಲ ನಾಲಿಗೆ ಇದೆಯೆಂದು ಸಿಕ್ಕಿದ್ದನ್ನು ಮಾತಾಡಬೇಡ ನೋಡು. ಪ್ರತ್ಯಕ್ಷ ಪುರಾವೆಯಿಲ್ಲದೆ, ನಿಮ್ಮ ತಲೆಯಲ್ಲಿಯ ವಿಕ್ಷಿಪ್ತ, ವಿಕೃತ ಕಲ್ಪನೆಗಳೊಳಗಿಂದ ಬಂದ ಸಂಶಯ ಅದು... ನನಗೆ ಗೊತ್ತಿಲ್ಲೇನು ಕಾಮಿನಿ ಹೇಗೆ ಎಂತು ಎಂದು.... ನಾನು ಅಲ್ಲಿಯೇ ಇರುವೆನಲ್ಲ..." ಗುರುನಾಥ ನಕ್ಕು ವ್ಯಂಗ್ಯವಾಗಿ ನುಡಿದ ! ನೀನು ಭಾಗ್ಯವಂತನಪ್ಪ!"

ನಾನು ಗುರುನಾಥನ ಬಾಯಿ ಬಂದುಮಾಡಿದ್ದರೂ ನನ್ನ ಮನಸ್ಸನ್ನು ಬಂದು ಮಾಡುವದು ಶಕ್ಯವಿರಲಿಲ್ಲ... ಪ್ರೊ. ಶರ್ಮಾ–ಕಾಮಿನಿಯರ ಸಂಬಂಧದ ಬಗ್ಗೆ ನನಗೇನೂ ಪುರಾವೆಗಳು ದೊರೆಯದಿದ್ದರೂ, ಆಚಾರ್ಯ–ಕಾಮಿನಿಯರ ಸಂಬಂಧದ ಬಗ್ಗೆ ಸಂಶಯ ಸಂಶಯವಾಗಿ ಉಳಿಯಲಿಲ್ಲ. ಕಾ. ಆಚಾರ್ಯನಿಗೆ ಆ ಸಂಬಂಧ ಗುಪ್ತವಾಗಿಡಬೇಕೆಂದೇನೂ ಅನಿಸಲಿಲ್ಲವೆಂದು ಕಾಣಿಸುತ್ತದೆ – ಹಾಗೂ ಆ ಸಂಬಂಧವನ್ನು ಬಹಿರಂಗವಾಗಿ ಪ್ರದರ್ಶಿಸುವದರಲ್ಲಿಯೇ ಏನೋ ದೊಡ್ಡಸ್ತನ – ಪರಾಕ್ರಮವಿದ್ದಂತೆ ಅವನಿಗೆ ಅನಿಸಿರಬೇಕು.

ಹೊರಗಿನ ಮಂಚದ ಮೇಲೆ ಕುಳಿತು ಎರಡು ತಲೆದಿಂಬುಗಳನ್ನು ಗೋಡೆಗೆ ಅನಿಸಿ ಅವುಗಳ ಮೇಲೆ ಒರಗಿ, ಕಾಲುಗಳನ್ನು ಒಂದು ಖುರ್ಚಿಯ ಮೇಲೆ ಚೆಲ್ಲಿ, ಬಾಯಲ್ಲಿ ಸಿಗರೇಟನ್ನು ತುರುಕಿ ಪುಸು ಪುಸು ಹೊಗೆ ಬಿಡುತ್ತ ತನ್ನ ಚರ್ಚೆ ಸಾಗಿಸಿದ್ದ ಕಾ. ಆಚಾರ್ಯ– ನಡುವೆಯೇ, ದೊಡ್ಡವರು ಸಣ್ಣವರಿಗೆ

ಹೇಳುವ ವೃತ್ತಿಯಲ್ಲಿ ಕಾಮಿನಿಗೆ ಹೇಳಿದ :

"ಕಾಮಿನಿ, ಒಳ್ಳೆಯ ಸ್ಟ್ರಾಂಗ್ ಕಾಫಿ ಮಾಡಿಕೊಂಡು ಬಾ ನೋಡೋಣ."

"ರಶಿಯನ್ ಬ್ಲ್ಯಾಕ್ ಕಾಫಿಯೇನು ?" ಎಂದು ನಾನು ನಕ್ಕೆ.

"ಬ್ಲ್ಯಾಕ್ ಕಾಫಿಯಂಥ ಕಾಫಿಯಲ್ಲ. ಆದರೆ ಅದನ್ನು ಮಾಡುವ ಕಲೆ ಬಹಳ ಜನರಿಗೆ ಗೊತ್ತಿಲ್ಲ... ಇರಲಿ, ನಾನೇನು ಹೇಳುತ್ತಿದ್ದೆ ?... ಹಾಂ, ಬೂರ್ಜ್ವಾ ನಾಗರೀಕತೆಯಲ್ಲಿಯ ವಿಧ್ವಂಸಕ, ನಿರುಪಯೋಗಿ ವೃತ್ತಿಗಳ ಬಗ್ಗೆ...."

ಅವನ 'ಹಾಡಿದ್ದ ಹಾಡೋ' ವಿಷಯದ ಬಗ್ಗೆ ನನಗೆ ಉತ್ಸುಕತೆಯಿರಲಿಲ್ಲ. ಕಾಮಿನಿ ಕಾಫಿ ತಂದು ಅವನ ಕೈಯಲ್ಲಿ ಒಂದು ಲೋಟ ಕೊಟ್ಟಳು, ನನಗೊಂದು ಕಪ್ಪು ಇಟ್ಟಳು. ಅವಳು ಬದಿಯ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕೆಂದು ಮಾಡುವಷ್ಟರಲ್ಲಿ, ಆಚಾರ್ಯ ಮುಂದೆ ಬಗ್ಗಿ ಅವಳ ಕೈಹಿಡಿದೆಳೆದು ಮಂಚದ ಮೇಲೆ ತನ್ನ ಹತ್ತಿರ ಕೂಡ್ರಿಸಿಕೊಂಡ.....

ನನ್ನ ಮುಟ್ಟಿಗೆಯಲ್ಲಿದ್ದ ಪುರಾತನ – ಶಕ್ತಿಯೊಂದನ್ನು ಗಟ್ಟಿಯಾಗಿ ನಿಗ್ರಹಿಸಿ ಒತ್ತಿ ಹಿಡಿದೆ...

"ಕಾಮಿನಿ, ಈ ಎಲ್ಲ ಆರ್ಗುಮೆಂಟ್ಸುಗಳನ್ನು ನೀನು ಚನ್ನಾಗಿ ಕೇಳಬೇಕು... ಕಲಿಯಬೇಕು..." ಆಚಾರ್ಯ ನುಡಿದ.

"ಹುಂ...." ಎಂದು ನಕ್ಕಳು. ಅವಳ ನಗೆಯಲ್ಲಿ ನಿಃಸಹಾಯತೆಯಿತ್ತು. ಈ ನಿಃಸಹಾಯತೆ ಕಾಮಿನಿಯಲ್ಲಿ ಹೊಸದೆಂದು ತೋರಿತು !

"ನಿನ್ನ ಅಣ್ಣ ಇಲ್ಲಿ ಇದ್ದಿದ್ದರೆ ಅವನನ್ನು ನಾನು ಇಷ್ಟರಲ್ಲಿ ಕಮ್ಯುನಿಸ್ಟನನ್ನಾಗಿ ಮಾಡುತ್ತಿದ್ದೆ.... ಗೌರೀಶ ಒಳ್ಳೆಯವ... ಅವನು ನಿನ್ನನ್ನು ಲಗ್ನವಾಗಬೇಕೆನ್ನುತ್ತಾನೆ. ಎಂದು ಹೇಳಿರುವೆಯಷ್ಟೆ – Well go ahead ... ಆದರೆ ಲಗ್ನವಾಗುವ ಮೊದಲು ಅವನಿಗೆ ಕಮ್ಯುನಿಜಮ್‌ದ ದೀಕ್ಷೆ ಮಾತ್ರ ನೀನು ಕೊಡಲೇಬೇಕು ನೋಡು... ಗೌರೀಶ, ಕಾಮಿನಿ ಒಳ್ಳೆಯ ಹುಡುಗಿ... ಇನ್ನೂ ಸ್ವಲ್ಪ ಸಣ್ಣವಳು. ಆದರೆ ಅವಳಲ್ಲಿಯ ಕ್ರಾಂತಿಶಕ್ತಿ ದೊಡ್ಡದು" ಎಂದು ಕಾಮಿನಿಯತ್ತ ಮಾಲ್ಕೀಹಕ್ಕಿನಿಂದ ಕಣ್ಣು ಸಣ್ಣಗೆ ಮಾಡಿ ಮುಗುಳುನಗೆ ಬೀರಿದ.

ಅವನ ಆ ೫–೧೦ ವರ್ಷದ ಮುಖದ ಮೇಲೆ ಘಕ್ಕನೆ ಉಗುಳಬೇಕೆಂದೆನಿಸಿತು....

"ಕಾಮಿನಿ, ಇಂದು ಸಂಜೆ ಪ್ರೆಸ್ ಕಾಮಗಾರರ ಮೀಟಿಂಗಿದೆ. ಅದನ್ನು ಮುಗಿಸಿ ಸ್ವಲ್ಪ ತಡವಾಗಿಯೇ ಇಲ್ಲಿ ಊಟಕ್ಕೆ ಬರುವೆ. ಆದರೆ ಬಹಳ ಹಾದಿ ಕಾಯಬೇಡಿರಿ. ನನಗೆ ತಣಿದ ಊಟ ನಡೆಯುವದು." ಆನಂತರ ನನ್ನೆಡೆಗೆ

ನೋಡಿ, ಏನೋ ವಿಶದಪಡಿಸುವ ಅವಶ್ಯಕತೆಯಿದ್ದಂತೆ ನುಡಿದ ; "ಗೌರೀಶ, ಈ ಮಿಾಟಿಂಗುಗಳೆಂದರೆ ತೀರಿತು – ಇಷ್ಟೇ ಹೊತ್ತಿಗೆ ಮುಗಿಯುವವು ಎಂದು ಹೇಳಲು ಬರುವದಿಲ್ಲ. ಇಂದೇ ಹುಬ್ಬಳ್ಳಿಗೆ ನಾನು ಹೋಗಬೇಕೆಂದು ಮಾಡಿದ್ದೆ; ಆದರೆ ನಾಳೆ ನಮ್ಮ ಮೆಂಬರರ ಮಿಾಟಿಂಗೊಂದು ಇದೆ ; ಒಂದು ಪತ್ರಿಕೆ ಹೊರಡಿಸುವ ವಿಚಾರವಿದೆ..."

ಈ ಸೃಷ್ಟೀಕರಣದ ಹಿಂದೆ ಆತನ ಒಂದು ಉದ್ದೇಶ ಸ್ಪಷ್ಟವಿತ್ತು : ರಾತ್ರೆಯನ್ನು ಈ ಮನೆಯಲ್ಲಿಯೇ ಕಳೆಯುವದು....

* * *

ಆ ಸಂಜೆಯ, ಆ ರಾತ್ರೆಯ ಅನುಭವವೆಂದರೆ ಅದೊಂದು ನರಕದ ಅನುಭವ.

ಅದನ್ನು ಶಬ್ದಗಳಲ್ಲಿ ಹಿಡಿದಿಡುವದು ಶಕ್ಯವೇ ?

ಕೊಂಚ ಹೊತ್ತಿನ ಹಿಂದೆ ಕಿಡಕಿಯ ಹತ್ತಿರ ನಿಂತು, ಚೌಕಟ್ಟಿನ ಮೇಲೆ ಮೊಣಕೈಯೂರಿ ಹೊರಗಿನ ಸಣ್ಣ ತೋಟದೊಳಗಿನ ಗಿಡದ 'ಹಸಿರತೆ'ಯಲ್ಲಿ ದೃಷ್ಟಿ ನೆಲಸಿ, ಆ ಸಂಜೆಯ, ಆ ರಾತ್ರೆಯ ಗೌರೀಶನ ಮನಸ್ಸನ್ನು ಸ್ಮೃತಿಯ ಕತ್ತಲೆಯಿಂದ ಮೇಲೆತ್ತಲು ಯತ್ನಿಸಿದೆ. ಆದರೆ ಆ ಗೌರೀಶ, ಆತನ ಅಂದಿನ ಮನಸ್ಸು ಸ್ಪಷ್ಟವಾಗಿ ಮೂರ್ತಗೊಳ್ಳಲು ಯಾಕೋ ನಿರಾಕರಿಸಿತು... ಅತ್ಯಂತ ನೋವಿನ ಅನುಭವಗಳನ್ನು ಮನಸ್ಸು ತನ್ನ ಅಂತರ್ಯದಲ್ಲಿ ದಬ್ಬಿ ಇಡುತ್ತದೆ ಎಂದು ಫ್ರಾಯ್ಡ ಹೇಳಿದ್ದಾನೆ...

ಆ ಸಂಜೆ, ಕಾಮಿನಿ, "ನಾನು ಸ್ವಲ್ಪ ಹೊರಗೆ ಹೋಗಿ ಬರುವೆ," ಎಂದು ಕಾ. ಆಚಾರ್ಯ ಹೊರಗೆ ಹೋದ ನಂತರ ಕೂಡಲೇ ಹತ್ತು ನಿಮಿಷಗಳಲ್ಲಿ ಮಾಯವಾದಳು. ಅನಂತರ ನಾನೇನು ಮಾಡಿದೆ? ಹಾಂ, ನಾನು ಸುಮ್ಮನೇ ಸ್ತಂಭಿತನಾಗಿ ಕುಳಿತೆ... ಕೈಯಲ್ಲೊಂದು ನೆವದ ಸಲುವಾಗಿ ವರ್ತಮಾನಪತ್ರ ಹಿಡಿದು ಅರ್ಧ ತಾಸು ಹಾಗೇ ಕುಳಿತಿದ್ದೆ.... ಬಹುಶಃ ಕಾಮಿನಿ ಬೇಗ ಬರಬಹುದೇನೋ ಎಂದು ಬಗೆದು. ಆನಂತರ? ಆನಂತರ ಅವಳ ಆಸೆಬಿಟ್ಟು ನಾನು ತಿರುಗಾಡಲು ಹೋದೆ, ಸ್ಟೇಶನ್ನಿನತ್ತ... ಅಲ್ಲಿ ರೈಲ್ವೆ ಹಳಿಗಳ ಬದಿಗೆ ಒಂದು ಸೀಟಿನ ಮೇಲೆ ಸುಮ್ಮನೇ ಕುಳಿತೆ, ವಿಚಾರ ವಿಚಾರ ವಿಚಾರಮಾಡುತ್ತಾ... ಹುಬ್ಬಳ್ಳಿ ಕಡೆಯಿಂದ ಒಂದು ಗಾಡಿ ಬಂತು. ಸ್ಟೇಶನ್ನಿನ ಮೇಲೆ ಸ್ವಲ್ಪ ಗದ್ದಲವಾಯಿತು ನಾಲ್ಕು ನಿಮಿಷ. ಆ ನಂತರ ಪುಣೆಯ ಕಡೆಗೆ ಗಾಡಿ ಹೊರಟಿತು... ನನಗೆ ಒಮ್ಮೆಲೇ ಗಾಡಿ ಹತ್ತಿಹೋಗಬೇಕೆಂಬ ಪ್ರಬಲ ಇಚ್ಛೆಯುಂಟಾಯಿತು.

ಆ ಇಚ್ಛೆಯನ್ನು ಕಾರ್ಯರೂಪದಲ್ಲಿಳಿಸಲೋ ಎಂಬಂತೆ ಎದ್ದು ನಿಂತೆ ಕೂಡ. ಆದರೆ ಗಾಡಿ ರಭಸದಿಂದ ಸರಿಯತೊಡಗಿತು. ಎಂಜಿನಿನ ಆ ಪಿಸ್ಟನಿನ ಭಯಂಕರ ಚಲನವಲನ, ಆ ಚಲನವಲನದೊಡನೆ ಉರುಳುತ್ತಾ ನಡೆದ ಭಯಂಕರ ಚಕ್ರಗಳು, ನನ್ನ ಮನಸ್ಸನ್ನು ಬಂಧಿಸಿ ನಿಲ್ಲಿಸಿದವು. ಓಡಿ ಹೋಗಿ ಆ ಪಿಸ್ಟನ್ನಿಗೆ ಜೋತುಬೀಳಬೇಕು, ಇಡಿಯ ಗಾಡಿಯನ್ನೇ ನಿಲ್ಲಿಸಬೇಕೆಂಬ ಭಯಂಕರ ವಿಚಾರ ನನ್ನ ತಲೆಯಲ್ಲಿ ಚಕ್ರದಂತೆ ತಿರುಗತೊಡಗಿತು....

ಆನಂತರ ನಾನೇನು ಮಾಡಿದೆ?

ಹಾಂ ನನಗೆ ಅಲ್ಲಿಯೇ ಇಡೀ ರಾತ್ರಿ ಕತ್ತಲಲ್ಲಿ ಒಬ್ಬನೇ ಶೂನ್ಯನಾಗಿ ಕುಳಿತುಕೊಳ್ಳಬೇಕೆಂದೆನಿಸಿತು.... ಯಾಕೆ? ರಾತ್ರೆ ಹನ್ನೆರಡರ ಎಕ್ಸಪ್ರೆಸ್‌ದ ಮುಂದೆ ನಿಶ್ಚಿಂತನಾಗಿ ಮಲಗಿದರೆ ಹೇಗೆ ಎಂಬ ವಿಚಾರದಿಂದ !

ಸುಮಾರು ಎಂಟೂವರೆ ಗಂಟೆಗೆ ನಾನಿದ್ದ : 'ಇಲ್ಲ, ಈ ಸಂಕಟವನ್ನು ಧೈರ್ಯದಿಂದ ಎದುರಿಸಲೇಬೇಕು. – ಒಮ್ಮೆ ನನ್ನ ಎಲ್ಲ ಆಶೆ – ಶಂಕೆ ಧ್ಯೇಯ – ಕಲ್ಪನೆ – ಕನಸುಗಳ ನಿರಸವಾಗಲಿರುವದು – ಅದೂ ಒಂದು ರೀತಿಯಿಂದ ಒಳ್ಳೆಯದೇ! ಈ ಮೊದಲಿನ ಕಾಮಿನಿಯ "ಕಥೆ"ಗಳು ನನ್ನ ಕಲ್ಪನೆಯ ಪಾತಳಿಯ ಮೇಲೆ ಸಮನಿಸಿದುವು. ಅವು ಸತ್ಯವಿದ್ದಿರಬಹುದಾದರೂ ಅವುಗಳ ಸತ್ಯತೆಯನ್ನು ಪರೀಕ್ಷಿಸುವದು ಸಾಧ್ಯವಿದ್ದಿಲ್ಲ. ಯಾರನ್ನು ತಾನೇ ಪ್ರಶ್ನಿಸುವದು? ಕಾಮಿನಿಯನ್ನೇ? ಕಾಮಿನಿಗೆ ಕೇಳಿದರೆ ಅವಳು ಹಾರಿ ಬೀಳಬಹುದಿತ್ತು ; ನನ್ನ ಸಂಬಂಧವನ್ನೇ ಕಡಿಯ ಬಹುದಿತ್ತು. ಆ ಕತೆಗಳ ನಾಯಕರನ್ನೇ? ಛೇ ಅದಂತೂ ದೂರದ ಮಾತು... ಹಾಗೆ ನೋಡಿದರೆ ಗೌರೀಶ – ಕಾಮಿನಿಯರ ಬಗ್ಗೆ ಕೂಡ ಒಂದು 'ಕತೆ' ಜನರ ಬಾಯಲ್ಲಿದೆ ಎಂಬುದು ಗುರುನಾಥ – ಗೋಪಾಲರಿಂದ ತಿಳಿದಿತ್ತು!...

ಈಗ, ಇಂದು 'ಅದು' ಸಂಭವಿಸಿದರೆ ನನ್ನ 'ಕಣ್ಣೆದುರಿಗೆ,' ನನ್ನ ' ಸಮಕ್ಷಮ' ಸಂಭವಿಸಲಿರುವದು!... ಇಲ್ಲ, 'ಅದು' ಸಂಭವಿಸದಂತೆ ನಾನು ಯತ್ನಿಸಬೇಕು... ಅವನು ಮಲಗುವ ವ್ಯವಸ್ಥೆಯನ್ನು ನನ್ನ ಕೋಣೆಯಲ್ಲಿ ಮಾಡಬೇಕು. ಅದು ಸುಲಭವಾದ ಮಾತು. ಆದರೆ ಆ ಯತ್ನದ ಉಪಯೋಗವೇನು? ಈಗಾಗಲೇ 'ಅದು' ಎಷ್ಟೋ ಸಲ ಘಟಿಸಿರಬೇಕು... ಇಂದು ನಾನು ನನ್ನ ಸಂಚಿನಿಂದ ಅವಕಾಶ ಕೊಡದಿದ್ದರೂ... 'ಅದು' ಇಂದಿಲ್ಲ ನಾಳೆ ಮುಂದುವರಿಯುವದೇ! – ಮುಖ್ಯ ಕಾಮಿನಿಯ ಮನೋವೃತ್ತಿಯ ಮೇಲೆ ಎಲ್ಲ ಅವಲಂಬಿಸಿದೆ. ಅವಳಲ್ಲಿ ಆ ಮನೋವೃತ್ತಿಯೇ ಇಲ್ಲದಿದ್ದರೇ ಆತ ನಮ್ಮ ಮನೆಯಲ್ಲಿಯೇ ಮಲಗಿದರೂ ಏನೂ ಆಗಲಾರದು – ನನಗೆ ಅವಳ

ಮನೋವೃತ್ತಿಯ ಕೊನೆಯ ಪರೀಕ್ಷೆ ಮಾಡಬೇಕು – ಆ ಪರೀಕ್ಷೆಯನ್ನು ಇಂದೇ ಏಕೆ ಮಾಡಬಾರದು?... ಒಮ್ಮೆ ಅವಳ ಸಂಪೂರ್ಣ ಅವನತಿಯ ಸ್ಪಷ್ಟ ಕಲ್ಪನೆ ಬಂದ ಮೇಲೆ. ನನ್ನ ದಾರಿಗೆ ದಿಶೆ ಸಿಕ್ಕೀತು. ಆನಂತರ ಕೆಲವು ನಿಶ್ಚಿತ ನಿರ್ಣಯಗಳನ್ನು ಕೈಕೊಳ್ಳಬಹುದು... ಕಾಮಿನಿಯ ಬಂಧ ಕಡಿಯಿತು– ಮುಂದೇನು? ಈ ದಾರಿ ಇಲ್ಲಿ ಕೊನೆಗೊಂಡಿತು. ಮುಂದೆ, ಯಾವ ದಾರಿ? – ಎಂಬುದರ ಬಗ್ಗೆ ಸ್ವಲ್ಪ ಸ್ಪಷ್ಟತೆ ಬಂದೀತು...

ಬುದ್ಧಿ ಪ್ರಾಧಾನ್ಯವಾದ ಈ ವಿಚಾರಗಳ ಮೂಲಕ ಒಂದು ಬಗೆಯ ವಿಲಕ್ಷಣ ಸ್ಥಿರತೆ ಬಂತು ನನ್ನಲ್ಲಿ. ಏನೋ ಅತ್ಯಂತ ಕಠಿಣವಾದ, ಮಹತ್ವವಾದ ಕಾರ್ಯ ಹೊರಟಂತೆ ಧೀರಗಂಭೀರನಾಗಿ ಮನೆಯತ್ತ ನಡೆದೆ –

ನಮ್ಮ ಮೂವರ ಊಟ. ಆಚಾರ್ಯನ ಸಂತತ ಮಾತು. ಕಾಮಿನಿಯ ಲಕ್ಷ್ಯ, ಅವಳ ಪ್ರಶ್ನೆಗಳು, ಅವಳ ನಗೆ – ಎಲ್ಲ ಆಚಾರ್ಯನ ದಿಶೆಯಲ್ಲಿ. ಊಟದ ನಂತರ ಹೊರಗಿನ ಹಾಲಿನಲ್ಲಿ ಮರಳಿ ಚರ್ಚೆ. ಆಚಾರ್ಯನಿಗೆ ಕಾಫಿ. ಅವನ ಸಿಗರೇಟು, ಒಂದರ ಹಿಂದೊಂದು ಸುಟ್ಟು ಬೂದಿ. ಹವೆಯಲ್ಲೆಲ್ಲ ಹೊಗೆ – ಅಸಹ್ಯ ವಾಸನೆ...

"ಕಮ್ಯುನಿಸಜಮ್‌ದಲ್ಲಿ ನೀತಿಗೆ ಯಾವ ಸ್ಥಾನವಿದೆ?" ನನ್ನ ಪ್ರಶ್ನೆ.

"ನೀತಿ? ಹುಂ! ಮಾರ್ಕ್ಸ್ ಹೇಳುವಂತೆ ಯಾವದೇ ಸಮಾಜದ ನೀತಿಕಲ್ಪನೆಗಳು ಆ ಸಮಾಜದ ಆರ್ಥಿಕ ರಚನೆಯನ್ನವಲಂಬಿಸಿವೆ. ನಾವು ಇತಿಹಾಸವನ್ನು ಪರೀಕ್ಷಿಸಿದರೆ ನ್ಯಾಯ–ಅನ್ಯಾಯ, ಒಳ್ಳೆಯದು – ಕೆಟ್ಟದ್ದು, ನೀತಿ–ಅನೀತಿ ಇವುಗಳ ಕಲ್ಪನೆ ಕಾಲಕಾಲಕ್ಕೆ ಬದಲಾದದ್ದು ಕಂಡು ಬರುತ್ತದೆ.... ಉದಾಹರಣೆಗಾಗಿ: ಸರಂಜಾಮೀ ಪದ್ಧತಿಯ ಸಮಾಜ ರಚನೆ ತೆಗೆದುಕೊಳ್ಳಿರಿ." ಸರಂಜಾಮೀ ನಂತರ ಪೂಂಜೀವಾದೀ ಸಮಾಜಗಳ ವಿಶ್ಲೇಷಣೆಯಾದ ನಂತರ ಕಮ್ಯುನಿಜ ದತ್ತ ಹೊರಳಿದ : "ಕಮ್ಯುನಿಸ್ಟಿಕ್ ಸಮಾಜ ರಚನೆಯಲ್ಲಿ ಎಲ್ಲ ವ್ಯಕ್ತಿಗಳಿಗೆ ಸಮಾನ ಹಕ್ಕು – ಕರ್ತವ್ಯಗಳು ಹಾಗೂ ಸಮಾನ ಸ್ವಾತಂತ್ರ್ಯ... ಆನಂತರ ಸ್ತ್ರೀ–ಪುರುಷರಲ್ಲಿ ಸಾಮಾಜಿಕ ದೃಷ್ಟಿಯಿಂದ ಭೇದವಿಲ್ಲ. ಇಬ್ಬರಿಗೂ ಸಮಾನ ಸ್ವಾತಂತ್ರ್ಯ... ಪುರುಷನಂತೆ ಸ್ತ್ರೀಯೂ ಸಾಮಾಜಿಕ ಸಂಪತ್ತಿನ ವೃದ್ಧಿಯ ಸಲುವಾಗಿ ಕಾರ್ಯ ಮಾಡುವಳು. ಆರ್ಥಿಕ ದೃಷ್ಟಿಯಿಂದ ಸ್ತ್ರೀ ಸ್ವತಂತ್ರಳಾದನಂತರ ಸ್ತ್ರೀ ಪುರುಷರ ಸಂಬಂಧದ ಸ್ವರೂಪ ಬದಲಾಗುವದು. ಸ್ತ್ರೀಯು ಪುರುಷನ ಆಳಾಗಿ ಉಳಿಯಲಾರಳು... ಅಂದರೆ ಲಗ್ನವಿಲ್ಲವೆಂದಲ್ಲ.. ಆದರೆ ಲಗ್ನದ ಸ್ವರೂಪ ಬದಲಾಗುವುದು. ಲಗ್ನವೆಂದರೆ ಮುಖ್ಯವಾಗಿ ಒಂದು ಬಗೆಯ ಸಾಮಾಜಿಕ

contract ಕರಾರು – ಎಂಬ ಕಲ್ಪನೆ ರೂಢವಾಗುವದು... ಪರಸ್ಪರ ಶ್ರದ್ಧೆ (ಬೇಕಾದರೆ 'ಪ್ರೇಮ' ಎಂದೆನ್ನು) ಕಡಿಮೆಯಾದರೆ ಘಟಸ್ಫೋಟ – ಅದರಲ್ಲೇನು? ಪುರುಷನಂತೆ ಸ್ತ್ರೀಗೂ ಲೈಂಗಿಕಸ್ವಾತಂತ್ರ್ಯವಿದೆ... ಇಬ್ಬರೂ ತಮ್ಮ ತಮ್ಮ ಜೀವನಕ್ಕೆ ತಾವೇ ಜವಾಬ್ದಾರರು...."

ಈ ವಿಚಾರಗಳನ್ನು ಆತ ಹೇಳಿದ ರೀತಿ ಉದ್ಬೋಧಕವಾಗಿತ್ತು. ಅವನು ಹೇಳುವದೆಲ್ಲ ಬುದ್ಧಿಯ ನಿಕಷ ಹಚ್ಚಿ ನೋಡಿದರೆ ಸತ್ಯವಾಗಿತ್ತೆಂದು ಅನಿಸಿತು. ಅವನ ತಾರ್ಕಿಕ ಸುಸಂಗತಿ, ಉದಾಹರಣೆಗಳನ್ನು ಕೊಡುವ ರೀತಿ, ಅವನ ಮಾತಿನಲ್ಲಿಯ ನಿಸ್ಸಂದೇಹತ್ವ, ಒಂದು ರೀತಿಯಿಂದ ಆಕರ್ಷಣೀಯವಾಗಿದ್ದವೆಂದೇ ಹೇಳಬೇಕು...

"ಪ್ರತಿಯೊಂದು ಕ್ಷಣಿಕ ಮೋಹಕ್ಕೆ ಬಲಿ ಬೀಳುತ್ತ ಹೋದರೆ ಸಮಾಜ ಸ್ವಾಸ್ಥ್ಯದ ಮಾತೇನು?"

"ಸಮಾಜಸ್ವಾಸ್ಥ್ಯ ಸಮಾಜದ ಆರ್ಥಿಕ ರಚನೆಯನ್ನವಲಂಬಿಸಿದೆ. ನೀನನ್ನನ್ನುವ 'ನೀತಿ'ಗೂ ಸಮಾಜಸ್ವಾಸ್ಥ್ಯಕ್ಕೂ ಏನೂ ಸಂಬಂಧವಿಲ್ಲ. ಎರಡನೆಯದಾಗಿ 'ಕ್ಷಣಿಕ ಮೋಹ' ಕ್ಕೆ ಬಲಿಬೀಳುವ ಪ್ರಶ್ನೆ ಆ ವ್ಯಕ್ತಿಯನ್ನವಲಂಬಿಸಿದೆ. ಆ ಆ ವ್ಯಕ್ತಿಯ ಸ್ವಭಾವ, ಅವನ ಬಲಿಬೀಳುವಾಗಿನ ಮನೋವೃತ್ತಿ – ಮನಸ್ಥಿತಿಗಳ ಮೇಲೆ ಅವಲಂಬಿಸಿದೆ... ಮೇಲಾಗಿ 'ಕ್ಷಣಿಕ ಮೋಹ' 'ಬಲಿಬೀಳು' ಈ ಶಬ್ದಗಳೇ ಅರ್ಥ ಹೀನವಾಗಿವೆ.... ಕಾಮಿನೀ, ಒಂದು ಗ್ಲಾಸು ನೀರು ತೆಗೆದುಕೊಂಡು ಬಾ – ನೀರಡಿಕೆಯಾಗಿದೆ ...."

ಹೆಚ್ಚಿಗೆ ಚರ್ಚಿಸಿ ಉಪಯೋಗವಿಲ್ಲ ; ಆಚಾರ್ಯನನ್ನು ವಾದದಲ್ಲಿ ಹಿಡಿಯುವದು ಶಕ್ಯವಿಲ್ಲ ; ನನ್ನಲ್ಲಿ ತಾತ್ವಿಕ ವಿಚಾರಗಳ ಹರಹಿಲ್ಲ ; ನನ್ನ ಅನಿಸಿಕೆಗಳಲ್ಲಿ, ವಿಚಾರಗಳಲ್ಲಿ. ಭಾವನೆಗಳಲ್ಲಿ ಅಸ್ಪಷ್ಟತೆ ತುಂಬ ಇದೆ ; ಈ ಅಸ್ಪಷ್ಟತೆ ನನ್ನನ್ನು ದುರ್ಬಲನನ್ನಾಗಿ ಮಾಡಿ ಒಗೆಯುತ್ತದೆ – ನರಕದಲ್ಲಿ ಆತ್ಮನಿಂದೆ, ಆತ್ಮ ಸಂತಾಪಗಳ ಉರಿ ಸಂತತ ಸುಡುವ ನರಕದಲ್ಲಿ – ಎಂಬ ನಿರ್ಧಾರಕ್ಕೆ ಬಂದೆ...

ಕಾಮಿನಿ, ಆಚಾರ್ಯರನ್ನು ಹಾಲಿನಲ್ಲಿ ಬಿಟ್ಟು, "ಒಳ್ಳೇದು, ಒಂದೆರಡು ಪತ್ರ ಬರೆಯಬೇಕಾಗಿದೆ... ನಿದ್ರೆಯೂ ಬರುವದರಲ್ಲಿದೆ. ಆಚಾರ್ಯರೇ, ನೀವೇನು ಇಲ್ಲಿಯೇ ಹಾಲಿನಲ್ಲಿ ಮಲಗುವಿರಾ?" ಎಂದು ಅಲ್ಲಿಂದ ಕಾಲ್ದೆಗೆದೆ. ನನ್ನ ಅಂದರೆ ಶ್ರೀಕಾಂತನ ಕೋಣೆಗೆ ಹೋಗಿ, ಬಾಗಿಲು ಮುಂದೆ ಮಾಡಿ, ಭವಿಷ್ಯದ ಭಾರದಿಂದ ಜಡವಾದ ಹೃದಯನ್ನು ಧೊಪ್ಪನೆ ಕಾಟಿನ ಮೇಲೆ ಅಪ್ಪಳಿಸಿದೆ...

ಹೃದಯ ಗ್ಲಾಸಿನದಾಗಿದ್ದರೆ ಅದು ಒಡೆದ ಸಪ್ಪಳ ಕಾಮಿನಿಗೆ ಸ್ಪಷ್ಟ ಕೇಳಿಸಬಹುದಿತ್ತು!....

ರಾತ್ರೆ ಒಂದೂವರೆ-ಎರಡರ ಸುಮಾರಿಗೆ ನನ್ನ ನಡುಗುವ ಕೈಯಿಂದ ಬಾಗಿಲು ತೆಹೆದು ಟಾರ್ಚ್ ಬಿಟ್ಟು ನೋಡಿದೆ. ಕಂಬನಿಗಳಿಂದ ತಪ್ತವಾದ ಉರಿಯುವ ಕಣ್ಣುಗಳಿಂದ ಸುತ್ತಲೂ ಕೆದಕಿ ಕೆದಕಿ ನೋಡಿದೆ...

.... ಆಚಾರ್ಯ, ನಾನು ಊಹಿಸಿದಂತೆ ಅಲ್ಲಿರಲಿಲ್ಲ. ಕಾಮಿನಿಯ ಕೋಣೆಯ ಬಾಗಿಲು ನನ್ನ ನರಕದ ಹೆಬ್ಬಾಗಿಲಿನಂತೆ ಗಟ್ಟಿಯಾಗಿ ಹಾಕಿತ್ತು...

... ಗಂಟಲು ಹರಿಯುವ ತನಕ ಚೀರಬೇಕೆಂದೆನಿಸಿತು. ಓಡುತ್ತ ಹೋಗಿ ಬಾಗಿಲನ್ನು ಮುರಿದು ಅವರಿಬ್ಬರ ಗಂಟಲಗಳನ್ನು ಹರಿದು ಮುರಿದು ಚೆಲ್ಲ ಬೇಕೆಂದೆನಿಸಿತು....

'ಮುಗಿಯಿತಿನ್ನು ಈ ಜಗದ ಬಂಧ ಇನ್ನಿಲ್ಲ ಹಿಂದು ಮುಂದು !'

ಹೊರಗಿನ ಬಾಗಿಲು ತೆರೆದು ಹೊರಬಿದ್ದೆ. ಬರಿಗಾಲಿನಿಂದ ಭರಭರನೆ ಸ್ಟೇಶನದತ್ತ ನಡೆದೆ...

ಸ್ಟೇಶನ್ನಿನಲ್ಲಿ ಸ್ಮಶಾನಶಾಂತತೆ ಹರಡಿತ್ತು...

ಅಲ್ಲಿಲ್ಲಿ ಕೆಲವು ಜನರು ಅಸ್ತವ್ಯಸ್ತವಾಗಿ ಬಿದ್ದು ಗೊರಕೆ ಹೊಡೆಯುತ್ತಿದ್ದರು....

ಅವರನ್ನೆಲ್ಲಾ ದಾಟಿ, ಸಂಜೆಯಲ್ಲಿ ಕುಳಿತ ಸೀಟಿನ ಮೇಲೆ ಹೋಗಿ ಕುಳಿತೆ...

ಗಿಡಗಳು ಚಿರ್ರೆನ್ನುತ್ತಿದ್ದವು...

ರೈಲು ಹಳಿಗಳು ಕಪ್ಪಾಗಿ ಕತ್ತಲೆಯ ಅವಯವಗಳಂತೆ ಬಿದ್ದು, ಕತ್ತಲೆಯ ಗರ್ಭದಲ್ಲಿ ಸೇರಿದ್ದವು...

ನಾಲ್ಕರ ಎಕ್ಸಪ್ರೆಸ್ಸೊಂದು ಬಂದು ನನ್ನನ್ನು ಬಡಿದೆಬ್ಬಿಸಿತು...

ಯಾಕೋ ಏನೋ ಎದ್ದು ನಿಂತೆ.

ಎಂಜಿನದತ್ತ ನಡೆದೆ...

ಅಷ್ಟರಲ್ಲಿ ಎಂಜಿನಿನ ಪಿಸ್ಟನ್ನು ಹಿಂದೆ ಮುಂದೆ ಸರಿಯತೊಡಗಿತು. ಚಕ್ರಗಳುರುಳತೊಡಗಿದವು...

ನಾನು ಸುಮ್ಮನೆ ನಿರ್ವೀರ್ಯನಾಗಿ ನಿಂತಲ್ಲಿ ನಿಂತೆ...

* * *

"... ಶ್ರೀಕಾಂತ, ಈ ಭಯಂಕರ ಕೆಸರಿನಿಂದ ಹೊರಬರಲು ಸಹಾಯಮಾಡು: ನಿನ್ನ ಬುದ್ಧಿ – ಸಹಾನುಭೂತಿಗಳ ಕೈಗಳನ್ನು ನೀಡು...

ನಿನ್ನ ತಂಗಿಯ ಈ ಪ್ರತ್ಯಕ್ಷ ಅಧಃಪತನದ ಬಗ್ಗೆ ನಿನ್ನ ಪ್ರತಿಕ್ರಿಯೆಗಳೇನು?...

ನಾನು ಹೇಡಿಯಂತೆ ವರ್ತಿಸಿದೆನೇ? ... ಹೋಗಿ ಕದ ಬಡೆದು ಎಬ್ಬಿಸಬೇಕಿತ್ತೇ? ಇಲ್ಲ, ಇಂಥ ಅನಾಗರಿಕ ವರ್ತನದಲ್ಲಿ ಅರ್ಥವೇನಿರಲಿಲ್ಲ...

ಆತ್ಮಹತ್ಯೆಯ ವಿಚಾರ ಹೃದಯದಾಳದಲ್ಲಿ ಹುಟ್ಟಿ ಅಲ್ಲಿಯೇ ಸತ್ತು ಹೋಯಿತು... ಆ ಹುಚ್ಚು ವಿಚಾರದಲ್ಲಿಯೂ ಅರ್ಥವಿರಲಿಲ್ಲ...

ಇನ್ನೇನು ಮಾಡಲಿ ನಾನು? ಇಲ್ಲಿರುವದಂತೂ ಶಕ್ಯವಿಲ್ಲ...

ನಾನು ಪೂಜಿಸಲು ತೊಡಗಿದ ದೇವ ಸೈತಾನನಾಗಬೇಕೇ?...

ನಾನು ಮರಳಿ ವಾನಲೆಸ್‌ವಾಡಿಗೆ ಬರಲೇ?'

ಶ್ರೀಕಾಂತನಿಗೆ ಎಲ್ಲ ಸಂಗತಿಗಳನ್ನು ವರ್ಣಿಸಿ ಬರೆದ ಪತ್ರದಲ್ಲಿ ಮೇಲಿನ ಕೆಲವು ಪ್ರಶ್ನೆಗಳಿದ್ದವು. ಆ ಪತ್ರ ನನ್ನ ಹೃದಯದ ರಕ್ತದಿಂದ ಬರೆದಿದ್ದೆ. ಮನೆಗೆ ಮರಳಿ ಹೋಗಿ – ಆಚಾರ್ಯ ಇನ್ನೂ ಕಾಮಿನಿಯ ಕೋಣೆಯಲ್ಲಿಯೇ ಇದ್ದ – ಆ ಪತ್ರದಲ್ಲಿ ನನ್ನ ಹೃದಯವನ್ನೇ ಕಾರಿದ್ದೆ ! ಅದೇ ಒಂದು ಮಾರ್ಗವಿತ್ತು... ಇಲ್ಲದಿದ್ದರೆ ಹುಚ್ಚೇ ಹಿಡಿಯಬಹುದಾಗಿತ್ತೇನೋ....

* * *

ಮಾರನೆಯ ದಿನ ಮುಂಜಾನೆ ನಾನು ಬೇಗ ಏಳಲಿಲ್ಲ. ಸುಡುವ ತಲೆಯನ್ನು ಶ್ರೀಕಾಂತನ ತಲೆದಿಂಬಿನ ಮೇಲಿಟ್ಟು, ಹರಕು – ಮುರಕು ವಿಚಾರ – ಕನಸುಗಳ ಗದ್ದಲದಲ್ಲಿ, ಒಣಗಿದ ಕಣ್ಣುಗಳನ್ನು ಮುಚ್ಚಿ ಎರಡೂ ಕೈಗಳನ್ನೂ ಕ್ರೈಸ್ತನಂತೆ ಚಾಚಿ, ಅಂಗೈಗಳಲ್ಲಿ, ತಲೆಯಲ್ಲಿ, ಪಾದಗಳಲ್ಲಿ ಯಾರೋ ಮೊಳೆಗಳನ್ನು ಬಡಿಯುತ್ತಾರೆಂದು ಕಲ್ಪಿಸುತ್ತ, ಮಲಗಿದ್ದೆ. ಅಲ್ಲಿಂದ ಏಳಲೇಬಾರದು... ಜೀವವಿರುವತನಕ ಏಳಲೇಬಾರದು... ಎಂದೇನೋ ಯೋಚಿಸಿದೆ...

ಸುಮಾರು ಎಂಟೂವರೆಗೆ ಕಾಮಿನಿ ಕೋಣೆಯೊಳಗೆ ಬಂದಳು. ಅವಳ ಬಂದ ಸಪ್ಪಳ ಕೇಳಿಸಿದ್ದರೂ ಕಣ್ಣು ತೆರೆದು ನೋಡಲಿಲ್ಲ.

"ಗೌರೀಶ, ಇನ್ನೂ ಯಾಕೆ ಎದ್ದಿಲ್ಲ ನೀನು ?.... ಚಹಾ ತಯಾರಾಗಿದೆ. ಆಚಾರ್ಯರು ನಿನ್ನ ಹಾದೀ ಕಾಯುತ್ತಿದ್ದಾರೆ."

ನಾನು ಏನೂ ಮಾತನಾಡಲಿಲ್ಲ. ಕಣ್ಣು ಸ್ವಲ್ಪ ಪಿಳಕಿಸಿದೆ, ನನ್ನ ಕಣ್ಣುಗಳಲ್ಲಿಯ ಬೆಂಕಿಯ ಜ್ವಾಲೆಗಳು ಅವಳನ್ನು ಸುಟ್ಟು ಬೂದಿ ಮಾಡಿಯಾವು ಎಂದು ಅಳುಕಿದೆ...

"ಗೌರೀಶ..." ಅವಳ ದನಿಯಲ್ಲಿ ಚಿಂತೆ ಮೂಡಿತು.

"ಉಂ ?"

"ಯಾಕೆ ? ಮೈಯಲ್ಲಿ ನೆಟ್ಟಗಿಲ್ಲವೇ ?"

ನಾನು ಸಂಪೂರ್ಣ ಕಣ್ದೆರೆದು ಕಾಮಿನಿಯ ದಿನದ ಮುಖದೆಡೆಗೆ ನೋಡಿದೆ. ಮನುಷ್ಯನ ಮುಖದಂಥ ಮುಖವಾಡ ಬೇರೊಂದಿಲ್ಲ ! ಅವಳ ಮುಖ, ಪಾಪಗಳನ್ನು ತೊಳೆದ ಆತ್ಮದಂತೆ, ನಿರ್ಮಲವಾಗಿತ್ತು !

ಅಸ್ಪಷ್ಟವಾಗಿ ಅಪೇಕ್ಷಿಸಿದ ಯಾವುದೋ ಬದಲು ಎಲ್ಲಿಯೂ ಕಾಣಲಿಲ್ಲ... ನಾನು ದಿಙ್ಮೂಢನಾದೆ....

"ನೋಡೋಣ – ಜ್ವರಗಿರ ಇದೆಯೇನು..." ಅವಳ ಕೈ ನನ್ನ ಹಣೆಯ ಮೇಲಿತ್ತು. ಕೆಟ್ಟ ಹುಳವನ್ನು ಝಾಡಿಸುವಂತೆ ಅವಳ ಕೈಯನ್ನು ಝಾಡಿಸಿ ಒಗೆಯಬೇಕೆಂದೆನಿಸಿತು... ಆದರೂ ಹಾಗೆಯೇ ಇದ್ದೆ ಸುಮ್ಮನೆ....

"ಹೌದು, ಮೈ ಬೆಚ್ಚಗಿದೆಯಲ್ಲ. ನಿಧಾನ ೧೦೦–೧೦೧ ಡಿಗ್ರಿಯಾದರೂ ಇರಬೇಕು. ನಾನು ಚಹಾ ಇಲ್ಲಿಯೇ ತರುವೆ, ಹಾಂ ?" ಎಂದು ನರ್ಸ್‌ಳ ಮುಗುಳು ನಗೆ ನಕ್ಕು ಮಾಯವಾದಳು.

ಈ 'ನರ್ಸು' ಬರುವ ತನಕ ನಾನು ಸತ್ತು ಬಿಡಬೇಕೆಂದೆನಿಸಿತು...

ಆಚಾರ್ಯ ತನ್ನ ಮೀಟಿಂಗಿಗೆ ಹೋದೊಡನೆ ಕಾಮಿನಿ (ಅವಳು ಜಳಕ, ವೇಷ–ಭೂಷ ಎಲ್ಲ ಮುಗಿಸಿ ಚಂದ ಕಾಣುತ್ತಿದ್ದಳು) ನನ್ನ ಕಾಳಜಿಯಲ್ಲಿ ತತ್ಪರತೆ ತೋರಿಸತೊಡಗಿದಳು.

"ನನಗೂ ಮೀಟಿಂಗಿಗೆ ಹೋಗಬೇಕೆಂದಿತ್ತು. ಆದರೆ ನಿನಗೆ ಇಷ್ಟು ಜ್ವರವೆಂದೊಡನೆ ಹೋಗುವದನ್ನು ಬಿಟ್ಟೆ..."

"ಥ್ಯಾಂಕ್ಸ !" ನನ್ನ ಎರಡನೆಯ ಶಬ್ದ ಅವಳಿಗೆ. (ಮೊದಲನೆಯ 'ಥ್ಯಾಂಕ್ಸ' ಅವಳು ಚಹ–ನೀರು ಮುಂತಾದವುಗಳನ್ನು ತಂದಿಟ್ಟು ಹೋಗುವಾಗ ನಾನು ಕಷ್ಟದಿಂದ ಅವಳ ಮೇಲೆ ಉಗುಳಿದ್ದೆ...)

"ಡಾಕ್ಟರರನ್ನು ಕರೆತರಲು ನೆರೆಮನೆಯ ಅಹಮ್ಮದನಿಗೆ ಹೇಳಿರುವೆ..."

"ಡಾಕ್ಟರರ ಅವಶ್ಯಕತೆಯಿಲ್ಲ. ಹಾಗೂ ನಿನ್ನ ಅವಶ್ಯಕತೆಯೂ ಇಲ್ಲ." ನನ್ನ ಧ್ವನಿಯ ಕಠೋರತೆಗೆ ನಾನೇ ಮೆಚ್ಚಿದೆ. "ನೀನು ದೊಡ್ಡ ಕ್ರಾಂತಿಕಾರೀ ಪಾರ್ಟಿಯ ಮೆಂಬರಳು ! ಕ್ರಾಂತಿ ಮಾಡಲು ಹೋಗುವದನ್ನು ಬಿಟ್ಟು ನನ್ನ ಹತ್ತಿರ ಯಾಕೆ ಕುಳಿತಿರುವಿ ?"

"ಯಾಕೆ ಎಂದರೆ ನಿನಗೆ ಜ್ವರ ಬಂದಿವೆಯೆಂದು ...."

"ಜ್ವರ ಬಂದರೇನು ನಾನು ಸಾಯುವೆನೇ ?.... ಸತ್ತರೇನು ಕ್ರಾಂತಿ ನಿಲ್ಲುವದೇ?"

"ಗೌರೀಶ, ಜ್ವರ ನೆತ್ತಿಗೇರತೊಡಗಿತೇನು?... ಬಹಳ ಮಾತನಾಡಬೇಡ...."

ಅವಳ ಕೈಯು ಮರಳಿ ನನ್ನ ಹಣೆಯ ಮೇಲೆ ಬಂತು.

ಅವಳ ಕೈ ನನ್ನ ಹಣೆಯ ಮೇಲಾಡುವಾಗ ನನ್ನ ಹೃದಯ ಹೇಗೋ ಏನೋ ಕರಗಿ ನೀರಾಗತೊಡಗಿತು. ಕಣ್ಣುಗಳಿಂದ ಒಂದೇ ಸಮನೆ ಕಂಬನಿ ಸುರಿಯತೊಡಗಿದವು.

"ಗೌರೀಶ, ಇದೇನು? ಕಣ್ಣೀರು?"

ಸ್ವಲ್ಪ ಕಷ್ಟದಿಂದ ಕಣ್ಣೀರು ನುಂಗಿದೆ... "ಯಾಕೆ, ಕಣ್ಣೀರು ಎಂದೂ ನೋಡಿಲ್ಲವೇ?"

"ಗೌರೀಶ !" ಅವಳ ಎಡಗೈಯು ನನ್ನ ಕೂದಲಲ್ಲಾಡಗಿತು, ಬಲಗೈಯು ನನ್ನ ಎದೆಯ ಮೇಲೆ ಬಂತು...

ಮರಳಿ ಆ ಮಾತೃತ್ವದ ಅಭಿನಯಕ್ಕೆ ಮಾರುಹೋದೆ. ಒದ್ದೆಯಾದ ಕಣ್ಣು ಮರಳಿ ಧಾರೆ ಹಿಡಿದವು...

"ಏನಾಯಿತು, ಗೌರೀಶ?" ಅವಳ ಧ್ವನಿಯಲ್ಲಿ ಚಿಂತೆಯ ಕಂಪನವಿತ್ತು.

"ಏನಿಲ್ಲ," ಎಂದು ನಾನು ನುಡಿಯುವಾಗಲೇ ನನಗೆ ಸಿಟ್ಟು ಬಂತು. ನನ್ನ ನಿರ್ಬಲತೆಯ ಮೇಲೆ ರೇಗಿದೆ. ಕೂಡಲೇ....

"ಕಾಮಿನಿ... ನಿನ್ನೆ ರಾತ್ರಿ... ನೀನು.... ಏನು.... ಮಾಡಿದಿ?"

"ನಾನು – ಏನು ಹಾಗೆಂದರೆ?" ಕಾಮಿನಿಯ ದನಿಯಲ್ಲಿ ಅಚ್ಚರಿಯಿತ್ತು!

ನಾನು ದಿಙ್ಮೂಢನಾದೆ. ಅವಳ ನಟನೆ ನನ್ನನ್ನು ರೇಗಿಸಿತು...

"ಯಾಕೆ ಸುಮ್ಮನೆ ನಟನೆ ಮಾಡುತ್ತೀ? ನಾನು ನನ್ನ ಕಣ್ಣಿನಿಂದ ನೋಡಿರುವೆ. "ನಾನು ಕೂಗಿದೆ.

"ಏನು?" ಅವಳ ಶಾಂತ ಪ್ರಶ್ನೆ.

"ಏನು?" ಆ–ಆ ಆಚಾರ್ಯ ತನ್ನ ಹಾಸಿಗೆಯಲ್ಲಿದ್ದಿಲ್ಲ...."

ಒಮ್ಮೆಲೆ ಜೋರಿನಿಂದ ನಕ್ಕಳು ಕಾಮಿನಿ!

"ಅದೇ–? ಹೌದು – ರಾತ್ರೆ ಅವರು ಬಂದಿದ್ದರು ನಿಜ... ನನ್ನ ಕೋಣೆಯಲ್ಲಿ... ಆದರೆ ನಾನು ಅವರ ಕರೆಯನ್ನು ನಿರಾಕರಿಸಿದೆ..." ಎಂದು ಕಾಮಿನಿ ಕಿಡಿಕಿಯೆಡೆಗೆ ನೋಡಿದಳು.

"ನಾನು ಮರಳಿ ಬಂದಾಗ – ತಲೆ ಕೆಟ್ಟು ಸ್ಟೇಶನಿನತ್ತ ಹೋಗಿದ್ದೆ – ಅದಿರಲಿ ನಾನು ಮರಳಿ ಬಂದಾಗಲೂ ಆತ ಇರಲಿಲ್ಲ !"

"ಆಗ ಅವರು ಎದ್ದು ಹೊರಗೆ ಹೋಗಿರಬೇಕು... ಅಥವಾ ನಿನ್ನಂತೆ ತಿರುಗಾಡಲು ಹೋಗಿರಬೇಕು... ನನಗೇನು ಗೊತ್ತು?"

ಅವಳು ಏನು ಹೇಳಿದರೂ ನಂಬುವಷ್ಟು ನಾನು ಮಳ್ಳನಿದ್ದಿಲ್ಲ. ಆದರೆ ಅವಳ ಹೇಳಿಕೆಗೆ ಆಕ್ಷೇಪಿಸುವದು ಶಕ್ಯವಿತ್ತೆ?

"ಹೀಗೇನು? ಇದ್ದಿರಬಹುದು... ನನ್ನ ಹಾಳು ತರ್ಕ ತಪ್ಪಿರಬೇಕು... ಅದಿರಲಿ, ಅವನು ನಿನ್ನ ಖೋಣೆಯಲ್ಲಿ ಬಂದು ಹಾಗೆ ಕೇಳಿದಾಗ ನೀನು ಒದರಲಿಲ್ಲೇಕೆ?"

"ಒದರಲು ಅವರೇನು ಬಲಾತ್ಕಾರಮಾಡುತ್ತಿದ್ದರೇನು? ಏನೋ ಅನಿಸಿರಬೇಕು, ನನ್ನ ಮೇಲೆ ಅವರಿಗೆ ಪ್ರೇಮ ಉಂಟಾಗಿರಬೇಕು, ಹಸಿವೆಯಾಗಿರಬೇಕು, ಬಂದು ಕೇಳಿರಬೇಕು. ಅದರಲ್ಲೇನು ತಪ್ಪು?"

"ನೀನು ಅವರ ಹಸಿವೆ ಹಿಂಗಿಸಲಿಲ್ಲೇಕೆ? ಅದರಲ್ಲೇನು ತಪ್ಪಿತ್ತು"

ನನ್ನ ವ್ಯಂಗ್ಯೋಕ್ತಿಯ ಅರ್ಥ ಅವಳಿಗೆ ಆಗಿರಬೇಕು.

"ವಾಹ್, ಅದರಲ್ಲೇನು ತಪ್ಪಂತೆ? ಏನು – ನನ್ನ ಪರೀಕ್ಷೆ ಮಾಡುತ್ತಿರುವೆಯಾ? ... ಯಾರಿಗೂ ಸಂಶಯ ಬರುವಂತೆ ಆಚಾರ್ಯರು ನನ್ನ ಕೋಣೆಯಲ್ಲಿ ಬಂದದು ನಿಜ. ಒಂದು ತಾಸಿನವರೆಗೆ ಚರ್ಚೆಯ ಮುಖಾಂತರ ನನ್ನ ನಿಶ್ಚಯ ಬದಲಿಸಿ, ನನ್ನನ್ನು ಕಾಮಾಸಕ್ತಳನ್ನಾಗಿ ಮಾಡಲು ಯತ್ನಿಸಿದರು ನಿಜ. ಆದರೆ ನಾನು ದೃಢಮನಸ್ಸಿನಿಂದ – ಇದು ಒಳ್ಳೆಯದಲ್ಲ – ನಾನು ಹೆಣ್ಣು – ಒಮ್ಮೆ ಬಿದ್ದರೆ ತೀರಿತು – ಎಂದು ಅವರಿಗೆ ಬುದ್ಧಿ ಹೇಳಿ ನಕಾರ ಕೊಟ್ಟೆ...."

"ನಿಜವೇ!.... ಏ ಆದರೆ ಅಷ್ಟೊತ್ತಿನ ತನಕ ಆತ ದೂರ ಕುಳಿತೇ ನಿನ್ನ ಮನಸ್ಸಿನಲ್ಲಿ ಕ್ರಾಂತಿ ಸುರುಮಾಡಿದ್ದನೇ?"

"ಹೌದು... ಅವರು ಹಾಗೆ ಬಹಳ ಒಳ್ಳೆಯ ಮನುಷ್ಯರು... ಹುಚ್ಚನಂತೆ ವರ್ತಿಸಿ ಏನಾದರೂ ಮಾಡಬೇಕೆನ್ನುವ ಮೂರ್ಖ ತರುಣರಲ್ಲ ಅವರು... ಹಾಗೂ – ಹಾಂ – ಸ್ವಲ್ಪ ಕೈ – ಗಿಯ್ ಹಿಡಿದರೆ ಅದರಲ್ಲೇನು ವಿಶೇಷ?"

"ಏನಿಲ್ಲ !"

"ಗೌರೀಶ – ಡಾಕ್ಟರರು ಬಂದರೆಂದು ಕಾಣಿಸುತ್ತದೆ."

* * *

ಕಾಮಿನಿಯ ಮಾತುಗಳಲ್ಲಿ ನನಗೆ ಎಳ್ಳಷ್ಟೂ ವಿಶ್ವಾಸವಿರಲಿಲ್ಲ ಈಗಲೂ ಇಲ್ಲ. ಆದರೆ ಅವಳ ಮಾತಿನ ಚಮತ್ಕೃತಿ ನನ್ನನ್ನು ತೂತು ಬಿದ್ದ ಬಲೂನಿನಂತೆ, ನಿರ್ವೀರ್ಯನನ್ನಾಗಿ ಮಾಡಿತು...

ಒಂದು ನಿಶ್ಚಯ ಮಾತ್ರ ಪರ್ವತದಂತೆ ಪ್ರಬಲವಾಗತೊಡಗಿತು : ಮುಗಿಯಿತಿನ್ನು! ಕಾಮಿನೀ – ಕೇಂದ್ರವನ್ನು ನನ್ನ ಹೃದಯದೊಳಗಿಂದ ಬೇರು

ಸಹಿತ ಕಿತ್ತೊಗೆದು ನಿರ್ನಾಮಮಾಡಬೇಕು. ಇನ್ನು ಕಾಮಿನಿ ನನ್ನ ಹೃದಯದ ರಾಣಿಯಲ್ಲ... ಬರೇ ಮಿತ್ರನ ತಂಗಿ ಮಾತ್ರ...

ಶ್ರೀಕಾಂತನ ಪತ್ರ ಬಂತು. (ಅವನಿಗೆ ನಾನು ನನ್ನ ಹುಚ್ಚು ಪತ್ರವನ್ನು ಕಳಿಸಿರಲಿಲ್ಲ....) ಅದರಲ್ಲಿ :

"ಡಾಕ್ಟರರು ನನ್ನ ಒಂದು ಪುಪ್ಪುಸವನ್ನೇ ತೆಗೆಯಬೇಕೆಂದಿದ್ದಾರೆ. ನಾಳೆ – ನಾಡದರೊಳಗೆ 'Pneumonectomy' ಆಪರೇಶನ್ ಮಾಡುವವರಿದ್ದಾರೆ ಆದುದರಿಂದ ನಾನು ಇನ್ನೊಂದು ತಿಂಗಳು ಇಲ್ಲಿಯೇ ಇರಬೇಕಾಗುವದು.... ಕಾಳಜಿ ಮಾಡಬಾರದು. ಜೀವಿಸಲು ಒಂದೇ ಪುಪ್ಪಸವಿದ್ದರೂ ನಡೆಯುವದು ! ನೀನು ಬರಬೇಕೆಂದಿಲ್ಲ. ಇಲ್ಲಿಯ ಡಾಕ್ಟರರೂ ನರ್ಸುಗಳೂ ನನ್ನನ್ನು ಬಹಳೇ ಕಾಳಜಿಯಿಂದ ನೋಡುಕೊಳ್ಳುತ್ತಿದ್ದಾರೆ. ಮಿತ್ರರಂತೆ...

ಬೇಗನೇ ನನ್ನ ಹೋದ ಪತ್ರದಲ್ಲಿ ತಿಳಿಸಿದ ಪುಸ್ತಕಗಳನ್ನೆಲ್ಲ ಕಳಿಸಿಕೊಡು...

ಕಾಮಿನಿ ನಿನ್ನ ದಾರಿಗೆ ಬರುತ್ತಿರುವಳೇ? ಬೆಸ್ಟ್ ಲಕ್!...

ರೋಹಿಣಿಯ ಪತ್ರ ಬಂದಿತ್ತು. ಪಾಪ! ಅವಳ ಬಿಚ್ಚು ಮನಸ್ಸಿನ ಸರಳತೆ – ಮಲ್ಲಿಗೆ ಹೂವಿನ ಸರಳತೆ! ಹುಚ್ಚಿ – ತಾನು ಕೆಲವು ದಿನಗಳ ಮಟ್ಟಿಗೆ ವಾನಲೆಸ್‌ವಾಡಿಗೆ ಬರಬಹುದೇ ಎಂದು ಕೇಳಿದ್ದಾಳೆ"....

ಯಾಕೋ ಏನೋ ಶ್ರೀಕಾಂತನ ಪತ್ರಗಳು ಬಹಳ ಸಂಕ್ಷಿಪ್ತವಾಗ ತೊಡಗಿದ್ದವು...

ಒಮ್ಮೆ ಹೋಗಿ, ಅವನ ಭೆಟ್ಟಿಯಾಗಿ, ಎಲ್ಲ ಹೇಳಿ, ಅತ್ತು.... ಕರೆದು, ಶುಚಿಯಾಗಿ, ಅವನ ವ್ಯಕ್ತಿತ್ವದ ಪ್ರಕಾಶದಲ್ಲಿ ಮಿಂದು, ಮರಳಿ ಚೈತನ್ಯ ತುಂಬಿಕೊಂಡು ಬರಬೇಕೆಂದೆನಿಸಿತು...

ಆದರೆ – ಯಾವುದಕ್ಕೂ ಶಕ್ತಿ ಇರಲಿಲ್ಲ ನನ್ನಲ್ಲಿ. ನನ್ನ ಹೃದಯದ ಒಂದು 'ಪುಪ್ಪಸ'ವು ಚಪ್ಪಟೆಯಾಗಿತ್ತು – ತೂತುಬಿದ್ದ ಬಲೂನಿನಂತೆ!

* * *

"ಕಾಮಿನಿ, ಶ್ರೀಕಾಂತ ಬರುವದು ಇನ್ನೂ ಒಂದು ತಿಂಗಳು. ನಾನು ನಾಳೆ... ನಾಡದರಲ್ಲಿ ಬೇರೊಂದು ಕೋಣೆ ಹಿಡಿಯಬೇಕೆನ್ನುವೆ."

"ಯಾಕೆ ನಿನಗಿಲ್ಲಿ ತೊಂದರೆಯಾಗುವದಿಲ್ಲ...

"ತೊಂದರೆ! ಛೇ, ಹಾಗೇನಿಲ್ಲ... ಸಾಕಲ್ಲ ಇದ್ದಷ್ಟು ದಿನ... ಶ್ರೀಕಾಂತ ಒಂದು ತಿಂಗಳೊಪ್ಪತ್ತಿನಲ್ಲಿ ಬರುವವ... ...ದ್ದರೂ ನಾನು ಇಲ್ಲಿರಲು ಒಪ್ಪಿದೆ. ಈಗ ಆತ...."

"ದಾದ ನಿನಗೆ ಇರಬೇಡವೆಂ... ...ನೇನೂ ಹೇಳಿಲ್ಲ ತಾನೇ ?"

"ಆತ ಎಂದಾದರೂ ಹೇಳಿಯಾನೇ ?"

"ಹಾಗಾದರೆ ?"

ನಾನು ಉತ್ತರ ಕೊಡದೆ ಟೇಬಲ್ ಮೇಲೆ ದೃಷ್ಟಿ ಚೆಲ್ಲಿ ಅಲ್ಲಿ ಬಿದ್ದ ಪೇಪರ್ ವೇಟಿನೊಡನೆ ಆಡತೊಡಗಿದೆ.

"ಹೇಳಲ್ಲ ಯಾಕೆ ಹೊರಟಿರುವೆ ?"

"ಕಾಮಿನಿ –" ಒಂದು ನಿಟ್ಟುಸುರು ಹೊರಬಿತ್ತು...

"ಉಂ ?"

"ನನ್ನ ತೊಂದರೆ ನಿನಗೆ ಬೇಡವೆಂದು..."

"ನನಗೆ ? ನನಗೆಂಥ ತೊಂದರೆ ?"

"ನನ್ನ ಪ್ರೇಮದ ತೊಂದರೆ..."

"ಪ್ರೇಮದ ತೊಂದರೆ ?... ಆದರೆ ನೀನೇನೂ ಹಾಗೆ ತೊಂದರೆ ಕೊಟ್ಟಿಲ್ಲವಲ್ಲ. ಪುರುಷರ ಕಾಮದ ತೊಂದರೆ ಸ್ತ್ರೀಯರಿಗಾಗುತ್ತದೆ... ಆದರೆ 'ಪ್ರೇಮದ ತೊಂದರೆ' – ಇಂಥ ಮಾತು ಕೇಳುವದು ಇದೇ ಮೊದಲು...."

ಹೌದು, ನನ್ನ ಹುಚ್ಚು ಪ್ರೇಮ ನಿನಗೆ ಸೇರಿದಂತಿಲ್ಲ... ನಾನು ವಾನಲೆಸ್ ವಾಡಿಯಿಂದ ಬರೆದ ಪತ್ರಕ್ಕೆ ನಿನ್ನ ಉತ್ತರವಿಲ್ಲ. ಬರಿಯ ಸಪ್ರೇಮ ವಂದನೆಗಳು ಮಾತ್ರ!... ಇಲ್ಲಿ ಬಂದ ನಂತರ ಒಂದು ದಿನವೂ ನಿನ್ನ ಕಣ್ಣಿನಲ್ಲಿ ಪ್ರೇಮದ ಮಿಣುಕು ಕಾಣಲಿಲ್ಲ... ನಿನ್ನ ಯತ್ನ ಬೇರಿನಲ್ಲಿಯೇ ಒಣಗಿತೆಂದು ಕಾಣುತ್ತದೆ...."

"ಗೌರೀಶ, ಇಷ್ಟರಲ್ಲಿಯೇ ನನ್ನನ್ನು ದಯವಿಟ್ಟು ಪ್ರೇಮ–ಲಗ್ನಗಳ ಬಂಧನದಲ್ಲಿ ಹಾಕಬೇಡ... ನಾನಿನ್ನೂ ಸಣ್ಣವಳು. ನೀನು ಸಣ್ಣವ. ಕೆಲವು ಸಮಯ – ಅಂದರೆ ಕೆಲವು ವರ್ಷ ಗೆಳೆಯ – ಗೆಳತಿಯರಂತೆ ಇರಲು ಸಾಧ್ಯವಿದೆ ತಾನೇ? ಪಾಶ್ಚಾತ್ಯ ದೇಶಗಳಲ್ಲಿ – ಮುಂಬಯಿಯಲ್ಲಿ ಕೂಡ – ಗೆಳೆತನದ ಸಂಬಂಧ ರೂಢವಿದೆ ತಾನೇ? .... ಅದರಂತೆ, ಶ್ರೀಕಾಂತ ನಿನ್ನ ಗೆಳೆಯನಿದ್ದಂತೆ, ; ನಾನು ನಿನ್ನ ಗೆಳತಿ"

"ಗೆಳತಿ?" ನಾನು ಒಣನಗೆಯೊಂದನ್ನು ನಕ್ಕೆ. ಅವಳ ಈ ಹೊಸ ವಿಚಾರ ಸರಣಿ ನನ್ನಲ್ಲಿ ಅಚ್ಚರಿಯನ್ನುಂಟು ಮಾಡಿತು. ಕಾ. ಆಚಾರ್ಯನ ಪ್ರಭಾವವೇ ಎಂದು ಸಂಶಯಗೊಂಡೆ. ನನ್ನ ಜೀವದ, ಆತ್ಮದ ಹಂಬಲು ಈಗ ಈ ಪಾತಳಿಗೆ ಇಳಿಯಿತೇ ಎಂದು ಸಿಡಿಮಿಡಿಗೊಂಡೆ.

"ಹುಂ – ಅದರಲ್ಲೇನು ತಪ್ಪಿದೆ ?"

"ಇಲ್ಲ. ತಪ್ಪೇನೂ ಇಲ್ಲ ಅದರಲ್ಲಿ" ನಿಧಾನವಾಗಿ ನುಡಿದೆ, "ಆದರೆ

ಅದರ ಪ್ರಯೋಜನವೇನು?"

"ಪ್ರಯೋಜನ? ಹಾಗಾದರೆ ನಿನ್ನ ಪ್ರೇಮ – ಲಗ್ನಗಳ ಪ್ರಯೋಜನವೇನು?"

"ಏನೂ ಇಲ್ಲ... ಎಲ್ಲದರ ಬೇರೀಜು ಶೂನ್ಯ!"

"ಗೌರೀಶ, ಇಷ್ಟೇಕೆ ಉದಾಸೀನತೆ ಬಂದಿದೆ ನಿನ್ನಲ್ಲಿ ? ನಿನ್ನ ಈ ಜ್ವರದ ಪರಿಣಾಮವಿರಬೇಕು... ಇಂದು ಆರಾಮಾಗಿದ್ದೀಯಲ್ಲವೇ? ನಡೆ, ತಿರುಗಾಡಲು ಹೋಗೋಣ – ಗುಪ್ತವಾಗಿ ಅಲ್ಲ, ಬಹಿರಂಗವಾಗಿ..."

"ಮಿತ್ರರಂತೆ?"

"ಹೂಂ – ನಡೆ."

ನಾನಿನ್ನೂ ಹಾಗೆಯೇ ಮಂಚದ ಮೇಲೆ ಕುಸಿದು ಕುಳಿತುದನ್ನು ಕಂಡು ಹತ್ತಿರ ಬಂದು ಕೈ ಜಗ್ಗಿ ಎಬ್ಬಿಸತೊಡಗಿದಳು :

"ಕಾಮಿನಿ, ಸಾಧ್ಯವಿಲ್ಲ..." ಕ್ಷೀಣ ಸ್ವರದಲ್ಲಿ ನುಡಿದೆ.

"ನಾನು ಸಾಧ್ಯಮಾಡುವೆ ನಡೆ. ನಿನ್ನ ಉದಾಸೀನತೆ ಕಳೆಯಲು, ನಿನ್ನಲ್ಲಿ ಸ್ಫೂರ್ತಿ ತುಂಬಲು ಇಗೋ..." ಎಂದು ಮೂರು ದಿನಗಳ ಮೇಲೆ ಅಂದೇ ದಾಡಿ ಮಾಡಿದ ಗಲ್ಲದಮೇಲೆ ಮುತ್ತನ್ನಿತ್ತಳು. ನನ್ನ ಶೈತ್ಯವನ್ನು ಕಂಡು ಏನೋ ಜಾದು ಮಾಡುವವಳಂತೆ, ಮಲ್ಲಿಗೆ – ನಗೆ ನಗುತ್ತ ನನ್ನ ಮುಖವನ್ನೆತ್ತಿ ತುಟಿಯ ಮೇಲೆ ತನ್ನ ಗುಲಾಬಿತುಟಿಗಳನ್ನು ಜೋರಿನಿಂದ ಒತ್ತಿ, ಮುತ್ತಿನ ಸಪ್ಪಳದೊಡನೆ ಹಿಂದೆ ಸರಿದಳು. ನನ್ನ ಮೈಯಲ್ಲಿ ರೋಮಾಂಚನವೇಳುವ ಬದಲು ಒಂದು ಬಗೆಯ ಮಂದವಾದ ಸಿಟ್ಟು ಬಂದಿತು...

"ನಿನ್ನ 'ಗೆಳೆತನ'ದಲ್ಲಿ ಇದೆಲ್ಲ ಇದೆಯೇನು? ಮುತ್ತು – ಅಪ್ಪುಗೆ – ಮತ್ತೇನು?"

"ವಾಹ್, ನೀನು ಮಾತ್ರ ಏನೂ ಇರುವ ಮೊದಲೇ ಜೋಗದಲ್ಲಿ ಅಪ್ಪಿ ಮುದ್ದು ಕೊಡಲಿಲ್ಲವೇ? ಹಾಗೆ ನೋಡಿದರೆ ಇದೆಲ್ಲಾ ನೀನೇ ಸುರುಮಾಡಿರುವಿ."

"ಅದೇ, ನನ್ನ ತಪ್ಪಾಯಿತು, ಕ್ಷಮಿಸು, ಕಾಮಿನೀ ಯಾವುದೋ ಅಜ್ಞಾತ ಅಂಧ ಶಕ್ತಿಯೊಂದು ನನ್ನಿಂದ ಇಷ್ಟು ದಿನ ತಪ್ಪು ಮಾಡಿಸಿತು..."

"ತಪ್ಪು"

"ಹುಂ..."

"ತಪ್ಪು ಮಾಡಿದೆಯೆಂದು ಈಗ ಹೇಗೆ ತಿಳಿಯಿತು? ಬುದ್ಧಿ ಎಲ್ಲಿಂದ ಬಂತು?

"ಆ ಬುದ್ಧಿಯ ಉದಯ ನಿನ್ನಿಂದ ಸುರುವಾಯಿತು !"

"ನನ್ನಿಂದ"

"ಹೌದು."

"ನಾನೇನು ಶ್ರೀಕಾಂತನಂತೆ ಜ್ಞಾನಿಯೇ ?

"ಆದರೆ ಶ್ರೀಕಾಂತನಲ್ಲಿದ್ದ ಯೋಗ್ಯತೆ ನಿನ್ನಲ್ಲಿದೆ – ಅನುಭವ !"

"ಅನುಭವ – ಅದು ಹೇಗೆ "

"ಡ್ರಾಯಿಂಗ್ ಮಾಸ್ತರ, ಶಿವರಾಮ ಕುಲ್ಕರ್ಣಿ ಇವರಿಂದ ಹಿಡಿದು ಪ್ರೊಫೆಸರ ಶರ್ಮಾ, ಕಾಮ್ರೆಡ್ ಆಚಾರ್ಯರ ತನಕ "ನನ್ನ ಮಾತು ಚೂರಿಯಾಗಿತ್ತು.

ಕಾಮಿನಿ ತಟ್ಟನೆ ಎದ್ದು ನಿಂತಳು – "ನಿನ್ನಂಥ ಹುಚ್ಚನೊಡನೆ ಮಾತನಾಡುವದೂ ಕಠಿಣ. ನೀನಿಷ್ಟು ಮೂರ್ಖ, ಸಂಶಯ – ಪಿಶಾಚಿಯಿರುವಿಯೆಂದು ನನಗೆನಿಸಿರಲಿಲ್ಲ. ನಿನ್ನಂಥ ಗಂಡನಿದ್ದರಂತೂ ತೀರಿತು. ಎಂಟೇ ದಿನಗಳಲ್ಲಿ ಉರುಲು ಹಾಕಿಕೊಳ್ಳಬೇಕು..." ಅವಳ ಮಾತಿನಲ್ಲಿ ರೋಷ ತುಂಬಿತ್ತು. ಅವಳ ಮುಖ ಆರಕ್ತವಾಗಿತ್ತು.

ಪ್ರಸಂಗದ ಧಣಿಯಾದ ನಾನು ಯಾಕೋ ಏನೋ ಹರ್ಷಗೊಂಡೆ.

ಕಾಮಿನಿ ಸರಸರನೆ ತನ್ನ ಕೋಣೆಯತ್ತ ಸಾಗಿ, "ಅಚ್ಛಾ, ಇಲ್ಲಿ ಇರುವದು ಬಿಡುವದು ನಿನ್ನ ಇಚ್ಛೆಯ ಮೇಲೆ ನಿನಗೆ ಬೇಕಾದ್ದು ನೀನು ಮಾಡು..." ಎಂದು ನುಡಿದು ಬಾಗಿಲು ಮುಚ್ಚತೊಡಗಿದಳು.

ನಾನು ತಡೆಯಲಾರದೆ, "ಯಾಕೆ, ಇಷ್ಟರಲ್ಲಿಯೇ ನಮ್ಮ ಗೆಳೆತನ ಹರಿಯಿತೇ? ಚು–ಚು–ಚು–ನನ್ನ ಪ್ರಿಯ ಗೆಳತಿಯ ಮನಸ್ಸನ್ನು ನೋಯಿಸಿ ನಾನು ಹೋಗಬಹುದೇ ಎಂದಾದರೂ ?" ಎಂದೆ. ಒಂದು ನಿಮಿಷ ವಿಜಯೋನ್ಮಾದದ ಸುಖ ನನ್ನ ರಕ್ತದಲ್ಲಿ ಸಂಚರಿಸಿ ಹೋಯಿತು...

ಮಾರನೆಯ ದಿನ ಮುಂಜಾನೆ ನನ್ನ ಬ್ಯಾಗಿನಲ್ಲಿ ಸಾಮಾನು ತುಂಬುತ್ತಿದ್ದೆ. ಅಷ್ಟರಲ್ಲಿ ಕಾಮಿನಿ ಬಂದಳು.

"ಗೌರೀಶ, ಹೀಗೆ ನೀನು ಹೋಗುವದು ಸರಿಕಾಣುವದಿಲ್ಲ. ದಾದಾ ಏನೆಂದಾನು? ತಾಯಿ ಏನೆಂದಾಳು ? ಪ್ಲೀಜ..."

"ಹೆದರಬೇಡ, ಯಾರಿಗೂ ಏನೂ ಹೇಳುವದಿಲ್ಲ. ನಾನು ನನ್ನ ಸ್ವಂತ ಇಚ್ಛೆಯ ಮೇರೆಗೆ ಹೋದೆ ಎಂದು ಹೇಳುವೆ."

"ಹೆದರಲು ನಾನೇನು ಮಾಡಿರುವೆ ?... ನಿನ್ನ ಒಣ ಸಂಶಯಗಳನ್ನು ದಾದಾನಿಗೆ, ತಾಯಿಗೆ ಹೇಳೀ–ಗೀಳಿ ಮತ್ತೆ...."

"ಹೆದರುವಿಯೇಕೆ ? ನಿಷ್ಪಾಪ, ನಿರಾಗಸ ಜನರಿಗೆ ಹೆದರಿಕೆ ಎಂಥದು?"

"ಗೌರೀಶ, ಸುಮ್ಮನೆ ನಿನ್ನ ನಿರಾಶೆಯ ಭಾವನೆಯ ತುತ್ತಾಗಿರುವಿ ನೀನು. ನಿನ್ನ ಪ್ರೇಮಕ್ಕೆನನ್ನ ಪ್ರೇಮ ಇನ್ನೂ ಜೋಡಿಸಿಲ್ಲವೆಂದು. ನಿಜವಾಗಿಯೂ ನಿನ್ನಲ್ಲಿ ಆಸ್ಥೆ ಇದೆ, ಶ್ರದ್ಧೆ ಇದೆ, ಮಮತೆ ಇದೆ, ಪ್ರೇಮ ಬೇಕಾಗಿದ್ದರೆ ಇಕೋ ಪ್ರೇಮ...

ನನ್ನ ತೀರ ಹತ್ತಿರ ಬಂದು ಅರ್ಪಣೆಯ ಭಾವದಿಂದ ಮುಖವನ್ನೆತ್ತಿದಳು.

ನನಗೆ ತಡೆಯುವದಾಗಲಿಲ್ಲ. ನನ್ನ ಸೈತಾನ ನನ್ನನ್ನು ನರಕದಲ್ಲಿ ಒಯ್ದರೂ ಅಡ್ಡಿಯಿಲ್ಲ. ಈ ಮೌಲಿಕ ಕ್ಷಣವನ್ನೂ ದೂರೀಕರಿಸಲಾರೆ... ಹಾವು ಕಚ್ಚಿದರೂ ಅಡ್ಡಿಯಿಲ್ಲ. ಆದರೆ ಹೆಡೆಯಲ್ಲಿಯ ಅಮೂಲ್ಯ ರತ್ನ ನನ್ನ ಕೈಯಿಂದ ಹೋಗಗೊಡಲಾರೆ ಎಂಬ ಉತ್ಕಟ, ನಿರಂಕುಶ ಭಾವ ನನ್ನ ರಕ್ತವನ್ನು ಹೊಯ್ದಾಡಿಸಿತು. ನೋಡುನೋಡುವುದರಲ್ಲಿ ಕಾಮಿನಿ ನನ್ನ ತೋಳುಗಳಲ್ಲಿ ಬಂಧಿತಳಾಗಿ, ನನ್ನ ಜೊತೆಗೆಯೆ ಮಂಚದ ಮೇಲೆ ಉರುಳಿದಳು. ಭಯಂಕರ ರೊಚ್ಚಿನಿಂದ ನನ್ನ ಅವಳ ಮೈಗಳು ಪುಡಿ ಪುಡಿಯಾಗುವಂತೆ ಹಿಚುಕಿದೆ... ಅವಳ ತುಟಿಗೆ ನನ್ನ ತುಟಿಯೊತ್ತಿ ಜೋರಿನಿಂದ ಕಚ್ಚಿದೆ...

"ಗೌರೀಶ..." ಎಂದು ನನನ್ನು ಕಸುವಿನಿಂದ ದೂರ ಸರಿಸತೊಡಗಿದಳು. ಕೊನೆಗೆ ಅವಳ ಕಸುವು ಮೆಲ್ಲಗೆ ಕ್ಷೀಣವಾಯಿತು... ಮೆತ್ತಗೆ ಕಣ್ಣು ಮುಚ್ಚಿ ನನ್ನ ಎದೆಯಲ್ಲಿ ತನ್ನ ಎದೆ ಸೇರಿಸಿ ಹಾಗೆಯೇ ನಿಶ್ಚೇತಳಾದವಳಂತೆ ಒರಗಿದಳು.

"ಕಾಮಿನೀ..."

"ಉಂ?"

"ಇದೇ ಏನು ನಿನ್ನ ಪ್ರೇಮ?"

"ಉಂ"?

"ಕಾಮಿನಿ, ನೀನು ಏನೇ ಮಾಡಿದರೂ.... ಮಾಡಿದ್ದರೂ... ನೀನೇ ಬೇಕು – ನೀನೇ ಬೇಕು..."

"ಹುಂ?"

"ಹುಂ."

ನನ್ನ ಕೈಗಳು ತಮ್ಮಿಂದ ತಾವೇ ಅವಳ ದೇಹದೊಡನೆ, ಅವಳ ವಸ್ತುಗಳೊಡನೆ ಚೆಲ್ಲಾಟವಾಡುತ್ತಿದ್ದವು. (ಆ ಕ್ಷಣದ ನೆನಪು ನನಗೆ ನಿಜಕ್ಕೂ ಸ್ಪಷ್ಟವಿಲ್ಲ) ಕಾಮಿನಿಯ ನಿಶ್ಚಲತೆ, ತಟಸ್ಥತೆ ವಿಲಕ್ಷಣವಾಗಿದ್ದವು. ಅವಳಿಂದ ಯಾವದೇ ಬಗೆಯ ಪ್ರತೀಕಾರ ಬರಲಿಲ್ಲ, ಪ್ರತಿಭಟನೆ ಬರಲಿಲ್ಲ... ಅವಳ ಮುಖದ ಮೇಲಿನ ವಿಚಾರ ಮಗ್ನತೆ ನೋಡಿ ಬೆಚ್ಚಿದೆ...

.... ನನ್ನ ಎಲ್ಲ ಶಕ್ತಿ – ಹುಚ್ಚು – ಮದ – ಎಲ್ಲ ಒಮ್ಮೆಲೆ ತೂತುಬಿದ್ದ

ಬಲೂನಿನಲ್ಲಿಯ ಗಾಳಿಯಂತೆ ಇಲ್ಲದಂತಾಯಿತು.... ನಾನು ಚಪ್ಪಟೆಯಾದೆ... ನಿರ್ವೀರ್ಯನಾದೆ....

"ಕಾಮಿನಿ"

"ಊಂ?"

"ಏಳು, ಕ್ಷಮಿಸು – ಏನೋ ಭಯಂಕರ ಪ್ರಮಾದ ಘಟಿಸುವದಿತ್ತು. ಛೆ... ಇಂಥ ಪ್ರಮಾದ ಕನಸು – ಮನಸ್ಸಿನಲ್ಲಿಯೂ ಎಣಿಸಿಲ್ಲ ನಾನು... ನಾನು... ನಾನೇನು ಬಲಾತ್ಕಾರಮಾಡಹೊರಟಿದ್ದೇನೇ?... ಛೇ... ತಪ್ಪಾಯಿತು... ಕ್ಷಮಿಸು... ಕಾಮಿನೀ... ಕಾಮಿನೀ, ನಿನ್ನ ಗೆಳೆತನದ ಉಪಯೋಗವಿಲ್ಲ... ನೋಡಿದೆಯಾ... ಬೇಕಾದದ್ದು ಲಗ್ನ... ಆಜನ್ಮ ಸಂಬಂಧ..."

ಕಾಮಿನಿ ಎದ್ದು ಕುಳಿತಳು. ಅವಳ ಮುಖ ಮ್ಲಾನವಾಗಿತ್ತು. ಅದೇನು ತಪ್ಪಿನ ಭಾವನೆಯೋ ನಿರಾಶೆಯ ಭಾವನೆಯೋ – ಗೊತ್ತಾಗಲಿಲ್ಲ...

"ಗೌರೀಶ, ಏನು ಮಾಡ ಹೊರಟಿದ್ದಿ ನೀನು?"

ಅವಳ ಪ್ರಶ್ನೆಗೆ ನಾನು ಲಜ್ಜಿತನಾದೆ. ಮುಖ ಕೆಳಗೆ ಹಾಕಿ ಅವಳ ಕೈ ಹಿಡಿದೆ : "ಕಾಮಿನಿ, ಕ್ಷಮಿಸು...."

ಕಾಮಿನಿಯ ಮುಖದ ಮೇಲೆ ಒಂದು ವಿಲಕ್ಷಣದ ಮುಗುಳುನಗೆ ಕಂಡಂತಾಯಿತು...

* * *

ಈಗ ಆ ಘಟನೆಯ ಬಗ್ಗೆ ವಿಶ್ಲೇಷಣಾತ್ಮಕವಾಗಿ ವಿಚಾರಮಾಡಿದಾಗ ಅನಿಸುವದೇನಂದರೆ : ಕಾಮಿನಿ ನನ್ನನ್ನು, ಮೀನುಗಾರ ಮೀನು ಹಿಡಿಯುವಂತೆ ಹಿಡಿಯಬೇಕೆಂದಿದ್ದಳೋ ಏನೋ! ಅವಳಲ್ಲಿ ಕಾಮಾತುರತೆ ಇದ್ದಿಲ್ಲ – ಮೀನುಗಾರನ ತಾಳ್ಮೆಯಿತ್ತು, ಶಾಂತ ಪ್ರಯತ್ನವಿತ್ತು. ಅವಳ ಉದ್ದೇಶ ಅಸಫಲವಾಗಿರಬೇಕು – ಅದಕ್ಕೆಂದೇ ಅವಳ ವಿಲಕ್ಷಣ ನಗೆ, ಹಾಗೂ ನನ್ನ ಮೇಲೆಯೇ ಆರೋಪ ಹೊರಿಸುವ ಪ್ರಶ್ನೆ, "ಗೌರೀಶ, ಏನು ಮಾಡಲು ಹೊರಟಿದ್ದಿ ನೀನು?...

ನನ್ನನ್ನು ದೈಹಿಕ ಬಂಧನದಲ್ಲಿ ಹಿಡಿಯುವದರಲ್ಲಿ ಏನಾದರೂ ಉದ್ದೇಶವಿತ್ತೇ ಅವಳದು? ಇದ್ದಿರಬಹುದು – ತನ್ನ ಅನುಭವಗಳ ಫಲವನ್ನು ನನ್ನ ಕೊರಳಿಗೆ ಕಟ್ಟುವ ವಿಚಾರವಿತ್ತೇ? ಕದಾಚಿತ್ ತಾನು ಬಸಿರು – ಗಿಸಿರಾದರೆ ನನ್ನನ್ನು ಜವಾಬ್ದಾರನನ್ನಾಗಿ ಮಾಡಿಕೊಳ್ಳಬೇಕೆಂದಿದ್ದಳೇ?....

ಮುಂದೆ ಶ್ರೀಕಾಂತ ಬಂದ ನಂತರ ಒಮ್ಮೆ ಮರಳಿ ನನ್ನನ್ನು ಉತ್ತೇಜನ

ಗೊಳಿಸಲು ಯತ್ನಿಸಿದಳು. ಆಗ ಕಾ. ಆಚಾರ್ಯನ ಆಸರೆ ತಪ್ಪಿತ್ತು. ಆತ ಬೆಂಗಳೂರಿಗೆ ಪಾರ್ಟಿಯ ಕೆಲಸದ ಸಲುವಾಗಿ ಹೋಗಿದ್ದ, ಅಲ್ಲಿಯೇ ತಳವೂರಿದ್ದ. ಆಗ ಯಾವುದೋ ಭೀತಿಯಿಂದೆಂಬಂತೆ ಒಂದು ಮಧ್ಯಾಹ್ನ ನನ್ನ ಹತ್ತಿರ ಬಂದು, "ಗೌರೀಶ, ಆಯಿತು – ನಿನ್ನನ್ನು ಲಗ್ನವಾಗಲು ನಾನು ಒಪ್ಪಿದೆ..." ಎಂದು ಯಾವುದೋ ಆಶೆಯಿಂದ ತನ್ನನ್ನು ಹೆಚ್ಚು ಕಡಿಮೆ ಅರ್ಪಿಸಲು ಯತ್ನಿಸಿದ್ದಳು, ಮರಳಿ ನನ್ನ ಪ್ರೇಮ – ಧ್ಯೇಯವಾದ ನನ್ನ ಆಂತರಿಕ ನೈರ್ಮಲ್ಯ–ಭಾವ ಹಾಗೂ ಅವಳ ಬಗ್ಗೆ ಇದ್ದ ನನ್ನ ಒಂದು ಬಗೆಯ ಆದರ ಇವು ನನ್ನನ್ನು ತಡೆಹಿಡಿದ್ದವು. ಅಷ್ಟೇ ಅಲ್ಲದೆ ನನ್ನಲ್ಲಾಗ ದೈಹಿಕ ಹಂಬಲದ ಬಗ್ಗೆ ಒಂದು ಬಗೆಯ ಹೇಸಿಕೆ – ಭೀತಿಯುಕ್ತ ಹೇಸಿಕೆ–ಮನೆಮಾಡಿತ್ತು : ಅದರ ಮೂಲಕ ನನ್ನ ದೇಹ ನಿರ್ಬಲವಾಗಿ ಕಂಪಿಸಿತ್ತು, ನಿಃಸಹಾಯಕವಾಗಿ ಮುರುಡಿತ್ತು...

ಆನಂತರ ಮಾತ್ರ ಕಾಮಿನಿ ನನ್ನನ್ನು ಕೆಲಸಕ್ಕೆ ಬಾರದ, ಮುರಿದ, ಆಟಿಗೆಯಂತೆ, ದೂರ ಚಲ್ಲಿದಳು.

* * *

ನಿನ್ನೆ ರಾತ್ರೆ ಡಾಲಿ ಬಂದು ಹೋದರೂ ಅವಳ ಬಗ್ಗೆ ನಡುವೆಯೇ ಬರೆಯುವ ಮೋಹ ತಡೆಹಿಡಿದಿರುವೆ.... 'ಡಾಲಿ' – ಅವಳ ಹೆಸರೇ ಸೂಚಿಸುವಂತೆ – ಅವಳು ನನ್ನ ಆಟಿಗೆ – ಒಂದು ದೃಷ್ಟಿಯಿಂದ. ಆದರೆ, ಪಿಗ್ಮ್ಯಾಲಿಯನನ ಮೂರ್ತಿಯಂತೆ, ಆ ಆಟಿಗೆ ಜೀವಂತವಾಗಲು ಹವಣಿಸುತ್ತಿದೆ ! ಅದರಿಂದ ಒಂದು ಬಗೆಯ ಅದ್ಭುತ ಭೀತಿ !... ನಾನು ಆಫ್ರಿಕೆಗೆ ಹೋಗುವ ಸಮಯ ಸಮೀಪಿಸಿದಂತೆ ಅವಳಲ್ಲಿ ಒಂದು ತರದ ಆಕಸ್ಮಿಕ ಬದಲಾವಣೆಯಾಗುತ್ತಿದೆ. ಅವಳ ಮಾತುಕತೆಗಳಲ್ಲಿ ನಿರಾಶೆಯ ಛಾಯೆ ಬರೆದಿದೆ ; ಅವಳು ಕೊಡುವ ದೈಹಿಕ ಆನಂದದಲ್ಲಿ ತೀಕ್ಷ್ಣವಾದ, ಕಂಬನಿಗಳ ಅಂಚಿನ ಮೇಲೆ ಕಂಪಿಸುವ ದುಃಖದ ತೆರೆಯಿದೆ. ನಿನ್ನೆ ಅವಳಲ್ಲಿ ಎಲ್ಲಿಲ್ಲದ ಕಂಬನಿಗಳ ಧಾರೆ ಎಷ್ಟೋ ಹೊತ್ತಿನವರೆಗೆ ಸುರಿಯುತ್ತಿತ್ತು. ಯಾಕೆ ? ಏನಾಯಿತು... ಎಂದು ಕೇಳಿದರೆ, ಅದಕ್ಕೆ ಉತ್ತರವೇ ಇಲ್ಲ.... ಅಥವಾ, ಉತ್ತರ ಕಂಬನಿಯಲ್ಲಿಯೇ ರೂಪಾಂತರಗೊಂಡಿರಬೇಕು.... ಕೊನೆಗೊಮ್ಮೆ ಅಳುವದನ್ನು ನಿಲ್ಲಿಸಿ ಮುಗಳುನಗೆ ನಕ್ಕಳು...

"ಗೌರೀಶ, I' m sorry – ಸುಮ್ಮನೆ ಅತ್ತೆ. ನಮ್ಮ ಪ್ರೇಮದ ಆಟದಲ್ಲಿ ಭಂಗ ತಂದೆ.... ಇಲ್ಲ, ಇನ್ನು ಅಳುವುದಿಲ್ಲ... ಇಗೋ, ನಿನಗೆ ಸೇರುವ ದಂಶ–ಚುಂಬನ..."

ಅವಳ ಪ್ರೇಮಚೇಷ್ಟೆಯಲ್ಲಿ ಒಂದು ಬಗೆಯ ಉಗ್ರತೆಯಿತ್ತು. ಆ ಉಗ್ರತೆಯ

ಹಿಂದೆ ಯಾವದೋ ನೋವಿದೆ, ನೈರಾಶ್ಯವಿದೆಯೆಂಬುದು ಸ್ಪಷ್ಟವಿತ್ತು.

"ಡಾಲಿ, ನನ್ನನ್ನು ಅನುಕಂಪದ ಸೀಮೆಯಲ್ಲಿ ನೀನು ಎಳೆಯುತ್ತಿರುವಿ... ನಿನ್ನ ನೋವಿನ ಅಸ್ಪಷ್ಟ ಕಲ್ಪನೆ ನನಗಿದೆ. ಅದಕ್ಕೆ ಯಾರು ಕಾರಣರು? ನಾನೇ? ನೀನೇ? ನಾವೇ? ಮುಂಬಯಿಯೇ? ಆಫ್ರಿಕೆಯೇ?"

"ಯಾರೂ ಅಲ್ಲ ಜೀವನ !.... ಆದರೆ ನನಗೆಲ್ಲಿದೆ ನೋವು?" ಎಂದು ನಕ್ಕಳು. "ಎಲ್ಲಿದೆ ತೋರಿಸು. ಎದೆಯಲ್ಲಿಯೋ? ತಲೆಯಲ್ಲಿಯೋ? ದೇಹದಲ್ಲಿಯೋ? ಹೊಟ್ಟೆಯಲ್ಲಿಯೋ? ... ಎಲ್ಲಿದೆ ? ಎಲ್ಲಿಯೂ ಇಲ್ಲ..."

ಅವಳ 'ಹೊಟ್ಟೆಯಲ್ಲಿಯೋ?' ಶಬ್ದ ಯಾಕೋ ನನ್ನ ಮನಸ್ಸಿನಲ್ಲಿ ನಾನು ಒಪ್ಪಿಕೊಳ್ಳದೇ ದಬ್ಬಿ ಇಟ್ಟ ವಿಚಾರವನ್ನು ಬಡಿದೆಬ್ಬಿಸಿತು....

"ಡಾಲಿ!"

"ಉಂ?"

ನಾನು ಅವಳ ನಗ್ನ ಹೊಟ್ಟೆಯ ಮೇಲೆ, ಹೊಟ್ಟೆಯ ಕೆಳಗಿನ ಗರ್ಭದ ಮೇಲೆ ಕೈಯಾಡಿಸುತ್ತ ಕೇಳಿದೆ : "ಡಾಲಿ, ಇಲ್ಲಿ ಏನಾದರೂ ....?"

"ಇಲ್ಲ –"

"ನಿಜ ಹೇಳು–"

"ಇದ್ದರೇನಂತೆ?"

"ಇದ್ದರೇನಂತೆ! – ಇದ್ದರೆ – ನಾನು ಸತ್ತೆ – ಕೆಟ್ಟೆ?"

"ಗೋರೀ, ಎಂಥ ಅಬದ್ಧ ಮಾತು!"

"ನನಗೆ ಇದು ಬೇಕಿಲ್ಲ – ನಿನಗೆ ಮೊದಲೇ ಹೇಳಿರುವೆ. ನಮ್ಮ ನಡುವೆ ಯಾವ ಬಂಧನ ಬೇಡ–ಬೇಡವೆಂದು... ನಿಜ ಹೇಳು ನನಗೆ – " ರೊಚ್ಚಿನಿಂದ ನುಡಿದೆ. ತಲೆ ಗಿಮ್ಮೆನ್ನುತ್ತಿತ್ತು....

"ನಿಜ ಮೊದಲೇ ಹೇಳಿರುವೆ – ಇಲ್ಲ ಇಲ್ಲ ಇಲ್ಲವೆಂದು – ಈಗಾಯಿತೇ ಸಮಾಧಾನ? – ಅಲ್ಲ ! ಹೊರಗೆ ಎಷ್ಟು ಕತ್ತಲೆಯಿದೆ ನೋಡು. ದಾರಿಯ ಮೇಲಿನ ಲೈಟುಗಳು ಹೋಗಿವೆಯೋ ಏನೋ... ನನಗೆ ಬೇಗ ಮನೆಗೆ ಹೋಗಬೇಕು –"

"ಇಂದು ಇಲ್ಲಿಯೇ ಮಲಗಿಕೋ –?

"ತಾಯಿ ಏನೆಂದಾಳು?"

"ಬೇಕಾದದ್ದನ್ನಲಿ –"

"ಒಳ್ಳೆಯ ಮಾತು ಹೇಳುವಿಯಲ್ಲ, ಗೋರಿ ! ಇದ್ದ ತಾಯಿಯೊಬ್ಬಳ

ಆಸರೆ – ಸಹಾನುಭೂತಿಗಳನ್ನು ಕಳೆದುಕೊಳ್ಳಲೇನು ? ಕ್ರೈಸ್ತನಲ್ಲಿ, ಪಾಪ–ಪುಣ್ಯದ ಭಾವನೆಯಲ್ಲಿ ಅವಳ ಶ್ರದ್ಧೆ ಅಷ್ಟಿಷ್ಟಲ್ಲ ! ನಾನೆಂದರೆ ಅವಳಿಗೆ... ಅದಿರಲಿ... ನಾನು ಬೇಗ ಹೋಗಲೇಬೇಕು, ಗೋರಿ..."

"ನಾನೂ ಬರುವೆ ಆ ಕ್ರಾಸ್ ರೋಡಿನ ತನಕ."

ಮುಂಬಯಿಯಲ್ಲಿ ಅಪರೂಪವಾದ ಕತ್ತಲೆಯಲ್ಲಿ ನಾವು ಹೋಗುವಾಗಿ ನಮ್ಮ ಸಾಮಿಪ್ಯದಲ್ಲಿ ಒಂದು ನವೀನ ಆತ್ಮೀಯತೆಯಿತ್ತು, ನವೀನ ಅನುಕಂಪವಿತ್ತು... ನನ್ನ ಬಲಗೈಯು ಅವಳ ನಡುವನ್ನ ಬಳಸಿತ್ತು ; ಅಳ ದೇಹವು ನನ್ನ ದೇಹಕ್ಕೆ ಅಂಟಿಸಾಗಿತ್ತು. ನನ್ನ ಮನಸ್ಸಿನಲ್ಲಿ ಒಂದು ಅಪರೂಪ ಭಾವನೆ ತುಂಬಿತ್ತು : ಆ ಭಾವನೆಯಲ್ಲಿ ಸುಖವೂ ಇತ್ತು ದುಃಖವೂ ಇತ್ತು, ಆನಂದವೂ ಇತ್ತು ವೇದನೆಯೂ ಇತ್ತು.

"ಗೋರೀ, ನಮ್ಮ ಒಂಬತ್ತು ತಿಂಗಳ ಸಹವಾಸ ನಿಜಕ್ಕೂ ಸುಖಕರವಾಗಿತ್ತಲ್ಲವೇ ? ನೀನು ಆಫ್ರಿಕೆಗೆ ಹೋದಮೇಲೆ ನನಗಂತೂ... ಅದಿರಲಿ.... ನಿನಗೇನನಿಸುವದು ? ನಮ್ಮ ನಷ್ಟವಾದ ಪುಟ್ಟ 'ಎಡನಿ'ನ ಸ್ಮೃತಿಗೆ ಒಂದಾದದರೂ ಕಣ್ಣೀರಿನ ಹನಿಯನ್ನು ಅರ್ಪಿಸಲಿರುವಿಯಾ ? ಅಥವಾ – ಗೋರೀ, ನೀನು ನನಗೆ ಕೊಟ್ಟ ಮಧುರ ('ಪ್ರೀತಿ'ಯನ್ನಲೇ ? 'ಮಮತೆಯನ್ನಲೇ ?' ಅಥವಾ ಬರಿಯ 'ಕಾಮ'ವೆನ್ನಲೇ ?) ಸಹವಾಸಕ್ಕೆ, ಗೆಳೆತನಕ್ಕೆ... ನನ್ನ ಹಾರ್ದಿಕ ಅಭಿನಂದನೆಗಳು... "ಥ್ಯಾಂಕ್ಸ'ದ ಹೊರತು ಮತ್ತೇನು ಹೇಳಬಲ್ಲೆ, ಮತ್ತೇನು ಕೊಡಬಲ್ಲೆ ?" ಮುಖವೆತ್ತಿ ಕಣ್ಣರಳಿಸಿ ನನ್ನ ಕಣ್ಣಿನಲ್ಲಿ ಏನೋ ಅರಿಸಿದಳು.

ನನ್ನ ಬಾಯಿಗೆ ಮಾತೇ ಬರಲಿಲ್ಲ.... ಹೃದಯ ಮಾತ್ರ ಭಾರವಾಗುತ್ತ ನಡೆದಿತ್ತು....

ಕ್ರಾಸ್ ರೋಡಿಗೆ ಬಂದೊಡನೆ ಡಾಲಿ ನನ್ನಿಂದ ದೂರ ಸರಿದಳು...

"ನನ್ನ ದಾರಿ, ಇದು.... ಸಾಕು, ಗೋರೀ, ಇನ್ನು ಮುಂದೆ ಬರಬೇಡ, ಬರುವ ಅವಶ್ಯಕತೆಯಿಲ್ಲ. ಗುಡ್‌ಬಾಯ್, ಗುಡ್‌ನಾಯ್ಟ, ಸ್ಲೀಪ್‌ವಲ್...." ಅವಳ ಧ್ವನಿಯಲ್ಲಿ ಕಂಪನವಿತ್ತು.

ಅವಳು ಹಿಂದಿರುಗಿ ನೋಡದೆ ಲಗುಬಗೆಯಿಂದ ತನ್ನ ದಾರಿ ಹಿಡಿದು ಮುಂದೆ ಹೋದಳು.

ಕತ್ತಲಲ್ಲಿ ಏಕಾಂಗಿಯಾಗಿ ನನ್ನಿಂದ ದೂರ ದೂರ ಹೋಗುತ್ತಿದ್ದ ಆ ಆಕೃತಿಯನ್ನು ನಿಟ್ಟಿಸಿ ನೋಡುವಾಗ ನನ್ನ ಅಂತರಾಳದಿಂದ ದೊಡ್ಡದೊಂದು ನಿಟ್ಟುಸುರು ಹೊರಬಿತ್ತು–ಕಣ್ಣು ಒದ್ದೆಯಾದವು. ಒಮ್ಮೆಲೆ ಭರ್‍ರೆಂದು ಬೀಸಿದ

ಗಾಳಿಯ ಮೂಲಕ ಕಣ್ಣು ತಾವೇ ಒದ್ದೆಯಾಗಿವೆ ಎಂದು ನನ್ನನ್ನು ನಾನೇ ಮನಗಾಣಿಸಲು ಯತ್ನಿಸುತ್ತ ನನ್ನ ದಾರಿಯಿಂದ ನಾನು ಮರಳಿದೆ ಕತ್ತಲಲ್ಲಿ, ಏಕಾಂಗಿಯಾಗಿ...

* * *

ಸಪ್ಟೆಂಬರ ತಿಂಗಳಲ್ಲಿ ನಾಲ್ಕು ದಿನ ಸಿರ್ಸಿಗೆ ಹೋಗಿ ಬಂದೆ. ಸಿರ್ಸಿಯಲ್ಲಿ ತಂದೆಯವರು ನನ್ನ ವಿಚಾರಣೆ ಮಾಡಿದರು.

"ಎಲ್ಲ ಬಿಟ್ಟು ನಿನ್ನ ಗೆಳೆಂರುುನ ಶುಶ್ರೂಷೆಂರುುಲ್ಲಿ ವೇಳೆ ಹಾಳುಮಾಡುತ್ತಿರುವಿಯಂತೆ."

"ಒಂದು ತಿಂಗಳು ಹೋಗಿದ್ದೆ ಅಷ್ಟೆ"

"ಒಳ್ಳೆಯ ಕೆಲಸ ! ಹುಷಾರಾಗಿರು. ಟೀ, ಬೀ, ಯಾದೀತು. ನಿನಗೆ ನಿನ್ನ ಸ್ವಂತ ಕರ್ತವ್ಯಗಳ ಬಗ್ಗೆ ಏನಾದರೂ ಅರಿವು ಇದೆಯೇ? ಬರೇ ಮಂದಿಯ ಕೆಲಸ... ಬರೇ ಮಂದಿಯ ಉಸಾಬರಿ. ನಿನಗೆ ಧಾರವಾಡದಲ್ಲಿ ಇರಲಿಕ್ಕೆ ಪರವಾನಿಗೆ ಕೊಟ್ಟಿದ್ದೇ ತಪ್ಪಾಯಿತು. ಮುಂಬಯಿಗೆ ಕಳಿಸಿದ್ದರೆ ಚನ್ನಾಗಿತ್ತು... ಅಭ್ಯಾಸ ಏನನ್ನುತ್ತಿದೆ?"

"ಚನ್ನಾಗಿ ಸಾಗಿದೆ."

ನಿಜವಾಗಿ ನೋಡಿದರೆ ಅಭ್ಯಾಸದ ಮಾತು ದೂರೇ ಉಳಿದಿತ್ತು. ಕಾಲೇಜಿಗೆ ನಿಯಮಿತವಾಗಿ ಹೋಗಿದ್ದರೆ ತಾನೆ ? ನನ್ನ ಕೆಮಿಸ್ಟ್ರಿ ಪ್ರಾಕ್ಟಿಕಲ್ಲುಗಳಲ್ಲಿ ಹೆಚ್ಚೆಂದರೆ ಎರಡೋ ಮೂರೋ ಮಾಡಿದ್ದೆ, ನನ್ನ ಟರ್ಮು ಸಹ ಗ್ರ್ಯಾಂಟ್ ಆಗುವ ಅಪೇಕ್ಷೆ ಇರಲಿಲ್ಲ. ಆದರೆ ಅಪ್ಪನಿಗೆ ನಿಜ ಸಂಗತಿ ಎಂದಾದರೂ ಯಾರಾದರೂ ಹೇಳಿಯಾರೇ?

"ನಿನ್ನ ಗೆಳೆಯನ ತಂಗಿಯ ನಾದ ಬಿಟ್ಟಿರುವಿಯೋ ಇಲ್ಲವೋ?"

"ಉಂ?" ಪ್ರಶ್ನೆ ತಿಳಿಯಲಿಲ್ಲೆಂಬಂತೆ ನಟಿಸಿದೆ.

"ಹೌದು... ಅವರ ಮನೆಯಲ್ಲಿಯೇ ಇದ್ದೀಯೇಕೆ ಇನ್ನೂ?"

"ಶ್ರೀಕಾಂತ ಬಂದೊಡನೆ ಬೇರೆ ಕೋಣೆ ಹಿಡಿಯುವೆ."

"ಮತ್ಯಾರಾರು ಮನೆಯಲ್ಲಿ?"

"ಅವರ ಸಂಬಂಧಿಕಳೊಬ್ಬಳಿದ್ದಾಳೆ."

"ಏನಾದರೂ ಭಾನಗಡಿ – ಗೀನಗಡಿ ಮಾಡ್ತೀರಿ ಮತ್ತೆ. ಕಲಿಕಾಲ ಹಾಗೂ ತಾರುಣ್ಯದ ಬಿಸಿ ರಕ್ತ...." ಎಂದು ನನ್ನೆಡೆಗೆ ತೀಕ್ಷ್ಣವಾಗಿ ನೋಡಿದರು.

ಬಾಗಿಲ ಬಳಿಯಲ್ಲಿ ನಿಂತು ನಮ್ಮ ಸಂಭಾಷಣೆಯನ್ನು ಕೇಳುತ್ತಿದ್ದ ತಾಯಿ

ನನ್ನ ಸಹಾಯಕ್ಕೆ ಬಂದಳು : "ನಿಮ್ಮದೂ ಒಂದು... ಏನಾದರೂ ಸಂಶಯ ನಮ್ಮ ಗೌರಿ ಎಂದಾದರೂ ಅಂಥ ಹುಚ್ಚುತನ ಮಾಡಿಯಾನೇ?"

"ಅದೆಲ್ಲಾ ನನಗೆ ಕಲಿಸಬೇಡ. ಮೇಲೆ ಮೇಲೆ ಸಾಧು ಕಾಣುವವರೆ ! ಒಳಗೊಳಗೆ ಬ್ರೇಕ್ ಇಲ್ಲದ ಗಾಡಿಯಂತಿರುತ್ತಾರೆ. ತರುಣರ ಸ್ವಭಾವದ ಬಗ್ಗೆ ನಿನಗೇನು ಗೊತ್ತು? ನಿನಗೆ ತಾರುಣ್ಯ ಬಂದಾಗ ಎರಡು ಮಕ್ಕಳ ತಾಯಿಯಾಗಿದ್ದಿ."

"ನಿಮ್ಮದೂ ಒಂದು, ಏನಾದರೂ ಚೇಷ್ಟೆ... ಅಲ್ಲ, ಗೌರೀಶ, ನಿನಗೊಂದು ಮಾತು ಹೇಳಬೇಕಂತೀನಿ..."

"ಇಲ್ಲಿ ನೋಡಮ್ಮಾ, ನಿನ್ನ ಮಾತು ನನಗೆ ಗೊತ್ತು – ಮದಿವೆ – ಹೌದೋ ಅಲ್ಲವೋ? ನಾನು ಮದುವೆಯಾಗುವುದಿಲ್ಲ..." ನಾನು ಸಿಟ್ಟಿನಿಂದ ನುಡಿದೆ.

"ಮದುವೆಯಾಗೋದಿಲ್ಲ? ಏನು ದೇವರಿಗೆ ಬಿಟ್ಟ ಊರ ಹೋರಿಯಂತೆ ಅಡ್ಡಾಡಬೇಕೆಂತಿಯೇನೋ?" ತಂದೆಯವರ ಬಿರುಸು ನುಡಿ.

ನಾನು ಸುಮ್ಮನಾದೆ. ನಾನು ಏನು ಮಾತನಾಡಿದರೂ ಕಲ್ಲಿನ ದೇವರ ಮುಂದೆ ಪುರಾಣ ಓದಿದಂತೆ....

"ಹೀಂಗ ಮಾಡಬಾರದಪ್ಪ, ಗೌರೀ. ಪುರೋಹಿತರ ಮನೆಯವರು ಮತ್ತೆ ಮತ್ತೆ ಕೇಳುತ್ತಿದ್ದಾನೆ. ಈ ಸಲ ಹುಡುಗಿಯನ್ನಾದರೂ ನೀನು ನೋಡಿಹೋಗಲೇ ಬೇಕು."

"ಅಮ್ಮಾ, ಇಂಥ ಹುಡುಗೀ ನೋಡುವ ಕೆಲಸ ನಾನು ಸರ್ವಥಾ ಮಾಡಲಾರೆ. ಸುಮ್ಮನಿರಿ ನೋಡೋಣ." ನನ್ನ ಕಠೋರ ನುಡಿ.

"ಸುಮ್ಮನೆ ಕೂಡು. ಅವನು ತನ್ನಿಂದ ತಾನೆ ಹಾದಿಗೆ ಬರುತ್ತಾನೆ.... ಇನ್ನೊಂದು ವರ್ಷ ಹೋಗಲಿ." ತಂದೆಯವರ ಅನುಭವದ ನುಡಿ.

"ಅಲ್ಲಪ್ಪಾ, ಈ ಸಾರೆ ಹುಡುಗಿಯನ್ನು ನೋಡು. ನೀನೇನು ಕೂಡಲೇ ಒಪ್ಪಬೇಕೆಂದಿಲ್ಲ. ಕಾಣಿಸಲಿಕ್ಕೆ ಹುಡುಗಿ ಬಹಳ ಚೆಲುವೆ – ಲಕ್ಷಣ, ಓದು-ಬರಹ ಸ್ವಲ್ಪ ಕಡಿಮೆ... ಆದರೆ ಮನೆಗೆಲಸದಲ್ಲಿ ಬಹಳ ಜಾಣೆ...." ತಾಯಿಯವರ ಬಿನ್ನಹದ ಮಾತು.

"ಅವಳು ನಿನಗೆ ಸೊಸೆಯಾಗಬಹುದು. ಆದರೆ ನನಗೆ 'ನಿಮ್ಮ ಸೊಸೆ' ಬೇಡ."

"ಸುಮ್ಮನೆ ಕೂಡ್ರ ಬಾರದೇ? ನಮ್ಮ ಸೊಸೆ ಬೇಡವಂತೆ ಈ ಕಾಮಣ್ಣನಿಗೆ ಏನು ನೀನೇ ನಿನ್ನ ಹೆಂಡತಿಯನ್ನು ಹುಡುಕಲಿರುವಿಯಾ ? ಅದನ್ನಾದರೂ ಸ್ಪಷ್ಟ

ಹೇಳು. ಅಂದರೆ ಅಷ್ಟೇ ತ್ರಾಸು ತಪ್ಪಿತೆಂದು ಸುಮ್ಮನಿರುವೆವು !"

"ನಾನು ಲಗ್ನವನ್ನೇ ಆಗುವುದಿಲ್ಲವೆಂದ ಮೇಲೆ ಹೆಂಡತಿ ಹುಡುಕುವ ಮಾತೆಲ್ಲಿ ಬಂತು ?" ನನ್ನ ಮರುಪ್ರಶ್ನೆ.

"ಯಾಕಪ್ಪ ಇಷ್ಟು ವೈರಾಗ್ಯ ?" ತಂದೆಯವರ ವಿವೇಕದ ನುಡಿ. ಸುರುವಾಯಿತು. "ಯಾರಾದರೂ ಒಬ್ಬ ಹುಡುಗಿ – 'ಹೋಗೋ ಹಳೇ ಮಂಗ' ಎಂದು ಅಂದಳೇನು ? ಈಗಿನ ಹುಡುಗರು ಅದೇನೋ ಪ್ರೇಮವೆಂದರೆ ಸ್ವರ್ಗದ ಅಮೃತವಿದ್ದಂತೆ ಅದರ ಹಿಂದೆ ಓಡುತ್ತಾರೆ , !.... ಎಲ್ಲಾ ಹುಡುಗಿಯರಲ್ಲಿ ಒಂದೇ ತರಹದ ಪ್ರೇಮವಿರುತ್ತದೆ ! ತಮ್ಮ 'ಜೋಕಿ'ಗೆ ತಾವೇ ಜೋರಿನಿಂದ ನಕ್ಕರು.

"ನೀವೂ ಒಮ್ಮೊಮ್ಮೆ ನಾಲಿಗೆನ ಸಡಿಲಾದರೆ..." ತಾಯಿಯ ! ಟೀಕೆ.

"ಗೌರೀಶ, ಇಲ್ಲಿ ನೋಡು. ನಿನ್ನ ಎಮ್. ಎಸ್‌ಸ್ಸಿ – ಗಿಮ್ಮೆಸ್ಸಿ ಫಾರ್ಸು ಸಾಕು. ಬಾ ತಿರುಗಿ ಸಿರ್ಸಿಗೆ. ಅಂಗಡಿಯಲ್ಲಿ ಕೂತು ದಂಧೇ ಮಾಡು, ರೊಕ್ಕಾ ಮಾಡು, ಲಗ್ನಾ ಆಗು..."

"ಮಕ್ಕಳಾ ಮಾಡು ! ಇದೇ ಅಲ್ಲವೇ ನಿಮ್ಮ ಉಪದೇಶ !"

"ವಾಹ್, ಅದೆಲ್ಲ ಸಸಾರ ಕೆಲಸ ಅಂತ ತಿಳಿದೀಯೇನು ? ಸಂಸಾರ ಅಂದರೆ ಅದೆಲ್ಲ ಇರುವದೇ !"

* * *

ಅವರ ಜಗತ್ತೇ ಬೇರೆ, ನಮ್ಮ ಜಗತ್ತೇ ಬೇರೆ. ಅವರ ಮೌಲ್ಯಗಳೇ ಬೇರೆ; ನಮ್ಮ ಮೌಲ್ಯಗಳೇ ಬೇರೆ. ಅವರ ಮಾತಿನಲ್ಲಿಯ ಅರ್ಥದ ಪಾತಳಿ ಬೇರೆ, ನಮ್ಮ ಮಾತಿನ ಅರ್ಥದ ಪಾತಳಿ ಬೇರೆ... ಒಮ್ಮೊಮ್ಮೆ ಅವರೂ ನಾವೂ ಒಂದೇ ಶಬ್ಧ ಉಪಯೋಗಿಸಿದರೂ ಅರ್ಥಗಳು ಬೇರೆ. ಹೀಗಾಗಿ ಎಷ್ಟೋ ಸಲ ನಮ್ಮ – ಅವರ ನಡುವೆ ಎಲ್ಲವನ್ನೂ ಕಂಡದ್ದನ್ನೂ ಕೇಳಿದ್ದನ್ನೂ – ವಿಕೃತಗೊಳಿಸುವ ದಪ್ಪ ಗಾಜಿನ ಗೋಡೆ ಇದ್ದಂತೆ ಭಾಸವಾಗುವದು. ಅವರ 'ಲಗ್ನ', 'ಪ್ರೇಮ', 'ಸುಖ', 'ಸಂಸಾರ' ಇವುಗಳ ಕಲ್ಪನೆಗೂ ನಮ್ಮ ಕಲ್ಪನೆಗೂ ಇರುವ ಅಂತರದ ಬಗ್ಗೆ ನಾವು ಒಂದು ಹೊತ್ತಿಗೆಯನ್ನೇ ಬರೆಯಬಹುದು. ನಮ್ಮ ಉತ್ಕಟವಾದ ಅನುಭವಗಳನ್ನು ಅವರು 'ನಾದ', 'ಭಾನಗಡಿ', 'ಚಟ', 'ಹುಡುಗತನ', ಮುಂತಾದ ಶಬ್ದಗಳ ಮುಖಾಂತರ ತೃಣೀಕರಿಸುತ್ತಾರೆ, ಅರ್ಥಹೀನ ಮಾಡಿ ಒಗೆಯುತ್ತಾರೆ! 'ಸಂಗೀತದ ವ್ಯಸನ', 'ನೃತ್ಯದ ವ್ಯಸನ', 'ಹಾಡು ಕಟ್ಟುವ ನಾದ' 'ಅವನ–ಅವಳ ಭಾನಗಡಿ', ಮುಂತಾದ ಶಬ್ಧ ಪ್ರಯೋಗದಿಂದಲೇ ಕಲೆಯ, ಪ್ರೇಮದ ಕಿಮ್ಮತ್ತನ್ನು

ಇಳಿಸಿ, ಅವುಗಳನ್ನು 'ಫಾಲತೂ' ಮಾಡಿ ಹೀಗೆಳೆಯುತ್ತಾರೆ.... ಹೀಗೆ ಅವರ ಮಾನಸಿಕ ಜಗತ್ತು ನಮ್ಮ ಜಗತ್ತಿನಿಂದ ದೂರವಿದ್ದಾಗ, ಸಂಭಾಷಣೆ ಕೂಡ ಕಠಿಣವಾಗುವದು, ತಿಳುವಳಿಕೆಯ ಬದಲು ತಪ್ಪು ತಿಳುವಳಿಕೆಗೇ ಹೆಚ್ಚು ಆಸ್ಪದ!

* * *

ಎರಡು ಮೂರು ದಿನಗಳ ನಂತರ ನಾನು ಸಿರ್ಸಿಗೆ ಹೋಗಲಿರುವೆ. ಹೋಗಿ ಮಾಡುವದೇನು? ಗಾಜಿನ ಗೋಡೆಯ ಆಚೆ – ಈಚೆ ನಿಂತು ಬಾಯಿ ಅಲುಗಾಡಿಸಿ, ನಮಸ್ಕಾರ ಮಾಡಿ ಬರುವದು ತಾನೇ ! ಅದಕ್ಕಿಂತ – ಆ ನಿರ್ದಿಷ್ಟ ಅನುಭವದ ನೋವಿಗಿಂತ – ಹೋಗದೇ ಇರುವದು ಲೇಸು ! ಆದರೆ ಹೋಗದೆ, ಕೊನೆಯ ಸಾಷ್ಟಾಂಗ ನಮಸ್ಕಾರ ಹಾಕದೆ, ಪ್ರತ್ಯಕ್ಷವಾಗಿ ನನ್ನ ಪೂರ್ವ ಜೀವದಿಂದ ನಾನು ಮುಕ್ತನಾಗದೆ ನಾನು 'ಮುಂದೆ' ಹೋಗುವದೆಂತು? ಇಲ್ಲ, ಕೊನೆಗೊಮ್ಮೆ ಹೋಗಿಬರಲೇ ಬೇಕು... ಇದ್ದು ಬಿದ್ದ ಬೇರೇಗಳನ್ನು ಕಿತ್ತು ನನ್ನ ಹೃದಯವನ್ನು ಹಸನು ಮಾಡಬೇಕು... ನನ್ನ ಬಾಲ್ಯದ ಹಾಗೂ ತಾರುಣ್ಯದ ಎಲ್ಲ ಅನುಭವಗಳನ್ನು ಭಾವರಹಿತವಾಗಿ ದೂರ ಸರಿಸಿರುವೆ ಎಂದು ಸಿದ್ಧ ಮಾಡಲು ನನ್ನ ಈ ಲಾಕ್ಷಣಿಕ ಪ್ರಯಾಣವನ್ನು ಕೈಕೊಳ್ಳಲೇಬೇಕು....

* * *

ಶ್ರೀಕಾಂತನನ್ನು ಕರೆತರಲು ವಾನಲೆಸ್‌ವಾಡಿಗೆ ಹೋದೆ. ಶ್ರೀಕಾಂತ ಈಗ ಗುಣವಾಗಿದ್ದರಿಂದ ಆತನ ಸಹವಾಸದಲ್ಲಿ ಹಬ್ಬದ, ಉತ್ಸವದ ಆನಂದವನ್ನು ಅಪೇಕ್ಷಿಸಿದ್ದೆ. ಆತನನ್ನು ಕರೆದೊಯ್ಯುವದೆಂದರೆ ಒಬ್ಬ ವಿಜಯೀ ಯೋಧನನ್ನು ಸಂಭ್ರಮದಿಂದ ನಗುತ್ತ ಕಲೆಯುತ್ತ, ಊದುತ್ತ – ಬಾರಿಸುತ್ತ ಸ್ವಾಗತಿಸುವಂತೆ ಎಂದು ಬಗೆದಿದ್ದೆ.... ಆದರೆ –

ಶ್ರೀಕಾಂತಾ, ಮನಸ್ಸಿನ ಮೇಲಿನ ಭಾರವೊಂದು ಇಲ್ಲವಾಯ್ತಲ್ಲವೇ ! ಒಂದು ಪುಪ್ಪುಸ ಹೋದರೂ ಅಡ್ಡಿಯಿಲ್ಲ ; ಮುಖ್ಯ ನೀನು ಇನ್ನು ಮೇಲೆ ಸಂಪೂರ್ಣ ನೆಟ್ಟಗಾಗಲಿರುವ ಎಂಬುದನ್ನು ನೋಡಿ ನನಗಂತೂ ಹಿಡಿಸಲಾರದಷ್ಟು ಆನಂದ...." ನಾನು ನನ್ನ ಆನಂದವನ್ನು ಸ್ವಲ್ಪ ಸ್ಪಷ್ಟವಾಗಿಯೇ ವ್ಯಕ್ತಮಾಡಿದೆ.

ಶ್ರೀಕಾಂತನ ಮುಖದ ಮೇಲೆ ಔದಾಸಿನ್ಯದ ಮೋಡ ಇನ್ನೂ ಇತ್ತು. "ಯಾಕೋ ಏನೋ ನನಗೆ ಇನ್ನೂ ಸಂಪೂರ್ಣ ವಿಶ್ವಾಸವೇ ಅನಿಸಲೊಲ್ಲದು. ಮರಣದ ಬಗ್ಗೆ ಯೋಚಿಸಿ ಅದನ್ನು ನನ್ನದನ್ನಾಗಿ ಮಾಡಿಟ್ಟಿದ್ದೆ. ಈಗ ಜೀವನದ ಬಗ್ಗೆ, ಭವಿಷ್ಯತ್ತಿನ ಬಗ್ಗೆ ಯೋಚಿಸಲು ಸ್ವಲ್ಪ ಎಡಬಾಗುತ್ತಿದೆ. ಹಾಗೂ ಯಾಕೋ ಏನೋ ನನಗೂ ಮರಣಕ್ಕೂ ಸಮೀಪಿನ ಸಂಬಂಧವಿದೆಯೆಂಬ ಭಾವನೆ ನನ್ನ

ರಕ್ತದೊಳಗಿಂದ ಹೋಗದಾಗಿದೆ... ಜೀವನದ ಬಗ್ಗೆ, ಭವಿಷ್ಯತ್ತಿನ ಬಗ್ಗೆ ಕನಸು ಕಟ್ಟಲು ಯತ್ನಿಸಬೇಕೆಂದರೆ ಕಣ್ಣೆದುರಿಗೆ ಶೂನ್ಯತೆಯೇ ಧುತ್ತೆಂದು ನಿಲ್ಲುತ್ತದೆ ಅಖಂಡವಾಗಿ ಇದೇನು clair voyance – ಮುಂದಾಗುವುದರ ಸೂಕ್ಷ್ಮ ಅರಿವೇ?"

"ಶ್ರೀಕಾಂತ, ನಿನ್ನ ಆತ್ಮವಿಶ್ವಾಸ, ನಿನ್ನ ಜೀವನೋತ್ಸಾಹ ಕಡಿಮೆಯಾದಂತೆ ತೋರುತ್ತಿದೆಯಲ್ಲ."

"ಛೇ, ಹಾಗೇನಿಲ್ಲ – ಸಾಯುವ ತನಕ ಉತ್ಕಟವಾಗಿ ಜೀವಿಸಬೇಕೆನ್ನುವ ಅಭಿಲಾಷೆ ಸ್ವಲ್ಪವೂ ಕಡಿಮೆಯಾಗಿಲ್ಲ. ಆದರೆ ನನ್ನಲ್ಲಿ ಶಕ್ತಿ ಎಲ್ಲಿದೆ ? ಇನ್ನು ಮೇಲೆ ಉತ್ಕಟತೆಯೆಲ್ಲ ಮಾನಸಿಕ ಜೀವನದ ಮಾತು ! ಆದರೆ ಇತ್ತಿತ್ತಲಾಗಿ ಹೆಚ್ಚು ಓದಿದರೆ ಹೆಚ್ಚು ವಿಚಾರ ಮಾಡಿದರೆ ಮಿದುಳಿಗೇ ದಣಿವಾಗುವದು. ಇನ್ನು ಮೇಲಂತೂ ಒಂದೇ ಪುಪ್ಪುಸದ ಈ ದೇಹಕ್ಕೆ ವಿಶ್ರಾಂತಿಯ ಅವಶ್ಯಕತೆಯೇ ಹೆಚ್ಚು – ಉತ್ಕಟ ಜೀವನದ ಮಾತು ದೂರೇ ಉಳಿಯುವ ಚಿಹ್ನೆ ತೋರುತ್ತಿದೆ. ಆದುದರಿಂದಲೇ ಈ ಔದಾಸೀನ್ಯವಿರಬೇಕು –"

"ಇದು ಬರೇ ನಿನ್ನ ಒಂದು 'ಮೂಡು', ಅಶಕ್ತತೆಯ ಮೂಲಕ ಬಂದ 'ಮೂಡು' ನಿನ್ನ ಶಕ್ತಿ ಮರಳಿ ಬರುತ್ತಲೆ ಮೊದಲಿನ ಜ್ವಾಲಾಸಮ ಚೈತನ್ಯ ನಿನ್ನದಾಗುವದು."

"ಜ್ವಾಲಾಸಿಮ ಚೈತನ್ಯ ! ಇನ್ನು ಅದು ಬರಿಯ ಕನಸು ! ಗೌರೀ. ನನ್ನ ಸ್ವಂತ ಚೈತನ್ಯದ ಮೇಲೆ ಜೀವಿಸುವ ದಿನಗಳು ಮುಗಿದವು. ಇನ್ನು ಮೇಲೆ ಕೇವಲ ದೊಡ್ಡ ಪ್ರತಿಭಾವಂತರದೊಡ್ಡ ಪ್ರತಿಭಾಶಾಲಿ ಪುಸ್ತಕಗಳನ್ನು ಓದುತ್ತೇ vicarious ಆಗಿ, ಅವರ ಚೈತನ್ಯದ ಮೇಲೆ ಜೀವಿಸುವುದೊಂದೇ ಮಾರ್ಗ... ನನ್ನ ದೇಹದ ಜೀವನವಂತೂ...."

"ದೇಹದ ಜೀವನ ?"

"ಹುಂ, ದೇಹದ ಜೀವನ ! ಜೀವನವೆಂದೊಡನೆ ಆಶ್ಚರ್ಯವೇಕಾಯಿತು ನಿನಗೆ? ಸದ್ಯಕ್ಕೆ ನನಗೆನಿಸುವದೇನೆಂದರೆ ಮಾನಸಿಕ ಉತ್ಕಟತೆಯು ದೈಹಿಕ ಉತ್ಕಟತೆಯನ್ನವಲಂಬಿಸಿದೆ. ಒಂದು ದೃಷ್ಟಿಯಿಂದ – ದೇಹ, ಮನಸ್ಸು ಎಂದು ವಿಂಗಡಿಸುವುದೇ ತಪ್ಪು. ಎರಡೂ ಒಂದೇ ವ್ಯಕ್ತಿತ್ವದ ಬೇರೆ ಬೇರೆ ಪಾತಾಳಿಗಳು. ಹಾಂ, ನನ್ನ ದೈಹಿಕ ಜೀವನವಂತೂ ಇನ್ನು ಮೇಲೆ ಶೂನ್ಯ ! ಬರೇ ವಿಶ್ರಾಂತಿ – ಕಾಳಜಿಪೂರ್ವಕ ವಿಶ್ರಾಂತಿ–ಅರ್ಧ ಮರಣ !... ದೈಹಿಕ ಜೀವನದ ಉತ್ಕಟತೆ ಪ್ರೇಮದಲ್ಲಿ, ಲೈಂಗಿಕ ಅನುಭವದಲ್ಲಿ, ಸಾಹಸಕೃತ್ಯಗಳಲ್ಲಿ – ಮುಖ್ಯ ರಕ್ತದ ನಾಗಾ ಲೋಟದಲ್ಲಿ – ಇದೆಯೆಂಬ ಸತ್ಯ ಈಗ ತಿಳಿಯತೊಡಗಿದೆ."

ನನ್ನ ಕುತೂಹಲ ಹೆಚ್ಚಾಯಿತು. "ಹಾಗೆ ಏನಾದರೂ ಘಟಿಸಿದೆಯೇ ನಿನ್ನ ಸ್ವಂತ ಅನುಭವದಿಂದ ತಿಳಿದ ಸತ್ಯವೇ ಇದು ?"

"ಹುಂ – ಗೌರೀ, ಮೊನ್ನೆ ಮೊನ್ನೆಯ ಮಾತು – ಏಳೆಂಟು ದಿನಗಳ ಹಿಂದಿನ ಮಾತು, ಸಂಜೆ ಇದೇ ಕಾಟಿನ ಮೇಲೆ ಹೀಗೇಯೇ ಒರಗಿ ಕಣ್ಣು ಮುಚ್ಚಿ ಮಲಗಿದ್ದೆ ಒಂದು ಬಗೆಯ ನೀರವತೆ ಮನವನ್ನಾಕ್ರಮಿಸಿತ್ತು. ಶಾಂತವಾಗಿ, ಶೂನ್ಯಮನಸ್ಕನಾಗಿ ಮನಸ್ಸಿನಲ್ಲಿ ಯಾವುದೇ ತರದ ಚರ್ವಿತಚರ್ವಣವಿಲ್ಲದೆ.. ಮಲಗಿದ್ದೆ.. ಆಗ, ಆ ಮೇರಿ ಸಿಸ್ಟರ, ನೀನು ಅವಳನ್ನು ನೋಡಿರುವಿ ತಾನೇ ಯಾವುದೋ ಔಷಧ ತೆಗೆದುಕೊಂಡು ಬಂದಳು. ಮೊದಲಿನಿಂದಲೂ ನನ್ನ ಮೇಲೆ ಅವಳ ಮರ್ಜಿ ಬಹಳ. ಆತ್ಮೀಯತೆ ಬಹಳ... ಅವಳ ಮಾತಿನಲ್ಲಿ – ನನ್ನೊಡನೆ ಮಾತನಾಡುವಾಗಲಂತೂ – ಒಂದು ತರದ ಆಕರ್ಷಣೆಯ ಮೋಹಕತೆಯಿದೆ ಕಾಣಸಲಿಕ್ಕಂತೂ ಇಲ್ಲಿಯ ಎಲ್ಲ ನರ್ಸುಗಳಲ್ಲಿ ಮೇಲು... ಅವಳು ಮೆಲ್ಲನೆ ಬಂದು ಇದೇ – ನೀನು ಕುಳಿತ ಇದೇ–ಕುಚಿಯ ಮೇಲೆ ಕುಳಿತು ನನ್ನ ಎದೆಯ ಮೇಲೆ ತನ್ನ ಬಲಗೈಯಿಟ್ಟು ಸಾವಕಾಶವಾಗಿ ಕರೆದಳು : 'ಶ್ರೀಕಾಂತ !, ನಾನು ಕಣ್ದೆರೆದು ನೋಡಿದಾಗ ಅವಳ ಮೋಹಕ ನಗೆ, ಅವಳು ಕುಳಿತ ಭಂಗಿ ನನ್ನ ಶೂನ್ಯ ಮನಸ್ಸನ್ನು ಸಂಪೂರ್ಣ ತುಂಬಿದವು... ಒಮ್ಮೆಲೆ ನನಗೆ ಗೊತ್ತಿಲ್ಲದಂತೆ ನನ್ನ ರಕ್ತದ ನಾಗಲೋಟ ಸುರುವಾಯಿತು!... ಮಹಾಶ್ವೇತೆಯನ್ನು ಪುಂಡರೀಕನು ನೋಡಿದಾಗ ಅನಿಸಿದ ಭಾವನೆಗಳ ಒಂದು ಅಂಶ ನನಗಾಗ ಅನಿಸಿರಬೇಕು ! ನಾನು ಹುಚ್ಚನಂತೆ ಅವಳ ನಗುವ ನಗುಮುಖ, ಅವ ಪುಷ್ಟ ಚೈತನ್ಯದುಂಬಿದ ವಕ್ಷಸ್ಥಳ, ಅವಳ ಚೆಂದಾದ ದೊಡ್ಡ ಕಣ್ಣುಗಳು– ಇವುಗಳತ್ತ ಮತ್ತನಾಗಿ ನೋಡತೊಡಗಿದೆ... ಶುದ್ಧಲೈಂಗಿಕತೆ ನನ್ನನ್ನು ಇಷ್ಟು ರಭಸದಿಂದ ಆಕ್ರಮಿಸಿದ್ದು ಇದೇ ಮೊದಲಸಲವಿರಬೇಕು... ಶುದ್ಧ ದೈಹಿಕ ಉತ್ಕಟತೆಯ ಕಲ್ಪನೆ ಅಂದು ನನಗುಂಟಾಯಿತು!"

"ಅಂದರೆ – ಆ ದಿನ ನೀನು ಅವಳೊಡನೆ..." ನಾನು ಅರ್ಧಕ್ಕೇ ನಿಂತೆ...

"ನಿನ್ನ ಕಲ್ಪನೆ ಇಷ್ಟರೊಳಗೇ ಓಡತೊಡಗಿತೇನು, ಸ್ವಚ್ಛಂದವಾಗಿ ? ಹಾಗೇನೂ ಅಬದ್ಧ ಘಟಿಸಿಲ್ಲ. ಘಟಿಸುವದೂ ಶಕ್ಯವಿಲ್ಲ !..., ಆದರೇ ಏನಾಯಿತೆಂಬುದನ್ನು ಸ್ಪಷ್ಟ ಹೇಳಲಾರೆ... ಮುಖ್ಯಮಾತು ಇದು : ಲೈಂಗಿಕ ಶಕ್ತಿಯ ತೀಕ್ಷ್ಣ ಅರಿವು ! ಅದರ ಅಂಥ ಉನ್ಮತ್ತತೆಯ ಕಲ್ಪನೆ ! ಗ್ರೀಕ ಪುರಾಣದಲ್ಲಿ ಕಾಮಕ್ಕೆ ಧನುರ್ಧಾರಿಯಾದ ತುಂಟ ಬಾಲತನ ರೂಪುಕೊಟ್ಟಿದ್ದರ ಪ್ರತೀತಿ ಅಂದು ನನಗಾಯಿತೆಂದು ಹೇಳಲಡ್ಡಿಯಿಲ್ಲ. ಇರಲಿ, ಅಂಥ ಲೈಂಗಿಕ ಉತ್ಕಟತೆಗೆ

ನಾನು ಈಗ ಹೊರತಾಗಿದ್ದೇನೆ... ಇನ್ನು ಮೇಲೆ ಬರೇ ಪುಸ್ತಕದಲ್ಲಿಯ vicarious ಅನುಭವ ನನ್ನ ಪಾಲಿಗೆ !"

ನನಗೇಕೋ ಶ್ರೀಕಾಂತನ ಅವನತಿಯಾದಂತೆ, ಅವನ ಆತ್ಮ ಅಧೋಗತಿಗೆ ಇಳಿದಂತೆ ಆ ದಿನ ಅನಿಸಿತು. ಲೈಂಗಿಕ ವಿಷಯಗಳ ಬಗ್ಗೆ ಎಂದೂ ಮಾತನಾಡದ ಶ್ರೀಕಾಂತ ಒಮ್ಮೆಲೆ ಇಂಥ ಆತ್ಮನಿವೇದನೆ ಮಾಡಿದ್ದು ನನ್ನನ್ನು ವಿಸ್ಮಯ ಗೊಳಿಸಿತು...

ನಾವು ಆದರ್ಶವೆಂದು ಹಿಡಿದ ವ್ಯಕ್ತಿಗೆ ನೈತಿಕ ಅವನತಿಯ ಬಗ್ಗೆ ನಾವು ತೋರಿಸುವ ಅಸಂತೋಷ ಅಗಾದವಾದದ್ದು ! ನಮ್ಮ ಸ್ವಂತ ಜೀವನ ಚರಂಡಿ– ಜೀವನವಿದ್ದರೂ, ನಮ್ಮ ಆದರ್ಶವ್ಯಕ್ತಿಗಳು ಮಾತ್ರ ನಕ್ಷತ್ರಗಳಂತೆ ಶುದ್ಧ ಪ್ರಕಾಶ ಬೀರುತ್ತಿರಬೇಕು ಎಂದೇನೋ ಭಾವನೆ ನಮ್ಮದು ! ಸರ್ವ ಸಾಮಾನ್ಯರ ಬಗ್ಗೆ ನಾವು ತೋರಿಸುವ ಸಹಿಷ್ಣುತೆ ಆದರ್ಶವ್ಯಕ್ತಿಗಳ ಬಗ್ಗೆ ತೋರಿಸುವದಿಲ್ಲ ! ಯಾಕೆ? ಬಹಶಃ ಆದರ್ಶವ್ಯಕ್ತಿಗಳೆಂದರೆ ನಮ್ಮ ಆಂತರಿಕ – ಜೀವನ – ಮೌಲ್ಯಗಳ ಬಾಹ್ಯ ಪ್ರತೀಕದಂತಿರುತ್ತಾರೆ; ಹಾಗೂ ಆ ವ್ಯಕ್ತಿಗಳ ನೈತಿಕ ಅವನತಿಯಿಂದ ನಮ್ಮ ಪ್ರತೀಕಕ್ಕೆ ಭಂಗ ಬರುವದೇನೋ, ನಮ್ಮ ಮೌಲ್ಯಗಳ ಶ್ರದ್ಧೆಗೆ ಆಘಾತ ಬೀಳುವದೇನೋ !...

* * *

ಶ್ರೀಕಾಂತ ನನ್ನ ಬಗ್ಗೆ ವಿಶೇಷ ಅಸ್ಥೆ ತೋರಿಸಲಿಲ್ಲ. ನನ್ನ ಕಾಮಿನಿಯ ಸಂಬಂಧದ ಬಗ್ಗೆ ವಿವರ ಕೇಳಲಿಲ್ಲ ! ಅವನ ವಿಚಿತ್ರ ಔದಾಸೀನ್ಯ ನೋಡಿ ನನ್ನ ಹೃದಯ ಒಳಗೊಳಗೆ ಬಾಡಿತು, ಮುದುಡಿತು... ನಾನಾಗಿಯೇ ನನ್ನ ವ್ಯಥೆಯನ್ನು ತೋಡಿಕೊಳ್ಳಲು ಹಿಂಜರಿದೆ. ಶ್ರೀಕಾಂತನ ಪ್ರೇಮ – ಸಹಾನುಭೂತಿಗಳಲ್ಲಿ ಏನೋ ಕೊರತೆಯುಂಟಾಗಿದೆ ಎಂದು ಕಂಡುಕೊಳ್ಳಲು ತಡ ಹಿಡಿಯಲಿಲ್ಲ...

"ಕಮ್ಯುನಿಸ್ಟ ಪಾರ್ಟಿಯನ್ನು ಕಾಮಿನಿ ಸೇರಿದ್ದರ ಬಗ್ಗೆ ಪತ್ರ ಬರೆದಿದ್ದೆ. ಅದು ಮುಟ್ಟಿತೇ?" ಟ್ರೇನಿನಲ್ಲಿ ಕುಳಿತಾಗ ಸಮಯ ಸಾಧಿಸಿ ಶ್ರೀಕಾಂತನಿಗೆ ಕೇಳಿದೆ

"ಹೂಂ, ಮುಟ್ಟದೇ ಇರುತ್ತದೆಯೇ?"

"ನಿನ್ನ ಉತ್ತರವೇ ಬರಲಿಲ್ಲ ಆ ಪತ್ರಕ್ಕೆ :"

"ಉತ್ತರ? ಉತ್ತರವೆಂತಹದು? ತನಗೆ ಬೇಕಾದಂತೆ ಮಾಡಲು ಕಾಮಿನಿ ಸ್ವತಂತ್ರಳಿದ್ದಾಳೆ....."

ಶ್ರೀಕಾಂತನ ಉತ್ತರದಿಂದ ನಾನು ಸ್ಥಂಬಿತನಾದೆ. ಗಾಡಿಯ ಚಕ್ರಗಳ ಸಪ್ಪಳ ನನ್ನ ಕಿವಿಯನ್ನು ತುಂಬಿದಂತೆನಿಸಿತು !

ಶ್ರೀಕಾಂತ ಮುಂದುವರೆದ : "ಗೌರೀಶ, ಕಾಮಿನಿ ಸ್ವತಂತ್ರಳು. ಅದರಂತೆ ನೀನೂ ಸ್ವತಂತ್ರ, ನಿಮ್ಮ ಅನುಭವ, ನಿಮ್ಮ ಭಾವನೆಗಳ ಬಗ್ಗೆ ಉಪದೇಶ ಮಾಡಲು ನಾನಾರು? ಉಪದೇಶ ಬೇಕಾದರೂ ಯಾತಕ್ಕೆ ? ಪ್ರತಿಯೊಬ್ಬ ಮನುಷ್ಯನಿಗೆ ಅನುಭವ ಪಡೆಯಲು ಹಕ್ಕಿದೆ – ಆ ಅನುಭವದಿಂದ ಉಂಟಾಗುವ ಸುಖ–ದುಃಖಕ್ಕೆ ಆತನೇ ಹೊಣೆಗಾರ..."

"ಇಷ್ಟೇಕೆ ನಿರ್ಲಿಪ್ತನಾಗಿದ್ದೀಯಾ, ಶ್ರೀಕಾಂತಾ?" ಎದು ನಾನು ತಡೆಯಲಾರದೇ ಕೇಳಿದೆ.

"ನಿರ್ಲಿಪ್ತನಾಗದೆ ಗತ್ಯಂತವಿರಲಿಲ್ಲ !" ಶ್ರೀಕಾಂತ ಒಣ ನಗೆಯೊಂದನ್ನು ಬೀರಿದ. ನನ್ನ ಬಳಲಿಕೆ – ವೇದನೆ – ಯೋಚನೆಗಳ ಭಾರ ಸಾಕಾಗಿದೆ ನನಗೆ! ಉಳಿದವರಿಗೆ ದಾರಿ ತೋರಿಸುವ ಸ್ಥಿತಿಯಲಿಲ್ಲ ನಾನು... ಮತ್ತೊಂದು ಮಾತು: ಯಾಕೋ ಏನೋ ಬೇರೆಯವರ ಸಮಸ್ಯೆಗಳನ್ನು ತಿಳಿದುಕೊಳ್ಳುವ ಶಕ್ತಿಯೇ ಕಡಿಮೆಯಾಗುತ್ತಿದೆ... ಮೃತ್ಯುವಿನ ಸಾಮೀಪ್ಯ ಎಲ್ಲ ಸಮಸ್ಯೆಗಳನ್ನು ತೃಣೀಕರಿಸುವದೋ ಏನೋ!... ಗೌರೀಶ, ನಿನಗೆ ಮತ್ತೊಂದು ಗುಪ್ತ ವಿಚಾರವೊಂದನ್ನು ಹೇಳಲೇ?... ನೀನು ನಿನ್ನ ಪತ್ರದಲ್ಲಿ ಕಾಮಿನಿಯ ಬಗ್ಗೆ ಅವಳ flirtations ಗಳ ಬಗ್ಗೆ, ನಿನ್ನ ವೇದನೆಗಳ ಬಗ್ಗೆ ಏನೇನೋ ಬರೆದಿದ್ದಿ... ನಿಜವಾಗಿ ಹೇಳಬೇಕೆಂದರೆ ಕಾಮಿನಿಯ ಬಗ್ಗೆ ಒಂದು ಬಗೆಯ ಅಸೂಯೆ ನನ್ನಲ್ಲುಂಟಾಗುತ್ತಿದೆ, ನಿನ್ನ ಬಗ್ಗೆ ಕೂಡ ! ನಿಮ್ಮ ಸುಖ–ದುಃಖದ ಸಮಸ್ಯೆಗಳು ನಿಮ್ಮ ಜೀವಂತ ಜೀವನೋತ್ಸಾಹದ ಪ್ರತೀಕಗಳು... ನಿನಗೆ ಬೇಕಾದ್ದನ್ನು ನೀನು ಮಾಡಪ್ಪಾ, ಗೌರೀಶ.... ಎಲ್ಲದಕ್ಕೂ ನನ್ನ ಆಶೀರ್ವಾದ ! – ನಿಜವಾಗಿ – I envy you ನಿನ್ನ ಬಗ್ಗೆ ನನಗೆ ಮತ್ಸರ..."

ಅವನ ಈ ವಿಚಾರಸರಣಿಯಲ್ಲಿ ನನಗೆ ಯಾವದೇ ಬಗೆಯ ಆಧಾರ ದೊರೆಯಲಿಲ್ಲ. ನನಗೆ ಉತ್ತೇಜನೆಯ ಅವಶ್ಯಕತೆಯಿರಲಿಲ್ಲ, ಸಹಾನುಭೂತಿಯೇ, ಮಾರ್ಗದರ್ಶನದ ಅವಶ್ಯಕತೆಯಿತ್ತು. 'ನಿನ್ನ ನಿರಾಶೆ ನಿನ್ನ ದುಃಖ ಎಲ್ಲ ಒಳ್ಳೆಯದು. ನೀನು ಒದ್ದಾಡುವದು, ತಳಮಳಿಸುವದು, ಅಳುವದು, ಕರೆಯುವದು, ಎಲ್ಲ ಉತ್ಕೃಷ್ಟ ಸಂಗತಿಗಳು.... ಹೀಗೆಯೇ ನಿನ್ನ ಅನುಭವದ ಉರಿಯಲ್ಲಿ ಬೆಂದು ಬದನೆಕಾಯಿಯಾಗು.. ನಿನ್ನ ಅದೃಷ್ಟ ಹಿರಿದು... ನೀನೇ ಧನ್ಯ !... ಎಲ್ಲದಕ್ಕೂ ನನ್ನ ಆಶೀರ್ವಾದ ! I envy you.' ಹೀಗೆ ಅವನು ಹೇಳಿದಂತಿತ್ತು... ನನ್ನ ವೇದನೆ ದಶಗುಣಿತವಾಯಿತು. ಎಲ್ಲ ಬಿಟ್ಟು ನನ್ನ ಮತ್ತು ಶ್ರೀಕಾಂತನ ನಡುವೆ ಗಾಜಿನ ಗೋಡೆಯೊಂದು ಮೂರ್ತಗೊಳ್ಳುತ್ತಿದೆಯೆಂದು ಅನಿಸತೊಡಗಿತು.

ಎಲ್ಲ ಸಹಿಸೇನು, ಇದನ್ನು ಸಹಿಸಲಾರೆ ಎಂದೆನಿಸಿತು.

* * *

ದೀಪಾವಳಿ ಸೂಟಿಯಲ್ಲಿ ಸತ್ಯೇಂದ್ರ ತನ್ನ ಬೀ. ಈ . ಪರೀಕ್ಷೆಯನ್ನು ಮುಗಿಸಿ, ಸಿರ್ಸಿಗೆ ಹೋಗುವ ಮುಂಚೆ, ಧಾರವಾಡಕ್ಕೆ ಬಂದ. ಆತ ನನ್ನನ್ನು ಬಲವಂತದಿಂದ ಸಿರ್ಸಿಗೆ ಕರೆದೊಯ್ದ. ಅವನ ಸಹವಾಸ ನನ್ನ ಬೆಂದ ಹೃದಯಕ್ಕೆ ಒಳ್ಳೆಯ ಆಸರವಾಯಿತು. ಶಾಂತ ಜೀವನದಲ್ಲಿ ಒಂದು ಬಗೆಯ ಮಾಧುರ್ಯವಿದೆ, ಉತ್ಕಟ ಜೀವನದಲ್ಲಿ ಇಲ್ಲದ ಒಂದು ಬಗೆಯ ನಿರ್ಲಿಪ್ತ ಸಮಾಧಾನವಿದೆ – ಎಂಬುದರ ಅನುಭವ ನನಗಾಯಿತಾಗ. ಸತ್ಯೇಂದ್ರನಿಗೆ ಕಾಮಿನಿಯ ಬಗ್ಗೆ ಒಂದು ಸಂಗತಿಯನ್ನು ಬಿಟ್ಟು ಉಳಿದದ್ದನ್ನೆಲ್ಲ ಹೇಳಿದೆ : ಅವಳ ಕೊನೆಯ 'ಪಾಪ'ದ ಬಗ್ಗೆ ಹೇಳಲು ನನ್ನ ಮನಸ್ಸು ಹಿಂಜರಿಯಿತು. ಅವನೆದುರಿಗೆ ನನ್ನ ಹೃದಯ ಬಿಚ್ಚಿಡುವಾಗ, ನನ್ನ ಭಾವನೆ–ವಿಚಾರಗಳನ್ನು ಬಣ್ಣಿಸುವಾಗ, ನನ್ನ ಅಂತರಂಗದಲ್ಲಿ ನಟ್ಟ ರಕ್ತರಂಜಿತ ಶಲ್ಯಗಳನ್ನು ಆತನಿಗೆ ತೋರಿಸುವಾಗ ನನ್ನಲ್ಲಿ ಹಿರೋನ ಅಭಿಮಾನವಿತ್ತು, 'ನನ್ನ ಅನುಭವ ಅಪೂರ್ವವಾಗಿದೆ ತಾನೆ !' ಎಂಬ ಆತ್ಮ ಸಂತೋಷವಿತ್ತು.. ನಿಜವಾಗಿ ನೋಡಿದರೆ, ಈಗ ನನ್ನ ಕತೆಯನ್ನು ಬರೆಯುವಾಗಲೂ ಇದೇ ಬಗೆಯ ಅಭಿಮಾನ, ಆತ್ಮ ಸಂತೋಷ ನನ್ನಲ್ಲಿ ಸುಳಿದಾಡುತ್ತಿವೆ ಎಂಬುದರ ಅರಿವು ನನಗಾಗಿದೆ. ಇಂಥ ಭಾವನೆಗಳು ನಿರ್ಲಿಪ್ತತೆಯ ಲಕ್ಷಣಗಳೇ ಅಥವಾ ಅಹಂಕಾರದ ಲಕ್ಷಣಗಳೇ ?...

ಸತ್ಯೇಂದ್ರ ನನಗೊಂದು ದಾರಿ ಹೇಳಿದ : "ನನಗೆ ಮುಂಬಯಿಯಲ್ಲಿ ಬೇಗನೆ ಒಳ್ಳೆಯ ನೌಕರಿ ಸಿಗಲಿದೆ. ನೌಕರಿ ಸಿಕ್ಕ ಕೂಡಲೆ ನಾನು ಮನೆ ಮಾಡುವೆ. ನೀನು ಜ್ಯೂನಿನಲ್ಲಿ ನನ್ನ ಹತ್ತಿರ ಇರಲು ಬಂದುಬಿಡು. ನಿನ್ನ ಎಮ್.ಎಸ್‌ಸಿ. ಯನ್ನು ಸರಿಯಾಗಿ ಮಾಡಿ ಮುಗಿಸು ; ಅಥವಾ ಬಿ.ಎಸ್‌ಸಿ. ಟೆಕ್ಕಿಗಾದರೂ ಹೋಗು.... ಕಾಮಿನಿಯ ವಿಷಯ ಸಂಪೂರ್ಣವಾಗಿ ಬೇರುದರಸಲೆ ಕಿತ್ತೊಗೆದುಬಿಡು. ನಿನ್ನ ಜೀವನದಿಂದ... ಜೀವನ ದೊಡ್ಡದಿದೆ. ಬೇಕಾದಷ್ಟು ಹಾದಿಗಳಿವೆ ಸುಖ–ಸಮೃದ್ಧಿಯತ್ತ ಒಯ್ಯಲು, ಒಂದು ದಾರಿ ಕೆಟ್ಟ ಅರಣ್ಯಕ್ಕೆ ಒಯ್ದಿತೆಂದು ಆ ಅರಣ್ಯದಲ್ಲಿಯೇ ರೋಧಿಸುತ್ತ ಕುಳಿತುಕೊಳ್ಳಬೇಕೆ ?"

ಅವನ ತತ್ವಜ್ಞಾನ ಅಷ್ಟೊಂದು ಹಿಡಿಸದಿದ್ದರೂ ಮುಂಬಯಿಗೆ ಹೋಗುವ ಯೋಜನೆಗೆ ಮಾತ್ರ ಒಪ್ಪಿದೆ.. ಇನ್ನು ಮೇಲೆ ಧಾರವಾಡದಲ್ಲಿರುವುದೆಂದರೆ ಕಾಯ್ದ ತವೆಯ ಮೇಲೆ ತಲೆಯಿಟ್ಟು ಮಲಗಿದಂತೆ ! ಮುಂಬಯಿಗೆ ಹೋಗಿ ಸ್ವಲ್ಪ ಬೇರೆ ಬಗೆಯ ಜೀವನ ನೋಡೋಣ, ಬೇಕಾದರೆ ಪಾರ್ಟಿಯ ಕೆಲಸದಲ್ಲಿ

ತತ್ಪರನಾಗೋಣ (ಶ್ರೀಕಾಂತನ ನೇತೃತ್ವದಿಂದ ಮುಕ್ತನಾಗಿ) ಎಂದೆನಿಸಿತು. ಆತ್ಮಬಲ ಬೆಳೆಸಿ, ವ್ಯಕ್ತಿಮತ್ವ ಬೆಳೆಸಿ, 'ಗಟ್ಟಿಯಾಗಿ' – ಅನಂತರ ಮರಳಿ ಕಾಮಿನಿಯನ್ನು ಒಲಿಸಲೆತ್ನಿಸಬೇಕು... ಅಥವಾ ಅನಂತರ ಕಾಮಿನಿ ತಾನಾಗಿಯೇ ಒಲಿದು ನನ್ನ ಕೊರಳಿಗೆ ಜೋತು ಬೀಳಬಹುದು!... ಆದರೆ ಅಲ್ಲಿಯ ತನಕ ಕಾಮಿನಿಯ ಭ್ರಷ್ಟತೆ ಯಾವಮಟ್ಟಕ್ಕೆ ಇಳಿಯುವದೋ! – ಎಂದು ಮುಂತಾದ್ದಾಗಿ ಯೋಚಿಸಿದೆ...

* * *

ಯಾವುದಕ್ಕೆ 'ಪಾಪ'ವೆನ್ನಬೇಕು, ಯಾವುದಕ್ಕೆ ಅನ್ನಬಾರದು ಎಂಬುದು ನನಗಿನ್ನೂ ತಿಳಿಯದು. ಕೊಲ್ಲುವದು ಪಾಪ, ಬಲತ್ಕಾರ ಪಾಪ, ಹೌದು, ಒಪ್ಪಿದೆ ಎರಡನೆಯವರ ಸ್ವಾತಂತ್ರ್ಯವನ್ನು ಕಸಿಯುವ ಕಾರ್ಯಗಳೆಲ್ಲ 'ಪಾಪ'ವೆಂಬ ಮಾತು ತಿಳಿಯುವದು... ಆದರೆ ಆತ್ಮಹತ್ಯೆ ಪಾಪ, ಕೌಮಾರ್ಯ ಕಳೆದುಕೊಳ್ಳುವದು ಪಾಪ ಕುಡಿಯುವದು, ಅನಿರ್ಬಂಧವಾಗಿ ಭೋಗಿಸುವದು ಪಾಪ... ಯಾಕೆ? ತನ್ನ ಸ್ವಂತ ಜೀವನವನ್ನು ಎರಡನೆಯವರ ಸ್ವಾತಂತ್ರ್ಯಕ್ಕೆ ಅಡ್ಡಿ ಬರದೆ, ಜೀವಿಸುವದರಲ್ಲಿ 'ಪಾಪ'ವೆಲ್ಲಿಂದ ಬಂತು?... ಇದು ಒಳ್ಳೆಯದು, ಇದು ಕೆಟ್ಟದ್ದು ಎಂಬುದನ್ನು ಹೇಗೆ ನಿರ್ಣಯಿಸಬೇಕು? ಎಲ್ಲವೂ ವ್ಯಕ್ತಿಯ ಮನಸನ್ನವಲಂಬಿಸಿದೆ ಎಂದು ಶ್ರೀಕಾಂತ ಹೇಳಿದ್ದು ನೆನಪಿದೆ. 'ನರಕವನ್ನು ಸಗ್ಗವನ್ನಾಗಿ, ಸಗ್ಗವನ್ನು ನರಕವನ್ನಾಗಿ ಮಾಡುವ ಶಕ್ತಿ ಮನಸ್ಸಿನಲ್ಲಿದೆ, ಅದರಂತೆ ಇದು ಒಳ್ಳೆಯದು, ಇದು ಕೆಟ್ಟದ್ದು ಎಂದು ನಿರ್ಣಯಿಸುವ ಶಕ್ತಿಯೂ ಮನಸ್ಸನ್ನೇ ಕೂಡಿದೆ... ಅಂದರೆ ಕಾಮಿನಿಯ 'ಪಾಪ'ವನ್ನು ನಾನು ಪಾಪವಲ್ಲವೆಂದು ನಿರ್ಣಯಿಸಿದರೆ, ಅದರ ಅಸ್ತಿತ್ವವೆಲ್ಲಿ? ...ಕಾಮಿನಿಗೆ ಬುದ್ಧಿ ಬಂದ ಮೇಲೆ, ಅವಳಿಗೆ ಪಶ್ಚಾತ್ತಾಪವಾದ ಮೇಲೆ, ಅವಳನ್ನು ಕ್ರೈಸ್ತನಂತೆ ಕ್ಷಮಿಸಿ, ಅವಳ ಕೈ ಹಿಡಿದು ಬೆಳಕಿನ ಜಗತ್ತಿನತ್ತ ಕರೆದೊಯ್ಯುವದು ನನ್ನ ಕರ್ತವ್ಯವಲ್ಲವೇ?... ಎಂಬ ವಿಚಾರಗಳು ಆಗ ಆಗಾಗ್ಗೆ ಬರುತ್ತಿದ್ದವು...

ಇಂಥ ವಿಚಾರಗಳಿಗೆ ಮುಖ್ಯ ಕಾರಣ ; ಕಾಮಿನಿಯ ಮೇಲಿನ ಉತ್ಕಟ ಪ್ರೇಮ ಹುಚ್ಚು– ಪ್ರೇಮ ! ಆಗ ನನ್ನ ಹೃನ್ಮನಗಳ ಎಲ್ಲ ಭಾವನೆ ಯೋಚನೆಗಳ ವಿಷಯ ಕಾಮಿನಿ ! ಅದುದರಿಂದ ಒಮ್ಮೊಮ್ಮೆ ಔದಾರ್ಯದ 'ಮೂಡಿ'ನಲ್ಲಿ – ಕಾಮಿನಿಯನ್ನು ಸಂಪೂರ್ಣ ಕ್ಷಮಿಸಬೇಕು, ಅವಳಿಗೆ ನನ್ನ ನಿಜ ಹೃದಯದ ಪರಿಚಯ ಮಾಡಿಕೊಡಬೇಕು, ಅವಳ ಸಲುವಾಗಿ ಏನು ಬೇಕಾದದ್ದನ್ನು ಮಾಡಲು ಸಿದ್ಧನಿದ್ದೇನೆಂಬುದನ್ನು ಸಪ್ರಮಾಣವಾಗಿ ತೋರಿಸಬೇಕು – ಎಂಬ ದೊಡ್ಡ

ದೊಡ್ಡ ವಿಚಾರ ಬಂದದ್ದು ಅಸಹಜವೇನಲ್ಲ.

* * *

ಏನೇ ಆದರೂ ಇನ್ನೂ ಒಂದು ಟರ್ಮು ಧಾರವಾಡದಲ್ಲಿ ಇರಲೇಬೇಕು. ಏನೇನಾಗುವದೋ ಆಗಲಿ... ಎಲ್ಲವನ್ನೂ ಅನುಭವಿಸಬೇಕು. ಸಹಿಸಬೇಕು, ಸೈರಿಸಬೇಕು ಎಂದು ನಿಶ್ಚಯಿಸಿ ಧಾರವಾಡಕ್ಕೆ ಹೋದೆ. ಶ್ರೀಕಾಂತ ತನ್ನ ಮನೆಯಲ್ಲಿಯೇ ಇರಲು ಅಗ್ರಹಪಟ್ಟಾಗ್ಯೂ, ನಾನಲ್ಲಿ ಇರಲು ಒಪ್ಪಲಿಲ್ಲ. ಬೇರೊಂದು ಕೋಣೆ ಹಿಡಿದೆ – ಉಳವಿಬಸಪ್ಪನ ಗುಡ್ಡದ ಮೇಲಿನ ಕಾಳೆ ವಕೀಲರ ಮನೆಯಲ್ಲಿ. ದಿನಾಲು ತಪ್ಪದೆ ಶ್ರೀಕಾಂತನಲ್ಲಿಗೆ ಹೋಗುವದಂತೂ ಇದ್ದೇ ಇತ್ತು. ನಮ್ಮ ದಿನದ ಸಂಜೆಯ ತಿರುಗಾಟದಲ್ಲಿ ಮಾತಿನಗಿಂತ ಈಗ ಮೌನವೇ ಹೆಚ್ಚು. ಏನಾದರೂ ನಾನು ಎಳೆದು ಪ್ರಶ್ನೆ ಕೇಳಿದರೆ ನಿದ್ದೆಯಿಂದ ಎಚ್ಚತ್ತವರಂತೆ 'ಆಂ' ಎನ್ನುತ್ತಿದ್ದ. ಈ ಪ್ರಶ್ನೆ ಈಗ ಕೇಳಲಿಯೋ ಬೇಡವೋ, ಈ ಮಾತು ಈಗ ಹೇಳಲಿಯೋ ಬಿಡಲಿಯೋ ಎಂದು ನನ್ನಲ್ಲಿಯೇ ವಾದಹಾಕುತ್ತ, ಶ್ರೀಕಾಂತನ ಮನಸ್ಥಿತಿಯ ಬಗ್ಗೆ ಊಹಾಪೋಹ ಮಾಡುತ್ತ ಒಂದು ಬಗೆಯ ದುಸ್ಸಹವಾದ, ಭಾರವಾದ ಸ್ವಯಂಪ್ರಜ್ಞೆಯಿಂದ ಪೀಡಿತನಾಗುತ್ತಿದ್ದೆ...

"ಏನು ಶ್ರೀಕಾಂತ, ಇಂದೇನು ಓದಿದೆ ?"

"ಅಂ?"

"ಇಂದೇನು ಓದಿದೀ – ಎಂದು ಕೇಳಿದೆ."

"ಇಂದು? ಹಾಂ, ಡೊಸ್ಟೊವ್ಸ್ಕಿಯ 'The idoit' ಓದಲು ಪ್ರಾರಂಭಿಸಿರುವೆ."

"ಮುಂದೆ, ಡೊಸ್ಟೊವ್ಸ್ಕಿಯ ಬಗ್ಗೆಯಾಗಲಿ, ಅವನ ಕಾದಂಬರಿಗಳ ಬಗ್ಗೆಯಾಗಲಿ ಶ್ರೀಕಾಂತನು ಏನಾದರೊಂದು ಹೇಳುವ ಎಂದು ಆತುರದಿಂದ ಹಾದಿ ಕಾಯ್ದೆ. ಆದರೆ ಶ್ರೀಕಾಂತ ತನ್ನ ಮನಸ್ಸಿನ ಗೂಡಿನೊಳಗಿಂದ ಹೊರಬರಲಿಲ್ಲ. ಅದೇನು ಅನಾಸ್ಥೆಯೋ, ವಿಚಾರಮಗ್ನತೆಯೋ ತಿಳಿಯಲಿಲ್ಲ.

ಅವನ ಇಂಥ ಅನಪೇಕ್ಷಿತ ಮೌನಧಾರಣೆ ನನಗೆ ಬಹಳ ನೋವನ್ನುಂಟು ಮಾಡುತ್ತಿತ್ತು. ಒಮ್ಮೆ ಧೈರ್ಯಮಾಡಿ ನಾನು ಕೇಳಿಯೇ ಬಿಟ್ಟೆ :

"ಶ್ರೀಕಾಂತ, ನಿನಗೆ ನನ್ನೊಡನೆ ಮಾತಾಡಲು ಬೇಸರವೇ?"

"ಛೇ, ಹಾಗೇನಿಲ್ಲವಲ್ಲ."

"ಹಾಗಾದರೆ ನೀನು ಮೊದಲಿನಂತೆ ನನ್ನೊಡನೆ ಮಾತನಾಡುವದಿಲ್ಲವಲ್ಲ?"

"ನಾನೇ ಮಾತಿನ ಮುಕ್ತೆಯನ್ನು ತೆಗೆದುಕೊಂಡಿರುವೆನೇನು? ಇಷ್ಟು ದಿನ ನಾನು ಮಾತಾಡುತ್ತಿದ್ದೆ, ನೀನು ಕೇಳುತ್ತಿದ್ದಿ. ಇನ್ನು ಮೇಲೆ ಸ್ವಲ್ಪ ಬದಲೆಂದು

ನೀನು ಮಾತಾಡಲ್ಲ, ನಾನು ಕೇಳುವೆ."

ನನ್ನ ಬಾಯಿ ಕಟ್ಟಿತು. ನಾನೇನು ಮಾತಾಡಬಲ್ಲೆ ನನ್ನ ತಲೆ? ವಿದ್ಯಾರ್ಥಿ ಒಮ್ಮೆಲೆ ಪ್ರಾಧ್ಯಾಪಕನಾಗಬಹುದೇ ಹಾಗೂ ಪ್ರಾಧ್ಯಾಪಕ ವಿದ್ಯಾರ್ಥಿಯಾಗಬಹುದೇ?

"ಇದು ನಿನ್ನ ಚೇಷ್ಟೆ..." ('ನಿನಗೆ ನನ್ನ ಸಹವಾಸ ಭಾರವಾಗಿದ್ದರೆ ಹೇಳು – ನಾನು...' ಎಂದು ನುಡಿಯಬೇಕೆಂದು ಬಹಳ ಯತ್ನಿಸಿದೆ. ಆದರೆ ನಾಲಗೆ ಏಳಲೇ ಇಲ್ಲ)

ಒಂದು ದಿನ ನಾನು ಮುಂಬಯಿಗೆ ಹೋಗುವ ವಿಷಯ ತೆಗೆದೆ.

"ಬಹಳ ಒಳ್ಳೆಯ ಯೋಜನೆ." ಎಂದ ಶ್ರೀಕಾಂತ, "ಇದಕ್ಕಿಂತ ಒಳ್ಳೆಯ ಯೋಜನೆ ಬೇರೊಂದಿಲ್ಲ. ನನ್ನ ಸಲುವಾಗಿ ಕಷ್ಟಪಟ್ಟಿದ್ದು ಸಾಕು. ನಾನೀಗ ಏನೆಂದರೂ ಸುಧಾರಿಸಿರುವೆ. ಇನ್ನು ಒಂದೆರಡು ವರ್ಷ ಬರೇ ವಿಶ್ರಾಂತಿ. ನೀನೇಕೆ ನನ್ನೊಡನೆ ಇಲ್ಲಿ ಕೊಳೆಯುತ್ತಿರುವಿ ಯಾರಿಗೆ ಗೊತ್ತು?"

"ಇದೆಂಥ ಮಾತು, ಶ್ರೀಕಾಂತಾ?"

"ನನಗೆ ಗೊತ್ತಿದೆ : ನೀನು ಹೋದ ಜೂನಿನಲ್ಲಿಯೇ ಮುಂಬಯಿಗೆ ಹೋಗಬೇಕೆಂದು ಮಾಡಿದ್ದು. ಸತ್ಯೇಂದ್ರ ನನಗೆ ಹೇಳಿದ. ನನ್ನ ಸಲುವಾಗಿ ನೀನು ಮುದ್ದಾಮ ಇಲ್ಲಿರುವ ಅವಶ್ಯಕತೆಯಿರಲಿಲ್ಲ. ಹಾಗೂ ನೀನು ಆಗಲೇ ಹೋಗಿದ್ದರೆ ಕಾಮಿನಿಯ ಬಗ್ಗೆ ನಿನ್ನ ತಲೆಯೂ ಇಷ್ಟು ಕೆಡುತ್ತಿರಲಿಲ್ಲ. ಎಲ್ಲ ರೀತಿಯಿಂದ ನಿನಗೆ ಒಳ್ಳೆಯದಾಗಬಹುದಿತ್ತು. ಸತ್ಯೇಂದ್ರನಂಥ ಮಾರ್ಗದರ್ಶಕರು ನಿನಗೆ ಬೇಕು. ನನ್ನಂಥ ತಲೆಯನ್ನು ತಿಪ್ಪಿಮಾಡುವ ತಲೆತಿರುಕ ಸಂಗತಿಯಿಂದೇನು ಪ್ರಯೋಜನ? ನಿನ್ನ ಹಾಗೂ ಕಾಮಿನಿಯ ಸಂಬಂಧದಲ್ಲಿ ನಾನು ಸಹಾಯಮಾಡಲು ಅಸಮರ್ಥನಾದೆ ಎಂದು ವಿಷಾದವೆನಿಸುವದು... ಸದ್ಯ ಇಲ್ಲಿಯ ವಾತಾವರಣ ನಿನ್ನ ಬೆಳವಣಿಗೆಗೆ ಪೂರಕವಿಲ್ಲ. ಒಂದು ರೀತಿಯಿಂದ ಮಾರಕವೇ ಹೌದು. ಧಾರವಾಡ ಬರ ಬರುತ್ತ ಬತ್ತುತ್ತಿದೆ.. ಇಲ್ಲಿ ತರುಣ ಮನಸ್ಸಿನ ಬೆಳವಣಿಗೆಗೆ ಬೇಕಾಗುವ ಅನುಕೂಲತೆಗಳಿಲ್ಲ, ವಿವಿಧ ಅನುಭವಗಳಿಗೆ ಅವಕಾಶವಿಲ್ಲ. ಇಲ್ಲಿಯ ಜೀವನದ ಪರಿಮಿತಿಯೇ ಸಣ್ಣದು... ಮುಂಬಯಿಯ ವಿಸ್ತೃತ, ವೈವಿಧ್ಯಮಯ ಜೀವನದಲ್ಲಿ ಸೂಕ್ಷ್ಮವಾದ ಮನಸ್ಸು ಕ್ರಿಸ್ಟಲಿನಂತೆ ಬಹುಮುಖವಾಗಿ ಸಂಪನ್ನವಾಗಿ ಬೆಳೆಯಲು ಸಾಕಷ್ಟು ಅವಕಾಶವಿದೆ, ಉತ್ತೇಜನವಿದೆ... ಆಮೇಲೆ, ನನ್ನ ಸಹವಾಸ ಸದ್ಯ ನಿರ್ಜೀವವಾಗಿರಬೇಕು. ಎಷ್ಟೋ ಸಲ ಏನು ಮಾತಾಡಬೇಕು, ಏನು ಮಾಡಬೇಕು ಎನ್ನುವದೇ ನನಗೆ ತಿಳಿಯದಂತಾಗುತ್ತಿದೆ. ಪ್ರಕೃತಿ ಒಮ್ಮೆ ಸಂಪೂರ್ಣ ನೆಟ್ಟಗಾಗುವತನಕ, ಎಮ್ಮೀ

ಕೆರೆಯ ನೀರಿನಂತೆ, ಸ್ವಚ್ಛವಾಗಿ ಇರಬೇಕೆಂದಿದ್ದೇನೆ... ಅನಂತರ, ಕಾಮಿನಿಯಿಂದ ನಿನ್ನ ಮನಸ್ಸಿಗೇನೂ ಸ್ವಾಸ್ಥ್ಯ ಸಿಗಲಾರದು, ತನ್ನ ಮೂರ್ಖತನದಿಂದ ಬಂಗಾರದಂಥ ಮನುಷ್ಯನನ್ನು ಕಳೆದುಕೊಳ್ಳುತ್ತಿರುವಳೆಂದು ಅವಳಿಗೇನು ಗೊತ್ತು? ನಾನು ನಿನಗೆ ಮೊದಲೇ ಹೇಳಿಲ್ಲವೇ, ಅವಳು ನಿನಗೆ ಯೋಗ್ಯಳಲ್ಲವೆಂದು?... ಮುಂಬಯಿಯ ಚೈತನ್ಯಯುಕ್ತ ಜೀವನದಲ್ಲಿ ಅವಳನ್ನು ಮರೆಯುವದು ಸುಲಭ – ಹಾಗೂ ....ಅಂದರೆ ನಿನ್ನ ಪ್ರೇಮವನ್ನು ಕಡೆಗಾಣಿಸುತ್ತಿಲ್ಲ ನಾನು. ನಾನು ಬಯಸುವದು ನಿನ್ನ ಭಾವೀಜೀವನದ ಸುಖ–ಸುಖಕ್ಕಿಂತ ಬೆಳವಣಿಗೆ ಹೌದು ನೀನು ಮುಂಬಯಿಗೆ ಹೋಗಲೇಬೇಕು – ಹೋಗುವದು ಎಲ್ಲ ದೃಷ್ಟಿಯಿಂದಲೂ ಯೋಗ್ಯ..."

ಇದಕ್ಕಿಂತಲೂ ಎಷ್ಟೋ ಉದ್ದವಿತ್ತು ಅವನ ಉಪನ್ಯಾಸ.

"ಆದರೆ – ಅಲ್ಲಿಯ ಭಯಂಕರ ಏಕಾಕಿತನ ಸಹಿಸಲಿಕ್ಕಾಗದು," ಎಂದು ನಾನು ಗುಣಗುಟ್ಟಿದೆ.

"ಏಕಾಕಿತನ – ಒಂದು ದೃಷ್ಟಿಯಿಂದ ಅದೇ ನಿನಗೆ ಅವಶ್ಯವಾದ ಸಂಗತಿ ವಾನಲೆಸ್ ವಾಡಿಯಲ್ಲಿ ಏಕಾಕಿತನವೆಂದರೇನೆಂಬುದನ್ನು ಅನುಭವಿಸಿರುವೆ. ನನಗೆನಿಸುವ ಮಟ್ಟಿಗೆ ಮನುಷ್ಯ ಬೆಳೆಯುವದು ಮುಖ್ಯ ಏಕಾಂತತೆಯಲ್ಲಿ ಜೀವನದಲ್ಲಿಯ ಎಲ್ಲ ಸೃಜನಕಾರ್ಯಗಳು ಏಕಾಂತತೆಯ ಗರ್ಭದಲ್ಲಿಯೇ ರೂಪುಗೊಳ್ಳುತ್ತವೆ, ಕೂಸು ತನ್ನ ಆಕಾರ ತಳೆಯುವದು ಗರ್ಭದ ಏಕಾಂತತೆಯಲ್ಲಿ. ಕಲಾಕೃತಿ ಮೊದಲು ಮೈ ತಳೆಯುವದು ಮನಸ್ಸಿನ ಏಕಾಂತತೆಯಲ್ಲಿ. ಪ್ರೇಮದ ಸೃಷ್ಟಿ ನಿರ್ಮಾಣವಾಗುವದು ಎರಡು ಹೃದಯದ ಏಕೀಕರಣದ ಏಕಾಂತತೆಯಲ್ಲಿ... ಏಕಾಂತತೆಯಲ್ಲಿ ಮನುಷ್ಯನ ಮನಸ್ಸು ತನ್ನ ನಾಟಕವನ್ನು ತಾನೇ ನೋಡುತ್ತದೆ, ತನ್ನ ಆಳೆತ್ತರ ತಾನೇ ಅಳೆಯುತ್ತದೆ... ಹೀಗಾಗಿ ತಿಳುವಳಿಕೆ ಬೆಳೆಯುತ್ತದೆ, ಸೂಕ್ಷ್ಮತೆ ಬೆಳೆಯುತ್ತದೆ, ಪ್ರಜ್ಞೆ ಬೆಳೆಯುತ್ತದೆ... ಗೌರೀಶ, ನೀನು ಹೋಗು. ಒಂದು ವರ್ಷದೊಳಗೆ ನಿನ್ನಲ್ಲಿ ಬದಲಾಗದಿದ್ದರೆ ಹೇಳು."

"ಬದಲು – ಒಳ್ಳೆಯದಿಶೆಯಲ್ಲಿಯೋ ಕೆಟ್ಟ ದಿಶೆಯಲ್ಲಿಯೋ ?" ನಾನು ನಕ್ಕೆ.

"ಯಾವ ದಿಶೆಯಲ್ಲಿಯಾದರೂ ನೆಟ್ಟಗೆ. ಅನುಭವ ಮುಖ್ಯ. ಹಾಗೆ ನೋಡಿದರೆ ಕೆಟ್ಟ ದಿಶೆಯಲ್ಲಿಯೇ ಅನುಭವಗಳು ಹೇರಳ !" ಎಂದು ಶ್ರೀಕಾಂತನು ನಕ್ಕ.

* * *

ಜನವರಿ ತಿಂಗಳಿನ ಒಂದು ರವಿವಾರ. ಮಧ್ಯಾಹ್ನ ಖಾನಾವಳಿಯಿಂದ

ಅದೇ ಬಂದು ಕಾಟಿನ ಮೇಲೆ ಒರಗಿದ್ದೆ. ಶಿಲುಬೆಯ ಮೇಲಿನ ಕ್ರೈಸ್ತನಂತೆ ಕೈ ಚೆಲ್ಲಿ ಮಲಗಲು ಯತ್ನಿಸುತ್ತಿದ್ದೆ : ನಿದ್ರೆ ಮರಣದ ತಂಗಿ, ಮರಣ ನಿಶಃಸ್ವಪ್ನವಾದ ದೀರ್ಘ ನಿದ್ರೆ ಎಂಬ ಕವಿ – ಕಲ್ಪನೆಗಳು ನನ್ನ ಮನಸ್ಸಿನಲ್ಲಿ ಮೇಯುತ್ತಿದ್ದವು. ಒಂದು ಜರಿಪು ಹತ್ತಿರಬೇಕು. ಅಷ್ಟರಲ್ಲಿ ಮೃದುವಾಗಿ ಕದ ತಟ್ಟಿದ ಸಪ್ಪಳ ಕೇಳಿಸಿತು

"ಯಾರು ?"

"ನಾನು."

ನಾನು ದಿಗ್ಗನೆ ಎದ್ದೆ. ಕಾಮಿನಿ – ಈ ಸಮಯದಲ್ಲಿ – ನನ್ನೆಡೆಗೆ – ? ನನ್ನ ಮೊದಲ ವಿಚಾರ ; ಶ್ರೀಕಾಂತನಿಗೆ ಏನಾದರೂ ಆಗಿದೆಯೇ ?

"ಬಂದೇ ನಿಲ್ಲು," ಎಂದು ಬೇಗನೇ ಅಂಗಿ ಹಾಕಿಕೊಂಡು ಕದ ತೆಗೆದೆ ಕಾಮಿನಿಯ ಮುಗುಳುನಗೆ ನನ್ನನ್ನು ದಿಗ್ಭ್ರಮೆಗೊಳಿಸಿತು.

"ಯಾಕೆ – ಆಶ್ಚರ್ಯವಾಯಿತೇನು ನನ್ನನ್ನು ನೋಡಿ ?"

"ಆಂ ?"

"ನಾನು ಒಳಗೆ ಬರಲೇ ?"

"ಶ್ರೀಕಾಂತ ನೆಟ್ಟಗಿದ್ದಾನೆ ತಾನೇ ?"

"ಆಂ ? – ಆತ ಚೆನ್ನಾಗಿ ನಿದ್ದೆ ಹೊಡೆಯುತ್ತಿದ್ದಾನೆ."

"ಕಾಟಿನ ಮೇಲೇಕೆ ?... ಕುರ್ಚಿಯ ಮೇಲೆ ಕುಳಿತು ಕೊಳ್ಳಲ್ಲ," ನಾನೆಂದೆ.

ಬಾಗಿಲನ್ನು ತೆರೆದಿಡಬೇಕೇ, ಮುಚ್ಚಬೇಕೇ, ಒಬ್ಬ ಹುಡುಗಿಯನ್ನು ನನ್ನ ಖೋಲಿಯಲ್ಲಿ ನೋಡಿದರೆ ಕಾಳೆಯವರ ಮನೆಯವರು ಏನೆನ್ನಬಹುದು – ಎಂಬ ವಿಚಾರಗಳು ಬಂದರೂ ಅವುಗಳನ್ನು ದುರ್ಲಕ್ಷಿಸಿ ನನ್ನ ಕೈಗಳು ಬಾಗಿಲನ್ನು ಹಾಕಿದವಲ್ಲದೇ ಚಿಲಕವನ್ನೂ ಹಾಕಿದವು...

ಕಾಮಿನಿ ಮರಳಿ ಮುಗುಳುನಗೆ ಬೀರಿದಳು. ಮಂಚದಿಂದ ಮಾತ್ರ ಏಳಲಿಲ್ಲ. ನಾನು ಕುರ್ಚಿಯಲ್ಲಿ ಸ್ವಲ್ಪ ಅಧೀರನಾಗಿಯೇ ಕುಳಿತೆ.

"ಏನು ಸುದ್ದಿ ?" ನಾನೆಂದೆ.

"ಸುದ್ದಿ–ಗಿದ್ದಿ ಏನಿಲ್ಲ."

ನನ್ನ ಮೇಲಿನ ಅವಳ ದೃಷ್ಟಿ ನನಗೆ ಸಹನವಾಗಲಿಲ್ಲ.

"ಚಹ ಮಾಡಲೇ ?" ಉಪಚಾರದ ಮಾತು ಕೇಳಿದೆ.

"ಈಗೇನು ಬೇಡ – ನಿನಗೆ ಬೇಕಾದರೇ ನಾನೇ ಚಹಾ ಮಾಡಿ ಕೊಡುವೆ ಮಾಡಲೇ?"

"ಛೇ, ನೀನು ನನ್ನ ಕೋಣೆಗೆ ಬಂದಾಗ ನೀನು ಅತಿಥಿ. ಅತಿಥಿಯ

ಅಧಿಕಾರ ಆತಿಥ್ಯ ಸ್ವೀಕರಿಸುವದು ಮಾತ್ರ."

"ಶಿಷ್ಟಾಚಾರದ ಮಾತೇಕೆ ? ನಾನೇನು ಪರಕೀಯಳೇ ?"

"ಪರಕೀಯಳಲ್ಲದೆ ಮತ್ತೇನು ?"

"ಇದೆಂಥ ಮಾತು, ಗೌರೀಶ ?"

"ದೃಷ್ಟಾಂತ !... ಅದಿರಲಿ – ಮೊದಲು ಚಹಾಮಾಡೋಣ."

"ನೀನು ಸ್ಟೋವ್ ಹೊತ್ತಿಸು. ನಾನು ಮುಂದಿನದನ್ನು ಮಾಡುವೆ."

ಮೂಲೆಯಲ್ಲಿಯ ಮುರುಕು ಟೇಬಲಿನ ಮೇಲೆ ನಮ್ಮ ಚಹ ಮಾಡುವ ಪ್ರಯೋಗ ಸುರುವಾಯಿತು... ನನ್ನ ಕೋಣೆಯಲ್ಲಿಯ ಅವಳ ಚಲನವಲನ ಅವರ ಸಣ್ಣ–ಪುಟ್ಟ ಪ್ರಶ್ನೆಗಳು ('ಎರಡು ಕಪ್ಪು ನೀರು ಸಾಕೆ?' 'ಸಕ್ಕರೆ ಎಲ್ಲಿ ?', 'ಈ ಚಮಚೆ ತೊಳೆದು ಎಷ್ಟು ವರ್ಷವಾಯಿತು?', 'ಈ ಕಪ್ಪಿಗೆ ಹಿಡಿಕೆಯಿಲ್ಲವಲ್ಲ !', 'ಸ್ಟ್ರಾಂಗೋ ಅಥವಾ ಲೈಟೋ?) ನನ್ನ ಅಂತರಂಗದಲ್ಲಿಯ ಯಾವದೋ ಕನಸಿಗೆ ಮೇಳವಾದಂತೆ ಅನಿಸಿತು, ಹಾಯೆನಿಸಿತು. ಆದರೆ, ಅವಳ ಅಂಗವಿನ್ಯಾಸದತ್ತ ಒಂದು ಬಗೆಯ ನಿರ್ವಿಕಾರದಿಂದಲೇ ನೋಡುತ್ತಿದ್ದೆ : ಅವಳ ಮೋಹಕತೆಯಿಂದ ಉತ್ತೇಜಿತನಾಗಿ ನಾನು ಅವಳನ್ನು ಆಲಿಂಗಿಸಲು ಧುಮುಕಬೇಕಿತ್ತು. ಆದರೆ ಅಂಥ ಇಚ್ಛೆಯ ಲವಲೇಶವೂ ನನ್ನಲ್ಲಿಲ್ಲವಲ್ಲ, ಎಂದು ಸ್ವಲ್ಪ ಕೆಟ್ಟೆನಿಸಿತು. ಚಹ ಮಾಡುವಾಗ ನಮ್ಮ ಕೈಗಳು. ತೋಳುಗಳು ಒಂದಕ್ಕೊಂದು ಸ್ಪರ್ಶಿಸಿದರೂ ಮೈಜುಮ್ಮೆನ್ನಲಿಲ್ಲ, ಹೃದಯ ಓಡಲಿಲ್ಲ.

ನಾವಿಬ್ಬರೂ ಕಾಟಿನ ಮೇಲೆ ಕುಳಿತು ಚಹ ಕುಡಿಯುವ ನಾಟಕ ಸುರು ಮಾಡಿದೆವು.

"ಗೌರೀಶ, ನೀನು ಮೊದಲಿನಂತೆ ನನ್ನ ಕೂಡ ಮಾತಾಡುವುದಿಲ್ಲವೇಕೆ? ನಮ್ಮ ಮನೆಗೆ ಬಂದಾಗ ಮುಖಕ್ಕೆ ಗಂಟು, ಹಾದಿಯಲ್ಲಿ ಎಲ್ಲಿಯಾದರೂ ಸಿಕ್ಕಾಗ ಮುಖಕ್ಕೆ ಗಂಟು... you're really stupid.... "

"ಸ್ಟುಪಿಡ್ ಅಷ್ಟೇ ಏಕೆ ? 'ಮ್ಯಾಡ್' ಕೂಡ !"

"ಹೌದು ಏನಾಗಿದೆ ನಿನಗೆ ? ಈ ಟರ್ಮು ಕಾಲೇಜಿಗೂ ಅಷ್ಟೊಂದು ಹೋಗಿಲ್ಲವಂತೆ. ನಿನ್ನ ಟರ್ಮು ಗ್ರ್ಯಾಂಟ್ ಆಗದಿದ್ದರೆ... ? ಅಭ್ಯಾಸ ಏನಾದರೂ ಮಾಡುತ್ತಿಯಾ? ಒಂದೂ ಪುಸ್ತಕ ಕಾಣಿಸುವದಿಲ್ಲ ನಿನ್ನ ಟೇಬಲ್ಲ ಮೇಲೆ ! ನಡೆಸಿರುವಿಯಾದರೂ ಏನು?"

"ಜೀವಂತವಿರುವ ಪ್ರಯತ್ನ."

"ವಾಹ್, ಜೀವನಕ್ಕೆ ಬೇಸರ ಬರುವಷ್ಟು ಆಗಿದೆಯಾದರೂ ಏನು ?

"ಅದು ನಿನಗೆ ತಿಳಿಯಲಾರದು."

"ಅದೆಲ್ಲ ನನಗೆ ಗೊತ್ತು. ಮೊನ್ನೆ ದಾದಾ ತಾಯಿಯ ಮುಂದೆ ಹೇಳಿರುವ. ಅವಳು ನನಗೆ ಎಲ್ಲ ಹೇಳಿದಳು."

"ಏನೆಂದು ?"

"ನಮ್ಮ ತಾಯಿ ದಾದಾನಿಗೆ ಕೇಳಿದಳಂತೆ : ಇತ್ತಿತ್ತಲಾಗಿ ಗೌರೀಶ ಹೀಗೇಕೆ ಮಾಡುತ್ತಾನೆ ? ಊಟಕ್ಕೆ ನಿಲ್ಲೆಂದರೆ ಮೊದಲಿನಂತೆ ನಿಲ್ಲುವದಿಲ್ಲ. ಚಹಗಿಹಾ ಕುಡಿಯೆಂದರೆ ಒಲ್ಲೆಯೆಂದು ಕೂಡಲೆ ಹೇಳಿ ಬಿಡುತ್ತಾನೆ. ಮೊದಲಿನಂತೆ ಹರಟೆ ಹೊಡೆಯಲು ಒಳಗೆ ಬರುವದಿಲ್ಲ. ಏನಾದರೂ ಕೇಳಿದರೆ ಒಣ ನಗೆಯೊಂದು ನಗುತ್ತಾನೆ... ಆಗ ದಾದಾ ಹೇಳಿದನಂತೆ : ಗೌರೀಶನ ಈ ವರ್ತನೆಗೆ ನಿನ್ನ ಮಗಳು ಕಾರಣ. ಅವನ ಪ್ರೀತಿಗೆ ಕಾಮಿನಿ ಎಳ್ಳಷ್ಟೂ ಉಪ್ಪು ಹಾಕುವದಿಲ್ಲ... ಅಷ್ಟೇ ಅಲ್ಲದೇ, ನನ್ನ ಬಗ್ಗೆ ಮತ್ತೇನನ್ನೊ ಹೇಳಿದನಂತೆ. ಅದನ್ನೆಲ್ಲ ದಾದಾನಿಗೆ ಹೇಳಿದವರು ಯಾರು ಎನ್ನುವದು ಗೊತ್ತಿಲ್ಲ."

"ಯಾಕೆ ? ನಾನೇ ಅವನಿಗೆ ಹೇಳಿರುವೆ."

"ಎಲ್ಲ ಅಂದರೆ ?"

"ನನ್ನ ಪ್ರೇಮವನ್ನು ಅವನಿಂದ ಬಚ್ಚಿಡಬೇಕೆಂದು ನನಗೆ ಎಂದೂ ಅನಿಸಲಿಲ್ಲ. ಆದ್ದರಿಂದ..."

ನನ್ನ ಪ್ರೇಮದ ಕತೆಯಲ್ಲಿ ಅವಳ ಎಲ್ಲ ಕತೆಗಳ ಸಮಾವೇಶವಿದೆಯೆಂಬುದು ಅವಳಿಗೆ ತಿಳಿಯಲಿಲ್ಲ. ಯಾಕೆಂದರೆ ನನ್ನ ಉತ್ತರದಿಂದ ಅವಳ ಸಮಾಧಾನವಾದಂತೆನಿಸಿತು.

"ನೀನೊಬ್ಬ ಹುಚ್ಚ, ದಾದಾ ಅಂದರೆ ದೇವರು ನಿನಗೆ. ಅವನ ಆಶೀರ್ವಾದ – ಉಪದೇಶಗಳಿಲ್ಲದೆ ನಿನ್ನ ಗಾಡಿ ಮುಂದೆ ಹೋಗುವದೇ ಇಲ್ಲ !"

"ಹಾಗೇನೂ ತಿಳಿಯಬೇಡ... ನಾನೀಗ ಧಾರವಾಡ ಬಿಟ್ಟು ಮುಂಬಯಿಗೆ ಹೋಗಲಿರುವದು ನಿನಗೆ ಗೊತ್ತಿರಬೇಕು. ಸ್ವಂತ ಕಾಲ ಮೇಲೆ ನಿಲ್ಲಲ್ಲು ಕಲಿಯಲು...

"ವಾಹ್, ಬಕಪ್ ! ನನಗೂ ಮುಂಬಯಿಯಲ್ಲಿರಬೇಕೆಂಬ ಹಂಬಲ ಬಹಳ..."

ನಾನು ಮನಸ್ಸಿನಲ್ಲಿಯೇ ಅಂದೆ : ಹೌದು, ಮುಂಬಯಿಯಲ್ಲಿ ನಿನ್ನ ಶಕ್ತಿ-ಯುಕ್ತಿಗಳಿಗೆ ವಿಸ್ತೃತ ಕ್ಷೇತ್ರ ದೊರೆಯಬಹುದು !

ಸ್ವಲ್ಪ ಚೇಷ್ಟೆಯ ದನಿಯಲ್ಲಿ ನಾನು ಕೇಳಿದೆ ; "ಹಾಗಾದರೆ ಬರುವಿಯೇನು ನನ್ನೊಡನೆ ?"

"ಓಹೋ, ಅದರಲ್ಲೇನು? ನಿನ್ನಲ್ಲಿ ಒಯ್ಯುವ ಸಾಮರ್ಥ್ಯವಿದ್ದ ಮೇಲೆ

ಬರಬಾರದೇಕೆ?"

"ಈ ತರಹದ ಆಹ್ವಾನದಿಂದೇನು ಪ್ರಯೋಜನ, ಎಲ್ಲ ಮುಗಿದ ಮೇಲೆ?"

"ಎಲ್ಲ – ಏನು ಮುಗಿಯಿತು?" ಅವಳ ಪ್ರಶ್ನೆಯಲ್ಲಿ ನಿರಾಗಸ ಮುಗ್ಧತೆಯಿತ್ತು.

"ನನ್ನ – ನಿನ್ನ ಸಂಬಂಧ..." ನನ್ನ ದನಿಯಲ್ಲಿ ನನಗೆ ಅರಿವಾಗದಂತೆ ಕಂಪನಕೂಡಿತ್ತು.

"ನಿನ್ನ ಈ ವಿಚಿತ್ರ ನಿರಾಶೆಯ ಅರ್ಥ ನನಗೆ ತಿಳಿಯದು... ನಿನ್ನಲ್ಲಿ ನನಗೆ ಆಸ್ಥೆಯಿಲ್ಲವೆಂಬ ಅನುಮಾನ ನಿನಗುಂಟಾದುದಾದರೂ ಹೇಗೆ ಅಂದೆ?... ನೀನೂ ಒಬ್ಬ ವಿಚಿತ್ರ ಹುಚ್ಚ ! ಇಷ್ಟೆಲ್ಲ ಆದನಂತರ ಇನ್ನೂ ಎಂಥ ಪುರಾವೆ ಬೇಕು... ಈ ಗಂಡಸರೇ ಹೀಗೆ! ಗೌರೀಶ, ನಿಜಕ್ಕೂ ಲಗ್ನವಾಗಬೇಕೆನ್ನುವಿಯಾ ನನ್ನನ್ನು? ಹೇಳು..."

ಕಾಮಿನಿ ಚಹದ ಕಪ್ಪುಗಳನ್ನು ಟೇಬಲ್ಲಿನ ಮೇಲೆ ಇಟ್ಟುಬಂದು, ನನಗೆ ತೀರ ಹತ್ತಿರ ಕುಳಿತು ನನ್ನ ಕೈಯೊತ್ತಿ ಕೇಳಿದಳು : "ಹೇಳು !"

ನಾನು ದಿಙ್ಮೂಢನಾದೆ. ಈ ಮೋಹಕ ಶೂರ್ಪನಖಿಯ ಮುಂದೆ ನಾನು ನಿರ್ಬಲನಾದೆ. 'ಹೇಳು' – ಏನು ಹೇಳಲಿ ನನ್ನ ತಲೆ? ಅವಳ ಕೈಯ ಬೆಚ್ಚಗಿನ ಮೃದು ಹಿಡಿತದಲ್ಲಿ ನಿರ್ಜೀವವಾಗಿ ಬಿದ್ದ  ನನ್ನ ಕೈಯ ಅರಿವಾಯತು ನನಗೆ. ನನ್ನ ಕೈಯನ್ನು ನಾನು ಹಳಿದೆ !...

"ಗೌರೀಶ, ಹೀಗೇಕೆ ಸ್ಫಿಂಕ್ಸದಂತೆ ಕುಳಿತಿರುವಿ – ಕಲ್ಲಾಗಿ?.... ಹೆದರಿಕೆ ಯಾತರದು?" ನನ್ನ ಮುಖವನ್ನು ತನ್ನೆಡೆಗೆ ತಿರುವಿ ನನ್ನ ಕಣ್ಣುಗಳಲ್ಲಿ ತನ್ನ ಕಣ್ಣುಗಳನ್ನಿಡಲು ಯತ್ನಿಸಿದಳು. ಅವಳ ಕಣ್ಣುಗಳಲ್ಲಿ ಆಹ್ವಾನವಿತ್ತು : "ಬಾ – ಕಣ್ಣಲ್ಲಿ ಕಣ್ಣಿಡು – ತುಟಿಯಲ್ಲಿ ತುಟಿಯಿಡು – "

ನಾನು ರೊಚ್ಚಿಗೆದ್ದ : "ಕಾಮಿನಿ, ನನ್ನಲ್ಲಿ ಮೋಹ ಹುಟ್ಟಿಸಬೇಡ – Don't tempt me ...ಅದರ ಉಪಯೋಗವೇನು?"

"ಗೌರೀಶ, – ಆಯಿತು ನಿನ್ನನ್ನು ಲಗ್ನವಾಗಲು ನಾನು ಒಪ್ಪಿದೆ – ನನ್ನ ಒಪ್ಪಿಗೆಯೆಂದು ಇದೋ –" ಎಂದು ನನ್ನ ತುಟಿಗೆ ತುಟಿಯೊತ್ತಿದಳು.

ನನ್ನ ದೇಹ ಕಂಪಿಸಿತು, ಝುಂಝಾವಾತದಲ್ಲಿ ಸಿಕ್ಕ ಅರಣ್ಯದಂತೆ!

ನನ್ನ ನಿರ್ಬಲತೆಯನ್ನು ಮುಚ್ಚಲು ನಾಟಕೀಯ ರಭಸದಿಂದ ಅವಳನ್ನು ಒತ್ತಿ ಹಿಡಿದು, ಅವಳ ಅಧರವನ್ನು ಕಚ್ಚಿ, ಅವಳ ದೇಹವನ್ನು ನುಗ್ಗು ಮಾಡಿ ನನ್ನಿಂದ ದೂರ ದೂಡಿದೆ.

"ಗೌರೀಶ..."

"ಕಾಮಿನಿ – ನೀನು – ನೀನು – ನಿನ್ನ ದಾರಿ ಬೇರೆ – ನನ್ನ ದಾರಿ ಬೇರೆ – ಅಥವಾ ನಿನಗೆ ದಾರಿಯೇ ಇಲ್ಲ."

"ನಾನು ನಿನಗೆ ದಾರಿ ತೋರಿಸಲೇ? ಬಾ ಗೌರೀಶ – ನೀನು – ಬೇಕು – ನನಗೆ"

ಅವಳು ನಿನ್ನ ಕೈ ಜಗ್ಗಿದೊಡನೆ ಜೋಲಿ ಹೋಗಿ ನಾನು ಅವಳ ಮೈಯ ಮೇಲೆ ಬಿದ್ದೆ. ನಾನು ನನ್ನನ್ನು ಅಲ್ಲಿಯೇ ಇರಗೊಟ್ಟೆ. ಅವಳ ಕೈಗಳು ನನ್ನನ್ನು ಬಂಧಿಸಿದವು....

"ಕಾಮಿನಿ, ಇದೆಲ್ಲ ಸುಳ್ಳು... ನನ್ನ ಹೃದಯ ನನಗೆ ಹೇಳುತ್ತಿದೆ : ಇದೆಲ್ಲ ಸುಳ್ಳು... ಬಿಡು ನನ್ನನ್ನು ...ನನ್ನ ಪ್ರೇಮ ಇಂಥದಲ್ಲ, ಇಂಥದಿರಲಿಲ್ಲ," ಎಂದು ನಾನು ಕೊಸರಿಕೊಂಡು ಎದ್ದು ಕುಳಿತೆ.

ಆ ಭೂತಕಾಲದ ಪ್ರಯೋಗದಲ್ಲ ('ಇಂಥದಿರಲಿಲ್ಲ' ಶಬ್ದದಲ್ಲಿ) ಒಂದು ಭಯಂಕರ ಬಾಂಬೇ ಇತ್ತು!

ಕಾಮಿನಿ ಅವಮಾನಿತಳಾದಳೆಂದು ತೋರುತ್ತದೆ. ಮುಖ ಕೆಳಗೆ ಹಾಕಿ ಎಷ್ಟೋ ಹೊತ್ತು ಸುಮ್ಮನೆ ಕುಳಿತಳು.

ನಾನೂ ಸುಮ್ಮನೆ ಕುಳಿತೆ ! ನನ್ನ ಮೌನದಲ್ಲಿ ಒಂದು ಭಯಂಕರ ಆರೋಪವೇ ಇತ್ತು... (ಮನಸ್ಸಿನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿ ಶಬ್ಧಗಳಲ್ಲಿಲ್ಲ ಮೌನದಲ್ಲಿದೆ!)

ಕೊಂಚ ಹೊತ್ತಿನ ನಂತರ ಕಾಮಿನಿ ಕೇಳಿದಳು :

"ಹಾಗಾದರೆ ನಿನ್ನ ಇಷ್ಟು ದಿನದ ಮಾತು – ನಡತೆಗಳೆಲ್ಲ ಬರೇ ನಟನೆಯಾಗಿದ್ದವೆ!"

"ಹಾಗೆ ತಿಳಿ ಬೇಕಾದರೆ... ಅಥವಾ ಹಾಗೆ ತಿಳಿಯುವುದರಲ್ಲಿಯೇ ಜಾಣತನವಿದೆ, ಕಾಮಿನಿ. ನಾವು ಬರಿಯ ಗೆಳೆಯ–ಗೆಳತಿಯರಲ್ಲವೆ ?"

ಕಾಮಿನಿ ತೂತು ಬಿದ್ದ ಬಲೂನಿನಂತಾಗಿರಬೇಕು. (ಅವಳ ಸೂಜಿಯಿಂದಲೇ ಅವಳ ಬಲೂನನ್ನು ಚುಚ್ಚಿದ್ದೆ.) ತನ್ನ ಸ್ಥಿತಿಗೆ ಪ್ರತಿಕ್ರಿಯೆಯೆಂದು ಕಾಮಿನಿ ಒಮ್ಮೆಲೆ ಸಿಡಿದೆದ್ದಳು. ನೇರವಾಗಿ ಟೇಬಲ್ಲ ಮೇಲಿನ ಕನ್ನಡಿಯತ್ತ ಹೋಗಿ, ಅದರಲ್ಲಿ ನೋಡಿ, ಕೂದಲು, ಅರಿವೆ ಸರಿಪಡಿಸಿಕೊಂಡಳು, ಆಮೇಲೆ ನನ್ನೆಡೆಗೆ ತಿರುಗಿ ಪ್ರಚ್ಛನ್ನ ಕೋಪದಿಂದ "ನೀನೂ ಮೋಸಗಾರ... ನಿನ್ನನ್ನೆಂದೂ ಕ್ಷಮಿಸಲಾರೆ... ನಾನು ಬಂದದ್ದೇ ತಪ್ಪಾಯಿತು... ಕ್ಷಮಿಸು" ಎಂದು ಗುಡುಗಿ, ಚಪ್ಪಲು ಹಾಕಿಕೊಂಡು ಹೊರಗೆ ಹೋಗಿಬಿಟ್ಟಳು...

ಫಟ್, ಫಟ್, ಫಟ್...

* * *

ಅವಳು ಹೋದ ಮೇಲೆ ಮಾತ್ರ ಬಾಗಿಲು ಮುಚ್ಚಿ, ಅವಳ ಮೈ ಝಳದಿಂದ ಬೆಚ್ಚಗಾದ ಗಾದಿಯಲ್ಲಿ ಬಿದ್ದು, ಬಿಕ್ಕಿ ಬಿಕ್ಕಿ ಅತ್ತೆ. ಕಣ್ಣೀರು ಕೋಡಿವರಿದವು : "ಇಲ್ಲಿಗೆ ಮುಗಿಯಿತು.... ದೇವರೇ ಇಲ್ಲಿಗೆ ಮುಗಿಯಿತು... ನನ್ನ ಕಾಮಿನಿ ಅಂಗೈಯೊಳಗಿನ ನೀರಿನಂತೆ ಜಾರಿ ಹರಿದು ಹೋದಳು... ಇನ್ನು ಎಲ್ಲಿಗೆ ಹರಿದು ಹೋಗುವಳೋ ಏನೋ?... ನನ್ನಲ್ಲಿ ಶಕ್ತಿ ಇತ್ತೇ ಅವಳನ್ನು ಹಿಡಿದಿಡಲು? ನನ್ನಲ್ಲಿ ಶಕ್ತಿಯನ್ನು ಅಪೇಕ್ಷಿಸಿ ಬಂದಿದ್ದಳು. ಆದರೆ ನಾನು ದುರ್ಬಲ... ಅವಳ ಪ್ರವಾಹಕ್ಕೆ ಅಣೆಕಟ್ಟಾಗಿ ನಿಲ್ಲುವ ಸಾಮರ್ಥ್ಯವಿಲ್ಲದ ದುರ್ಬಲ... ನನ್ನ ದುರ್ಬಲತೆಯನ್ನು ಮುಚ್ಚಲು ಅವಳನ್ನು ದೂರ ದೂಡಿದೆ...

ಸತ್ಯೇಂದ್ರ ನಂತರ ಹೇಳಿದ್ದ : "ನಿನ್ನ ವರ್ತನೆ ಸರಿಯಿತ್ತು. ಅವಳಿಗೆ ತಕ್ಕ ಶಾಸನವಾಯಿತು... ಒಳ್ಳೆಯ ಸೇಡು ತೆಗೆದುಕೊಂಡಿ..."

ಸೇಡು ! ನನಗೆ ಸೇಡಿನ ಬುದ್ಧಿಯೇ ಇರಲಿಲ್ಲ ! ಸ್ವಾಭಿಮಾನದಿಂದ ಅಂದನಾದ ಮನುಷ್ಯ ತನ್ನ ಸ್ವಾಭಿಮಾನಕ್ಕೆ ಆಘಾತವಾದೊಡನೆ ಸೇಡು ತೆಗೆದುಕೊಳ್ಳಬಯಸುತ್ತಾನೆ... ನನ್ನಲ್ಲಿ ಇದ್ದದ್ದು – ನನ್ನ ದುರ್ಬಲತೆಯ ಬಗ್ಗೆ ಉತ್ಕಟ ಅರಿವು ; ನನ್ನಲ್ಲಿ ಅಷ್ಟು ಶಕ್ತಿ ಇದ್ದಿದ್ದರೆ, ನನ್ನ ವ್ಯಕ್ತಿತ್ವ ಅಷ್ಟು ಪ್ರಭಾವಿಯಾಗಿದ್ದರೆ ಕಾಮಿನಿ ಮೊದಲಿನಿಂದ ನನ್ನ ಹಿಡಿತದಲ್ಲಿರುತ್ತಿದ್ದಳು. ಅವಳು ಬೇರೆಯವರತ್ತ ನಿರಂಕುಶವಾಗಿ ಹರಿಯುತ್ತಿರಲಿಲ್ಲ. 'ನಿನ್ನನ್ನು ಲಗ್ನವಾಗಲು ಒಪ್ಪಿದೆ' – ಯಾವುದೋ ಬಾಹ್ಯ ಕಾರಣ ಅವಳಿಂದ ಆ ಮಾತು ಆಡಿಸಿತೆಂಬುವದು ಸ್ಪಷ್ಟವಿದೆ. ಅವಳ ಅಂತರಂಗದ ಆಳದಿಂದ ಬಂದ ಮಾತಲ್ಲವದು... ಒಂದು ವೇಳೆ ನಮ್ಮ ಲಗ್ನವಾದರೂ ನಮ್ಮ ಮೊದಲಿನ ಸಂಬಂಧದ ರೂಪು–ರೇಷೆಗಳು ಬದಲಾಗುತ್ತಿರಲಿಲ್ಲ.... ಯಾಕೆಂದರೆ ಮಾನವೀ ಸಂಬಂಧದದ ಬೆಳವಣಿಗೆಯೆಂದರೆ, ಒಂದು ಜೀವಂತ ಬೀಜದ ಬೆಳವಣಿಗೆಯಿದ್ದಂತೆ. ಬೀಜ ಬೆಳೆದು ಅದರ ರೂಪು–ರೇಷೆ ಒಮ್ಮೆ ನಿಶ್ಚಿತವಾದ ಮೇಲೆ, ಅದನ್ನು ಬದಲಿಸುವದು ಬ್ರಹ್ಮನಿಗೂ ಶಕ್ಯವಿಲ್ಲ... ನನ್ನ ಅವಳ ನಡುವಿನ ಸಂಬಂಧದ ರೂಪು–ರೇಷೆ ಆಗಲೇ ನಿಶ್ಚಿತವಾಗಿದ್ದವು. ಬರಿಯ ಲಗ್ನವಾದೊಡನೆ ಆ ರೂಪು–ರೇಷೆ ಬದಲಾಗುವದು ಶಕ್ಯವಿದ್ದಿಲ್ಲ.

ಹಾಂ, ಒಂದು ಮಾರ್ಗ ಮಾತ್ರ ಇತ್ತು : 'ನನ್ನ' ಸ್ವರೂಪವನ್ನಾಗಲಿ 'ಅವಳ' ಸ್ವರೂಪವನ್ನಾಗಲಿ ಮೊದಲು ಪ್ರಯತ್ನಪೂರ್ವಕವಾಗಿ ಬದಲಿಸಿದ್ದಲ್ಲಿ ನನ್ನ – ಅವಳ ನಡುವಿನ ಸಂಬಂಧದಲ್ಲಿ ಮಾರ್ಪಾಡಾಗುವದು ಶಕ್ಯವಿತ್ತು...

ಅಂಥ ಬದಲು... ವ್ಯಕ್ತಿತ್ವದಲ್ಲಿಯ ಬದಲು – ಒದಗಿ ಬರಲು ಒಂದೇ ಕಾರಣವಿದೆ: ಅದೇಂದರೆ – ಕಾಲ !

* * *

ಕಾಲಪ್ರವಾಹ ಹರಿದಿದೆ... ಈಗಿನ ಗೌರೀಶ ಮೊದಲಿನ ಗೌರೀಶನಲ್ಲ. ಅದರಂತೆ. ಈಗಿನ ಕಾಮಿನಿ ಮೊದಲಿನ ಕಾಮಿನಿಗಿಂತ ಭಿನ್ನವಾಗಿರಬಹುದು.... ಗೌರೀಶ–ಕಾಮಿನಿಯರ ಸಂಬಂಧ ಒಂದು ಬಗೆಯದ್ದಾದರೆ, ಗೌರೀಶ ೧–ಕಾಮಿನಿ ೧ರ ಸಂಬಂಧ – ಸಂಬಂಧವುಂಟಾಗುವ ಪ್ರಸಂಗ ಬಂದರೆ – ಬೇರೆಯಾಗಬಹುದು !... ನೋಡಬೇಕು– ಎರಡು ಮೂರು ದಿನಗಳ ನಂತರ ಧಾರವಾಡದಲ್ಲಿ ಕಾಮಿನಿಯ ಭೆಟ್ಟಿಯಾಗಲಿದೆ. ಆದರೆ ಪುಣ್ಯಕ್ಕೆ 'ಗುಡ್‌ಬಾಯ್' ಹೇಳುವದಷ್ಟೇ ನನ್ನ ಕೆಲಸ... ಹಾಗೂ 'ಸಂಬಂಧ' ಬಂದರೂ ಬರಿಯ ಒಂದು ತಾಸಿನ ಮಟ್ಟಿಗೆ. ಆದುದರಿಂದ ಯಾವ ಬಗೆಯ ಭೀತಿಯಿಲ್ಲ, ಅನುಮಾನವಿಲ್ಲ...

ಇಂದು ಮುಂಜಾನೆ ಎದ್ದೊಡನೆ ಈ ಹಿಂದಿನ ಏಳೆಂಟು ಪುಟಗಳನ್ನು ಬರೆದು ನಂತರ ಸ್ನಾನಕ್ಕೆ ಎದ್ದೆ. ಮನಸ್ಸಿನಲ್ಲಿ ಏನೋ ಅಸಮಾಧಾನ : ಈ ಪ್ರಸಂಗವು ರಾತ್ರೆಯ ವಿಶಿಷ್ಟ ನೀರವತೆಯ ವಾತಾವರಣದಲ್ಲಿ ನನ್ನ ಸ್ಮೃತಿಯ ಗರ್ಭದಿಂದ ಹೊರಬಿದ್ದಿದ್ದರೆ ಅದಕ್ಕೆ ಬೇರೆ ರೂಪವೇ ಬರಬಹುದಿತ್ತು ! ರಾತ್ರೆಯ ಸಮಯದಲ್ಲಿ ಭಾವನೆಗಳ ಉತ್ಕಟತೆ ಸ್ಫುಟವಾಗಿ ಪ್ರಕಟವಾಗುವಂತೆ ಹಗಲಿನ ಬೆಳಕಿನಲ್ಲಿ ಆಗುವದಿಲ್ಲ... ಕಾಮಿನಿ ಅಂದು ಮಧ್ಯಾಹ್ನದಲ್ಲಿ ಬರದೆ, ರಾತ್ರೆ ಬಂದಿದ್ದರೆ ನನ್ನ–ಅವಳ ಸಂಬಂಧ ಬೇರೆ ದಾರಿ ಹಿಡಿಯಬಹುದಿತ್ತೇನೋ!

ನಾನು ಸ್ನಾನಮಾಡುವಾಗ ನನ್ನ ಕೋಣೆಯ ಬಾಗಿಲನ್ನು ಯಾರೋ ತಟ್ಟಿದ ಸಪ್ಪಳಾಯಿತು. ಬೇಗಬೇಗನೆ ಸ್ನಾನ ಮುಗಿಸಿ, ಅರಿವೆ ಹಾಕಿಕೊಂಡು ನನ್ನ ಕೋಣೆಗೆ ಹೋದೆ. ಆಗಲೆ ಬಾಗಿಲ ತೆರೆದು ಶಶಿಕಲೆ ಒಳಗೆ ಕುಳಿತಿದ್ದಳು.

"ಗುಡ್‌ಮಾರ್ನಿಂಗ್, ಶಶಿ, ಏನು ಅನಪೇಕ್ಷಿತವಾಗಿ ಬಂದೆ?"

"ಏನು ನನಗೆ ಹೇಳದೆ ಕೇಳದೆ ಓಡಿ ಹೋಗಬೇಕೆಂದು ಮಾಡಿದ್ದಿಯೇನು?"

"ಹೇಳದೆ ಕೇಳದೆ ಓಡಿ ಹೋಗಲು ನಾನೇನು ಯಾವ ಗುನ್ಹೆ ಮಾಡಿಲ್ಲವಲ್ಲ."

"ನಿಜವಾಗಿಯೂ?" ಅವಳ ಧ್ವನಿಯಲ್ಲಿ ಅರ್ಥಪೂರ್ಣ ವ್ಯಂಗ್ಯವಿತ್ತು.

ಅವಳ ಮರಾಠಿಯ 'ಖರಂs ಚ?' ಪಾಟಿಯ ಮೇಲೆ ಪೆನ್ಸಿಲಿನಿಂದ ಒಮ್ಮೆಲೆ ಜೋರಿನಿಂದ ಗೀಚಿದಂತೆ ನನ್ನ ಮನಸ್ಸಿನ ಮೇಲೆ ಗೀಚಿ ಹೋಯಿತು... ಅವಳು ಮುಂದೇನು ಮಂಡಿಸಲಿರುವಳೆಂಬುದರ ಕಲ್ಪನೆ ನನಗೆ ಸ್ಪಷ್ಟವಾಯಿತು: ನೀನು ನನ್ನೊಡನೆ ಗೆಳೆತನ ಮಾಡಿದೆ, ಆಶೆ ತೋರಿಸಿದಿ... ಅದೇ ನಿನ್ನ ಗುನ್ಹೆ ;

ಈ ಗುನ್ಹೆಗೆ ಒಂದೇ ಶಿಕ್ಷೆ : ನನ್ನೊಡನೆ ಲಗ್ನ !.. ಅವಳ ವಾದಸರಣಿಗೆ ಅವಕಾಶ ಕೊಡಬಾರದೆಂದು ನಾನು ಚಹದ ಪ್ರಸ್ತಾಪವೆತ್ತಿದೆ.

"ಶಶೀ, ಏನು ಚಹ ಮಾಡಲೇ ?"

"ಚಹದ ಅವಶ್ಯಕತೆಯಿಲ್ಲ. ಶಿಷ್ಟಾಚಾರ ಬೇಡ."

"ಚಹ ಬೇಡವೆಂದರೆ ಹೇಗೆ ? ಒಂದು ನಿಮಿಷದಲ್ಲಿ ತಯಾರಾಗುವ ವಸ್ತು ಅದು..."

"ಒಳ್ಳೇದು... ನಾನು ಮಾಡಲೇ ?"

"ಇದು ಸ್ತ್ರೀಯರ ಶಿಷ್ಟಾಚಾರ !... ಥ್ಯಾಂಕ್ಸ..."

ಚಹ ಕುಡಿದಾದ ಮೇಲೆ ನಾನೇ ಮುಖ್ಯ ವಿಷಯಕ್ಕೆ ಕೈ ಹಾಕಿದೆ.

"ನೀನು ಯಾಕೆ ಬಂದಿರುವಿ ಎಂಬುದು ನನಗೆ ಗೊತ್ತಿದೆ. ಮೊನ್ನೆ ಸತ್ಯೇಂದ್ರ ಹೇಳಿರುವ... ಶಶೀ, ನನ್ನ ಬಗ್ಗೆ ನಿನ್ನಲ್ಲಿ ಏನೋ ತಪ್ಪು ತಿಳುವಳಿಕೆಯುಂಟಾಗಿದೆ. ನಮ್ಮ ಗೆಳೆತನದಲ್ಲಿ ವಿಶೇಷ ಏನಾದರೂ 'ಸೀರಿಯಸ್' ಇತ್ತೆಂದು ನನಗನಿಸುವದಿಲ್ಲ. ನನ್ನ ವರ್ತನೆಯಲ್ಲಿ ಸಂಶಯ ಉತ್ಪನ್ನ ಮಾಡುವಂಥ ಆತ್ಮೀಯತೆ ನಿನಗೆ ಕಂಡು ಬಂದಿದ್ದರೆ, ದಯವಿಟ್ಟು ನನ್ನನ್ನು ಕ್ಷಮಿಸಬೇಕು."

ಶಶಿಕಲೆ ಕಿಡಕಿಯ ಹೊರಗೆ ದೃಷ್ಟಿ ಹೊರಳಿಸಿದಳು. ಚಷ್ಮ ಹಾಕಿದ ಅವಳ ಸಾದಗಪ್ಪು ಮುಖದಲ್ಲಿ ಸೌಂದರ್ಯವಿಲ್ಲದಿದ್ದರೂ, ಮೋಹಕ ಆಕರ್ಷಕತೆ ಇಲ್ಲದಿದ್ದರೂ, ಬುದ್ಧಿಯ ಕಳೆಯಿದೆ ; ಸಹಾನುಭೂತಿಯ ಭಾವವಿದೆ.

"ಛೇ, ನಾನೇನು ತಪ್ಪು ತಿಳಿದುಕೊಳ್ಳಲಕ್ಕೆ ೧೫-೧೬ ವರ್ಷದ ಕೂಸೇ?... ನಾನೇ ಮೊದಲು ಒಂದು ಹೆಜ್ಜೆ ಮುಂದೆ ಹೋಗಿ ನಿನ್ನಲ್ಲಿ ಆಸ್ಥೆ ತೋರಿಸಿದೆ. ನೀನು ಹೊಸದಾಗಿ ಬಂದಾಗ ನಿನ್ನ ಮುಖದ ಮೇಲಿನ ವಿಚಾರ ಪೂರ್ಣ ಖೇದದ ಭಾವ ನನ್ನ ಮನಸ್ಸನ್ನು ಮರುಳುಗೊಳಿಸಿತು... ನಿನಗೆ ನೆನಪಿದೆಯೇ – ಇನ್‌ಸ್ಟಿಟೂಟಿನಿಂದ ಒಂದು ದಿನ ಕೆಲಸ ಮುಗಿಸಿ ನಾವಿಬ್ಬರೂ ಕೂಡಿಯೇ ಹೊರಬಿದ್ದೆವು. ಆಗ ನಾನು ಕೇಳಿದೆ : 'ಹೇಗೆ ಹೋಗುವವರಿದ್ದೀರಿ? ಬಸ್ಸಿನಿಂದೋ, ಟ್ರೇನಿನಿಂದೋ ?' ನೀನು 'ಕಾಲಿನಿಂದ' ಎಂದು ಉತ್ತರಕೊಟ್ಟೆ. 'ವಾಹ್, ಹಾಗಾದರೆ ನಾನು ಬರುವೆ ನಡೆಯಿರಿ ನಿಮ್ಮೊಡನೆ – ನಿಮ್ಮ ಆಕ್ಷೇಪವಿಲ್ಲದಿದ್ದರೆ', ಎಂದೆ ನಾನು... ಮರೀನ್ ಡ್ರಾಯಿವ್ಹ–ಚೌಪಾಟಿಯ ಮೇಲಿನ ಆ ತಿರುಗಾಟದಲ್ಲಿ ಅಂದು ನಾವು ಬಹಳ ಮಾತಾಡಿದೆವು. ನಿನ್ನ ಶಾಂತ ಉದಾಸೀನತೆ ನನಗೆ ತೀರ ಹೊಸದೆನಿಸಿತು ; ನಿನ್ನ ನಿಷ್ಕಪಟ ಸರಳತೆ ನನ್ನ ಹೃದಯವನ್ನು ತಟ್ಟಿತು. ಆ ದಿನದಿಂದ ನನ್ನಲ್ಲಿ ಪ್ರೇಮ... ಒಂದು ವರ್ಷದ ನಮ್ಮ ನಿಕಟಸಂಬಂಧ...

ಲೆಕ್ಚರುಗಳಿಗೆ ಕೂಡಿ ಹೋಗುವದು, ಪ್ರಾಕ್ಟೀಕಲ್ಸುಗಳನ್ನು ಕೂಡಿ ಮಾಡುವದು, ಕೊನೆಗೆ ಅಭ್ಯಾಸ ಸಹ ಕೂಡಿ ಮಾಡಿದೆವು. ಈ ಗೆಳೆತನ ಲಗ್ನದಲ್ಲಿ ರೂಪಾಂತರ ಹೊಂದುವದೆಂದು ಎಲ್ಲರೂ ಅಪೇಕ್ಷಿಸಿದರು. ನಮ್ಮ ಕಾಕನಂತೂ ನನ್ನ ಲಗ್ನದ ಕಾಳಜಿಯಿಂದ ಸಂಪೂರ್ಣವಾಗಿ ಮುಕ್ತನಾಗಿದ್ದ. ನಿನ್ನನ್ನು ನಾನು ಒಂದು ಸಲ ನಮ್ಮ ಮನೆಗೆ ಕರೆದೊಯ್ದಾಗ ನಮ್ಮ ಮನೆಯ ಜನರಿಗೆ ನನ್ನ ಬಗ್ಗೆ ಎಷ್ಟೊಂದು ಅಭಿಮಾನ ಉಕ್ಕಿಬಂದಿತ್ತು ! ನಿನ್ನಲ್ಲಿ ಅವರು ಎಷ್ಟೊಂದು ಆದರ – ಪ್ರೇಮ ವ್ಯಕ್ತಮಾಡಿದ್ದರು – ನೆನಪುಂಟೇ?"

"ಆದರೆ ಶಶೀ, ನನ್ನಲ್ಲಿ ಪ್ರೀತಿಯ ಭಾವನೆ ತಪ್ಪಿ ಸಹ ಮೂಡಲಿಲ್ಲ... ಕ್ಷಮಿಸಬೇಕು – ಇಷ್ಟು ಅಪೇಕ್ಷೆ – ಆಶೆ ನಿನ್ನಲ್ಲಿ, ನಿನ್ನ ಮನೆಯ ಜನರಲ್ಲಿ ಹುಟ್ಟಿಸಿದ್ದಕ್ಕೆ !... ಇಷ್ಟು ಸ್ಪಷ್ಟ ಮಾತಾಡುತ್ತಿದ್ದೇನೆಂದು ಕೆಟ್ಟೆನಿಸಿಕೊಳ್ಳಬೇಡ"

"ಹೌದು, ನನ್ನದೇ ಎಲ್ಲ ತಪ್ಪು, ನಿಜ... ಗೌರೀಶ, ನಿನಗೆ ಪ್ರೇಮವೆಂದರೇನು ಗೊತ್ತಿದೆಯೇ?"

ನನಗೆ ನಗಬೇಕೋ ಅಳಬೇಕೋ ತಿಳಿಯಲಿಲ್ಲ !

"ಗೌರೀಶ, ನೀನು ಡಾಲಿಯನ್ನು ಲಗ್ನವಾಗುವಿಯಾ?"

"ಡಾಲಿಯ ಬಗ್ಗೆ ನಿನಗಾರು ಹೇಳಿದರು?"

"ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುತ್ತದೆಂದು... ಅದಿರಲಿ ನನ್ನ ಪ್ರಶ್ನೆಗೆ ಉತ್ತರ ಹೇಳು."

"ನಿನ್ನ ಪ್ರಶ್ನೆಗೆ ಉತ್ತರ : ಇಲ್ಲ. ಆದರೆ ಅದಕ್ಕೂ ನಿನಗೂ ಏನು ಸಂಬಂಧ?"

"ಅವಳ ಮೇಲೆ ನಿನ್ನ ಪ್ರೇಮವಿದೆಯೇ?"

"ನೀನೊಳ್ಳೆಯ ಕ್ರಾಸ್ – ಎಕ್ಸಾಮಿನೇಶನ್ ಸುರುಮಾಡಿದೆಯಲ್ಲ ! – ನಿನ್ನ ಪ್ರಶ್ನೆಗೆ ಉತ್ತರವಿಲ್ಲ.

"ಹಾಗಾದರೆ ನೀನು ನನ್ನನ್ನು ಒಯ್ಯಲ್ಲ ಆಫ್ರಿಕೆಗೆ."

"ಆಂ ?"

"ನಿನ್ನ ಸಲುವಾಗಿ ಬೇಕಾದದು ಮಾಡಲು ನಾನು ಸಿದ್ಧಳಿದ್ದೇನೆ. – ನಿನ್ನ ಪ್ರೇಮವಿಲ್ಲದಿದ್ದರೂ, ನಿನ್ನ ಗೆಳೆತನ ನನಗೆ ಸಾಕು. ನಿನ್ನ ಗೆಳೆತನದಲ್ಲಿ ದೊರೆತಷ್ಟು ಸಮಾಧಾನ ನನಗೆ ಮೊದಲು ಎಂದೂ ದೊರೆತಿರಲಿಲ್ಲ ನಿನ್ನ ಸಹಾನುಭೂತಿಯೊಂದೇ ಸಾಕು, ನನ್ನ ಜೀವನ ಫಲಿಸಲು... ನನ್ನ ಗೆಳೆತನವನ್ನು ಒಂದು ವರ್ಷ ಸಹಿಸಿದ ನಿನಗೆ ನನ್ನ ಆಜನ್ಮ––ಅಖಂಡ ಪ್ರೀತಿಯನ್ನು ಸಹಿಸಲು ಕಠಿಣವಾಗಲಾರದು – ಗೌರೀಶ !"

"ಶಶೀ, ಗೆಳೆತನದ ಮಾತು ಬೇರೆ, ಪ್ರೇಮದ ಮಾತುಬೇರೆ... ಎರಡೂ ನನಗೆ ಬೇಕಿಲ್ಲ. ನನ್ನ ಜೀವನ ಸಾಗಲು – ಜೀವನ ಫಲಿಸುವ ಪ್ರಶ್ನೆಯೇ ಇಲ್ಲ..."

"ಇಷ್ಟೊಂದು ಬೇಸರವೇಕೆ ಜೀವನದ ಬಗ್ಗೆ ? ಉದಾಸೀನತೆಯೇಕೆ ?"

"ಬೇಸರ ಬಂದರೆ ಆತ್ಮಹತ್ಯೆಮಾಡಿಕೊಳ್ಳುತ್ತಿದ್ದೆ, ಅಥವಾ ಉಪಭೋಗದಲ್ಲಿ ಮುಳುಗಿರುತ್ತಿದ್ದೆ..."

"ಹಾಗಾದರೆ"?

"ನಾನು ಆಫ್ರಿಕೆಗೆ ಹೋಗುವದರಲ್ಲಿ ಏನಾದರೂ ಅರ್ಥವಿರಬಹುದೆಂದು ಅನಿಸುವದಿಲ್ಲವೇ?"

"ಅರ್ಥ !" ಅವಳ ಧ್ವನಿಯಲ್ಲಿ ಆಶ್ಚರ್ಯವಿತ್ತು.

"ಎಂಥ ಅರ್ಥ?"

"ಅದನ್ನು ವಿಂಗಡಿಸಿ ಹೇಳಲು ಸ್ವಲ್ಪದರಲ್ಲಿ ಸಾಧ್ಯವಿಲ್ಲ..."

"ಅದರ ಬಗ್ಗೆ ಸ್ವಲ್ಪ ಸೂಚನೆಯಾದರೂ ?"

"ಸೂಚನೆ ಬೇಕೆ ?... ನಾನು ಹೋಗುವದು. ಮುಕ್ತಿಗಾಗಿ."

"ಮುಕ್ತಿ ? ಅಂದರೆ... ತಪಶ್ಚರ್ಯವೇನು ?"

"ನಿನಗೆ ಸೂಚನೆ ಮಾತ್ರ ಬೇಕಾಗಿತ್ತಲ್ಲವೆ ? ಸೂಚನೆ ಕೊಟ್ಟಿರುವೆ. ಅದರ ಭಾಷ್ಯೆ ಹೇಳಲು ನನಗೆ ಸಾಧ್ಯವಿಲ್ಲ..."

"ನಿನ್ನ ತಪಶ್ಚರ್ಯದಲ್ಲಿ, ಮುಕ್ತಿಯಲ್ಲಿ ನನ್ನಿಂದ ಅಡ್ಡಿಬರಬಹುದೇ ?"

"ಇದೆಂಥ ಬಾಲಪ್ರಶ್ನೆ, ಶಶೀ ?... ಕ್ಷಮಿಸಬೇಕು. ನೀನು ಒಂದು ವರ್ಷದ ಮುಕ್ತಮನಸ್ಸಿನ ಸಹವಾಸ ನನ್ನ ಜೀವನಕ್ಕೆ ಆಗ ಒಂದು ದೃಷ್ಟಿಯಿಂದ ಅವಶ್ಯಕವಾಗಿತ್ತೇನೋ! ಅದಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿದ್ದೇನೆ... ಆ ನಮ್ಮ ಗೆಳೆತನವು ಒಂದು ಸವಿಯಾದ ಸ್ಮೃತಿಯೆಂದು ನಮ್ಮ ಜೀವನದಲ್ಲಿ ಉಳಿಯುವದೆಂಬುದರಲ್ಲಿ ಸಂಶಯವಿಲ್ಲ... ಶಶೀ, ನಿನಗೆ ನನಗಿಂತ ಒಳ್ಳೇಯ ಗಂಡ ಸಿಗುವನೆಂಬುವರಲ್ಲಿ ಅನುಮಾನವಿಲ್ಲ... ನಿನ್ನ ಜೀವನ ಸುಖಮಯವಾಗಲಿ..." ನನ್ನ ಕಂಠ ಯಾಕೋ ಏನೋ ತುಂಬಿ ಬಂದಿತ್ತು.

ಶಶಿಕಲೆಯ ಕಂಠದ ಶಿರಗಳು ಬಿಗಿದವು. ಮುಖವನ್ನು ಆ ಬದಿಗೆ ಹೊರಳಿಸಿ ಕೆಳತುಟಿಯನ್ನು ಕಚ್ಚಿ ಹಿಡಿದಳು.

"ಗೌರೀಶ, ನನಗೆ ಏನು ಹೇಳಬೇಕೋ ತಿಳಿಯದು..." ಅವಳ ಕಣ್ಣೊಳಗಿಂದ ನೀರು ಧಾರಾಕಾರವಾಗಿ ಸುರಿಯತೊಡಗಿದವು. "ಗೌರೀಶ, ನಾನು ಹುಟ್ಟಲೇ

ಬಾರದಿತ್ತು..."

ನಾನು ಪೆದ್ದನಂತೆ ಅವಳ ಮುಖದೆಡೆಗೆ ನೋಡುತ್ತ ಕುಳಿತೆ, ನಿರ್ವಿಕಾರನಾಗಿ ಕಿಂಕರ್ತವ್ಯತಾಮೂಢನಾಗಿ...

* * *

ಮುಕ್ತಿ ಸುಲಭವಾದ ಮಾತಲ್ಲ... ನಿಸ್ವಾರ್ಥದ ವಿಷಯವಲ್ಲ ! ಗೌತಮ ಬುದ್ಧನು ಹೆಂಡತಿಯನ್ನು ಮಗನನ್ನೂ ಬಿಟ್ಟು ಹೋಗುವಾಗ ಅವನು ನಿಜಕ್ಕೂ ನಿಃಸ್ವಾರ್ಥಿಯಾಗಿದ್ದನೇ? ತನ್ನ ಸ್ವಂತ ಮುಕ್ತಿಯು ದಾರಿಯನ್ನು ಶೋಧಿಸಲು ಹೊರಡುವದರಲ್ಲಿ ಒಂದು ಬಗೆಯ 'ಸ್ವಾರ್ಥ' ಇತ್ತೇ ಅಲ್ಲವೇ ?

ಶಶಿಕಲೆಗೆ ನಾನು ಸ್ವಾರ್ಥಿಯೆಂದು ತೋರಿರಬೇಕು. ಅವಳ ದುಃಖದ ಬಗ್ಗೆ, ಅವಳ ಭಾವನೆಗಳ ಬಗ್ಗೆ ಎಳ್ಳಷ್ಟೂ ಸಹಾನುಭೂತಿ, ಅನುಕಂಪ ನನ್ನಲ್ಲಿ ಇಲ್ಲವೆಂದೇ ತೋರಿರಬೇಕು. ಅವಳ ದೃಷ್ಟಿಯಲ್ಲಿ ನಾನು ಸ್ವಯಂ ಕೇಂದ್ರಿತ ಅಹಂವಾದಿಯಾಗಿ ತೋರಿರಬೇಕು – ಉಪಾಯವಿಲ್ಲ ! ಶಶಿಕಲೆಯ ಬಗ್ಗೆ ಯಾವದೇ ಬಗೆಯ ಪ್ರೇಮದ ಭಾವನೆಗಳಿದ್ದಿಲ್ಲವೆಂದೇ ಅವಳೊಡನೆ ಅಷ್ಟು ಮುಕ್ತ ಮನಸ್ಸಿನಿಂದ ಸ್ವಚ್ಛಂದವಾಗಿ ವರ್ತಿಸಿದೆ : ಅವಳ ಜೊತೆಗೆ ಹೋಟೆಲಿಗೆ ಹೋದೆ, ಟ್ರಿಪ್ಪಿಗೆ ಹೋದೆ, ಸಿನೇಮ ನೋಡಿದೆ, ಒಬ್ಬ ಸರ್ವಸಾಧಾರಣ ಗೆಳೆಯನ ಜೊತೆಗೆ ವರ್ತಿಸಿದಂತೆ... ನನ್ನ ಬಗ್ಗೆ ಅವಳ ಮಮತೆ ನನ್ನ ಆಂತರಿಕ ಅಹಂವಾದವನ್ನು ಸಮಾಧಾನಗೊಳಿಸಿರಬೇಕು...

ಆದರೆ... ಮಹಾಪಟ್ಟಣದಲ್ಲಿ ಈ ಬಗೆಯ ಸಂಬಂಧಗಳು ಒಬ್ಬ ವ್ಯಕ್ತಿಯ ಜೀವನದಲ್ಲಿ ಎಷ್ಟೋ ಏನೋ ! ಶಶಿಕಲೆಯ ಕಣ್ಣೀರು, ಹೋಗುವಾಗಿನ ಅವಳ ಮ್ಲಾನ, ಬಿದ್ದ ಮುಖ ನನ್ನ ಹೃದಯ ಕಿವುಚಿದವು ನಿಜ. ಬಸ್ಸಿನಲ್ಲಿ ಕುಳಿತ ನಂತರ ಅವಳು ನನ್ನೆಡೆಗೆ ಬೀರಿದ ಕೊನೆಯ ವಿಚಿತ್ರ ಹೃದಯವಿದಾರಕ ದೃಷ್ಟಿಕ್ಷೇಪವನ್ನು ನಾನೆಂದೂ ಮರೆಯಲಾರೆ, ನಿಜ... ಆದರೆ... ಎಲ್ಲವೂ ಅನಿವಾರ್ಯ... ಉಪಾಯವಿಲ್ಲ...

* * *

ಅನಿವಾರ್ಯ ! ಜೀವನದಲ್ಲಿ ಅಪರಿಹಾರ್ಯತೆ ಬಹಳುಂಟು... ವ್ಯಕ್ತಿ ಹಾಗೂ ಸನ್ನಿವೇಶಗಳನ್ನು ಗೃಹಿತ ಹಿಡಿದ ಮೇಲೆ ಮುಂದಾಗುವದೆಲ್ಲ ಒಂದು ದೃಷ್ಟಿಯಿಂದ ಅಪರಿಹಾರ್ಯವೇ !...

ನಾನು ಧಾರವಾಡ ಬಿಟ್ಟು ಮುಂಬಯಿಗೆ ಬರುವದು ಅನಿವಾರ್ಯವೇ ಆಗಿತ್ತಲ್ಲವೇ? ಆದದ್ದೆಲ್ಲ ಆದನಂತರ – ಶ್ರೀಕಾಂತನಿಂದ, ಹೆಚ್ಚಾಗಿ ಕಾಮಿನಿಯಿಂದ,

ದೂರ-ದೂರ ಎಲ್ಲಿಯಾದರೂ ಹೋಗಿ ಇರುವದು ಒಂದು ರೀತಿಯಿಂದ ಅವಶ್ಯಕವಾದ ಮಾತಾಯಿತು.

"ಒಳ್ಳೇದು ಕಾಮಿನಿ, ನಾನು ಹೋಗುವೆ..." ನನ್ನ ಕಂಠ ತುಂಬಿ ಬಂದಿತ್ತು. "ನನ್ನ ಎಲ್ಲ ಹುಚ್ಚುತನವನ್ನು ಮರೆತುಬಿಡು... ನನ್ನ ಪ್ರಮಾದಗಳನ್ನು ಕ್ಷಮಿಸು. ಶಕ್ಯವಿದ್ದರೆ..."

ಅವಳು ಏನೋ ಹೇಳಬೇಕೆನ್ನುವಷ್ಟರಲ್ಲಿ ಶ್ರೀಕಾಂತ ತನ್ನ ಕೋಣೆಯಿಂದ ಬಂದಿದ್ದ. ಅಷ್ಟರಲ್ಲಿ ಸರಲಾಬಾಯಿಯವರೂ ಹೊರಗೆ ಬಂದರು.

"ಗೌರೀಶ, ನಿನ್ನ ಉಪಕಾರ ನಾನೆಂದೂ ಮರೆಯುವದಿಲ್ಲ. ಬೇಗನೆ ಎಮ್. ಎಸ್‌ಸಿ ಮಾಡಿ ಕೆಲಸ ದೊರಕಿಸಿ, ಲಗ್ನವಾಗು. ನಿನ್ನ ಲಗ್ನಕ್ಕೆ ನಾನಂತೂ ಖಂಡಿತ ಬರುವೆ ನೋಡು." ಸರಲಾವಾಾಂಶಿಯವರ ನಗೆಯಲ್ಲಿ ಸಹಾನುಭೂತಿಯಿತ್ತು.

ಹೋಗಿ ಸರಲಾಬಾಯಿಯವರಿಗೆ ನಮಸ್ಕರಿಸಿದೆ. "ಮಾಂಶೀ ಲಗ್ನದ ಮಾತು ಎಂದೋ ಏನೋ... ನಿಮ್ಮ ಆಶೀರ್ವಾದದಿಂದ ಎಮ್.ಎಸ್‌ಸಿ. ಒಂದು ಮುಗಿಯಲಿ... ಮುಂದಿನದು ಮುಂದೆ. ಒಳ್ಳೇದು, ನಾ ಬರುವೆ..."

ಶ್ರೀಕಾಂತನೂ ನಾನೂ ಟಾಂಗಾದಲ್ಲಿ ಹೋಗಿ ಕುಳಿತೆವು. ಅವರ ಮನೆಯ ಬಾಗಿಲಲ್ಲಿ ಸರಲಾಮಾಂಶಿ ಹಾಗೂ ಕಾಮಿನಿ ನಿಂತಿದ್ದರು. ಕಾಮಿನಿಯ ಕಣ್ಣುಗಳಲ್ಲಿ ಒಂದು ಹನಿಯಷ್ಟಾದರೂ ನೀರು ಕಂಡು ಧನ್ಯನಾಗಬೇಕು ಎಂಬ ಬಯಕೆಯುಂಟಾಯಿತು. ಆದರೆ ಕಾಮಿನಿಯ ತುಟಿಯ ಮೇಲೆ ಮೃದುಹಾಸ್ಯವಿತ್ತು...

"ಗೌರೀಶ, ನಾಡದು ನಮ್ಮ ರಿಜಲ್ಟು, ಮುಂಬಯಿಯಲ್ಲಿ ಔಟಾದೊಡನೆ ನಮಗೆ ತಾರು ಕಳಿಸುವಿಯಾ ? ಪಾಸಾಗುವ ಆಶೆಯಂತೂ ಇಲ್ಲವೇ ಇಲ್ಲ... ಆದರೂ ಯಾರು ಹೇಳಬೇಕು - ಅಪ್ಪಿತಪ್ಪಿ ಪಾಸಾದರೆ..." ಕಾಮಿನಿಯ ಆದೇಶ.

"ಅವಶ್ಯವಾಗಿ..." ನಾನೆಂದೆ ಔಪಚಾರಿಕವಾಗಿ ಹೋಗಿ ಬರುವೆ, ಎಂದು ಕೈಬೀಸಿದೆ... ಕಾಮಿನಿಯೂ ಕೈಬೀಸಿ "ಬಾಯ್ ಬಾಯ್" ಎಂದಳು ಸರಲಾಮಾಂಶಿಯವರು "ಒಳ್ಳೆದು ಹೋಗಿ ಬಾ," ಎಂದರು.

ದಾರಿಗುಂಟ ಶ್ರೀಕಾಂತ ನನ್ನೊಡನೆ ಏನೂ ಮಾತಾಡಲಿಲ್ಲ. ಸ್ಟೇಶನ್ನಿನಲ್ಲಿ ಕೂಡ, "ಸಾಮಾನೆಲ್ಲ ಸರಿಯಿದೆಯೆ ?", "ಇಂದು ಗಾಡಿ ವೇಳೆಗೆ ಸರಿಯಾಗಿ ಬಂತಲ್ಲ", "ಕೂಡಲು ಸಾಕಷ್ಟು ಜಾಗೆಯಿದೆ ತಾನೇ ?" "ಓದಲು ಹತ್ತಿರ ಏನಾದರೂ ಇದೆಯೇ?", "ಮೇಲಿಂದ ಮೇಲೆ ಪತ್ರ ಬರೆಯುತ್ತಿರು"... ಮುಂತಾದ ಕ್ಷುಲ್ಲಕ ವಿಷಯಗಳ ಬಗ್ಗೆಯೇ ಮಾತನಾಡಿದ.

ಅವನು ಹೇಳುವುದನ್ನೆಲ್ಲ ಅದರ ಹಿಂದಿನ ರಾತ್ರಿಯೇ ಹೇಳಿದ್ದ : "ನಮ್ಮ ದಾರಿಗಳು ಭಿನ್ನವಾಗುತ್ತಿವೆ, ಎಂದು ನನಗೆ ತೀಕ್ಷ್ಣವಾಗಿ ಅನಿಸಲು ಸುರುವಾಗಿದೆ... ಪ್ರತಿಯೊಬ್ಬ ವ್ಯಕ್ತಿಯ ದಾರಿ ಹಾಗೆ ನೋಡಿದರೆ ಬೇರೆಯೇ ಇರುತ್ತದೆ. ಒಮ್ಮೊಮ್ಮೆ ಎರಡು ವ್ಯಕ್ತಿಗಳ ಒಂದಕ್ಕೊಂದು ಹೊಂದಿ ಕೆಲವು ದಿನ ಸಾಗಬಹುದು... ಕಾಲ–ಸ್ಥಾನ–ಧರ್ಮದ ಮೂಲಕ, ಹಾಗೂ ಆ ವ್ಯಕ್ತಿಗಳ ನುಡುವಿನ ಹಾರ್ದಿಕ ಬಂಧನದ ಮೂಲಕ... ಈಗ ನನ್ನದೊಂದೇ ಬಯಕೆ : ನಮ್ಮ ದಾರಿಗಳು ಅನಿವಾರ್ಯವಾಗಿ ಬೇರೆ ಬೇರೆ ದಿಶೆಯಲ್ಲಿ ಹೋಗಬಹುದಾದರೂ ನಮ್ಮ ನಡುವಿನ ಬಂಧನ ಹಾಗೆಯೇ ಉಳಿಯಲಿ... ಬಂಧನ ತಾನಾಗಿಯೇ ಗಟ್ಟಿಮುಟ್ಟಾಗಿರುತ್ತದೆ. ಆದರೆ ಬೇರೆ ಬೇರೆ ಊರುಗಳಲ್ಲಿರುವಾಗ, ಭೌತಿಕ ಅಂತರ ಬೆಳೆದಾಗ, ಬಂಧನವನ್ನು ಗಟ್ಟಿಯಾಗಿಡಲು ಸ್ವಲ್ಪ ಪ್ರಯತ್ನ ಮಾಡಬೇಕಾಗುವುದೇನೋ... ನೀನು ದೂರ ಹೋಗುತ್ತಿರುವಿಯೆಂದು ನನಗೇನೂ ಕೆಟ್ಟೆನಿಸುವದಿಲ್ಲ. ನೀನು ನಿನ್ನ ವಿಕಾಸಕ್ಕಾಗಿ ಹೋಗುತ್ತಿರುವಿ. ನಿನ್ನ ವಿಕಾಸದಲ್ಲಿ ನನ್ನ ವಿಕಾಸವೂ ಇದೆ, ನಮ್ಮ ಪ್ರೀತಿಯ ವಿಕಾಸವೂ ಇದೆ : ... ಹಾಂ, ಇದುವೇ ಗೆಳೆತನದ ಗುಟ್ಟು ! ನನ್ನ ಅನುಭವಗಳಷ್ಟೇ ನನ್ನವಲ್ಲ. ನನ್ನ ತೀರ ಹತ್ತಿರದ ಗೆಳೆಯನ ಅನುಭವಗಳೂ – ಸಹಾನುಭೂತಿ, ಸಹ + ಅನುಭೂತಿಯ ಧರ್ಮದ ಮೂಲಕ – ಒಂದು ರೀತಿಯಿಂದ ನನ್ನವೇ 'ಈ ಬಗೆಯಾಗಿ ಅನುಭೂತಿಯ ಕ್ಷೇತ್ರದ ವಿಸ್ತಾರವೇ ಗೆಳೆತನದ, ಅಥವಾ ಯಾವದೇ ಬಗೆಯ ನಿಕಟ ಮಾನವೀ ಸಂಬಂಧದ ಮೂಲ ಕಾರ್ಯ. ಇದು ಕಣ್ಣಿಗೆ ಕಾಣುವದಿಲ್ಲ – ಸಹಜವಾಗಿ ತಿಳಿಯುವದಿಲ್ಲ... ಸಾಹಿತ್ಯದ ಪರಿಣಾಮವೂ ಅದೇರೀತಿ ಕಣ್ಣಿಗೆ ಒಮ್ಮೆಲೆ ಕಾಣುವದಿಲ್ಲ. ಸಹಜವಾಗಿ ತಿಳಿಯುವದಿಲ್ಲ.. ಹೋಗು, ಗೌರೀಶ, ಆನಂದದಿಂದ ಕಲೆಯುತ್ತ ಹೋಗು. ಕಣ್ಣಿನಲ್ಲಿ ನೀರು ತರಬೇಡ, ಮುಖ ಕೆಳಗೆ ಹಾಕಬೇಡ... ನನ್ನ ಬಗ್ಗೆ ಕಾಳಜಿ ಮಾಡಬೇಡ... ನಾನು ವಿಶ್ರಾಂತಿ ತೆಗೆದುಕೊಂಡು ನನ್ನ ಪ್ರಕೃತಿ ಸುಧಾರಿಸುವೆ.. ಆನಂತರ ನಾನು ಕೂಡ ಮುಂಬಯಿಗೆ ಬರುವೆ... ಯಾವುದಾದರೊಂದು ಕಾಲೇಜಿನಲ್ಲಿ ಕಲಿಸಲು !... ಆನಂತರ ಮುಂದಿನದು ಮುಂದೆ..." ಈ ರೀತಿಯಾಗಿ ಶ್ರೀಕಾಂತ ನನ್ನನ್ನು ಸಂತಯಿಸಿದ್ದ, ತತ್ವಜ್ಞಾನ ಹೇಳಿದ್ದ, ಬೀಳ್ಕೊಟ್ಟಿದ್ದ ದೂರ ಸರಿದಿದ್ದ !

* * *

ದೂರ ಸರಿದಿದ್ದ. ತನ್ನದೇ ಆದ ತ್ರಿಶಂಕು – ಲೋಕವನ್ನು ತಾನೊಬ್ಬನೇ ಸೇರಿದ್ದ...

ಅವನ ದಿನಚರಿಯೆಂದರೆ ಆ ತ್ರಿಶಂಕು – ಲೋಕದ ಇತಿಹಾಸ... ಶ್ರೀಕಾಂತನ

ಮನಸ್ಸಿನ ಚಕ್ರವ್ಯೂಹದ ಕತೆ... ಅವನು ಬರೆದದ್ದು ಇಂಗ್ಲೀಷಿನಲ್ಲಿ, ಅದನ್ನು ಎಂದಾದರೊಮ್ಮೆ ಕನ್ನಡದಲ್ಲಿ ಭಾಷಾಂತರಿಸಬೇಕು.. ಆದರೆ ನನ್ನ ಕನ್ನಡದ ಮೇಲಿನ ಪ್ರಭುತ್ವವೂ ಅಷ್ಟಕ್ಕಷ್ಟೇ...

ದಿನಚರಿಯ ಮೊದಲ ಭಾಗದಲ್ಲಿ ಅಷ್ಟೊಂದು ಹೊಸದೇನೂ ಇಲ್ಲ. ಅವನ ಎಂದಿನ ವಿಚಾರಗಳ, ಅಭಿಪ್ರಾಯಗಳ ಉಜಳಣಿಯಿದೆ. ಆದರೆ ಎಲ್ಲೆಡೆಯಲ್ಲಿ ಅವನ ತೀಕ್ಷ್ಣ ಮನಸ್ಸಿನ ಸೂಕ್ಷ್ಮ ವಿಶ್ಲೇಷಣೆಯಿದೆ, ಅವನದೇ ಆದ ಸತ್ಯಶೋಧಕದ ದೃಷ್ಟಿಯಿದೆ. ಎಲ್ಲ ಅನುಭವಗಳನ್ನೂ ವಿಚಾರಗಳನ್ನೂ ಸ್ವಂತ ಹೃದಯದ, ಮನಸ್ಸಿನ ನಿಕಷದ ಮೇಲೆ ಪರೀಕ್ಷಿಸದೆ ಸ್ವೀಕರಿಸಬಾರದೆಂಬ ಹಟ ಪ್ರತಿ ಪುಟದ ಮೇಲೆ ಮೂಡಿದೆ. ಕೀಟ್ಸನ ಪತ್ರಗಳಲ್ಲಿ ಕಂಡು ಬರುವ ಬುದ್ಧಿ – ಶಕ್ತಿ ಹಾಗೂ ಕಲ್ಪನಾ – ಶಕ್ತಿಗಳ ಸಂಯೋಗ ಎಷ್ಟೋ ಕಡೆಗೆ ಸಲೀಲವಾಗಿ ಬಂದಿದೆ...

ಮೊದಲಿನ ಐದಾರು ತಿಂಗಳು ದಿನಚರಿ ನಿಯಮಿತವಾಗಿಲ್ಲ. ತಿಂಗಳಿಗೆ ಎರಡು ಮೂರು ಸಲ ಎಂದಾದರೊಮ್ಮೆ ಸ್ಫೂರ್ತಿ ಬಂದಾಗ, ಒಳ್ಳೆಯ ಪುಸ್ತಕ ಓದಿದಾಗ, ಏನಾದರೊಂದು ಹೊಸ ವಿಚಾರ ಹೊಳೆದಾಗ, ಯಾರೊಡನೆಯಾದರೂ ಚರ್ಚೆ ಮಾಡಿದಾಗ ಅವನಿಗೆ ಸ್ಫೂರ್ತಿ ಬರುತ್ತಿತ್ತೆಂದು ಕಾಣುತ್ತದೆ – ಆತ ತನ್ನ ದಿನಚರಿಯಲ್ಲಿ ತನ್ನ ವಿಚಾರ, ಅನಿಸಿಕೆಗಳನ್ನು ಬರೆದಿಟ್ಟಂತಿದೆ.

ಜನೇವರಿ ತಿಂಗಳಲ್ಲಿ ಒಮ್ಮಿಂದೊಮ್ಮೆಲೆ ಭಯಂಕರ ಬದಲೊಂದು ಸುರುವಾದದ್ದು ಕಂಡುಬರುವದು :

"೯–೧–೧೯೫೨"....

"ಮುಗಿಯಿತಿನ್ನು ಈ ಜಗದ ಬಂಧ, ಇನ್ನಿಲ್ಲ ಒಂದು ಮುಂದು"
"ಓ ಮೃತ್ಯು ! ನನ್ನ ಬರಲಿರುವ ನವವಧುವೇ !
ಹೇಗೆ ನಿನ್ನನ್ನು ನಾ ಸ್ವಾಗತಿಸಲಿ ?
ನೀನಾಗಿ ಬಂದೆಯಾ –
ನನ್ನ ಪ್ರಾಣವನ್ನು ಬಯಸಿ, ಪ್ರೀತಿಯನು ಅರಸಿ ?
ಬಂದೆಯಾ ಬಾ ಕನ್ಯೆ ಕೂಡಲ್ಲಿ ಕುರ್ಚಿಯಲಿ,
ಸ್ವಲ್ಪ ಮಾತಾಡು–ಕಾತಾಡು, ಹೇಳು ಅಲ್ಲಿ–ಇಲ್ಲಿಯ ಸುದ್ಧಿ,
ನಕ್ಕು ನಗಿಸು ಸ್ವಲ್ಪ.... ಸಮಯ ತುಂಬಿದೊಡನೆ
ಏಳು, ಕೈಹಿಡಿದು ಕರೆದೊಯ್ಯು....
ಆ ಬಾಗಿಲ ಬಳಿ

ನನ್ನ ಜೀವ ನನಗೆ ಗೊತ್ತಿಲ್ಲದೆಯೆ ಹಿಂತಿರುಗಿ ನೋಡುವ ಮೊದಲೆ,
ನಿನ್ನ ಮುತ್ತಿನಮೃತವ ನೀಡು,
ಆಲಿಂಗನದ ಮದ್ಯವ ಕುಡಿಸು.... ಮತ್ತನಾಗಿ
ಕಣ್ಣು ಮುಚ್ಚುವ ತನಕ....
ಬಾಗಿಲು ಮುಚ್ಚಿ ಕುಳ್ಳಿರಿಸು ಆ – ಆ
ಪುಷ್ಪಕವಿಮಾನದಲಿ – ನಿನ್ನ
ಸಂಗೀತಲಹರಿಯ ಮೇಲೆ ಏರಲಿ ಅದು, ಹಾರಲಿ
ಆಕಾಶಗಂಗೆಯಾಚೆ, ಸೇರಲಿ
ತಾರಾಮಂಡಲದ ಮಧ್ಯಕೇಂದ್ರವನು, ರಾರಾಜಿಸಲಿ
ಪ್ರಾಣ–ನಿನ್ನ ಸಾಮ್ರಾಜ್ಯದ ಶೂನ್ಯ –
ಸಿಂಹಾಸನದ ಮೇಲೆ...
ಓ ಮೃತ್ಯು ! ಮೃತ್ಯು ! ಮೃತ್ಯು !"

* * *

ಶ್ರೀಕಾಂತನ ಈ ಭಾವಲಹರಿಗೆ ಕಾರಣ : ಡಾಕ್ಟರರು ಅಂದೇ ಅವನಿಗೆ ಕೂಡಲೇ ಮರಳಿ ವಾನಲೆಸ್‌ವಾಡಿಗೆ ಹೋಗಲು ತಿಳಿಸಿದ್ದರು. ಅವನ ಇದ್ದ ಒಂದು ಪುಪ್ಪುಸಕ್ಕೂ ರೋಗ ಅಂಟಿಕೊಂಡಂತಿದೆ ; ಅದು ಗಂಭೀರ ಸ್ವರೂಪ ತಾಳುವ ಮೊದಲೇ ಎಲ್ಲ ಬಗೆಯ ಉಪಾಯ ಮಾಡಬೇಕು, ಎಂದು ಸೂಚಿಸಿದ್ದರು. ಈ ಮಾತನ್ನು ಶ್ರೀಕಾಂತ ಯಾರ ಮುಂದೆಯೂ ಹೇಳಲಿಲ್ಲ. ನನಗೆ ಕೂಡ ತಿಳಿಸಲಿಲ್ಲ. 'ಚೆಕಪ್ಪಿಗೋಸ್ಕರ ಹೋಗಿ ಬರುತ್ತೇನೆ' ಎಂದು ಮನೆಯಲ್ಲಿ ಹೇಳಿ ವಾನಲೆಸ್‌ವಾಡಿಗೆ ಹೋದ. ವಾನಲಸ್ ವಾಡಿಯಿಂದ ನನಗೊಂದು ಪತ್ರ ಬರೆದ. ಪತ್ರದಲ್ಲಿ ಅಪೂರ್ವ ಉಲ್ಲಾಸದ ಭಾವವಿದ್ದಂತಿತ್ತು.

"ಗೌರೀಶ, ನೀನು ಆರಾಮಾಗಿದ್ದೀಯಾ? ನಿನ್ನ ಪರೀಕ್ಷೆ ಸಮೀಪಿಸಿರಬೇಕು. ಅಭ್ಯಾಸ ಚೆನ್ನಾಗಿ ಮಾಡು. ಫರ್ಸ್ಟ್‌ಕ್ಲಾಸು ದೊರಕಿಸಬೇಕು ನೋಡು....

ನಾನು ಚೆನ್ನಾಗಿದ್ದೇನೆ. ಇಲ್ಲಿ ರೆಗ್ಯೂಲರ್ 'ಚೆಕಪ್ಪಿ'ನ ಸಲುವಾಗಿ ಬಂದವನು ಇನ್ನೂ ಹೋಗಿಲ್ಲ–ಹೋಗಲು ಮನಸ್ಸೇ ಆಗದು. ಕಾರಣ? ಇಲ್ಲಿಯ ಉತ್ಕೃಷ್ಟ ಹವಾಮಾನವೇ? ಇರಬಹುದು. ಇಲ್ಲಿಯ ಸ್ವಚ್ಛಂದ ಏಕಾಂತತೆಯೇ? ಇರಬಹುದು. ಆದರೆ ಮುಖ್ಯ ಕಾರಣ? ನಿನಗೆ ಊಹಿಸಲು ಸಾಧ್ಯವೇ? ನಿನಗೆ ಹಿಂದೊಮ್ಮೆ, ನೀನಿಲ್ಲಿ ಬಂದಾಗ, ನಾನು ಹೇಳಿದುದು ನೆನಪಿದೆಯೇ? ಹಾ, ಹಾ, ನನ್ನ ಮಹಾಶ್ವೇತೆಯ ವಿಷಯ? ಹಾಂ, ನನ್ನ ಬಗ್ಗೆ ಅವಳು ತೋರಿಸುವ ಆಸ್ಥೇ

ಅಪೂರ್ವವಾದುದು. ನನಗೂ ಅವಳ ಬಗ್ಗೆ ವಿಚಿತ್ರವಾದ ಆತ್ಮೀಯತೆಯೆನಿಸುವದು... ಎಂಬುವದರಲ್ಲಿ ಸಂಶಯವಿಲ್ಲ. ಇದಕ್ಕೇ ಪ್ರೇಮವೆನ್ನಬೇಕೋ ಏನೋ? ಅವಳು ದಿನಾಲು... ಅವಳಿಗೆ ಬಿಡುವಿದ್ದಾಗ – ನನ್ನ ಕೋಣೆಗೆ ಬರುತ್ತಾಳೆ. ಎಷ್ಟೋ ಹೊತ್ತಿನ ತನಕ ಸಾಹಿತ್ಯ, ಧರ್ಮ, ಜೀವನ ಮುಂತಾದ ವಿಷಯಗಳ ಬಗ್ಗೆ ಚರ್ಚಿಸುತ್ತ ಕೂಡ್ರುತ್ತಾಳೆ.... ಅವಳಿಗೆ ಇಂಗ್ಲೀಷ ಕಾದಂಬರಿ ಓದುವ ಹುಚ್ಚು ಬಹಳ.... ಕಾದಂಬರೀ ಕ್ಷೇತ್ರದಲ್ಲಿ ನನಗಿಂತ ಹೆಚ್ಚು ಜ್ಞಾನವಿದೆ ಅವಳದು... ಅವಳು ಧರ್ಮಾಂತರಿತ ಕ್ರಿಶ್ಚಿಯನ್ನಳಿದ್ದರೂ, ಆ ಧರ್ಮದಲ್ಲಿ ಅಂಥ ಶ್ರದ್ಧೆಯಿಲ್ಲ.... ಅವಳಲ್ಲಿ ಜೀವನೋತ್ಸಾಹ ತುಂಬಿತುಳುಕುತ್ತಿದೆ. ಅವಳ ನಗೆ, ಅವಳ ಮಾತು, ಅವಳ ಅಂಗವಿನ್ಯಾಸ.... ಅವಳ ಸರ್ವ ವ್ಯಕ್ತಿತ್ವದಲ್ಲಿ ಚೈತನ್ಯ ನೀಡುವ ಶಕ್ತಿಯಿದೆ.... ಅವಳ ಬಗ್ಗೆ ಇದ್ದ ಕುತೂಹಲವೇ ನನ್ನನ್ನು ಜಗ್ಗಿ ನಿಲ್ಲಿಸಿದೆ ಇಲ್ಲಿ... ನಾನು ಏಳೆಂಟು ದಿನಗಳ ನಂತರ ಧಾರವಾಡಕ್ಕೆ ಮರಳಿ ಹೋಗುವೆ...

ಬಹುಶಃ ಅದೇ ದಿನ ಬರೆದ ದಿನಚರಿಯಲ್ಲಿ ಶ್ರೀಕಾಂತ ಹೀಗೆ ಹೇಳಿರುವ:

"–ಗೌರೀಶನಿಗೆ ಪತ್ರ ಬರೆದೆ ಇಂದು. ನೋವು. ಸುಳ್ಳಿನ ಕಂತೆ... ಮೇರಿ ನಿಜಕ್ಕೂ ನಾನು ವರ್ಣಿಸಿದಂತೆ ಇದ್ದಿದ್ದರೆ... ಗೌರೀಶ – ಸತ್ಯೇಂದ್ರರಿಗೆ ಆಶ್ಚರ್ಯದ ಆಘಾತ ನಿಶ್ಚಿತ : ಸುಳ್ಳು ಹೇಳಬಾರದು, ಮೋಸಗೊಳಿಸಬಾರದು, ನಿಜ ! ಆದರೆ ನನ್ನ ದುಃಖದ ಝಳ ಅವರಿಗೇಕೆ ?.... ಗೌರೀಶನ ಪರೀಕ್ಷೆ ಬೇರೆ.... ಇನ್ನು ಮೇಲೆ ಯಾರ ಉಪಯೋಗವೂ ನನಗಿಲ್ಲ... ನನ್ನ ಉಪಯೋಗವೂ ಬೇರೆಯವರಿಗಿಲ್ಲ... ಹಾ... ಹಾ... ಮೇರಿಯ ಉಪಯೋಗ... ?...

* * *

ನಾನೂ ಸತ್ಯೇಂದ್ರನೂ ನಕ್ಕಿದೆವು : ಈ ಭಾರೀ ಮೀನ ಸಹ ಬಲೆಯಲ್ಲಿ ಬಿತ್ತಲ್ಲ ಎಂದು. ಸತ್ಯೇಂದ್ರ ತನ್ನ ಲಗ್ನದ ಆಮಂತ್ರಣದ ಜೊತೆಗೆ, "ಬೃಹತ್ ಕೊಂಗ್ರ್ಯಾ– ಚುಲೇಶನ್ಸ್," ಎಂದು ಶ್ರೀಕಾಂತನಿಗೆ ಬರೆದಿದ್ದ. ನಾನೂ ಕೂಡ ಅವನ ಪ್ರೇಮವನ್ನು ಪ್ರೋತ್ಸಾಹಿಸಿಯೇ ಪತ್ರ ಬರೆದಿದ್ದೆ...

ಶ್ರೀಕಾಂತ ನಮ್ಮ ಈ ಬಗೆಯ ಪ್ರತಿಕ್ರಿಯೆ ಓದಿ ನಕ್ಕಿರಬೇಕು – ಅಥವಾ ಅತ್ತಿರಬೇಕೋ?

ಅಂದಿನ ನಮ್ಮ ನಗೆ ನನ್ನ ಸ್ಮೃತಿಯ ಪೆಟ್ಟಿಗೆಯಲ್ಲಿ ಹುಳ ಹಿಡಿದ ಹಳೆ ಮಿಠಾಯಿಯಂತೆ ಬಿದ್ದಿದೆ ! ಅದನ್ನು ನೆನೆದರೆ ಜೀವ ಈಗಲೂ ಕಳವಳಗೊಳ್ಳುವದು....

* * *

ಸತ್ಯೇಂದ್ರನ ಲಗ್ನಕ್ಕೆ ಶ್ರೀಕಾಂತ ಬರಲಿಲ್ಲ. ಅವನ ಪತ್ರ, ಅದರ ಜೊತೆಗೆ

ಒಂದು ದೊಡ್ಡ ಪೆಟ್ಟಿಗೆ ಬಂದವು. ಪೆಟ್ಟಿಗೆಯಲ್ಲಿ ಶ್ರೀಕಾಂತನ ಇಪ್ಪತ್ತು ಪುಸ್ತಕಗಳಿದ್ದವು. ಪತ್ರದಲ್ಲಿ, "ಕ್ಷಮಿಸಬೇಕು, ನನ್ನ ಮೈಯಲ್ಲಿ ಸ್ವಲ್ಪ ನೆಟ್ಟಗಿಲ್ಲವಾದ್ದರಿಂದ ನನಗೆ ನಿನ್ನ ಲಗ್ನಕ್ಕೆ ಬರಲಾಗಲಿಲ್ಲ. ನಿಮ್ಮೀರ್ವರ ಜೀವನ ಸುಖಮಯವಾಗಲಿ.... ನನ್ನ ನೆನಪಿಗೆಂದು ನನ್ನ ಇಪ್ಪತ್ತು ಪುಸ್ತಕಗಳನ್ನು ನಿನಗೆ ಕಾಣಿಕೆ ಕೊಡುತ್ತಿರುವೆ. ಸ್ವೀಕರಿಸಬೇಕು. ನಿನ್ನ ಎಂಜಿನಿಯರಿಂಗದ ವೈಭವದಲ್ಲಿ ಸಾಹಿತ್ಯ, ತತ್ವಜ್ಞಾನ, ಸಂಸ್ಕೃತಿ ಮುಂತಾದ ಜೀವನದ ಬೌದ್ಧಿಕ 'ಆಧ್ಯಾತ್ಮಿಕ' (spiritual) ಮುಖವನ್ನು ಮರೆಯಬಾರದು." ಎಂದಿತ್ತು.

ಅವನ ಪತ್ರದಲ್ಲಿಯ, 'ನನ್ನ ನೆನಪಿಗೆಂದು', ಎಂಬ ಶಬ್ದಗಳು ನನಗೆ ಆಗಲೇ ಚುಚ್ಚಿಹೋಗಿದ್ದವು....

ಶ್ರೀಕಾಂತ ಬರದೆ ಇದ್ದುದರಿಂದ ನನಗಂತೂ ನಿರಾಶೆಯಷ್ಟೇ ಅಲ್ಲದೆ ವ್ಯಥೆಯೂ ಅಗಿತ್ತು. ಆದರೆ ಅವನ ಕಾಯಿಲೆ ಗಂಭೀರಸ್ವರೂಪ ತಳೆದಿರಬಹುದು ಎಂಬ ಕಲ್ಪನೆ ಕನಸುಮನಸಿನಲ್ಲಿಯೂ ಸುಳಿದಿರಲಿಲ್ಲ...

ಅಲ್ಲಿ ಶ್ರೀಕಾಂತ ಮಾತ್ರ ಜೀವನಕ್ಕೆ ಹೊರತಾಗಿ ಜೀವಿಸಲು ಪ್ರಾರಂಭಿಸಿದ್ದ:

"ನನ್ನ ಸಾಮರ್ಥ್ಯವೆಲ್ಲ ಸೋರಿಹೋಗುತ್ತಿದೆ... ವಿಶ್ರಾಂತಿ, ವಿಶ್ರಾಂತಿ, ವಿಶ್ರಾಂತಿ... ಆದರೆ ಮನಸ್ಸಿಗೆಲ್ಲಿಯ ವಿಶ್ರಾಂತಿ?... ಈ ಭಯಂಕರ ಶೂನ್ಯತೆಯಲ್ಲಿ ಯಾವ ಆಧಾರ? ಕತ್ತಲೆಯ ತಳವಿಲ್ಲದ ಈ ಕಣಿವೆಯಲ್ಲಿ ನಾನೊಬ್ಬನೆ ಇಳಿಯುತ್ತಿರುವೆ... ದೇವರೇ, ಎಲ್ಲಿದ ಮಹಾರಾಯ, ನಿನ್ನ ಕೈ?"

".... ನನ್ನ ಮನಸ್ಸು ನನಗೆ ಗೊತ್ತಿಲ್ಲದೆಯೇ ಶಿಥಿಲವಾಗುತ್ತಿದೆ. ಒಮ್ಮೊಮ್ಮೆ ಒಮ್ಮೆಲೆ ಆಂತರಿಕ ಮನಸ್ಸಿನಲ್ಲಿಯ ಸುಪ್ತ ಹಂಬಲುಗಳು ಭೂತದಂತೆ ಹೊರಬಂದು ಕುಣಿಯುತ್ತವೆ. ಅವುಗಳನ್ನು ನಿಯಂತ್ರಿಸುತ್ತ ನಿಯಂತ್ರಿಸುತ್ತ ಹಣ್ಣಾಗಿ ಹೋಗುವೆ... ಹೀಗೆ ಇಷ್ಟು ಕಷ್ಟಪಟ್ಟು ನಿಯಂತ್ರಿಸುವುದಕ್ಕಿಂತ ಕೆಲವು ದಿನ ಈ ಭೂತಗಳೊಡನೆ ನಗುತ್ತ ಕೆಲೆಯುತ್ತ ಕುಣಿಯಬಾರದೇಕೆ:. ನಾನೂ 'ಭೂತ'ನಾಗುವುದಕ್ಕಿಂತ ಮುಂಚೆ?.... ಜೀವನದ ಈ ಕೆಳಮೊಗವನ್ನು ನೋಡಬಾರದೇಕೆ.... ಸಾಯುವದಕ್ಕಿಂತ ಮುಂಚೆ?.... ಅನುಭವ ಮುಖ್ಯ... ಅನುಭವ ! ಜ್ಞಾನ ಮುಖ್ಯ... ಜ್ಞಾನ ದೇಹವನ್ನು ಅಜ್ಞಾನದಲ್ಲಿಟ್ಟು ಏನು ಪ್ರಯೋಜನ?.... ನನ್ನ ವಿಚಾರ ನನಗೇ ತಿಳಿಯಲೊಲ್ಲವು... ಇದು ವಿಚಾರದ ವಿಷಯವಲ್ಲ, ವಿಚಾರದ ವಿಷಯ... ನಾನೇಕೆ ಹೀಗೆ ನನ್ನಿಂದ ಓಡಿಹೋಗುತ್ತಿರುವೆ? ಆ ವಿಕಾರವನ್ನು ಸಮ್ಮುಖವಾಗಿ ಎದುರಿಸಬೇಕು... ಹಾಂ! ಈ ಹಂಬಲು ಯಾವುದು? 'ಭೂತ' ಯಾವುದು? ವಿಕಾರ ಯಾವುದು?.... ಸ್ಪಷ್ಟ ಸ್ಪಷ್ಟ ವಿಚಾರ ಮಾಡು, ಓ ಮನವೇ, ಬದನೆಕಾಯಿ ಯಾಕುತ್ತೆ ನಡೆದ ಓ

ಮಿದುಳೇ !

.... ಇಂದು ಮೇರಿ ನನ್ನನ್ನು ಸಂತೈಸುತ್ತ, ಹುರಿದುಂಬಿಸುತ್ತ, ನಗುತ್ತ ಮಾತನಾಡುತ್ತಿರುವಾಗ ಅವಳ ಬಗ್ಗೆ ಎಷ್ಟೊಂದು ಉತ್ಕಟವಾದ ಇಚ್ಛೆಯುಂಟಾಯಿತಲ್ಲ ! ಅವಳ ಕೈ ಗಟ್ಟಿ ಹಿಡಿದು, ಕಣ್ಣು ಮುಚ್ಚಿ ಆ ಇಚ್ಛೆಯನ್ನು ಒಳಗೇ ಒತ್ತಿಟ್ಟು ಅಡಗಿಸಿದೆ... ಕಣ್ಣುತೆರೆದಾಗ ಕಂಬನಿ ತುಂಬಿ ಹೊರಸೂಸಿದವು. ಮೇರಿಗೆ ಗೊತ್ತಾಗಲಿಲ್ಲ ; 'ಶ್ರೀಕಾಂತ, ನೀವು ಸುಮ್ಮನೆ ಮನಸ್ಸಿಗೆ ಹಚ್ಚಿಕೊಳ್ಳುತ್ತಿರುವಿರಿ... ನೀವು ನಿಜಕ್ಕೂ ನೆಟ್ಟಗಾಗುವಿರಿ ಧೈರ್ಯ ಬಿಡಬಾರದು. ನಿಮ್ಮಂಥ ವಿಚಾರವಂತರು ಸಣ್ಣ ಹುಡುಗರಂತೆ ವರ್ತಿಸಿದರೆ ಮುಂದೇನು?...' ಪುಣ್ಯಕ್ಕೆ ಅವಳಿಗೆ ನನ್ನ ಮನಸ್ಥಿತಿಯ ಪತ್ತೆ ಎಳ್ಳಷ್ಟೂ ಹತ್ತಲಿಲ್ಲ.... ಆದರೆ ನಾನು ನನ್ನ ಭ್ರಾಂತಿಯಿಂದ ಎಚ್ಚತ್ತಾಗ, ನನ್ನ ತಲೆಯು ಅವಳ ಎದೆಗೆ ಅಂಟಿಕೊಂಡಿದ್ದರ ಅರಿವಾಯಿತು..."

* * *

ಶ್ರೀಕಾಂತ ಇನ್ನೂ ಯಾಕೆ ವಾನಲೆಸ್‌ವಾಡಿಯಲ್ಲಿದ್ದಾನೆ ಎಂಬುದು ನಮಗೆ ತಿಳಿಯಲಿಲ್ಲ. ನನ್ನ ಪರೀಕ್ಷೆ ಸಮೀಪಿಸಿದ್ದರಿಂದ ನಾನು ಜೋರಿನಿಂದ ಅಭ್ಯಾಸ ಸುರುಮಾಡಿದ್ದೆ. ಸತ್ಯೇಂದ್ರನ ಲಗ್ನದ ನಂತರ ನಾನು ಕಾಲೇಜ ಹಾಸ್ಟೆಲಿನಲ್ಲಿ ಹೋಗಿನಿಂತೆ. 'ಫರ್ಸ್ಟ ಈಯರ'ದ ಪರೀಕ್ಷೆ ಮುಗಿದು, ಹುಡುಗರು ಹೋಗಿದ್ದರಿಂದ, ಕಾಲೇಜ ಹಾಸ್ಟೆಲಿನಲ್ಲಿ ಸಹಜವಾಗಿ ಕೋಣೆ ಸಿಕ್ಕಿತು. ಶಶಿಕಲೆ ದಿನಾಲು ಸಂಜೆ ಮೂರು-ನಾಲ್ಕು ತಾಸು ನನ್ನೊಡನೆ ಅಭ್ಯಾಸ ಮಾಡಲು ಬರುತ್ತಿದ್ದಳು. ಅವಳ ಗೆಳೆತನ ನನ್ನ ಹೃದಯದ ಮೇಲೆ ತಣ್ಣನ್ನ ಮುಲಾಮಪಟ್ಟಿಯನ್ನು ಹಚ್ಚಿತ್ತು, ಕಾಮಿನಿಯೆಂಬ ಹುಣ್ಣು ಮಾಯುತ್ತ ಬಂದಿತ್ತು. ಧಾರವಾಡದಿಂದ ಬಂದ ಗುರುನಾಥನ ಪತ್ರದಲ್ಲಿ ಕಾಮಿನಿಯ ಬಗ್ಗೆ ಒಂದೆರಡು ಮಾತು ಇದ್ದವು : "ಕಾಮಿನಿ ಮತ್ತೆ ಪರೀಕ್ಷೆಗೆ ಕೂಡ್ರುತ್ತಾಳಂತೆ. ಅಭ್ಯಾಸದ ನಟನೆ ಜೋರಾಗಿದೆ... ಹೋದ ವರ್ಷ ಬಿ.ಎ. ಪರೀಕ್ಷೆಯಲ್ಲಿ ಫಿಲೋಸೊಫಿ ವಿಷಯದಲ್ಲಿ ಫರ್ಸ್ಟ್‌ಕ್ಲಾಸ್ ದೊರಕಿಸಿದ ಆ ರಾಮ ಗೋಳೆ ಕಮ್ಯುನಿಸ್ಟನಾಗಿದ್ದಾನೆ. ಕಾಮಿನಿಯ ಪ್ರಭಾವ ಎಂದು ವದಂತಿಯಿದೆ ! ಆತ ಅವಳಿಗೆ ಕಲಿಸಲು ದಿನಾಲು ಅವಳ ಮನೆಗೆ ಹೋಗುತ್ತಾನೆ... ಶ್ರೀಕಾಂತ ವಾನಲೇಸ್ ವಾಡಿಯಲ್ಲಿ ಹೋಗಿ ಸೇರಿದ್ದು ಅವಳಿಗೆ ಹಾಲಿನಂತಾಗಿದೆ..." ಆ ಪತ್ರ ಓದಿದೊಡನೆ ಅದನ್ನು ಮುದುಡಿ, ಮೂಲೆಯಲ್ಲಿಯ ಕಸದ ಬುಟ್ಟಿಯಲ್ಲಿ ಚೆಲ್ಲಿದೆ...

* * *

"ಏಪ್ರಿಲ್ ೨೧....

ಕಾಮ ದೇಹ–ದೇಹದ ಸಂಬಂಧ ಮಾತ್ರವಲ್ಲ, ವ್ಯಕ್ತಿ–ವ್ಯಕ್ತಿಗಳ ತಾಕಲಾಟವದು. ಹೋರಾಟವೆನ್ನಲೂ ಅಡ್ಡಿಯಿಲ್ಲ... ನನ್ನ ತಿಳಿಗೇಡಿ, ಅಂಥ ಕರೆಗೆ ಅವಳ ಹೀಗೆ ಒಮ್ಮೆಲೇ ಸಿದ್ಧಳಾದಳೆಂದು ಅನಿಸಿರಲಿಲ್ಲ. ನನ್ನ ಕರೆಯನ್ನು ಮೊದಲೇ ನಿರೀಕ್ಷಿಸಿದಂತೆ ಅವಳು 'ಹೂಂ' ಎಂದಳು... ಅವಳು 'ಹೂಂ... ಅನ್ನುವುದೇ ತಡ ಅವಳ ಬಗ್ಗೆ ವಿಚಿತ್ರ ತಿರಸ್ಕಾರ ನನ್ನ ಮನಸ್ಸಿನಲ್ಲಿ ತಲೆದೋರಿತು. ಆ ತಿರಸ್ಕಾರದೊಡನೆ ನಾಚಿಕೆಯೂ ಉಂಟಾಯಿತು : ನಾನು ಅವಳ ಹೆಗಲಮೇಲೆ ನನ್ನ ನಡುಗುವ ಕೈ ಹಾಕಿ 'ಬಾ' ಎಂದಾದರೂ ಹೇಗೆ ಅಂದೆ ಎಂದು... ಕದ ಹಾಕಿ ಇಬ್ಬರೂ ಕಾಟಿನ ಮೇಲೆ ಕುಳಿತ ನಂತರ, ನನ್ನ ತಪ್ತ ಮೈ ನನಗೆ ಗೊತ್ತಿಲ್ಲದೆಯೇ ಕರಗತೊಡಗಿತು. 'ನಿಮ್ಮ ಮೈ ಸುಡುತ್ತಿದೆ' ಎಂದು ಅವಳು ಕನಿಕರದಿಂದ ನುಡಿದೊಡನೆ, ಅವಳ ದಯೆ ನನಗೆ ಹೇಯವೆನಿಸಿತು. ಅವಳ ಕಣ್ಣುಗಳಲ್ಲಿ ವಿಜಯದ ಉನ್ಮಾದವಿದ್ದಂತೆನಿಸಿತು. ಅವಳ ಶಾಂತ ತಾಳ್ಮೆ ನನ್ನನ್ನು ಹೀನನನ್ನಾಗಿ ಮಾಡಿ ಕುಗ್ಗಿಸಿತು.... ನನ್ನ ಅವಮಾನ ನನಗೆ ಸಹಿಸಲಿಕ್ಕಾಗಲಿಲ್ಲ. ಅದು ನನ್ನ ವ್ಯಕ್ತಿತ್ವದ ಮೂಲಶಕ್ತಿಗೇ ಆಹ್ವಾನವಿದ್ದಂತಿತ್ತು.... ನನ್ನ ಪೌರುಷ ಸಿಡಿದೆದ್ದಿತು. ಅವಳ ವಸ್ತ್ರ ತೆಗೆಯುವಾಗ ನನ್ನ ಕೈಗಳಲ್ಲಿ, ಬೆರಳುಗಳಲ್ಲಿ ಸೇಡಿನ ಭಾವನೆ ಸಿಟ್ಟಿಗೆದ್ದ ಹಾವಿನಂತೆ ಸುಳಿಯಿತು. ನನ್ನ ಸುರಿಸುವ ಬಾಯಿಗೆ ಅವಳ ಬಾಯಿ ಕೂಡಿಸಲಿಲ್ಲ, 'ಬೇಡ ನಿಮ್ಮ ರೋಗ... 'ನನ್ನ ಸೇಡು, 'ಹೆಡೆ ಹೋದ ಹಾವಿನಂತೆ, ಮುದುಡಿತು, ನಿರ್ಬಲವಾಯಿತು... 'ಹಾಗಾದರೆ...?" ನಾನೆಂದೆ, ದಿಕ್ಕುಗಾಣದ ಕೂಸಿನಂತೆ... ನನ್ನ ದುರ್ಬಲತೆ ಅವಳ ಅಹಂಕಾರಕ್ಕೆ ಪುಟಗೊಟ್ಟಿತು. ಅವಳ ತುಟಿಯ ಮೇಲೆ ಮೊನಾಲೀಸಾಳ ನಗೆ ಮೂಡಿತು... ಅವಳ ವಿಜಯ ಮರಳಿ ನನ್ನನ್ನು ಕುಗ್ಗಿಸಿತು... ಕೈ ಚಲ್ಲಿ – 'ನಡೆ, ಬೇಡವೇ ಬೇಡ, ಕ್ಷಮಿಸು' ಎಂದೆ... ಅವಳ ಮುಖದ ಮೇಲೆ ಒಂದು ಕಾಠಿಣ್ಯ ಬಂತು. 'ಬಾ' ಇಲ್ಲಿ ಮುದ್ದಿಸು' ಎಂದು ನನ್ನನ್ನು ಎದೆಗವಚಿಕೊಂಡಳು. ಒಮ್ಮೆಲೆ ನನ್ನಲ್ಲಿ ಅವಳ ಬಗ್ಗೆ ಆದರಭಾವ ಮೂಡಿತು. ಕಣ್ಣು ಒದ್ದೆಯಾದವು. ಮನಸ್ಸು ಶಾಂತವಾಯಿತು. ದೇಹ ಶಾಂತವಾಯಿತು. ಇಷ್ಟು ಹೋರಾಟದಲ್ಲಿ ನಾನು ದಣಿದು ಹಣ್ಣಾಗಿ ಹೋಗಿದ್ದೆ... ಸಣ್ಣಾಗಿ ನೀರಾಗಿದ್ದೆ. ಒಂದು ಬಗೆಯ ಕಾವಳ ನನ್ನ ಮನಸ್ಸನ್ನಾವರಿಸಿತ್ತು.... ಒಂದು ಬಗೆಯ ನೋವು ನನ್ನ ಎದೆಯ ಅಂತರಾಳದಿಂದ ಖಡ್ಗದಂತೆ ಮೇಲಕ್ಕೆದ್ದಿತು. "ಅಯ್ಯೋ' ಎಂದೆ... ಕತ್ತಲು – ಬೆಳಕಿನ ಅಸ್ಪಷ್ಟ ಹೋರಾಟ, ಘೋರ ಹೋರಾಟ.... ದೇಹ ಯಂತ್ರವಾಗಿತ್ತು. ನನ್ನ ಪ್ರಾಣ ಆ ಯಂತ್ರದಲ್ಲಿ ಸಿಕ್ಕು ಗಾಯಗೊಂಡಿತ್ತು.... ರಕ್ತ ಚಿಮ್ಮಿ ಹರಿಯಿತು....

ಕಣ್ಣಿಗೆ ಕತ್ತಲುಬಂತು. ನಾ ಉರುಳಿ ಬಿದ್ದೆ... ನಿಶ್ಶೇಷ್ಟನಾಗಿ... ಮರಣ ದೂರದಿಂದಲೇ ನಕ್ಕು ಹಲೋ ಎಂದಿತು...'

ಶ್ರೀಕಾಂತನ 'ಅವಳು'... ಯಾರು ? ಬಹುಶಃ ಅವಳು ಮೇರಿಯೇ ಆಗಿರಬೇಕು.

ಅವನ ಮೊದಲೆ ಲೈಂಗಿಕ ಅನುಭವದ ಈ ವೇದನೆಯ ಕತೆ ವಿಲಕ್ಷಣವಾಗಿದೆ...

ಜ್ವಲಂತ ಪ್ರಜ್ಞೆಯ ಪ್ರತಿಫಲ, ಇಂಥ ತೀಕ್ಷ್ಣ ವೇದನೆ, ಸೂಕ್ಷ್ಮ ವೇದನೆ...

ಶ್ರೀಕಾಂತನ ದಿನಚರಿಯ ಕೊನೆಯ ಭಾಗವನ್ನು ಓದುವದೆಂದರೆ ನನಗಂತೂ ಸುಡುವ ಮನೆಯನ್ನು ಹೊಕ್ಕಂತೆ !....

ಮೃತ್ಯುವಿನ ಹೊಸ್ತಿಲ ಮೇಲೆ ನಿಂತು ಜೀವನದೊಡನೆ ಅವನು ಮಾಡಿದ ಭಯಂಕರ ಹೋರಾಟ ಅನನ್ಯಸಾಧಾರಣವಾಗಿದೆ.

ಮೇ ೧...

ಇಂದು ಸ್ವಲ್ಪ ಆರಾಮವೆನಿಸುತ್ತದೆ. ಡಾಕ್ಟರರ ಇಂಜೆಕ್ಶನದ ಮೂಲಕವಿರಬೇಕು... ಮೇಲಿಂದ ಮೇಲೆ ಇಂಜಕ್ಶನ್, ಆಕ್ಸಿಜನ್‌ಗಳಲ್ಲದೆ ನನ್ನ ಜೀವನವೇ ಸಾಗಲಾರದು...

ಕಾಮಿನಿಯ ಪರೀಕ್ಷೆ ಮುಗಿದದ್ದರಿಂದ, ಅವಳೂ ತಾಯಿಯೂ ಇಲ್ಲಿಗೆ ಬಂದಿದ್ದಾರೆ. ಅವರಿಗೆ ನನ್ನ ಪರಿಸ್ಥಿತಿಯ ಕಲ್ಪನೆ ಸಂಪೂರ್ಣವಿಲ್ಲ.... ನಾನು ಮೊದಲಿನಕಿಂತ ಹೆಚ್ಚು ಲಕ್ಷನಾಗಿದ್ದರಿಂದ, ನನ್ನ ಪ್ರಕೃತಿ ನೆಟ್ಟಗಿದೆ, ಸುಧಾರಿಸುತ್ತಿದೆ ಎಂದೇ ಅವರ ನಂಬಿಕೆ... ನನ್ನ ಮಿತ್ರರಿಗಂತೂ ಏನೇನೂ ಗೊತ್ತಿಲ್ಲ. ಅದೇ ಒಳ್ಳೆಯದು...

ಇಲ್ಲಿಯೇ ಡಾಕ್ಟರರ ಅಂಗೈಯಲ್ಲಿ ಉಳಿದರೆ ಹೆಚ್ಚು ಹೆಚ್ಚೆಂದರೆ ಒಂದು ವರ್ಷ, ಎರಡು ವರ್ಷ ನಾನು ಜೀವಿಸಿರಬಹುದು... ಈ ಕಾಲ ನಿರ್ಬಂಧವನ್ನು ಕಣ್ಣು ಮುಂದಿಟ್ಟೇ ನನ್ನ ಜೀವನವನ್ನು ಯೋಜಿಸಬೇಕು : ಜಗತ್ತಿನಲ್ಲಿಯ ಎಲ್ಲ ದೊಡ್ಡ ದೊಡ್ಡ ಗ್ರಂಥಗಳನ್ನು ಓದಬೇಕು, ಅತ್ಯಂತ ಉತ್ಕೃಷ್ಟವಾದ ಎಲ್ಲ ಸಂಗೀತವನ್ನು ಆಸ್ವಾದಿಸಬೇಕು. ಎಂಬ ಮೊದಲಿನ ನಿರ್ಧಾರ ಇನ್ನೂ ಇದೆ. ಆದರೆ ಅದಕ್ಕೆ ಅವಶ್ಯಕವಾದ ಶಕ್ತಿ ನನ್ನಲ್ಲಿಲ್ಲ. ಹೆಚ್ಚು ವಿಚಾರಮಾಡಿದರೆ, ಆ ದಿನ ಮೈ ಬೆಚ್ಚಗಾಯಿತೆಂದೇ ತಿಳಿಯಬೇಕು... ತತ್ವಜ್ಞಾನದಂಥ ಗಂಭೀರ ವಿಷಯ ಇನ್ನು ಮೇಲೆ ತ್ಯಜಿಸಬೇಕು. ಜೀವನದ ಗೂಢ ಪ್ರಶ್ನೆಗಳು ಎಂದಿಗೂ ಗೂಢವಿರತಕ್ಕುವೇ! ಸೂರ್ಯೋದಯ, ಸೂರ್ಯಾಸ್ತಗಳ ಸೌಂದರ್ಯವನ್ನು ಬುದ್ಧಿಯನ್ನು ಮಥಿಸದೇ

ಅನುಭವಿಸುವಂತೆ, ಜೀವನದ ಗೂಢಪ್ರಶ್ನೆಗಳ ಗಾಂಭೀರ್ಯವನ್ನು ಸೂಕ್ಷ್ಮವಾಗಿ ಅನುಭವಿಸಬೇಕು, ಅಷ್ಟೇ. ಉತ್ತರ ಹುಡುಕುವ ಗೋಜಿಗೆ ಹೋಗಬಾರದು. ನಕ್ಷತ್ರಗಳನ್ನು ನೋಡಿ ಅವುಗಳ ಸೌಂದರ್ಯದಲ್ಲಿ ತನ್ಮಯನಾಗಿ ನಿಲ್ಲಬೇಕೇ ಹೊರತು, ನಕ್ಷತ್ರಗಳಾಚೆ ಏನಿದೆ ಎಂಬ ಪ್ರಶ್ನೆ ಇನ್ನು ಮುಂದೆ ಕೇಳಬಾರದು....

ಹಾಗೆ ನೋಡಿದರೆ ಸಾಹಿತ್ಯ ಓದುವದೂ ಈಗ ಬೇಸರವಾಗಿದೆ ದೊಡ್ಡ ದೊಡ್ಡ ಲೇಖಕರ ಪುಸ್ತಕಗಳನ್ನೆಷ್ಟೋ ಓದಿಯಾಗಿದೆ. ಅವರ ಜೀವನ–ದೃಷ್ಟಿ, ಅವರ ಅನುಭವ – ವ್ಯಾಪ್ತಿ, ಅವರ ಜೀವನಮೌಲ್ಯಗಳ ಶೋಧ ಮುಂತಾದವುಗಳ ಬಗ್ಗೆ ಓದಿ, ವಿಚಾರಮಾಡಿ, ಮಾತನಾಡಿ ಸಾಕಾಗಿದೆ... ಸಾಕು, ಸಾಕು, ಸಾಕು – ಈ ಒದ್ದಾಟ. ಗುದ್ದಾಟ ಸಾಕು... ಸುಮ್ಮನೆ ಹಾಯಾಗಿ ಮಲಗಬೇಕು, ಎಚ್ಚರಿಕೆಯಿದ್ದಾಗ ಸಂಗೀತ ಕೇಳುತ್ತ ಬೀಳಬೇಕು. ಯಾರಾದರೂ ಬಂದು ಮಾತನಾಡಿದರೆ ನಗುತ್ತ ಎಲ್ಲ ಚನ್ನಾಗಿದೆ ಎಂಬ ಭಾವದಲ್ಲಿ ಒಂದೆರಡು ಮಾತು ಆಡಬೇಕು... ಇರಬೇಕು, ಬರೇ ಇರಬೇಕು... ಜೀವನ ಹೋಗುವತನಕ ಇರಬೇಕು, ಅಷ್ಟೆ !"

"ಮೇ ೫...

ನಿನ್ನೆ ಇಡೀ ರಾತ್ರಿ ಕೆಮ್ಮು. ಇಷ್ಟು ಕೆಮ್ಮಿದ ನಂತರವೂ ಜೀವಂತವಿದ್ದೇನೆ ಎಂಬುದು ಆಶ್ಚರ್ಯ ! ತಾಯಿ ಹೆದರಿದ್ದಳು. ತಿನ್ನಬಾರದ್ದನ್ನು ತಿನ್ನುವುದರಿಂದ ಕೆಮ್ಮು ಹೆಚ್ಚಾಗಿದೆ ಎಂದು ಅವಳ ಸಮಾಧಾನಮಾಡಿದೆ... ಅವಳಿಗೆ ಇಲ್ಲಿ ಬೇಸರ ಬರುತ್ತಿದೆಯೆಂದು ಕಾಣಿಸುತ್ತದೆ. ಇಲ್ಲಿಯ ಮೇ ತಿಂಗಳ ಬಿಸಿಲೂ ಬಹಳ. ಧಾರವಾಡಕ್ಕೆ ಹೋಗುವವದು ನೆಟ್ಟಗೆ... ಗೌರೀಶ ನಾಡದು ಬರಲಿರುವ, ಅವನ ಪರೀಕ್ಷೆ ಮುಗಿದೊಡನೆ...

ಮೇರಿ, ಸಾಕು ಇಲ್ಲಿ ಇರುವದು ! ಬಿಡು, ನನ್ನನ್ನು ಬಿಡು... ನಿನ್ನ ಕೈ ಕಾಲು–ಎದೆ – ಕಣ್ಣು – ತುಟಿಗಳ ಬಂಧನದಿಂದ ಮುಕ್ತನನ್ನಾಗಿ ಮಾಡು ನನ್ನ ಆತ್ಮದ 'ಒಂದು ಅಂಶವನ್ನೇ ನೀನು ಕೊಂದು ತಿಂದಿರುವಿ. ಸಾಕಲ್ಲ – ನಾನು ಸಾಯುವ ಮುಂಚೆ ನನ್ನಲ್ಲಿ ಸ್ವಲ್ಪಾದರೂ ನನ್ನದೆಂಬುವ ಆತ್ಮವಿರಲಿ..."

* * *

ನನ್ನ ಪರೀಕ್ಷೆ ಅಷ್ಟು ಸಮಾಧಾನಕರವಾಗಲಿಲ್ಲ.

ನಮ್ಮ ಪ್ರಾಕ್ಟಿಕಲ್ಸ ಪರೀಕ್ಷೆ ಸುರುವಿದ್ದಾಗ ಶ್ರೀಕಾಂತನ ಪತ್ರ ಬಂತು;

"ಗೌರೀಶ, ನಿನ್ನ ಪರೀಕ್ಷೆಯಾದೊಡನೆ ವಾನಲೆಸ್‌ವಾಡಿಗೆ ಬಾ. ನಾವೆಲ್ಲ ಕೂಡಿ ಧಾರವಾಡಕ್ಕೆ ಹೋಗುವ... ಕಾಮಿನಿ ಬಂದಿದ್ದಾಳೆ, ತಾಯಿಯ ಕೂಡ.

ನನ್ನ ಪ್ರಕೃತಿ ಸುಧಾರಿಸುತ್ತಿದೆ. ನಿನ್ನ ಪತ್ರದ ಮೇಲಿಂದ ನನ್ನ ಬಗ್ಗೆ ಬಹಳ ಹೆದರಿವಿಯೆಂದು ಕಾಣಿಸುತ್ತದೆ. ವಿಶೇಷ ಏನೂ ಇಲ್ಲ : ಎಡ ಪುಪ್ಪುಸಕ್ಕೆ ಸ್ವಲ್ಪ – ಹೌದೇ ಅಲ್ಲೋ – ರೋಗ ಅಂಟಿತ್ತು. ಈಗ ಎಲ್ಲ ಸಂಪೂರ್ಣ ಕ್ಲಿಯರ್... ಮೇರಿಯ ಗುರ್ತು ಮಾಡಿ ಕೊಡುವೆ. You,ll like her ... ನಿನಗೆ ಅವಳು ಸೇರುವಳೆಂಬುದರಲ್ಲಿ ಸಂಶಯವಿಲ್ಲ..."

"ಶ್ರೀಕಾಂತ, ಸರಿಯಾಗಿದ್ದೀಯಾ ?"

"ನನಗೇನಾಗಿದೆ ಧಾಡಿ? ಒಳ್ಳೇದು. ಪರೀಕ್ಷೆ ಹೇಗೆ ಮಾಡಿರುವಿ? ಫರ್ಸ್ಟ್‌ಕ್ಲಾಸ್?"

"ಪಾಸಾದರೆ ಸಾಕು."

ಶ್ರೀಕಾಂತ ಕಾಣಿಸಲಿಕ್ಕೆ ಕೊಂಚ ಲಠ್ಠನಾಗಿದ್ದ. (ಡಾಕ್ಟರರ ಟಾನಿಕ್ ಇಂಜೆಕ್ಶನ್‌ಗಳ ಮೂಲಕ ಅವನಲ್ಲಿ ಕೃತ್ರಿಮ ಶಕ್ತಿ ತುಂಬಲ್ಪಟ್ಟಿತ್ತೆಂದು ನಂತರ ಗೊತ್ತಾಯಿತು.... ನನಗೆ ಹಾಯೆನಿಸಿತು. ಮನಸ್ಸಿನಲ್ಲಿ ನಾನು ಕಟ್ಟಿದ ದುಃಸ್ವಪ್ನಗಳೆಲ್ಲ ಹಾರಿಹೋದವು. ಹಗುರೆನಿಸಿತು.

"ಮನೆ ಸಿಗಲು ತೊಂದರೆಯಾಯಿತೇ?"

"ಛೇ, ಇಲ್ಲ... ಈ ಸಲದ ಬ್ಲಾಕು ಚನ್ನಾಗಿದೆ... ಹುಂ, ಕಾಮಿನಿಯಲ್ಲಿ?" ನನ್ನ ಮುಂಬಯಿಯ ಬಿಚ್ಚು ಮನಸ್ಸನ್ನು, ನಿಃಸಂಕೋಚವೃತ್ತಿಯನ್ನು ತೋರಿಸಲು ನಾನು ಕಾಮಿನಿಯ ಬಗ್ಗೆ ನೇರವಾಗಿ ಕೇಳಿದೆ. ನಾನು ಬೆಳೆದಿರುವೆ. ಮೊದಲಿನ ಭಿಢೆ–ನಾಚಿಕೆಗಳು ಈಗ ನನ್ನಲ್ಲಿಲ್ಲವೆಂದು ತೋರಿಸುವ ಪ್ರಯತ್ನವಿದ್ದಿರಬೇಕು!

"ಅವಳು ಒಳಗಿನ ಕೋಣೆಯಲ್ಲಿರಬೇಕು, ಹೋಗಲ್ಲ ಬೇಕಾದರೆ." ನನಗೆ ಮೋರೆಯ ಮೇಲೆ ಹೊಡೆದಂತಾಯಿತು.

"ಹಾಗಲ್ಲ, ಸುಮ್ಮನೆ ಕೇಳಿದೆ... ಹಾಂ! ಎಂದು ಹೊರಡೋಣ ಧಾಡವಾಡಕ್ಕೆ?"

"ಮೂರು–ನಾಲ್ಕು ದಿನಗಳ ನಂತರ... ಆಗದೇ?"

"ಅಡ್ಡಿಯಿಲ್ಲ."

ನಮ್ಮೀರ್ವರ ನಡುವೆ ಒಂದು ಬಗೆಯ ಅಸ್ಪಷ್ಟ ಬೇಲಿ ಬೆಳೆದು ಬಿಟ್ಟಿದೆ ಎಂಬುದರ ಅರಿವು ಮುಳ್ಳಿನಂತೆ ಚುಚ್ಚಿತು.

ಆ ದಿನ ಮಧ್ಯಾಹ್ನ ಕಾಮಿನಿ ಒಬ್ಬಳೇ ಹೊರಗೆ ಹೊರಟಳು. ಶ್ರೀಕಾಂತ ಮಲಗಿದ್ದರಿಂದ ನಾನು ಕಾಮಿನಿಯನ್ನು ಹಿಂಬಾಲಿಸಿದೆ.

"ಕಾಮಿನಿ, ಹೇಗಿದ್ದೀಯಾ?"

"ಚನ್ನಾಗಿದ್ದೇನೆ. ನೀನು?"

"ಚನ್ನಾಗಿದ್ದೇನೆ.... ಪರೀಕ್ಷೆ?"

"ಈ ಸಲ ಮತ್ತೆ ನಾಪಾಸಾಗುವೆ... ನೀನು?"

"ಪಾಸಾಗಬಹುದು... ಬಾಕಿ ಎಲ್ಲ?"

"ಬಾಕೀ ಎಲ್ಲ ಕ್ಷೇಮ... ಹಾಂ, ದಾದಾನ ಪ್ರಕೃತಿಯ ಬಗ್ಗೆ ಸತ್ಯ ಸ್ಥಿತಿಗೊತ್ತುಂಟೇ?"

"ಆಂ, ಏನು?" ನಾನು ಗಾಬರಿಗೊಂಡೆ.

"ಇದ್ದ ಒಂದು ಪುಪ್ಪುಸಕ್ಕೂ ರೋಗ..."

"ಆದರೆ ಅದೆಲ್ಲ ಕ್ಲಿಯರ್ ಆಗಿದೆ ಎಂದು ಬರೆದಿದ್ದನಲ್ಲ."

"ಅದೆಲ್ಲ ಸುಳ್ಳು, ನಮಗೂ ಹಾಗೇ ಹೇಳಿರುವ. ಆದರೆ ನಾನು ಡಾಕ್ಟರರಿಂದ ಸತ್ಯ ತಿಳಿದುಕೊಂಡಿರುವೆ."

"ಅಂದರೆ ಈಗ ಸೀರಿಯಸ್...?"

"ಹುಂ. ಆದರೆ ಡಾಕ್ಟರರ ಪ್ರಕಾರ, ಕಾಳಜಿಯಿಂದ ಇದ್ದರೇನೇ ಗುಣವಾಗುವ ಸಂಭವ – ಅಂದರೆ ಅದೂ ಸಂಪೂರ್ಣ ಗುಣವಾಗುವ ಆಶೇನೇ ಇಲ್ಲವಂತೆ..."

ನನ್ನ ಎದೆ ಧಸ್ಸೆಂದಿತು.

"ಹಾಗಾದರೆ ಈಗ ಧಾರವಾಡಕ್ಕೆ ಹೊರಟಿದ್ದೀರಿ?"

"ಎಲ್ಲಿ ಇದ್ದರೂ ಅಷ್ಟೇ... ಟ್ರೀಟಮೆಂಟ್ ನಿಯಮಿತವಿದ್ದರಾಯಿತು. ಹಾಗೂ ವಿಶ್ರಾಂತಿ..."

"ನಿಮ್ಮ ತಾಯಿಯವರಿಗೆ ಇದೆಲ್ಲ ಗೊತ್ತುಂಟೋ?"

"ಸ್ವಲ್ಪ ಸ್ವಲ್ಪ... ಅವನು ಸುಧಾರಿಸುತ್ತಿರುವ ಎಂದು ಅಮ್ಮನ ನಂಬಿಗೆ...

"ಕಾಮಿನಿಯ ದೇಹಸೌಷ್ಠವ ಮೊದಲಿಗಿಂತ ಹೆಚ್ಚಾಗಿತ್ತು. ಮೈ–ಕೈ–ಮುಖ ಕೊಂಚ ಹೆಚ್ಚು ದುಂಡುದುಂಡಾಗಿ ತುಂಬಿಕೊಂಡಿದ್ದವು. ಅವಳ ಕಣ್ಣುಗಳಲ್ಲಿ ಮೊದಲಿನ ಚಂಚಲತೆ ಕಡಿಮೆಯಾಗಿ ಸ್ಥಿರತೆ ಬಂದಿತ್ತು.

"ನೀನು ಇನ್ನೂ ಕಮ್ಯುನಿಷ್ಟ ಪಾರ್ಟಿ ಬಿಟ್ಟಿಲ್ಲವಂತೆ..."

"ಆಂ? ಇನ್ನ ಬಿಟ್ಟಿಲ್ಲ ಇದರರ್ಥವೇನು? ನಾನೇನು ಮೋಜಿಗೆ ಪಾರ್ಟಿ ಸೇರಿದೆನೆಂದು ನಿನ್ನ ತಿಳುವಳಿಕೆಯೇ?"

"ಅಂದರೆ ನೀನೂ ಒಳ್ಳೆಯ ಆದರ್ಶವಾದಿಯಾಗಿಬಿಟ್ಟೆಯಲ್ಲ !"

"ಆದರ್ಶದ ಮಕ್ತೆ ದಾದಾನಿಗಷ್ಟೇ ಬಿಟ್ಟುಕೊಟ್ಟಿಲ್ಲವಲ್ಲ..."

"ಅದಿರಲಿ, ನಿನ್ನ ಪ್ರಭಾವದಿಂದ ಎಷ್ಟು ಜನರನ್ನು ಕಮ್ಯುನಿಸ್ಟ ಮಾಡಿರುವಿ?"

"ಅದೇಕೆ ನಿನಗೆ ನನ್ನ ಪ್ರಭಾವದಿಂದ ನೀನು ಕಮ್ಯುನಿಸ್ಟ ಆಗುವವನಿದ್ದರೆ ಹೇಳು..." ಅವಳು ಜೋರಿನಿಂದ ನಕ್ಕಳು.

"ನೋ – ಥ್ಯಾಂಕ್ಸ !'

* * *

ನನ್ನ ಶ್ರೀಕಾಂತ ಸಂಬಂಧದಲ್ಲೀ ಏನೋ ಬದಲಾಗಿತ್ತು. ಅದರಂತೆಯೇ ನನ್ನ ಕಾಮಿನಿಯ ಸಂಬಂಧದಲ್ಲಿಯೂ ಒಂದು ವಿಚಿತ್ರ ಬದಲಾಗಿತ್ತು. ಮುಂಬಯಿಯಲ್ಲಿಯ ಒಂದು ವರ್ಷದ ಜೀವನದಿಂದ ಒಂದು ಬಗೆಯ ವಸ್ತು ನಿಷ್ಠತೆ ಬಂದಿತ್ತು... ನನ್ನ ಶಕ್ತಿಯೂ ತಿಳುವಳಿಕೆಯೂ ಸ್ವಲ್ಪ ಹೆಚ್ಚಾದಂತೆನಿಸಿತ್ತು... ಶಶಿಕಲೆಯ ಗೆಳೆತನದ ಮೂಲಕವೋ ಏನೋ, ಕಾಮಿನಿಯ ಸಾನ್ನಿಧ್ಯ ಮೊದಲಿನಂತೆ ಅಸ್ವಸ್ಥಗೊಳಿಸಲಿಲ್ಲ.... ಕಾಮಿನಿಯ ಬಗ್ಗೆ ಇದ್ದ ಪ್ರೀತಿ ಈಗ ಒಂದು ಬಗೆಯ 'ದ್ವೇಷ'ದಲ್ಲಿ ರೂಪಾಂತರಗೊಂಡಿದ್ದರಿಂದಲೋ ಏನೋ. ಅವಳೊಡನೆ ಮಾತನಾಡುವಾಗ ಒಂದು ತರದ ನಿರ್ಭಿಡೆ ಅನಿಸುತ್ತಿತ್ತು... ಅವಳ ಸಂಪೂರ್ಣ 'ಅವನತಿ'ಯನ್ನು ನೋಡುವುದರಲ್ಲಿಯೇ ನನ್ನ ವ್ಯಕ್ತಿತ್ವದ ಸಮರ್ಥನೆಯಿದೆ ಎಂದು ಅಸ್ಪಷ್ಟವಾಗಿ ಅನ್ನಿಸುತ್ತಿತ್ತು.... ನನ್ನನ್ನು ತೂರಿ ಒಗೆದ ಇವಳು 'ರಸಾತಳ'ಕ್ಕೆ ಹೋದಾಗಲೇ ನನ್ನ ಆತ್ಮಕ್ಕೆ ಸಮಾಧಾನ – ಎಂಬ ವಿಲಕ್ಷಣ 'ಸೇಡಿ'ನ ಭಾವನೆ ನನ್ನಲ್ಲಾಗ ಇದ್ದಿರಬೇಕು...

* * *

"ಮೇ, ೯...

'The expense of spirit in a waste of shame
Is lust in action.
Past reason hunted; and no sooner had,
Past reason hated....
All this the world well knows; yet none
knows well
To shun the heaven that leads men to this hell.'

ಶೇಕ್ಸಪಿಯರನು ಹೇಳಿದ ಮಾತು ಎಷ್ಟು ಸತ್ಯವಾಗಿದೆ ! ಅವನ ಮೊದಲಿನ ಪಂಕ್ತಿಯಲ್ಲಿ ಅನುಭವ ಕಿಚ್ಚು ತನ್ನಿಂದ ತಾನೇ ಹೊರಚಲ್ಲಿದಂತಿದೆ!....

ಕಾಮಸುಖದ ಒಡಲಲ್ಲಿ ನರಕದ ಅಗ್ನಿಯಿದೆ....

...ಈ ಅಸಹ್ಯತೆ, ಈ ದುಃಖ, ಜೀವನದ ಒಂದು ತೀವ್ರವಾದ ಪ್ರೇರಣೆಯ

ಬೆನ್ನು ಹತ್ತಿ ಯಾಕೆ ಬರುವದೋ ? ನನಗನಿಸುವಂತೆ ಈ ವೇದನೆ ಕಾಮದಲ್ಲಿಲ್ಲ, 'ಬರಿಯ ಕಾಮ'ದಲ್ಲಿದೆ. ವ್ಯಕ್ತಿತ್ವವನ್ನು ಬದಿಗಿರಿಸಿ ಬರಿಯ ಕಾಮದಲ್ಲಿ ಆಸಕ್ತನಾಗುವದು ಮನುಷ್ಯನಿಗೆ ಶಕ್ಯವಿಲ್ಲ – ಪ್ರಾಣಿಗಳಿಗೆ ಶಕ್ಯವಿದೆ. ಯಾಕೆಂದರೆ ಅವುಗಳ ವಿಷಯದಲ್ಲಿ ವ್ಯಕ್ತಿತ್ವದ ಪ್ರಶ್ನೆಯೇ ಬರುವದಿಲ್ಲ... ಈ ಅಸಹ್ಯವಾದ ಕಾಮವನ್ನು ಸಹ್ಯವಾಗಿ ಮಾಡಲು ಪ್ರೇಮವೆಂಬ ಸಿಹಿ ಲೇಪದ ಅವಶ್ಯಕತೆಯಿದೆಯೋ ಏನೋ"

"....ಪ್ರೇಮ ! ನನ್ನ ಜೀವನವೇ ಬಿರುಕು ಬಿಟ್ಟಾಗ ಪ್ರೇಮದ ಮಾತೆಲ್ಲಿ ? ಜೀವನವೇ ಮೃಗಜಲವಾದಾಗ ಪಿಪಾಸೆಯ ಅರಿವನ್ನೇ ಕಿತ್ತೊಗೆಯುವದು ಲೇಸಲ್ಲವೇ?..... ಅದಕ್ಕೆ ಒಂದೇ ದಾರಿ – ಯಾವುದು? ಆ ಹಾದಿಗೆ ಹೆಸರು ಕೊಡಬೇಡ ನೀನು ! ಹೆಸರಿಲ್ಲದ ಹಾದಿ... ಇಲ್ಲ, ಇಲ್ಲ, ಆ ಹೆಸರಿಲ್ಲದ ಹಾದಿಯಿಂದ ನಾನು ಹೋಗಲಾರೆ. ಹೀಗೆಯೇ – ಹೀಗೆಯೇ ಇರಲಾರೆನೇ ನಾ? ಹಾಸಿಗೆ – ವಿಶ್ರಾಂತಿ – ಔಷಧ – ಇಂಜೆಕ್ಷನ್ – ಆಕ್ಸಿಜನ್ – ತಾಯಿ – ತಂಗಿ – ಪುಸ್ತಕ – ಮೇರಿ – ಹಾಸಿಗೆ... ಈ ಚಕ್ರವ್ಯೂಹದ ಕೊನೆಯಲ್ಲಿ ? ಕೊನೆ... ಅದನ್ನು ಉಸುರಿಸಲು ಕೂಡ ಕಷ್ಟವಾಗುತ್ತಿದೆ. ನನಗೆ ! ಅಂಜಿಕೆ... ಅಂಜಿಕೆ ನನ್ನನ್ನು ಹುಚ್ಚನನ್ನಾಗಿ ಮಾಡುತ್ತಿದೆಯೆ ? ಹುಚ್ಚನಾಗುವ ಮೊದಲೆ... ಮೃತ್ಯು – ಮೃತ್ಯು – ಮೃತ್ಯು – ಮೃತ್ಯು... ಮೃತ್ಯುವಿನ ಜಪಮಾಡಿ... ಮೃತ್ಯುಂಜಯನಾಗಬೇಕು..."

* * *

ನಾನು ಮೇರಿಯನ್ನು ನೋಡಿದ್ದೆ, ಅವಳೊಡನೆ ಮಾತನಾಡಿದ್ದೆ... ಅವಳೊಂದು ಬೇರೆ ಜಗತ್ತಿನ 'ಫೇರಿ' (Fairy)ಯಂತೆ ಕೂಡಿದ್ದಳು. (ಅವಳ ನರ್ಸಿನ ಡ್ರೆಸ್ಸಿನ ಮೂಲಕವಿರಬೇಕು!) ಅವಳ ಅಂಗವಿನ್ಯಾಸದಲ್ಲಿ ನರ್ತಕಿಯ ಸೌಂದರ್ಯವಿತ್ತು. ಅವಳ ದೇಹಸೌಷ್ಠವದಲ್ಲಿ ತಲೆ ತಿರಿಗಿಸುವ ಶಕ್ತಿಯಿತ್ತು. ಅವಳ ನಗೆಯಲ್ಲಿ ಮದ್ಯವಿತ್ತು... ಅವಳ ಆಕರ್ಷತೆಯಲ್ಲಿ ಒಂದು ಬಗೆಯ ಉಗ್ರತೆಯಿತ್ತು... ಅವಳು ಮೂಲ ಕೇರಳದವಳು. ಕನ್ನಡ ಬರುತ್ತಿದ್ದರೂ ಅವಳು ಹೆಚ್ಚಾಗಿ ಮಾತನಾಡುವದು ಇಂಗ್ಲೀಷ... ನನಗಂತು ಅವಳ ವಿಷಯದಲ್ಲಿ ವಿಪರೀತ ದಾಕ್ಷಿಣ್ಯ. ನಾನಾಗಿಯೇ ಅವಳೊಡನೆ ಮಾತನಾಡುವದು ಶಕ್ಯವೇ ಇದ್ದಿಲ್ಲ. ಅವಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳುತ್ತಿದ್ದೆ ಅಷ್ಟೆ ಶ್ರೀಕಾಂತನ 'ಪ್ರೇಯಸಿ'ಯೆಂಬ ದೃಷ್ಟಿಯಿಂದ ಅವಳೆಡೆಗೆ ನೋಡಿದಾಗ ನನ್ನ ಮನಸ್ಸಿನಲ್ಲಿ ವಿಚಿತ್ರ ರೀತಿಯ ಕಸಿವಿಸಿಯುಂಟಾಗುತ್ತಿತ್ತು. ಬಹುಶಃ ಒಂದು ಬಗೆಯ ಅಸೂಯೆ ಇದ್ದಿರಬಹುದೇ?

ಎರಡು ತಿಂಗಳು ಧಾರವಾಡದಲ್ಲಿದ್ದು ನಂತರ ಮರಳಿ ವಾನಲೆಸ್‌ವಾಡಿಗೆ

ಬರುವ ಕರಾರಿನ ಮೇಲಿನ ಡಾಕ್ಟರರು ಶ್ರೀಕಾಂತನಿಗೆ ಹೋಗಲು ಅನುಮತಿ ಕೊಟ್ಟರು.

ಶ್ರೀಕಾಂತ ಮುಖ್ಯವಾಗಿ ಮೇರಿಯಿಂದ ಓಡಿಹೋಗುತ್ತಿದ್ದ. ಅಥವಾ ಮೇರಿಯ ಮೂಲಕ ಬೆಳಕಿಗೆ ಬಂದ ತನ್ನ ನವೀನ ವ್ಯಕ್ತಿತ್ವದಿಂದ ಓಡಿ ಹೋಗುತ್ತಿದ್ದ – ಎಂಬ ಮಾತು ನಂತರ ಅವನ ದಿನಚರಿ ಓದಿದಾಗ ಗೊತ್ತಾಯಿತು :

"....ಪಾಪದ ಮಾತಲ್ಲವಿದು... ನನ್ನ ರಕ್ತದಲ್ಲಿಯ ಶ್ವಾಪದದ ಮಾತಿದು. ನನ್ನ ಅವನತಿಯ ಪ್ರಶ್ನೆಯಲ್ಲವಿದು. ನನ್ನ ವ್ಯಕ್ತಿತ್ವವ ಶಿಥಿಲತೆಯ ಪ್ರಶ್ನೆಯಿದು. ಈ ಶ್ವಾಪದವು ನನ್ನ ಅಂತರಂಗದಲ್ಲಿಯ ಅವ್ಯಕ್ತ ಮೂರ್ತಿಯನ್ನು ಭಂಜಿಸಿ, ಚೂರು ಚೂರಾಗಿ ಮಾಡಿ ಒಗೆಯುತ್ತಿದೆ ಎಂಬ ವೇದನೆ ಈ ಟೀ. ಬೀ.ಯ ವೇದನೆಗಿಂತ ತೀಕ್ಷ್ಣವಾಗಿದೆ...

...ಧಾರವಾಡಕ್ಕೆ ಹೋಗಬೇಕು. ಅಲ್ಲಿ ನನ್ನ ಕೋಣೆಯ ಅಬಾಧಿತ ಏಕಾಂತತೆಯಲ್ಲಿ ಈ ಹಸಿದ ಹುಲಿಯನ್ನು ಕೊಂದು ಮುಕ್ತನಾಗಬೇಕು... ನಾನು ನಾನಾಗಬೇಕು..."

* * *

ಮಿರಜಿ ಸ್ಟೇಶನಿಗೆ ಮೇರಿಯೂ ಬಂದಿದ್ದಳು.

ಗಾಡಿ ಬಂದ ನಂತರ ಕಾಮಿನಿ, ತನ್ನ ತಾಯಿಯೊಡನೆ ಹತ್ತಿ ಒಳಗೆ ಕುಳಿತಳು ನಾನು ಸಾಮಾನು ಹಾಕಿಸುತ್ತಿದ್ದೆ. ಮೇರಿ – ಶ್ರೀಕಾಂತ ಕೆಳಗಿದ್ದರು ಗಾಡಿ ಬರುವ ಸಮಯದ ತನಕ ಅವಳ ಮಾತು ಸಾಗಿದ್ದವು : "ಕಾಳಜಿಯಿಂದ ಇರ್ರಿ.... ಇಲ್ಲಿಯೇ ಇದ್ದರೆ ಚನ್ನಾಗುತ್ತಿತ್ತು, ಇರಲಿ... ಉಪಾಯವಿಲ್ಲ... ಏನಾದರೂ ಸ್ವಲ್ಪಾದರೂ ತೊಂದರೆಯಾದರೆ ಮರಳಿ ಕೂಡಲೇ ಬನ್ನಿ... ನಿಮ್ಮ ತಂಗಿ ಎಷ್ಟು ಚೆಂದಾಗಿದ್ದಾಳೆ ! ನಿಮ್ಮ ಗೆಳೆಯ ಚೆನ್ನಾಗಿದ್ದಾರೆ. ಅವರಿಬ್ಬರ ನಡುವೆ ಪ್ರೇಮ–ಗೀಮ ಏನಾದರೂ ಇದೆಯೇ? ನನಗಂತೂ ಹಾಗೇ ಕಾಣಿಸುತ್ತದೆ ಹಾ, ಹಾ, ಹಾ... ಒಳ್ಳೆದು, ಪತ್ರ ಬರೆಯುವಿರಾ? ಬೇಗನೇ?... ಬೇಗ ಬನ್ನಿ – ನನ್ನ ಕ್ಷಮೆ? ಏಕೆ? ಕ್ರೈಸ್ತ ಎಲ್ಲರನ್ನೂ ಕ್ಷಮಿಸುವ... ನಡೆಯಿರಿ ಗಾರ್ಡನ ಸೀಟಿಯಾಗಿದೆ. ಹತ್ತಿರ... ಜೀವನ ವಿಚಿತ್ರವಿದೆ... ನೀವೂ ಕೂಡ... ! ಗೂಡ್ ಬಾಯ್.... ಗುಡ್ ಬಾಯ್, ಮಿಸ್ಟರ ಗೌರೀಶ... ಗುಡ್‌ಬಾಯ್ ಆಲ್.... !"

ಕರವಸ್ತ್ರವನ್ನು ಬೀಸುತ್ತ ಪ್ಲ್ಯಾಟ್ ಫಾರ್ಮಿನ ಮೇಲೆ ನಿಂತ ಮೇರಿಯ ಕಡೆಗೆ ಹುಚ್ಚನಂತೆ ನೋಡುತ್ತಿದ್ದ ಶ್ರೀಕಾಂತ. ತೆರೆದ ಬಾಗಿಲಲ್ಲಿ ನಿಂತ ಆತ ಜೋಲಿ ಹೋಗಿ ಬಿದ್ದುಗಿದ್ದಾನೆಂಬ ಭೀತಿಯಿಂದ ನಾನು ಅತನನ್ನು ರಟ್ಟೆಹಿಡಿದು

ಒಳಗೆ ಜಗ್ಗಿದೆ. ಯಾವದೋ ಕನಸಿನಿಂದ ಎಚ್ಚತ್ತವನಂತೆ ಒಮ್ಮೆಲೆ – "ಆಂ? ಏನಾಯಿತು ?" ಎಂದ.

"ಏನಿಲ್ಲ, ನೀನು ದಣಿದಿರುವಿ – ಬಾ ಒಳಗೆ ಕೂಡ್ರು ಬಾ" ನಾನೆಂದೆ

"ಹೋಗು ನೀನು ಕೂಡ್ರು, ನಾನು ಸ್ವಲ್ಪ ಇಲ್ಲಿಯೇ ನಿಲ್ಲುವೆ." ಅವನ ಮುಖದ ಮೇಲೆ ಒಂದು ಬಗೆಯ ತ್ರಸ್ತಭಾವ ಮೂಡಿತ್ತು.

* * *

ಇಂದು ನನ್ನ ಮನಸ್ಸಿನಲ್ಲಿ ಯಾಕೋ ಉದ್ವೇಗ : ನಿನ್ನೆಯಾದರೂ ಡಾಲಿ ಬರಬೇಕಾಗಿತ್ತು. ನಿನ್ನೆ ಇಡಿಯ ಸಂಜೆ ನನ್ನ ಮನಸ್ಸಿನಲ್ಲಿ ನನಗೆ ಗೊತ್ತಿಲ್ಲದೆ ತ್ರಸ್ತಭಾವ ಸುಳಿದಾಡುತ್ತಿತ್ತು. ರಾತ್ರೆ ನಾನು ಬರೆಯುವಾಗಲೂ ವಿಚಿತ್ರ ಕಸಿವಿಸಿ ಆರೇಳು ಸಿಗರೇಟುಗಳು ಸುಟ್ಟು ಬೂದಿಯಾದವು. ಕೊನೆಗೆ ಬರೆಯುವದನ್ನು ಬಿಟ್ಟು ಕಾಟಿನ ಮೇಲೆ ಒರಗಿದಾಗ ನನಗೆ ಗೊತ್ತಿಲ್ಲದೆ ನಿದ್ದೆ ಹತ್ತಿ ಒಂದು ಕನಸು ಕೂಡಾ ಬಿತ್ತು. ಆ ಕನಸಿನಲ್ಲಿ ಡಾಲಿ ಮತ್ತು ನಾನು ಒಂದು ಸೋಪಾನವೇರಿ ಎಲ್ಲಿಗೋ ಹೊರಟಿದ್ದೆವು. ನಾನು ಕೇಳಿದೆ : ಆ ಬದಿಗೆ ಏನಿದೆ ?" ಅವಳು ನಕ್ಕಳು ಮಾತ್ರ. ನಾವು ಮೆಟ್ಟಲು ಹತ್ತಿ ಆ ಬದಿಗೆ ನೋಡಿದೆವು : ಒಂದು ಹೊಂಡ ಕಣ್ಣಿಗೆ ಬಿತ್ತು. "ಎಷ್ಟು ಸುಂದರವಾಗಿದೆ ಈ ಹೊಂಡ ! ನಡೆ ನಾವು ಈಸೋಣ." ಡಾಲಿಯ ಸೂಚನೆ. ಅವಳಿಗೆ ಏನು ಹೇಳಬೇಕು ಎಂದು ವಿಚಾರ ಮಾಡುವಷ್ಟರಲ್ಲಿ, ಡಾಲಿ ತನ್ನ ಅರಿವೆ ತೆಗೆದು ತೀರ ನಗ್ನಳಾಗಿ ನಿಂತಳು. ಅಷ್ಟರಲ್ಲಿ ಹೊಂಡ ಸಮುದ್ರವಾಗಿತ್ತು. "ಅಲ್ಲಿ ನೋಡು ನಿನ್ನ ಹಡಗ ನಿಂತಿದೆ" ಎಂದು ಅವಳು ಕೂಗಿದಳು : "ಹೋಗು ಹೊತ್ತಾದೀತು, ಹಡಗ ಹೋಗಿ ಬಿಟ್ಟೀತು"... ಬೇಗ ಅರಿವೆ ಹಾಕಿಕೊಳ್ಳು, ನಡೆ, ಹೋಗೋಣ, ನಾನು ಆತುರವಾಗಿ ಹೇಳಿದೆ. ಆದರೆ ಅರಿವೆಗಳು ಅಷ್ಟರಲ್ಲಿ ಮಾಯವಾಗಿದ್ದವು. ನಾನು ಅತ್ತ ಇತ್ತ ತ್ರಸ್ತನಾಗಿ ಓಡುತ್ತ ಹುಡುಕತೊಡಗಿದೆ. ದೂರ ರೇಲು ಗಾಡಿಯ ಸಪ್ಪಳು. ಅಲ್ಲ, ಆ ಗಾಡಿ ಇಲ್ಲಿಯೇ ಗಕ್ಕನೆ ನಿಂತರೆ, ಜನರೆಲ್ಲ ಕೆಳಗಿಳಿದರೆ... ನಾನು ದಿಙ್ಮೂಢನಾದೆ. ಅಷ್ಟರಲ್ಲಿ ಡಾಲಿ ನೀರಿನಲ್ಲಿ ತೇಲುತ್ತಿದ್ದಳು. 'ಇದೇನು ಡಾಲಿ ಈಸುತ್ತಿರುವಳೇ ಅಥವಾ ಸತ್ತಿರುವಳೇ?" ನಾನು ನೀರಿನತ್ತ ಧಾವಿಸಿದೆ. ಇನ್ನೇನು ನೀರಿನಲ್ಲಿ ಜಿಗಿಯ ಬೇಕೆನ್ನುವಷ್ಟರಲ್ಲಿ ಶ್ರೀಕಾಂತ ಪ್ರತ್ಯಕ್ಷನಾದ. ಶ್ರೀಕಾಂತ ನಕ್ಕ, "ಅಲ್ಲ, ಹೀಗೇಕೆ ಹುಚ್ಚನಂತೆ ಓಡುತ್ತಿರುವಿ?" ಎಂದು ಪ್ರಶ್ನಿಸಿದ. ನಾನು ಬೊಟ್ಟು ತೋರಿಸಿದೆ ಮಾತ್ರ ಓಡುವ ಶಕ್ತಿಯೇ ಉಡುಗಿಹೋಯಿತು. ನಿಂತಲ್ಲಿಯೇ ನಿಂತೇ.. ಎಲ್ಲಾ, ಇದು ಕನಸು ಎಂಬುದರ ಅರಿವಾಯಿತು – ಆ ಕನಸಿನಲ್ಲಿಯೇ

ಡಾಲಿ ತೇಲುತ್ತಿದ್ದಾಳೆ, ನಿಜ. ಆದರೆ ಇದು ಕನಸಾದ್ದರಿಂದ ಅವಳನ್ನು ಉಳಿಸಲು ಹೋಗುವ ಅವಶ್ಯಕತೆಯಿಲ್ಲ. ಇದ ನನ್ನ ಕನಸು – ನಾನು ಇಚ್ಛಿಸಿದಂತೆ ಅದು ರೂಪುಗೊಳ್ಳಲಿ... ಡಾಲಿ ನೀರಿನ ಹೊರಗೆ ಬರಲಿ ನಗ್ನಾವಸ್ಥೆಯಲ್ಲಿಯೇ ಎಂದು ನನ್ನ ಇಚ್ಛೆ... ಹಾಂ, ಅವಳು ಬಂದಳು. ಒಮ್ಮೆಲೆ ಎಷ್ಟು ಚಂದ ಕಾಣುತ್ತಿದ್ದಾಳೆ... ಬೊಟಿಸೆಲಿಯ ವ್ಹೀನಸ್ಸಿನಂತೆ ನಾನು ಅವಳನ್ನು ಅಪ್ಪುವವರೆಗೆ ಕನಸು ಹಾಗೆಯೇ ಉಳಿಯಲಿ – ಎಂದು ಬಯಸಿದೆ... ಅಷ್ಟರಲ್ಲಿ ನಾನು ಹಾಸಿಗೆಯಲ್ಲಿ ಮೈ ಹೊರಳಿಸಿದೆನೇನೋ ; ಕನಸು ಸಂಪೂರ್ಣ ಹರಿಯಿತು : ನಿದ್ದೆ ಮುರಿಯಿತು...

ಇಂದು ಬೆಳಕು ಹರಿದಂದಿನಿಂದ ಡಾಲಿಯ ಪ್ರತೀಕ್ಷೆ ಮಾಡುತ್ತಿರುವೆ. ಇಂದು ರವಿವಾರ– ಬರಬಾರದೇಕೆ ಅವಳು ಎದ್ದ ಕೂಡಲೇ? ಚರ್ಚಿಗೆ ಹೋಗುವದಿರಬೇಕು. "ಓ ದೇವರೇ, ಓ ಕ್ರೈಸ್ತನೇ, ನನ್ನ ಪಾಪಗಳನ್ನೆಲ್ಲ ಕ್ಷಮಿಸು..." ಎಂದು ಪ್ರಾರ್ಥಿಸುವದಿರಬೇಕು...

ಛೇ, ನಾನು ಹೀಗೆ ಪ್ರತೀಕ್ಷೆ ಮಾಡುವದೇ ತಪ್ಪು, ಏನೋ ಕಾರಣದಿಂದ ಬಂದಿರಲಿಕ್ಕಿಲ್ಲ. ಹಾಂ, 'ಹೊರಗೆ ಕೂತಿರಬೇಕು'... "ಓ ದೇವರೇ, ಡಾಲಿ ಹೊರಗೆ ಕೂಡುವಂತೆ ಮಾಡು... ಸುಮ್ಮನೆ ಸಂಕಟದಲ್ಲಿ ಹಾಕಬೇಡ ನನ್ನನ್ನು ನನಗೆ ಮುಕ್ತಿಯನ್ನು ದಯಪಾಲಿಸು..."

ಇಂದು ಸಂಜೆಯವರೆಗೆ ಹಾದಿ ಕಾಯಬೇಕು. ಅನಂತರ... ಇಲ್ಲ, ಇಂದು ಅವಳು ಬರಲೇಬೇಕು ಸಂಜೆಗೆ. ಇದೇನು, ಅವಳು ಬರಬೇಕೆನ್ನುವದು ನನ್ನ ದೈಹಿಕ ಹಂಬಲವೇ? ಅಥವಾ ಅವಳ ಬಗ್ಗೆ ಇದ್ದ ಸಹಾನುಭೂತಿಯೇ. ಮಮತೆಯೇ. ಪ್ರೇಮವೇ?

* * *

"ಗೌರೀಶ, ನಿನ್ನ ಬಗ್ಗೆ ನನಗೆ ಏನೂ ತಿಳಿಯದಾಗಿದೆ..."

"ನನ್ನನ್ನು ತಿಳಿದುಕೊಳ್ಳುವ ಹಂಬಲವಾದರೂ ಯಾಕೆ ?"

"ಮೊದಲಿನಿಂದಲೂ ಸ್ನೇಹ ಬೆಳೆದು ಬಂದಿರುವಾಗ"

"ಸ್ನೇಹ–ಪ್ರೇಮದ ಮಾತೆಲ್ಲ ಮುಗಿದು ಹೋಗಿವೆ. ಕಾಮಿನಿ..."

"ಹಾಗಾದರೆ ಅದೆಲ್ಲ ನಿನ್ನ ನಾಟಕವಿತ್ತೇನು ?"

ಅವಳು ಪ್ರಶ್ನೆ ಕೇಳಿದೊಡನೆ ಎದೆಯಲ್ಲಿ ಅಸಹ್ಯ ಕಸಿವಿಸಿಯಾಯಿತು. ಇವಳ ದೃಷ್ಟಿಯಲ್ಲಿ ನಾನೇ ಕಪಟವೇಷಧಾರಿ ? ಮುಂಬಯಿಯಿಂದ ಹೊಸದಾಗಿ ತಂದ ಧೈರ್ಯದಿಂದ ನಾನು ಉತ್ತರಕೊಟ್ಟೆ :

"ನಾಟಕ? ನಾಟಕವನ್ನು ಯಾರು ಮಾಡಿದರೆಂಬುದನ್ನು ನೀನೇ ನೋಡು..."

"ಮೊನ್ನೆ ಹೇಳಿದ ನಿನ್ನ ಹಾಗೂ ಶಶಿಕಲೆಯ ಕತೆಯ ಮೇಲಿಂದ ನೀನು ಎಂಥವನೆಂದು ಸ್ಪಷ್ಟವಾಗುವದಿಲ್ಲವೇ?"

ಅವಳ ವಿಚಾರ ಸರಣಿಯೇ ನನಗೆ ಗೊತ್ತಾಗಲಿಲ್ಲ. "ಶಶಿಕಲೆ ನನ್ನೊಡನೆ ಅಭ್ಯಾಸ ಮಾಡಲು ಬರುತ್ತಿದ್ದಳು ಎಂದು ಮಾತ್ರ ಹೇಳಿದೆ..."

"ಮುಂದಿನದನ್ನು ಸ್ಪಷ್ಟ ಶಬ್ಧಗಳಿಂದ ಹೇಳಬೇಕೆಂದಿಲ್ಲ... ಇಷ್ಟೂ ತಿಳಿಯದ ಕೂಸಲ್ಲ ನಾನು...

"ಅಂದರೆ ಅವಳೊಡನೆ ಸರಸವಾಡಿದೆ ಎಂದೇ ನಿನಗೆ ಸೂಚಿಸಬೇಕಾಗಿದೆಯಲ್ಲವೇ? ಒಂದು ವೇಳೆ ಸರಸವಾಡಿದೆನೆಂದು ತಿಳಿ. ತಪ್ಪೇನಾಯಿತು?"

"ತಪ್ಪೇನಿಲ್ಲ... ನೀನು ಎಂಥವನೆಂದು ತಿಳಿಯಿತು."

"ಈಗೇನು? ಏನು ತಿಳಿಯಿತು ಹೇಳು ನೋಡೋಣ."

"ನನ್ನ ಮೇಲಿನ ನಿನ್ನ ಪ್ರೀತಿ ನಾಟಕೀಯವಾಗಿತ್ತೆಂಬುದು. ನಿನ್ನ ಉದ್ದೇಶ ಬರೇ ಉಪಭೋಗವಾಗಿತ್ತೆಂಬುದು..."

"ಹಾ–ಹಾ–ಹಾ–ಹಾ– ನಾನು ಲಫಂಗನೆಂಬುದು ನಿನಗೆ ಸ್ಪಷ್ಟ ತಿಳಿಯಿತಲ್ಲವೇ?... ಹಾ–ಹಾ–ಹಾ–ನಿನ್ನ ಕುಶಾಗ್ರಬುದ್ಧಿ ಆಗಾಧವಾಗಿದೆ... ಮುಂದೆ?"

"ನಾನು ನಿನಗೆ ಬಲೆಬೀಳಲಿಲ್ಲೆಂದು ನಿರಾಶೆಗೊಂಡಿ ನೀನು... ಅನಂತರ ನಿನ್ನ ಪ್ರೇಮ–ಲಗ್ನದ ಮಾತುಗಳನ್ನು ನಾನು ಸೀರಿಯಸ್ಸಾಗಿ ತೆಗೆದುಕೊಂಡಾಗ ನೀನು ಹೆದರಿದೆ..."

"ಹೌದು, ನಾನು ಹೆದರಿದೆ : ನಿನ್ನ ಬಲೆಯಿಂದ ತಪ್ಪಿಸಿಕೊಂಡು ಓಡಿಹೋದೆ"

"ನನ್ನ ಬಲೆ?..." ಕಾಮಿನಿಯ ಮೋರೆಯ ಮೇಲೆ ಸಿಟ್ಟು ನಿಚ್ಚಳವಾಗಿ ಮೂಡಿತು... "ಇದು ಅಪಮಾನ – ಇನ್ಸಲ್ಟ! – ಬೇಕಂತಲೇ ಇನ್ಸಲ್ಟ ಮಾಡುತ್ತಿರುವಿ.."

ನಾನು ನಗಬಾರದಿತ್ತು, ನಕ್ಕೆ, ಆಮೇಲೆ ಒಮ್ಮೆಲೆ ಗಂಭೀರನಾಗಿ, "ಕಾಮಿನಿ, ನೀನು – ನೀನು ಇನ್ಸಲ್ಟಿ ಮಾಡಿರುವಿ ನನ್ನ. ನನ್ನ ಇಡಿಯ ಆತ್ಮಕ್ಕೆ ನನ್ನ ಇಡಿಯ ವ್ಯಕ್ತಿತ್ವಕ್ಕೆ... ನಿನ್ನನ್ನು ಎಂದೂ ಕ್ಷಮಿಸಲಾರೆ, ಈ ಜೀವವಿರುವ ತನಕ. ಬೆಂಕಿಯಲ್ಲಿ ಕೈ ಹಾಕಿ ಇಡಿಯ ದೇಹವನ್ನೇ ಸುಟ್ಟುಕೊಂಡಿರುವೆ. ನಾವು ಅನಾಗರಿಕ ಸಮಾಜದಲ್ಲಿದ್ದಿದ್ದರೆ – ಆಫ್ರಿಕೆಯ ಒಂದು ವನ್ಯ ಕುಲದಲ್ಲಿ ನಾವಿದ್ದರೆ, ನಾನು ನಿನ್ನನ್ನು ಕೊಂದು ನಂತರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ..." ನನ್ನ ಮಾತುಗಳು

ನನ್ನ ಅಂಕೆ ಮುರಿದು ತಾವಾಗಿಯೇ ಸಿಡಿದು ಬೀಳುತ್ತಿದ್ದವು.

ಈ ಸಲ ಕಾಮಿನಿ ನಕ್ಕಳು : ನಾನು ಹೇಳಿದ್ದು ಅವಳಿಗೆ ಮೋಜಿನ ಮಾತಾಗಿ ತೋರಿತೇನೋ : "ಬಾ ನನ್ನನ್ನು ಕೊಲ್ಲ ಬಾ – ನೀನು ಹೀಗೆ ಮಾತಾಡುವದು ಎಷ್ಟೊಂದು ಚಂದವಾಗಿದೆ. ಗೌರೀಶ !" ಅವಳ ಕಣ್ಣುಗಳು, ಜೇಡಬಲೆ ಸೂರ್ಯ ಪ್ರಕಾಶದಲ್ಲಿ ಮಿಂಚುವಂತೆ, ಮಿಂಚಿದವು.

"ನಿನ್ನ ಸ್ತುತಿಗೆ ಥ್ಯಾಂಕ್ಸ ?"

"ನೀನು ಬಹಳ ಇಂಟರೆಸ್ಟಿಂಗ್ ಆಗುತ್ತಾ ಹೊರಟಿರುವಿ. ಮುಂಬಯಿಯ ಪ್ರಭಾವ!"

"ಹಾಂ, ಮುಂಬಯಿಗೆ ಥ್ಯಾಂಕ್ಸ !"

ಅಷ್ಟರಲ್ಲಿ ಶ್ರೀಕಾಂತ ಹೊರಗಿನಿಂದ ಬಂದ : ಅವನಿಗೆ ಬಹಳ ದಣಿವಾದಂತೆ ತೋರುತ್ತಿತ್ತು.

"ಶ್ರೀಕಾಂತಾ. ಬಹಳ ದೂರ ಹೋಗಿದ್ದಿಯೇನು ತಿರುಗಾಡಲಿಕ್ಕೆ... ನಾನು ಪೇಟೆಯಿಂದ ಬರುವದರೊಳಗಾಗಿ ನೀನು ಹೋಗಿಬಿಟ್ಟಿದ್ದಿ ರೋಹಿಣಿಯೊಡನೆ..." ನಾನೆಂದೆ.

"ರೋಹಿಣಿಯೆಲ್ಲಿ ?" ಕಾಮಿನಿ ಪ್ರಶ್ನಿಸಿದಳು.

"ರೋಹಿಣಿ ಮನೆಗೆ ಹೋದಳು."

"ಆದರೆ ಅವಳು ಮರಳಿ ಇಲ್ಲಿ ಬಂದು ಆಮೇಲೆ ಮನೆಗೆ ಹೋಗುವವಳಿದ್ದಳಲ್ಲ?"

"ಅವಳಿಗೆ... ಅಲ್ಲ, ನನಗೆ ತಲೆನೋಯುತ್ತಿತ್ತು. ನಾನೇ ಅವಳನ್ನು ಮನೆಗೆ ಕಳಿಸಿದೆ, ಕಾಮಿನೀ, ಸ್ವಲ್ಪ ನೀರು ತೆಗೆದುಕೊಂಡು ಬಾ... ಗೌರೀ, ಆ ಕೆಂಪು ಬಾಟಲಿಯಲ್ಲಿ ಒಂದು ಗುಳಿಗೆ ತೆಗೆದುಕೊಂಡು ಬರುವಿಯೇನು ಪ್ಲೀಜ್ ?"

ಗುಳಿಗೆ ತೆಗೆದುಕೊಂಡ ನಂತರ ಶ್ರೀಕಾಂತ ಶಾಂತನಾಗಿ ಒಂದು ಒಣ ನೆಗೆ ನಕ್ಕ. "ನಡೆಯಲಿ – ನೀವೇನೋ ಮಾತಿನಲ್ಲಿ ಗುಂಗಾಗಿದ್ದೀರಿ. ನಿಮ್ಮ ಮಾತು ಸಾಗಲಿ. ನಾನು ಹೋಗಿ ಸ್ವಲ್ಪ ಆರಾಮ ತೆಗೆದುಕೊಳ್ಳುವೆ." ಎಂದು ಶ್ರೀಕಾಂತ ತನ್ನ ಕೋಣೆಗೆ ಹೋದ.

ಅಂದು ಮೇ ೨೮ನೆಯ ತಾರೀಖು. ಅಂದಿನ ಅವನ ದಿನಚರಿಯಲ್ಲಿ ಹೀಗೆ ಬರೆದಿದೆ :

"ಈಗ ನನ್ನ ದೃಷ್ಟಿಯೇ ಬದಲಾಗಿದೆ.... 'ಕಲುಷಿತ'ವಾಗಿದೆ. ಮುಖ್ಯ ಇದು 'ನನ್ನ' ದೃಷ್ಟಿಯಲ್ಲ. ಈ ದೃಷ್ಟಿಯಲ್ಲಿ ವಿಚಾರವಿಲ್ಲ, ಭಾವನೆಯಿಲ್ಲ. ಸದಸದ್ವಿವೇಕ

ಬುದ್ಧಿಯಿಲ್ಲ – ಏನಿಲ್ಲ, ಎಂತಿಲ್ಲ – ಬರಿಯ ಶ್ವಾಪದದ ದೃಷ್ಟಿಯಾಗಿದೆ.. ಇಂದ್ರಿಯಗಳು ಬರಿಯ ಇಂದ್ರಿಯಗಳಾಗಿವೆ. ಅವಳ ಕೈಯ ನಾಜೂಕತೆಯನ್ನು, ಕೋಮಲತೆಯನ್ನು ಮೈಯೆಲ್ಲ ಕೈಯಾಗಿ ಸ್ಪರ್ಶಿಸಿದೆ. ಬರಿಯ ಸ್ಪರ್ಶದ ಅನುಭವದಿಂದ ತಲೆ ಆನಂದದಿಂದ ಗಿರಕಿ ಹೊಡೆಯಿತು. ಅವಳು ಅದಕ್ಕೆ ಏನೇನೋ ಅರ್ಥ ಹಚ್ಚಿದಳು; 'ಪ್ರೇಮ'ವೆಂದು!... ಅವಳ ಕೈಯನ್ನು ತುಟಿಗೆ ಒತ್ತಿದಾಗ, ಅವಳು ನನ್ನ ಎದೆಗೆ ತನ್ನ ತಲೆಯನ್ನು ಒತ್ತಿದಳು....ಹುಂ, ನನ್ನ ಮೈಯೆಲ್ಲ ಬೆವತಿತು. ನಾನು ಅವಳ ತಲೆಯನ್ನು ಅಲ್ಲಿಯೇ ಇರಗೊಟ್ಟೆ... ಸ್ತ್ರೀಯ ಕೂದಲಿನಲ್ಲಿಯೂ ಎಷ್ಟೊಂದು ಮಾದಕತೆಯಿದೆ... ನನ್ನ ರಕ್ತದಲ್ಲಿಯ ರಾಕ್ಷಸ ಕೂಗ ಹತ್ತಿದ – ಅವಳ ಮಾಂಸಕ್ಕಾಗಿ ....ಜೀವನದ ಮಿಡಿತ ಉತ್ಕಟವಾಗಿತ್ತು! ನಿಜ... ಉತ್ಕಟತೆಯೇ ಜೀವನದ ಮುಖ್ಯ ಮೌಲ್ಯವಾಗಿದ್ದರೆ ದೈಹಿಕ ಉತ್ಕಟತೆಯಂತೆ ಬೇರೊಂದಿಲ್ಲ !... ಇದೆಲ್ಲ ಮೇರಿಯ ಪ್ರತಾಪ ! ಅವಳಿಂದಲೇ ನನ್ನ ಸಾಯಲಿರುವ ದೇಹಕ್ಕೆ ಈ ಅನಂತ ಪುರಾತನ ಪಿಪಾಸೆಯ ಶಾಪ ತಗಲಿತು...

ಇಲ್ಲ – ನನಗೆ ಹುಚ್ಚು ಹಿಡಿಯುತ್ತಿದೆ. ನನ್ನ ಮನೋ ಮಂದಿರ ನನಗೆ ಗೊತ್ತಿಲ್ಲದೆಯೇ ಕುಸಿದು ಬೀಳುತ್ತಿದೆ... ನಿನ್ನೆ ಸ್ಪಿನೋಜಾಳ ಪುಸ್ತಕ ಓದಲು ಸುರುಮಾಡಿದೆ. ಐದು ನಿಮಿಷಗಳ ನಂತರ ಏನೂ ತಿಳಿಯದಾಯಿತು. ಕಣ್ಣು ಮುಚ್ಚಿ ಹಾಗೆಯೇ ಬಿದ್ದೆ... ಯಾರೊಡನೆಯಾದರೂ ಏನಾದರೂ ಮಾತನಾಡಬೇಕೆಂದು ಬಾಯಿ ತೆಗೆದರೆ ವಿಷಯಗಳೇ ಸೂಚಿಸುವುದಿಲ್ಲ – ಹೀಗಾಗಿ ಎಲ್ಲ ಮಾತುಕತೆ ಹರಕು – ಹರಕಾಗಿ ಸಾಗುತ್ತವೆ, ...ಈ ದಿನಚರಿಯೊಂದು ನನ್ನ ಮುಕ್ತಿಯ ಸಾಧನ – ಮಾನಸ ಶಾಸ್ತ್ರಜ್ಞರು ವಿಕೃತ ಮನಸ್ಸನ್ನು ಗುಣಪಡಿಸುವಾಗ ಆ ಮನಸ್ಸಿಗೆ ತನಗೆ ಬೇಕಾದ ಹಾಗೆ ಬೇಕಾದ್ದನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿಕೊಡುವರಂತೆ. ಈ ದಿನಚರಿ ನನಗೆ ಅಂಥ ಅವಕಾಶ ಕೊಡುವದು...

ಎಲೆ ಮೃತ್ಯು ನೀನು ಜೀವನದ ಎಲ್ಲ ಅರ್ಥವನ್ನೇ ಹಿಂಡಿ ತೆಗೆದಿರುವಿಯಲ್ಲ. ಯಾತಕ್ಕಾಗಿ ಈ ಎರಡು ವರ್ಷವನ್ನಾದರೂ ಜೀವಿಸಬೇಕು ? ಎರಡು ವರ್ಷ ಅಥವಾ ಎಪ್ಪತ್ತು ವರ್ಷ – ಜೀವನದ ಕೊನೆ ! ಶೂನ್ಯ. ಹೌದು ಮರಣ ನಿಶ್ಚಿತ: ಆದುದರಿಂದ ಉತ್ಕಟವಾಗಿ ಜೀವಿಸಬೇಕು. ಉತ್ಕಟತೆಯಲ್ಲಿ 'ಉದಾತ್ತತೆ'ಯಲ್ಲಿ, ಜೀವನದ 'ಸಾರ್ಥಕ್ಯ'ವಿದೆ ಎಂದೇನೋ ಮೊದಲು ಅನಿಸುತ್ತಿತ್ತು. ಆಗ ದೇಹದಲ್ಲಿ ಚೈತನ್ಯವಿತ್ತು : ಉತ್ಕಟತೆ, ಉದಾತ್ತತೆ, ಸಾರ್ಥಕ – ಎಲ್ಲ ಆ ಚೈತನ್ಯದ ಹುಟ್ಟುಹಸಿವು! ಈಗ ಆ ಚೈತನ್ಯವೇ ಮಂದವಾಗಿದೆ... ಮನಸ್ಸೇ ಬಾಡುತ್ತಿದೆ... ಆದುದರಿಂದ

ದೇಹದ ಅತ್ಯಂತ ಉತ್ಕಟವಾದ ಹಸಿವೇ ನನ್ನನ್ನು ಈ ಜೀವನಕ್ಕೆ ಕಟ್ಟಿದ ಹಗ್ಗ. ನಾನು ಇನ್ನೂ ಜೀವಿಸಿರುವೆ ಎಂಬ ಅರಿವನ್ನು, ಅಂದರೆ ನನ್ನ ಜೀವನ ಪ್ರಜ್ಞೆಯನ್ನು ಕಾಯುವ ಕೆಲಸ, ಬಹುಶಃ ಈ ಲೈಂಗಿಕ ಶಕ್ತಿ ಮಾಡುತ್ತಿರಬೇಕು... ಅಯ್ಯೋ, ಜೀವನಕ್ಕೂ ನನಗೂ ಇದ್ದ ಬಂಧನ ಎಲ್ಲ ಬಿಟ್ಟು ಈ ಲೈಂಗಿಕ ಶಕ್ತಿಯಲ್ಲಿ ಮಾರ್ಪಾಡಾಗಬೇಕೇ? ...ಹೌದು, ಈ ಸೃಜನ ಶಕ್ತಿಯೇ ಶಿವಶಕ್ತಿಯಲ್ಲವೇ, ಜೀವನದ ಆದಿಶಕ್ತಿಯಲ್ಲವೇ? ಆದುದರಿಂದಲೇ ಎಷ್ಟೋ ಧರ್ಮಗಳಲ್ಲಿ ದೇವಶಕ್ತಿಗೆ ಲೈಂಗಿಕ–ಪ್ರತೀಕ ಕಲ್ಪಿಸಲ್ಪಟ್ಟಿದೆಯಲ್ಲವೇ? ನನ್ನ ಲೈಂಗಿಕ – ಪ್ರೇರಣೆ ಜೀವನದ ಆದಿಶಕ್ತಿಯ ಮಿಡಿತವಿರಬಹುದು ನಿಜ... ಆದರೆ ಅದರ ಜೊತೆಗೆ ಬರುವ ವ್ಯಕ್ತಿ ವ್ಯಕ್ತಿಗಳ ಸಂಬಂಧ–ಹೋರಾಟ. ಅಸಹ್ಯ ಮನೋವೇದನೆ 'ನನ್ನ' ಜೀವನದ ಕಕ್ಷೆಯಲ್ಲಿಯ ಮಾತುಗಳಲ್ಲ. ಬಹುಶಃ ಈ ಲೈಂಗಿಕ ಪ್ರೇರಣೆಗೆ ಪ್ರೇಮದ ಜೋಡಿದ್ದರೆ ಒಂದು ವೇಳೆ ಜೀವನ ಸಹ್ಯವಾಗಬಹುದಿತ್ತೇನೋ... ಬಹುಶಃ ಪ್ರೀತಿಯ ಹೆಂಡತಿಯಿದ್ದಿದ್ದರೆ, ಅವಳ ಮುಕ್ತಪ್ರೇಮ, ಅವಳ ಮುಕ್ತ ಅರ್ಪಣೆ ನನ್ನ ದೇಹಕ್ಕೂ, ನನ್ನ ಆತ್ಮಕ್ಕೂ ಕೂಡಿಯೇ 'ಮುಕ್ತಿ'ಯನ್ನು ಕೊಡಬಹುದಾಗಿತ್ತು... ಆದರೆ ಆ ಬಗೆಯ ಜೀವನ ಸುರುವಾಗುವಮೊದಲೇ, ನನ್ನ ಅಂತರಂಗ ಇನ್ನೂ ಅನುಭವಗಳ ಪ್ರಯೋಗಶಾಲೆಯಾಗಿದ್ದಾಗಲೇ, ನನ್ನ ಜೀವನದ ಮುಕ್ತಾಯ ಆರಂಭವಾಗಬೇಕೇ ?

ಸ್ಥೈರಿಸು, ಸ್ಥೈರಿಸು, ಸ್ಥೈರಿಸು.

ಒಂದು ದಿವ್ಯಶಕ್ತಿಯಲ್ಲಿ – ದೇವರಲ್ಲಿ – ನನ್ನ ವಿಶ್ವಾಸವಿದ್ದಿದ್ದರೆ, ಆ ವಿಶ್ವಾಸವಾದರೂ ನನ್ನ ಆಸರೆಗಲ್ಲಾಗಬಹುದಿತ್ತು. 'ತಮಸೋ ಮಾ ಜ್ಯೋತಿರ್ಗಮಯ' ಎಂದು ಮೊರೆಹೋಗಬಹುದಿತ್ತು. ಅದೂ ಶಕ್ಯವಿಲ್ಲ. ಡಾಕ್ಟರ್ ಫಾಸ್ಟಸನು ಕೊನೆಗೆ ದೇವರ ಆಸರೆಗೈಯಿಲ್ಲದೆ. ಕ್ರೈಸ್ತನ ರಕ್ತದ ಒಂದು ಹನಿ ಕೂಡ ಇಲ್ಲದೆ, ನಿಸ್ಸಹಾಯನಾಗಿ ನರಕಕ್ಕೆ ಹೋದಂತೆ, ನಾನು ಆಳ–ಅಂತರವಿಲ್ಲದ ಕತ್ತಲೆಯ ಶೂನ್ಯತೆಯ ನಿಸ್ಸಹಾಯನಾಗಿ ಇಳಿಯುವದೊಂದೇ ನನ್ನ ಅನಿವಾರ್ಯ ಕರ್ಮ....

ಮುಖ್ಯ ಬೇಕಾದದ್ದು ಧೈರ್ಯ !

ಧೈರ್ಯ !"

* * *

ಅವನ 'ಧೈರ್ಯ'ದ ಅರ್ಥ ನಂತರ ಗೊತ್ತಾಯಿತು.

ಶ್ರೀಕಾಂತನ ವೇದನೆಯ ಕಲ್ಪನೆ ಆಗ ನಮಗಾರಿಗೂ ಇದ್ದಿಲ್ಲ. ಆತ

ಸುಧಾರಿಸುತ್ತಿರುವ, ಸ್ವಲ್ಪ ಹೆಚ್ಚು ಕಾಳಜಿಪೂರ್ವಕ ಔಷಧ, ವಿಶ್ರಾಂತಿ ತೆಗೆದುಕೊಂಡರೆ ಬೇಗ ಸುಧಾರಿಸುವೆ ಎಂದೇ ನಮ್ಮೆಲ್ಲರ ಕಲ್ಪನೆ. ಹೊರಗೆ ಕಾಣಿಸಲಿಕ್ಕಂತೂ ಆತ ಕೆಂಪಗೆ ಸಶಕ್ತನಾಗಿದ್ದ... ಅಷ್ಟೇ ಅಲ್ಲದೆ ಮೇರಿಯೂ – ಅವಳ ಪ್ರೇಮವೂ ಆತನಲ್ಲಿ ಉತ್ಸಾಹವನ್ನೂ ಚೈತನ್ಯವನ್ನೂ ತುಂಬಿ ಅವನನ್ನು ಬೇಗ ಗುಣಮಾಡಬಹುದೆಂದು ನಾನು ಬಗೆದಿದ್ದೆ.

ಜೂನ ಮೊದಲ ವಾರದಲ್ಲಿ ಸಿರ್ಸಿಗೆ ಹೋದೆ, ತಂದೆತಾಯಿಯವರ ಸಮಾಧಾನದ ಸಲುವಾಗಿ.

"ಎಮ್.ಎಸ್‌ಸಿ.ಯಾದ ಮೇಲೆ ಏನು ಮಾಡುವವನಿದ್ದಿ ?"

"ಗೊತ್ತಿಲ್ಲ, ರಿಜಲ್ಟಿನ ಮೇಲೆ ಅವಲಂಬಿಸಿದೆ."

"ಸಾಕಪ್ಪ ಕಲಿಯೋದು –" ತಾಯಿ ದನಿಗೂಡಿಸಿದಳು.

"ಕ್ಲಾಸು ಬರದಿದ್ದರೆ, ನೌಕರಿ ಮಾಡಬೇಕೆಂದು ಮಾಡಿರುವೆ."

"ಸಿಕ್ಕಿತೇನು ನೌಕರಿ ?" ತಾಯಿಯ ಆತುರದ ಪ್ರಶ್ನೆ.

"ಇಲ್ಲ – ಸತ್ಯೇಂದ್ರ ಒಂದೆರಡು ಕಡೆಗೆ ಹೇಳಿಟ್ಟಿದ್ದಾನೆ. ನೋಡಬೇಕು." ಎಂದೆ ನಾನು.

"ಒಳ್ಳೇದಾಯಿತು ಬಿಡು, ಒಮ್ಮೆ ದಾರಿಗೆ ಹತ್ತಿದಂತೆ ಆಗುತ್ತದೆ...."

"ಒಳ್ಳೆಯ ಪಗಾರ ಸಿಕ್ಕರೇನೇ ನೌಕರಿ ಮಾಡು. ಇಲ್ಲದಿದ್ದರೆ ಬಂದು ಬಿಡು ಸಿರ್ಸಿಗೆ." ತಂದೆಯವರ ಗಡಸು ಉಪದೇಶ.

"ಮುಂದಿನದು ಮುಂದೆ..."

* * *

ನಾನಿನ್ನೂ ಸಿರ್ಸಿಯಲ್ಲಿರುವಾಗಲೇ ಸತ್ಯೇಂದ್ರನ ತಾರು ಬಂತು : "ಕೊಂಗ್ರ್ಯಾಚ್ಯುಲೇಶನ್ಸ, ಥರ್ಡಕ್ಲಾಸ್, ಕೂಡಲೆ ಹೊರಡು... ಪ್ರಾಯವ್ವೇಟ್ ಕಂಪನಿಯಲ್ಲಿ ನೌಕರಿಯ ಚಾನ್ಸು."

ಥರ್ಡಕ್ಲಾಸು ಬಂದುದಕ್ಕೆ ನಿರಾಶೆಯಾಯಿತು. ಆದರೂ ಒಮ್ಮೆ ಮುಗಿಯಿತಲ್ಲ ಶಿಕ್ಷಣದ ಪೀಡೆ, ಪರೀಕ್ಷೆಗಳ ತೊಂದರೆ ಎಂದು ಸಮಾಧಾನ !

ನಾನು ಧಾರವಾಡಕ್ಕೆ ಹೋದಾಗ ಶ್ರೀಕಾಂತ ಅಲ್ಲಿರಲಿಲ್ಲ. ಆತ ವಾನಲೆಸ್ ವಾಡಿಗೆ ಹೋಗಿದ್ದ.

ನಾನು ಉತ್ಕಂಠತೆಯಿಂದ ಕೇಳಿದೆ ; "ಏನಾದರೂ ತೊಂದರೆ..."

"ಇಲ್ಲ. ಹಾಗೆಯೇ ಹೋಗಿಬರುವೆ ಎಂದು ಹೋಗಿದ್ದಾನೆ," ಕಾಮಿನಿ ಹೇಳಿದಳು.

"ಎಂದು ಬರುವ ?"

"ಎರಡು ಮೂರು ದಿನಗಳಲ್ಲಿ ಎಂದು ಹೇಳಿದ್ದಾನೆ."

"ನಿನ್ನ ರಿಜಲ್ಟು ಏನಾಯಿತು ? ನಿನ್ನ ನಂಬರು ನನಗೆ ಗೊತ್ತಿದ್ದಿಲ್ಲ."

"ಮರಳಿ ನಾಪಾಸು."

"ಸಾರಿ... ಮುಂದೆ ?"

"ಮುಂದೇನು ? ಮರಳಿ ಪ್ರಯತ್ನ."

"ಗುಡ್ ! ಪಾರ್ಟಿಯನ್ನು ಬಿಟ್ಟರಾಗದೇ ?"

"ಬಿಟ್ಟೇನು ಮಾಡುವದು ?"

"ಅಭ್ಯಾಸ – ಸೀರಿಯಸ್ಸಾಗಿ."

"ನನಗೆ ಎಲ್ಲದರ ಬೇಸರ ಬಂದಿದೆ ನಾನು ಗಂಡಸಾಗಿದ್ದರೆ ಎಲ್ಲಿಯಾದರೂ ದೂರ ಓಡಿಹೋಗುತ್ತಿದ್ದೆ."

"ಬರುವಿಯೇನು ನನ್ನೊಡನೆ ಓಡಿ ?" ನಾನು ನಗೆಯಾಡಿದೆ.

"ಓಡಿಸಿಕೊಂಡು ಹೋಗುವಷ್ಟು ಶಕ್ತಿ ಬಂತೇ ನಿನಗೆ ?" ಅವಳೂ ನಕ್ಕಳೂ ಸೂಚ್ಯವಾಗಿ.

"ನನಗೆ ನೌಕರಿ ಸಿಗುವದಿದೆ ಮುಂಬಯಿಯಲ್ಲಿ ಇಂದೇ ನಾನು ಮುಂಬಯಿಗೆ ಹೊರಡುವವನಿದ್ದೇನೆ."

"ಹೀಗೇನು ? ಅಚ್ಛಾ –" ಎಂದು ಅವಳು ನನ್ನೆಡೆಗೆ ಸೂಕ್ಷ್ಮವಾಗಿ ನೋಡಿದಳು. "ಬೆಸ್ಟ ಲಕ್ ! ನಿನಗೆ ಸಿಗದೆ ಮತ್ಯಾರಿಗೆ ಸಿಗಬೇಕು ?" ಅವಳ ಕಣ್ಣಿನಲ್ಲಿ ಕೌತುಕವಿತ್ತು. "ನೌಕರಿ ಸಿಕ್ಕನಂತರ – ಲಗ್ನವೇನು ? ಅಂದರೆ ಶಶಿಕಲೆಯೊಡನೆ ?"

"ಛೇ, ಲಗ್ನ –ಬಿಗ್ನ ಎಲ್ಲ ಸುಳ್ಳು, ಕಾಮಿನಿ, ಮೊದಲು ಜೀವಂತ ಇರುವ ಪ್ರಯತ್ನ, ಆಮೇಲೆ ಮುಂದಿನದು.

"ಅದೆಲ್ಲ ಸುಳ್ಳು, ಶಶಿಕಲೆ ನಿನ್ನನ್ನು ಸುಮ್ಮನೆ ಬಿಟ್ಟಾಳೇಯೇ, ನೀನು ಇಡಿಯ ವರ್ಷ ಅವಳೊಡನೆ ಸರಸವಾಡಿದ ಮೇಲೆ ?"

"ಕಾಮಿನಿ, ನಿನಗೆ ಬುದ್ಧಿ, ತಿಳುವಳಿಕೆ ಎಂದು ಬರುವವೋ ?"

"ಸಿಟ್ಟೇಕೆ ಇಷ್ಟು – ನನ್ನ ಊಹೆ ನಿಜವಿದೆ ತಾನೇ ?"

"ಹೂಂ – ಮುಂದೆ ?"

"ಮುಂದೇನು, ಶುಭಸ್ಯ ಶೀಘ್ರಂ !" ಅವಳ ನಗೆಯಲ್ಲಿ ಶುಷ್ಕತೆಯಿತ್ತು. ನನಗೆ ಹಾಯೆನಿಸಿತು !

"ಥ್ಯಾಂಕ್ಸ ; ನನ್ನ ಲಗ್ನಕ್ಕೆ ಬರುವಿ ತಾನೇ ?" ನಾನೆಂದೆ ನಗತ್ತ.

“ನಾನಿಲ್ಲದೆ ನಿನ್ನ ಲಗ್ನವಾದರೂ ಹೇಗಾದೀತು ?'

* * *

ಶ್ರೀಕಾಂತ ಭೆಟ್ಟಿಯಾಗಿಲಿಲ್ಲವೆಂದು ಅತ್ಯಂತ ನಿರಾಶೆಯಾಯಿತು. ದಾರಿಯಲ್ಲಿ ವಾನಲೆಸ್‌ವಾಡಿಗೆ ಹೋಗಿ ಹೋದರೆ ಹೇಗೆ ಎಂದು ಯೋಚಿಸಿದೆ. ಮೇರಿಯ ಸಲುವಾಗಿ ಈತ ಹೋಗಿರುವ, ಯಾಕೆ ಸುಮ್ಮನೆ ಅವರ ಮಧ್ಯದಲ್ಲಿ ನಾನು ಎಂದು ಬುದ್ಧಿ ಹೇಳಿದೆ ನನ್ನ ಅಂತಃಕರಣಕ್ಕೆ...

'ವಿನಾಶಕಾಲೇ ವಿಪರೀತ ಬುದ್ಧಿಃ – !

ಮುಂಬಯಿಯಲ್ಲಿ ಸತ್ಯೇಂದ್ರ, ನನ್ನ ನೌಕರಿಯ ಬಗ್ಗೆ ಎಲ್ಲ ವ್ಯವಸ್ಥೆ ಮಾಡಿದ್ದ. 'ಮಹೇಂದ್ರ ಆ್ಯಂಡ್ ಕಂಪನಿ'ಯಲ್ಲಿ ಸೇಲ್ಸ ಆರ್ಗನೈಜರನ ಜಾಗ ಅನಾಯಾಸವಾಗಿ ದೊರೆಯಿತು...

ಬಾಂದ್ರಾದಲ್ಲಿ – ಈ ಕೋಣೆಯೂ ಸಿಕ್ಕಿತು...

ಡಾಲಿ ನಿನ್ನ 'ಜೀವನ'ದಲ್ಲಿ ಪ್ರವೇಶಿಸಿದಳು...

* * *

ಮಧ್ಯಾಹ್ನವಾದರೂ ಡಾಲಿ ಬಂದಿಲ್ಲ. ಚರ್ಚಿಗೆ ಹೋಗಿದ್ದರೆ ಪ್ರಾರ್ಥನೆ ಮುಗಿಸಿಯಾದರೂ ಬರಬೇಕಿತ್ತು... ಅಂದರೆ ಚರ್ಚಿಗೆ ಅವಳು ಹೋಗಿಲ್ಲವೆಂಬುದು ಸ್ಪಷ್ಟ.. ಅವಳು ಎಲ್ಲಿ ಹೋಗಿರಬೇಕು ? ಹಾಂ, ಅವಳು ಬೇರೊಬ್ಬ ಯಾರಾದರನ್ನು ಹಿಡಿದಿರುವಳೇ ? ಅವವ ಜೊತೆಗೆ ಇಂದು 'ಪಿಕ್‌ನಿಕ್ಕಿ'ಗೆ (ಮಡ್ ಐಲಂಡದ ಆ ಸುಂದರ ಏಕಾಂತ ಸಮುದ್ರದ ದಂಡೆಯ ಮೇಲೆ – ನಾನೂ ಅವಳೂ ಹೋದ ಆ ಬಂಡೆಗಲ್ಲಿನ ಸ್ಥಳಕ್ಕೆ ?) ಹೋಗಬಹುದೇ ? ... ಈ ವಿಚಾರ ನನ್ನಲ್ಲಿ ಒಮ್ಮೆಲೆ ವೇದನೆಯನ್ನೇಕೆ ಉಂಟು ಮಾಡಿತು ? ...ಅಸೂಯೆಯೇ ? ಅವಳ ಮೇಲೆ ನನ್ನ ಹಕ್ಕಿದೆಯೆಂಬ ಸ್ವಾರ್ಥಭಾವನೆಯೇ ?

ಅಸೂಯೆಯ ನರಕ ಇನ್ನೂ ನನ್ನ ಹೃದಯದಲ್ಲಿದೆಯೇ ? ಸಾಕಾಗಿಲ್ಲವೆ ಅಸೂಯೆಯ ಅಸುರೀ ಅನುಭವ ?... ಇಲ್ಲ. ಡಾಲಿ ಸಂಪೂರ್ಣ ಸ್ವತಂತ್ರಳು – ತನಗೆ ಬೇಕಾದವರೊಡನೆ ಹೋಗಲಿ – ನನಗೇನು, ನಾನೇಕೆ ಕಳವಳಪಡಬೇಕು? ನಾನಾಗಿಯೇ ಅವಳನ್ನು – ಎಲ್ಲವನ್ನೂ – ಬಿಟ್ಟು ಆಫ್ರಿಕೆಗೆ ಹೋಗುತ್ತಿರುವೆನಲ್ಲವೇ ಹುಂ, ಡಾಲಿಗೆ ನನ್ನ ಬೆನ್ನು ಹತ್ತಿಯಾದರು ಸಿಗುವದೇನು? ಇನ್ನೊಂದು ನಾಲ್ಕಾರು ಸಲ ದೇಹ – ಸುಖ, ಇಷ್ಟೇ ಅಲ್ಲವೇ ? ಅವಳು ಜಾಣಳಾಗಿದ್ದರೆ ಬೇರೊಬ್ಬನನ್ನು ಬೇಗ ಹಿಡಿದು ತನ್ನ ಹಿಂದಿನ ಸುಖದ ವ್ಯವಸ್ಥೆ ಮಾಡಬೇಕು... ಅದೇ ಎಲ್ಲ ದೃಷ್ಟಿಯಿಂದ ಹಾಗೂ ನನ್ನ ದೃಷ್ಟಿಯಿಂದ... !

ಓ ಕ್ರೈಸ್ತ, ಅವನಿಗೆ ಒಬ್ಬ ಒಳ್ಳೆಯ ಗೆಳೆಯ – ಗಂಡನನ್ನು ದಯಪಾಲಿಸು. ಅವಳ ಜೀವನವನ್ನು ಸುಖಮಯವನ್ನಾಗಿ ಮಾಡು. ನಿನ್ನ ಆಶೀರ್ವಾದದ ಕೈಯಿ ಅವಳ ಮೇಲೆ ಸದಾ ಇರಲಿ...

ಎಲಾ, ಹೀಗೇಕೆ ನಾನು ಅವಳ ದೇವರಿಗೆ ಅವಳ ಸಲುವಾಗಿ ಪ್ರಾರ್ಥಿಸುತ್ತಿರುವೆ?

* * *

ನಾನು ವಾನಲೇಸ್‌ವಾಡಿಗೆ ಬರೆದ ಪತ್ರಕ್ಕೆ ಶ್ರೀಕಾಂತನ ತೀರ ಸಣ್ಣ ಉತ್ತರ ಬಂತು ;

"ಕೊಂಗ್ರ್ಯಾಚುಲೇಶನ್ಸ ! ನಿನ್ನ ಜೀವನ ಸುಖಮಯವಾಗಲಿ... ನೀನು ಯಾವಾಗಲೂ ನೀನಾಗಿರು... ನನ್ನ ಪ್ರಕೃತಿ ಸುಧಾರಿಸುತ್ತಿದೆ.... ಮೇರಿಯ ಕೃಪೆ!... ಆಗಾಗ್ಗೆ ಪತ್ರ ಬರೆಯುತ್ತಿರು..."

ಮುಂದೆ ಒಂದು ತಿಂಗಳಿನವರೆಗೆ ಅವನ ಪತ್ರವೇ ಬರಲಿಲ್ಲ. ನನ್ನ ನಾಲ್ಕು ಪತ್ರಗಳು ಸತ್ಯೇಂದ್ರನ ಎರಡು ಪತ್ರಗಳು – ಯಾವುದಕ್ಕೂ ಉತ್ತರವಿಲ್ಲ...

ನಂತರ ಧಾರವಾಡದಿಂದ ಒಂದು ಪತ್ರ ಬಂತು : "ನಾನು ಚನ್ನಾಗಿದ್ದೇನೆ. ಕಾಳಜಿ ಮಾಡಬಾರದು, ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳುತ್ತಿರುವೆ. ನಾನು ಹೊರಗೆ ಕೂಡ ಹೋಗುವದಿಲ್ಲ. ಬೇಗನೆ ಟ್ರಿಪ್ಪೆಂದು ಮುಂಬಯಿಗೆ ಬರುವ ವಿಚಾರ ಮಾಡುತ್ತಿರುವೆ."

ಪತ್ರ ಸಣ್ಣದಿದ್ದರೂ ಸಂದಿಗ್ಧವಾಗಿತ್ತು. ಅವನು ಮುಂಬಯಿಗೆ ಬರಲಿರುವ ಎಂದು ಆನಂದವಾದರೂ ಮನಸ್ಸು ('ನಾನು ಹೊರಗೆ ಕೂಡ ಹೋಗುವದಿಲ್ಲ') ಅಸ್ವಸ್ಥಗೊಂಡಿತ್ತು...

ಅಂದು ನಾನು ಸತ್ಯೇಂದ್ರನ ಮನೆಗೆ ಹೋಗಿದ್ದೆ. ಅವನ ಜೊತೆಗೆ ಊಟಮಾಡಿದ್ದೆ. ಆತ ನನ್ನನ್ನು ಸಾಂತ್ವನಗೊಳಿಸಿದ್ದ : "ಕಾಳಜಿ ಮಾಡಬೇಡ. ಆತ ನಿಜಕ್ಕೂ ಚನ್ನಾಗಿರಬೇಕು...."

"ಇಷ್ಟು ಸಣ್ಣ ಪತ್ರಗಳನ್ನೇಕೆ ಬರೆಯುತ್ತಿದ್ದಾನೆಯೋ ?"

"ಅವನ ಮನಸ್ಸೆಲ್ಲ ಮೇರಿಯ ಮೇಲೆ ಕೇಂದ್ರಿಭೂತವಾಗಿರಬೇಕು..."

"ಈ ಸಲದ ಪತ್ರದಲ್ಲಿ ಅವಳ ಹೆಸರೂ ಕೂಡ ಇಲ್ಲ..." ನಾನು ಉಸಿರು ಗೈದೆ.

"ಅಷ್ಟು ಚಿಂತೆಯೆನಿಸುತ್ತಿದ್ದರೆ ಕಾಮಿನಿಗೆ ಪತ್ರ ಬರೆದು ನೋಡು – ಅಥವಾ ಒಂದೆರಡು ದಿನ ಸೂಟಿ ತೆಗೆದುಕೊಂಡು ನೀನು ಹೋಗಿ ಬಾ

ಬೇಕಾದರೆ..."

"ಹಾಂ.. ಹಾಗೆಯೇ ಮಾಡುವದೊಳಿತು..."

"ಸಾಧ್ಯವಾದರೆ ಅವನನ್ನು ಮುಂಬಯಿಗೆ ಕರೆದುಕೊಂಡು ಬಾ..."

"ಹಾಂ, ಒಳ್ಳೆಯ ಯೋಜನೆ... ಶನಿವಾರ ಹೋಗುವೆ ಹಾಗಾದರೆ... ಸೋಮವಾರ ಯಾವುದೋ ಸೂಟಿಯಿದೆ... ಮಂಗಳವಾರ ಕಾಜ್ಯುಅಲ್ ಲೀವ್ಹ ತೆಗೆದುಕೊಳ್ಳುವೆ....,

"ಡಾಲಿ ಏನೆನ್ನುತ್ತಾಳೆ ?" ಸತ್ಯೇಂದ್ರ ನಗುತ್ತ ಕೇಳಿದ.

"ಚನ್ನಾಗಿದ್ದಾಳೆ. ಅವಳ ಬಗ್ಗೆ ಇನ್ನೂ ಶ್ರೀಕಾಂತನಿಗೆ ಬರೆದಿಲ್ಲ. ಓ, ನೆನಪಾಯಿತು : ಇದೇ ರವಿವಾರ ನಾವು 'ಮಡ್‌ಐಲಂಡ್ಸಿ'ಗೆ ಹೋಗುವವರಿದ್ದೆವು. ಅದನ್ನು ಕ್ಯಾನ್ಸಲ್ ಮಾಡಬೇಕೀಗ..."

ಕ್ಯಾನ್ಸಲ್ ಮಾಡು. ಅದರಲ್ಲೇನು ? ಒಂದು ಮಾತು : ಡಾಲಿಯೊಡನೆ ಸ್ವಲ್ಪ ಹುಷಾರಾಗಿರು... ಅವಳ ಜೊತೆ ಏನಾದರೂ 'ಗಡಿ ಬಿಡಿ' ಇನ್ನೂ ಅವನಿಗೆ ಹೇಳಿರಲಿಲ್ಲ...

ಅಂದು ಕೋಣೆಗೆ ಬಂದಾಗ ರಾತ್ರೆ ಹನ್ನೆರಡಾಗಿತ್ತು.

ನಿದ್ದಿಯೇ ಹತ್ತಿರಲಿಲ್ಲ... ವಿಚಿತ್ರ ಕಳವಳ ನನ್ನ ಹೃದಯದಲ್ಲಿ ಒಂದೇ ಸಮನೆ ಪುಟಿಯುತ್ತಿತ್ತು...

ಮಾರನೆಯದಿನ ಮುಂಜಾನೆ ಕದ ಬಡೆಯುವ ಸಪ್ಪಳ. ನಾನು ದಿಗ್ಗನೆದ್ದು ಕದ ತೆರೆದೆ. ಲ್ಯಾಂಡ ಲೇಡಿಯ ಕೈಯಲ್ಲಿ ತಾರು... ಅದನ್ನು ನೋಡಿಯೇ ಕಣ್ಣಿಗೆ ಕತ್ತಲು ಬಂದಂತಾಯಿತು. ಬೇಗನೆ ತಾರು ತೆಗೆದುಕೊಂಡು, ಲ್ಯಾಂಡ್ ಲೇಡಿಗೆ 'ಥ್ಯಾಂಕ್ಸ' ಕೂಡ ಅನ್ನದೆ, ಕದ ಹಾಕಿ, ತಾರು ಒಡೆದೆ...

ಹೃದಯ ಒಡೆಯಿತು –

ಮಹಾ ಭಯಂಕರ ಸಿಡಿಲು...

'Shrikant committed suicide, come if you like' - Gopal

(ಶ್ರೀಕಾಂತ ಆತ್ಮಹತ್ಯೆ ಮಾಡಿಕೊಂಡ. ಬಾ ಬೇಕಾದರೆ – ಗೋಪಾಲ)

ಇದನ್ನು ಇಂದು ಬರೆಯುವಾಗಲೂ ಕೈ ನಡುಗುತ್ತಿವೆ... ಕಂಬನಿ ಸುರಿಯುತ್ತಿವೆ...

ಅಯ್ಯೋ ದೇವರೇ... ನನ್ನ ಶ್ರೀಕಾಂತ... ನನ್ನ ಪ್ರಾಣ...

ಎಷ್ಟೋ ಹೊತ್ತು ಹಾಗೆಯೇ ಕುಳಿತುಕೊಂಡಿರುವೆ... ದುಃಖ ಮರುಕಳಿಸಿ ಬಂತು... ನಾಲ್ಕೈದು ಸಿಗರೇಟು ಎಡೆಬಿಡದೆ ಸೇದಿ ಕಂಪಿಸುತ್ತಿದ್ದ ನರಗಳನ್ನು

ಪ್ರಯತ್ನ ಪೂರ್ವಕವಾಗಿ ಶಮನಮಾಡಿ ಮರಳಿ ಪೆನ್ನು ಎತ್ತಿರುವೆ...

ಅಂದು ಎಷ್ಟು ಹೊತ್ತು ಹಾಗೆಯೇ ಹುಚ್ಚನಾಗಿ ಅಳುತ್ತ – ಕರೆಯುತ್ತ, ಯಾವದರ ಪರಿವಯಿಲ್ಲದೆ ಬಿದ್ದುಕೊಂಡಿದ್ದೆನೋ ಗೊತ್ತಿಲ್ಲ... ಲ್ಯಾಂಡ್ ಲೇಡಿಗೆ, ಏನೋ ಸಂಶಯ ಬಂದು ಕದ ಬಡಿದಾಗಲೇ ನನಗೆ ಎಚ್ಚರ.

"ಹಲೊ, ಉಪಾಸನಿ, ಏನಾಯಿತು... ಏನಾದರೂ... ಯಾರಾದರೂ..."

"ಏನಿಲ್ಲ––" ನಾನೆಂದೆ ಕಂಬನಿಯಿಂದ ಒದ್ದೆಯಾದ ಸ್ವರದಲ್ಲಿ.

"ಏನಾದರೂ ಸಹಾಯ ಬೇಕೇ ?..."

ಸತ್ಯೇಂದ್ರನಿಗೆ ತಿಳಿಸಬೇಕು ಎಂದು ಥಟ್ಟನೆ ಹೊಳೆಯಿತು. ಗಡಬಡಿಸಿ ಎದ್ದು ಮುಖ ಒರೆಸಿ, ಕದ ತೆರೆದೆ.

"ನಿಮಗೆ ತೊಂದರೆಯಾಗದಿದ್ದರೆ, ನೆರೆಮನೆಗೆ ಹೋಗಿ ಟೆಲಿಫೋನ್ ಮಾಡಿ ನನ್ನ ಗೆಳೆಯನಿಗೆ ಕೂಡಲೇ ಬರಲಿಕ್ಕೆ ಹೇಳಿರಿ..." ಎಂದು ಒಂದು ಕಾಗದದ ಮೇಲೆ ಸತ್ಯೇಂದ್ರನ ಹೆಸರನ್ನೂ, ಅವಳ ನೆರಮನೆಯ ಫೋನ್ ನಂಬರನ್ನೂ ಬರೆದು ಅವಳ ಕೈಯಲ್ಲಿತ್ತೆ...

"ಅಬ್ಬಾ – ಆದರೆ ಆದದ್ದಾದರೂ ಏನು ?" ಅವಳ ಕುತೂಹಲ ಪ್ರಬಲವಾಗಿತ್ತು...

* * *

ದುಃಖ, ದಿಕ್ಕುಗಾಣದ ದುಃಖ. ಜಗತ್ತನ್ನೆ ಬದಲಾಯಿಸುವ ದುಃಖ... ವೇದನೆ. ಕರಳು ಹರಿಯುವ ವೇದನೆ. ಸಾವು ಕರೆಯುವ ವೇದನೆ...

ಸುತ್ತಲೂ ಕತ್ತಲೋ ಕತ್ತಲು...

ಭೋರ್ಗರೆದು ಏರಿ ಬರುವ ಕತ್ತಲೆಯ ತೆರೆಗಳು...

..'ಅಯ್ಯೋ ಅಯ್ಯೋ ಅಯ್ಯೋ' ಇದೊಂದೇ ಆ ತೆರೆಗಳು ಉಸುರುವ ಮಂತ್ರ...

* * *

ಮಾರನೆಯ ದಿನ ಸತ್ಯೇಂದ್ರನೂ ನಾನೂ ಧಾರವಾಡ ತಲುಪಿದಾಗ ಮಧ್ಯಾಹ್ನವಾಗಿತ್ತು. ಹಿಂದಿನ ದಿನದ ರಾತ್ರೆಯ ಮಳೆಯ ಮೂಲಕ ಎಲ್ಲೆಡೆಗೆ ಕೆಸರು, ನೀರು ನಿಂತಿದ್ದವು. ಆಕಾಶದಲ್ಲಿಯ ಹರಕು – ಮುರಕು ಮೋಡಗಳು ಸೂರ್ಯಪ್ರಕಾಶವನ್ನು ಕುತ್ತಿಗೆ ಹಿಚುಕಿ ನಿರ್ಜೀವಗೊಳಿಸಿ ಕೆಳಗೆ ಚೆಲ್ಲುತ್ತಿದ್ದವು...

ಗೋಪಾಲನಿಗೆ ಮೊದಲೇ ತಾರಿನಿಂದ ನಾವು ಬರುವುದರ ಬಗ್ಗೆ ತಿಳಿಸಿದ್ದರಿಂದ ಆತ ಸ್ಟೇಶನಿನಲ್ಲಿಯೇ ಭೆಟ್ಟಿಯಾದ. ಆತ ಎಲ್ಲ ವರ್ತಮಾನ

ತಿಳಿಸಿದ : "ಶ್ರೀಕಾಂತ ಸ್ಲೀಪಿಂಗ್ ಪಿಲ್ಸುಗಳ ಓವ್ಹರ್ ಡೋಜ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡ... ಮುಂಜಾನೆ ಅವನ ತಾಯಿ ಅವನಿಗೆ ಚಹ ಒಯ್ದಾಗ ಅವಳಿಗೆ ಗೊತ್ತಾಯಿತು... ನಿನ್ನೆ ಮುಂಜಾನೆಯೇ ಪಂಚನಾಮೆಯಾಯಿತು... ಆನಂತರ ಪೋಸ್ಟಮೋರ್ಟೆಮದ ಸಲುವಾಗಿ ಶವವನ್ನೇ ಹಾಸ್ಪಿಟಲಿಗೆ ಒಯ್ದರು... ಇಂದು ಮುಂಜಾನೆ ಮರಳಿ ಒಪ್ಪಿಸಿದ್ದಾರೆ... ಈಗ ಸ್ಮಶಾನಕ್ಕೆ ಒಯ್ಯುತ್ತಿದ್ದಾರೆ... ನೇರವಾಗಿ ನಾವು ಅಲ್ಲಿಗೇ ಹೋಗೋಣ..."

ನಾವು ಕೈಚೀಲಗಳನ್ನು ಸ್ಟೇಶನಿನಲ್ಲಿಯೇ ಒಗೆದು ಟಾಂಗಾ ಏರಿದೆವು.

"ಕಾರಣ ಗೊತ್ತಾಯಿತೇ?" ಸತ್ಯೇಂದ್ರ ಕೇಳಿದ.

"ಆತ ಬರೆದಿಟ್ಟ ಸಣ್ಣ ಚೀಟಿ ಸಿಕ್ಕಿದೆ ಟೇಬಲ್ಲ ಮೇಲೆ : 'ನನ್ನ ಆತ್ಮ ಹತ್ಯೆಗೆ ನಾನೇ ಕಾರಣ. ಅದರ ಎಲ್ಲ ಹೊಣೆ ಸಂಪೂರ್ಣ ನನ್ನ ಮೇಲೆ' ಇಷ್ಟೇ ಅದರಲ್ಲಿತ್ತು.. ಪೋಲೀಸರು ಅವನ ಡೈರಿಯನ್ನು ಒಯ್ದಿದ್ದಾರೆ."

"ಶ್ರೀಕಾಂತನ ಸಂಬಂಧಿಕರು ಯಾರ್‍ಯಾರು ಬಂದಿದ್ದಾರೆ?

"ಅವನ ಕಕ್ಕ, ಅಬಚಿ, ಯಾರ್‍ಯಾರೋ ಬಂದಿದ್ದಾರೆ..."

ನನಗಂತೂ ಯಾವದೇ ಪ್ರಶ್ನೆ ಕೇಳುವ ಮನಸ್ಸಾಗಲಿಲ್ಲ. ಮೃತ್ಯುವಿನ ಸತ್ಯತೆಯ ಮುಂದೆ ಪ್ರಶ್ನೆಗಳಿಗೆ ಅವಕಾಶವುಂಟೇ?

* * *

ಜನ – ಸುತ್ತಲೂ ಜನ – ಜೀವಂತ ಅಲೆದಾಡುವ ಜನ...

ಚಿತೆಯ ಮೇಲೆ ಶ್ರೀಕಾಂತನ ಸ್ತಬ್ಧ ಮುಖ...

ಆಕಾಶದಲ್ಲಿ ಸ್ತಬ್ಧ ಕರಿ ಶೂನ್ಯತೆ...

ಬೆಂಕಿ... ಜ್ವಾಲೆ... ಜ್ವಾಲೆಗಳ ತಾಂಡವನೃತ್ಯ...

ಬೆಂಕಿಕೂಡ ಜೀವನಂತವಾಗಿದೆ –

* * *

ಯಾರೋ ನನ್ನ ಕೈ ಹಿಡಿದು ಎಳೆದರು. ಸತ್ಯೇಂದ್ರ, 'ಮುಗಿಯಿತು... ನಡೆ ಹೋಗೋಣ... ಶ್ರೀಕಾಂತನ ಮನೆಗೆ," ಎಂದ.

'ಶ್ರೀಕಾಂತನ ಮನೆಗೆ'... ಜ್ವಾಲೆ ಭುಗಿಲ್ಲೆಂದಿತು...

ಎರಡೂ ಕೈಗಳಲ್ಲಿ ಮುಖವನ್ನು ಹುಗಿದು ಕ್ರಂದಿಸಿದೆ "ಅಯ್ಯೋ, ಶ್ರೀಕಾಂತ... ನಾನೂ ಸತ್ತೆ..."

* * *

ಶ್ರೀಕಾಂತನ ತಾಯಿ ಗೋಡೆಯ ಕಡೆಗೆ ಮುಖ ಮಾಡಿ ಸುಮ್ಮನೆ

ಮಲಗಿದ್ದಳು. ಅವಳ ಬದಿಗೆ ಮೂರು ನಾಲ್ಕು ಮಹಿಳೆಯರು ಕುಳಿತಿದ್ದರು. ಅವಳ ದೇಹ ಆಗಾಗ್ಗೆ ಭೂಕಂಪದಂತೆ ನಡುಗುತ್ತಿತ್ತು. ನಾನು ಹೋಗಿ ಅವಳ ಪಾದದ ಮೇಲೆ ಕೈಯಿಟ್ಟು, 'ಮಾಂಶೀ...!' ಎಂದೆ., ಅವಳು ಸ್ತಬ್ಧಳಾದಳು. ಮುಖ ಮಾತ್ರ ತಿರುಗಲಿಲ್ಲ...

ಒಮ್ಮೆಲೆ ಎಲ್ಲಿಂದಲೊ ಜೋರಿನ ಆಕ್ರಂದ ಕೇಳಿಬಂತು. ಆ ಕೋಣೆಯ ಮೂಲೆಯಲ್ಲಿ ಸ್ಟೂಲಿನ ಮೇಲೆ ಕುಳಿತು ಕಾಮಿನಿ ರೋದಿಸುತ್ತಿದ್ದಳು : "ದಾದಾ.. ನನ್ನ ದಾದಾ... ನಮ್ಮನ್ನೆಲ್ಲ ದೂರ ಚೆಲ್ಲಿಹೋದೆಯಾ... ದಾದಾ... ದಾದಾ..."

ನಾನು ಯಾಂತ್ರಿಕವಾಗಿ ಅವಳೆಡೆಗೆ ಹೋದೆ, ಅವಳ ಕೈಹಿಡಿದು ಮೃದುವಾಗಿ ಒತ್ತಿದೆ. ಅವಳು ಮುಖವನ್ನೆತ್ತಿದಳು... ಒಮ್ಮೆಲೆ ತನ್ನ ಕಂಬನಿಯಿಂದ ವಿಕೃತವಾದ ಮುಖವನ್ನು ನನ್ನ ಹೊಟ್ಟೆಗೆ ಒತ್ತಿಹಿಡಿದು, ನನ್ನ ದೇಹವನ್ನು ಆಲಿಂಗಿಸಿ, ಇನ್ನಿಷ್ಟು ಜೋರಿನಿಂದ ಬಿಕ್ಕಿ ಬಿಕ್ಕಿ ಅಳತೊಡಗಿದಳು ; "ಗೌರೀಶ, ನಿನ್ನ ಶ್ರೀಕಾಂತ ಎಲ್ಲಿ ಹೋದ ?... ಹೇಳು, ಹೇಳು..

ನಾನು ಅವಳ ತಲೆಯ ಮೇಲೆ ಕೈಯಿಟ್ಟು ಹಾಗೆಯೇ ನಿಂತ... ಕಣ್ಣು ಮುಚ್ಚಿದೆ...

ಸತ್ಯೇಂದ್ರ ನನ್ನ ರಟ್ಟೆ ಎಳೆದಾಗಲೇ ಪರಿಸ್ಥಿತಿಯ ಅರಿವಾಯಿತು. ಅವನು ಏನೂ ಮಾತನಾಡದೆ ನನ್ನನ್ನು ಹೊರಗಿನ ಕೋಣೆಗೆ ಕರೆದೊಯ್ದು... ಆ ಬದಿಗೆ ಶ್ರೀಕಾಂತನ ಕೋಣೆಯ ಬಾಗಿಲು ಅಖಂಡವಾಗಿ ಮುಚ್ಚಿತ್ತು ಅತ್ತ ಇತ್ತ ದೃಷ್ಟಿ ಹೊರಳಿಸಿದಾಗ ಖುರ್ಚಿಗಳಲ್ಲಿ, ಕಾಟಿನ ಮೇಲೆ ಜನರೇ ಜನರು... ಕೆಲವು ಜನರು ಗುರ್ತಿನವರಿದ್ದರೂ ಎಲ್ಲರೂ ಅಪರಿಚಿತರಂತೆಯೇ ತೋರಿದರು...

ಅದರಲ್ಲಿ ಒಬ್ಬರು ಮಾತ್ರ ಯಾವ ಸಂಕೋಚವೂ ಇಲ್ಲದೆ ಮುಗಿದ ಘಟನೆಯ ಬಗ್ಗೆ ಭಾಷ್ಯೆ ಹೇಳುತ್ತಿದ್ದರು. ಅವರು ಊರಿನ ಪ್ರತಿಷ್ಠಿತ, ಶ್ರೀಮಂತ, ಸಮಾಜಸೇವಕರಾದ ಶ್ರೀಯುದ ಗಾಂಗಲರೆಂದು ಗುರ್ತಿಸಲು ತಡವಾಗಲಿಲ್ಲ.

* * *

ಪೋಲೀಸರ ಕಡೆಯಿಂದ ಶ್ರೀಕಾಂತನ ದಿನಚರಿಯನ್ನೂ ಕೆಲವು ಕಾಗದ ಪತ್ರಗಳನ್ನೂ ಮಾರನೆಯ ದಿನ ದೊರಕಿಸಿದೆವು. ಅವುಗಳಲ್ಲಿ ನನಗೆ ಬರೆದಿಟ್ಟ ಒಂದು ಪತ್ರವಿತ್ತು :

"ಗೌರೀಶ, ಕ್ಷಮಿಸಬೇಕು, ನನ್ನನ್ನು ತಿಳಿದುಕೊಳ್ಳುವದು ನಿನಗೊಬ್ಬನಿಗೆ ಶಕ್ಯ. ಆದುದರಿಂದ ನನ್ನ ದಿನಚರಿಯನ್ನು ನಿನಗೆ ಅರ್ಪಿಸುತ್ತಿರುವೆ. ಸ್ವೀಕರಿಸಬೇಕು... ಅದನ್ನು ಸುಟ್ಟುಬಿಡುವ ವಿಚಾರ ಬಂದಿತ್ತು.. ಆದರೆ, ಹೇಗಿದ್ದರೂ ನನ್ನ ನೆನಪನ್ನು

ಸುಟ್ಟುಬಿಡುವದು ನನಗೆ ಶಕ್ಯವಿಲ್ಲ.. ನಿನ್ನಲ್ಲಿ ಉಳಿಯಬಹುದಾದ ಆ ನೆನಪು ನಿಜ ವ್ಯಕ್ತಿಯ ಸತ್ಯಸ್ವರೂಪದ ಸಮೀಪ ಬರಲಿ ಎಂದೇನೋ ಅನಿಸುವದು. ಈ ಅನಿಸಿಕೆಯಲ್ಲಿ ಸ್ವಾರ್ಥವಿಲ್ಲ... ನಿನ್ನ ಮೇಲಿನ ಮಮತೆಯಿದೆ... ನನ್ನ ಬಗ್ಗೆ ವ್ಯಥಾ ತೊಂದರೆಗೆ ಈಡಾಗಬಾರದು ನೀನು... ಅಸ್ಪಷ್ಟ ಕಲ್ಪನೆ, ತಪ್ಪು ತಿಳುವಳಿಕೆಗಳಿಂದ ಉಂಟಾಗಬಹುದಾದ ಮನೋವ್ಯಥೆ ನಿನಗಾಗಬಾರದು ಎಂಬ ಚಿಂತೆಯಿಂದ ನಾನು ಈ ಹರಕು – ಮುರುಕು ದಿನಚರಿಯನ್ನು ನಿನಗೆ ಅರ್ಪಿಸುತ್ತಿರುವೆ...

ಜೀವನದಲ್ಲಿ ಗೌರೀಶ, ನಿನಗೆ ಆತ್ಮಸಿದ್ಧಿ ದೊರೆಯಲಿ ಪೂರ್ತತೆ ನಿನ್ನ ಪಾಲಿಗೆ ಬರಲಿ... Ripeness is all .... ಬೀಳುವ ಮೊದಲು ನಿನ್ನ ಆತ್ಮ ಫಲ ಮಾಗಲಿ, ಹಣ್ಣಾಗಲಿ... ನಾನಂತೂ ಮುಕ್ತನಾದೆ..."

* * *

ಮರಣದಲ್ಲಿ ಮುಕ್ತಿ ಸಿಗುತ್ತಿದ್ದರೆ ಅದನ್ನು ದೊರಕಿಸುವದು ಎಷ್ಟು ಸುಲಭ!...

ಸಾಯುವದು ಎಷ್ಟು ಸುಲಭ...

ಸಾಯಲು ಎಷ್ಟೊಂದು ಮಾರ್ಗಗಳಿವೆ... ಸ್ಲೀಪಿಂಗ್ ಪಿಲ್ಸ ಹಿಡಿದು ಎಟ್ನಾದ ಜ್ವಾಲಾಮುಖಿಯಲ್ಲಿ ಜಿಗಿಯುವದರ ತನಕ... !

ಸತ್ತನಂತರ ಮುಕ್ತಿಯ ಫಲವೇನು ?

ಸತ್ತನಂತರ ನಾನು 'ನಾನೆ'ಲ್ಲಿ ?

* * *

ಸಂಜೆಯಾದರೂ ಡಾಲಿಯ ಪತ್ತೆಯಿಲ್ಲ.

ಅವಳ ಮನೆಗೆ ಹೋಗಲೇ ?

ಊಂಹು... ಇಂದಿನ ವಿಚಿತ್ರ ಮನಸ್ಥಿತಿಯಲ್ಲಿ, ಮರಣದ ವಿಷಣ್ಣತೆ ನನ್ನ ಅಂತರಂಗವನ್ನು ಕವಿದಾಗ, ಬೇಡ... ಎಲ್ಲಿಯೂ ಹೋಗುವದು ಬೇಡ. ನಾಳೆ ಮುಂಜಾನೆ ಬೇಕಾದರೆ...

ನಾಳೆ ಮುಂಜಾನೆ ತಾರೊಂದು ಮಾಡಬೇಕು – ಸಿರ್ಸಿಗೆ... 'ಮಂಗಳವಾರ ಹೊರಡುವೆ'...

ಇರಲಿ, ನಾಳಿನದು ನಾಳೆ...

* * *

"...ನಾಳೆ ನನ್ನ ಜೀವನದ ಕೊನೆಯ ದಿನ.

ಒಮ್ಮೆ ಧೈರ್ಯದಿಂದ ನಿಶ್ಚಿಯಮಾಡಿದ ನಂತರ ಮನಸ್ಸು ಎಷ್ಟು ಶಾಂತವಾಗಿದೆ, ತಿಳಿಯಾಗಿದೆ, ಶುಚಿಯಾಗಿದೆ... ಮಾನಸಸರೋವರದ ನೀರಿನಂತೆ...

ಇಷ್ಟು ದಿನದ ಹುಚ್ಚು ರಕ್ತದಲ್ಲಿ ಸುಳಿದಾಡಿದ ಸರ್ಪ ಹೊರಗೆ ನುಸುಳಿ ಹೋಗಿದೆ. ಅದರ ಜೊತೆಗೆ ತಳಮಳ, ಕಳವಳ, ಕ್ಷೋಭೆ, ಚೈತನ್ಯ ಎಲ್ಲ ನನ್ನನ್ನು ಬಿಟ್ಟು ಹೋಗಿವೆ. ನನ್ನ ಪ್ರಾಣ ಈಗಲೇ ನನ್ನಿಂದ ಹೋದಂತಿದೆ. ...ಇಲ್ಲ, ನನ್ನ ಪ್ರಜ್ಞೆಯಿದೆ, ಇಂದ್ರಿಯಗಳಿವೆ, ಬುದ್ಧಿಯಿದೆ (ಯಾಕೆಂದರೆ ನಾನು ಬರೆಯುತ್ತಿರುವೆ).... ಹೌದು, ಆದರೆ ನನ್ನ ಜೀವನದ ಮೇನ್ ಸ್ವಿಚ್ಚೇ ಬಂದಾಗಿದೆ...

ಇರಬಹುದಿತ್ತು ಇನ್ನೂ ಎರಡು – ಮೂರು ವರ್ಷ....,

....ಇಷ್ಟೆ, ನಾನು ನಾನೆಂದಲ್ಲ–ಬೇರೊಬ್ಬನೆಂದು, ನಾನು ಮೊದಲಿನಿಂದಲೇ ಆ 'ಬೇರೊಬ್ಬ'ನಾಗಿದಿದ್ದರೆ ಅಡ್ಡಿಯಿದ್ದಿಲ್ಲ ; ಮೇರಿಯೇನು, ರೋಹಣಿಯೇನು ಇನ್ನೂ ಎಷ್ಟೋ ಸ್ತ್ರೀಯರೊಡನೆ ಆ 'ಬೇರೊಬ್ಬ'ರಾಜನಂತೆ, ಪಾಶಾನಂತೆ ಸುಖವನ್ನು ಅನುಭವಿಸಿ ಸಾವುಕಾಶವಾಗಿ ಸಾಯಬಹುದಿತ್ತು. ಆದರೆ ನಾನು ನಾನಾದ ಮೂಲಕ ನನ್ನನ್ನು 'ಬೇರೊಬ್ಬ'ನನ್ನಾಗಿ ಮಾಡುವ ಪ್ರಯೋಗ (ಅಥವಾ ಆ ಪ್ರಯೋಗ ತಾನಾಗಿಯೇ ನನ್ನ ಮೇಲೆ ಮಾಡಲ್ಪಟ್ಟಿತೇನೋ) ನನ್ನ ಕುತ್ತಿಗೆಗೆ ಬಂತು, ಉರುಲಾಗಿ... ಉಪಾಯವಿಲ್ಲ...

ನನ್ನಲ್ಲಿ ಆ 'ಬೇರೊಬ್ಬ' ಮೊದಲಿನಿಂದಲೂ ಇದ್ದಿಲ್ಲವೆಂದು ಹೇಗೆ ಹೇಳಲಿಕ್ಕಾಗುತ್ತದೆ? ದೇಹ–ಮನಸ್ಸುಗಳು ಶಿಥಿಲವಾದಾಗ ಸಮಯ ಸಾಧಿಸಿ ಆ 'ಬೇರೊಬ್ಬ' ನನ್ನ ವರ್ಚಸ್ಸು ಬೀರಿ, ನನ್ನನ್ನು ಶಕ್ತಿಯ ಆಳಾಗಿ ಮಾಡಿರಬಹುದು ಅದೂ ಶಕ್ಯವಿದೆ ಆದರೆ ಹೀಗೆ ಆಳಾಗಿ ಇರುವದು ನನ್ನ ಆತ್ಮಕ್ಕೆ ಸಹಿಸಲಿಲ್ಲ....

ಆ 'ಬೇರೊಬ್ಬ' (ಮೇರಿಯ ಮಾತಂತೂ ಬೇರೆ) ರೋಹಿಣಿಯನ್ನೂ ಆಹುತಿಗೊಂಡನೆಂದು ನನ್ನ ಜೀವ ಚಡಪಡಿಸಿತೆ? ಇಲ್ಲ.... ಅದು ರೋಹಿಣಿಯ ಹೊಣೆಯಾಗಿತ್ತು. ಅವಳ ತನ್ನ ತನ್ನ ತನವನ್ನು (ಅವಳಲ್ಲಿ ಬೇರೊಂದಿದ್ದಿದ್ದರೆ) ಕಾಪಾಡಿಕೊಳ್ಳಬಹುದಿತ್ತು... ನನ್ನ ವೇದನೆ ಅದಲ್ಲ – ಆ "ಬೇರೊಬ್ಬ"ನ ಪ್ರಭಾವ ನನ್ನನ್ನು ಸಂಪೂರ್ಣ ನುಂಗಿದೆ ಎಬುದರ ಪ್ರತೀತಿ ರೋಹಿಣಿಯ ಮೂಲಕ ನನಗಾಯಿತು – ಅದೇ ನನ್ನ ವೇದನೆ... ಇದಕ್ಕೆ ಬೇಕಾದರೆ 'ಅವನತಿ' ಎಂದು ಕೆಲವರನ್ನಬಹುದು. ನನ್ನ ಪ್ರಕಾರ ಇದು 'ಅವನತಿ' – 'ಉನ್ನತಿ'ಯ ಪ್ರಶ್ನೆಯಲ್ಲ – ಎರಡು ಶಕ್ತಿಗಳ ಹೋರಾಟ... ಇದಕ್ಕೆ ಇನ್ನು ಕೆಲವರು ಪಾಪ–ಪುಣ್ಯಗಳ ಹೋರಾಟ, ದೇವ–ದಾನವರ ಹೋರಾಟ, ಯೋಗ್ಯ – ಅಯೋಗ್ಯ, ಬೇಕು–ಬೇಡ, ಒಳ್ಳೆಯದು – ಕೆಟ್ಟದ್ದು ಇವುಗಳ ಹೋರಾಟ ಎಂದು ಬೇರೆ ಬೇರೆ ಹೆಸರು ಕೊಡಬಹುದು.... ಆದರೆ ಇಂಥ ಮೌಲ್ಯಗಳನ್ನು ನಿರ್ಣಯಿಸುವ ಶಕ್ತಿ, ಬುದ್ಧಿ ನನ್ನಲ್ಲಿ ಇನ್ನೂ ಬಂದಿಲ್ಲ.... ನನ್ನ ದೈಹಿಕ ಆರೋಗ್ಯ – ಶಕ್ತಿಗಳು ನನ್ನ

ಬೆಂಬಲಕ್ಕೆ ಇದ್ದಿದ್ದರೆ ಬಹುಶಃ ಆ ಎರಡು ಶಕ್ತಿಗಳ ಹೋರಾಟ ಆಗುತ್ತಲೇ ಇರಲಿಲ್ಲ, ಆದರೂ ಪರಿಣಾಮ ಬೇರೆಯಾಗಬಹುದಿತ್ತು...ನನ್ನ ಬಗ್ಗೆ ಹೇಳುವದಾದರೆ ನಿಜವಾಗಿಯೂ ನನ್ನ ರೋಗ ನನ್ನ ನಾಟಕದ ಖಲನಾಯಕ: ರೋಗ–ಮೃತ್ಯುವಿನ ಅಖಂಡ ಅರಿವು – ದುರ್ಬಲ ದೇಹ – ಉತ್ಕಟತೆಯ ಹಂಬಲ.... 'ಬೇರೊಬ್ಬನದಾಳಿ – ಆದುದರಿಂದ ನಾನು ಇನ್ನೂ ನಾನಾಗಿರುವಾಗಲೇ ಜೀವನದ ರಂಗಭೂಮಿಯಿಂದ ನಿಷ್ಕ್ರಮಣ ಮಾಡುತ್ತಿರುವೆ....

ಹೀಗೆ ನಿಷ್ಕ್ರಮಣ ಮಾಡುವದು ನೈತಿಕ ದೃಷ್ಟಿಯಿಂದ ಗುನ್ಹೆಯೇ? ಕಾಯಿದೆಯಿಂದ ಗುನ್ಹೆ ನಿಜ. ನನ್ನ ಜೀವದ ಮೇಲೆ (ಅದನ್ನು ನಾನು ಹುಟ್ಟಿಸಿಲ್ಲ, ನನ್ನ ಅಧಿಕಾರವಿಲ್ಲ? ದೇವರದೇ? ಸಮಾಜದ್ದೇ? ತಂದೆ ತಾಯಿಗಳದೇ? ಟೀ.ಬಿ. ಯ ಬ್ಯಾಸಿಲಸ್ಸುಗಳದೇ?.... ಯಾರ ಅಧಿಕಾರವಿದ್ದರೇನು, ನನ್ನದೂ ಸ್ವಲ್ಪಾದರೂ ಇದೆಯಲ್ಲವೇ? ,... ನೀತಿ–ನೀತಿ ಸಮಾಜ – ಸಾಪೇಕ್ಷವಾದ ಮಾತು: ಜಪಾನದಲ್ಲಿ ಆತ್ಮಹತ್ಯೆ ನೈತಿಕ ದೃಷ್ಟಿಯಿಂದ ಅಭಿಮಾನಾಸ್ಪದ ಸಂಗತಿಯಾಗಿದೆ...ದೇಶದ ಸಲುವಾಗಿ, ಆದರ್ಶದ ಸಲುವಾಗಿ ತತ್ತ್ವದಸಲುವಾಗಿ ಆತ್ಮಬಲಿದಾನ ಮಾಡುವದು ಅತ್ಯಂತ ಉಚ್ಚ ಕಾರ್ಯ ಎಂದು ಹೇಳಲ್ಪಡುವದಿಲ್ಲವೇ?.... ರೋಮಿಯೋ – ಜ್ಯುಲಿಯೆಟ್ಟರ ಆತ್ಮಹತ್ಯೆ, ಕ್ಲಿಯೋಪಾತ್ರಾಳ ಆತ್ಮಹತ್ಯೆ, ಆಥಿಲೋನ ಆತ್ಮಹತ್ಯೆ ನಮ್ಮ ಕೌತಕಕ್ಕೆ ಪಾತ್ರವಾಗುವದಿಲ್ಲವೇ?....

ಥೂ, ಇದೆಲ್ಲ ಆತ್ಮ ಸಮರ್ಥನೆ ಏಕೆ? ನಾನು ಒಮ್ಮೆ ನಿಶ್ಚಯ ಮಾಡಿದಾಗ ಈ ಆತ್ಮಸಮರ್ಥನೆ ಹೇಡಿತನದ ಲಕ್ಷಣವಾದೀತು! ಆದರೆ ಇದು ಆತ್ಮ ಸಮರ್ಥನೆಯಲ್ಲ, ನನ್ನ ಮನಸ್ಸಿನ ಯಾಂತ್ರಿಕ ಚಟ!

ನನಗೆ ಜೀವನ್ಮರಣ ಅಸಹ್ಯವಾಗಿದೆ. ಆ 'ಬೇರೊಬ್ಬ'ನ ಪ್ರಭಾವ ಅಸಹ್ಯವಾಗಿದೆ.... ಜೀವನದ ಶೂನ್ಯತೆಗಿಂತ ಮರಣದ ಶೂನ್ಯತೆ ಲೇಸು. ಮೊದಲನೆಯದರಲ್ಲಿ ವೇದನೆಯಿದೆ. ಎರಡನೆಯದರಲ್ಲಿ ಮುಕ್ತಿಯಿದೆ. ವೇದನೆ ಸಾಕಾಗಿದೆ.... ವೇದನೆಯನ್ನು ಅಮೃತಗೊಳಿಸುವ ಚೈತನ್ಯ ಇಲ್ಲದಾಗಿದೆ...

ನಾಳೆ ರಾತ್ರೆ ನಾನು ಶಾಂತವಾಗಿ ಮಲಗುವೆ... ನಿಃಸ್ವಪ್ನವಾದ ಅನಂತವಾದ ನಿದ್ರೆಯಲ್ಲಿ ಕರಗಿ ಹೋಗುವೆ...."

"ಎಲ್ಲ ಸಿದ್ಧವಾಗಿದೆ...

ತಾಯಿ, ತಂಗಿ, ಗೆಳೆಯರು... ಅವರಿಗೆ ಬರಲಿರುವ ದುಃಖ ಕೊಂಚ ಬೇಗ ಬರುತ್ತದೆ. ಉಪಾಯವಿಲ್ಲ....

ನನಗೂ ದುಃಖವಾಗುತ್ತಿದೆ. ಹೃದಯ ತುಂಬಿ ಬಂದಿದೆ....

ನಾನು ಇಂದೇ 'ಅಯ್ಯೋ' ಎನ್ನುತ್ತಲಿರುವೆ. ಅವರು ನಾಳೆ 'ಅಯ್ಯೋ' ಎನ್ನುವರು.

ಎಲೆ ಜೀವನವೇ, ನಿನಗೆ ಅನಂತ ವಂದನೆಗಳು. ಮೃತ್ಯು ನಿನ್ನ ಅಭಿನ್ನವಾದ ಮಗುದೊಂದು ಮುಖ. ನಾನು ನಿಮ್ಮ ಕೂಸು ಮಾತ್ರ... ಆಟ–ನಲಿವು–ಉಲಿವು–ಅಳುವು ಎಲ್ಲ ಸಾಕಾಗಿದೆ, ನಿದ್ದೆ ಬಂದಿದೆ. ನಿನ್ನ ಅನಂತ ಎದೆಯಾಸರೆಯಲಿ ನನ್ನ ಕಣ್ಣು ಮುಚ್ಚಲಿ, ಮುಗಿಯಲಿ.

ಅಹ ! ಮುಖ್ಯ ನಾನು ನಾಗಿರುವೆ – ಇಂದು....

ನಾಳಿನದು ಯಾರಿಗೆ ಗೊತ್ತು ?

ದೇವರಿಗೆ ?

* * *

ಶ್ರೀಕಾಂತ, ಈಗ ನೀನಿಲ್ಲ, ನಿಜ.

ಆದರೆ ನಾನು ನಿನ್ನೊಡನೆ ಮಾತನಾಡಬಲ್ಲೆ, ನಿನ್ನ ಜೊತೆಗೆ ಇರಬಲ್ಲೆ... ನಾನು ಇರುವವರೆಗೆ....

ಯಾವುದೋ ಜೀವಶಕ್ತಿ ಈ ಸೃಷ್ಟಿಯನ್ನು ವ್ಯಾಪಿಸಿದಂತೆ ನಿನ್ನ ಶಕ್ತಿ ನನ್ನ ಆತ್ಮವನ್ನು ವ್ಯಾಪಿಸಿದೆ....

ಕಿಂಚಿತ್ತಾದರೂ ನೀನು 'ನಾನಾ'ಗಿರುವೆ.

ವೈಜ್ಞಾನಿಕವಾಗಿ, ಭೌತಿಕ ಸ್ವರೂಪದಲ್ಲಿ ನಾನಿದನ್ನು ತೋರಿಸಲಾರೆ, ನಿಜ. ಆದರೆ ತೋರಿಸುವ ಅವಶ್ಯಕತೆಯೇನಿದೆ ?

ಶ್ರೀಕಾಂತ, ನೀನಿಲ್ಲ... ನೀನಿರುವಿ.

ನಿನ್ನ ಮುಕ್ತಿಯ ಕ್ಷಿತಿಜದ ದಿಶೆಯಲ್ಲಿಯೇ ನನ್ನ ಮುಕ್ತಿಯ ದಾರಿಯಿದೆ....

ನೀನೇ ನನ್ನ ಮಹಾದ್ವಾರ...

* * *

ಯಾರೋ ಕದ ಬಡೆಯುತ್ತಿದ್ದಾರೆ... ಹನ್ನೊಂದು ಬಡಿದಿದೆ... ಯಾರು? ಡಾಲಿ!

* * *

ಮುಂಬಯಿಯ ನಸುಕಿನಲ್ಲಿ ಒಮ್ಮೊಮ್ಮೆ ಎಷ್ಟೊಂದು ಪ್ರಸನ್ನತೆ ತುಂಬಿರುತ್ತದೆ....

ಅಥವಾ ಈ ಪ್ರಸನ್ನತೆಯ ಜನನಿ ಡಾಲಿಯೇ

ಡಾಲಿ ! ಎಷ್ಟೊಂದು ಮುಗ್ಧತೆಯಿದೆ ನಿನ್ನ ಈ ನಿದ್ರಿಸುವ ಮುಖದಲ್ಲಿ ! ಅಹ, ಎಷ್ಟೊಂದು ಸೌಂದರ್ಯ ! ಅಹುದು, ನಾನು ಇದಕ್ಕೇನೇ ಸೌಂದರ್ಯವೆನ್ನುವೆ : ಮೂಗಿನ ತುದಿ ಸ್ವಲ್ಪ ಮೇಲೆದ್ದರೇನು. ಗಲ್ಲದ ಮೂಳೆಗಳು ಸ್ವಲ್ಪ ಎತ್ತರವಾಗಿದ್ದರೇನು, ಗಲ್ಲ ಸ್ವಲ್ಪ ಒಳಗೆ ಹೋಗಿದ್ದರೇನು – ಅವಳ ಮೋರೆಯ ಮೇಲಿನ ಈ ಮುಗ್ಧತೆ, ಕೋಮಲತೆ, ಶಾಂತತೆ, ಅವಳ ತುಟಿಯ ತುದಿಗೆ ಅರಳಿದ ಮೃದುಹಾಸ್ಯ, ಅವಳ ಹಣೆಯ ಮೇಲೆ ಪ್ರೀತಿಯಂತೆ ಪವಡಿಸಿದ ಕುರುಳುಗಳು – ಇವುಗಳ ದರ್ಶನದಿಂದ ಹೃದಯ ತುಂಬಿ ಬರುತ್ತಿದೆ. ಹೋಗಿ ಆ ಮೊಗವನ್ನು ಎದೆಗೆ ಅವಚಿ ಹಿಡಿಯುವ ಹಂಬವಾಗುತ್ತಿದೆ....

"ಗೌರೀ ನಾನು ಒಳಗೆ ಬರಲೇ ?" ಅವಳ ಇಳಿದ ಮುಖದಲ್ಲಿ ಮ್ಲಾನ ಹಾಸ್ಯವಿತ್ತು. "ನನ್ನಿಂದ ನಿನಗೆ ತೊಂದರೆಯೇ ?"

"ನಾನು ನಿನ್ನೆಯಿಂದ ದಾರಿ ಕಾಯುತ್ತಿರುವೆ. ಇಂದು ಸಂಜೆ ನಿಮ್ಮ ಮನೆಗೆ ಬರುವ ವಿಚಾರ ಕೂಡ ಬಂದಿತ್ತು. ಡಾಲಿ, ನೀನು ಬರಲಿಲ್ಲೇಕೆ ಇಷ್ಟು ದಿನ ?" ಅವಳ ಕೈ ನನ್ನ ಕೈಯಲ್ಲಿತ್ತು.

"ನಾನು ಬರಲೇಬಾರದೆಂದು ಮಾಡಿದ್ದೆ...." ಅವಳ ಧ್ವನಿ ಸಣ್ಣಾಗಿತ್ತು.

"ಹಾಗಾದರೆ ಬಂದೆ ಏಕೆ – ಅದೂ ಇಷ್ಟು ರಾತ್ರೆ ?"

"ಮನೆಯಿಂದ ಓಡಿಬಂದಿರುವೆ." ಡಾಲಿ ನಕ್ಕಳು

"ಓಡಿ ?"

"ಹ್ಞಂ, ಓಡಿ ಹೀಗೇಕೆ ಹೆದರಿದಂತೆ ಮುಖ ಮಾಡಿರುವಿ ?" ಅವಳ ನಗೆ ತೆರೆತೆರೆಯಾಯಿತು.

"ಸುಮ್ಮನೆ ಚೇಷ್ಟೆ ಮಾಡುವಿಯೇನ ? ನಿಜ ಹೇಳು."

"ನೀನು ಊಹಿಸು – ನಿನ್ನ ಕಲ್ಪನಾಶಕ್ತಿ ಎಷ್ಟಿದೆ ನೋಡೋಣ."

"ಹುಂ – ನೀನು ಯಾವುದೋ ಲಫಂಗನೊಡನೆ ಟ್ರಿಪ್ಪಿಗೆ ಹೋಗಿ ಈಗ ಮರಳುತ್ತಿರುವಿ. ಒಂದು ಅರ್ಧ ತಾಸು ನನ್ನನ್ನು ಮಂಕುಗೊಳಿಸಿ ಹೋಗಲು ಬಂದಿ. ಹೌದೋ ಅಲ್ಲವೋ"

"ವಾಹ್, ಗೋರಿ – ಏನು ಅದ್ಭುತವಪ್ಪ ನಿನ್ನ ಕಲ್ಪನಾಶಕ್ತಿ !"

"ಆದರೆ – ಹೇಳು – ಮತ್ಯಾರನ್ನಾದರೂ ನೀನು ಹಿಡಿದಿರುವಿಯೋ ಇಲ್ಲವೋ?" ನನ್ನ ಅಂಕೆ ಮೀರಿ ಹೊರಬಿತ್ತು ಪ್ರಶ್ನೆ.

"ಅಸೂಯೆ ! ಯಾಕಪ್ಪಾ ಅಸೂಯೆ.. ನಿನ್ನದೇನು ಗಂಟು ಹೋಗುವದು ನಾ ಬೇರೆಯವರೊಡನೆ ಹೋದರೆ ? ನಾನೇನು ನಿನ್ನ ಲಗ್ನದ ಹೆಂಡತಿಯೇ?"

ಅವಳ ಕಣ್ಣು ಮುಖವನ್ನರಿಸಿದವು.

"ಡಾಲಿ, ಪ್ಲೀಜ್ ಸಿಟ್ಟಿಗೇಳಬೇಡ... ನನ್ನ ಊಹೆ ತಪ್ಪಿತು."

"ನಿನಗೆ ಹೇಗೆ ಗೊತ್ತಾಯಿತು ? ನಾನೆಲ್ಲಿ ಹೇಳಿದೆ ನಿನ್ನ ಊಹೆ ತಪ್ಪಿತೆಂದು?"

"ನನಗೆ ಇಲ್ಲಿ ಅನಿಸುವದು." ಅವಳ ಕೈಯನ್ನು ನನ್ನ ಹೃದಯಕ್ಕೆ ಒತ್ತಿಹಿಡಿದೆ.

"ನಿಜವಾಗಿಯೂ ?"

"ಹುಂ...."

"ಹಾಗಾದರೆ ನಿನಗೆ ಹೃದಯವಿದೆ ಎನ್ನಬೇಕು." ಡಾಲಿ ನಕ್ಕಳು. ನಾನು ಸುಮ್ಮನಿದ್ದೆ.

ಒಮ್ಮೆಲೆ ಡಾಲಿಯ ಮುಖದ ಭಾವ ಬದಲಿಸಿತು. ಗಂಭೀರಳಾದಳು. "ಗೌರೀ ನಿನ್ನ ಮೈ ಕೊಂಚ ಬೆಚ್ಚಗಿದೆ. ನಿನ್ನ ಮುಖ ಎಷ್ಟು ಇಳಿದಿದೆ !"

"ಇಲ್ಲ." ನಾನೆಂದೆ.

"ನಾನೇನು ಚೇಷ್ಟೆ ಮಾಡುತ್ತಿರುವೆನೇ ? ಏನಾಗಿದೆ, ಗೋರಿ ?"

"ಏನಿಲ್ಲ. ಬಹುಶಃ ಇಡೀ ದಿನ ಬರೆದು ದಣಿವಾಗಿರಬೇಕು."

"ಏನು ಬರೆದಿ ಇಂದು ?"

"ಶ್ರೀಕಾಂತನ ಮೃತ್ಯುವಿನ ವಿಷಯ..."

"ಹಾಂ – ಅದೇ ನಿನ್ನ ದೇಹದ ಮೇಲೆ ಪರಿಣಾಮ ಮಾಡಿರಬೇಕು. ಗೋರೀ, ನೀನು ಮುಚ್ಚಲು ಎಷ್ಟೇ ಪ್ರಯತ್ನ ಮಾಡಿದರೂ, ನೀನು ಭಾವನಾಪ್ರಧಾನ ಮನುಷ್ಯನಿರುವಿ... ನಿನ್ನ ಭಾವನೆಗಳೆಂದರೆ ತೀರ ಕೋಮಲ,

ತೀರ ಮೃದು..."

"ನಿನಗೆ ಹೇಗೆ ಗೊತ್ತು ?" ನಾನು ಆಶ್ಚರ್ಯದಿಂದ ಕೇಳಿದೆ.

"ನನಗೆ?" ಜೋರಿನಿಂದ ನಕ್ಕಳು. "ಗೋರಿ ಡಾರ್ಲಿಂಗ್, ನೀನು ನಿಜಕ್ಕೂ ಪೆದ್ದ ಕೂಸು, silly child... ನಿನ್ನಂಥ ಕೂಸು ಬೇಕು ನನಗೆ.... ಗೋರೀ, ನಾನು ಹೇಳಿದಂತೆ ಸ್ವಲ್ಪ ಕೇಳು ನೋಡೋಣ... ನೀನಿಲ್ಲಿ ಕಾಟಿನ ಮೇಲೆ ಒರಗು– ಹಾಂ–ಹೀಗೆ... ನಾನು ಎರಡು ನಿಮಿಷಯದಲ್ಲಿ ಒಳ್ಳೆಯ ಸ್ಟ್ರಾಂಗ್ ಕಾಫಿ ಮಾಡುವೆ... ಆಮೇಲೆ ನೀನು ನನಗೆ ಇಂಗ್ಲೀಷಿನಲ್ಲಿ ಭಾಷಾಂತರ ಮಾಡಿ ಹೇಳು, ನೀನು ಏನೇನು ಬರೆದಿರುವಿ ಎನ್ನುವದು...."

"ಆದರೆ ನೀನು ಬೇಗ ಹೋಗಲಿರುವಿಯಷ್ಟೇ ?" ಆಶಂಕೆಯಿದೆ ಕೇಳಿದೆ.

"ಇಲ್ಲ. ಇಂದು ನಾನು ಹೋಗುವುದಿಲ್ಲ."

"ವಂಡರ್‌ಫುಲ್... ಇದನ್ನು ಹೇಗೆ ಯೋಜಿಸಿದಿ ?"

"ನನ್ನ ಗೆಳತಿ ಲಿಝಿ ಸಿಕ್ಕಿದ್ದಾಳೆ. ಅವಳನ್ನು ನೋಡಲು ಯಾರೂ ಇಲ್ಲ – ಅವಳ ಜೊತೆಗೆ ರಾತ್ರೆ ಇದ್ದು ಬರುವೆ ಎಂದು ಹೇಳಿ ಬಂದಿರುವೆ."

"ನಿನ್ನ ತಾಯಿ ಇದನ್ನು ನಂಬಿದಳೇ ?"

"ನಂಬಲಿ, ಬಿಡಲಿ, ಅದನ್ನು ತೆಗೆದುಕೊಂಡೇನು ಮಾಡುವದಿದೆ ನಿನಗೆ?"

"ನೀನು ಗ್ರೇಟ್ ಇದ್ದೀ–ಆತು !"

"ಒಂದು ಮುತ್ತು ಕೊಡು ನೋಡೋಣ – ನಿನ್ನ ಮೆಚ್ಚಿಗೆ ತೋರಿಸಲು .... ವಾಹ್, ಮುತ್ತು ಸಹ ಕೇಳಿ ದೊರಕಿಸಬೇಕು ನಿನ್ನಿಂದ – ಸಿಲ್ಲಿ ಗೂಜ್ !"

ನಮ್ಮ ಕಾಫಿ ಮುಗಿದ ನಂತರ ಡಾಲಿ ಕಾಟಿನ ಮೇಲೆ ನನ್ನ ಬದಿಗೆ ಮಗ್ಗುಲಲ್ಲಿ ಒರಗಿ ಆಜ್ಞಾಪಿಸಿದಳು : "ಹುಂ, ಗೋರಿ, ಓದಿ ಹೇಳೀಗ !"

"ಎಲ್ಲಿಂದ ಸುರುಮಾಡಲಿ?"

" ನಿನಗೆ ಬೇಕಾದಲ್ಲಿಂದ."

"ಮೊದಲಿನಿಂದ ಸುರುಮಾಡಿದರೆ ಮೂರು–ನಾಲ್ಕು ತಾಸು ಬೇಕಾದಾವು."

"ಸ್ವಲ್ಪ ಸಂಕ್ಷೇಪಿಸಿ ಹೇಳು ಬೇಕಾದರೆ...."

ನಾನು ಶ್ರೀಕಾಂತನ ಮೃತ್ಯುವಿನ ವಿಷಯದ ತನಕ ಹೇಳಿ ಮುಗಿಸಿದಾಗ ರಾತ್ರೆ ಒಂದಾಗಿತ್ತು. ಡಾಲಿಯ ಮುಖ ಗಂಭೀರವಾಗಿತ್ತು. ಅವಳ ಕಣ್ಣುಗಳು ಸಹಾನು ಭೂತಿಯಿಂದ ಒದ್ದೆಯಾದಂತಿದ್ದವು... ನನ್ನ ಹೃದಯ ವಿಲಕ್ಷಣವಾಗಿ ಹಗುರಾಗಿತ್ತು. ಒಂದು ಬಗೆಯ ಅಸಾಧಾರಣ ಆನಂದ ಕೂಡ ನನ್ನ ಹೃದಯದಲ್ಲಿ ಸುಳಿಯುತ್ತಿತ್ತು. ಅದೇನು ಕಲಾತ್ಮಕ ಆನಂದವೋ (catharsis) ಅಥವಾ ಡಾಲಿಯ ಸಹಾನುಭೂತಿ ನನ್ನಲ್ಲಿ ಉಂಟುಮಾಡಿದ ಆತ್ಮ ಸಮಾಧಾನವೋ ಅಥವಾ ಎರಡೂದರ ಸಂಗತಿಯೋ? ಇಷ್ಟು ಮಾತ್ರ ನಿಜ: ಡಾಲಿಯ ಸಾಮೀಪ್ಯ ನನ್ನಲ್ಲಿ ಒಂದು ರೀತಿಯ ಮುಕ್ತಿಯ ಭಾವವನ್ನು ನೀಡಿತು; ನನ್ನ ಭೂತ ಜೀವನ ಇನ್ನಿಷ್ಟು ದೂರವಾದಂತೆನಿಸಿತು....ಅವಳಿಗೆ ಹೇಳುವಾಗ, ನನಗೆ ಗೊತ್ತಿಲ್ಲದೆಯೇ ಅವಳ ದೃಷ್ಟಿಯಿಂದ ನೋಡುತ್ತಿದ್ದುದರಿಂದಲೋ ಏನೋ, ನನ್ನ ಗತಿಸಿದ ಇತಿಹಾಸದ ಬಗ್ಗೆ ವಸ್ತುನಿಷ್ಠತೆ ನನ್ನಲ್ಲಿ ಬಂದಿರಬೇಕು: ಆದುದರಿಂದಲೇ ಒಂದು ಬಗೆಯ ವಿಮೋಚನೆಯ ಅನುಭವ, ಮುಕ್ತಿಯ ಅನುಭವ ನನ್ನಲ್ಲಿ ಉಂಟಾಗಿರಬೇಕು.

ನಂತರ ಈ ನೋಟಬುಕ್ಕನ್ನು ಬದಿಗಿರಿಸಿ, ಡಾಲಿಯನ್ನು ಹತ್ತಿರ ಎಳೆದು ಕೇಳಿದೆ : "ಡಾಲಿ ನಿನಗೇನನಿಸುವದು ಹೇಳು ನನ್ನ ಕತೆಯ ಬಗ್ಗೆ."

ಡಾಲಿಯಲ್ಲಿ ವಿಲಕ್ಷಣ ಮೃದುತ್ವ ಬಂದಿತ್ತು. ನನ್ನ ಎದೆಯಲ್ಲಿ ತನ್ನ ತಲೆಯನ್ನು ತಿಕ್ಕುತ್ತ ಪಿಸುನುಡಿದಳು :

"ಗೋರಿ... ನಿನ್ನನ್ನು ನಾನು ನಿಜಕ್ಕೂ ಪ್ರೀತಿಸುತ್ತೇನೆ, I love you, ಗೋರಿ...."

"ಅದಲ್ಲ ನಾನು ಕೇಳಿದ್ದು. ಶ್ರೀಕಾಂತನ ಬಗ್ಗೆ ಹಾಗೂ ಕಾಮಿನಿಯ ಬಗ್ಗೆ ಏನನಿಸುವದು?"

"ಅವರ ಬಗ್ಗೆ ನಾನೇನು ಹೇಳಬಲ್ಲೆ? ಶ್ರೀಕಾಂತ ದೊಡ್ಡ ಮನುಷ್ಯನಿರಬಹುದು. ಆದರೆ ಅವನಂಥವನನ್ನು ಪ್ರೀತಿಸುವದು ನನಗಂತೂ ಶಕ್ಯವಿಲ್ಲ.... ನನಗೆ ನನ್ನ ಗೋರಿಯೇ ಬೇಕು... ಕಾಮಿನಿಯ ಬಗ್ಗೆ ಸ್ಪಷ್ಟ ಕಲ್ಪನೆ ನನಗೆ ಬಂದಿಲ್ಲ... ಆದರೆ ನೀನು ಅವಳನ್ನು ಪ್ರೀತಿಸುತ್ತೀಯೆಂಬ ಮಾತು ಖಂಡಿತ... ಗೋರಿ, ಅವಳನ್ನು ಲಗ್ನವೇಕಾಗಬಾರದು ನೀನು

"ಡಾಲಿ, ನಿನಗೆ ತಲೆಯೇ ಇಲ್ಲ ನೋಡು... ಅದೇನೋ ನಮ್ಮ ಭಾಷೆಯಲ್ಲಿ ಹೇಳುತ್ತಾರೆ : ರಾಮಾಯಣ ಕೇಳಿದ ನಂತರ ಯಾರೋ ಸೀತೆ ರಾಮನಿಗೆ ಏನಾಗಬೇಕು ಎಂದು ಕೇಳಿದನಂತೆ! – ನಿನಗೆ ಸ್ಪಷ್ಟ ಗೊತ್ತಾಗಲಿಲ್ಲೆಂದು ಕಾಣುವದು... ನನ್ನ – ಕಾಮಿನಿಯ ಮೊದಲಿನ ಸಂಬಂಧ ಹಾಗೂ ಈಗಿನ ಸಂಬಂಧ...'

"ಏನಿದ್ದರೂ ಎರಡೂದರ ಪಲ್ಲವಿ ಒಂದೇ. ಅವಳ ಮೇಲಿನ ನಿನ್ನ ಪ್ರೇಮ... ನೀನು ಎಷ್ಟೇ ಅದನ್ನು ಹತ್ತಿಕ್ಕಲು ಯತ್ನಿಸಿದರೂ ಎಷ್ಟೇ ಅದರಿಂದ ದೂರ ಓಡಬೇಕೆಂದರೂ ಅದು ನಿನ್ನನ್ನು ಬಿಡಲಾರದು. ನಾನು ಹೇಳುವದು ಸತ್ಯವೋ ಅಸತ್ಯವೋ ಹೇಳು ನೋಡೋಣ."

"ನೀನು ಹೇಳುವದು ಸತ್ಯವೆಂದು ಗೃಹಿತ ಹಿಡಿದರೂ ಕೂಡ ಅವಳನ್ನು ನಾನು ಲಗ್ನವಾಗುವದು ಅಶಕ್ಯವಾದ ಮಾತು.... ಅವಳೊಡನೆ ಇರುವುದೇನೆಂದರೆ 'ಹೆಲ್' – ಒಂದು ಬಗೆಯ ನರಕ...."

"ಅವಳಲ್ಲಿ ನಿನಗೆ ಸುಖ ದೊರೆಯಲಿಕ್ಕಿಲ್ಲ, ಆದರೆ ಅವಳ ಹೊರತು ನಿನಗೆ ಸುಖ ದೊರೆಯಲಾರದು."

"ಸುಖದ ಪ್ರಶ್ನೆಯಲ್ಲ ನನ್ನದು. ನನ್ನದು ಮುಕ್ತಿಯ ಪ್ರಶ್ನೆ...."

"ನಿನ್ನ ಮುಕ್ತಿ ಕೂಡ ನಿನಗೆ ದೊರೆಯಲಾರದು." ಅವಳ ವಾಕ್ಯ ವೇದ ವಾಕ್ಯದಂತಿತ್ತು !

ಮುರ್ಖಳಂತೆ ಏನಾದರೊಂದು ಹೇಳಬೇಡ. ಸ್ತ್ರೀಯಲ್ಲಿಯೇ ನನ್ನ ಮುಕ್ತಿಯಿದ್ದರೆ ಅದು ನಿನ್ನಂಥವಳಲ್ಲಿದೆ, ಅಲ್ಲ, ನಿನ್ನಲ್ಲಿಯೇ ಇದೆ..." ನಾನು

ಅಷ್ಟೇ ದೃಢವಾಗಿ ಹೇಳಿದೆ.

"ಹಾಗಿದ್ದರೆ ನೀನು ಮೊದಲಿನಿಂದಲೂ ನನ್ನನ್ನು ಪ್ರೀತಿಸುತ್ತಿರಬೇಕಿತ್ತು – ನನ್ನನ್ನು ಆಫ್ರಿಕೆಗೆ ಕರೆದೊಯ್ಯುವದರ ಸಲುವಾಗಿ ಹಟ ಹಿಡಿಯಬೇಕಾಗಿತ್ತು...."

ನಾನು ನಿರುತ್ತರನಾದೆ.

"ಗೋರಿ, ಮುಕ್ತಿ–ಗಿಕ್ತಿ ಎಂಬ ಹುಚ್ಚುತನ ಬಿಟ್ಟುಬಿಡು. ಹೋಗು ತಿರುಗಿ ಕಾಮಿನಿಯ ಕಡೆಗೆ. ಅವಳನ್ನು ಲಗ್ನವಾಗು. ಅವಳೊಡನೆ ಸಂಸಾರ ಮಾಡು. ಲಗ್ನವಾದ ಮೇಲೆ ಎಲ್ಲ ಸರಿಹೋಗುತ್ತದೆ..."

"ಅದು ಶಕ್ಯವಿಲ್ಲ..." ನಾನು ವಿರೋಧಿಸಿದೆ.

"ಶ್ರೀಕಾಂತನ ಸಲುವಾಗಿಯಾದರೂ ಆತನ ತಂಗಿಯ ಉದ್ಧಾರ ಮಾಡಬೇಕು ನೀನು...."

"ಡಾಲೀ ನೀನು ಬಹಳ ಒಳ್ಳೆಯವಳು. ನಿನ್ನಲ್ಲಿ ಈ ಒಳ್ಳೆಯತನ ಯಾರು ತುಂಬಿದ್ದಾರೋ ಏನೋ? ಕ್ರೈಸ್ತನೇ ಇರಬೇಕು. ಕ್ರೈಸ್ತನ ಕ್ಷಮಾಬುದ್ಧಿ, ಅವನ ತ್ಯಾಗಬುದ್ಧಿಯ ಪಾಠವನ್ನೇ ನನಗೆ ಈಗ ಹೇಳುತ್ತಿರುವಿ ನೀನು..."

"ಹೌದು – ನೀನೇನೋ ಮುಕ್ತಿ ಮುಕ್ತಿಯೆಂದೆನ್ನುತ್ತಿದ್ದಿಯಲ್ಲ... ಮುಕ್ತಿ ಎಲ್ಲವನ್ನೂ ಬಿಟ್ಟು ಓಡಿಹೋಗುವದರಲ್ಲಿಲ್ಲ.... ಪ್ರೀತಿಯಲ್ಲಿ, ದಯಾ ಧರ್ಮ (charity)ದಲ್ಲಿ ತ್ಯಾಗದಲ್ಲಿ, ಕ್ಷಮಾಬುದ್ಧಿಯಲ್ಲ ನಿಜವಾದ ಉದ್ಧಾರವಿದೆ... ತಿಳಿದು ನೋಡು...."

"ಡಾಲಿ, ಅದು ದೊಡ್ಡವರ ಹಾದಿ. ನಾನು ದುರ್ಬಲ – ಚಿಕ್ಕವ... ನನ್ನ ಹಾದಿ ನಾನೇ ಹುಡುಕಬೇಕು... ಡಾಲಿ... ಡಾಲಿ... ಪ್ಲೀಜ್, ನನಗೆ ಉಪದೇಶ ಮಾಡಲು ಪ್ರಾರಂಭಿಸಬೇಡ... ಬೇರೆಯವರ ಉಪದೇಶ ಸಾಕಾಗಿದೆ.... ಬೇಸರವಾಗಿದೆ.... ಅವರ ಸಾಲಿನಲ್ಲಿ ನೀನೂ ಕೂಡ ಸೇರಬೇಡ. ಪ್ಲೀಜ್." ನಾನು ಉದ್ವೇಗದಿಂದ ನುಡಿದೆ.

"ಹೀಗೆ ನನ್ನ ಮೇಲೆ ಸಿಟ್ಟಿಗೇಳಬೇಡ, ಗೋರೀ... ಪ್ಲೀಜ್. ನನಗೆ ಅನಿಸಿದ್ದನ್ನು ಹೇಳು ಅಂದಿ, ಹೇಳಿದೆ... ಬೇಡ–ವಾದವಿವಾಹ ಬೇಡ... ನಿನಗೆ ಬೇಕಾದ್ದನ್ನು ನೀನು ಮಾಡು, ಗೋರಿ, ನೀನು ಸ್ವತಂತ್ರನಿರುವಿ...."

ನನಗೆ ಯಾಕೋ ಕೆಟ್ಟೆನಿಸಿತು. "ಡಾಲಿ, ಆ ಸಿಟ್ಟು ನಿನ್ನ ಮೇಲೆ ಇರಲಿಲ್ಲ, ನನ್ನ ಮೇಲೆ ನಾನೇ ಸಿಟ್ಟಿಗೆದ್ದೆ –"

"ಅದು ಹೇಗೆ ?"

"ನಿನ್ನ ಮಾತುಗಳಿಗೆ ಸರಿಯಾಗಿ ತತ್‌ಕ್ಷಣ ಉತ್ತರ ಕೊಡಲು ಬರಲಿಲ್ಲ

ಎಂದು ನನ್ನ ಮೇಲೆ ನಾನೇ ರೊಚ್ಚಿಗೆದ್ದೆ... ಬಹುಶಃ ನೀನು ಅಂದದ್ದರಲ್ಲಿ ಸ್ವಲ್ಪ ಸತ್ಯವಿರಬಹುದು–"

"ಗೋರೀ, ನಿನಗೆ ಅತ್ಯಂತ ದಣಿವಾಗಿದೆ. ಇಡಿಯ ದಿನ ಭಾವನೆಯ ಹಿಡಿತದಲ್ಲಿ ಸಿಕ್ಕು, ಬರೆದೂ ಬರೆದೂ ಹಣ್ಣಾಗಿದ್ದೀ.... ಆನಂತರ ನಾನು ಬಂದು ನಿನಗೆ ಓದಿ ಹೇಳಲು ಹೇಳಿದೆ... ಅದೆಲ್ಲ ಆದ ಮೇಲೆ ಮರಳಿ ನನ್ನ ತಲೆ ಕೆಡಿಸಿದೆ... ನನ್ನದೇ ತಪ್ಪಾಯಿತು, ಗೋರೀ... ಬಾ, ಮಲಗು ಬಾ.... ಹೀಗೆ... ನನ್ನ .... ಎದೆಯ ಆಸರೆಯಲ್ಲಿ..."

"ಡಾಲಿ, You are wonderful ! ನೀನು ನಿಜಕ್ಕೂ ಎಷ್ಟು ಚೆನ್ನಾಗಿದ್ದೀ, ಗೊತ್ತೇ ?"

"ಹೀಗೋ?"

"ಹ್ಞ!" ಎಂದು ಅವಳನ್ನ ಬಿಗಿದಪ್ಪಿ ಮುದ್ದಿಸಿದೆ.

"ಗೋರಿ, ನನ್ನ ಮುದ್ದು ಗೋರಿ, ಸುಮ್ಮನೆ ಮಲಗಿಕೊಳ್ಳು ನೋಡೋಣ. ನನ್ನ ಪುಟ್ಟ ಗೋರಿಗೆ ಆಯಾಸವಾಗಿದೆ, ಮೊದಲು ನಿದ್ದೆ ಮಾಡು, ಡಾರ್ಲಿಂಗ್..."

ನನಗೆ ಯಾವಾಗ ನಿದ್ದೆ ಹತ್ತಿತೋ ಗೊತ್ತಿಲ್ಲ....

ನಡುವೆ ಯಾವಾಗಲೋ ಎಚ್ಚರವಾದಾಗ, ಲೈಟಿರಲಿಲ್ಲ. ಡಾಲಿಯ ಒಂದು ಕೈ ನನ್ನ ಕೊರಳ ಕೆಳಗೆ ಇತ್ತು, ಮತ್ತೊಂದು ನನ್ನ ಎದೆಯ ಮೇಲಿತ್ತು.... ಅವಳ ಶ್ವಾಸೋಚ್ಛ್ವಾಸದ ಮೇಲಿಂದ ಅವಳಿನ್ನೂ ಎಚ್ಚರಿದ್ದುದರ ಅರಿವಾಯಿತು. ಒಮ್ಮೆಲೆ....

"ಡಾಲಿ, ಇನ್ನೂ ನಿದ್ದೆ ಹತ್ತಿಲ್ಲವೆ ನಿನಗೆ ?" ನಾನು ಆತುರತೆಯಿಂದ ಕೇಳಿದೆ,

ಅವಳಿಂದ ಉತ್ತರ ಬರಲಿಲ್ಲ....

"ಡಾಲಿ, ಡಾಲಿ,...."

ಅವಳ ಬಿಕ್ಕು ಅವಳ ಅಂಕೆ ಮೀರಿ ಹೊರಬಿತ್ತು.

"ಡಾಲಿ, ಏನಾಯಿತು?" ನಾನು ಅವನ ಮುಖದ ಮೇಲೆ ಕೈಯಾಡಿಸಿದೆ. ಮುಖವೆಲ್ಲ ಕಂಬನಿಯಿಂದ ನೆನೆದಿತ್ತು.

"ಏನಿಲ್ಲ, ಗೋರಿ... ಏನಿಲ್ಲ."

"ಏನಿಲ್ಲ ಹೇಗೆ? ....ಕಂಬನಿ?"

"ಕಂಬನಿ? ...ವಿಶೇಷ ಏನಿಲ್ಲ. ನೀನು ಆಫ್ರಿಕೆಗೆ ಬೇಗ ಹೋಗಲಿರುವಿ ಎಂದು ಸ್ವಲ್ಪ ದುಃಖವಾಯಿತು... ಮನಸ್ಸಿಗೆ ಹಚ್ಚಿಕೊಳ್ಳಬೇಡ, ಗೋರಿ."

"ಡಾಲಿ, ಡಾಲಿ, ಒಂದು ವೇಳೆ ಆಫ್ರಿಕೆಗೆ ಬರಲು ನಾನು ನಿನಗೆ ಕೇಳಿದರೆ,

ಪ್ರಾರ್ಥಿಸಿದರೆ..."

ಡಾಲಿ ಉತ್ತರ ಕೊಡಲಿಲ್ಲ. ಅವಳಿಂದ ನಿಟ್ಟುಸಿರೊಂದು ಹೊರಬಿತ್ತು.

"ಯಾಕೆ ಸುಮ್ಮನಾದೆ, ಡಾಲೀ ?"

"ಉಂ !"

"ಹೇಳಲ್ಲ ನನ್ನ ಪ್ರಶ್ನೆಗೆ ಉತ್ತರ...." ನಾನು ಒತ್ತಿ ಕೇಳಿದೆ.

"ನಾನು ಕನಸಿನ ಸಾಮ್ರಾಜ್ಯದಲ್ಲಿ ವಿಹರಿಸುವವಳಲ್ಲ !"

"ಅಂದರೆ ?"

"ಕಲ್ಪಿತ (hypothetical) ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿಲ್ಲ..."

ನನಗೆ ಅವಳು ಆಹ್ವಾನವಿತ್ತಂತೆ ಅನಿಸಿತು. "ಬಾ, ಆ ಪ್ರಶ್ನೆ ನಿಜವೆಂದು ತಿಳಿ – ಮುಂದೆ ಹೇಳು ನಿನ್ನ ಉತ್ತರ."

ಡಾಲಿಯ ಬಾಯಿ ಮರಳಿ ಕಟ್ಟಿತು.

ಕೊಂಚ ಹೊತ್ತಿನ ಮೇಲೆ ಡಾಲಿ ನುಡಿದಳು : "ಗೋರೀ, ಈ ಬಗೆಯ ದೈಹಿಕ ಸಾಮಿಪ್ಯದ ವಾತಾವರಣದಲ್ಲಿ ಇಂಥ ಮಹತ್ವದ ಪ್ರಶ್ನೆ ಕೇಳಬಾರದು – ಅದಕ್ಕೆ ಉತ್ತರ ಹೇಳಬಾರದು... ದೇಹದ ಕಾವಿನಲ್ಲಿ, ಅಪ್ಪುಗೆಯ ಉರಿಯಲ್ಲಿ ಬುದ್ಧಿ, ಸಾರಾಸಾರವಿಚಾರ ಕೊಂಚೇ ಮಾಯವಾಗುವವು.... ಬಾ, ಗೋರೀ, ಮಾತು ಸಾಕು, ಸುಮ್ಮನೆ ಮಲಗೋಣ... ಈ ಸಲ ನಾನು ನಿನ್ನ ಎದೆಯಲ್ಲಿ ತಲೆಯಿಟ್ಟು ಮಲಗುವವಳು... ಹಾಂ?"

"ಹ್ಞಂ –"

ಅವಳು ಚಿಕ್ಕ ಹುಡುಗಿಯಂತೆ ಮುದುಡಿಯಾಗಿ ನನ್ನ ದೇಹಕ್ಕೆ ಅಂಟಿ ತನ್ನ ಮುಖವನ್ನು ನನ್ನ ಎದೆಯಲ್ಲಿ ಇಟ್ಟಾಗ, ನನ್ನ ಹೃದಯ ಯಾಕೋ ತುಂಬಿ ತುಂಬಿ ಬಂತು. ಕಣ್ಣು ಒದ್ದೆಯಾದವು ಕೂಡ....

"ಡಾಲೀ –"

"ಉಂ ?"

"You're wonderful"

"ಉಂ ?"

I think I love you ! ನನಗನಿಸುವುದು – ನಿನ್ನನ್ನು ಪ್ರೀತಿಸತೊಡಗಿರುವೆನೇ – ಎಂದು."

"ಉಂ ?"

ನಾನು ನಿನ್ನನ್ನು ಪ್ರೀತಿಸತೊಡಗಿದ್ದೇನೆಂದು ನಿನಗನಿಸುವದೇನು?

Do you think I love you ?"

"ಹುಂ–ಸ್ವಲ್ಪ ಸ್ವಲ್ಪ..." ಬಹಳ ಹೊತ್ತಿನ ನಂತರ "ಆದರೆ ಕಾಮಿನಿಯನ್ನು ಪ್ರೀತಿಸುವಂತೆ ಅಲ್ಲ...." ಬಂದು ಸಾವುಕಾಶವಾಗಿ ಉಸುರಿದಳು.

ನಾನು ವಿಚಾರಮಗ್ನನಾದೆ. ಆ ಮಗ್ನತೆಯಿಂದ ನಿದ್ದೆಯಲ್ಲಿ ಯಾವಾಗ ಜಾರಿದೆನೋ ನನಗೆ ಗೊತ್ತಿಲ್ಲ.....

ನಾನು ಎಚ್ಚರಾದಾಗ ಆರೂವರೆ. ಡಾಲಿಗೆ ಗಾಢ ನಿದ್ದೆ. ಈಗ ಎಂಟು ಹೊಡೆದಿದೆ. ಅವಳಿನ್ನೂ ಮಧುರವಾಗಿ ಮಲಗಿದ್ದಾಳೆ. ಅವಳನ್ನ ಎಬ್ಬಿಸಲೇ? ಬೇಡ. ಮೊದಲು ಚಹಾಮಾಡುವೆ. ಆಮೇಲೆ ಎಬ್ಬಿಸುವೆ....

....ಡಾಲಿ, You're wonderful !

* * *

ನಾನು ನಿನ್ನೆ ರಾತ್ರಿ ಮುಂಬಯಿಗೆ ಮರಳಿ ಬಂದಿದ್ದೇನೆ...
ಹೋಗಲೇಬಾರದಿತ್ತೇನೊ – ಸಿರ್ಸಿ–ಧಾರವಾಡಗಳಿಗೆ...
ಸತ್ಯೇಂದ್ರನ ಆಗ್ರಹ – ಜಬರದಸ್ತಿಯ ಆಗ್ರಹ...
ಕಾಮಿನೀ... ಕಾಮಿನೀ... ಕಾಮಿನೀ...

* * *

ಆ ದಿನ ಮುಂಜಾನೆ ಡಾಲಿ ಅದೇ ಎದ್ದಿದ್ದಳು. ನಾನೂ ಅವಳೂ ಹಾಸಿಗೆಯಲ್ಲಿ ಕುಳಿತುಕೊಂಡೇ ಚಹಾ ಕುಡಿದೆವು. ನಮ್ಮ ಸಂಭಾಷಣೆ ಅದೇ ಸಣ್ಣ ಪುಟ್ಟ ವಿಷಯಗಳಿಂದ ಮರಳಿ ರಾತ್ರೆಯ ವಿಷಯಗಳ ಕಡೆಗೆ ತಿರುಗುವದರಲ್ಲಿತ್ತು...

"ವಾಹ್, ಗೋರೀ, ಇಷ್ಟು ಬೇಗ ಎದ್ದು ನೀನು ಏನೇನು ಬರೆದಿಯಪ್ಪಾ?"

"ಏನಿಲ್ಲ, ನಿನ್ನೆ ರಾತ್ರಿ ನಾವು ಮಾತನಾಡಿದ ವಿಷಯ..."

"ಹೀಗೇನು ? ನೀನೂ ವಿಚಿತ್ರ ಬಗೆಯ ತತ್ತಿಯಪ್ಪಾ ! ನನಗೆ ಓದಿ ಹೇಳು ಏನೇನು ಬರೆದಿರುವಿಯೆಂದು..."

"ನಮ್ಮ ಸಂಭಾಷಣೆಯ ಹೊರತು ಏನೂ ಬರೆದಿಲ್ಲ, ಅದೂ ನನಗೆ ನೆನಪಿದ್ದಷ್ಟು..."

"ಅದು ಏನೇ ಇಲಲಿ, ನೀನು ಓದಿ ತೋರಿಸು, ನನಗೆ ಕುತೂಹಲ ವಿಪರೀತ..."

"ಇಂದು ರಾತ್ರಿ !"

"ವಾಹ್, ಹೀಗೆ ಆಮಿಷ ತೋರಿಸಿ ನನ್ನನ್ನು ಮತ್ತೆ ಬಲೆಯಲ್ಲಿ

ಹಾಕಬೇಕೆಂದಿರುವಿಯೇನು – ಇಂದು ರಾತ್ರಿ ?'

"ಹೂಂ..." ಅವಳತ್ತ ತುಂಟನಗೆ ನಗುತ್ತ ನೋಡಿದೆ.

"ತುಡುಗಾ ! ಅದೇನೂ ಬೇಡ, ಈಗಲೆ ಓದಿ ಹೇಳು..."ಅವಳ ಕೈಯು ನನ್ನ ತೊಡೆಯನ್ನು ಒತ್ತಿತು.

ಅಷ್ಟರಲ್ಲಿ ಕದ ಬಡೆದ ಸಪ್ಪಳ. ಇಷ್ಟು ಮುಂಜಾನೆ ಸತ್ಯೇಂದ್ರನನ್ನು ನೋಡಿ ನಾನು ಸ್ವಲ್ಪ ಅಳುಕಿದೆ. ಒಣ ದೇಶಾವರಿ ನಗೆ ನಗುತ್ತ ನಾನು ಹೇಳಿದೆ : "ಏನು ಇಷ್ಟು ಮುಂಜಾನೆ? ಬಾರಲ್ಲ... ಹಾಂ, ಇಲ್ಲಿಯೇ ಹೊರಗೆ ಐದು ನಿಮಿಷ ನಿಲ್ಲೋಣ... ಒಳಗೆ ಡಾಲಿಯಿದ್ದಾಳೆ...."

ಡಾಲಿಗೆ ಎಲ್ಲವನ್ನು ಸರಿಪಡಿಸಲು ಸೂಕ್ತ ಸೂಚನೆಗಳನ್ನಿತ್ತು ನಾನು ಹೊರಗೆ ಹೋದೆ. ಸತ್ಯೇಂದ್ರ ವಿಚಾರಮಗ್ನನಾಗಿ ನಿಂತಿದ್ದ.

"ಸಾರಿ, ನಾನು ಅ ವೇಳೆಯಲ್ಲಿ ಬಂದೆ. ನಿನ್ನೆ ಸಂಜೆಯೇ ಬರುವವನಿದ್ದೆ. ಆದರೆ ಸುಶೀಲೆಯ ತವರುಮನೆಗೆ ಹೋಗಬೇಕಾಯಿತು – ದಾದರಿಗೆ... ಗೌರೀಶ, ಡಾಲಿ ನಿನ್ನೆ ರಾತ್ರಿ ಇಲ್ಲಿಯೇ ಇದ್ದಳೇ?"

"ಹುಂ,"

"ಓಹೇನು – ಹೂಂ..." ಎಂದು ಸ್ವಲ್ಪ ಹೊತ್ತು ವಿಚಾರ ಮಾಡುತ್ತಾ ನಿಂತ. ಆನಂತರ, "ನಾನು ಮುಖ್ಯ ಬಂದುದು, ನಿನ್ನನ್ನು ಸಿರ್ಸಿಗೆ ಕಳಿಸಲು. ನಿಮ್ಮ ತಂದೆಯವರ ಒಂದು ತಾರು ಬಂದಿದೆ ನನಗೆ," ಎಂದ.

"ನನಗೂ ಒಂದು ಪತ್ರ ಅಥವಾ ತಾರು ಕಳಿಸಿದ್ದರೆ –"

"ಯಾರನ್ನೂ ಕೇಳದೆ ಆಫ್ರಿಕೆಗೆ ಹೋಗುವ ನಿರ್ಣಯ ನೀನು ಕೈಕೊಂಡ ಮೇಲೆ, ಅವರಿಗೆ ನೀನು ಸ್ವಲ್ಪ ಹುಚ್ಚನಾಗಿರಬೇಕು... ಎಂದು ಅನಿಸುವದೇನೋ... ಆದುದರಿಂದ ನಿನಗೆ ನೇರವಾಗಿ ಬರೆಯಲು ಹೆದರುತ್ತಿರಬೇಕು... ಹೂಂ, ಅದಿರಲಿ–ನೀನು ಇಂದೇ ಹೊರಡಬೇಕು.

"ವಿಚಾರ ಮಾಡುವೆ."

"ವಿಚಾರ–ಗಿಚಾರ ಏನಿಲ್ಲ. ಬರೇ ಐದಾರು ದಿನಗಳುಳಿದವು ನೀನು ಹಡಗನ್ನೇರಲು – ನಿನ್ನ ತಾಯಿ ದಿನಾಲು ಹಲಬುತ್ತಾರಂತೆ, ನೆನಿಸುತ್ತಾರಂತೆ ನಿನ್ನನ್ನು.... ನಿನ್ನ ತಾಯಿಯ ಸಲುವಾಗಿಯಾದರೂ..."

ಡಾಲಿ ಕದ ತೆಗೆದು ನಮ್ಮನ್ನು ಒಳಗೆ ಕರೆದಳು. "ಗುಡ್‌ಮಾರ್ನಿಂಗ್, ಮಿಸ್ಟರ್ ಕುಲಕರ್ಣಿ – ನಿಮ್ಮ ಭೆಟ್ಟಿಯಾಗಿ ಒಂದು ಯುಗವಾಯಿತು..."

ನಮ್ಮ ಮೂವರ ಚಹ ಮುಗಿದ ಮೇಲೆ, ಡಾಲಿ ಮನೆಗೆ ಹೊರಟಳು....

"ಒಳ್ಳೇದು ಗೋರೀ, ನೀನು ಬಂದ ನಂತರ ಭೆಟ್ಟಿಯಾಗೋಣ... ವಿಶ್‌ಯು ಬೆಸ್ಟ್ ಲಕ್... ಬಾಯ್‌ಬಾಯ್.... ಬಾಯ್ ಬಾಯ್, ಮಿಸ್ಟರ್ ಕುಲಕರ್ಣಿ..."

ಡಾಲಿಗೆ, ಸತ್ಯೇಂದ್ರನ ಆಗಮನದಿಂದಾಗಲಿ, ಅವನ ಸಾನಿಧ್ಯದಲ್ಲಿಯಾಗಲಿ, ಎಳ್ಳಷ್ಟೂ ಸಂಕೋಚವೆನಿಸಿರಲಿಲ್ಲ. ತಾನು ಏನಾದರೂ ತಪ್ಪು ಅಥವಾ ನೀತಿಬಾಹಿರವಾದ ಕಾರ್ಯಮಾಡುವಾಗ ಹಿಡಿಯಲ್ಪಟ್ಟೆ ಎಂಬ ಅಪರಾಧಿಯ ಭಾವ ಎಳ್ಳಷ್ಟೂ ಅವಳಲ್ಲಿರಲಿಲ್ಲ. ಅವಳ ನುಡಿ–ನಡತೆಯಲ್ಲಿಯ ಸ್ವಾಭಾವಿಕತೆಯನ್ನೂ ಸಹಜತೆಯನ್ನೂ ನೋಡಿ, ನಾನು ಮನಸ್ಸಿನಲ್ಲಿಯೇ ಮೆಚ್ಚಿದೆ, ಕೌತುಕಗೊಂಡೆ. ಇಷ್ಟೇ ಅಲ್ಲ, ಅವಳು ಸಹಜವಾಗಿ, ಮುಕ್ತ ಮನಸ್ಸಿನಿಂದ ಆ ಸಂಬಂಧವನ್ನು ಸಂಭಾಳಿಸಿದ್ದನ್ನು ನೋಡಿ, ನನ್ನಲ್ಲಿ ಒಂದು ಬಗೆಯ ಅಪೂರ್ವ ಆತ್ಮವಿಶ್ವಾಸ, ಶಕ್ತಿ ಬಂದಂತೆ ಅನಿಸಿದವು... ಅದೇ ಶಕ್ತಿಯ ಆದಾರದ ಮೇಲೆ ನಾನು ಅದೇ ದಿನ ಸಿರ್ಸಿಗೆ ಹೋಗಲು ಮುಕ್ತ ಮನಸ್ಸಿನಿಂದ ಒಪ್ಪಿದೆ. ಅವಳೂ ಬೆಂಬಲವಿತ್ತಳು: "ಹೌದು ಗೋರೀ, ನೀನು ಇಂದೇ ಹೋಗಬೇಕು–ನಿನ್ನ ತಾಯಿಯ ಸಲುವಾಗಿ..." ಎಂದು ನುಡಿದು ನನ್ನೆಡೆಗೆ ಸೂಕ್ಷ್ಮವಾಗಿ ನೋಡಿದಳು. ಅವಳ ನೋಟದಲ್ಲಿ 'ಕಾಮಿನಿಯನ್ನು ಭೆಟ್ಟಿಯಾಗು' ಎಂಬ ಆದೇಶವಿತ್ತು...

ಅವಳು ಹೋದನಂತರ ಸತ್ಯೇಂದ್ರ ಡಾಲಿಯ ಬಗ್ಗೆ ಮಾತು ತೆಗೆದ : "ಡಾಲಿ ಏನನ್ನುತ್ತಾಳೆ ?.... ನಿಮ್ಮ ಸಂಬಂಧ ನಾನೆಣಿಸಿದಷ್ಟು ಸಾದಾ ಇಲ್ಲ..."

ನಾನು ಅವನೆಡೆಗೆ ನೋಡಿ ಅರ್ಥಪೂರ್ಣವಾಗಿ ಮುಗುಳುನಗೆ ನಕ್ಕೆ.

"ಮುಂದೇನು ವಿಚಾರ ?... ಲಗ್ನ ?" ಸತ್ಯೇಂದ್ರ ಕೇಳಿದ.

"ನಿನ್ನ ತಲೆಯಲ್ಲಿ ಲಗ್ನದ ಹೊರತು ಬೇರ ವಿಚಾರ ಹೇಗೆ ಬಂದೀತು ?'

"ಹಾಗೆ ನೋಡಿದರೆ – ಡಾಲಿ ಕೆಟ್ಟೆನಿಲ್ಲ ಅನ್ನು.... ಆಫ್ರಿಕೆಯಲ್ಲಿ ನಿನ್ನ ಹೆಂಡತಿ ಕ್ರಿಶ್ಚಿಯನ್‌ಳಿದ್ದರೇನು ಅಥವಾ ನೀಗ್ರೋ ಇದ್ದರೇನು ?" ಎಂದು ನಕ್ಕ.

ಅವನ ನಗೆ ಅವನ ಸಿಟ್ಟನ್ನು ತಡೆಹಿಡಿಯಿತು. ನಾನೂ ನಕ್ಕೆ. ಅವನ 'ಕೆಟ್ಟೇನಿಲ್ಲ' ಶಬ್ಧದಲ್ಲಿಯ ನಿಗ್ರಹದ ಮೆಚ್ಚಿಗೆ ನನ್ನ ಮನಸ್ಸಿಗೆ ಚುಚ್ಚಿದರೂ 'ಇವನಿಗೇನೂ ಗೊತ್ತು ?' ಎಂಬ ಅಹಂಭಾವ ನನ್ನಲ್ಲಿತ್ತು.

"ನಮ್ಮ ಗೆಳೆತನ ಆ ರೀತಿಯದಲ್ಲ... ಲಗ್ನದ ವಿಚಾರ ಸಂಬಂಧದಲ್ಲಿ ಇಲ್ಲವೇ ಇಲ್ಲ. ನಮ್ಮ ಸಂಬಂಧ ಎಷ್ಟೇ ನಿಕಟವಾಗಿದ್ದರೂ, ಅದಕ್ಕೆ ಲಗ್ನದ ಬಂಧನ ಹಾಕುವ ವಿಚಾರ ನಮಗೆ ಬಂದಿಲ್ಲ ...."

"ಲಗ್ನ ಬಂಧನವೆಂದು ಯಾರು ಹೇಳಿದರು ?"

"ನೀನು !" ಎಂದು ಜೋರಿನಿಂದ ನಕ್ಕೆ. "ನೀನು ಹೇಳಿಲ್ಲ – ಆದರೆ

ತೋರಿಸಿರುವಿ – ಹಾ–ಹಾ–ಹಾ..."

* * *

ಸಿರ್ಸಿ ಮುಟ್ಟಿದಾಗ ರಾತ್ರೆಯಾಗಿತ್ತು. ಮೋಟಾರ ಸ್ಟ್ಯಾಂಡಿನ ಮೇಲೆ ನನ್ನ ಹತ್ತು ವರ್ಷದ ತಮ್ಮ ಹಾಗೂ ನಮ್ಮ ಮನೆಯ ಆಳು ನನ್ನ ದಾರಿ ಕಾಯುತ್ತಿದ್ದರು.... ಮನೆಗೆ ಹೋಗುವಾಗ ತಮ್ಮ ಕೇಳಿದ :

"ಅಣ್ಣ, ಆಫ್ರಿಕೆ ಎಷ್ಟು ದೂರವಿದೆ ?"

"ಯಾಕೆ, ಭೂಗೋಲವೇನಾದರೂ ಕಲಿತಿಯೋ ಇಲ್ಲವೋ, ಬಾಳೂ?"

"ನಮ್ಮ ಭೂಗೋಲ ಮಾಸ್ತರರೇ ಚಲೋ ಇಲ್ಲ, ಅಣ್ಣಾ... ಅಣ್ಣಾ ನಾನೂ ಬರಲೇನು ನಿನ್ನ ಕೂಡ? ನೀನೂ ಮಾಸ್ತರನೇ ಆಗುವವನಿದ್ದೀಯಂತೆ ಆಫ್ರಿಕೆಯಲ್ಲಿ ನೀನು ಹೋಗುತ್ತೀಯೆಂದು ಅವ್ವ ಏಕೆ ಇಷ್ಟು ಅಳುತ್ತಾಳೋ ಏನೋ? ಸುಮ್ಮನೆ ಅವ್ವನನ್ನು ಕರೆದುಕೊಂಡು ಹೋಗು ತ್ರಾಸ ಬೇಡ....." ಬಾಳೂನ ಉಪದೇಶ....

* * *

ಮನೆಯಲ್ಲಿ ಹೊರಗಿನ ಕಟ್ಟೆಯ ಮೇಲೆ ತಂದೆಯವರು ತಮ್ಮ ಮಿತ್ರರೊಡನೆ ಕುಳಿತಿದ್ದರು.

"ಬಂದೆಯಾ ಕೊನೆಗೆ?"

ಅವರ ಮಿತ್ರರ ಒಂದೆರಡು ಪ್ರಶ್ನೆಗಳಿಗೆ ಔಪಚಾರಿಕ ಉತ್ತರ ಕೊಟ್ಟು ಅವರ ಕುತೂಹಲ ಸಮಾಧಾನಗೊಳಿಸಲು ಯತ್ನಿಸಿದೆ : "ನನಗೆ ಒಳ್ಳೆಯ ನೌಕರಿ ಸಿಕ್ಕಿದೆ... ಆಫ್ರಿಕೆ ಅಷ್ಟೇನೂ ದೂರವಿಲ್ಲ... ಎಂಟು–ಹತ್ತು ದಿನಗಳ ಪ್ರಯಾಣ... ಅಲ್ಲಿ ಹವಾಮಾನ – ವಾತಾವರಣ ಒಗ್ಗದಿದ್ದರೆ ಬಂದೇ ಬರುವೆನಲ್ಲ ತಿರುಗಿ... ಒಂದೆರಡು ವರ್ಷ ಮಜಾಮಾಡಿ ಬರುವದೇ ನನ್ನ ಉದ್ದೇಶ... ಲಗ್ನ ಮಾಡಿಕೊಂಡು ಹೋದರೆ ಮಜಾ ಎಲ್ಲಿಂದ ಬಂತು?... ಲಗ್ನ ಮಾಡಿಕೊಂಡರೆ ಹೋಗವುದಾದರೂ ಯಾತಕ್ಕೆ?..." ನನ್ನ ಉತ್ತರಗಳಿಂದ ಅವರ ಸಮಾಧಾನವಾದಂತಾಯಿತು!

* * *

ಆ ದಿನ ರಾತ್ರೆ ಮಲಗಲು ನನ್ನ ಕೋಣೆಗೆ ಹೋದೆ. ಪ್ರಯಾಣದ ಆಯಾಸದ ಮೂಲಕ ನಿದ್ದೆ ಬೇಗ ಬಂತು. ಒಮ್ಮೆಲೆ ಹಾಸಿಗೆಯ ಮೇಲೆ ಯಾರೋ ಕುಳಿತ ಅರಿವಾಯಿತು. ಕಣ್ತೆರೆದು ನೋಡಿದೆ :

ನನ್ನ ತಾಯಿ ಕಂಬನಿದುಂಬಿದ ಕಣ್ಣುಗಳಿಂದ ನನ್ನೆಡೆಗೆ ನಿಟ್ಟಿಸುತ್ತಿದ್ದಳು. ನನಗೆ ಆಶ್ಚರ್ಯದ ಜೊತೆಗೆ ಕೊಂಚ ಕೆಟ್ಟೆನಿಸಿತು...

"ಅವ್ವ, ಅಳುತ್ತಿರುವಿಯೇಕೆ?" ನಾನು ನನ್ನ ಕೈಯನ್ನು ಅವಳ ತೊಡೆಯ ಮೇಲಿಟ್ಟು ಅವಳ ಕೃಶವಾದ ಕೈಯನ್ನು ಒತ್ತಿ ಹಿಡಿದೆ.

"ಯಾಕಿಲ್ಲ. ಇಂಥದೇಕೆ ದುರ್ಬುದ್ಧಿ ಬಂತಪ್ಪ ನಿನ್ನಲ್ಲಿ? ಎಲ್ಲರನ್ನೂ ಬಿಟ್ಟು ಆ ಪರದೇಶದಲ್ಲಿ ಹೋಗಿ ಇರುವದೆಂದರೆ?"

"ಅದರಲ್ಲೇನು ತಪ್ಪಾಯಿತು?"

"ನನಗೂ ಒಮ್ಮೊಮ್ಮೆ ಅನಿಸುವದು : ಎಲ್ಲ ಬಿಟ್ಟು ಪರಲೋಕಕ್ಕೆ ಏಕೆ ಹೋಗಬಾರದು ನಾನು – ಎಂದು"

"ಅವ್ವಾ, ಎಂಥ ಅಬದ್ಧ ಮಾತು."

"ಹೌದು – ನನಗೂ ಜೀವನ ಬೇಸರವಾಗಿದೆ. ನೀನೂ ಹೊರಟೆ ಪರದೇಶಕ್ಕೆ. ಅವರೂ ನನ್ನನ್ನು ಬಿಟ್ಟಿದ್ದಾರೆ.

"ಅಂದರೆ?"

"ಅದ್ಯಾವಳೋ ಮಹಾಕಾಳಿ – ಚಂದ್ರಿಯಂತೆ – ಗುಡಿಯ ಮುಂದಿನ ಒಯ್ಯಾರಿ ದಿನಾಲು ಅಲ್ಲಿಯೇ ಇವರ ವಸ್ತಿ. ಇಂದೇ ನೀನು ಬಂದಿರುವಿಯೆಂದು ಮನೆಯಲ್ಲಿದ್ದಾರೆ."

ನಾನು ಸುಮ್ಮನೆ ದೀಪದ ಕಡೆಗೆ ದೃಷ್ಟಿ ಹೊರಳಿಸಿದೆ...

ಯಾಕೋ ಏನೋ ನನ್ನ ತಾಯಿ, ಒಮ್ಮೆಲೆ, ಬಹಳ ವರ್ಷಗಳ ನಂತರ 'ಸಜೀವ'ಳಾದಂತೆ ತೋರಿದಳು! ಇವಳಿಗೂ ಉಂಟು ತನ್ನದೇ ಆದ ವ್ಯಕ್ತಿತ್ವ ಇವಳಿಗೂ ಉಂಟು ಜೀವನದ ಸಮಸ್ಯೆಗಳು! ಒಮ್ಮೆಲೆ ಅವಳು ನನಗೆ ತೀರ ಹತ್ತಿರ ಬಂದಂತೆ ತೋರಿದಳು....

ನಾನು ಅವಳ ಕೈ ಹಿಡಿದು ಹೇಳಿದೆ: "ಅವ್ವ, ಕಷ್ಟಪಡಬೇಡ. ಎಲ್ಲ ಸರಿಹೋಗುವದು. ಒಮ್ಮೆ ಹೊಕ್ಕ ಹುಚ್ಚು ತಾನಾಗಿಯೇ ತನ್ನ ರೀತಿಯಲ್ಲಿಯೇ ಹೋಗದ ಹೊರತು, ಹಾಗೆ ಒಮ್ಮೆಲೆ ಮಾಯವಾಗಲಾರದು. ಅವರನ್ನು ಹಾದಿಗೆ ಬಿಟ್ಟುಬಿಡು. ಸುಮ್ಮನೆ ನೊಂದು ಹಣ್ಣಾಗಬೇಡ... ವ್ಯರ್ಥ!" ತಾಯಿಗೆ ನಾನು ಉಪದೇಶ ಮಾಡುವದು ವಿಚಿತ್ರವೆನಿಸತೊಡಗಿತು...

"ಗೌರೀ, ನೀನು ಇಲ್ಲೇ ಎಲ್ಲಾದರೂ ಸಮೀಪದ ಊರಲ್ಲಿ ಇದ್ದಿದ್ದರೆ ನಿನ್ನ ಕಡೆಗಾದರೂ ಬಂದು ಇರಬಹುದಿತ್ತು..."

"ಹೌದು ಅವ್ವ, ಆದರೆ–ಉಪಾಯವಿಲ್ಲ...ಕಾಳಜಿ ಮಾಡಬೇಡ ; ಎಲ್ಲ ಸರಿಹೋಗುವದು. ಸಹನೆ ಮುಖ್ಯ."

"ಗೌರೀ–ನೀನು ಒಬ್ಬನೆ–ದೂರ..." ಅವಳ ಕಂಠ ಉಕ್ಕಿಬಂತು. ಸೆರಗಿನಿಂದ

ಕಣ್ಣು ಒರೆಸತೊಡಗಿದಳು."

"ನನ್ನ ಬಗ್ಗೆ ಚಿಂತೆ ಮಾಡಬೇಡ, ಅವ್ವ ನಾನು ನಿಜಕ್ಕೂ ಆರಾಮದಿಂದಿರುವೆ. ಇಷ್ಟೇಮುಂಬಯಿಗಿಂತ ಸ್ವಲ್ಪ ದೂರ...."

"ಚಿಂತೆ–ಚಿಂತೆ–ಚಿಂತೆ–ಈ ಬಾಳುವೆಯಲ್ಲಿ ಅದರ ಹೊರತಾಗಿ ಮತ್ತೇನಿದೆ? ತಾಯಿಯ ಕರುಳೆಂದರೆ – ಚಿಂತೆಯ ಮನೆ – ಬಸಿರಿನಿಂದ ಹಿಡಿದು ಉಸಿರು ಇರುವ ತನಕ.... ಹೋಗಪ್ಪಾ– ನಿನಗೆ ಬೇಕಾದಲ್ಲಿಗೆ ಹೋಗು. ಎಲ್ಲಿ ಹೋದರೂ ಸುಖದಿಂದಿರು – ಲಗ್ನ ಮಾಡಿಕೊಂಡು ಹೋಗಿದ್ದರೆ ಚನ್ನಾಗಿತ್ತು... ಆದರೆ ದೇವರ ಇಚ್ಛೆಯೊಂದು ಬೇಕಲ್ಲ–"

"ಹೂಂ... ಹಾಗೇ ಅನು....."

* * *

ನನ್ನಲ್ಲಿ ಏನೋ ವಿಶಿಷ್ಟ ಬದಲಾಗಿದೆ :

ಉಳಿದವರ ಸುಖ–ದುಃಖ ತಿಳಿಯತೊಡಗಿದೆ –

ಪ್ರತಿಯೊಬ್ಬ ವ್ಯಕ್ತಿಯ ವೈಶಿಷ್ಟ್ಯದ ತೀವ್ರ ಅರಿವು ನನಗಾಗುತ್ತಿದೆ, ಇತ್ತಿತ್ತಲಾಗಿ...

ಟ್ರೇನಿನಲ್ಲಿ ಪ್ರಯಾಣ ಮಾಡುವಾಗ, ಸ್ಟೇಶನ್ನಿನ ಮೇಲೆ, ಸ್ಟೇಶನದಿಂದ ಬರುವಾಗ – ಪ್ರತಿಯೊಂದು ಮುಖ ತನ್ನದೇ ಆದ ಯಾವುದೋ ಕತೆ ಹೇಳುತ್ತಿರುವಂತೆ ಅನಿಸುತ್ತಿತ್ತು. ಬಾಂದ್ರಾ ಸ್ಟೇಶನ್ನಿನ ಮೇಲೆ ಮೆಟ್ಟಲುಗಳ ಹತ್ತಿರ ಕುಳಿತು ತನ್ನ ಕೂಸಿಗೆ ಮೊಲೆ ಕುಡಿಸುತ್ತಿದ್ದ ಆ ಭಿಕ್ಷುಕಿಯು ಕೂಡ ಒಂದು ಅವ್ಯಕ್ತ ನಾಟಕದೊಳಗಿನ ಮುಖ್ಯಪಾತ್ರದಂತೆ ಕಂಡಳು...ಯಾಕೋ ಏನೋ ಒಮ್ಮೆಲೆ ಕಾಮಿನಿಯ ನೆನಪಾಯಿತು ತೀಕ್ಷ್ಣ ವೇದನೆಯ ಅಸಿಧಾರೆಯೊಂದು ಹೃದಯವನ್ನು ಕೊರೆದುಹೋಯಿತು.

"ಗೌರೀಶ, ನನ್ನನ್ನು ಉಳಿಸು –"

* * *

ಕಾಮಿನಿ ನನ್ನ ಹಾದಿಯನ್ನೇ ಕಾಯುತ್ತಿದ್ದಳು !

ನಾನು ಸಿರ್ಸಿಯಿಂದ ಅವಳಿಗೆ ಪತ್ರ ಬರೆದಿದ್ದೆ – ನಾನು ನನ್ನ ಬಹಶಃ ಕೊನೆಯ ಭೆಟ್ಟಿಗೆ ಬರುತ್ತಿರುವೆ, ಒಂದು ದಿವಸದ ಮಟ್ಟಿಗೆ ಮಾತ್ರ. ಧಾರವಾಡದಲ್ಲಿರಲು ಸಾಧ್ಯ – ಎಂದು. ಪತ್ರ ಬರೆಯುವುದರಲ್ಲಿ ನನ್ನ ಮುಖ್ಯ ಉದ್ದೇಶ, ಆ ದಿನ ಅವಳು ಮತ್ತೆಲ್ಲಿಯಾದರೂ (ಯಾರೊಡನೆಯಾದರೂ) ಹೊರಗೆ ಹೋಗಬಾರದು ಎಂಬುದು.

ಸಂಜೆ ಎಂಟರ ಸಮಯ. ನನ್ನ ಟಾಂಗಾ ಶ್ರೀಕಾಂತನ – ಅಲ್ಲ, ಕಾಮಿನಿಯ–

ಮನೆಯತ್ತ ಸಾಗಿದಾಗ ಹೃದಯದಲ್ಲಿ ವಿಚಿತ್ರ ಕಳವಳ – ಶೂನ್ಯತೆ, ಜಡತ್ವ....

ಅವರ ಮನೆಗೆ ನನ್ನ ಟಾಂಗಾ ಮುಟ್ಟುವದೇ ತಡ, ಸರಲಾಮಾಂಶಿಯವರು ಕದ ತೆಗೆದು ಸ್ವಾಗತಿಸಿದರು:

"ಬಾ ಗೌರೀಶ, ಇದೇನು, ಯಾರಿಗೂ ಹೇಳದೇ ಕೇಳದೇ ಆಫ್ರಿಕೆಗೆ ಹೊರಟಿರುವಿಯಂತೆ?"

"ಹೌದು, ಮಾಂಶೀ, ಒಳ್ಳೆಯ ನೌಕರಿ," ಎಂದೆ.

"ಕಾಮಿನಿ–ಒಂದು ತಾಸಾಯಿತು–ನಿನ್ನ ಹಾದಿಯನ್ನೇ ಕಾಯುತ್ತಿರುವಳು. ಅದೋ ಆ ಕೋಣೆಯಲ್ಲಿ ಮಲಗಿದ್ದಾಳೆ"

ಅವರು ಕೈಸನ್ನೆಯಿಂದ ತೋರಿಸಿದ ಕೋಣೆ ಶ್ರೀಕಾಂತನ ಕೋಣೆಯಾಗಿತ್ತು. ನನಗೆ ಯಾಕೋ ಎದೆ ಧಸಕ್ಕೆಂದಿತು....

"ಮಲಗಿದ್ದಾಳೇಕೆ ಕಾಮಿನಿ? ಏನಾದರೂ ಕಾಯಿಲೆಯೇ ?" ನನ್ನ ಬಾಯಿ ಒಣಗಿತ್ತು.

"ಕೆಲವು ದಿನಗಳ ಹಿಂದೆ ಕಾಯಿಲೆಯಾಗಿತ್ತು. ಈಗ ನೆಟ್ಟಗಿದ್ದಾಳೆ. ಸ್ವಲ್ಪ ಅಶಕ್ತತೆ ಅಷ್ಟೆ..."

ಶ್ರೀಕಾಂತನ ಕಾಯಿಲೆ ಇವಳಿಗೂ ಎಲ್ಲಿ ತಟ್ಟಿತೋ ಎಂದು ಗಾಬರಿಯಾದೆ. ಆದರೆ ಒಮ್ಮೆಲೆ ಕೇಳಲು ಧೈರ್ಯವಾಗಲಿಲ್ಲ.....

"ನಾನು ನಿನ್ನ ಊಟದ ತಯಾರಿ ಮಾಡಿ ಕರೆಯುವೆ. ಅಲ್ಲಿಯ ತನಕ ಕಾಮಿನಿಯ ಹತ್ತಿರ ಮಾತನಾಡು." ಎಂದು ಹೇಳಿ ಸರಲಾಬಾಯಿಯವರು ಅಡಿಗೆ ಮನೆಯತ್ತ ಹೋದರು. ಅವರ ಮುಖದ ಮೇಲೆ ದುಃಖದ ಕಳೆ ತುಂಬ ಇದ್ದರೂ ಮಾತಿನಲ್ಲಿ ಅದನ್ನು ಮುಚ್ಚುವ ಯತ್ನ ಕಾಣಿಸುತ್ತಿತ್ತು –

ನಾನು ಶ್ರೀಕಾಂತನ ವಿಷಯ ಸ್ವಲ್ಪವೂ ಮುಟ್ಟಬಾರದೆಂದೇ ದೃಢ ನಿಶ್ಚಯ ಮಾಡಿದೆ....

ಶ್ರೀಕಾಂತನ ಕೋಣೆಯತ್ತ ಹೋಗಿ ಒಳಗೆ ಹಣಕಿ ಹಾಕಿದೆ. ಕಾಮಿನಿ ಶ್ರೀಕಾಂತನ ಮಂಚದ ಮೇಲೆಯೇ ಮಲಗಿದ್ದಳು. ನನ್ನ ಹೃದಯ ಯಾವುದೋ ಭೀತಿಯಿಂದ ನಡುಗಿತು....

"ಕಾಮಿನಿ" ಎಂದೆ. ನನ್ನ ಈ ಧ್ವನಿ ಕಂಪಿಸುತ್ತಿತ್ತು.

"ಗೌರೀಶ, ಬಾ. ನಿನ್ನ ದಾರಿಯನ್ನೇ ಕಾಯುತ್ತಿರುವೆ."

ನಾನು ಒಳಗೆ ಹೋಗಿ ಅವಳ ಹತ್ತಿರ ನಿಂತು ಕೇಳಿದೆ : "ಕಾಮಿನೀ, ಏನಾಗದೆ ನಿನಗೆ ? ಎಂಥ ಕಾಯಿಲೆ ?"

"ಈಗ ನೆಟ್ಟಗಿದ್ದೇನಲ್ಲ ! ಬಾ, ಇಲ್ಲಿ ಹತ್ತಿರ ಕೂಡ್ರು" ಎಂದು ಕಾಟಿನ ಮೇಲೆಯೇ ಕೂಡ್ರಲು ಸಂಜ್ಞೆಮಾಡಿದಳು.... ಅವಳು ತಲೆದಿಂಬುಗಳನ್ನು ಕಾಟಿನ ಹಿಂದಿನ ಬದಿಗೆ ಆನಿಸಿ ಕುಳಿತುಕೊಂಡಳು.

"ಬೇಡ, ನಾನು ಇಲ್ಲಿಯೇ ಕುಳಿತುಕೊಳ್ಳುವೆ" ಎಂದು ಬದಿಯ ಸ್ಟೂಲನ್ನು ಎಳೆದು ಅದರ ಮೇಲೆ ಮಂಡಿಸಿದೆ. ಸುತ್ತಲೂ ಹೇಗೋ ಹೇಗೋ ಯತ್ನದಿಂದ ಕಣ್ಣು ಹೊರಳಿಸುವಾಗ, ಗಂಟಲಿನಲ್ಲಿ ಗಂಟೊಂದು ಮೇಲೆ ಬಂತು. ಕೊಂಚ ಹೊತ್ತು ಸುಮ್ಮನೆ ಕುಳಿತೆ, ನಿಗ್ರಹಿಸುತ್ತ....

"ಕಾಮಿನೀ...."

"ಹುಂ ?"

"ನೀನಿಲ್ಲಿ – ಈ ಕೋಣೆಯಲ್ಲಿ ಮಲಗಬಾರದಿತ್ತು...."

"ತಪ್ಪೇನದರಲ್ಲಿ ? ನೀನು, ಶ್ರೀಕಾಂತದಾದಾ ಹೋದನಂತರ, ಇದೇ ಮೊದಲು ಇಲ್ಲಿ ಬರುವದು – ಆದುದರಿಂದ ನಿನಗೆ..."

"ಅದಿರಲಿ, ನಿನಗೇನಾಗಿತ್ತು ಹೇಳಲ್ಲ...."

"ನನಗೆ ? ಅಪೆಂಡಿಸೈಟಿಸ್ !"

"ಅಂದರೆ ಅಪರೇಶನ್ನಾಯಿತೇ ?"

"ಹೌದು – ತಾಯಿ ಏನು ಹೇಳಿದಳು?"

"ಏನಿಲ್ಲ, ಬರೇ ಕಾಯಿಲೆ ಎಂದರು."

"ಗುಡ್, ನೀನು ಎಂದು ಹೊರಡುವಿ ಆಫ್ರಿಕೆಗೆ ?"

"ನಾಲ್ಕು ದಿನಗಳ ನಂತರ"

"ನಾಲ್ಕೇ ದಿನ ? ಹಾಗಾದರೆ ಇಲ್ಲಿಂದ ಎಂದು ಹೋಗುವವ ?"

"ಸಾಧ್ಯವಾದರೆ ಇಂದೇ ರಾತ್ರಿ"

"ಹುಂ, ಎಲ್ಲ ಬಿಟ್ಟು – ಇಷ್ಟು ತಡವಾಗಿಯೇಕೆ ಬಂದಿ ಭೆಟ್ಟಿಯಾಗಲು?"

"ನಿಜವಾಗಿ ನೋಡಿದರೆ ನಾನು ಬರವವನೇ ಇದ್ದಿಲ್ಲ...."

ಅದೇ ನೆಟ್ಟಗಾಗುತ್ತಿತ್ತು. ಬಂದೆಯೇಕೆ ಹಾಗಾದರೆ?" ಕಾಮಿನಿಯ ಧ್ವನಿಯಲ್ಲಿ ಒಮ್ಮೆಲೆ ಉದ್ವೇಗ ಹಣಕಿ ಹಾಕಿತು.

"ಸಿರ್ಸಿಗೆ ಹೋಗಿದ್ದೆ. ದಾರಿಯಲ್ಲಿ–ನೀನು–ತಡೆಯಲಾಗಲಿಲ್ಲ– ಕೊನೆಯ ಭೆಟ್ಟಿ! ಎಲ್ಲ ಎಲ್ಲ – ಬಿಟ್ಟು ಹೋಗುವದಕ್ಕಿಂತ ಮುಂಚೆ...."

"ಆಫ್ರಿಕೆಗೆ ನೀನು ಒಬ್ಬನೇ ಹೊರಟಿರುವಿಯೋ ಅಥವಾ ಮತ್ಯಾರಾದರೂ ಜೋಡಿಗೆ" ಅವಳ ದೃಷ್ಟಿ ತೀಕ್ಷ್ಣವಾಗಿತ್ತು.

"ನಾನೊಬ್ಬನೇ !"

"ಯಾಕಾರೆ ಹೊರಟಿರುವಿ – ಎಲ್ಲ, ಎಲ್ಲ ಬಿಟ್ಟು ?" ನನ್ನ ಶಬ್ಧಗಳನ್ನು ಅಣಕಿಸಿದಳು.

"ಎಲ್ಲರೂ ಕೇಳುವದು ಇದೇ ಪ್ರಶ್ನೆಯನ್ನು. ಬೇರೆಬೇರೆಯವರಿಗೆ ಬೇರೆ ಬೇರೆ ಉತ್ತರ...."

"ನನಗೆ ಯಾವ ಉತ್ತರ ?"

"ನಿನಗೆ –ನಿನಗೆ ಉತ್ತರವನ್ನೇ ಕೊಡುವದಿಲ್ಲ !"

ಅವಳಿಗೆ ಅಪ್ಮಾನವಿತ್ತಂತಾಯಿತೇನೊ !

"ನಾನೇನು ಅಂಥ ಅಪರಾಧ ಮಾಡಿದ್ದೇನೆ ?"

"ನೀನು –ನೀನು ಯಾವ ಅಪರಾಧವನ್ನೂ ಮಾಡಿಲ್ಲ ಕಾಮಿನಿ... ಇಷ್ಟೆ, ನನಗೆ ಯಾವ ಬಗೆಯ ಉತ್ತರ ಹೇಳಲು ಮನಸ್ಸೇ ಇಲ್ಲ. ಆ ಮಾತೇ ಬೇಡ ಈಗ – ಸ್ವಲ್ಪ ಅಲ್ಲಿ ಇಲ್ಲಿಯ ಸುದ್ಧಿ ಮಾತನಾಡಿ, ಒಬ್ಬರಿಗೊಬ್ಬರಿಗೆ ಗುಡ್‌ಬಾಯ್ ಹೇಳೋಣ"

ಕಾಮಿನಿಯ ಮುಖ ಒಮ್ಮೆಲೆ ಇಳಿಯಿತು. ಮೌನವಾಗಿ ತನ್ನ ಕೈ ಚಾಚಿದಳು. ನಾನು ನನಗೆ ಗೊತ್ತಿಲ್ಲದೆಯೇ ಅವಳ ಚಾಚಿದ ಕೈಯನ್ನು ನನ್ನ ಕೈಯಲ್ಲಿ ಬಂಧಿಸಿದೆ.

"ಗೌರೀಶ..." ಅವನ ಧ್ವನಿ ದೂರದಿಂದ ಬಂದಂತೆನಿಸಿತು.

"ಹುಂ."

ಅವಳಿಂದ ಒಂದು ದೀರ್ಘವಾದ ನಿಟ್ಟುಸಿರು ಹೊರಬಿತ್ತು. ಅನಂತರ ಒಮ್ಮೆಲೆ "ಗುಡ್‌ಬಾಯ್ !" ಎಂದಳು ! ನಾನು ಏನೂ ಹೇಳಲಿಲ್ಲ. ಕಾಮಿನಿ ಸರ್ರನೆ ತನ್ನ ಕೈಯನ್ನು ಕೊಸರಿಕೊಂಡು, ತನ್ನ ಎರಡೂ ಕೈಗಳಲ್ಲಿ ಮುಖವನ್ನು ಮುಚ್ಚಿ ಬಿಕ್ಕಳಿಸತೊಡಗಿದಳು.

ನನಗೆ ಏನು ಮಾತಾಡಬೇಕೊ ತಿಳಿಯಲಿಲ್ಲ....

"ಕಾಮಿನಿ...." ಎಂದೆ.

ಅಷ್ಟರಲ್ಲಿ ಸರಲಾಬಾಯಿಯವರು ಬಂದು ಕರೆದರು : "ಗೌರೀಶ, ಬಾರಪ್ಪಾ ನೀನು ದಣಿದಿರಬೇಕು ; ಹಸಿವೆಯಾಗಿರಬೇಕು ನಿನಗೆ ; ಬಾ. ಅನತರ ಕಾಮಿನಿಯ ಕಡೆಗೆ ನೋಡಿ, "ಕಾಮಿನೀ, ಇದೇನು ನಡೆಸಿರುವಿ ಅಂ ?", ಎಂದರು. "ಬಾ ಗೌರೀಶ, ಆ ಹುಚ್ಚಿಯ ಗೊಡವೆಗೆ ಹೋಗಬೇಡ......"

ಊಟ ಮಾಡುವಾಗ ಸರಲಾಬಾಯಿಯವರು ನನ್ನ ಹತ್ತಿರವೇ ಕುಳಿತು

ಬಡಿಸುತ್ತಿದ್ದರು :

"ಗೌರೀಶ, ಬಹಳ ದೂರ ಹೊರಟಿಯಪ್ಪ ನೀನು !"

"ಹುಂ."

"ಇನ್ನು ಮೇಲೆ ಎಂದು ಭೆಟ್ಟಿಯೋ ನಿನ್ನದು ?"

ನಾನು ಕಾಮಿನಿಯ ಬಗ್ಗೆ ಚಿಂತಿಸುತ್ತ, ಅವಳು ನುಡಿದ ಮಾತುಗಳ ಬಗ್ಗೆ ಯೋಚಿಸುತ್ತ ಕುಳಿತಿದ್ದೆ. ಸರಲಾಬಾಯಿಯವರ "ಬಾ. ಆ ಹುಚ್ಚಿಯ ಗೊಡವೆಗೆ ಹೋಗಬೇಡ" ಎಂಬ ಮಾತು ತೀರ ಅರ್ಥಪೂರ್ಣವಾಗಿತ್ತು. ಸಂಶಯಾಸ್ಪದವಾಗಿತ್ತು....

ನಾನೇ ಅಂದೆ : "ಮಾಂಶೀ, ಕಾಮಿನಿಯ ಲಗ್ನ ಒಂದು ನೀವು ಬೇಗ ಮಾಡಿಬಿಡಿರಿ."

"ಹುಂ, ಅದರದೇ ವಿಚಾರ ನಡೆಸಿರುವೆ, ಆದರೆ ಅವಳ ಲಗ್ನವಾದ ನಂತರ ನಾನೊಬ್ಬಳೇ ಏಕಾಕಿ."

ಅವರ ಮುಖದ ಕಡೆಗೆ ನೋಡುವ ಧೈರ್ಯವಾಗಲಿಲ್ಲ. ಅವರ 'ಏಕಾಕಿ' ಶಬ್ಧ ನನ್ನ ಮನಸ್ಸಿನಲ್ಲಿ ಸೂಜಿಯಂತೆ ನಟ್ಟಿತು. ನನ್ನನ್ನೇ ಸಂತೈಸುವಂತೆ ಅವರು ನುಡಿದರು :

"ಆದರೆ ಒಬ್ಬಳೇ ಇರುವುದರ ಬಗ್ಗೆ ನನಗೆ ಏನೂ ಅನಿಸುವದಿಲ್ಲ. ಇಂದಿಲ್ಲ ನಾಳೆ ಅದು ಬರುವದೇ ನನ್ನ ಪಾಲಿಗೆ.... ದೈವ ತಪ್ಪಿದ್ದಲ್ಲ !

"ಯಾರನ್ನಾದರೂ ನೋಡಿಟ್ಟಿದ್ದೀರಾ ?" ನಾನು ಮುಖ ಎತ್ತಿ ಕೇಳಿದೆ...

ಅವರ ದೃಷ್ಟಿ ಅರ್ಥಪೂರ್ಣವಾಗಿ ನನ್ನ ಮೇಲೆಯೇ ನಟ್ಟಿತು. ನಾನು ಬೆಚ್ಚಿದೆ. ಮುಖ ಕೆಳಗೆ ಹಾಕಿ ಉಣ್ಣತೊಡಗಿದೆ....

"ಇನ್ನೂ ಇಲ್ಲ. ಅವಳ ದೈವದಲ್ಲಿ ಯಾರು ಇದ್ದಾರೋ ಏನೋ ?"

"ಅವಳಿಗೇನು, ಒಳ್ಳೇ ಗಂಡ ಸಿಗುವನೆಂಬುದರಲ್ಲಿ ಸಂಶಯವಿಲ್ಲ..."

"ಆದರೆ ಅವಳ ವೃತ್ತಿ ಒಳ್ಳೆಯ ಗಂಡನನ್ನು ದೊರಕಿಸಲು ಯೋಗ್ಯವಿಲ್ಲವಲ್ಲ...."

"ಅಂದರೆ ....?"

"ಗೌರೀಶ, ನಿನಗಲ್ಲದೆ ಮತ್ಯಾರಿಗೆ ಹೇಳಲಿ ?"

ನಾನು ಅವರತ್ತ ಸಹಾನುಭೂತಿಯಿಂದ ನೋಡಿದೆ.

"ನಿನಗೆ, ಯಾವ ಕಾಯಿಲೆಯೆಂದು ಹೇಳಿದಳು ಅವಳು ?"

"ಅಪೆಂಡಿಸ್ಯಾಟಿಸ್ ! ಏನು ಅವಳಿಗೆ ಬಹಳ ತೊಂದರೆಯಾಯಿತೇ ?

ಇದಕ್ಕಿಂತ ಮೊದಲು ಅವಳಿಗೆ ಈ ತೊಂದರೆ ಇದೆಯೆಂದು ಗೊತ್ತೇ ಇರಲಿಲ್ಲ. ಒಮ್ಮೆಲೆ ಆಪರೇಶನ್ನೆಂದು ಕೇಳಿ ಆಶ್ಚರ್ಯವೇ ಆಯಿತು." ನಾನು ಸರಳವಾಗಿ ಹೇಳಿದೆ.

"ಯಾರಿಗೂ ಹೇಳಬೇಡ, ಗೌರೀಶ – ಸತ್ಯಸ್ಥಿತಿ ಬೇರೆ ಇದೆ."

ನನ್ನ ಕುತೂಹಲ ಕೆರಳಿತು. ಅವರು ಏನೋ ಭಯಂಕರವಾದ ಮಾತು ಹೇಳಲಿರುವರೆಂಬ ಭಾವನೆ ಬಲವಾಯಿತು.

"ನೀನೇ ನಮ್ಮ ತೀರ ಸನಿಹದ ಆತ್ಮೀಯ ಎಂದು ಹೇಳುತ್ತಿದ್ದೇನೆ. ಆದರೂ ಯಾರ ಮುಂದೆಯೂ ಹೇಳದ ಸತ್ಯ ನಿನಗೇಕೆ ಹೇಳುತ್ತಿರುವೆನೋ ಗೊತ್ತಿಲ್ಲ. ಶ್ರೀಕಾಂತ... ಗೌರೀಶ, ನಿನ್ನನ್ನು ನೋಡಿದರೆ.... ನೀನು ಮಗನಂತಿರುವಿ ನನಗೆ... ಆದುದರಿಂದ " ಮುಖವನ್ನು ಆ ಬದಿಗೆ ಹೊರಳಿಸಿ ತಮ್ಮನ್ನು ತಾವೇ ನಿಗ್ರಹಿಸಿದರು.

ನಾನು ಕೈ ತೊಳೆದು, ಮಣೆಯ ಮೇಲಿನ ಟಾವೆಲಿಗೆ ಕೈಯೊರೆಸುತ್ತ ಬೆಪ್ಪಾಗಿ ಕುಳಿತೆ.

"ಶ್ರೀಕಾಂತ ಹೋದ ಮೇಲೆ – " ಒಂದು ದೊಡ್ಡ ನಿಟ್ಟುಸಿರನ್ನು ಬಿಟ್ಟು ಮುಂದುವರಿಸಿದರು : "ಮುಂದೆ ಏಳೆಂಟು ದಿನಗಳ ನಂತರ ಅವಳ ಕಕ್ಕ ಹಾಗೂ ಉಳಿದ ಸಂಬಂಧಕರೆಲ್ಲರೂ ತಮ್ಮ ತಮ್ಮ ಊರಿಗೆ ಹೋದರು. ಆಮೇಲೆ ಗಾಂಗಲರು–ನಿನಗೆ ಗೊತ್ತೇಯಿದೆ ಅವರ ಬಗ್ಗೆ...ದೊಡ್ಡವರು... ನಮ್ಮನ್ನು ನೋಡಿ ಕೊಳ್ಳುವ ಭಾರ ಹೊತ್ತರು. ದಿನಾಲು ಒಮ್ಮೆ ಬಂದು ಹೋಗುತ್ತಿದ್ದರೂ.... ಇನ್ನೂ ಬರುತ್ತಾರೆ...."

"ತಿಳಿಯಿತು, ಮಾಂಶೀ, ಮುಂದಿನದನ್ನು ಹೇಳಬೇಡಿರಿ..." ನನ್ನ ಆಕಸ್ಮಿಕ ಮಾತು ಕೇಳಿ ಅವರಿಗೆ ಆಶ್ಚರ್ಯವಾಗಿರಬೇಕು ! ಸ್ವಲ್ಪ ಹೊತ್ತು ಇಬ್ಬರೂ ಮೌನದಿಂದ ಕುಳಿತೆವು. ನನ್ನ ತಲೆಯಲ್ಲಿ ಕಾಮಿನಿ – ಗಾಂಗಲರ ಸಂಬಂಧದ ಬಗ್ಗೆ ಕಾಲ್ಪನಿಕ ಚಿತ್ರಗಳು ಸಿನೇಮಾದಂತೆ ತಲೆಯಲ್ಲಿ ಸರಸರನೆ ಹಾಯ್ದು ಹೋದವು : ಕಣ್ಣು ಒರೆಸಲು ಬಂದ ಗಾಂಗಲರು ಕಣ್ಣಿನಲ್ಲಿ ಧೂಳಿ ಹಾಕಿದರು – ಕಾಮಿನಿಯೊಡನೆ ಮೊದಲು ರಾಜಕಾರಣ ಮಾತನಾಡುತ್ತ ಸಾವುಕಾಶವಾಗಿ 'ಪ್ರೇಮ'ದ ಬಗ್ಗೆ ಮಾತನಾಡಲು ಸುರು ಮಾಡಿದರು... ಈ ರಾಜಕಾರಣಿ!.... ಕಾಮಿನಿಯ ಬೆನ್ನಿನ ಮೇಲೆ ಕೈಯಾಡಿಸುತ್ತ ಸಾವುಕಾಶ ಮುಂದೆ... ಹುಂ... ಎಲ್ಲ ತಿಳಿಯಿತು..... ಮುಂದೆ ಬಸಿರು ನಿಂತ ಕೂಡಲೆ ಆಪರೇಶನ್ ಹಾ–ಹಾ–ಹಾ– ಅಪೆಂಡಿಸ್ಯಾಟಿಸ್ !... ಎಲ್ಲ ಸ್ಪಷ್ಟ ತಿಳಿಯಿತು....

ನಾನು ಸರಲಾಬಾಯಿಯವರ ಕಡೆಗೆ ದೃಷ್ಟಿ ಹೊರಳಿಸಿದಾಗ ಅವರು ವಿಚಾರ ಮಗ್ನರಾಗಿದ್ದರು.

"ಕಾಮಿನಿ, ಇಂಥ ಹುಚ್ಚುತನ ಮಾಡಬಹುದೆಂದು ಕನಸಮನಸಿನಲ್ಲಿಯೂ ಎಣಿಸಿರಲಿಲ್ಲ." ಸರಲಾಬಾಯಿಯವರ ದೀನವಾಣಿ.

ನಾನು ಮನಸ್ಸಿನಲ್ಲಿಯೇ ನಕ್ಕೆ–ನಾನು ಎಣಿಸಿದ್ದೆ ಎಂಬ ಭಾವದಿಂದ !

"ಮುಂದೇನು ಮಾಡಬೇಕೆಂದಿರುವಿರಿ ?"

"ಮುಂದೇನು, ಗೌರೀಶ ? – ಅವಳ ಲಗ್ನ ಹೇಗಾದರೂ ಮಾಡಿ ಮುಗಿಸಿದರೆ ನಾನು ಪಾರಾದೆ..."

"ಆದರೆ ಲಗ್ನ ಅವಳ ಸಮಸ್ಯೆಯನ್ನು ಬಗೆಹರಿಸುವದೇ ?" ನನ್ನ ಪ್ರಶ್ನೆ ಅವರಿಗೆ ತಿಳಿಯಲಿಲ್ಲ.

"ಅವಳ ಸಮಸ್ಯೆ ? ಅವಳ ಸಮಸ್ಯೆಯೇನಿದೆ ? – ಸದ್ಯ ಅದು ಬಗೆ ಹರಿದಿದೆ –– ಎಲ್ಲಿಯದೋ ಔಷಧ ತಿಂದು ತನ್ನ ಪಾಪ ಹೊರಗೆ ಹಾಕಿದಳು. ಅನಂತರ ಅವಳಿಗೆ ವಿಪರೀತ ತ್ರಾಸು ಶುರುವಾಯಿತು. ನಾನಂತೂ ಭಯಂಕರ ಹೆದರಿದ್ದೆ, ಆದರೆ ಗಾಂಗಲರ ಕೃಪೆಯಿಂದ, ಅಂದರೆ ಅವರು ಕೂಡಲೇ ಕರೆದು ತಂದ ಡಾಕ್ಟರರ ಸಹಾಯದಿಂದ – ಅವಳ ಜೀವವೇನೋ ಉಳಿಯಿತು. ಈಗ ಅವಳಿಗೆ ಪಶ್ಚಾತ್ತಾಪವಾಗಿರಬೇಕು – ಒಳ್ಳೆಯ ಒಬ್ಬ ಹುಡುಗ ಲಗ್ನವಾಗಲು ತಯಾರಾದರೆ ಅವಳು ಒಲ್ಲೆನ್ನಲಾರಳು...."

ಸರಲಾಬಾಯಿಯವರ ಸರಳ ವಿಚಾರಸರಣಿಯನ್ನು ನೋಡಿ ಕರುಣೆ ಉಕ್ಕಿಬಂತು. ಆ ವಿಚಾರ ಸರಣಿ ಪ್ರಾಮುಖ್ಯವಾಗಿ ತಾಯಿಯ ವಿಚಾರ ಸರಣಿ. ಮಕ್ಕಳು 'ಪಾಪ'ಗಳನ್ನು ಕೂಡಲೇ ಕ್ಷಮಿಸಿ ಅವರ ಹಿತದ ಬಗ್ಗೆ ಸದೈವ ಚಿಂತಿಸುವದು ತಾಯಿಯ ಮೂಲಸ್ವಭಾವ...

* * *

ಸರಲಾಬಾಯಿಯವರು ಮನೆಗೆಲಸದಲ್ಲಿ ತೊಡಗಿದರು....

ಕಾಮಿನಿ ನನ್ನ ಹಾದಿಯನ್ನೇ ಕಾಯುತ್ತಿದ್ದಳು. ಅವಳ ಮುಗುಳು ನಗೆ ನನ್ನನ್ನು ಸ್ವಾಗತಿಸಿತು. ನಾನು ಹೋಗಿ ಅವಳ ಬದಿಗೆ ಸ್ಟೂಲಿನ ಮೇಲೆ ಕುಳಿತೆ.

ಒಂದೆರಡು ನಿಮಿಷ ಅವಳನ್ನು ಕಣ್ಣಿಟ್ಟು ನಿರುಕಿಸಿದೆ : ಅವಳ ಅಸ್ತವ್ಯಸ್ತ ಕೂದಲು ಅವಳ ಮುಖದ ಆಕರ್ಷಣೆಯನ್ನು ಹೆಚ್ಚಿಸಿದ್ದವು. ಅವಳ ದೊಡ್ಡ ದೊಡ್ಡ ಕಣ್ಣುಗಳಲ್ಲಿ ಒಂದು ನವೀನವಾದ ಗಾಂಭೀರ್ಯ (ಬಹುಶಃ ಅವಳು ಅನುಭವಿಸಿದ ದುಃಖ ಆ ಕಣ್ಣುಗಳಲ್ಲಿ ಈ ಗಾಂಭೀರ್ಯವನ್ನು ಒಡ್ಡಿರಬೇಕು)

ವಿರಾಜಿಸುತ್ತಿತ್ತು. ಅವಳ ಮ್ಲಾನವಾದ ಗುಲಾಬಿ ತುಟಿಯಲ್ಲಿ ಎಂದಿನ ಗೂಢವಾದ ಸ್ಮಿತಹಾಸ್ಯವಿತ್ತು.... ಇಲ್ಲಿ ಪವಡಿಸಿದ ಈ ಗಂಧರ್ವ ಕನ್ಯೆಯನ್ನು ನೋಡಿದೊಡನೆ ಯಾವ ಋಷಿಯ ತಪೋಭಂಗವಾಗಲಿಕ್ಕಿಲ್ಲ ಎಂದು ಒಂದು ನಿಮಿಷ ಅನಿಸುವುದು ಕೂಡ. ಆದರೆ ನಾನು ಲೈಂಗಿಕ ವಾಸನೆಯನ್ನು ಹತ್ತಿಕ್ಕಿ ಇಟ್ಟು ಕಾಲ್ಪನಿಕ ಮುಕ್ತಿಯ ಸಲುವಾಗಿ ತಪಶ್ಚರ್ಯೆಮಾಡುತ್ತಿದ್ದ ಋಷಿಯಲ್ಲವಾದ್ದರಿಂದ – ಕದಲದೇ ಕುಳಿತೆ. ಸ್ಟೂಲಿನ ಮೇಲೆ – ಅವಳೆಡೆಗೆ ನಿರುಕಿಸುತ್ತ....

"ಗೌರೀಶ, ಏನು ಮಾಡುತ್ತಿರುವೆ ಹಾಗೆ ನಿಟ್ಟಿಸಿ?"

ಕಾಮಿನಿಯ ಮೃದುಹಾಸ್ಯ, ಸ್ವಲ್ಪ ಏರಿದ ಹುಬ್ಬಿನ ಗೆರೆಗಳು, ಸ್ಫುರಣಗೊಂಡ ಮೂಗಿನ ಹೊರಳಿಗಳು, ಅರಳಿದ ಕಣ್ಣುಗಳು ನನ್ನ ಅಂತರಂಗದಲ್ಲಿಯ ಹಳೆಯ ಗೌರೀಶನನ್ನು ಬಡಿದೆಬ್ಬಿಸಿದವು....

"ಏನಿಲ್ಲ–ನಿನ್ನ–ನಿನ್ನ–ಭವ್ಯ ಸೌಂದರ್ಯವನ್ನು – ನಾನು–ನಾನು ಕಳೆದುಕೊಂಡ ನನ್ನ ಕನಸನ್ನು"

"ಸುಮ್ಮನೇಕಾದೆ? ಕಾವ್ಯ ಉಕ್ಕುತ್ತಿತ್ತಲ್ಲ–ಉಕ್ಕಲಿ." ಕಾಮಿನಿ ತುಂಟನಗೆ ನಕ್ಕಳು, "ನೀನು ಕಳೆದುಕೊಂಡ ಕನಸು? ಅಂದರೇನು, ಗೌರೀಶ!"

ನಾನು ಉತ್ತರ ಹೇಳಲಿಲ್ಲ.

"ನಾನು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಬಾರದೆಂದು ಮಾಡಿರುವಿಯಾ, ಗೌರೀಶ?"

"ಪ್ರಶ್ನೋತ್ತರಗಳ ಅವಶ್ಯಕತೆ ಏನೂ ಇಲ್ಲ–ಆದದ್ದೆಲ್ಲ ಆಗಿ ಹೋದ ಮೇಲೆ...."

"ಅಂದರೇ"

"ಮರಳಿ ಪ್ರಶ್ನೆ?"

"ಇನ್ನು ಪ್ರಶ್ನೇನೆ ಕೇಳುವದಿಲ್ಲ–ಆಯಿತಲ್ಲೋ? ಆದರೆ ಪ್ರಶ್ನೋತ್ತರಗಳಿಲ್ಲದೇ ಮಾತನಾಡುವದು ಹೇಗೆ? ಅಥವಾ ಮಾತನಾಡುವ ಅವಶ್ಯಕತೆ ಇಲ್ಲವೋ ನಿನ್ನ ದೃಷ್ಟಿಯಿಂದ?"

"ಹುಂ."

"ನಿನಗೆ ಏನೋ ಸಿಟ್ಟುಬಂದಿದೆ... ಅಮ್ಮ ನಿನಗೆ ಏನೇನು ಹೇಳಿದಳು?"

"ಹೇಳಬೇಕಾದ್ದನ್ನು."

"ಅಂದರೆ?"

ಅವಳೆಡೆಗೆ ಚುಚ್ಚು ದೃಷ್ಟಿಯಿಂದ ನೋಡಿ, "ಸತ್ಯವನ್ನು," ಎಂದೆ.

ಕಾಮಿನಿಯ ದೃಷ್ಟಿ ನನ್ನ ಮೇಲಿಂದ ಜಾರಿ ಗೋಡೆಯತ್ತ ಹೊರಳಿತು. ಅವಳ ಮುಖದ ಮೇಲೆ ವಿಚಾರಮಗ್ನತೆ ತೋರಿಬಂತು.... ಅವಳ ಆ ಭಾವ ಎಂದಿನಂತೆ ನನ್ನ ಮನಸ್ಸನ್ನು ಸೆರೆಹಿಡಿಯಿತು...

"ನಾನು ಸತ್ತು ಸತ್ತು ಉಳಿದೆ.... ನಾನು ಸಾಯಬೇಕಿತ್ತು !" ಕಾಮಿನಿ ಸಾವಕಾಶವಾಗಿ ಗೋಡೆಗೇ ಹೇಳುತ್ತಿದ್ದಂತೆ ನುಡಿದಳು.

"ಛೇ, ಹೀಗೆ ಅನ್ನಬಾರದು ಕಾಮಿನಿ !"

"ನಾನು ಕೆಟ್ಟ ಹುಡುಗಿ ಎಂಬ ಮಾತು ನನಗೆ ಸಂಪೂರ್ಣಗೊತ್ತಿದೆ.... ನಾನು ಯಾವ ದಿಶೆಯಲ್ಲಿ ಹೊರಟಿರುವೆನೋ, ಎಲ್ಲಿ ಮುಟ್ಟುವೆನೋ ನನಗೆ ಗೊತ್ತಿಲ್ಲ... "

"ಮಾಂಶೀಯವರು ನಿನ್ನ ಲಗ್ನದ ಬಗ್ಗೆ ಯೋಚಿಸುತ್ತಿದ್ದಾರೆ..."

"ಹುಂ, ಆದರೆ ಯಾರನ್ನೂ ಮೋಸಗೊಳಿಸುವ ಉದ್ದೇಶವಿಲ್ಲ ನನ್ನದು...."

"ಹಾಗಾದರೆ ಏನು ಮಾಡಬೇಕೆನ್ನುವಿ?"

"ದಾದಾನಂತೆ ಆತ್ಮಹತ್ಯೆ...." ಅವಳ ಧ್ವನಿಯಲ್ಲಿ ನಾಟಕೀಯತೆಯ ಛಾಯೆ ಇದ್ದಂತೆನಿಸಿತು.

ನಾನು ಸ್ವಲ್ಪ ಹೊತ್ತು ಸುಮ್ಮನೇ ಕುಳಿತೆ. ಏನಾದರೂ ಮಾತನಾಡುವ ಉದ್ದೇಶದಿಂದ :

"ಅದಕ್ಕೇ ನಾನು ಹೇಳಿದ್ದು – ಶ್ರೀಕಾಂತನ ಕೋಣೆಯಲ್ಲಿ ಅವನ ಕಾಟಿನ ಮೇಲೆ ನೀನು ಮಲಗಬಾರದಿತ್ತು.... ನೀನಿಲ್ಲಿ ಮಲಗಿದ್ದರಿಂದಲೇ ಇಲ್ಲದ ಸಲ್ಲದ ವಿಚಾರಗಳು ನಿನ್ನ ಮನಸ್ಸನ್ನು ಮುತ್ತುತ್ತಿವೆ" ಎಂದೆ.

ಕಾಮಿನಿಯು ಒಮ್ಮೆಲೆ ತನ್ನ ಕೈಚಾಚಿ ನನ್ನ ಕೈಯನ್ನು ಬಂಧಿಸಿ ನುಡಿದಳು: "ಇಲ್ಲ, ಗೌರೀಶ, ನಾನು ಸೀರಿಯಸ್ಸಾಗಿ ಹೇಳುತ್ತಿರುವೆ."

"ಅಂದರೆ ನಿನಗೆ ನಿಜವಾಗಿಯೂ ಪಶ್ಚಾತ್ತಾಪವಾಗಿದೆಯೇ?"

"ಪಶ್ಚಾತ್ತಾಪ –ಅದು ಹೇಗೆ ಇರುತ್ತದೆಂಬುದು ನನಗೆ ಗೊತ್ತಿಲ್ಲ, ಗೌರೀಶ."

"ಇದನ್ನು ಮಾಡಬಾರದಿತ್ತು. ಮಾಡಿದೆ. ತಪ್ಪಿದೆ – ಎಂಬ ಭಾವನೆ."

"ನಿನಗೆ ನಿಜ ಹೇಳಬೇಕಾದರೆ ನನಗೆ ಅಂಥ ಭಾವನೆ ತೀಕ್ಷ್ಣವಾಗಿ ಅನಿಸಿಯೇ ಇಲ್ಲ. ಅದಕ್ಕೇ ನಾನು ಕೆಟ್ಟವಳೆಂಬ ಭಾವನೆ ಉಂಟಾಗಿದೆ. ಹಾಗೆ ನೋಡಿದರೆ ಎಲ್ಲದಕ್ಕೂ ನಾನೇ ಕಾರಣಳೇನು? ಜನರು ನನ್ನನ್ನು ಮೋಸಗೊಳಿಸುವರು ಎಂದೇಕೆ ಹೇಳಬಾರದು ನಾನು?"

"ಒಂದೇ ಕೈಯಿಂದ ಚಪ್ಪಾಳೆ ಶಕ್ಯವಿದೆಯೇ?" ನಾನು ನನ್ನ ಕೈಯನ್ನು

ಎಳೆದುಕೊಳ್ಳುತ್ತಾ ಕೇಳಿದೆ.

"ನನ್ನ ಸೌಂದರ್ಯ, ನನ್ನ ಬಿಚ್ಚು ಮನಸ್ಸಿನ ನಿಸ್ಸಂಕೋಚ ವರ್ತನೆ ಜನರ ತಲೆ ಕೆಡಿಸಿದರೆ ನನ್ನ ತಪ್ಪೇನು?"

"ಕಾಮಿನೀ. ನೀನು ಸಣ್ಣ ಕೂಸು ! ನಿನ್ನನ್ನು ಕಾಪಾಡಲು ಒಬ್ಬ ಪಿತೃಭಾವವುಳ್ಳ ಗಟ್ಟಿಯಾದ ಮನುಷ್ಯ ಬೇಕು ! ಗಾಂಗಲರಿಗೆ ಹೆಂಡತಿ ಇದ್ದಾಳೆಯೇ?"

"ಇಲ್ಲ – ಆದರೆ ಆ ಮನುಷ್ಯನ ಹೆಸರೆತ್ತಬೇಡ, ಗೌರೀಶ."

"ಯಾಕೆ?"

"ಯಾಕೆ ! ಏನು ಸ್ವಾರ್ಥ, ಏನು ಆತ್ಮವಿಶ್ವಾಸ, ಏನು ನಿರ್ಲಜ್ಜತೆ ಆ ಮನುಷ್ಯನಲ್ಲಿ. ಗೌರೀಶ, ಜಗತ್ತಿನ ಬಗ್ಗೆ ತಿಳುವಳಿಕೆ ಬರುತ್ತಿದೆ ನನಗೆ...."

"ನಿನ್ನ ಬಗ್ಗೆ?"

ಕಾಮಿನಿ ಸುಮ್ಮನಾದಳು. ಸ್ವಲ್ಪ ಹೊತ್ತು ಯೋಚಿಸಿ ನಂತರ, "ನನ್ನ ಬಗ್ಗೆ ನಿನಗೆ ಗೊತ್ತುಂಟಲ್ಲ !" ಎಂದು ನುಡಿದು ನನ್ನ ಮುಖವನ್ನು ಅರಸಿ ನೋಡಿದಳು.

"ಮುಂದೆ ?" ನಾನೆಂದೆ ನಿಸ್ಸಹಾಯನಾಗಿ.

"ಗೌರೀಶ, ನನ್ನ ಪ್ರೇಮವೆಲ್ಲಿ ಮಾಯವಾಯಿತೆ ? ಇಷ್ಟರೊಳಗೆ ?"

ನನ್ನ ಹೃದಯ ಉಕ್ಕಿಬಂತು. ನಾನು ಯಾಂತ್ರಿಕನಾಗಿ, "ಮುಂದೆ ?" ಎಂದೆ.

"ಮುಂದೆ ! ಗೌರೀಶ, ನಿನ್ನ ಪ್ರೇಮದಿಂದಲೇ ಎಲ್ಲ ಸುರುವಾಯಿತು... ನಡುವೆಯೇ ನಡುನೀರಿನಲ್ಲಿಯೇ ನೀನು ನನ್ನನ್ನು ಬಿಟ್ಟುಬಿಟ್ಟೆ, ನಾನು ನಿನ್ನನ್ನು ಲಗ್ನವಾಗಲು ಸಿದ್ಧಳಾದಾಗ ಕೂಡ ನೀನು ಆಶೆ ತೋರಿಸಿ ಹಿಂಜರಿದೆ, ಕಾಲ್ತೆಗೆದೆ. ನಾನು ಮಾತ್ರ ನಡುನೀರಿನಲ್ಲಿಯೇ, ನನ್ನೆಡೆಗೆ ಚಾಚಿದ ಕೈಗಳೆಲ್ಲ ಹೊಲಸು ಕೈಗಳಾದವು.... ಸ್ವಾರ್ಥಿ, ಪಿಶಾಚಿ, ಘಾತಕಿ, ತಿರುಗಣಿ.... ತಿರುಗಣಿಮಡುವು : ಯಾಕೆ ಸಾಯಲಿಲ್ಲವೋ ನಾನು ? ಗೌರೀಶ, ನನ್ನನ್ನು ಉಳಿಸು, ಗೌರೀಶ...."

ಕಾಮಿನಿಯ ಭಾವಾವೇಶದ ಕೊನೆ ಅವಳೇ ಕಂಬನಿಯಲ್ಲಾಯಿತು. ಗೋಡೆಯ ಕಡೆಗೆ ಹೊರಳಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ನನ್ನ ಕೈಗಳು ತಾವಾಗಿಯೇ ಅವಳೆಡೆಗೆ ಚಾಚಿದವು. ಮೃದುವಾಗಿ ಅವಳ ದೇಹವನ್ನು ನನ್ನ ಬದಿಗೆ ಹೊರಳಿಸಿದವು....

"ಕಾಮಿನೀ, ಅಳಬೇಡ, ಪ್ಲೀಜ್, ಅಳಬೇಡ...."

ಅವಳ ಅಳುವು ಒಮ್ಮೆಲೆ ಕಡಿಮೆಯಾಯಿತು. ಅವಳಿಗೆ ಏನನಿಸಿತೋ

ಏನೋ ನನ್ನ ಕೈಗಳನ್ನು ಹಿಡಿದು ತನ್ನ ವಕ್ಷಸ್ಥಳದಲ್ಲಿ ಒತ್ತಿ ಹಿಡಿದಳು. ಕೂಡಲೇ ಆ ಕೈಗಳ ಮೇಲೆ ತನ್ನ ಬಿಸಿಯಾದ ತುಟಿಗಳನ್ನೊತ್ತಿ ಮುತ್ತಿನ ಸುರಿಮಳೆಗರೆದಳು. ಆಮೇಲೆ ಕಂಬನಿಯಿಂದ ಒದ್ದೆಯಾದ ಕಣ್ಣುಗಳಿಗೆ ನನ್ನ ನಿಸ್ಸಹಾಯವಾದ ಕೈಗಳನ್ನು ಒತ್ತಿ ಹಿಡಿದು ಎಷ್ಟೋ ಹೊತ್ತು ಸುಮ್ಮನೆ ಮಲಗಿದಳು.

ಅವಳ ಮುದುಡಿದ ದೇಹ ಪ್ರಶ್ನೆ ಚಿಹ್ನೆಯಂತೆ ನನ್ನ ಮುಂದೆ ಬಿದ್ದಿತ್ತು.

ನನ್ನ ಜಡವಾದ ಮಸ್ತಕವು ಬಾಗಿ ಅವಳ ತಲೆಯ ಮೇಲೆ ಒರಗಿತು. ನನ್ನ ದೇಹವೂ ಪ್ರಶ್ನೆ ಚಿಹ್ನೆಯಾಯಿತೇನೋ !

* * *

"ನಾನು ವಿಚಾರಮಾಡುವೆ, ಕಾಮಿನೀ. ವಿಚಾರಮಾಡಲು ಅವಕಾಶ ಕೊಡು. ಹೀಗೆ ಒಮ್ಮೆಲೆ ದುಡುಕಬೇಡ ; ನನ್ನನ್ನು ದುಡುಕಿಸಬೇಡ. ಶ್ರೀಕಾಂತನಿದ್ದಿದ್ದರೆ – ಶ್ರೀಕಾಂತನಿದ್ದಿದ್ದರೆ ಅವನ ಮೇಲೆ ವಿಚಾರದ ಎಲ್ಲ ಜವಾಬ್ದಾರಿಯನ್ನು ಹೊರಿಸಿ ನಿಶ್ಚಿಂತನಾಗಬಹುದಿತ್ತು. ನಾನು ಆಫ್ರಿಕೆಗೆ ಹೋಗುವುದಂತೂ ನಿಶ್ಚಿತ... ಈ ಹಡಗದಿಂದಾಗಲಿ, ಮುಂದಿನ ಹಡಗದಿಂದಾಗಲಿ. ಕಾಮಿನೀ ಕಾಮಿನೀ, ಇನ್ನು ನಿನ್ನನ್ನು ನೋಡಿದೊಡನೆ ನನ್ನ ಹೃದಯ ಉರಿದೇಳುವದು, ನಿನ್ನನ್ನು ಎದೆಗವಚಿ ಗಟ್ಟಿಯಾಗಿ ಹಿಡಿದಿಡಬೇಕು ಎಂದು ಹಂಬಲಿಸುವದು. ಆದರೆ ಇಷ್ಟೇ, ನಾನು ಮೊದಲಿನ ಗೌರೀಶನಲ್ಲ.... ಆದರೂ ಯತ್ನಿಸುವೆ. ವಿಚಾರ ಮಾಡುವೆ."

"ಗೌರೀಶ ಈಗ ನಿನ್ನಲ್ಲಿ ಸಾಮರ್ಥ್ಯ ಬಂದಿದೆ. ನೀನು ಹೋದಲ್ಲಿ ಬರುವೆ, ನೀನು ಹೇಳಿದ್ದು ಮಾಡುವೆ.... ನಿನ್ನ ದಾಸಿಯಾಗಿ. ನನ್ನನ್ನು ಉಳಿಸು – ಶ್ರೀಕಾಂತನ ಸಲುವಾಗಿಯಾದರೂ..."

"ಕಾಮಿನಿ, ಹೀಗೆ ಭಾವನಾವಶಳಾಗಬೇಡ. ನನ್ನನ್ನು, ನನ್ನ ಹೃದಯಕ್ಕೇ ಕೈ ಹಾಕಿ ಎಳೆಯಬೇಡ – ನಾನು ಹೋಗಿ ವಿಚಾರಮಾಡಬೇಕು – ಅಮೂಲಾಗ್ರ ವಿಚಾರಮಾಡಬೇಕು... ಒಂದು ವೇಳೆ ನೀನು ನನ್ನೊಡನೆ ಬರುವದೇ ಆದರೆ... ಹುಂ, ಯಾವುದಕ್ಕೂ ನಾನು ಕೂಡಲೆ ಪತ್ರ ಬರೆಯುವೆ. ಗುಡ್‌ಬಾಯ್ !"

"ಗೌರೀಶ. ನನಗೊಂದು ಮುತ್ತು ಕೊಟ್ಟು ಹೋಗು...."

ನಾನು ಬಗ್ಗಿ ಅವಳ ತುಟಿಯ ಮೇಲೆ ತುಟಿಯನ್ನಿಟ್ಟೆ,

ಹೃದಯದಲ್ಲಿ ಏನೋ ಅಳುಕಿತು, ಮಳ್ಳಿನಂತೆ....

* * *

ಇಂದು ಮುಂಜಾನೆ ನಮ್ಮ ಶಿಪ್ಪಿಂಗ್ ಕಂಪನಿಗೆ ಹೋದೆ. ಎಸ್. ಎಸ್.

ಆಲಿಂಪಿಯಾದಲ್ಲಿಯ ನನ್ನ ರಿಜರ್ವೇಶನ್ ಕ್ಯಾನ್ಸಲ್ ಮಾಡಿ, ಇನ್ನೆಂಟು ದಿನಗಳ ನಂತರ ಹೊರಡುವ ಎಸ್.ಎಸ್. ವ್ಹೀನಸ್ ಎಂಬ ಹಡಗದಲ್ಲಿ ಎರಡು ಬರ್ಥ ಬುಕ್ಕಮಾಡಿದೆ. ಎರಡು ಬರ್ಥಗಳ ಒಂದು ಕೇಬಿನ್ನು ನಿನ್ನೆಯೇ ಆಕಸ್ಮಾತ್ ಕ್ಯಾನ್ಸಲ್ ಆದ್ದರಿಂದ, ನಮ್ಮೀರ್ವರಿಗೆ ಆ ಕೇಬಿನ್ನು ದೊರೆತಿದೆ – ನಮ್ಮ ಭಾಗ್ಯ ! ಮಹಾಸಾಗರದ ಭವ್ಯ ಉಯ್ಯಾಲೆಯಲ್ಲಿ ನಮ್ಮ ಮಧುಚಂದ್ರ – ನನ್ನ ಮುಕ್ತಿಯ ನಾಂದಿ....

ಸಮಯ ಬಹಳವಿಲ್ಲ. ನಿನ್ನೆಯ ಕತೆಯನ್ನು ಬೇಗ ಬರೆದು ಮುಗಿಸಬೇಕು....

ನಾಳೆ... ನಾಡಿದು ಈ ಹೊತ್ತಿಗೆಯನ್ನು ಸತ್ಯೇಂದ್ರನಿಗೆ ಸಮರ್ಪಿಸಲಿರುವೆ. ಅವನ ಪ್ರೇರಣೆಯಿಂದ ಪ್ರಾರಂಭವಾದ ಈ ಆತ್ಮಕಥನ ಅವನಿಗೇ ಸಲ್ಲತಕ್ಕದ್ದು. ಹಾಗೂ....

* * *

ನಿನ್ನೆ ಸಂಜೆ ಐದು ಗಂಟೆಗೆ ಡಾಲಿಯ ಮನೆಗೆ ಹೋಗಿ ಒಂದು ಪತ್ರ ಇಟ್ಟು ಬಂದೆ : 'ನಾನು ಬಂದಿದ್ದೇನೆ. ಇಂದು ರಾತ್ರಿ ಹತ್ತು ಗಂಟೆಗೆ ದಯವಿಟ್ಟು ಬರಬೇಕು.'

ಡಾಲಿಯ ತಾಯಿ, "ನೀವೇ ಮಿಸ್ಟರ್ ಉಪಾಸನಿಯಲ್ಲವೆ ?" ಎಂದು ಕೇಳಿದಳು.

"ಹೌದು, ಮೊದಲೊಮ್ಮೆ ನಿಮ್ಮ ಮನೆಗೆ ಬಂದಾಗ ಪರಿಚಯವಾಗಿತ್ತು," ಎಂದೆ ನಾನು.

"ಡಾಲಿ ನಿಮ್ಮ ಸ್ತುತಿ ಬಹಳ ಮಾಡುತ್ತಾಳೆ... ನೀವು ಆಫ್ರಿಕೆಗೆ ಹೋಗಲಿರುವಿರಲ್ಲವೇ?"

"ಹೌದು–ಆಚೆ ನಾಡದು – ಒಳ್ಳೇದು, ಈ ಪತ್ರವನ್ನು ದಯವಿಟ್ಟು ಡಾಲಿಗೆ ಕೊಡುವಿರಾ ? ಬಾಯ್ ಬಾಯ್ !"

"ಬೊನ್ ವ್ಹೊಯಾಜ್ !"

"ಥ್ಯಾಂಕ್ ಯು !"

* * *

ಸತ್ಯೇಂದ್ರನ ಮನೆಗೆ ಹೋದಾಗ ಆತ ಇನ್ನೂ ಬಂದಿರಲಿಲ್ಲ. ಸಂಶೀಲೆ ಆತ್ಮೀಯತೆಯಿಂದ ನನ್ನನ್ನು ಸ್ವಾಗತಿಸಿದಳು ;

"ಎಷ್ಟು ದಿನಗಳಾದವು ನೀವು ಇತ್ತ ಹಾಯ್ದು – ನಮ್ಮ ಮೇಲಿನ ನಿಮ್ಮ ಅನುಗ್ರಹ ಕಡಿಮೆಯಾದಂತೆ ತೋರುತ್ತದೆ. ಯಾವಾಗ ಬಂದಿರಿ ಸಿರ್ಸಿಯಿಂದ?"

"ನಿನ್ನೆ ರಾತ್ರಿ"

"ಎಲ್ಲ ಸುಸೂತ್ರವಾಯಿತೇ ಪ್ರಯಾಣ, ಬೀಳ್ಕೊಡುವದು ? .... ಮುಂತಾದ್ದು?"

"ಹುಂ, ಎಲ್ಲ ಸುಸೂತ್ರವಾಯಿತು."

"ಇನ್ನು, ನಿಮ್ಮೊಡನೆ ಯಾರಾದರೂ ಬರುವರೇ ? ಈ ಡಾಲಿಯ ಪ್ರಕರಣ ನನಗೆ ಗೊತ್ತಿದ್ದಿಲ್ಲ."

ನಾನು ಸುಮ್ಮನಿದ್ದೆ.

"ಧಾರವಾಡಕ್ಕೆ ಹೋಗಿದ್ದಿರಾ ?"

"ಹುಂ."

"ಕಾಮಿನಿ, ಏನಂತಾಳೆ ?"

"ತಾನು ಬರಬೇಕಂತಾಳೆ ನನ್ನೊಡನೆ"

"ವಾಹ್, ಉತ್ಕೃಷ್ಟವಾಯಿತಲ್ಲ... ಆದರೆ.... ಅಂದರೆ ನಿಮ್ಮೊಡನೆ ಯಾರು ಅಥವಾ ಯಾರ್ಯಾರು ಬರುವರು ?"

"ಯಾರೂ ಇಲ್ಲ."

"ಇದೆಂಥ ಮಾತು ? ಯಾರನ್ನಾದರೂ ಕರೆದುಕೊಂಡು ಹೋಗುವದು ಲೇಸು..."

"ನಿಮಗೇನಿನಿಸುವದು ? ಯಾರನ್ನ ಒಯ್ಯಬೇಕು ? ಅಂದರೆ ಯಾರೊಡನೆ ಲಗ್ನವಾಗಬೇಕು ?"

"ನಾನು ಹೇಗೆ ಹೇಳಲಿ ನಿಮ್ಮ ಪ್ರಶ್ನೆಗೆ ಉತ್ತರ ? ನೀವೇ ನಿರ್ಣಯಿಸಬೇಕು – ನೀವು ಲಗ್ನ ಮಾಡಿಕೊಳ್ಳುವವರು...."

"ಸತ್ಯೇಂದ್ರನಿಗೆ ಕೇಳೋಣ"

"ಅವರೇನು ಉಪದೇಶ ಕೊಡಲು ಯಾವಾಗಲೂ ಸಿದ್ಧ. ನಿಮ್ಮ ಮನಸ್ಸಿಗೆ ಬಂದಂತೆ ನೀವು ಮಾಡುವದು ಒಳಿತು. ಆದರೆ ಇದು ಒಳ್ಳೆಯ ಪೇಚಿನ ಪ್ರಸಂಗವಾಗಿರಬೇಕು ನಿಮಗೆ...."

"ಹುಂ,"

"ಅವರು ಬರುವ ಹೊತ್ತಾಯಿತು. ನಾನು ಬೇಗ ಚಹಾ ಮಾಡುವೆ. ಇಂದು ಊಟ ಇಲ್ಲಿಯೇ ಮಾಡಬೇಕು."

ಸುಶೀಲೆ ಒಳಗೆ ಹೋದ ಹತ್ತು ನಿಮಿಷಗಳಲ್ಲಿಯೇ ಸತ್ಯೇಂದ್ರ ಬಂದ.

"ಭಲೆ, ಗೌರೀ – ಯಾವಾಗ ಬಂದಿ ? ತಾರು ಮಾಡಬಾರದೇ... ನಾನು

ಸ್ಟೇಷನಿಗೆ ಬರುತ್ತಿದ್ದೆ."

"ನಿನ್ನೆ ರಾತ್ರಿ –"

"ಎಲ್ಲ ಸರಿಯಾಯಿತೇ ?"

"ಹುಂ."

"ನೋಡು–ಸುಮ್ಮನೆ ನೀನು ತೊಂದರೆಪಟ್ಟುಕೊಳ್ಳಿತ್ತಿದ್ದಿ. ಮುಂದೆ ಕಾಮಿನಿಯ ಭೆಟ್ಟಿಯಾಯಿತೇ ?"

ಅಷ್ಟರಲ್ಲಿ ಚಹಾ ತಂದ ಸುಶೀಲೆ ಹೇಳಿದಳು : "ಕಾಮಿನಿ – ನಾನು ನಿಮ್ಮ ಕೂಡ ಬರ್ತೇನೆ – ಅನ್ನುತ್ತಾಳಂತೆ....."

ಸತ್ಯೇಂದ್ರ ಜಿಗಿದು ಬಿದ್ದ : "ಇದು ಬಹಳ ಇಂಟರೆಸ್ಟಿಂಗ್ ಆಯ್ತಲ್ಲ ಗೌರೀ ! ಮುಂದೆ ನೀನೇನು ನಿರ್ಣಯಿಸಿದ್ದಿ ?" ಸತ್ಯೇಂದ್ರನ ಕುತೂಹಲ ಕೆರಳಿತು.

"ಅವರು, ಪಾಪ, ಏನೂ ನಿರ್ಣಯಿಸಿಲ್ಲ. ಅದನ್ನೇ ನಿಮಗೆ ಕೇಳಲು ಬಂದಿದ್ದಾರೆ." ಸುಶೀಲೆ ನುಡಿದಳು.

"ಗೌರೀ, ಏನಾಯಿತು ಎಲ್ಲ ಹೇಳು – ಒಂದೂ ಬಿಡದೆ... ಸುಶೀಲೆ, ನೀನು ಬೇಕಾದರೆ ಅಡಿಗೆ ಮಾಡಲು ಹೋಗು, ಗೌರೀಶ ಇಲ್ಲಿಯೇ ಊಟ ಮಾಡುವ. ಮತ್ತೇನಾದರೂ ಕಾರ್ಯಕ್ರಮವಿದೆಯೇ, ಗೌರೀ ?"

"ಇದೆ–ಆದರೆ ಊಟಮಾಡಲೇನೂ ಅಡ್ಡಿಯಿಲ್ಲ. ಸುಶೀಲಕ್ಕ ನೀವೂ ಕುಳಿತುಕೊಳ್ಳಿ – ನಾನು ಸ್ವಲ್ಪದರಲ್ಲೇ ಮುಗಿಸಿಬಿಡುವೆ."

ನಾನು ಧಾರವಾಡಕ್ಕೆ ಹೋದಂದಿನಿಂದ ಧಾರವಾಡ ಬಿಡುವ ತನಕ ಏನಾಯಿತೆಂಬುದನ್ನು ವಿಶದವಾಗಿ ನಿರೂಪಿಸಿದೆ – ಏನೇನೂ 'ಸೆನ್ಸಾರ್, ಮಾಡದೆ

ಸುಶೀಲಕ್ಕನ ಮುಖದ ಮೇಲಿನ ಭಾವ ಅವರ ನಸ್ಸಿನಲ್ಲಿಯ ಗೊಂದಲವನ್ನು ಸೂಚಿಸುತ್ತಿತ್ತು.

"ಬಹಳ ವಿಚಿತ್ರ ಪರಿಸ್ಥಿತಿ. ನನಗಂತೂ ಇದೆಲ್ಲ ಕೇಳಿಯೇ ಹೇಗಾದರೂ ಅನಿಸುತ್ತಿದೆ. ಕಾಮಿನಿ ಹೀಗೆಲ್ಲ ಇದ್ದಿರಬಹುದೆಂದು ನಾನು ಕಲ್ಪಿಸಿದ್ದಿಲ್ಲ. ಒಳ್ಳೇದು, ನಾನೂ ಇಲ್ಲಿಯೇ ಕುಳಿತರೆ ನೀವೂ ಇಂದು ಉಂಡಂತೆಯೇ ! ನಾನು ಅಡಿಗೆ ಮಾಡಲು ಹೋಗುವೆ – ನಿಮ್ಮ ಖಾಸಗಿ 'ಗುಪ್ತ' ಚರ್ಚೆ ಸಾಗಲಿ – ನನಗೆ ನಿಮ್ಮ ಕೊನೆಯ ನಿರ್ಣಯ ಹೇಳಿರಿ. ಇದಕ್ಕೂ ವಿಚಿತ್ರ ಸಮಸ್ಯೆ – ಕತೆ ಕಾದಂಬರಿಗಳಲ್ಲಿರುವಂತಹದು !"

"ಗೌರೀ, ನಾನು ಏನು ಹೇಳಲೂ ಅಸಮರ್ಥ. ನಿನ್ನ ಭವಿತವ್ಯ ನೀನೇ

ನಿರ್ಣಯಿಸಬೇಕು. ಕಾಮಿನಿ ಈ ಮಟ್ಟಕ್ಕೆ ಹೋಗಬಹುದೆಂದು ಅನಿಸಿರಲಿಲ್ಲ. ಅವಳು ಈ ಅನೈತಿಕ ಕೃತ್ಯವನ್ನು ಮಾಡದೇ ಇದ್ದ ಪಕ್ಷದಲ್ಲಿ ಬಹುಶಃ ಅವಳ ಉದ್ಧಾರ ಮಾಡುವದು ನಿನ್ನ ಕರ್ತವ್ಯವಾಗಬಹುದಿತ್ತು : ಶ್ರೀಕಾಂತನ ಸಲುವಾಗಿ, ಅವಳ ಮೇಲಿನ ನಿನ್ನ ಹಳೆಯ ಪ್ರೇಮದ ಸಲುವಾಗಿ, –– ಆದರೆ..." ಸತ್ಯೇಂದ್ರ ತಲೆ ಕೆದರಿದ – ಬಹುಶಃ ಮೊದಲನೆಯ ಸಲ – ನನಗೆ ಗೊತ್ತಿದ್ದ ಮಟ್ಟಿಗೆ !

"ನೀತಿಯ ಪ್ರಶ್ನೆ – ನನಗೆ ಮುಖ್ಯವೆನಿಸುವದಿಲ್ಲ. ಅವಳ ಎಲ್ಲ ಪಾಪಗಳನ್ನು ಕ್ಷಮಿಸುವ ಶಕ್ತಿ ನನ್ನಲ್ಲಿದೆ ಎಂದು ನನ್ನ ಭಾವನೆ."

"ಡಾಲಿ ನಿನಗೆ ಕ್ರಿಸ್ತೀ ಧರ್ಮದ ದೀಕ್ಷೆ ಕೊಟ್ಟಿದ್ದಾಳೇನು ? ಕಾಮಿನಿಯನ್ನು ಕ್ಷಮಿಸುವ ಮಾತು ಅಷ್ಟು ಸುಲಭವಿದ್ದರೆ ಅವಳನ್ನು ಲಗ್ನವಾಗಲು ಅಡ್ಡಿಯೆಲ್ಲಿಂದ? ಅವಳ ಪಾಪಗಳನ್ನು ಅರಗಿಸಿ ಕುಡಿಯುವ ನೀಲಕಂಠನ ಶಕ್ತಿಯಿದ್ದರೆ ಹೆದರಿಕೆ ಯಾಕೆ ? ಹಾಗೂ ಆಫ್ರಿಕೆಯಲ್ಲಿ ಇರಲಿಕ್ಕೆ ಹೊರಟ ನಿನಗೆ ಸಮಾಜದ ವಕ್ರದೃಷ್ಟಿಯ ಪ್ರಶ್ನೆಯೂ ಇಲ್ಲ–– ನೀನಾಯಿತು, ನಿನ್ನ ಕನಸಿನ ರಾಣಿ ಕಾಮಿನಿಯಾಯಿತು. ಅವಳಿಗೆ ಬುದ್ಧಿ ಬಂದಿದ್ದರೆ, ಹಾಗೆ ನಿನಗೆ ಸುಖ ಕೂಡ ಕೊಡಬಹುದವಳು. ಅವಳ ಸೌಂದರ್ಯ, ಅವಳ ಚೈತನ್ಯ, ನಿನ್ನ ಸ್ಫೂರ್ತಿಯ ಕೇಂದ್ರವಾಗಬಹುದು... ಹಾ, ಹಾ, ಹಾ– ಸ್ವಾರ್ಥವೂ ಆಯಿತು. ಪರಮಾರ್ಥವೂ ಆಯಿತು... ಹಾಗೂ – ರೋಗಿ ಬಯಸಿದ್ದೂ ಹಾಲು, ಡಾಕ್ಟರರು ಹೇಳಿದ್ದೂ ಹಾಲು ! ಹಾ–ಹಾ–ಹಾ–"

"ಹಾಗಾದರೆ ನನ್ನ ಗತಿಯೇನು, ನನ್ನ ಮುಕ್ತಿಯ ಗತಿಯೇನು?"

"ನೀನೂ ಒಳ್ಳೆಯ ಸಂತನಪ್ಪ – ಮಹಾತ್ಮನಪ್ಪ ! ಲಗ್ನವಾಗಿ ಒಂದೆರಡು ಮಕ್ಕಳಾದ ಮೇಲೆ ಮುಕ್ತಿ ತನ್ನ ಹಾದಿ ತಾನು ಕಂಡುಕೊಳ್ಳುತ್ತದೆ..."

"ಡಾಲಿ?"

"ವಾಹ್, ಟ್ರ್ಯಾಜಿಕ್ ಹೀರೋ! ವಾಹ್, ಆಂತರಿಕ ಹೋರಾಟ! ಮೊನ್ನೆ ನೀನೇ ಹೇಳಿದೆಯಲ್ಲ ಡಾಲಿಗೂ ಲಗ್ನಕ್ಕೂ ಏನೂ ಸಂಬಂಧವಿಲ್ಲವೆಂದು. ನಿಮ್ಮದು ಅದೇನೋ ಪ್ಲೇಟೋನಿಕ್ ಅಲ್ಲ, ದೇಹ – ಟೋನಿಕ್ಕಿನ ಸಂಬಂಧವೆಂದು. ಅವಳ ಪ್ರಶ್ನೆಯೇ ಇಲ್ಲಿ ಬರುವದಿಲ್ಲ... ಆಫ್ರಿಕೆಗೆ ಒಬ್ಬನೆ ಹೋಗುವದು ಅಥವಾ ಕಾಮಿನಿಯನ್ನು ಕರೆದೊಯ್ಯುವದು–– ಇದೇ ಮುಖ್ಯ ಪ್ರಶ್ನೆ. ಹಾ–ಹಾ– ಹಾಗೆ ಡಾಲಿಯೂ ಬೇಕಾದರೆ ಅವಳನ್ನೂ ಕರೆದುಕೊಂಡು ಹೋಗು, ಆ ಮಾತು ಬೇರೆ!" ಸತ್ಯೇಂದ್ರ ಜೋರಿನಿಂದ ನಕ್ಕ.

ನಾನೂ ನಕ್ಕೆ – ಒಣ ನಗೆ – ನಗಬೇಕೆಂದು... ಆದರೆ ನನ್ನ ಹೃದಯ

ಗಂಭೀರವಾಗಿತ್ತು : ಸತ್ಯೇಂದ್ರನ ಕೂಡ ಚರ್ಚಿಸಿ ಪ್ರಯೋಜನವಿಲ್ಲ. ನನ್ನ ಆತ್ಮದ ಪರಿಚಯ ಇವನಿಗಿಲ್ಲ ಎಂಬ ವಿಚಾರ ಒಮ್ಮೆಲೆ ದೃಢವಾಯಿತು. ಆದರೆ ಅವನ ಮನಸ್ಸನ್ನು ನೋಯಿಸಲು ಮನ ಹಿಂಜರಿಯಿತು. ನಾನು ಇಷ್ಟೇ ಹೇಳಿದೆ:

"ಸತ್ಯೇನ್, ನೀನು ಹೇಳುವುದರಲ್ಲಿ ಒಂದು ದೃಷ್ಟಿಯಿಂದ ತಥ್ಯವಿದೆ... ಆದರೆ ನಾನು ನನ್ನಷ್ಟಕ್ಕೆ ವಿಚಾರ ಮಾಡಬೇಕು... ನಾಳೆ ಫೋನಿನ ಮೇಲೆ ತಿಳಿಸುವೆ – ನನ್ನ ಅಂತಿಮ ನಿರ್ಣಯವನ್ನು ಅನಂತರ ನಾಳೆ – ನಾಡಿದು ನಾನು ಹೋಗುವುದಕ್ಕಿಂತ ಮುಂಚೆ (ಸಹ ಅಥವಾ ಒಬ್ಬನೇ) ನನ್ನ ಆತ್ಮ ಕಥನವನ್ನು ನಿನಗೆ ಸಮರ್ಪಿಸಲಿರುವೆ. ನಿನ್ನ ಪ್ರೇರಣೆಯಿಂದ ನಾನದನ್ನು ಸುರುಮಾಡಿದ್ದು. ಅದರ ಉಪಯೋಗ ಮಾತ್ರ ಬಹಳವಾಗಿದೆ ನನ್ನನ್ನು ನಾನು ತಿಳಿದುಕೊಳ್ಳುವುದರಲ್ಲಿ... ಹಾಗೂ... ಅಷ್ಟೇ ಅಲ್ಲ, ಒಂದು ರೀತಿಯಿಂದ ನನ್ನ ಮುಕ್ತಿಯ – ನಗಬೇಡ – ನನ್ನ ಮುಕ್ತಿಯ ಮಾರ್ಗದಲ್ಲಿಯ ಮೊದಲ ಸೋಪಾನ ಈ ಬರೆಯುವ ಅನುಭವ. ನೀನು ಓದಿದ ನಂತರ ನಿನಗೆಲ್ಲ ತಿಳಿದೀತು – ಹಾಂ, ಒಂದು ಮಾತು : ನಿನ್ನ ಬಗ್ಗೆ ಅದರಲ್ಲಿ ಎಲ್ಲಿಯಾದರೂ ಕಟು ಶಬ್ದಗಳಿದ್ದರೆ ನನ್ನನ್ನು ಕ್ಷಮಿಸಬೇಕು."

* * *

"ಡಾಲಿ, ನೀನು ಬರುವಿಯೋ ಇಲ್ಲವೊ ಎಂದು ಸಂಶಯ ಪಡುತ್ತಿದ್ದೆ. ಅಷ್ಟರಲ್ಲೀ ನೀನು ಬಂದೆ."

"ನಾನು ಬರದೆ ಇದ್ದರೆ ಏನು ಮಾಡುತ್ತಿದ್ದಿ ?"

"ಆತ್ಮಹತ್ಯೆ !" ಎಂದು ಜೋರಿನಿಂದ ನಕ್ಕೆ. ಒಮ್ಮೆಲೆ ಶ್ರೀಕಾಂತನ ನೆನಪಾಗಿ ನಗುವದನ್ನು ನಿಲ್ಲಿಸಿದೆ. "ಸಾರಿ – ಎಂದೆ

"ಅದು ತೀರ ಸುಲಭವಾದ ಕಾರ್ಯ ! ಅಲ್ಲವೇನು ?"

"ಅದಿರಲಿ.... ತಡವೇಕಾಯಿತು ?"

"ನೀನೇ ಕಾರಣ. ಮಮ್ಮಿಗೆ ನೀನು ಪತ್ರ ಕೊಟ್ಟು ಹೋದಿ. ಅವಳಿಗೆ ಏನೆಂದು ಹೇಳಿ ಬರಬೇಕು ನಾನು ?"

"ಆಯ್ಮ – ಸಾರಿ, ನನಗೆ ಬೇರೆ ಮಾರ್ಗ ಸೂಚಿಸಲಿಲ್ಲ. ಫೋನ್ ಮಾಡಬಹುದಿತ್ತು, ಅಥವಾ ನಾನೇ ನಿನ್ನ ಆಫೀಸಿಗೆ ಬರಬಹುದಿತ್ತು ಆದರೆ ನನಗೆ ನಿನ್ನೊಡನೆ ಪ್ರತ್ಯಕ್ಷ ಮಾತನಾಡುವ ಇಚ್ಛೆ ಇದ್ದಿಲ್ಲ... ಈ ರಾತ್ರೆಯ ಮೊದಲು... ಏನು ಹೇಳಿ ಬಂದಿ ನಿನ್ನ ತಾಯಿಗೆ ?"

"ಒಂದು ತಾಸು ವಿಚಾರ ಮಾಡಿದರೂ ಬಗೆಹರಿಯಲಿಲ್ಲ. ಕೊನೆಗೆ

ನಾನು ಸರಳ ಹೇಳಿದೆ : ಗೌರೀಶನ ಕಡೆಗೆ ಹೋಗಿ ಬರುವೆ ಎಂದು. ಸುಳ್ಳು ಹೇಳುವದಂತೂ ಶಕ್ಯವಿದ್ದಿಲ್ಲ – ಹೇಳಿದರೂ ಅವಳು ನಂಬುತ್ತಿರಲಿಲ್ಲ..."

"ಆದರೆ ಪರವಾನಿಗೆ ಹೇಗೆ ಸಿಕ್ಕಿತು – ನೀನು ಇಷ್ಟು ಸ್ಪಷ್ಟವಾಗಿ ಹೇಳಿದ ನಂತರ?"

"ಪರವಾನಿಗೆ ಕೇಳಿದರಲ್ಲವೇ? ನಾನು ಬೇಗಬೇಗನೆ ಡ್ರೆಸ್ಸುಮಾಡಿ ತಾಯಿಗೆ ನೇರವಾಗಿ ಹೇಳಿದೆ. ಅವಳೆಂದಳು : 'ಇಷ್ಟು ರಾತ್ರೆ?' ನಾನು 'ಹೂಂ,' ಎಂದೆ. 'ನಿನ್ನ ತಲೆ ಜಾಗೆಯಲ್ಲಿದೆ ತಾನೇ?' ಎಂದು ಕೇಳಿದಳು. ನಾನು, 'ಹೂಂ,' ಎಂದೆ. 'ತಿರುಗಿ ಯಾವಾಗ ಬರುವಿ?' ಎಂದು ಕೇಳಿದಳು. 'ನನಗೆ ಗೊತ್ತಿಲ್ಲ.' ಎಂದೆ. ನನ್ನ ದೃಢವಾದ ನಿರ್ಧಾರವನ್ನು ನೋಡಿ ಅವಳು ಸ್ತಂಭಿತಳಾದಳು. 'ದೇವರು ನಿನ್ನನ್ನು ಕಾಪಾಡಲಿ 'God bless you' ಎಂದಿಷ್ಟೆ ಅಂದು ಒಳಗೆ ಹೋದಳು."

"ನಿನ್ನದೂ ವಿಲಕ್ಷಣ ಧೈರ್ಯ !"

"ನನ್ನ ಧೈರ್ಯದ ಮಾತಿರಲಿ – ನಿನ್ನ ಸುದ್ದಿ ಹೇಳು."

"ನನ್ನ ಸುದ್ದಿ ಏನು? ಎರಡು ದಿನಗಳ ನಂತರ ಹಡಗ ಹತ್ತುವದು."

"ಆ ಮಾತು ನಿಶ್ಚಿತವಾಗಿ ಒಂದು ತಿಂಗಳಾಯಿತು. ಕಾಮಿನಿಯ ಸುದ್ದಿಯೇನು?"

"ಅವಳು ನನ್ನೊಡನೆ ಬರಬೇಕೆನ್ನುತ್ತಾಳೆ!"

ಡಾಲಿ ಒಮ್ಮೆಲೆ ಕಣ್ಣುಮುಚ್ಚಿ ಯಾವುದೋ ತೀವ್ರ ಭಾವನೆಯನ್ನು ನಿಗ್ರಹಿಸಿದಳು. "ಮುಂದೆ" ಎಂದು ಕೇಳಿದಳು.

"ಮುಂದೆ – ಏನಿಲ್ಲ... ಅವಳು ಅಂದದ್ದು ಹೇಳಿದೆ ಅಷ್ಟೆ."

"ಅಲ್ಲ, ಎಲ್ಲ ಎಲ್ಲ ಹೇಳು, ಅವಳು ಹೇಳಿದ್ದು, ನೀನು ಹೇಳಿದ್ದು .... "ಡಾಲಿಯ ಧ್ವನಿಯಲ್ಲಿ ಉತ್ಕಂಠೆ ತುಂಬಿತ್ತು.

'ನಾವು ಹಾಸಿಗೆಯ ಮೇಲೆ ಕೂಡ್ರೋಣ ಹಾಯಾಗಿ, ನಂತರ ಎಲ್ಲ ಹೇಳುವೆ."

ನಾನು ಸಾವಕಾಶವಾಗಿ ಎಲ್ಲವನ್ನೂ ನಿರೂಪಿಸಿದೆ. ನನ್ನ ಕತೆಯನ್ನು ಕೇಳುತ್ತಿರುವಾಗಲೇ ಅವಳ ಉತ್ಕಂಠೆ ಮಾಯವಾಗಿ ಒಂದು ಬಗೆಯ ಶುದ್ಧ ಕುತೂಹಲ ಅವಳ ಮುಖದ ಮೇಲೆ ಮೂಡಿತ್ತು. ಬಹುಶಃ ನಾನು ಹೇಳುವ ರೀತಿಯಲ್ಲಿ ಅವಳಿಗೆ ಬೇಕಾದ ಉತ್ತರ ಸಿಕ್ಕಿರಬೇಕು! ನಾನು ಹೇಳುವದು ಮುಗಿದ ಮೇಲೆ –

"ಪಾಪ ! ಅಭಾನಿಗಿ Poor girl.." ಎಂದಳು. ಅವಳ ಉದ್ಗಾರದಲ್ಲಿ ನಿಜವಾದ ಕರುಣೆಯಿತ್ತು.

"ನಿನ್ನದೂ ಪಾಪ ! ಬಹಳ ತೊಂದರೆಯಾಗಿರಬೇಕು ನನ್ನ ಪುಟ್ಟ ಗೋರಿಗೆ.."

"ಹುಂ."

"ಪತ್ರ ಬರೆದಿಯೇನು ಕಾಮಿನಿಗೆ? ಯಾವ ನಿರ್ಧಾರಕ್ಕೆ ಬಂದಿರುವಿ?" ಡಾಲಿಯ ಶಾಂತಭಾವ ನೋಡಿ ಅಚ್ಚರಿಯಾಯಿತು.

"ಇನ್ನೂ ಬರೆದಿಲ್ಲ, ನಾಳೆ ಬರೆಯುವೆ."

"ಏನೆಂದು? 'ಬಾ. ನನ್ನ ಜೊತೆಗೆ' ಎಂದು ಹೌದಲ್ಲೋ?" ಅವಳ ಕಣ್ಣುಗಳು ನನ್ನ ಕಣ್ಣುಗಳನ್ನರಸಿದವು.

"ಡಾಲಿ, ನನ್ನ ಚೇಷ್ಟೆ ಮಾಡಬೇಡ ಹೀಗೆ – ಪ್ಲೀಜ್ – ಅವಳಿಗೆ ಹಾಗೆ ಹೇಳುವದಿದ್ದರೆ ಅಂದೇ ಅಲ್ಲಿಯೇ ಹೇಳಿ ಬರುತ್ತಿದ್ದೆ. ಹೃದಯಕ್ಕೆ ಸಂಬಂಧಿಸಿದ ನಿರ್ಣಯಗಳಿಗೆ ಹೃದಯವೇ ಉತ್ತರ ಕೊಡಬಲ್ಲದು, ಬುದ್ಧಿಯಲ್ಲ. ಹೃದಯದ ಉತ್ತರ ತತ್‌ಕ್ಷಣವೇ ಸಿದ್ಧವಿರುತ್ತದೆ. ನಾನು ವಿಚಾರ ಮಾಡಬೇಕು ಎಂದು ಕಾಮಿನಿಗೆ ಹೇಳಿದಾಗಲೇ ಹೃದಯ ಉತ್ತರ ಹೇಳಿತ್ತು. ಆದರೆ ಆ ಸಂದರ್ಭದಲ್ಲಿ ನನ್ನ ಹೃದಯದ ಅರ್ಥವನ್ನು ಸ್ಪಷ್ಟೀಕರಿಸಲಾಗಲಿಲ್ಲ....'

"ನಿನ್ನ ಹೃದಯದ ಅರ್ಥ ಯಾವಾಗ ಸ್ಪಷ್ಟವಾಯಿತು?"

"ಇಂದು ಮಧ್ಯಾಹ್ನ ಈ ಆತ್ಮಕಥನವನ್ನು ಬರೆಯುವಾಗ, ಅನಂತರ ಮರಳಿ ಒಮ್ಮೆ ಓದುವಾಗ – ಆನಂತರವೇ ನಿಮ್ಮ ಮನೆಗೆ ಹೋದೆ – ಪತ್ರ ಕೊಟ್ಟೆ"

"ನಿನ್ನ ಹೃದಯದ ಅರ್ಥಕ್ಕೂ ನಮ್ಮ ಮನೆಗೆ ಹೋಗವುದಕ್ಕೂ ಏನು ಸಂಬಂಧ, ಗೋರೀ?"

"ಡಾಲಿ, ನಿನ್ನ ಮೂಲಕ ನನ್ನ ಹೃದಯಕ್ಕೆ ಅರ್ಥ ಹತ್ತುತ್ತಿದೆ. ನೀನು ಕೊಟ್ಟ ಕಣ್ಣಿನ ಮೂಲಕ ನನ್ನ ಹೃದಯದ ಪರಿಚಯ ನನಗಾಗಿದೆ. ಆದುದರಿಂದಲೇ ಕಾಮಿನಿ ನನಗೋಸ್ಕರ ಅಲ್ಲ ನಾನು ಅವಳಿಗೋಸ್ಕರ ಅಲ್ಲ – ಅವಳ ದಾರಿ ಬೇರೆ, ನನ್ನ ದಾರಿ ಬೇರೆ ಎಂಬ ತಿಳುವಳಿಕೆ ಬಂದದ್ದು ನಿನ್ನ ಮೂಲಕವೇ – ನೀನು ಕೊಟ್ಟ ಹೃದಯ ಸ್ಥಿರತೆಯ ಮೂಲಕವೇ ಅವಳ ಬಗ್ಗೆ ಪಾಪವೆನಿಸುತ್ತದೆ, ಕರುಣೆ ಮಿಡಿಯುತ್ತದೆ... ಆದರೆ ಅವಳನ್ನು ಉದ್ಧಾರಮಾಡುವ ಕಾರ್ಯ ನನ್ನದಲ್ಲ. ಅವಳ ಉದ್ಧಾರಕರ್ತ ಬಂದಾನು ಕೆಲವು ದಿನಗಳಲ್ಲಿ – ಯಾರಿಗೆ ಗೊತ್ತು ? ಅಥವಾ ಅವಳಲ್ಲಿಯೇ ವಿಶಿಷ್ಟ ಚೈತನ್ಯ ಅವನನ್ನು ಶೋಧಿಸಿ ತಂದೀತು–"

ಡಾಲಿ ಕಣ್ಣರಳಿಸಿ ನನ್ನ ಕಡೆಗೇ ನಿಟ್ಟಿಸುತ್ತ ಕುಳಿತಿದ್ದಳು – ನಾನು ಹೇಳುವದನ್ನು ಮೈಯೆಲ್ಲಾ ಕಿವಿಯಾಗಿ ಕೇಳುತ್ತಿದ್ದಳು.

'ಗೋರೀ..."

"ಉಂ ?"

"I love you"

"I love you ...ಡಾಲೀ, ನಿನಗೆ ಎಲ್ಲವನ್ನೂ ನಾನು ಹೇಳಬಲ್ಲೆ. ನಿನ್ನೆದುರಿಗೆ ನನ್ನ ಹೃದಯವನ್ನೇ ಬಿಚ್ಚಿಡಬಲ್ಲೆ – ಸಹಜವಾಗಿ, ಸಲೀಲವಾಗಿ – ಯಾವದೇ ಬಗೆಯ ಉತ್ಕಂಠತೆಯಿಲ್ಲದೆ, ಸಂಶಯವಿಲ್ಲದೆ, ಸಂದಿಗ್ಧತೆಯಿಲ್ಲದೆ... ಈ ಬಗೆಯಾಗಿ ನಿನ್ನೆದುರಿಗೆ ತಿಳಿಯಾಗಿ, ನಿರರ್ಗಳವಾಗಿ ಹರಿಯುವದರಲ್ಲಿಯೇ ನನ್ನ ಮುಕ್ತಿಯಿದೆ ಎಂದೆನಿಸುತ್ತಿದೆ ಡಾಲಿ, ಮೊನ್ನೆ ನಾನು ನಿನಗೆ ಆಫ್ರಿಕೆಗೆ ಬರುವದರ ಬಗ್ಗೆ ಕೇಳಿದ ಪ್ರಶ್ನೆ ಕಲ್ಪಿತ–hypotheticalವಾಗಿತ್ತೆಂದು ನಿನಗೆನಿಸುತ್ತಿತ್ತು–ದೇಹದ ಕಾವಿನಲ್ಲಿ ದುರ್ಬಲವಾದ ಮನಸ್ಸಿನ ಪ್ರಶ್ನೆಯೆಂದು ಅನಿಸಿತ್ತು... ಆದರೆ ಇಂದು–ನೀನು ಆ ಕುರ್ಚಿಯಲ್ಲಿ ನಾನು ಈ ಕುರ್ಚಿಯಲ್ಲಿ–ಮರಳಿ ಕೇಳುತ್ತೇನೆ ಸ್ಪಷ್ಟ ಸ್ಪಷ್ಟ ಶಬ್ದಗಳಲ್ಲಿ; ಡಾಲಿ, ನನ್ನ ಜೊತೆಗೆ ಬಾ–ನನ್ನ ಹೆಂಡತಿಯಾಗು–ನನ್ನ ಸಹ–ಸಂಚಾರಿಯಾಗು ಹೇಳು–ಬರುವಿಯಾ"

ಡಾಲಿಯ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತು. ಸ್ವರ್ಗದಿಂದ ಗಂಗೆ ಇಳಿದುಬರುತ್ತಿದ್ದಳು. ಡಾಲಿ ಸುಮ್ಮನೆ ಕದಲದೆ ಕೂತಿದ್ದಳು; ಕಂಬನಿಯನ್ನು ಒರೆಸುವ ಗೊಡವೆಗೆ ಹೋಗಲಿಲ್ಲ ಅವಳು. ನಾನು ಉತ್ಮತ್ತನಂತೆ ಅವಳೆಡೆಗೇ ನೋಡುತ್ತ ಕುಳಿತೆ.

ನಾನು ಕೈಚಾಚಿದೆ.

ಅವಳು ಎದ್ದು ನನ್ನೆಡೆಗೆ ಬಂದಳು.

ನಾನು ಮುಂದೆ ಸರಿದು ಮೊಣಕಾಲೂರಿ ಅವಳ ದೇಹವನ್ನಪ್ಪಿದೆ. ನನ್ನ ತಲೆಯನ್ನು ಅವಳ ಒಡಲಿಗೆ ಒತ್ತಿದೆ.

ಅವಳ ಕೈಬೆರಳುಗಳು ನನ್ನ ಕೂದಲಲ್ಲಾಡತೊಡಗಿದವು.

ಎಷ್ಟೋ ಹೊತ್ತು ಹಾಗೆಯೇ ತನ್ಮಯರಾದೆವು, ಪರವಶರಾದೆವು...

ಅನಂತರ, ನನ್ನ ಹೃದಯದೊಳಗಿಂದಲೇ ಹೊರಬಿದ್ದು ಬಂದಂತೆ, ಡಾಲಿಯ ಶಬ್ದಗಳು ಕೇಳಿಬಂದವು :

"ಗೋರಿ, ಅಲ್ಲಿ ಏನಿದೆ ಗೊತ್ತೆ ?"

"ನೀನು ತಲೆಯಿಟ್ಟ ಸ್ಥಾನದಲ್ಲಿ ?"

"ಎಲ್ಲಿ–ಇಲ್ಲಿ ?" ಎಂದು ತಲೆಯೆತ್ತಿ, ಅಚ್ಚರಿಯಿಂದ, ಅವಳ ಹೊಟ್ಟೆಯ ಮೇಲೆ ಕೈಯಿಟ್ಟೆ.

"ಹುಂ !"

ನಾನು ಎದ್ದು ನಿಂತೆ

ಅವಳನ್ನು ಬರಸೆಳೆದು ಅವಳ ಮುಖವನ್ನು ಕೈಯಿಂದ ಮೇಲಕ್ಕೆತ್ತಿದೆ.

ಆ ಮುಖದಲ್ಲಿ ಮುಗ್ಧ ಹಾಸ್ಯವಿತ್ತು.

ವ್ಹರ್ಜಿನ್ ಮೇರಿಯ ದಿವ್ಯ ಹಾಸ್ಯವಿತ್ತು.

* * *